JJ-50
MRS
6/7/09

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು
KARNATAKA LEGISLATIVE ASSEMBLY DEBATES

(B) 25216

ಅಧಿಕೃತ ವರದಿ
OFFICIAL REPORT

ಹನ್ನೆರಡನೇ ವಿಧಾನಸಭೆಯ ಐದನೇ ಅಧಿವೇಶನ

FIFTH SESSION OF THE TWELFTH LEGISLATIVE ASSEMBLY

ಸಂಪುಟ – ೯ (ಕ್ರಮಾಂಕ – ೧)

Volume - 9 (No. 1)

(೨೬ನೇ ಮಾರ್ಚ್ ೨೦೦೭)

(26th March 2007)

ಕರ್ನಾಟಕ ವಿಧಾನಸಭೆಯ ಸಚಿವಾಲಯ, ಬೆಂಗಳೂರು

Karnataka Legislative Assembly Secretariat, Bangalore

ಕರ್ನಾಟಕ ವಿಧಾನಸಭೆಯ ನಡವಳಿಕೆಗಳು
KARNATAKA LEGISLATIVE ASSEMBLY DEBATES

(B) 25216

ಅಧಿಕೃತ ವರದಿ
OFFICIAL REPORT

ಹನ್ನೆರಡನೇ ವಿಧಾನಸಭೆಯ ಐದನೇ ಅಧಿವೇಶನ
FIFTH SESSION OF THE TWELFTH LEGISLATIVE ASSEMBLY

ಸಂಪುಟ – ೯ (ಕ್ರಮಾಂಕ – ೧)
Volume - 9 (No. 1)

(೨೬ನೇ ಮಾರ್ಚ್ ೨೦೦೭)
(26th March 2007)

ಕರ್ನಾಟಕ ವಿಧಾನಸಭೆಯ ಸಚಿವಾಲಯ, ಬೆಂಗಳೂರು
Karnataka Legislative Assembly Secretariat, Bangalore

ಕರ್ನಾಟಕ ವಿಧಾನಸಭೆ

ಹನ್ನೆರಡನೇ ವಿಧಾನಸಭೆ
ಐದನೇ ಅಧಿವೇಶನ

ಶ್ರೀ ಕೃಷ್ಣ
ಅಧ್ಯಕ್ಷರು

ಶ್ರೀ ಎನ್. ವೈ. ಗೋಪಾಲಕೃಷ್ಣ
ಉಪಾಧ್ಯಕ್ಷರು

ಕರ್ನಾಟಕ ವಿಧಾನ ಸಭೆ

ವಿಷಯಾನುಕ್ರಮಣಿಕೆ

ಸಂಪುಟ – 9 (ಕ್ರಮಾಂಕ – 1)

(26ನೇ ಮಾರ್ಚ್ 2007)

ಸೋಮವಾರ, ದಿನಾಂಕ 26ನೇ ಮಾರ್ಚ್ 2007 **ಪುಟ ಸಂಖ್ಯೆ**

1 ಸಭೆಯ ಮುಂದಿಡಲಾದ ಕಾಗದ ಪತ್ರಗಳು **1**

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರು 31–03–2006ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಲೆಕ್ಕಪರಿಶೋಧನಾ (ವಾಣಿಜ್ಯ) ವರದಿ

2 ಅಧ್ಯಕ್ಷರ ಅಪ್ಪಣೆ ಮೇರೆಗೆ **2–26**

ರೈತರ ಸಾಲ ಮನ್ನಾ ಬಗ್ಗೆ

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು)
ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)
ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ
ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು)
ಶ್ರೀ ವಾಟಾಳ್ ನಾಗರಾಜ್

3 ವಿತ್ತೀಯ ಕಾರ್ಯಕಲಾಪಗಳು **27–170**

ಅ) ವಿಷಯ 2006–07ನೇ ಸಾಲಿನ ಪೂರಕ ಅಂದಾಜುಗಳು (ಎರಡನೇ ಹಾಗೂ ಅಂತಿಮ ಕಂತು) ಕುರಿತು ಚರ್ಚೆ

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು)
ಶ್ರೀ ಜೆ ಸಿ ಮಾಧುಸ್ವಾಮಿ
ಶ್ರೀ ಜಿ ವಿ ಶ್ರೀರಾಮರೆಡ್ಡಿ
ಶ್ರೀ ಎಸ್ ರಾಜೇಂದ್ರನ್

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ
ಶ್ರೀ ಸಿದ್ಧರಾಮಯ್ಯ
ಶ್ರೀ ಹೆಚ್ ಡಿ ಬಸವರಾಜ್
ಶ್ರೀ ಎ ಕೃಷ್ಣಪ್ಪ
ಶ್ರೀ ಶಿವಾನಂದ ಪಾಟೀಲ್
ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ

ಆ) ಚರ್ಚೆಗೆ ಉತ್ತರ

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)

(ಅನುಬಂಧ – I)

ಇ) ಕರ್ನಾಟಕ ಧನವಿನಿಯೋಗ ವಿಧೇಯಕ, 2007

ಮಂಡನೆ ಹಾಗೂ ಅಂಗೀಕಾರ

(ಅನುಬಂಧ – II)

4) ಪ್ರಶ್ನೋತ್ತರ **170–1118**

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್	– 258 (1313)
ಶ್ರೀ ಕೆ ಎಂ ತಿಮ್ಮರಾಯಪ್ಪ	– 260 (1451)
ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ	– 261 (1799)
ಶ್ರೀ ಸಿ ಟಿ ರವಿ	– 262(1940)
ಶ್ರೀ ಶಿವಶಂಕರ್ ರೆಡ್ಡಿ ಎನ್ ಹೆಚ್	– 265 (1455)
ಶ್ರೀ ಆರ್ ರೋಷನ್ ಬೇಗ್	– 267 (1371)

ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

(ಅನುಬಂಧ – III)

ಕರ್ನಾಟಕ ವಿಧಾನ ಸಭೆ

ಸೋಮವಾರ 26ನೇ ಮಾರ್ಚ್ 2007 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ/ ಮಧ್ಯಾಹ್ನ ಗಂಟೆಗೆ ಸಮಾವೇಶಗೊಂಡಿತ್ತು

ಅಧ್ಯಕ್ಷರು ಶ್ರೀ ಕೃಷ್ಣರವರು ಪೀಠವನ್ನು ಅಲಂಕರಿಸಿದ್ದರು

(ಸದನದ ಬಾವಿಯಲ್ಲಿ ಮಾನ್ಯ ಮಾಧುಸ್ವಾಮಿಯವರು, ಮಾನ್ಯ ವಾಟಾಳ್ ನಾಗರಾಜ್‌ರವರು, ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಮತ್ತು ಮಾನ್ಯ ಶ್ರೀ ಜಿ ವಿ ರಾಮರೆಡ್ಡಿಯವರು ಧರಣಿನಿರತರಾಗಿದ್ದರು)

1 ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು 31–3–2006 ರಲ್ಲಿ ಕೊನೆಗೊಂಡ ವರ್ಷಕ್ಕೆ ನೀಡಿರುವ ಲೆಕ್ಕ ಪರಿಶೋಧನಾ (ವಾಣಿಜ್ಯ) ವರದಿ (ಅನುಬಂಧ – 1)

ಅಧ್ಯಕ್ಷರು – ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು ಮಾನ್ಯ ಯಡಿಯೂರಪ್ಪನವರು

ಶ್ರೀ ಬಿ ಎಸ್ ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು) – ಮಾನ್ಯ ಅಧ್ಯಕ್ಷರೇ ಭಾರತ ಸಂವಿಧಾನದ 151 (2) ನೇ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 31 ನೇ ಮಾರ್ಚ್, 2006 ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಲೆಕ್ಕ ಪರಿಶೋಧನಾ(ವಾಣಿಜ್ಯ) ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು – ಮಂಡಿಸಲಾಗಿದೆ

2 ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ

ವಿಷಯ – ರೈತರ ಸಾಲ ಮನ್ನಾ ಬಗ್ಗೆ

ಶ್ರೀ ಆರ್ ವಿ ದೇಶಪಾಂಡೆ – ಮಾನ್ಯ ಅಧ್ಯಕ್ಷರೇ ಮೊದಲು ಡೆಡ್‌ಲಾಕ್ ಮುಗಿಸಲಿ ಸಾಲ ಮನ್ನಾ ಕುರಿತಂತೆ 25 ಸಾವಿರ ರೂಪಾಯಿಗಳ ಸಾಲ ಮನ್ನಾ, ರೈತ ಎಷ್ಟೇ ಮೊತ್ತದ ಸಾಲ ತೆಗೆದುಕೊಂಡಿದ್ದರೂ ಕೂಡ ಅವರೆಲ್ಲರಿಗೂ ಅನ್ವಯವಾಗಬೇಕೆಂದು ಕೇಳಿದ್ದೇವೆ ಇದೇ ವಿಷಯದಲ್ಲಿ ಜೆ ಸಿ ಮಾದುಸ್ವಾಮಿಯವರು, ವಾಟಾಳ್ ನಾಗರಾಜ್‌ರವರು, ಶ್ರೀರಾಮರೆಡ್ಡಿಯವರು, ಜಯಪ್ರಕಾಶ್ ಹೆಗ್ಡೆಯವರು ಸದನದ ಬಾವಿಯಲ್ಲಿ ಧರಣಿನಿರತರಾಗಿದ್ದಾರೆ ಇದರ ಬಗ್ಗೆ ತೀರ್ಮಾನವಾಗದೇ ಇರುವಾಗ ಬೇರೆ ಕಾರ್ಯ ಕಲಾಪವನ್ನು ಹೇಗೆ ನಡೆಸುತ್ತೀರಿ? ಇದಲ್ಲದೇ ಸಾಲ ತೀರಿಸಲು ಅವಧಿ ವಿಸ್ತರಣೆ ಮಾಡಬೇಕು

ಅಧ್ಯಕ್ಷರು .– ನೋಡಿ, ಕಾರ್ಯಕಲಾಪ ಸುಗಮವಾಗಿ ನಡೆಯುವಂತೆ ಎಲ್ಲರೂ ಸಹಕಾರ ಕೊಡಬೇಕು ಅದನ್ನು ಬಿಟ್ಟು ನಿಮ್ಮ ವಾದಕ್ಕೆ ನೀವು ಅಂಟಿಕೊಂಡು, ಅವರು ಅವರ ವಾದಕ್ಕೆ ಅಂಟಿಕೊಂಡರೆ ಏನು ಮಾಡುವುದಕ್ಕಾಗುತ್ತದೆ?

ಶ್ರೀ ಆರ್ ವಿ ದೇಶಪಾಂಡೆ – ಮಾನ್ಯ ಅಧ್ಯಕ್ಷರೇ ತಮ್ಮ ಮೇಲೆ ಬಹಳ ಜವಾಬ್ದಾರಿ ಇದೆ

ಅಧ್ಯಕ್ಷರು – ಇದೆ ಜವಾಬ್ದಾರಿ ಇದೆ ಆದರೆ ನೀವು ಈ ರೀತಿ ಮಾಡಿದರೆ ಏನು ಮಾಡುವುದು?

ಶ್ರೀ ಆರ್ ವಿ ದೇಶಪಾಂಡೆ – ಮಾನ್ಯ ಅಧ್ಯಕ್ಷರೇ ತಾವು ಸರ್ಕಾರಕ್ಕೆ ಹೇಳಬೇಕಾಗುತ್ತದೆ ಸ್ವತಃ ಯಡಿಯೂರಪ್ಪನವರು **" ನಾನು ರೈತನ ಮಗನಾಗಿದ್ದೇನೆ, ರೈತರ ಪರವಾಗಿ ಹೋರಾಟ ಮಾಡಿದ್ದೇನೆ"** ಎಂದಿದ್ದಾರೆ ಅದಕ್ಕಾಗಿ ಅವರಿಗೆ ನಾನು ನೆನಪು ಮಾಡಿಕೊಡುತ್ತಿದ್ದೇನೆ, ರೈತರ ಪರವಾಗಿ ರೈತರಾಗಿ ಏನಾದರೂ ಮಾಡಿ ಎಂದು ಹೇಳುತ್ತಿದ್ದೇನೇ ಹೊರತು ಬೇರೇನೂ ಹೇಳುತ್ತಿಲ್ಲ

ಅಧ್ಯಕ್ಷರು – ನಾನು ಅದನ್ನು ಒಪ್ಪುತ್ತೇನೆ ಎಲ್ಲರೂ ಸೇರಿ ಒಂದು ತೀರ್ಮಾನಕ್ಕೆ ಬರಬೇಕಲ್ಲ?

ಶ್ರೀ ಆರ್ ವಿ ದೇಶಪಾಂಡೆ – ಅದಕ್ಕೆ ತಾವು ಪ್ರಯತ್ನ ಮಾಡಿ ಅನೌನ್ಸ್ ಮಾಡಿಸಿ ತಾವು ಪ್ರಯತ್ನ ಮಾಡಿ ಆದೇಶ ಮಾಡಿಸಿ,

ಅಧ್ಯಕ್ಷರು – ಏನು ಮಾಡೋದು ಹೇಳಿ

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) – ಮಾನ್ಯ ಅಧ್ಯಕ್ಷರೇ, ಮೊನ್ನೆ ಅಡ್ಜರ್ನ್ ಆಗಿ ಇವತ್ತು ಸಭೆ ಸೇರಲಾಗಿದೆ ಮಾನ್ಯ ಮಾಧು ಸ್ವಾಮಿಯವರು, ವಾಟಾಳ್ ನಾಗರಾಜ್‌ರವರು, ಶ್ರೀರಾಮರೆಡ್ಡಿಯವರು ಮತ್ತು ಜಯಪ್ರಕಾಶ್ ಹೆಗ್ಡೆಯವರು ಈ ಸದನದ ಹಿರಿಯ ಸದಸ್ಯರಾಗಿದ್ದಾರೆ ಅವರಿಗೂ ಕೂಡ ರಾಜ್ಯದಲ್ಲಿರತಕ್ಕಂಥ ರೈತರ ಬಗ್ಗೆ, ಬಡವರ ಬಗ್ಗೆ ಕಳಕಳಿ ಇದೆ ಏನೋ ಪೊಲಿಟಿಕಲ್ ಆಗಿ ಸದನವನ್ನು ಸ್ಟಾಲ್ ಮಾಡಬೇಕು, ಚರ್ಚೆಯಾಗಬಾರದು ಎನ್ನತಕ್ಕಂಥದ್ದು ಇಲ್ಲ ಬಜೆಟ್ ಮೇಲೆ ಚರ್ಚೆ ಮಾಡಬೇಕೆಂದು ನಮ್ಮೆಲ್ಲರಿಗೂ ಇಚ್ಛೆ ಇದೆ ಇವತ್ತು ಯಡಿಯೂರಪ್ಪನವರೇ ತಾವು ಸರ್ಕಾರವನ್ನು ನಡೆಸುತ್ತಿದ್ದೀರಿ ತಾವು ಉಪ ಮುಖ್ಯಮಂತ್ರಿಗಳು, ಹಣಕಾಸಿನ ಮಂತ್ರಿಗಳು ಆಗಿದ್ದೀರಿ ಅವೊತ್ತು ಸಾಲ ಮನ್ನಾ ಬಗ್ಗೆ ತಾವೇ ಹೇಳಿದಿರಿ ಅದನ್ನು ಹೇಳಿದ ಮೇಲೆಯೇ ಇವೆಲ್ಲಾ ಪ್ರಶ್ನೆಗಳು ಉದ್ಭವವಾಗಿದ್ದು ಮಾನ್ಯ ಅಧ್ಯಕ್ಷರೆ, ತಾವು ಅಜೆಂಡಾ ಫಿಕ್ಸ್ ಮಾಡುತ್ತೀರಿ ಬಜೆಟ್ ಮೇಲೆ ಚರ್ಚೆ ಇನ್ನೂ ಪ್ರಾರಂಭವಾಗಿಲ್ಲ ಹೀಗಿರುವಾಗ ಮೊಟ್ಟ ಮೊದಲನೆಯದಾಗಿ ಸಪ್ಲಿಮೆಂಟರಿ ಬಜೆಟ್‌ನ್ನು ಸದನದಲ್ಲಿ ಮಂಡಿಸಿದ್ದಾರೆ ಏಕೋ ಏನೋ ಅವರಿಗೆ ಅನುಮಾನ ಹುಟ್ಟಿದೆ, ಸರ್ಕಾರದಲ್ಲಿರುವ ಎರಡೂ ಪಕ್ಷಗಳಲ್ಲಿ ಭಿನ್ನಾಭಿಪ್ರಾಯವಿರಬಹುದು, ಅದರ ಬಗ್ಗೆ ಕೂಡ ಶಾಸಕಾಂಗ ಪಕ್ಷದಲ್ಲಿ ನಿರ್ಣಯ ತೆಗೆದುಕೊಳ್ಳಬಹುದು ಆದರೆ ಯಡಿಯೂರಪ್ಪನವರೇ ತಾವೇನು 16 ನೇ ತಾರೀಖು ಬಜೆಟ್ ಮಂಡನೆ ಮಾಡಿದ್ದೀರಿ ಆ ಬಜೆಟ್ ಮೇಲೆ ಚರ್ಚೆ ಮಾಡಲು ನಾವು ಮನಸ್ಸು ಮಾಡಿದ್ದೇವೆ ನಾವು ಚರ್ಚೆ ಮಾಡುತ್ತೇವೆ ನಮ್ಮದೇನು ಒಂದು ವಿಚಾರವೆಂದರೆ, ನಮ್ಮ ಹಿರಿಯ ಸದಸ್ಯರು ಸದನದಲ್ಲಿ, ಸಾಲ ಮನ್ನಾ ವಿಚಾರದಲ್ಲಿ ತಾವೇನು ಹೇಳಿದ್ದೀರಿ ಅದರ ಬಗ್ಗೆ ಹೇಳುವುದಾದರೆ ಇವತ್ತು ರೈತರಿಗೆ ಸರಿಯಾದ

ರೀತಿಯಲ್ಲಿ ಸಹಾಯವಾಗಬೇಕು 31 ನೇ ತಾರೀಖಿನೊಳಗೆ ಸಾಲ ಕಟ್ಟುವುದಕ್ಕೆ ಆಗುವುದಿಲ್ಲ ಅದಕ್ಕಾಗಿ ಮಾನ್ಯ ಅಧ್ಯಕ್ಷರೇ, ತಮ್ಮಲ್ಲಿ ನಾನು ಒಂದು ವಿನಂತಿಯನ್ನು ಮಾಡುತ್ತಿದ್ದೇನೆ, ಮಾನ್ಯ ಪ್ರಕಾಶ್‌ರವರೂ ಕೂಡ ಈಗ ಸದನದಲ್ಲಿ ಇಲ್ಲ, ಹತ್ತು ನಿಮಿಷ ಅಥವಾ ಅರ್ಧ ಗಂಟೆ ಸದನವನ್ನು ಮುಂದೆ ಹಾಕಿ, ತಮ್ಮ ಕೊರಡಿಗೆ ಕರೆಸಿ ಮಾತನಾಡಿ ಬಜೆಟ್ ಮೇಲೆ ಮಾತನಾಡಲು ನಮ್ಮ ಕಡೆಯಿಂದ ಸಹಕಾರವಿದೆ ಏಕೆ ಸಹಕಾರವಿದೆಯೆಂದರೆ, ಈ ರಾಜ್ಯದ ಬಜೆಟ್ ಮೇಲೆ ಚರ್ಚೆ ಮಾಡತಕ್ಕಂಥದ್ದಕ್ಕೆ ಸಹಕಾರವಿದೆ ನೀವೇನು ಒಂದು ತರಹ ಸರ್ಕಾರ ನಡೆಸಬೇಕು ಎಂದು ಮಾಡಿದ್ದೀರೋ ಅಥವಾ ಇಲ್ಲವೆಂದು ಮಾಡಿದ್ದೀರೋ, ನಿಮಗೆ ಕೆಟ್ಟ ಹೆಸರು ತರಬೇಕೆನ್ನುವ, ನಿಮ್ಮ ಒಳಗಿನ ಜಗಳವೇನಿದೆ ಅದರ ಬಗ್ಗೆ ನಾವು ಪ್ರಸ್ತಾಪ ಮಾಡುತ್ತಿಲ್ಲ ನಮಗೆ ಬಜೆಟ್ ಮೇಲೆ ಚರ್ಚೆ ಮಾಡಲು ಮನಸ್ಸು ಇದೆ ನಾವು ವಿರೋಧ ಪಕ್ಷದಲ್ಲಿದ್ದರೂ ಕೂಡ ಇವತ್ತು ರಾಜ್ಯದ ಜನತೆಗೆ ಬಜೆಟ್ ಬಗ್ಗೆ ತಿಳಿಸಬೇಕಾಗಿದೆ, ಚರ್ಚೆಯಲ್ಲಿ ನಮ್ಮ ಹಿರಿಯ ಸದಸ್ಯರು ಮತ್ತು ವಿರೋಧ ಪಕ್ಷದ ಇತರ ಸದಸ್ಯರುಗಳೂ ಕೂಡ ಅಭಿಪ್ರಾಯ ವ್ಯಕ್ತ ಮಾಡುತ್ತೇವೆ ಅದಕ್ಕಾಗಿ ತಾವು ಸದನವನ್ನು ಸ್ವಲ್ಪ ಹೊತ್ತು ಮುಂದಕ್ಕೆ ಹಾಕಿ ಕರೆಸಿರಿ ಮತ್ತೊಮ್ಮೆ ಮಾತುಕತೆ ಆಗಲಿ ಇವತ್ತು ಇದರ ಬಗ್ಗೆ ತಾವೇನು ಹೇಳುತ್ತೀರಿ? ಅದನ್ನು ಬಿಟ್ಟು " ಇಲ್ಲಾ, ನಾನು ಒಮ್ಮೆಗೆ ಹೇಳಿಬಿಟ್ಟಿದ್ದೇನೆ" ಎಂದು ಹೇಳಬಾರದು ಸದನದಲ್ಲಿ ತಾವೂ ಕೂಡ ನೋಡಿದ್ದೀರಿ, ನಾವೂ ಕೂಡ 40 ವರ್ಷಗಳ ಅವಧಿಯಲ್ಲಿ ನೋಡಿದ್ದೇವೆ ಯಾವಾಗಲೂ ಕೂಡ ಮುಖ್ಯಮಂತ್ರಿಗಳು, ಹಣಕಾಸಿನ ಸಚಿವರೂ ಕೂಡ ಇಂಥದ್ದರ ಬಗ್ಗೆ ಬಹಳಷ್ಟು ಜವಾಬ್ದಾರಿಯುತವಾಗಿ ಮಾತನಾಡಿದ್ದಾರೆ ಅದು ಅವರ ಕೆಲಸ ಅದನ್ನು ಅವರು ಮಾಡಬೇಕು ಅದಕ್ಕಾಗಿ ತಾವು ಸದನವನ್ನು ಸ್ವಲ್ಪ ಹೊತ್ತು ಮುಂದೂಡಿ ನಮ್ಮನ್ನು ಕರೆಸಿ ಮಾತನಾಡಿ ನಂತರ ಕಾರ್ಯಕಲಾಪವನ್ನು ನಡೆಸಿ

ಅಧ್ಯಕ್ಷರು – ಉಪ ಮುಖ್ಯಮಂತ್ರಿಗಳು ಸರ್ಕಾರದ ಪರವಾಗಿ ಏನು ಹೇಳುತ್ತೀರಿ?

ಶ್ರೀ ಎನ್ ಧರ್ಮಸಿಂಗ್ – ಮಾನ್ಯ ಅಧ್ಯಕ್ಷರೇ ನೀವು ಹೇಳಿಬಿಡಿ ಸದನ ನಡೆಯಬೇಕು ಎಂಬುದು ತಮ್ಮ ಅಭಿಪ್ರಾಯವಿದ್ದರೆ, ಚರ್ಚೆಯಾಗಬೇಕಾಗಿದ್ದರೆ.

ಅಧ್ಯಕ್ಷರು – ಮೊದಲು ನೀವು ಹೇಳಿದ್ದಕ್ಕೆ ಸರ್ಕಾರದ ಕಡೆಯಿಂದ ಅವರು ಉತ್ತರ ಏನು ಹೇಳುತ್ತಾರೆ ನೋಡೋಣ ಏಕೆಂದರೆ ಅವರು ತಮಗೆ ಕನ್‌ವಿನ್ಸ್ ಮಾಡಬಹುದು ಅಥವಾ ನಿಮಗೆ ತೃಪ್ತಿಕರವಾಗಿ ಉತ್ತರವನ್ನು ಹೇಳಬಹುದು ಮೊದಲು ಅವರು ಹೇಳಲಿ

ಶ್ರೀ ಆರ್ ವಿ ದೇಶಪಾಂಡೆ – ಬಜೆಟ್ ಬಗ್ಗೆ ಡಿಸ್‌ಕಶನ್ ಆಗಬೇಕು, ನಾವು ಬೆಳಕನ್ನು ಬಜೆಟ್ ಮೇಲೆ ಚೆಲ್ಲಬೇಕು ಏನು ಒಳ್ಳೆಯದನ್ನು ಮಾಡಿದ್ದೀರಿ ಅದರ ಬಗ್ಗೆ ಹೇಳುತ್ತೇವೆ ಕೆಟ್ಟದ್ದನ್ನು ಮಾಡಿದ್ದರೆ ತರಾಟೆಗೂ ತೆಗೆದುಕೊಳ್ಳುತ್ತೇವೆ ಆ ಅವಕಾಶವನ್ನು ಬಿಟ್ಟುಕೊಡುವುದಕ್ಕೆ ನಾವು ತಯಾರಿಲ್ಲ ಆದರೆ ನನಗನ್ನಿಸುತ್ತಿರುವುದೇನೆಂದರೆ ಯಡಿಯೂರಪ್ಪನವರಿಗೇ ಚರ್ಚೆಯಾಗಬೇಕಾಗಿಲ್ಲ ಏನಾದರೂ ಮಾಡಿ ಬಜೆಟ್‌ನ್ನು ಗಿಲಿಟೆನ್ ಮಾಡಿಸಿ ಪಾಸ್ ಮಾಡಿಕೊಂಡು ಹೋಗಬೇಕೆನ್ನುವ ಪ್ರಯತ್ನವನ್ನು ಯಡಿಯೂರಪ್ಪನವರು ಮಾಡುತ್ತಾರೆ ಎಂದು ನನಗನ್ನಿಸುತ್ತದೆ ಮಾನ್ಯ ಯಡಿಯೂರಪ್ಪ ರೈತನ ಮಗನೆಂದು ಹೇಳಿಕೊಳ್ಳುತ್ತಾರೆ, ರೈತರ ಪರವಾಗಿ ಹೋರಾಟ ಮಾಡಿದ್ದೇನೆಂದು ಹೇಳುತ್ತಾರೆ ಆದುದರಿಂದ ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ, ತಾವು ಹೌಸ್ ಅಡ್ಜರ್ನ್ ಮಾಡಿ ವಿರೋಧ ಪಕ್ಷದ ನಾಯಕರನ್ನು ಹಾಗೂ ಇತರರನ್ನು ತಮ್ಮ ಕೊರಡಿಗೆ ಕರೆಸಿ ಚರ್ಚೆ ಮಾಡಿ ಸಾಲ ಮನ್ನಾ ಬಗ್ಗೆ ಒಂದು ಅಭಿಪ್ರಾಯಕ್ಕೆ ಬರಬೇಕು ನಿಮಗೆ ಚರ್ಚೆ ಬೇಡವೆಂದರೆ ಯಡಿಯೂರಪ್ಪನವರೆ ಗಿಲಿಟಿನ್ ಮಾಡಿಕೊಡಿ ಎಂದು ಹೇಳಿಬಿಡಿ

ಅಧ್ಯಕ್ಷರು – ತಾವು ದಯವಿಟ್ಟು ಕುಳಿತುಕೊಳ್ಳಿ ಸರ್ಕಾರದ ಪರವಾಗಿ ಮಾನ್ಯ ಪ್ರಕಾಶ್‌ರವರು ಏನೋ ಹೇಳುತ್ತಾರೆ

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು) – ಮಾನ್ಯ ಅಧ್ಯಕ್ಷರೇ, ಈಗಾಗಲೇ ಬಹಳ ಸ್ಪಷ್ಟವಾಗಿ ಈ ವಿಚಾರದಲ್ಲಿ ಹೇಳಿದ್ದೇವೆ ನಿನ್ನೆ ಕೂಡ ಈ ವಿಚಾರದಲ್ಲಿ ಸರ್ಕಾರ

ಶ್ರೀ ಎನ್ ಧರ್ಮಸಿಂಗ್ .– ಮಾನ್ಯ ಪ್ರಕಾಶ್‌ರವರೇ ಒಂದು ನಿಮಿಷ, ನಾವು ನಿಮಗೋಸ್ಕರ ಕಾಯುತ್ತಿದ್ದೆವು ಸ್ವಲ್ಪ ಲೇಟಾಗಿ ಬಂದಿರಿ ನಾವು ತಮಗೆ ಆಶ್ವಾಸನೆಯನ್ನು ಕೊಟ್ಟಿದ್ದೇವೆ, ಇವತ್ತು ಪ್ರಾರಂಭವಾಗತಕ್ಕಂಥ ಅಧಿವೇಶನದಲ್ಲಿ ನಾವು ಚರ್ಚೆಯಲ್ಲಿ ಭಾಗವಹಿಸುತ್ತೇವೆ, ಮತ್ತೆ ನಾವು ಧರಣಿಯನ್ನು ಮಾಡುವುದಿಲ್ಲ ಎನ್ನುವ ರೀತಿಯಲ್ಲಿ ಮಾತನಾಡಿದ್ದು ನಿಜ ಆದರೆ ನಾವು ಈಗ ಈ ಪ್ರಶ್ನೆಯನ್ನು ಎತ್ತಿದ್ದೇವೆ ಇವತ್ತು ನಮ್ಮ ಹಿರಿಯ ಶಾಸಕರ ಜೊತೆಯಲ್ಲಿ ಸಮಾಲೋಚನೆಯನ್ನು ಮಾಡಿದ್ದೇವೆ ನಾನು ಇವತ್ತು ಅಧ್ಯಕ್ಷರಿಗೆ ಹೇಳತಕ್ಕಂಥದ್ದೇನೆಂದರೆ, ಇನ್ನೊಂದು ಬಾರಿ ತಮ್ಮ ಕೊರಡಿಯಲ್ಲಿ ಚರ್ಚೆ ಮಾಡಿ ಯಾವ ರೀತಿಯಾಗಿ ಇದಕ್ಕೆ ಪರಿಹಾರವನ್ನು ಕಂಡುಹಿಡಿಯಬಹುದು ಎಂಬ ಬಗ್ಗೆ ಒಂದೈದು ನಿಮಿಷಗಳ ಕಾಲ ಮಾತನಾಡಿ ಮತ್ತೆ ಸಭೆ ಸೇರಿಸಿ ಕಾರ್ಯಕಲಾಪ ನಡೆಸಿ ನಾವು ಬಜೆಟ್ ಮೇಲೆ ಡಿಸ್‌ಕಶನ್ ಮಾಡಬೇಕಾಗಿದೆ ಬಜೆಟ್‌ನ ಮೇಲೆ ಡಿಸ್‌ಕಶನ್ ಮಾಡುವುದಕ್ಕೆ ಅಡ್ಡಿಪಡಿಸಿದರು ಎನ್ನತಕ್ಕಂಥ ಆಪಾದನೆಯನ್ನು ತೆಗೆದುಕೊಳ್ಳುವುದಕ್ಕೆ ನಾವು ಸಿದ್ಧರಿಲ್ಲ ಇವತ್ತು ನಾವು ಮಾತನಾಡಬೇಕಾಗಿದೆ ಇವತ್ತು ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡಿದರೆ ಬೇರೆ ಯಾರೂ ಏಳಲಿಲ್ಲವೆಂದರೂ ವೆಂಕಟೇಶ್‌ರವರು ಮಾತ್ರ ಎದ್ದೇ ಏಳುತ್ತಾರೆ ಅದಕ್ಕಾಗಿ ನಾನು ಏನು ಹೇಳುತ್ತೇನೆಂದರೆ, ಅಧ್ಯಕ್ಷರಿಗೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, 10 ನಿಮಿಷಗಳ ಕಾಲ ಸದನ ಮುಂದೂಡಿ ಮತ್ತೊಮ್ಮೆ ಮಾತುಕತೆ ಮಾಡಿ ತದನಂತರ ಸದನ ಸೇರಿ ಚರ್ಚೆಯಾಗಲಿ ಎಂದು ಹೇಳುತ್ತಿದ್ದೇನೆ

ಶ್ರೀ ಬಿ ಎಸ್ ಯಡಿಯೂರಪ್ಪ – ಮಾನ್ಯ ಅಧ್ಯಕ್ಷರೇ ನಾನು ಹಿರಿಯರಾದಂಥ ಪ್ರತಿ ಪಕ್ಷದ ನಾಯಕರಿಗೆ ಅತ್ಯಂತ ವಿನಯದಿಂದ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ ನನಗೆ ಗೊತ್ತಿಲ್ಲ, ಹಿರಿಯರಾದಂಥ ಮಾನ್ಯ ವಾಟಾಳ್ ನಾಗರಾಜ್‌ರವರು ಅನೇಕ ಸಂದರ್ಭದಲ್ಲಿ, ಸಂದಿಗ್ಧ ಸಂದರ್ಭದಲ್ಲಿ ಯಾವುದು ಸರಿ, ಯಾವುದು ತಪ್ಪು ಎಂದು ಹೇಳುತ್ತಿದ್ದಂಥ ಪ್ರತಿ ಪಕ್ಷದ ನಾಯಕರ ದೊಡ್ಡ ಗುಂಪೇ ನಾಲ್ಕು ಜನ ಪ್ರಮುಖರು ಇವತ್ತು ವೆಲ್‌ಗೆ ಬಂದಿದ್ದಾರೆ ಅವರು ಸಾಕಷ್ಟು ತಮ್ಮ ಸಲಹೆಗಳನ್ನು ಕೊಟ್ಟಿದ್ದಾರೆ ತಾವು ಪ್ರತಿಪಕ್ಷದ ನಾಯಕರ ಸಲಹೆಯಂತೆ ಎರಡ್ಮೂರು ಬಾರಿ ಸದನದ ಕಾರ್ಯಕಲಾಪವನ್ನು ಮುಂದೂಡಿ, ನಿಮ್ಮ ಕೊರಡಿಯಲ್ಲಿ

ಕರೆದು ಚರ್ಚೆಯನ್ನು ಮಾಡಿದ್ದೀರಿ ನಾವು ಏನು ಹೇಳಿದ್ದೇವೆ ಅಂದರೆ ಆಯವ್ಯಯದ ಬಗ್ಗೆ ವ್ಯಾಪಕವಾದಂತಹ ಚರ್ಚೆಯಾಗಿ 29ನೇ ತಾರೀಖು ಇದಕ್ಕೆ ಮಂಜೂರಾತಿಯನ್ನು ಪಡೆದು ಆ ಮನೆಗೆ ಹೋಗಬೇಕಾಗಿದೆ ಚರ್ಚೆಯೆಲ್ಲಾ ನಡೆದ ಮೇಲೆ ಯಾವುದಕ್ಕೆ ಆದ್ಯತೆ ಕೊಡಬೇಕು ? ನನ್ನ ಹಣಕಾಸಿನ ಸ್ಥಿತಿಗಳೇನು? ನಾಳೆ ಸಹಕಾರಿ ಸಂಘಗಳು ಮುಂದೆ ಒಳ್ಳೆಯ ರೀತಿಯಲ್ಲಿ ನಡೆದುಕೊಂಡು ಹೋಗುವುದಕ್ಕೆ ನಾನು ಪೂರಕ ಬೇಡಿಕೆಯಲ್ಲಿ 500 ಕೋಟಿ ರೂಪಾಯಿ ಏನು ಇಟ್ಟಿದ್ದೇನೆ, ಸಹಕಾರಿ ಸಂಘಗಳು ಒಳ್ಳೆಯ ರೀತಿಯಲ್ಲಿ ನಡೆದುಕೊಂಡು ಹೋಗುವುದಕ್ಕೆ ಮುಂದೆ ಏನು ಮಾಡಬೇಕೆಂದು ಚಿಂತನೆಯಲ್ಲಿ ಇರುವಂತಹ ಸಂದರ್ಭ ಇದೆ ದೇಶದಲ್ಲೇ ಮೊದಲ ಬಾರಿಗೆ ಅನೇಕ ರಾಜ್ಯಗಳಲ್ಲಿ ಇಂತಹ ಭೀಕರ ಬರಗಾಲ ಮತ್ತು ಅತಿವೃಷ್ಟಿಗೆ ಸಿಕ್ಕಾಗ ಯಾವುದೇ ರಾಜ್ಯ ಇಷ್ಟು ದೊಡ್ಡ ಪ್ರಮಾಣದಲ್ಲಿ ನೆರವು ಕೊಡುವುದಕ್ಕೆ ಮುಂದೆ ಬಂದಿರಲಿಲ್ಲ ನಾನು ಪದೆ ಪದೇ ಹೇಳುತ್ತೇನೆ, ಮೂರು ದಶಕಗಳಿಂದ ರೈತರ ಪರವಾಗಿ ಹೋರಾಟ ಮಾಡಿಕೊಂಡು, ಅವರ ಆಶೀರ್ವಾದದಿಂದ, ಇವತ್ತು ಈ ಸ್ಥಾನದಲ್ಲಿ ನಿಂತಿದ್ದೇನೆ ಆ ರೈತ ಸಮೂಹಕ್ಕೆ ನಾವೇನು ಮಾಡಿದರೂ ಕಡಿಮೆ ಎಷ್ಟು ಸವಲತ್ತುಗಳನ್ನು ಕೊಟ್ಟರೂ ಅವನೇನೂ ಸಾಲದ ಸುಳಿಯಲ್ಲಿ ಸಿಕ್ಕಿಕೊಂಡಿದ್ದಾನೆ, ಅದರಿಂದ ಹೊರಗೆ ಬರುವುದಕ್ಕೆ ಆಗದೇ ಇರುವಂತಹ ವಿಚಿತ್ರವಾದಂತಹ ಸನ್ನಿವೇಶದಲ್ಲಿ ಇದ್ದಾನೆ ಎನ್ನುವುದು ನೂರಕ್ಕೆ ನೂರು ಸತ್ಯ ಮಾನ್ಯ ಶ್ರೀರಾಮರೆಡ್ಡಿಯವರೆ ಅದರ ಬಗ್ಗೆ ಎರಡು ಮಾತಿಲ್ಲ ಅದಕ್ಕೆ ಹಣಕಾಸಿನ ಇತಿಮಿತಿಗಳು ಇರಬೇಕಲ್ಲ ನಾಳೆ ಸಹಕಾರಿ ಸಂಘಗಳು ಸುಸೂತ್ರವಾಗಿ ನಡೆದುಕೊಂಡು ಹೋಗುವಂತಾದ್ದು ಆಗಬೇಕಲ್ಲ ಚರ್ಚೆಯಾದ ಮೇಲೆ ತಾವು ಏನು ಹೇಳಬೇಕಾಗಿತ್ತು, 2002ರಲ್ಲಿ ಡಾ॥ ನಂಜುಂಡಪ್ಪ ವರದಿ ನಮ್ಮ ಕೈ ಸೇರಿದ ಮೇಲೆ ನಾವೇನು ಬೆಳಗಾಂನಲ್ಲಿ ಒಂದು ಭರವಸೆಯನ್ನು ಕೊಟ್ಟಿದ್ದೆವು, ಅಲ್ಲಿ ಕೊಟ್ಟಂತಹ ಭರವಸೆಯಂತೆ ಇವತ್ತು 1576 ಕೋಟಿ ರೂಪಾಯಿಯನ್ನು ಅದಕ್ಕಾಗಿ ನಾವು ತೆಗೆದು ಇಟ್ಟಿದ್ದೇವೆ ನನ್ನ ಆಸೆ ಏನೆಂದರೆ ಇನ್ನೂ ಹೆಚ್ಚು ಸಂಪನ್ಮೂಲ ಲಭ್ಯವಾದರೆ ಆ ಹಿಂದುಳಿದ ಕ್ಷೇತ್ರಗಳ ಅಭಿವೃದ್ಧಿಗಾಗಿ ಇನ್ನೂ ಹೆಚ್ಚಿನ ಹಣವನ್ನು ಕೊಡುವುದಕ್ಕೆ ಸಾಧ್ಯವಾದರೆ ಎಲ್ಲರಿಗಿಂತ ಹೆಚ್ಚು ಸಂತೋಷ

ಪಡುವಂತಹ ವ್ಯಕ್ತಿ ನಾನು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಯೋಚನೆ ಮಾಡಿ ಚರ್ಚೆಗೆ ಅನುಕೂಲವಾಗಬೇಕು ಎನ್ನುವ ದೃಷ್ಟಿಯಿಂದ ರೈತರಿಗೆ ಒಳ್ಳೆಯ message ಹೋಗಬೇಕು ಹಾಗೂ 31ನೇ ತಾರೀಖಿನೊಳಗಾಗಿ ರೈತರು ದುಡ್ಡು ಕಟ್ಟುವುದಕ್ಕೆ ಅವರು ಸನ್ನದ್ಧರಾಗಬೇಕು ಎನ್ನುವ ದೃಷ್ಟಿಯಿಂದ, ನಾನು ಮತ್ತು ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿ ಇವತ್ತು 50 ಸಾವಿರ ರೂಪಾಯಿಯವರೆಗೆ ಸಾಲ ಪಡೆದಂತಹವರಿಗೂ ಕೂಡ 25 ಸಾವಿರ ರೂಪಾಯಿ ಮನ್ನಾ ಮಾಡುತ್ತೇವೆ ಇನ್ನು 25 ಸಾವಿರ ರೂಪಾಯಿ ಕಟ್ಟಿದರೆ ಅದರ ಬಡ್ಡಿಯನ್ನು ಮನ್ನಾ ಮಾಡುತ್ತೇವೆ ದೇಶದಲ್ಲಿ ಮೊದಲಬಾರಿಗೆ ಈ ರಾಜ್ಯದಲ್ಲಿ ಅವನು ಮೂರು ಲಕ್ಷ, ನಾಲ್ಕು ಲಕ್ಷ ಅಥವಾ ಹತ್ತು ಲಕ್ಷ ರೂಪಾಯಿ ತೆಗೆದುಕೊಂಡಿರಲಿ ಅಲ್ಲಿಯವರೆಗೂ ಸಂಪೂರ್ಣ ಬಡ್ಡಿ ಮನ್ನಾ ಮಾಡಿದ್ದೇವೆ ದೀರ್ಘಾವಧಿ ಮಧ್ಯಮಾವಧಿ ಸಾಲದ ಮೇಲಿರುವ ಬಡ್ಡಿಯನ್ನು ಮನ್ನಾ ಮಾಡಿದ್ದೇವೆ ಈ ಸರ್ಕಾರ ಏನೋ ನಮ್ಮ ನೆರವಿಗೆ ಬಂದಿದೆ ಎನ್ನುವ ಕಾರಣಕ್ಕೆ ಜನ ಸಂತೋಷದಲ್ಲಿದ್ದಾರೆ ನಿಮಗೆ ಗೊತ್ತಿರುವ ಹಾಗೆ ಮುಂದೆ ಬರುವ ದಿವಸಗಳಲ್ಲೂ ಪಕ್ಷಭೇದ ಮರೆತು ನಾವು ಬರಗಾಲ ಎದುರಿಸಬೇಕಾಗಿದೆ ಕುಡಿಯುವ ನೀರಿನ ಹಾಹಾಕಾರ ಇದೆ ಕೇಂದ್ರ ಸರ್ಕಾರದ ನೆರವು ಬರುತ್ತದೋ ಬಿಡುತ್ತದೋ ನಾವು ಅದಕ್ಕೆ ಹಣಕಾಸಿನ ನೆರವು ಕೊಡಬೇಕಾಗುತ್ತದೆ ಅದು ನಮ್ಮ ಸರ್ಕಾರದ ಕರ್ತವ್ಯ ಇದೆ ಒಂದು ನಿಮಿಷ ನಾನು ಮಾತನಾಡುವುದಕ್ಕೆ ಬಿಡಿ

ಶ್ರೀ ಎನ್ ಧರ್ಮ್‌ಸಿಂಗ್ – ಈ ತರಹದ ರಾಜಕೀಯದ ಮಾತುಗಳು ಬೇಕಾಗಿಲ್ಲ

ಶ್ರೀ ಬಿ ಎಸ್ ಯಡಿಯೂರಪ್ಪ – ರಾಜಕೀಯ ಭಾಷಣ ಎಂದರೆ ನೀವು ಹೇಳಿದ ಹಾಗೆ ನಾನು ಭಾಷಣ ಮಾಡುವುದಕ್ಕೆ ಆಗುವುದಿಲ್ಲ ಸಾರ್

ಶ್ರೀ ಎನ್ ಧರ್ಮ್‌ಸಿಂಗ್ – ನಾವು ಮಾಡಿಲ್ಲ

ಶ್ರೀ ಬಿ ಎಸ್ ಯಡಿಯೂರಪ್ಪ – ನೀವು ರಾಜಕೀಯ ಎನ್ನುವುದಾದರೆ, ನೀವು ಹಿರಿಯರಾಗಿ, ಮೊದಲು ನೀವು ಚೆನ್ನಾಗಿದ್ದೀರಿ ಇತ್ತೀಚೆಗೆ ವಿರೋಧ ಪಕ್ಷಕ್ಕೆ ಬಂದಮೇಲೆ ಏಕೆ ಹೀಗಾದಿರಿ?

ಶ್ರೀ ಎನ್ ಧರ್ಮ್‌ಸಿಂಗ್ – ನಾನು ಮಾನ್ಯ ಪ್ರಕಾಶ್‌ರವರನ್ನು ಏನು ಕೇಳುತ್ತಿದ್ದೇನೆ ಎಂದರೆ ಸದನವನ್ನು ಮುಂದುವರೆಸಿಕೊಂಡು ಹೋಗಬೇಕು

ಶ್ರೀ ಬಿ ಎಸ್ ಯಡಿಯೂರಪ್ಪ – ನಾನು ಪೂರ್ತಿ ಮಾತನಾಡುವುದಕ್ಕೆ ಬಿಡಿ ಸಾರ್ ರಾಜಕೀಯ ಭಾಷಣ

ಶ್ರೀ ಎನ್ ಧರ್ಮ್‌ಸಿಂಗ್ – ನೀವು ಕೇಂದ್ರದ ಹಣ ಬಂದಿಲ್ಲವೆಂದರೆ ಅದಕ್ಕೆ ನಾವು ಹೇಳಬೇಕಾಗುತ್ತದಲ್ಲ

ಶ್ರೀ ಬಿ ಎಸ್ ಯಡಿಯೂರಪ್ಪ – ಅಲ್ಲಿಂದ ಬರದೇ ಇದ್ದರೂ ಕೊಡುತ್ತೇನೆ ಎಂದು ನಾನು ಹೇಳಿದೆ

ಶ್ರೀ ಎನ್ ಧರ್ಮ್‌ಸಿಂಗ್ – ಯಾರು ಹೇಳಿದ್ದಾರೆ?

ಶ್ರೀ ಬಿ ಎಸ್ ಯಡಿಯೂರಪ್ಪ – ನೋಡಿ, ದಯಮಾಡಿ ನೀವು ಮಾತನಾಡುವುದಿದ್ದರೆ ನೀವು ಮಾತನಾಡಿ, ಆಮೇಲೆ ನಾನು ಮಾತನಾಡುತ್ತೇನೆ ನೀವು ಮಾತನಾಡಿ

ಶ್ರೀ ಎನ್ ಧರ್ಮ್‌ಸಿಂಗ್ – ಮಾನ್ಯ ಅಧ್ಯಕ್ಷರೇ, ಸಂಸದೀಯ ವ್ಯವಹಾರ ಮಂತ್ರಿಗಳು ಬಂದಿದ್ದಾರೆ ಈಗಾಗಲೇ ನಾವು ಮಾನ್ಯ ಸದಸ್ಯರುಗಳಾದ ಶ್ರೀ ಮಾಧುಸ್ವಾಮಿಯವರು, ವಾಟಾಳ್ ನಾಗರಾಜ್‌ರವರು, ಶ್ರೀರಾಮರೆಡ್ಡಿಯವರು ಹಾಗೂ ಜಯಪ್ರಕಾಶ್ ಹೆಗ್ಡೆವರ ಜೊತೆಯಲ್ಲಿ ನಾನು, ಮಾನ್ಯ ಖರ್ಗೆಯವರು, ದೇಶಪಾಂಡೆಯವರು ಮತ್ತು ರಮೇಶ್‌ಕುಮಾರ್‌ರವರು ಮಾತನಾಡಿದ್ದೇವೆ ಇವತ್ತು ಬಜೆಟ್ ಮೇಲೆ ಚರ್ಚೆಯಾಗಬೇಕಾಗಿದೆ ಬಜೆಟ್ ಮೇಲೆ ಚರ್ಚೆಯಾಗಬೇಕಾದರೆ ಏನಾದರೂ ಒಂದು ದಾರಿ ಹುಡುಕಬೇಕು ನಾವು ಎತ್ತಿದಂತಹ ಪ್ರಶ್ನೆಗೆ ಉತ್ತರ ಕೊಡಬೇಕು, ಅದಕ್ಕೆ ತಾವು ಹತ್ತು ನಿಮಿಷಗಳ ಕಾಲ ಸದನವನ್ನು adjourn ಮಾಡಿ You have got the powers ನೀವು ಎಲ್ಲಾ ವಿಚಾರಕ್ಕೂ ಅವರನ್ನು ಕೇಳಿದರೆ ಆಗುವುದಿಲ್ಲ ನಿಮಗೆ ನಿಜವಾಗಿ ಕೂಡ ಸದನವನ್ನು ನಡೆಸಬೇಕೆಂದಿದ್ದರೆ, ಬಜೆಟ್ ಮೇಲೆ ಚರ್ಚೆಯಾಗಬೇಕು ಎಂದು ನಿಮ್ಮ ಮನಸ್ಸಿನಲ್ಲಿ ಭಾವನೆ ಇದ್ದರೆ ನಾವೇನು request ಮಾಡಿದ್ದೇವೆ ಅದಕ್ಕೆ ಹತ್ತು ನಿಮಿಷಗಳ ಕಾಲ ಸದನವನ್ನು

ಮುಂದೂಡಿ ಇವತ್ತು ಅದು ಆದಮೇಲೆ ಚರ್ಚೆಯಲ್ಲಿ ನಾವು ಪಾಲ್ಗೊಳ್ಳುತ್ತೇವೆ ನೀವು ಏನು ಹೇಳಬೇಕಾಗಿದೆ, ಅದನ್ನು ನೀವು ಹೇಳಿ ನಾವೇನು ಹೇಳಬೇಕಾಗಿದೆ ಅದನ್ನು ನಾವು ಹೇಳುತ್ತೇವೆ ಆದರೆ ಅದಕ್ಕೆ ಪೂರಕವಾಗಿ ಇವತ್ತು ಮಾತನಾಡುವಾಗ ಕೇಂದ್ರ ಸರ್ಕಾರದಿಂದ ಹಣ ಬಂದಿಲ್ಲವೆಂದು mileage ತೆಗೆದುಕೊಳ್ಳುವಂತಹ ರೀತಿಯಲ್ಲಿ ಹೇಳುವುದು ಸರಿಯಲ್ಲ ಈಗ ರಾಜಕೀಯದಲ್ಲಿ ನಾವೂ ಇದ್ದೇವೆ, ನೀವೂ ಇದ್ದೀರಿ ಅದು ಬರುತ್ತದೆ ನಿಮ್ಮನ್ನು ರೈತರು ಎಷ್ಟು ಮೆಚ್ಚುತ್ತಾರೆ? ಅವರು ಎಷ್ಟು ಸಂಕಟದಲ್ಲಿದ್ದಾರೆ? ಇದರ ಬಗ್ಗೆ ಎಲ್ಲಾ ಕಡೆಗೆ ಸಹಕಾರ ಬ್ಯಾಂಕಿನ ಮುಖ್ಯಸ್ಥರನ್ನು ಕೇಳಿದರೆ ಹೇಳುತ್ತಾರೆ, ಮಾನ್ಯ ಸದಸ್ಯರುಗಳಾದ ಗುರುಪಾದಪ್ಪ ನಾಗಮಾರಪಲ್ಲಿಯಂತಹವರು ಹಾಗೂ ಶ್ರೀನಿವಾಸಗೌಡರನ್ನು ಕೇಳಿದರೂ ಹೇಳುತ್ತಾರೆ ಇವತ್ತು ನೀವು ಎಲ್ಲಾ ಕಡೆಗೆ ವಿಚಾರ ಮಾಡದೇ ತರಾತುರಿಯಾಗಿ ಏನು announce ಮಾಡಿದ್ದೀರಿ, ಅದು ರಾಜ್ಯದ ರೈತರಿಗೆ ಅನ್ಯಾಯವಾಗತಕ್ಕಂಥ ರೀತಿಯಲ್ಲಿ ಇದೆಯೆಂದು ನಮ್ಮ ಎಲ್ಲಾ ವಿರೋಧ ಪಕ್ಷದ ಸದಸ್ಯರು ಹೇಳಿದ್ದಾರೆ ಇವತ್ತು Bhat Commission ಬಗ್ಗೆ discussion ಪ್ರಾರಂಭವಾಗಬೇಕಾಗಿದೆ ಇವರನ್ನು well ನಲ್ಲಿ ಕೂರಿಸಿ ಸಭೆಯನ್ನು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ ಎರಡು ದಿವಸಗಳ ಕಾಲ ಯಾವ ವಿಷಯದ ಬಗ್ಗೆ ಪ್ರತಿಪಾದನೆ ಮಾಡಿದ್ದೇವೆ, ಅದನ್ನು ಹೇಗೆ ಇತ್ಯರ್ಥ ಮಾಡಬೇಕು ಎನ್ನುವುದರ ಬಗ್ಗೆ ತಮ್ಮ ಕೊರಡಿಯಲ್ಲಿ ಕರೆಸಿ ಮಾತನಾಡಿದರೆ ನಾವು ತಯಾರಿದ್ದೇವೆ ಮಾತನಾಡುವ ಹಕ್ಕು ತಮಗೆ ಬಿಟ್ಟಿದ್ದು ಆ ಪೀಠದಲ್ಲಿ ಕುಳಿತು ಎಲ್ಲಾ speaker ಗಳು ಈ ರೀತಿಯ ನಿರ್ಣಯ ತೆಗೆದುಕೊಂಡಿದ್ದಾರೆ ಅವರೆಲ್ಲಾ, they have directed the Government ನೀವು ಬನ್ನಿ ಮಾತನಾಡಿ ಎಂದು ಹೇಳಬೇಕು ಇವತ್ತು ಸದನದಲ್ಲಿ ಚರ್ಚೆಯಾಗಬೇಕು, ಸದನವನ್ನು ಮುಂದುವರೆಸಿಕೊಂಡು ಹೋಗುವುದಕ್ಕೆ ದಾರಿಯನ್ನು ತಾವು ಹುಡುಕಬೇಕಾಗಿದೆ ಅದಕ್ಕೋಸ್ಕರ ಸದನವನ್ನು ಅರ್ಧ ಗಂಟೆಗಳ ಕಾಲ ಮುಂದೂಡಿ ಅಲ್ಲಿ ಚರ್ಚೆ ಮಾಡಿ ಮತ್ತೆ ಇಲ್ಲಿ ಬಂದು ಸೇರೋಣ

ಶ್ರೀ ಆರ್ ವಿ ದೇಶಪಾಂಡೆ :– ಮಾನ್ಯ ಅಧ್ಯಕ್ಷರೇ ಕೇಂದ್ರ ಸರ್ಕಾರದ ನೆರವು ಬರುತ್ತದೋ ಇಲ್ಲವೋ, ಅದನ್ನು ತಾವು ಇಲ್ಲಿ ಹೇಳಬಾರದು ಪ್ರತಿಬಾರಿ ಕೂಡ ಕೇಂದ್ರ ಸರ್ಕಾರ ನಿಮಗೆ ನೆರವು ಕೊಡುತ್ತಾ ಬಂದಿದೆ ಆರು ಜಿಲ್ಲೆಗಳಿಗೆ ರಾಜ್ಯದ ಇತಿಹಾಸದಲ್ಲಿ ಮೊದಲನೇ ಬಾರಿ ಮಾನ್ಯ ಪ್ರಧಾನ ಮಂತ್ರಿಗಳು 2,688 ಕೋಟಿ ರೂಪಾಯಿ ಕೊಟ್ಟಿದ್ದಾರೆ ಅದರಲ್ಲಿ 1516 ಕೋಟಿ ರೂಪಾಯಿ subsidy ಇದೆ ತಾವು ಈ ರೀತಿ ಬರುತ್ತದೋ ಇಲ್ಲವೊ ಎಂದು ಹೇಳಿದರೆ ತಪ್ಪಾಗುತ್ತದೆಯಲ್ಲ ತಾವು ಸ್ಪಷ್ಟವಾಗಿ, ಅದು ಬರುತ್ತದೆ, ಪ್ರಯತ್ನ ಮಾಡಬೇಕು, ಅದಕ್ಕೆ ನೀವೂ ಕೂಡ ಸಹಕಾರ ಮಾಡಬೇಕು ಎಂದು ಹೇಳಬೇಕು ಅದನ್ನು ಒಪ್ಪಿಕೊಳ್ಳುತ್ತೇನೆ ಬರುತ್ತದೋ ಇಲ್ಲವೋ ಎಂದು ಹೇಳಿ ಕೇಂದ್ರ ಸರ್ಕಾರದ ಮೇಲೆ ಅನಾವಶ್ಯಕವಾಗಿ ಗೂಬೆ ಕೂರಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ ಎಂದು ಈಗ ಅರ್ಥವಾಗುತ್ತದೆ

ಶ್ರೀ ಬಿ ಎಸ್ ಯಡಿಯೂರಪ್ಪ – ಇವತ್ತು ಇಲ್ಲಿ ಬಹಳ ಗಹನವಾಗಿ ಈ ಪೂರಕ ಅಂದಾಜುಗಳ ಬಗ್ಗೆ ಹಾಗೂ ಆಯವ್ಯಯದ ಬಗ್ಗೆ ಚರ್ಚೆಯಾಗಬೇಕು ನನ್ನ ಮನಸ್ಸಿನಲ್ಲಿ ಏನಿದೆ ಎಂದರೆ ಇವತ್ತು ರೈತ ಏನು ಸಹಕಾರಿ ಸಂಘದಲ್ಲಿ ಸಾಲ ಮಾಡಿದ್ದಾನೆ ಅದಕ್ಕೆ ಕೆಲವು ಏನು concession ಕೊಟ್ಟಿದ್ದೇವೆ, ಇದು ಸಾಲುವುದಿಲ್ಲ, ಮತ್ತೆ ಬೇಕು ಎಂದು ಕೇಳುವುದಕ್ಕೆ ನಿಮಗೆ ಅಧಿಕಾರ ಇದೆ ನೀವು ವಿರೋಧ ಪಕ್ಷದಲ್ಲಿದ್ದುಕೊಂಡು ಅದನ್ನು ಹೇಳಲೇಬೇಕು ಅದರ ಬಗ್ಗೆ ನನ್ನದೇನೂ ವಿರೋಧವಿಲ್ಲ ಆದರೆ ಪ್ರಶ್ನೆ ಇರುವುದೇನೆಂದರೆ ಇಲ್ಲಿ ಚರ್ಚೆಯಾಗಬೇಕಾಗಿರುವಂತಾದ್ದು ಇದೇ ರೈತ ಸಹಕಾರಿ ಸಂಘದಲ್ಲಿ ಸಾಲ ಪಡೆದಿರುವವನು, Nationalized Bank ನಲ್ಲಿ ಕೂಡ ಸಾಲವನ್ನು ಪಡೆದಿದ್ದಾನೆ ಇಬ್ಬರೂ ಅದೇ ರೈತರು ಈ ಪಕ್ಕದಲ್ಲಿರುವವನು ಸಹಕಾರಿ ಸಂಘದಲ್ಲಿ ಸಾಲ ಪಡೆದುಕೊಂಡಿದ್ದರೆ, ಆ ಪಕ್ಕದಲ್ಲಿರುವವನು Nationalized Bank ನಿಂದ ಸಾಲ ತೆಗೆದುಕೊಂಡಿದ್ದಾನೆ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಸಾಲ ಪಡೆದಿರುವವನಿಗೂ ಸಹ ಕಡಿಮೆ ಬಡ್ಡಿಗೆ ಸಾಲ ಸಿಗಬೇಕು ಇಂತಹ ಭೀಕರವಾದಂತಹ ಸಂದರ್ಭದಲ್ಲಿ ಅವನ ಸಾಲ ಮನ್ನಾವಾಗಬೇಕು ಈ ಮನೆಯಲ್ಲಿ ಪಕ್ಷಭೇದ ಮರೆತು ಸರ್ವಾನುಮತದಿಂದ ವ್ಯಾಪಕವಾಗಿ ಚರ್ಚೆಯಾಗಿ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವವರಿಗೂ ಸಹ ರಾಜ್ಯ ಸರ್ಕಾರ ಹಣಕಾಸಿನ ಇತಿಮಿತಿಯಲ್ಲಿ 4 percent ಗೆ ಬಡ್ಡಿಗೆ ಸಾಲ ಕೊಡುವುದಾದರೆ

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ – ನಾನು ಮಾತನಾಡಬೇಕಾದರೆ ನನ್ನನ್ನು ತಡೆಯುವುದಕ್ಕೆ ಅವರು ಯಾರು ಕೇಳಿ? ನಾನು ಮಾತನಾಡಬೇಕಾದರೆ ನೀವು ಮಧ್ಯ ಏಕೆ ಪ್ರವೇಶ ಮಾಡುತ್ತೀರಾ? ನೀವು ಅದು ಏನು ಮಾತನಾಡುತ್ತೀರೋ ಮಾತನಾಡಿ

ಶ್ರೀ ಆರ್ ವಿ ದೇಶಪಾಂಡೆ – ನೋಡಿ, ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಕೊಡಿ, ಆರ್‌ಆರ್‌ಬಿ ಗಳಿಗೆ ಕೊಡಿ ಕೇಂದ್ರ ಸರ್ಕಾರ

ಅಧ್ಯಕ್ಷರು – ಈಗ ಸದನವನ್ನು 15 ನಿಮಿಷಗಳ ಕಾಲ ಮುಂದೂಡಲಾಗಿದೆ

(ಸದನವು ತನ್ನ ಕಲಾಪವನ್ನು 11·38 ಕ್ಕೆ ಮುಕ್ತಾಯಗೊಳಿಸಿ ಮತ್ತೆ 15 ನಿಮಿಷಗಳ ನಂತರ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಪುನಃ 12 ಗಂಟೆ 30 ನಿಮಿಷಕ್ಕೆ ಸಮಾವೇಶಗೊಂಡಾಗ ಸನ್ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

(ಶ್ರೀ ವಾಟಾಳ್ ನಾಗರಾಜ್, ಶ್ರೀ ಜೆ ಸಿ ಮಾಧುಸ್ವಾಮಿ, ಶ್ರೀ ಜಿ ವಿ ಶ್ರೀರಾಮರೆಡ್ಡಿ ಹಾಗೂ ಶ್ರೀ ಕೆ ಜಯಪ್ರಕಾಶ್ ಹೆಗ್ಡೆಯವರು ಸದನದ ಬಾವಿಯಲ್ಲಿದ್ದರು)

ಅಧ್ಯಕ್ಷರು – ಮಾನ್ಯ ಹಣಕಾಸಿನ ಸಚಿವರೇ ಈಗ ತಾವು ಮಾತನಾಡಿ

ಶ್ರೀ ಬಿ ಎಸ್ ಯಡಿಯೂರಪ್ಪ (ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು) '– ಮಾನ್ಯ ಅಧ್ಯಕ್ಷರೇ ಈಗ ತಮ್ಮ ಕೊರಡಿಯಲ್ಲಿ ಸಭೆ ಕರೆದು ಮಾನ್ಯ ವಿರೋಧ ಪಕ್ಷದ ನಾಯಕರ ಜೊತೆಯಲ್ಲಿ ಸಮಾಲೋಚನೆ ಮಾಡಿ ಮಾನ್ಯ ಮುಖ್ಯಮಂತ್ರಿಗಳ ಸಮಕ್ಷಮ ಅನೇಕ ಗಂಭೀರವಾದ ವಿಷಯಗಳು ಚರ್ಚೆಯಾಗಿರುತ್ತದೆ ಬಹುಶಃ ಈ ಸಮ್ಮಿಶ್ರ ಸರ್ಕಾರ ರೈತರ ಪರವಾಗಿ ಇರುವಂಥ ಸರ್ಕಾರ ಈ ದೇಶದ ಇತಿಹಾಸದಲ್ಲಿ ಹಿಂದೆಂದೂ ಯಾವುದೇ ರಾಜ್ಯದಲ್ಲಿ ಕೊಡದೆ ಇರುವಂಥ ಸವಲತ್ತುಗಳನ್ನು ಕೊಟ್ಟಿದ್ದೇವೆ 25 ಸಾವಿರದವರೆಗೆ ಸಾಲ ಮನ್ನಾ ಮಾಡಿರುವಂಥದ್ದು ಇರಬಹುದು, 4% ಬಡ್ಡಿಗೆ ಸಾಲ ಕೊಟ್ಟಿರುವಂಥದ್ದು ಇರಬಹುದು,

ದೀರ್ಘಾವಧಿ ಮತ್ತು ಮಧ್ಯಮಾವಧಿ ಹಿಂದಿನ ಸಾಲದ ಬಾಕಿ ಬಗ್ಗೆ ಬಡ್ಡಿ ಮನ್ನಾ ಮಾಡಿರುವಂಥದ್ದು ಇರಬಹುದು ಒಬ್ಬೊಬ್ಬ ಬಾಕಿದಾರನಿಗೆ 50 ಸಾವಿರದಿಂದ 75 ಸಾವಿರದವರೆಗೆ ಅನೇಕ ಕೇಸ್‌ಗಳಲ್ಲಿ ಇದರಿಂದ ಅವನಿಗೆ ಲಾಭವಾಗುತ್ತದೆ ಇವತ್ತು ಏನು ನಮ್ಮ ಪ್ರತಿಪಕ್ಷದ ನಾಯಕರು ಮತ್ತು ವಾಟಾಳ್ ನಾಗರಾಜ್‌ರವರು, ಮಾಧುಸ್ವಾಮಿಯವರು, ಶ್ರೀರಾಮರೆಡ್ಡಿಯವರು ಎಲ್ಲರೂ ಸೇರಿ ಪ್ರಸ್ತಾಪವನ್ನು ಮಾಡಿದ್ದಾರೆ ನಾನು ಏನು ಅವರಿಗೆ ಸಲಹೆಯನ್ನು ಕೊಟ್ಟಿದ್ದೇನೆ, ಅಂದರೆ ಹಾಗೂ ಅವತ್ತಿನಿಂದ ಇವತ್ತಿನವರೆಗೆ ನಾವು ಏನು ಸಲಹೆ ಕೊಡುತ್ತಿದ್ದೇವೆ ಎಂದರೆ, ಈ ಸರ್ಕಾರ ರೈತರ ಪರವಾಗಿ ಇದೆ, ನಮಗೆ ಚಿಂತನೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ, ಈ ಬಗ್ಗೆ ಏನೇನು ಸಲಹೆಗಳನ್ನು ಕೊಡುತ್ತೀರಿ, 29 ನೇ ತಾರೀಖಿನವರೆಗೆ ಕೊಡಿ, ನನ್ನ ಆಯವ್ಯಯದ ಮೇಲೆ ಉತ್ತರ ಕೊಡುವಂಥ ಸಮಯದಲ್ಲಿ ನಾನು ಉತ್ತರ ಕೊಡುತ್ತೇನೆಂದು ಹೇಳಿದರೂ ಸಹ ಏಕೋ ಏನೋ ಒಂದೂವರೆ ದಿವಸದ ಕಾಲ ಈ ಕಾರ್ಯಕಲಾಪ ನಡೆಯದೇ ಅನೇಕ ಮಹತ್ವದ ವಿಷಯಗಳು ಚರ್ಚೆಗೆ ಬಂದಿಲ್ಲ ನಾವು ಯಾವುದೇ false prestige ಮೇಲೆ ನಿಂತಿಲ್ಲ ವಿರೋಧ ಪಕ್ಷದವರು ಸಲಹೆಯನ್ನು ಕೊಡಲೇಬೇಕು ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಾನು ವೈಯಕ್ತಿಕವಾಗಿ ನಿಮಗೆ ಹೇಳಬೇಕೆಂದರೆ, ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದ ಪ್ರಶ್ನೆಯೇ ಇಲ್ಲ, ಈ ಮನೆಯ ಒಳಗಡೆ ಬಂದ ಮೇಲೆ ಒಟ್ಟಾಗಿ ಚಿಂತನೆ ಮಾಡಬೇಕು, ಈ ರಾಜ್ಯದ ರೈತರ ಹಿತದೃಷ್ಟಿಯಿಂದ, ಅದು ಯಾವುದೇ ಜ್ವಲಂತ ಸಮಸ್ಯೆಗಳು ಇದ್ದರೆ, ಅದಕ್ಕೆ ಪರಿಹಾರವನ್ನು ಹುಡುಕುವ ಪ್ರಯತ್ನವನ್ನು ಮಾಡಬೇಕು, ಇದರ ಲಾಭ ಎಷ್ಟು ಆಗುತ್ತದೆ, ಎಷ್ಟೆಷ್ಟು percentage ಯಾರಿಗೆ ಅನುಕೂಲವಾಗುತ್ತದೆ, ಎಂಬ ಬಗ್ಗೆ ನಾವು ಎಂದೂ ಚಿಂತೆ ಮಾಡಲಿಲ್ಲ ಅನೇಕ ಟೀಕೆ ಟಿಪ್ಪಣೆಗಳನ್ನು ನಾವು ಇಲ್ಲಿ ಕಂಡಿದ್ದೇವೆ ಇದು ಯಾವ ಬಜೆಟ್? ಇದು ಬಿಜೆಪಿ ಮತ್ತು ಜೆಡಿ(ಎಸ್)ನ ಸಮ್ಮಿಶ್ರ ಸರ್ಕಾರದ ಬಜೆಟ್, ಈ ಕ್ರೆಡಿಟ್ ಯಾರಿಗೆ ಹೋಗುತ್ತದೆ? ಬಜೆಟ್ ಮಂಡನೆ ಮಾಡಿರುವ ಬಿಜೆಪಿ ಮತ್ತು ಜೆಡಿ(ಎಸ್)ಗೆ ಹೋಗುತ್ತದೆ ಇದು ಬಿಜೆಪಿ ಯ ಒಂದರ ಬಜೆಟ್ ಅಲ್ಲ, ನಾನೊಬ್ಬನೇ ಈ ರಾಜ್ಯದ ಜವಾಬ್ದಾರಿ ತೆಗೆದುಕೊಂಡು ಕೆಲಸವನ್ನು ಮಾಡುತ್ತಿಲ್ಲ ಅರ್ಥವಿಲ್ಲದೆ ಟೀಕೆ ಟಿಪ್ಪಣೆಗಳು, ಇವತ್ತು ಇಲ್ಲಿ ಬಂದು ನಾನು 50 ಸಾವಿರ ಇರುವುದನ್ನು 25 ಸಾವಿರದವರೆಗೂ ಮನ್ನಾ ಮಾಡುತ್ತೇವೆಂದು

ಹೇಳಬೇಕಾದರೂ ಸಹ ಮಾನ್ಯ ಮುಖ್ಯಮಂತ್ರಿಗಳು ನಾವು ಕುಳಿತುಕೊಂಡು ಸಮಾಲೋಚನೆ ಮಾಡಿ, ಚರ್ಚೆಯನ್ನು ಮಾಡಿ ಈ ಮನೆಗೆ ನಾನು ಬಂದು ಹೇಳಿದ್ದೇನೆ ಏಕೆಂದರೆ ಚರ್ಚೆ ಮಾಡುವುದಕ್ಕೆ ಅನುಕೂಲವಾಗಬೇಕು ಈ ತಿಂಗಳ ಸಾಲವನ್ನು ತೆಗೆದುಕೊಂಡಿರುವವರಿಗೆ ಕಟ್ಟಲು ಅನುಕೂಲವಾಗಬೇಕು ರೈತರಿಗೆ ಒಂದು message ಹೋಗಬೇಕು ಎನ್ನುವ ಸದುದ್ದೇಶದಿಂದ ನಾನು ಮಾಡಿದ್ದೇನೆ ಆದ್ದರಿಂದ ಇವತ್ತು ಏನು ಪ್ರಸ್ತಾಪವಾಯಿತು, ಇವತ್ತು ನಮ್ಮ ಸಮನ್ವಯ ಸಮಿತಿ ಸಭೆ ಇದೆ, ಅನೇಕ ಪ್ರಮುಖ ವಿಷಯಗಳ ಜೊತೆಗೆ ಈ ರೈತರ ವಿಷಯವನ್ನು ಸೇರಿ ನಾವು ಇಲ್ಲಿ ಚರ್ಚೆಯನ್ನು ಮಾಡುತ್ತಿದ್ದೇವೆ ಚರ್ಚೆ ಮಾಡಿ ನಾವು ಒಂದು ಅಂತಿಮ ತೀರ್ಮಾನಕ್ಕೆ ಬರುತ್ತೇವೆ ರಾಜ್ಯದ ರೈತರ ಹಿತದೃಷ್ಟಿಯಿಂದ ಏನು ಸಹಾಯ ಮಾಡಿದರೂ ಅದು ಕಡಿಮೆ ಎಂದು ಹೇಳುವವನು ನಾನು ಈ ಯಡಿಯೂರಪ್ಪ ವೈಯಕ್ತಿಕವಾಗಿ ಹೇಳಬೇಕೆಂದರೆ, ಸ್ವಾತಂತ್ರ್ಯ ಪೂರ್ವದಲ್ಲಿ ನಮ್ಮ ರೈತರು ಸಾಲಗಾರರು, ಸ್ವಾತಂತ್ರ್ಯ ನಂತರ ಅದೇ ಸ್ಥಿತಿ, ಇನ್ನೊಂದೆರಡು ತಿಂಗಳಲ್ಲಿ ಕುಡಿಯುವ ನೀರಿನ ಬಗ್ಗೆ ಹಾಹಾಕಾರ, ಜಾನುವಾರುಗಳಿಗೆ ಮೇವಿನ ಸಮಸ್ಯೆ, ಇದೆಲ್ಲದಕ್ಕೂ ನಾವು ನೀವು ಕೂಡಿ ಒಟ್ಟಾಗಿ ಸ್ಪಂದಿಸಬೇಕಾಗುತ್ತದೆ ಇದರ ಜೊತೆಗೆ ನಾವು ಸಾಯಂಕಾಲ ಚರ್ಚೆಯನ್ನು ಮಾಡಿ ಒಂದು ಸೂಕ್ತವಾದ ನಿರ್ಣಯಕ್ಕೆ ಬರುವವರು ಇದ್ದೇವೆ ಜೊತೆಗೆ ನಾವು ಈಗ ಒಂದು ನಿರ್ಣಯವನ್ನು ಮಾಡೋಣ ಸರ್ವಾನುಮತದ ನಿರ್ಣಯ ಮಾಡಿ, ಹಿಂದೆಂದೂ ಕಾಣದಿರುವಂಥ ಬರಗಾಲವನ್ನು ಕಾಣುತ್ತಿರುವ ಕಾಲದಲ್ಲಿ, ರೈತರು ಸಂಕಷ್ಟದಲ್ಲಿರುವಂಥ ಇವತ್ತಿನ ಕಾಲದಲ್ಲಿ ರಾಷ್ಟ್ರೀಕೃತ ಬ್ಯಾಂಕಿನಿಂದ ಸಾಲ ಪಡೆದಿರುವುದಕ್ಕೂ ಸಹ 25 ಸಾವಿರದವರೆಗಿನ ಸಾಲಕ್ಕೆ ನಾವೇನು concession ಕೊಡುತ್ತೇವೆ, ಆ ರೀತಿ ಮನ್ನಾ ಆಗಬೇಕು, 4% ಬಡ್ಡಿಗೆ ಸಾಲವನ್ನು ಕೊಡಬೇಕೆಂದು ಹೇಳಿ ಬಿಟ್ಟು, ಒಂದು ಸರ್ವಾನುಮತದ ನಿರ್ಣಯವನ್ನು ನೀವು ಯಾರು ಮೂವ್ ಮಾಡುತ್ತೀರಿ ಮಾಡಿ, ಇದರಲ್ಲಿ ರಾಜಕಾರಣವನ್ನು ತರದೇ ಕಾವೇರಿ ಇಶ್ಯುನಲ್ಲಿ ಯಾವ ರೀತಿ ಒಟ್ಟಾಗಿ ಕುಳಿತು ಚರ್ಚೆ ಮಾಡುತ್ತಿದ್ದೆವು, ಹಾಗೆ ಈ ರೈತ ಎಂದರೆ, ಇವತ್ತು ಸಹಕಾರ ಸಂಘದಿಂದ ಪಡೆದಿರುವಂಥ ರೈತ ಬೇರೆ ಅಲ್ಲ, ರಾಷ್ಟ್ರೀಕೃತ ಬ್ಯಾಂಕಿನಿಂದ ಸಾಲ ಪಡೆದಿರುವ ರೈತ ಬೇರೆ ಅಲ್ಲ ಈ

ದೃಷ್ಟಿಯಿಂದ ಬಹುಶಃ ಕಾಂಗ್ರೆಸ್ ಪಕ್ಷದ ಸದಸ್ಯರ ಮನವೊಲಿಸಿ ಒಂದು ಸರ್ವಾನುಮತದ ನಿರ್ಣಯವನ್ನು ಮಾಡೋಣ ಈ ದೇಶದ ಇತಿಹಾಸದಲ್ಲಿ ಮೊದಲ ಬಾರಿಗೆ ರೈತರ ಪರವಾಗಿ, ಅದು ಕಾವೇರಿ ಇಶ್ಯು ಬರಬಹುದು, ರೈತರ ಸಾಲ ಮತ್ತು ಬಡ್ಡಿ ಮನ್ನಾದ ವಿಷಯದಲ್ಲಿರಬಹುದು, ರಾಷ್ಟ್ರೀಕೃತ ಬ್ಯಾಂಕ್ ಬೇರೆ ಅಲ್ಲ, ಸಹಕಾರಿ ಸಂಘ ಬೇರೆ ಅಲ್ಲ ನಮ್ಮ ಇತಿಮಿತಿಯಲ್ಲಿರುವ ಸಹಕಾರಿ ಬ್ಯಾಂಕಿನಿಂದ concession ಕೊಟ್ಟಿದ್ದೇವೆ ಅದೇ ರೀತಿ concession ಅನ್ನು ರಾಷ್ಟ್ರೀಕೃತ ಬ್ಯಾಂಕಿನಿಂದಲೂ ಸಿಗಬೇಕು ಎನ್ನುವಂಥ ಒಂದು ಸರ್ವಾನುಮತದ ನಿರ್ಣಯ ಮಾಡಿ ನಾವು ಕೇಂದ್ರದ ಹಣಕಾಸು ಸಚಿವರನ್ನು ಭೇಟಿ ಮಾಡೋಣವೆಂದು ಹೇಳಿ, ನಾನು ಇವತ್ತು ನಿಮಗೆ ಏನು ಭರವಸೆಯನ್ನು ಕೊಟ್ಟಿದ್ದೇನೆ, ಇವತ್ತು ಸಾಯಂಕಾಲ ಸಮನ್ವಯ ಸಮಿತಿಯಲ್ಲಿ ಚರ್ಚೆಯನ್ನು ಮಾಡಿ, ನಾನು ವಾಪಸ್ಸು ಬಂದು ನಾನು ಮತ್ತು ಮಾನ್ಯ ಮುಖ್ಯಮಂತ್ರಿಗಳು ಬಹುಶಃ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಯೋಚನೆಯನ್ನು ಮಾಡುತ್ತಿದ್ದೇವೆ ಏನು ಮಾಡಬೇಕು ಎನ್ನುವುದರ ಬಗ್ಗೆ ನಾವು ಚಿಂತನೆಯನ್ನು ಮಾಡುತ್ತೇನೆ ನೀವು ಚರ್ಚೆಯಾದ ಮೇಲೆ 29ನೇ ತಾರೀಖು ನಾನು ಉತ್ತರವನ್ನು ಕೊಡುವಂಥ ಕಾಲದಲ್ಲಿ ಇದಕ್ಕಿಂತ ಹೆಚ್ಚು ಅನುಕೂಲ ಮಾಡಿಕೊಡುವುದಕ್ಕೆ ನಾನು ಸಿದ್ಧನಿದ್ದೇನೆ ನನ್ನ ಆದ್ಯತೆ ರೈತ, ನನ್ನ ಆದ್ಯತೆ ಕೃಷಿ ಕಾರ್ಮಿಕ, ನನ್ನ ಆದ್ಯತೆ ಹಿಂದುಳಿದ ವರ್ಗದವರು, ನನ್ನ ಆದ್ಯತೆ ಅಲ್ಪಸಂಖ್ಯಾತರು, ನನ್ನ ಆದ್ಯತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನ, ಯಾರಿಂದಲೂ ನಾವು ಪಾರವನ್ನು ಕಲಿಯಬೇಕಾಗಿಲ್ಲ ಹೋದ ವರ್ಷದ ಬಡ್ಡಿ ಮನ್ನಾ ಮಾಡಿದ್ದೇವೆ ಈ ವರ್ಷವೂ ರೈತರ ಸಾಲ ಮತ್ತು ಬಡ್ಡಿಯನ್ನು ಮನ್ನಾ ಮಾಡಿದ್ದೇವೆ, ನಾವು ಮಾಡುತ್ತೇವೆ ಕಾಂಗ್ರೆಸ್‌ನವರ ಕೈಯಿಂದ ಏನು ಆಗಲಿಲ್ಲ, ಅದನ್ನು ನಾವು ಮಾಡುತ್ತಿದ್ದೇವೆನ್ನುವ ಮಾತನ್ನು ನಾನು ಹೇಳುತ್ತೇನೆ

(ಗೊಂದಲ)

ಶ್ರೀ ಎನ್ ಧರ್ಮ್‌ಸಿಂಗ್(ವಿರೋಧ ಪಕ್ಷದ ನಾಯಕರು) – ಮಾನ್ಯ ಅಧ್ಯಕ್ಷರೇ ನಾನು ಇವತ್ತು ಮುಂಜಾನೆ ಕೂಡ ಹಿರಿಯ ಸದಸ್ಯರ ಜೊತೆಯಲ್ಲಿ ಸಮಾಲೋಚನೆಯನ್ನು ಮಾಡಿದ್ದೇನೆ ನಾವು ತಮಗೆ ಪ್ರಾರ್ಥನೆಯನ್ನು ಮಾಡಿದ್ದೇವೆ

(ಗೊಂದಲ)

ನಾವು ಹೇಳುತ್ತೇವೆ, ನೀವ್ಯಾರಿ ಹೇಳುವುದು? ಅವರು ಬಹಳ ಚಾಣಾಕ್ಷತನದಿಂದ ಮಾತನಾಡಿದರು

ಶ್ರೀ ಅರಗ ಜ್ಞಾನೇಂದ್ರ – ಸದನದ ಬಾವಿಯ ಧರಣಿಯಲ್ಲಿದ್ದವರು ಹೋಗುತ್ತೇವೆಂದರೂ ಅವರನ್ನು ಬಿಡುತ್ತಿಲ್ಲ

ಶ್ರೀ ಎನ್ ಧರ್ಮ್‌ಸಿಂಗ್ .– ನೀವು ಹಾಗೆ ಅವರಿಗೆ criticise ಮಾಡುವುದಕ್ಕಾಗುವುದಿಲ್ಲ

ಶ್ರೀ ಅರಗ ಜ್ಞಾನೇಂದ್ರ – ಬನ್ನಿ ಹಾಗಾದರೆ ಅವರು ಏಕೆ ಹೇಳಬೇಕು ಸರ್

ಶ್ರೀ ಎನ್ ಧರ್ಮ್‌ಸಿಂಗ್ – ಅವರ ರಾಷ್ಟ್ರೀಕೃತ ಬ್ಯಾಂಕಿನ resolution ಆಗಬೇಕು

ಶ್ರೀ ಬಿ ಎಸ್ ಯಡಿಯೂರಪ್ಪ – ನೀವು ಹೇಳಿದ್ದಿರಲ್ಲಾ ನಿಮ್ಮ ಮಾತಿನಂತೆ ನೀವು ನಡೆದುಕೊಳ್ಳಬೇಕು ನಿರ್ಣಯವನ್ನು ಮಂಡನೆ ಮಾಡಬೇಕು ರಾಷ್ಟ್ರೀಕೃತ ಬ್ಯಾಂಕಿನಿಂದ ಕೂಡ 25 ಸಾವಿರ ಸಾಲ ಮನ್ನಾ ಮಾಡಬೇಕು

ಶ್ರೀ ಎನ್ ಧರ್ಮ್‌ಸಿಂಗ್ – ಮಾನ್ಯ ಯಡಿಯೂರಪ್ಪನವರೇ ನೀವು ಈ ಕಡೆ ನೋಡಿ ಆ ಕಡೆ ಏಕೆ ನೋಡುತ್ತೀರಿ?

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ – ಆ ನಿರ್ಣಯ ಮಂಡನೆ ಮಾಡಬೇಕು, ಸರ್ವಾನುಮತದ ನಿರ್ಣಯ ಪಾಸಾಗಬೇಕು ನೀವು ನಿಜವಾಗಲೂ ರೈತರ ಪರವಾಗಿದ್ದರೆ, ಆ ನಿರ್ಣಯವನ್ನು ಮಂಡನೆ ಮಾಡಬೇಕು

(ಗೊಂದಲ)

ಶ್ರೀ ಎನ್ ಧರ್ಮ್‌ಸಿಂಗ್ – ರಾಷ್ಟ್ರೀಕೃತ ಬ್ಯಾಂಕಿನ ಬಗ್ಗೆ resolution ಆಗಬೇಕು, ಅದರ ಬಗ್ಗೆ ನಮ್ಮದೇನು ಇಲ್ಲ ನಾವು ಈಗಾಗಲೇ ಹೇಳಿದ್ದೇವೆ ನಾವು ಕೇಂದ್ರ ಸರ್ಕಾರಕ್ಕೆ ಹೋಗಬೇಕು, ಬೇರೆದ್ದರ ಬಗ್ಗೆ resolution ಆಗಬೇಕು ಇದಕ್ಕೆ ನೀವು ಒಪ್ಪಬೇಕು conditional ಆಗಿ ಮಾತನಾಡತಕ್ಕಂಥದ್ದು ಅಲ್ಲ ನಾವು ಏನು ಹೇಳಿದ್ದೇವೆ? Already we have taken a decision to participate in the budget discussion ಎಂದು ಹೇಳಿದ್ದೇವೆ, ಬಜೆಟ್ ಮೇಲೆ discussion ಆಗುವುದಕ್ಕೆ ನಾವು ಅಡ್ಡಿ ಆತಂಕಗಳನ್ನು ಮಾಡುವುದಕ್ಕೆ ತಯಾರಿಲ್ಲ ಅದಕ್ಕೆ ನಾವು ನಿಮ್ಮ ಕೊರಡಿಯಲ್ಲಿ ನಿಮಗೆ ಏನು request ಮಾಡಿದೆವು ಎಂದರೆ ತಮ್ಮ ಕೊರಡಿಗೆ ಕರೆಸಿ, ಎಲ್ಲರ ಜೊತೆಯಲ್ಲಿ ಸಮಾಲೋಚನೆಯನ್ನು ಮಾಡಬೇಕು ಇವತ್ತು ಅವರು ಏನು ಹೇಳಿದ್ದಾರೆ ಇವತ್ತು ಸಮನ್ವಯ ಸಮಿತಿ ಸಭೆ ಇದೆ, ಅವರು ಅಲ್ಲಿ ಏನು ಹೇಳಿದರು, ಇದರ ಬಗ್ಗೆ ವಿಷಯದ ಚರ್ಚೆಯಿಲ್ಲವೆಂದು ಹೇಳಿದರು ಅದನ್ನು ನಾವು ಒಪ್ಪುತ್ತೇವೆ, ಇವತ್ತು ನೀವು Co-ordinatioin Committee ಯಲ್ಲಿ ಮಾತನಾಡಿ, ಇಲ್ಲಿ ಎಲ್ಲಾ ವಿರೋಧ ಪಕ್ಷದ ನಾಯಕರು, ಎಲ್ಲರೂ ಕೂಡಿ, ಒಂದೇ ಮನಸ್ಸಿನಿಂದ, ಒಂದೇ ಧ್ವನಿಯಿಂದ, ರಾಜ್ಯದ ರೈತರ ಬಗ್ಗೆ ಒಳ್ಳೆಯದು ಆಗಬೇಕೆನ್ನುವ ರೀತಿಯಲ್ಲಿ ಏನು ಪ್ರಸ್ತಾಪ ಮಾಡಿದ್ದೇವೆ, ಅದರ ಬಗ್ಗೆ ವಿಚಾರ ಮಾಡಿ, ನೀವು ನಾಳೆ ಹೇಳುತ್ತೇವೆಂದು ಹೇಳಿದರೆ, ನಾವು ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸುತ್ತೇವೆನ್ನುವ ಮಾತನ್ನು ಹೇಳಿರುತ್ತೇವೆ ಇವತ್ತು ರಾಷ್ಟ್ರೀಕೃತ ಬ್ಯಾಂಕ್, ಇದು ನನ್ನ ಬಜೆಟ್, ಬಜೆಟ್‌ನಲ್ಲಿ, ಏನಿದೆ ಎನ್ನುವುದನ್ನು ಬಜೆಟ್ ಮೇಲೆ ಚರ್ಚೆಯಾದ ಮೇಲೆ, 29 ಮತ್ತು 30ನೇ ತಾರೀಖಿನಂದು ನಿಮ್ಮ ಉತ್ತರದಲ್ಲಿ ಹೇಳಿ ಇವತ್ತು ನೀವು ಅದರಲ್ಲಿ ಚಾಣಾಕ್ಷತನದಿಂದ, ಜಾಣತನದಿಂದ ರಾಷ್ಟ್ರೀಕೃತ ಬ್ಯಾಂಕ್ ಬಗ್ಗೆ ಹೇಳುತ್ತಿದ್ದೀರಿ, ಅದು ಹೇಗೆ? ಇವತ್ತು ನಾವು ಬರುತ್ತೇವೆ, ಕೇಂದ್ರದಲ್ಲಿ ನಮ್ಮ ಸರ್ಕಾರ ಇದ್ದರೂ ಕೂಡ ನಿಮಗೆ ಆಶ್ವಾಸನೆಯನ್ನು ಕೊಡುತ್ತೇವೆ ನೀವು ಹೋಗತಕ್ಕಂಥ ರೀತಿಗೆ ನಾವು ಕೂಡ ಬಂದು ಸಹಾಯವನ್ನು ಮಾಡುತ್ತೇವೆ ಆದರೆ ಇವತ್ತಿನ ದಿವಸ ಇದರ ಬಗ್ಗೆ ತಾವು ನೇರವಾದ ಉತ್ತರವನ್ನು ಕೊಡಿಸಬೇಕೆಂದು ತಮ್ಮ ಮುಖಾಂತರ ಕೇಳುತ್ತೇನೆ

ಶ್ರೀ ಮಲ್ಲಿಕಾರ್ಜುನ ಖರ್ಗೆ .– ತಮ್ಮ ಕೊರಡಿಯಲ್ಲಿ ಮಾತುಕತೆ ನಡೆಸಿದ್ದು ಇಷ್ಟೇ ಏನು ನಮ್ಮ demand ಇದೆ, ಸರ್ವರಿಗೂ 25 ಸಾವಿರ ರೂಪಾಯಿ ಸಾಲವನ್ನು ಮನ್ನಾ ಮಾಡುವಂಥದ್ದು ಮತ್ತು ಬಡ್ಡಿ ಮನ್ನಾ ಮಾಡುವಂಥದ್ದು, ಎಲ್ಲರಿಗೂ applicable ಆಗಬೇಕು ಇದರ ಬಗ್ಗೆ ನೀವು ಘೋಷಣೆಯನ್ನು ಮಾಡಬೇಕೆಂದು ಆಗಿರುತ್ತದೆ ಅವರು ಏನು ಹೇಳಿದರು, Co-ordination Committee meeting ಇವತ್ತು ಸಾಯಂಕಾಲ ಇದೆ, ಆ Co-ordination Committee meeting ನಲ್ಲಿ ನಾವು ರೈತರ ಪರವಾಗಿ ಚರ್ಚೆ ಮಾಡಿ ಒಂದು ನಿರ್ಣಯವನ್ನು ತೆಗೆದುಕೊಂಡು ನಾಳೆ ಇಲ್ಲಿ ಬಂದು statement ಮಾಡುತ್ತೇನೆಂದು ಹೇಳಿದ್ದರು ಇದನ್ನೇ ಅಧ್ಯಕ್ಷರ ಮುಂದೆ ಮಾತನಾಡಿದ್ದು, ಇದನ್ನೆ ನೀವು ಹೇಳಿದ್ದು,

ಶ್ರೀ ಬಿ ಎಸ್ ಯಡಿಯೂರಪ್ಪ :– ನಾವು ಏನು ನಿರ್ಣಯ ಮಾಡಬೇಕು?

ಶ್ರೀ ಮಲ್ಲಿಕಾರ್ಜುನ ಖರ್ಗೆ – ಇದು ಇಲ್ಲವೆಂದರೆ,

ಶ್ರೀ ಬಿ ಎಸ್ ಯಡಿಯೂರಪ್ಪ – ಇಲ್ಲ, ಸರ್ ನಾನು ಆ ರೀತಿ ಮಾತನಾಡಿಲ್ಲ ನಾನು ಹೇಳಿಲ್ಲ, record ಗೆ ಬೇರೆ ರೀತಿ ಹೋಗುವುದು ಬೇಡ ನಿರ್ಧಾರ ಏನು ಮಾಡಬೇಕು, ಅದು ನಮಗೆ ಬಿಟ್ಟಿದ್ದು ಸಮನ್ವಯ ಸಮಿತಿ ಸಭೆಯಲ್ಲಿ ನಿರ್ಧಾರ ಮಾಡುತ್ತೇವೆ ನಾವು 29ನೇ ತಾರೀಖಿಗೆ ಉತ್ತರವನ್ನು ಕೊಡುತ್ತೇವೆ ನಾಳೆ ಬಂದು ಏನಾಯಿತು ಎಂದು ಉತ್ತರವನ್ನು ಮಾಡುತ್ತೇನೆ ಆದರೆ ತೀರ್ಮಾನ ಬಂದು 29ನೇ ತಾರೀಖಿನಂದು ಕೊಡುತ್ತೇವೆ

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ :– ಅದಕ್ಕೆ ಬೇರೆ ಯಾರೂ ಕೂಡ ಸಾಕ್ಷಿ ಬೇಡ ನಮಗೆ ನಾವು party basis ಮೇಲೆ ಹೇಳುತ್ತಿರುವುದು ಇದಕ್ಕೆ ತಾವೇ ಸಾಕ್ಷಿಯಾಗಿದ್ದೀರಿ ಅವರು ನಾಳೇ ಹೇಳುತ್ತೇನೆಂದು ಹೇಳಿದರು ಸರಿ ಎಂದು ಹೇಳಿ ಅದನ್ನು ನಾವು ಒಪ್ಪಿಕೊಂಡು, ಆದರೆ ಇಲ್ಲಿಗೆ ಬಂದು statement ಮಾಡುವಾಗ ನಾವೆಲ್ಲಾ ಏನು ರೈತರ ಪರ, ನಾವು ಇರುವುದೇ ಅದಕ್ಕೆ ಇವೆಲ್ಲವನ್ನು, ಅವರು ಹೇಳಿದರು, ಅದನ್ನು ಹೇಳಿಕೊಳ್ಳಲಿ ಏಕೆಂದರೆ, ಈ ದೇಶದಲ್ಲಿ, ಈ

ರಾಜ್ಯದಲ್ಲಿ ರೈತರ ಪರವಾಗಿಯೇ ನಾವೆಲ್ಲರೂ ಆರಿಸಿ ಬಂದಿರುರವವರು, ಮತ್ತು ನಾವು ಸಹ ರೈತರ ಪರವಾಗಿದ್ದೇ ಕಳೆದ 50–60 ವರ್ಷಗಳಲ್ಲಿ ಈ ಪ್ರಜಾಪ್ರಭುತ್ವದಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಈ ದೇಶದಲ್ಲಿ ಮಾಡಿದ್ದೇವೆ ಅದು ನೀರಾವರಿ ಇರಬಹುದು, ಕೃಷಿ ಇರಬಹುದು, ಬಡ್ಡಿ ಮನ್ನಾ ಮಾಡತಕ್ಕಂತಹದ್ದು ಇರಬಹುದು, ವಿದ್ಯುತ್ಶಕ್ತಿ ಉತ್ಪಾದನೆಯ ಮೇಲೆ concession ಕೊಡುವುದು ಇರಬಹುದು, ಪಂಪ್‌ಸೆಟ್‌ಗೆ 500 ರೂಪಾಯಿ ಸಾಲ cover ಮಾಡಿದ್ದು ಈ ಸದನದಲ್ಲಿ ಇದೆ ಮಾಫಿ ಮಾಡಿದ್ದು ಕೂಡ ಇದೆ ಭೂಸುಧಾರಣೆ ಕಾನೂನು ಮಾಡಿರುವುದು ಇದೆ, ಇಂತಹವೆಲ್ಲವನ್ನು ಕೂಡ ರೈತರ ಹಿತದೃಷ್ಟಿಯಿಂದ ಎಲ್ಲರೂ ಕೂಡ ಮಾಡಿಕೊಂಡು ಬಂದಿದ್ದಾರೆ ಇದೇನು ಹೊಸದೇನು ಅಲ್ಲ, ಹಿಂದೆ 1500 ಕೋಟಿ ರೂಪಾಯಿಗಳು ಬಡ್ಡಿ ಮನ್ನಾ ಮಾಡಿರುವುದು, ಪಂಪ್‌ಸೆಟ್ ಮೇಲೆ ಹಿಂದಕ್ಕೆ arrears, ಮತ್ತು free connection ಇವೆಲ್ಲವನ್ನು ರೈತರ ಪರವಾಗಿಯೇ ಮಾಡಿದ್ದೇವೆ ಈಗ ತಾವು ಇದು ನನ್ನದೇ ಆದ ಒಂದು ಕಾರ್ಯಕ್ರಮ ಎಂದು ಹೇಳಿ ಮಾಡಿದ್ದೀರಿ ಅದನ್ನು ನಾವು ಸ್ವಾಗತ ಮಾಡಿದ್ದೇವೆ ನಾವು ಇದನ್ನು ಎಲ್ಲಾ ರೈತರಿಗೂ ಸಹಾ ಅನ್ವಯಿಸಬೇಕೆಂದು ಮತ್ತು ಕೊಡತಕ್ಕಂಥದು ಸಹಾ ಎಲ್ಲಾ ರೈತರಿಗೂ ತಲುಪಬೇಕಾಗಿದೆ ಕೇವಲ ಫೆಬ್ರವರಿಯಿಂದು ನಾನು ಕೊಡುತ್ತೇನೆಂದು, ಮತ್ತು ಕೆಲವು ಜನರಿಗೆ ಮಾತ್ರ ಕೊಡುತ್ತೇನೆಂದು ಹೇಳುವುದು ಬೇಡ ಸಾರಾಸಗಟಾಗಿ ಎಲ್ಲಾ ರೈತರಿಗೆ ಸಹಾಯವಾಗಬೇಕೆಂದು ನಾವು ಕೇಳಿದ್ದೇವೆ ಅದನ್ನು ತಾವು ಇವತ್ತು ಸಾಯಂಕಾಲ ಗಣನೆಗೆ ತೆಗೆದುಕೊಂಡು ನಾಳೆ ಸ್ಟೇಟ್‌ಮೆಂಟ್ ಮಾಡುತ್ತೇವೆಂದು ಹೇಳಿದ್ದೀರಿ ಅದನ್ನು ಬಿಟ್ಟು ರಾಷ್ಟ್ರೀಕೃತ ಬ್ಯಾಂಕ್ ಎಂದು ಹೇಳಿದ್ದೀರಿ ಮತ್ತೆ ಇದಕ್ಕೆ ಸಂಬಂಧಪಟ್ಟಂತೆ ನೀವು ನಿರ್ಣಯ ಮಾಡಿಸಿ ಎಂದು ಹೇಳುತ್ತಿದ್ದೀರಿ ಕೋ–ಆಪರೇಟಿವ್ ಬ್ಯಾಂಕ್‌ಗೆ ಯಾವ ರೀತಿಯಾಗಿ 25 ಸಾವಿರ ಕನ್ಸಿಷನ್ ಕೊಟ್ಟು ಮನ್ನಾ ಮಾಡುತ್ತಿದ್ದೀರಿ, ಅದೇ ರೀತಿಯಾಗಿ ನೀವು ರಾಷ್ಟ್ರೀಕೃತ ಬ್ಯಾಂಕ್‌ಗಳಿಗೂ ಸಹಾ 25 ಸಾವಿರ ಹಣವನ್ನು ತುಂಬಿ ಎಂದು ಹೇಳುತ್ತಿದ್ದೇವೆ ಇಡೀ ರಾಜ್ಯಕ್ಕೆ, ಎಲ್ಲರಿಗೂ ಅನ್ವಯಿಸುವಂಥ ಏನಾದರೂ ಕಾರ್ಯಕ್ರಮಗಳು ಇದ್ದರೆ ಅದನ್ನು ತೆಗೆದುಕೊಂಡು ಬನ್ನಿ ಅದರ ಬಗ್ಗೆ ಚಿಂತನೆ ಮಾಡಿ ಕೇಂದ್ರ ಸರ್ಕಾರವನ್ನು ಕೇಳಿಕೊಳ್ಳೋಣ

ಶ್ರೀ ಬಿ ಎಸ್ ಯಡಿಯೂರಪ್ಪ – ರೈತರ ಮೂಗಿಗೆ ತುಪ್ಪ ಹಚ್ಚುವಂಥದರ ಬಗ್ಗೆ ಸಲಹೆ ಕೊಡತಕ್ಕಂಥದು ಬಹಳ ಸುಲಭ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಮಾತನಾಡಬೇಕು ನೀವೆಲ್ಲರೂ ಸರ್ಕಾರವನ್ನು ನಡೆಸಿದವರು, ಜವಾಬ್ದಾರಿಯಿಲ್ಲದೇ ಮಾತನಾಡಿದರೆ ಹೇಗೆ? ರೈತರ ಮೂಗಿಗೆ ತುಪ್ಪ ಹಚ್ಚುವಂಥದು ಮತ್ತು ನಾವು ರೈತರ ಪರವಾಗಿದ್ದೇವೆಂದು ಹೇಳುವ ನೀವು ರೈತರ ಪರವಾಗಿ ಏನು ಮಾಡಿದ್ದೀರಾ? ಇಂಥ ಪರಿಸ್ಥಿತಿಯಲ್ಲಿ ಬರಗಾಲಕ್ಕೆ ತುತ್ತಾದಂಥ ರೈತರಿಗೆ ತಾವು ಏನು ಮಾಡಿದ್ದೀರಿ? ಈಗೇನು ಮೊದಲ ಬಾರಿಗೆ ಬರಗಾಲ ಮತ್ತು ಅತಿವೃಷ್ಟಿ ಬಂದಿದೆಯೇ? ನೀವು ರೈತರಿಗೆ ಏನು ಮಾಡಿದ್ದೀರೆಂಬುದನ್ನು ಹೇಳಿ ನೋಡೋಣ ಇವೆಲ್ಲದರ ಬಗ್ಗೆ ಕೂಡ ಚರ್ಚೆಯಾಗಬೇಕಾಗುತ್ತದೆ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿಯೂ ಕೂಡ 4% ಬಡ್ಡಿ ದರದಲ್ಲಿ ಸಾಲ ಕೊಡತಕ್ಕಂಥ ವ್ಯವಸ್ಥೆ ಹಾಗೂ 25 ಸಾವಿರ ರೂಪಾಯಿಗಳ ಸಾಲದ ಮೊತ್ತದಲ್ಲಿ ಕೂಡ ಮನ್ನಾ ಆಗಬೇಕು ನೀವು ರೈತರ ಪರವಾಗಿದ್ದರೆ ಈ ಒಂದು ಕೆಲಸ ಈಗಲೇ ಆಗಬೇಕು ಆದ್ದರಿಂದ ಇದರ ಬಗ್ಗೆ ಚರ್ಚೆ ಮಾಡೋಣ ತಾವೆಲ್ಲರೂ ತಮ್ಮ ಸ್ಥಾನಕ್ಕೆ ಬರಬೇಕು

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ – ತಾವು ರೈತರ ಪರ ಎಂದು ಹೇಳುತ್ತಿರುವ ನೀವು ಮೊದಲು ಅದನ್ನು ಮಾಡಿ

(ಗೊಂದಲ)

ಶ್ರೀ ಸಿದ್ದು ಸವದಿ – ಕೇಂದ್ರದಲ್ಲಿ ನಿಮ್ಮ ಪಕ್ಷದ ಸರ್ಕಾರ ಇದೆ ಆದ್ದರಿಂದ, ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿಯೂ ಕೂಡ ಇದನ್ನು ತಾವು ಮಾಡಿಸಿ ಇವತ್ತಿನ ದಿವಸ ನಾವೆಲ್ಲರೂ ಕೂಡ ರೈತರ ಪರವಾಗಿದ್ದೇವೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ – ಏಕಾಏಕಿ ತಪ್ಪು ದಾರಿಗೆ ಬಂದು ಒಂದು ನಿರ್ಣಯವನ್ನು ಏಕೆ ಮಾಡಬಾರದೆಂದು ಕೇಳುತ್ತಿದ್ದೀರಿ ಈ ರೀತಿಯಾಗಿ ರಾಜಕೀಯ ಮಾಡುವುದು ಬೇಡ ಇವತ್ತಿನ ದಿವಸ ಬಡವರು ಮತ್ತು ರೈತರಿಗೋಸ್ಕರ ನಾವೆಲ್ಲರೂ ಏನೊಂದು ಹೆಜ್ಜೆಯನ್ನು ಹಾಕಬೇಕಾಗಿದೆಯೋ ಅದನ್ನು ಹಾಕಿ ಆದರೆ, ಇಲ್ಲದೇ ಇರತಕ್ಕಂಥದನ್ನು ತಂದು ಇದನ್ನು ಮಾಡಿ ಎಂದರೆ ಏನರ್ಥ?

ಅಧ್ಯಕ್ಷರು – ನೀವೆಲ್ಲರೂ ಕುಳಿತುಕೊಳ್ಳಿ ಸರ್ಕಾರದ ಪರವಾಗಿ ಸಂಸದೀಯ ವ್ಯವಹಾರಗಳ ಸಚಿವರು ಉತ್ತರವನ್ನು ಕೊಡುವಾಗ ತಾವುಗಳೆಲ್ಲರೂ ಏತಕ್ಕಾಗಿ ನಿಂತುಕೊಂಡಿದ್ದೀರಿ?

ಶ್ರೀ ಎಂ ಪಿ ಪ್ರಕಾಶ್ (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) – ಸನ್ಮಾನ್ಯ ಅಧ್ಯಕ್ಷರೇ ನಾವೆಲ್ಲರೂ ಕೂಡ ರೈತರ ಪರವಾಗಿ ಕಳಕಳಿಯನ್ನು ಇರತಕ್ಕಂತಹವರು, ಮಾನ್ಯ ಉಪಮುಖ್ಯಮಂತ್ರಿಗಳು ಅಲ್ಲಿ ಆದ ನಿರ್ಧಾರಗಳ ಬಗ್ಗೆ ಮಾತನಾಡುವಾಗ ಇದು ಒಂದು ಸಲಹೆಯನ್ನು ನಾವು ಅನೌಪಚಾರಿಕವಾಗಿ ಮಾತನಾಡುತ್ತಿದ್ದಂತಹ ಸಂದರ್ಭದಲ್ಲಿ ಒಂದು ಗೊತ್ತುವಳಿಯನ್ನು ಮಾಡುವುದಾಗಿದ್ದರೆ, ಈ ನಮ್ಮ ವಾಣಿಜ್ಯ ಬ್ಯಾಂಕುಗಳಲ್ಲಿರತಕ್ಕಂತಹ 25 ಸಾವಿರ ಸಾಲ ಮನ್ನಾ ಆಗಲಿ ಎನ್ನುವ ಸದುದ್ದೇಶದಿಂದ ಒತ್ತಡವನ್ನು ಕೇಂದ್ರ ಸರ್ಕಾರದ ಮೇಲೆ ತರಲಿ ಎನ್ನುವಂತಹದ್ದೇ ವಿನಃ ಬೇರೆ ಯಾವುದೇ ಉದ್ದೇಶವಿಲ್ಲ ಇಲ್ಲಿ ಚರ್ಚೆಯಲ್ಲಿ ಭಾಗವಹಿಸಿ ಬಜೆಟ್‌ನ ವಿಷಯದಲ್ಲಿ ಕೂಲಂಕುಷವಾಗಿ ಚರ್ಚೆಯಾಗಬೇಕಾಗಿರುವುದು, ಈ ರಾಜ್ಯದ ಜನತೆಗೆ ಆ ವಿವರಗಳು ಗೊತ್ತಾಗಬೇಕಾಗಿರುವುದು ಅತ್ಯಂತ ಅಗತ್ಯವಾಗಿರುವುದರಿಂದ ಈ ದಿವಸದ ಸಮನ್ವಯ ಸಮಿತಿಯಲ್ಲಿ ಈ ವಿಚಾರಗಳ ಬಗ್ಗೆ ನಾವು ಚರ್ಚೆ ಮಾಡಿ ಒಂದು ಅಭಿಪ್ರಾಯಕ್ಕೆ ಬರುತ್ತೇವೆ ಅಭಿಪ್ರಾಯದಲ್ಲಿ ಬಂದಿರುವಂತಹ ತೀರ್ಮಾನಗಳು ಏನಿವೆ, ಅದನ್ನು ನಾನು 29ನೇ ತಾರೀಖು ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಕೊಡುತ್ತೇನೆಂದು ಹೇಳಿದ್ದಾರೆ ದಯವಿಟ್ಟು ಅವರು ಹಾಗೇ ಮಾತನಾಡಿದ ಹಿನ್ನೆಲೆಯ spirit ನ್ನು ತಾವು ಅರ್ಥಮಾಡಿಕೊಂಡು ನಾನು ಇಲ್ಲಿರುವಂತಹ ನಮ್ಮ ಹಿರಿಯ ಸದಸ್ಯರುಗಳಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ ತಾವು ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ, ಚರ್ಚೆಯನ್ನು ಪ್ರಾರಂಭ ಮಾಡೋಣ ಇದರ ಬಗ್ಗೆ ದಯವಿಟ್ಟು ಸಹಕರಿಸಿ

ಶ್ರೀ ಅರಗ ಜ್ಞಾನೇಂದ್ರ .– ಹೆಗ್ಡೆಯವರೇ ದಯವಿಟ್ಟು ಅವರನ್ನು ಕೇಳಬೇಡಿ ದಯವಿಟ್ಟು ನಿಮ್ಮ ನಿಲುವನ್ನು ನೀವು ಇಟ್ಟುಕೊಂಡರೆ ಬಹಳ ಒಳ್ಳೆಯದಾಗುತ್ತದೆ ಅವರನ್ನು ಕೇಳಿದರೆ ರಾಜ್ಯಪಾಲರ ಭಾಷಣವನ್ನೂ ಕೂಡ ಕಾಂಗ್ರೆಸ್‌ನವರು

ಹೀಗೆ ಮಾಡಿದರು ಈ ಐದು ಜನರನ್ನು ಮುಂದಕ್ಕೆ ತಂದು ನಿಮ್ಮನ್ನು ಒಡೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ

ಶ್ರೀ ಎನ್ ಧರ್ಮಸಿಂಗ್ – ಮಾನ್ಯ ಅರಗ ಜ್ಞಾನೇಂದ್ರರವರೇ ಈ ರೀತಿ ಮಾತನಾಡುವುದಕ್ಕೆ ತಮಗೆ ಏನಾಗಿದೆ?

ಶ್ರೀ ಅರಗ ಜ್ಞಾನೇಂದ್ರ – ನಿಮಗೆ ಹೌಸ್ ನಡೆಸುವುದಕ್ಕೆ ಇಷ್ಟವಿಲ್ಲ ಈಗ ಚರ್ಚೆಯಾಗಬೇಕಾಗಿದೆ ಈ ಬಜೆಟ್ ಬಡವರ ಪರವಾಗಿದೆ ಇದನ್ನು ಅವರು ಹೈಲೈಟ್ ಮಾಡಬೇಕು ಅವರಲ್ಲಿ ಬಹಳ ಸೀನಿಯರ್‌ಗಳು ಮತ್ತು ಸರ್ಕಾರ ನಡೆಸಿದಂಥವರು ಇದ್ದಾರೆ ಮತ್ತೆ ಅವರು ಚೆನ್ನಾಗಿ ಭಾಷಣ ಮಾಡುತ್ತಾ ಹೈಲೈಟ್ ಮಾಡುತ್ತಾರೆಂದು ನಾವು ಇಲ್ಲಿ ಕುಳಿತುಕೊಂಡರೆ ಈ ಸದನವನ್ನು ಇದೇ ರೀತಿಯಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ

ಶ್ರೀ ಎನ್ ಧರ್ಮಸಿಂಗ್ – ನಮಗೆ ಬಜೆಟ್ ಮೇಲೆ ಚರ್ಚೆಯಾಗಬೇಕಾಗಿದೆ ಈಗಾಗಲೇ ಎಂ ಪಿ ಪ್ರಕಾಶ್‌ರವರು ಹೇಳಿದ ಹಾಗೆ, ಅಧ್ಯಕ್ಷರ ಕೊರಡಿಯಲ್ಲಿ ಏನು ಚರ್ಚೆಯಾಗಿದೆಯೋ ಅದಕ್ಕೆ ಸೀಮಿತವಾಗಿ ಹೇಳಲಾರದೇ, ಮಾನ್ಯ ಉಪ ಮುಖ್ಯಮಂತ್ರಿಗಳು ಏನೇನೋ ಹೇಳಿದ್ದಾರೆ ಇವತ್ತಿನ ದಿವಸ ವಿರೋಧಪಕ್ಷದಲ್ಲಿರುವ ನಮಗೂ ಕೂಡ ಜವಾಬ್ದಾರಿ ಇರುತ್ತದೆ 16ನೇ ತಾರೀಖಿನ ದಿವಸ ಮಂಡಿಸಿದ ಬಜೆಟ್ ಮೇಲೆ ನಾವೂ ಕೂಡ ವಿಚಾರಗಳನ್ನು ವ್ಯಕ್ತ ಮಾಡಬೇಕಾಗಿದೆ ಬಜೆಟ್‌ನ ಮೇಲೆ ಚರ್ಚೆ ಆಗಿಲ್ಲ ಎನ್ನುವ ಅಪವಾದವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಇವತ್ತು ಸ್ಪಷ್ಟವಾದ ಉತ್ತರ ಮಾನ್ಯ ಉಪ ಮುಖ್ಯಮಂತ್ರಿಗಳಿಂದ ಬಂದಿಲ್ಲ ಆದರೂ ಕೂಡ ಮಾನ್ಯ ಎಂ ಪಿ ಪ್ರಕಾಶ್‌ರವರು ಸಂಸದೀಯ ವ್ಯವಹಾರಗಳ ಇಲಾಖೆ ಮಂತ್ರಿಗಳಾಗಿದ್ದು, ಇವತ್ತಿನ ಸಮನ್ವಯ ಸಭೆಯಲ್ಲಿ ಚರ್ಚೆ ಮಾಡಿ ಒಂದು ತೀರ್ಮಾನ ಮಾಡುತ್ತೇವೆಂದು ಮತ್ತು 29ನೇ ತಾರೀಖಿನ ದಿವಸ, ನಾಳೆಯೇ ಇದರ ಬಗ್ಗೆ ಹೇಳುತ್ತೇನೆಂದು ಹೇಳಿದ್ದಾರೆ ಯಾವಾಗಲೂ ಕೂಡ ಪ್ರಜಾಪ್ರಭುತ್ವದಲ್ಲಿ ವಿಶ್ವಾಸದ ಮೂಲಕ ನಡೆದುಕೊಂಡು ಮುಂದೆ ಸಾಗಬೇಕಾಗುತ್ತದೆ ಅದಕ್ಕಾಗಿ ನಮ್ಮ ರಾಜ್ಯದ ವಿರೋಧ ಪಕ್ಷದ ನಾಯಕರು

ಇದ್ದಾರೆ ಅವರುಗಳು ತಮ್ಮ ಸ್ಥಾನಕ್ಕೆ ಬರಲಿ ತಾವು ಈಗ ಏನು ಮುಂಗಡ ಪತ್ರವನ್ನು ಮಂಡಿಸಿದ್ದೀರಿ ಅದರ ಬಗ್ಗೆ ಚರ್ಚೆಯಾಗಲೆಂದು ನಾನು ಕೇಳಿಕೊಳ್ಳುತ್ತೇನೆ

ಅಧ್ಯಕ್ಷರು – ತಾವೆಲ್ಲರೂ ತಮ್ಮಗಳ ಸ್ಥಾನಕ್ಕೆ ಹೋಗಿ

(ಈ ಹಂತದಲ್ಲಿ ಶ್ರೀ ಜೆ ಸಿ ಮಾಧುಸ್ವಾಮಿ, ಶ್ರೀ ವಾಟಾಳ್ ನಾಗರಾಜ್, ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಹಾಗೂ ಶ್ರೀ ಜಿ ವಿ ಶ್ರೀರಾಮರೆಡ್ಡಿಯವರು ತಮ್ಮ ಸ್ಥಾನಗಳಿಗೆ ವಾಪಸ್ಸು ಬಂದರು)

ಶ್ರೀ ಎನ್ ಧರ್ಮಸಿಂಗ್ – ನಾಳೆ ಇದರ ಬಗ್ಗೆ ಉತ್ತರ ಕೊಡಲೇಬೇಕು

ಶ್ರೀ ಸಿದ್ಧರಾಮಯ್ಯ – ನಾಳೆ ಎಂದು ಅಲ್ಲಿ ತೀರ್ಮಾನವಾಗಿದೆ ನಾನು ಸಭೆಯ ಕೊನೆಯಲ್ಲಿ ಬಂದು ಕೇಳಿದಾಗ ಇವತ್ತು ಸಮನ್ವಯ ಸಮಿತಿ ಸಭೆಯಲ್ಲಿ ಕೇಳಿ ನಾಳೆ ಹೇಳುತ್ತೇನೆಂದು ಹೇಳಿರುತ್ತೀರಿ ಆದ್ದರಿಂದ, 29ನೇ ತಾರೀಖಿನ ದಿವಸ ಉತ್ತರ ಕೊಡಿಸುತ್ತೇನೆಂದು ಹೇಳುವುದು ಸರಿಯಲ್ಲ ಅಲ್ಲಿ ಈ ರೀತಿಯಾಗಿ ತೀರ್ಮಾನ ಮಾಡಿ ಇಲ್ಲಿ ಬಂದು ತಿರುಚಿ ಮಾತನಾಡಿದರೆ ಹೇಗೆ?

ಶ್ರೀ ಎಂ ಪಿ ಪ್ರಕಾಶ್ – ಅದಕ್ಕೆ ಒಂದು ಸೂಕ್ಷ್ಮತೆ ಇದೆ ಬೇರೆ ವಿಷಯ ಖಾಸಗಿಯಾಗಿದ್ದರೆ ಅದನ್ನು ನಿಮಗೆ ಹೇಳುತ್ತೇವೆ ಆ ತರಹದ ಮೆಸೇಜ್ ಅನ್ನು ನಾಳೆ ಕೊಡುವುದಕ್ಕೆ ಆಗುವುದಿಲ್ಲ ಅದನ್ನು 29ನೇ ತಾರೀಖಿನ ದಿವಸ ಉತ್ತರ ಕೊಡುವಂಥ ಸಂದರ್ಭದಲ್ಲಿ ಹೇಳುತ್ತಾರೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ – ನಮ್ಮ ಎದುರಿನಲ್ಲಿ ಈ ರೀತಿಯಾಗಿ ಒಪ್ಪಿಕೊಂಡು ಮತ್ತೆ ಈ ರೀತಿಯಾಗಿ ಹೇಳತಕ್ಕಂಥದು ಸರಿಯಲ್ಲ ಅಂದರೆ ಇದರ ಅರ್ಥ ಏನೆಂದರೆ, ಇದನ್ನು ಅವರು ಪ್ರಕಟಣೆ ಮಾಡಬಾರದೆಂದು ಮತ್ತು ಇದರ ಕ್ರೆಡಿಟ್ ಮಾನ್ಯ ಯಡಿಯೂರಪ್ಪನವರಿಗೆ ಬರಬಾರದೆಂದು ಜೆಡಿಎಸ್‌ನವರ ಕುತಂತ್ರವೇನೋ ಎಂಬುದು ನನಗೆ ಅರ್ಥವಾಗುತ್ತಿಲ್ಲ

ಶ್ರೀ ಎಂ ಪಿ ಪ್ರಕಾಶ್ – ಯಾವುದೋ ಹಿನ್ನಲೆಯನ್ನು ಹೇಳತಕ್ಕಂಥದಲ್ಲ

(ಗೊಂದಲ)

ಶ್ರೀ ಸಿದ್ಧರಾಮಯ್ಯ – ಈಗಾಗಲೇ ಸಾಲ ಮನ್ನಾ ಮಾಡುತ್ತೇವೆಂದು ಹೇಳಿದ ಮೇಲೆ ರೈತರು ತಮ್ಮ ಹತ್ತಿರ ಇರತಕ್ಕಂಥ ಹಣವನ್ನು ಖರ್ಚು ಮಾಡಿದ್ದಾರೆ ಅಂದರೆ, ಇದಕ್ಕಾಗಿ ಕಟ್ಟಬೇಕೆಂದು ಇಟ್ಟುಕೊಂಡಿರತಕ್ಕಂಥ ಹಣವನ್ನು ಖರ್ಚು ಮಾಡಿದ್ದಾರೆ ಇದರ ಬಗ್ಗೆ ಇವತ್ತು ಅಥವಾ ನಾಳೆ ಹೇಳಿದರಷ್ಟೆ Date extend ಮಾಡದೇ ಹೋದರೆ ರೈತರಿಗೆ ಏನು ಸಹಾಯವಾಗುವುದಿಲ್ಲ ಏನು ಮಾಡುತ್ತೇವೆಂಬುದನ್ನು ನಾಳೆ ದಿವಸ ಹೇಳಿಬಿಡಲಿ ಮಾನ್ಯ ಅಧ್ಯಕ್ಷರ ಎದುರುಗಡೆ ಒಪ್ಪಿಕೊಂಡಿದ್ದಾರೆ ಆದ್ದರಿಂದ ಅವತ್ತು ಹೇಳಿದರು ಒಂದೇ ಇವತ್ತು ಹೇಳಿದರು ಒಂದೇ It makes no difference Mr Prakash

ಶ್ರೀ ಎಂ ಪಿ ಪ್ರಕಾಶ್ .– 29ನೇ ತಾರೀಖಿನ ದಿವಸ ಹೇಳುವುದಕ್ಕೆ ತಾವು ನಮ್ಮ ಜೊತೆಯಲ್ಲಿ ಸಹಕರಿಸಿ

ಶ್ರೀ ಸಿದ್ಧರಾಮಯ್ಯ – ಇದನ್ನು ನೀವು ಹೇಳಿರುವುದು, ನಾವೇನು ಇದರ ಬಗ್ಗೆ ಹೇಳಿಲ್ಲ ನೀವು ಹೇಳಿದರೆಂದು ನಾನು ಹೇಳುತ್ತಿಲ್ಲ ಮಾನ್ಯ ಯಡಿಯೂರಪ್ಪನವರು ಹೇಳಿದರೆಂದು ಹೇಳುತ್ತಿದ್ದೇನೆ

ಅಧ್ಯಕ್ಷರು ·– ಮಾನ್ಯ ಸಿದ್ಧರಾಮಯ್ಯನವರೆ, ಆಯಿತು ಇಲ್ಲಿಗೆ ಬಿಡಿ

ಶ್ರೀ ಸಿದ್ಧರಾಮಯ್ಯ – ನಿಮ್ಮ ಎದುರುಗಡೆ ನಡೆದಿರುವಂಥ ವಿಚಾರ ಇದು ಆದ್ದರಿಂದ ಆಯಿತು ಬಿಡಿ ಎಂದರೆ ಹೇಗೆ? ನಿಮ್ಮ ಎದುರುಗಡೆ ನಡೆದಿದೆಯಲ್ಲ

ಅಧ್ಯಕ್ಷರು – ಒಟ್ಟಾರೆ ಬಜೆಟ್ ಮೇಲೆ ಚರ್ಚೆಯಾಗಬೇಕು ಭಿನ್ನಾಭಿಪ್ರಾಯಗಳನ್ನು ಬಗೆಹರಿಸಬೇಕೆಂಬುದು ನಮ್ಮ ಉದ್ದೇಶ ಸಮನ್ವಯ ಸಮಿತಿಯಲ್ಲಿ ಚರ್ಚೆ ಮಾಡಿ ನಾಳೆ ದಿವಸ ಪೂರ್ಣವಾದ ಮಾಹಿತಿಯನ್ನು ಕೊಡುತ್ತೇವೆಂದು ಹೇಳಿದ್ದಾರೆ

ಶ್ರೀ ಸಿದ್ಧರಾಮಯ್ಯ – ಬಜೆಟ್ ಮೇಲೆ ಚರ್ಚೆಯಾಗದೇ ಪಾಸ್ ಮಾಡಬಾರದೆಂದು ತಾವು ಕೂಡ ರಿಕ್ವೆಸ್ಟ್ ಮಾಡಿದ್ದೀರಿ

ಶ್ರೀ ವಾಟಾಳ್ ನಾಗರಾಜ್ – ಮಾನ್ಯ ಅಧ್ಯಕ್ಷರೇ ಆಯವ್ಯಯದ ಬಗ್ಗೆ ಚರ್ಚೆಯಾಗಬೇಕೆಂಬುದು ನಮ್ಮೆಲ್ಲರ ಮೂಲಭೂತವಾದಂಥ ಮತ್ತು ಬಹಳ ಪ್ರಾಮುಖ್ಯವಾದಂಥ ವಿಚಾರ ಕಳೆದ ಸಾರಿಯೂ ಆಯವ್ಯಯದ ಬಗ್ಗೆ ಚರ್ಚೆಯಾಗದೇ ಸಂಪೂರ್ಣವಾಗಿ ಉತ್ತರ ಕೊಡುವುದಕ್ಕೆ ಆಗಲಿಲ್ಲ ಇದರಿಂದ ನಷ್ಟ ಯಾರಿಗೆ ಆಯಿತು? ನಮಗಿಂಥ ಹೆಚ್ಚಾಗಿ ಹಣಕಾಸಿನ ಸಚಿವರಿಗೆ ನಷ್ಟ ಆಯಿತು ಸಾಮಾನ್ಯವಾಗಿ ಚರ್ಚೆಗೆ ಉತ್ತರವನ್ನು ಕೊಡಬೇಕಾದರೆ, ಹಣಕಾಸಿನ ಸಚಿವರು ಸಮಗ್ರವಾಗಿ ತಮ್ಮ ಮುಂದಿನ ಭವಿಷ್ಯದ ಬಗ್ಗೆ ಈ ರಾಜ್ಯದ ದಿಕ್ಸೂಚಿಯ ಬಗ್ಗೆ ಹೇಳಬೇಕಾಗಿರತಕ್ಕಂಥದ್ದು ಅವರ ಆದ್ಯ ಕರ್ತವ್ಯವಾಗಿತ್ತು ಆದರೆ, ಅವರು ಅದನ್ನು ಆ ದಿವಸ ಕಳೆದುಕೊಂಡರು ಇವತ್ತು ನಾವು ಅನೇಕ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಬೇಕಾಗಿದೆ ಅವರಲ್ಲಿಯೇ ಇವತ್ತಿನ ದಿವಸ ವಿಪರೀತವಾದ ಗೊಂದಲಗಳಿವೆ ಏನು ಗೊಂದಲವೆಂದು ನಾನೂ ಹೇಳುವುದಕ್ಕೆ ಹೋಗುವುದಿಲ್ಲ ತೊಂದರೆಯಂತು ಬಹಳ ಇದೆ ನಮ್ಮೆಲ್ಲರಿಗೂ ಸಾಲ ಮನ್ನಾ ಮಾಡಬೇಕೆಂಬುದರಲ್ಲಿ ಬದಲಾವಣೆ ಇಲ್ಲವೇ ಇಲ್ಲ ಇವರು 29ನೇ ತಾರೀಖಿನ ದಿವಸ ಕೊಡತಕ್ಕಂಥ ಉತ್ತರದಲ್ಲಿ ಸಮಯ ವಿಸ್ತರಣೆ ಹಾಗೂ ಸಾಲ ಮನ್ನಾ ಮಾಡತಕ್ಕಂಥ ವಿಷಯ ಹೇಳಬೇಕು ಅವರು ಅಂದು ಕೊಡುವ ಉತ್ತರದ ಮೇಲೆ ನಾವು ನಿಂತಿದ್ದೇವೆ ಒಂದು ಅವಕಾಶವನ್ನು ಕೊಡೋಣ ತಾವು ಉತ್ತರ ಕೊಡುವವರೆಗೂ ಅವಕಾಶವನ್ನು ಕೊಡಿ ಎಂದು ಪದೇ ಪದೇ ಅದನ್ನೇ ಅವರು ಒತ್ತಾಯ ಮಾಡುತ್ತಿದ್ದಾರೆ ಅವರ ಉತ್ತರದಲ್ಲಿ ಇವರು ಕೊಡಲಿಲ್ಲವೆಂದಾಗ ರೈತರ ಬಗ್ಗೆ ಇವರ ಹಿತ, ಮತ್ತು ರೈತರ ಬಗ್ಗೆ ಇವರು 35 ವರ್ಷಗಳ ನಂತರ ಸಾಮಾನ್ಯವಾಗಿ ಇವರು ಸ್ವಾತಂತ್ರ್ಯ ನಂತರ ನನ್ನನ್ನು ಬಿಟ್ಟರೆ ಬೇರೆ ಯಾರಿಲ್ಲವೆಂದು ಹೇಳಿದ್ದಾರೆ ಕಡಿದಾಳ ಮಂಜಪ್ಪನವರು ಇಲ್ಲ, ದೇವರಾಜ್ ಅರಸ್ ಇಲ್ಲ, ಬಿಡಿಜತ್ತಿ ಇಲ್ಲ, ಅಂದರೆ ಇವರೆಲ್ಲಾ ಈ ರಾಜ್ಯದ ರೈತರಿಗೆ ಏನು ಮಾಡದೇ ಇರುವುದನ್ನು ನಾನು ಈ ರಾಜ್ಯದ ರೈತರಿಗೆ ಮಾಡಿದ್ದೇನೆಂದರೆ ಸಂತೋಷ ಆ ಕೀರ್ತಿ ನಿಮಗೇ ಬರಲಿ ಆದರೆ 29ನೇ ತಾರೀಖು ಅಳಿಯನ ಬಂಡವಾಳ ಬೆಳಕು ಹರಿಯುವ ಹೊತ್ತಿಗೆ, ಗೊತ್ತಾಗುತ್ತದೆ, ಬೆಳಕು ಹರಿದ ಮೇಲೆ 29ನೇ ತಾರೀಖು ತಮ್ಮ ಬಂಡವಾಳ ಏನು ಎನ್ನುವುದು

ಗೊತ್ತಾಗುತ್ತದೆ ಹಳ್ಳಿಯ ಕಡೆ ಗಾದೆಗೆ ತಮ್ಮನ್ನು ಹೋಲಿಸುತ್ತಿದ್ದೇವೆ, ತಾವು ಯಾವರೀತಿ ಈ ರಾಜ್ಯಕ್ಕೆ ಕೊಡುತ್ತೀರಿ, ರಾಜ್ಯದ ರೈತರಿಗೆ ಏನು ಕೊಡುತ್ತೀರಿ ಅದನ್ನು ನಾವು ನೋಡುತ್ತೇವೆ ನಿಮ್ಮಲ್ಲಿ ಗೊಂದಲವಿದೆ, ನನಗೆ ಗೊತ್ತಿದೆ, ಪ್ರತಿದಿವಸ ಪತ್ರಿಕೆಯಲ್ಲಿ ತಾವು ನೋಡುತ್ತಿದ್ದೀರಿ, ಪತ್ರಿಕೆಯಲ್ಲಿ ಬರೆಯುವುದೇ ಬೇರೆ, ಅಂದರೆ ಅವರು ಸತ್ಯ ಬರೆಯುತ್ತಿದ್ದಾರೆ ನಿಮ್ಮ ತಕ್ಕಡಿಯಲ್ಲಿ ಸತ್ಯ ಮಾತನಾಡುತ್ತಿದ್ದೇವೆ ಈ ಸದನಕ್ಕೆ ಬಂದಾಗ ಆ ಪದಗಳೊಂದು ಬರುವುದಿಲ್ಲ ಆ ಪದಗಳು ಎಲ್ಲೆಲ್ಲಿ ಹೋಗುತ್ತವೋ, ಏನಾಗುತ್ತವೋ ಗೊತ್ತಿಲ್ಲ ಒಂದೊಂದು ಪದ ಹೇಳಬೇಕಾದರೂ ಬಹಳ ಕಷ್ಟದಲ್ಲಿ ಹೇಳುತ್ತಿದ್ದಾರೆ ತಾವು ಅಧ್ಯಕ್ಷರೇ, ತಮ್ಮ ಮಾತಿನ ಪ್ರಕಾರ ನಮಗೂ ತಾವು ಮನವಿ ಮಾಡಿದಿರಿ, ಸಭೆ ನಡೆಯಲಿ, ಈ ಒಂದು ಆಯವ್ಯಯ ಚರ್ಚೆಯಾಗಬೇಕು ಎಂದು ಬಹಳ ಚರ್ಚೆಯಾಗಬೇಕಾಗಿದೆ ನಮ್ಮಿಂದ ಆಯವ್ಯಯಕ್ಕೆ ಚರ್ಚೆ ನಡೆಯಲಿಕ್ಕೆ ಅವಕಾಶ ಕೊಡಲಿಲ್ಲವೆಂದು ನಾಳೆ ಪತ್ರಿಕೆಗಳಲ್ಲಿ ಪ್ರಶ್ನೆ ಬಂದೀತು ಎಂದು, ಅದಕ್ಕೋಸ್ಕರವಾಗಿ ನಾವು ಸಮಯವನ್ನು ಕೊಟ್ಟು ನಮ್ಮ ನಮ್ಮ ಸ್ಥಾನಗಳಿಗೆ ಬಂದಿದ್ದೇವೆ ಚರ್ಚೆಗೆ ಅವಕಾಶ ಕೊಡಬೇಕೆಂದು ಅನುಮತಿ ಕೋರುತ್ತಾ ನಾವು ಚರ್ಚೆ ಮಾಡುತ್ತೇವೆ ಅವರು 29ನೇ ತಾರೀಖು ಉತ್ತರ ಕೊಡಲಿಲ್ಲವೆಂದರೆ ಮತ್ತೆ ಧರಣಿ ಮಾಡುತ್ತೇವೆ

(ಗೊಂದಲ)

(ಹಲವಾರು ಸದಸ್ಯರು ಒಟ್ಟಿಗೆ ನಿಂತು ಮಾತನಾಡುತ್ತಿದ್ದರು)

(ಗೊಂದಲ)

ಅಧ್ಯಕ್ಷರು – ಆಯಿತು, ಕುಳಿತುಕೊಳ್ಳಿ, ದಯಮಾಡಿ ಈಗ ಅಜೆಂಡಾದ ಪ್ರಕಾರ ಹೋಗೋಣ

3 ವಿತ್ತೀಯ ಕಾರ್ಯಕಲಾಪಗಳು

ಅ) ವಿಷಯ – 2006–07ನೇ ಸಾಲಿನ ಪೂರಕ ಅಂದಾಜುಗಳು (ಎರಡನೇ ಹಾಗೂ ಅಂತಿಮ ಕಂತು) ಕುರಿತು ಚರ್ಚೆ

ಅಧ್ಯಕ್ಷರು – ಈಗ 2006–07ನೇ ಸಾಲಿನ ಪೂರಕ ಅಂದಾಜುಗಳ (ಎರಡನೇ ಹಾಗೂ ಅಂತಿಮ ಕಂತು) ಕುರಿತು ಚರ್ಚೆ ಮತ್ತು ಉತ್ತರ ಈಗ ಪ್ರತಿಪಕ್ಷದ ನಾಯಕರು ಮಾತನಾಡಿ

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) – ಮಾನ್ಯ ಸಭಾಧ್ಯಕ್ಷರೇ, ಬಜೆಟ್ ಅನ್ನು 16ನೇ ತಾರೀಖು ಮಂಡಿಸಿದ್ದಾರೆ ಬಜೆಟ್ ಮೇಲೆ ಚರ್ಚೆ ಇವತ್ತು, ನಾಳೆ ಪ್ರಾರಂಭವಾಗುತ್ತಿದೆ ಏಕೆಂದರೆ Supplementary estimates, Second installment ನ್ನು ಇವತ್ತು ಉಪಮುಖ್ಯಮಂತ್ರಿಗಳು ಸದನದಲ್ಲಿ ಮಂಡಿಸಿದ್ದಾರೆ ಬಜೆಟ್ ತಯಾರು ಮಾಡತಕ್ಕಂಥ ಕಾಲದಲ್ಲಿ ಒಟ್ಟಾರೆ ರಾಜ್ಯದಲ್ಲಿ tax revenue ಏನಿದೆ, non tax revenue ಏನಿದೆ, 16ನೇ ತಾರೀಖಿನಿಂದ ಇಲ್ಲಿಯವರೆಗೆ ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಏನು ಮಂಡನೆ ಮಾಡಿದ್ದಾರೆ ಇವತ್ತು ಯಾವುದೇ ಊಹೆ ಮಾಡಲಾರದಂಥ, unforeseen, ಬಜೆಟ್‌ನ್ನು ತಾವು ಮಂಡನೆ ಮಾಡತಕ್ಕಂಥ ಕಾಲದಲ್ಲಿ ಯಾವ್ಯಾವ ಇಲಾಖೆಗಳಿಗೆ, ಯಾವ್ಯಾವ ಬಾಬ್ತುಗಳಿಗೆ ಎಷ್ಟು ಹಣ ಬೇಕು ಎಂದು ತಾವು ಈಗಾಗಲೇ ನಿಗದಿ ಮಾಡಿದ್ದೀರಿ 6–8 ದಿವಸಗಳೊಳಗಾಗಿ ಬೆಳಗಾಂನಲ್ಲಿ ಆಗಿರತಕ್ಕಂಥ ಅಧಿವೇಶನ, ಅಲ್ಲಿಯೂ ಕೂಡ ನಾವು ಹೇಳಿದ್ದೇವೆ ಪೂರಕ ಅಂದಾಜುಗಳಲ್ಲಿ ಇವತ್ತು ನಮಗೆಷ್ಟು ಹಣ ಬೇಕಾಗಿದೆಯೆಂದು ನಾವು ಹೇಳಿದ್ದೇವೆ Floods ಬಂತು, ಬರಗಾಲ ಪರಿಸ್ಥಿತಿ, ಬೇರೆ ಬೇರೆ ವಿಚಾರಗಳು ಬಂದಾಗಲೂ ಕೂಡ ತಾವು ಅದರಲ್ಲಿ mention ಮಾಡಿದಿರಿ ಬೆಳಗಾಂ ಮತ್ತು ಉತ್ತರ ಕರ್ನಾಟಕದ ಭಾಗದಲ್ಲಿ ಕೃಷ್ಣಾ ನದಿಯಿಂದ ಬಂದಂಥ ಪ್ರವಾಹದಿಂದ ಭೀಕರವಾದಂಥ ಪರಿಸ್ಥಿತಿ ಬಂತು ಇವತ್ತು ಕೇಂದ್ರ ಸರ್ಕಾರಕ್ಕೆ ನಾನು, ಮಲ್ಲಿಕಾರ್ಜುನ್ ಖರ್ಗೆಯವರು, ಆಗಿನ ಉಪಮುಖ್ಯಮಂತ್ರಿಗಳಾದಂಥ ಶ್ರೀ ಎಂ ಪಿ ಪ್ರಕಾಶ್‌ರವರು ಆಲಮಟ್ಟಿ ಡ್ಯಾಂ

ನೋಡಲಿಕ್ಕೆ ಹೋಗಿದ್ದೆವು ರಾಜ್ಯದಲ್ಲಿ unexpected situation has arisen in Karnataka State, "you must come", ಎಂದು ಮತ್ತು ಇದಕ್ಕೆ ನೇರವಾಗಿ ತಾವು ಹಣ ಕೊಡಬೇಕೆಂದು ಕೇಳಿದ್ದೆವು ಉಪಮುಖ್ಯಮಂತ್ರಿಗಳು, ನಾವೆಲ್ಲಾ ಬೆಳಗಾಂಗೆ ಹೋಗಿದ್ದೆವು ಬೆಳಗಾಂಗೆ ಪ್ರಧಾನಮಂತ್ರಿಗಳು ಬರುವ ಪೂರ್ವದಲ್ಲಿ ಶ್ರೀ ಶರದ್ ಪವಾರ್ ಅಧಣಿಯ ಒಂದು ಪ್ರದೇಶಕ್ಕೆ ಭೇಟಿ ನೀಡಿ ಅಲ್ಲಿ ಶುಗರ್ ಕೇನ್‌ಗೆ ಆದಂಥ ಹಾನಿಯನ್ನು ನೋಡಲಿಕ್ಕೆ ಬಂದಿದ್ದರು ಪ್ರಧಾನಮಂತ್ರಿಗಳು 16ನೇ ಆಗಸ್ಟ್‌ರಂದು ಲೋಕಸಭೆ ನಡೆಯುತ್ತಿದ್ದರೂ ಕರ್ನಾಟಕಕ್ಕೆ ಹೋಗಬೇಕಾಗಿದೆ, ಅಲ್ಲಿ ರೈತರ ಬಗ್ಗೆ ಆದಂಥ ಅನಾಹುತಗಳನ್ನು ನೋಡಬೇಕಾಗಿದೆ, ಅವರಿಗೆ ಸಹಾಯ ಮಾಡಬೇಕಾಗಿದೆ ಎಂದು ಹೇಳಿ he came to Goa, ಗೋವಾದಿಂದ ಬರಲಿಕ್ಕೆ Helicopter take off ಆಗಲಿಲ್ಲ ಅಲ್ಲೇ ಒಂದು ದಿವಸ ಕಳೆದು ಹೋಯಿತು ಅಲ್ಲಿಂದ ಶರದ್ ಪವಾರ್ ಜೊತೆಯಲ್ಲಿ ಮಾತನಾಡಿದ ಮೇಲೆ ಏನು ಮಾಡಬೇಕಾಗಿತ್ತು ಅವತ್ತು ನಮ್ಮ ಜೊತೆ ಶ್ರೀ ಸಿದ್ಧರಾಮಯ್ಯ, ದೇಶಪಾಂಡೆ, ಮಲ್ಲಿಕಾರ್ಜುನ್ ಖರ್ಗೆಯವರು ಮತ್ತು ಎಲ್ಲಾ ಹಿರಿಯ ಸಚಿವರೂ ಮಾತನಾಡಿ at least 400-00 ಕೋಟಿ ರೂಪಾಯಿಗಳನ್ನು ಕರ್ನಾಟಕ ರಾಜ್ಯಕ್ಕೆ ಬಿಡುಗಡೆ ಮಾಡಬೇಕಾಗುತ್ತದೆಂದು ಹೇಳಿದರು ಕೇಂದ್ರ ಸರ್ಕಾರದಿಂದ ಒಂದು ನಯಾ ಪೈಸೆಯೂ ಬರಲಿಲ್ಲವೆಂದು ಹೇಳಲಿಕ್ಕೆ ಆಗ ಯಡಿಯೂರಪ್ಪನವರು, ಅನಂತಕುಮಾರ್‌ರವರು ಅದ್ವಾನಿಯವರು ಬೆಳಗಾಂಗೆ ಹೋದರು ಪೂರಕ ಅಂದಾಜಿನಲ್ಲಿ ಕೇಂದ್ರ ಸರ್ಕಾರದಿಂದ 354 00 ಕೋಟಿ ರೂ ಗಳು ಬಂದಿವೆ ಎನ್ನತಕ್ಕಂಥ ಮಾತನ್ನು ಉಲ್ಲೇಖ ಮಾಡಲಾಗಿದೆ ಇದೇ ಸಂದರ್ಭದಲ್ಲಿ ಕೇಳಿದ್ದೇವೆ "ನೀವು ವಿರೋಧಪಕ್ಷದಲ್ಲಿದ್ದೂ ಕೂಡ ಒಂದು ಪೈಸೆ ಕೂಡ ಕೇಂದ್ರ ಸರ್ಕಾರದಿಂದ ಬರಲಿಲ್ಲ ಎಂದರೆ, ಈ ಹಣ ಹೇಗೆ ಬಂತು? ಈಗಾಗಲೇ ಬೆಳಗಾಂನಲ್ಲಿ ಪ್ರವಾಹ ಪೀಡಿತ ಪ್ರದೇಶಕ್ಕೆ 197 00 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಜನಾಭಿಪ್ರಾಯವಾಗಿದೆ ಇವತ್ತು ನೀವು ಬಂದ ಮೇಲೆ ಯಾವ ಕಡೆಯೂ ಯಾವ ಕೆಲಸಗಳು ಆಗುತ್ತಿಲ್ಲ ಇದರ ಬಗ್ಗೆ ಬಹಳಷ್ಟೂ ಕೂಡ, ನೋಡಿದ್ದೇನೆ, ನಿಮ್ಮ ಪಟ್ಟಿಯ ಬೇರೆ ಬೇರೆ ಪುಟಗಳಲ್ಲಿ ಯಾವ ರೀತಿಯಾಗಿ ಕೊಟ್ಟಿದ್ದೀರಿ ಒಟ್ಟು 5,980 00 ಕೋಟಿ ರೂಪಾಯಿಗಳನ್ನು ಕೇಳಿದ್ದೀರಿ ಅದಕ್ಕೆ ತಾವೇನು ಮಾಡಿದ್ದೀರಿ?

Electricity bill ಪಾವತಿ ಮಾಡಲಿಕ್ಕೆ ಊಹೆ ಮಾಡಿಲ್ಲ, ಅದಕ್ಕೆ ನಾನು ಹೇಳಿದ್ದು, you don't have the Principle Secretary, Finance Subramanyam is also one of the best officers, ಆದರೆ ತಾವು ಹಣಕಾಸಿನ ಸಚಿವರಾದ ಮೇಲೆ ಮೊಟ್ಟ ಮೊದಲನೆಯದಾಗಿ ಕರ್ನಾಟಕದ ಇತಿಹಾಸದಲ್ಲಿ ಯಾರೂ ಪ್ರಧಾನ ಕಾರ್ಯದರ್ಶಿಗಳೂ ತಮ್ಮ ಜೊತೆಯಿಲ್ಲ ತಾವು ಇವತ್ತು ಯಾವ್ಯಾವ ಬಾಬ್ತಿಗೆ ಹಣವನ್ನು ಒದಗಿಸಲಿಕ್ಕೆ ಕೇಳಿದ್ದೀರಿ? ಹಾಗೆಯೇ ತಮ್ಮ ಬಜೆಟ್ ಲೆಕ್ಕಾಚಾರವೂ ಕೂಡ ಸರಿಯಾದ ರೀತಿಯಲ್ಲಿ ಆಗಿಲ್ಲ ಇವತ್ತು ಪೆಂಡಿಂಗ್ ಬಿಲ್ಸ್ ಇವೆ ಏಕೆಂದರೆ ರೇವಣ್ಣನವರು ಪ್ರಭಾವಿ ಸಚಿವರಾಗಿದ್ದಾರೆ, ಲೋಕೋಪಯೋಗಿ ಇಲಾಖೆಗೆ ಹೆಚ್ಚಿನ ಹಣವನ್ನು ಕೊಟ್ಟಿದ್ದಾರೆ ಚೆಲುವರಾಯಸ್ವಾಮಿಯವರು ಪ್ರಭಾವಿ ಸಚಿವರಾಗಿರುವುದರಿಂದ ನಾಗಮಂಗಲಕ್ಕೆ ಹಣ ಕೊಟ್ಟಿದ್ದಾರೆ ಮುಖ್ಯಮಂತ್ರಿಗಳ ಮನೆಯ ಮುಂದಿರುವ ಗಾರ್ಡನ್ ಅನ್ನು ಸುಂದರವಾಗಿ ಮಾಡುವುದಕ್ಕೆ 12 00 ಲಕ್ಷ ರೂ ಗಳನ್ನು ಕೊಟ್ಟಿದ್ದಾರೆ ನೀವು Supplementary estimate ಅನ್ನು ಪ್ರೆಸೆಂಟ್ ಮಾಡಿರತಕ್ಕಂಥ ಕಾಲದಲ್ಲಿ, ಬಜೆಟ್ ಮೇಲೆ ಸಂಪೂರ್ಣವಾದ, ದೀರ್ಘವಾದ ಚರ್ಚೆಯಾಗಿಲ್ಲ ಬಜೆಟ್ ಮೇಲೆ ಚರ್ಚೆ ಆದಮೇಲೆ ತಾವೇನು ಹೇಳುತ್ತಿದ್ದೀರಿ, ಬಜೆಟ್ ಮೇಲೆ ಇಡೀ ರಾಷ್ಟ್ರದಲ್ಲಿ ಇದರ ಬಗ್ಗೆ ಚರ್ಚೆಯಾಗುತ್ತಿದೆ ನಾನು ಮುಖ್ಯಮಂತ್ರಿಯಾಗಿದ್ದಾಗ, ಸಿದ್ಧರಾಮಯ್ಯನವರು ಹಣಕಾಸಿನ ಸಚಿವರಾಗಿದ್ದಾಗ pro farmers, pro poor budget ಎಂದು ನಾವು ಮಾಡಿದ್ದೆವು ಆಗ ಅದು ಇಡೀ ರಾಷ್ಟ್ರ ಮಟ್ಟದಲ್ಲೇ ಚರ್ಚೆಯಾಗಿತ್ತು ಆಗ ಶರದ್ ಪವಾರ್‌ರವರು ಬೆಂಗಳೂರಿಗೆ ಬಂದಾಗ ನೀವು ಹೇಗೆ 6% ಪ್ರತಿಶತ ಬಡ್ಡಿ ಮೇಲೆ ಸಾಲವನ್ನು ರೈತರಿಗೆ ಸಹಾಯ ಮಾಡುತ್ತಿದ್ದೀರಿ ಎಂದು ನಮ್ಮನ್ನು ಕೇಳಿದ್ದರು "This is the only State where you have taken the initiative" ಎಂದು ಕೇಂದ್ರದ ಕೃಷಿ ಸಚಿವರು ಸಹ ನಮ್ಮನ್ನು appreciate ಮಾಡಿದ್ದರು ನೀವೇ ಹೇಳಿದ್ದೀರಿ, ನಾವೇನು ಹೇಳಬೇಕಾಗಿಲ್ಲ, ಬಜೆಟ್ ಮೇಲೆ ಚರ್ಚೆಯಾಗುವ ಪ್ರಾರಂಭದಲ್ಲಿ ಒಂದು ಸಮ್ಮಿಶ್ರ ಸರ್ಕಾರದಲ್ಲಿ common minimum programme ಬಗ್ಗೆ ನಾವು 8 ತಿಂಗಳುಗಳ ಕಾಲ ಚರ್ಚೆ ಮಾಡಿದ್ದೇವೆ, ಒಂದು ಕೆಜಿ ಅಕ್ಕಿಯನ್ನು 3–00

ರೂಪಾಯಿಗಳಿಗೆ ಕೊಡುವಂಥದ್ದಾಗಲಿ, ಶೇಕಡ 6 ಪ್ರತಿಶತ ಬಡ್ಡಿಯ ಮೇಲೆ ರೈತರಿಗೆ ಸಾಲವನ್ನು ಕೊಡತಕ್ಕಂಥದ್ದಾಗಲಿ, ಪ್ಲಾನಿಂಗ್ ಕಮಿಷನ್‌ನವರೇ ಹೇಳಿರುವ ಪ್ರಕಾರ Karnataka is the only state, ಇದು ನಾವು ಮಾಡುತ್ತೇವೆಂದು ಹೇಳುವುದಿಲ್ಲ, ವ್ಯವಹಾರಿಕವಾಗಿ ಯಾವ ರೀತಿ ಮಾಡುತ್ತೀರಿ ಎಂಬುದನ್ನು ಕೂಡ ತಾವೆಲ್ಲರೂ ಕೂಡ ಇವತ್ತು ಹೇಳಬೇಕಾಗಿದೆ ಅದಕ್ಕೆ ಯಾವುದಾದರೂ new services, unforeseen expenditures, ಊಹೆ ಮಾಡಲಾರದಂಥ ಯಾವುದಾದರೂ ಇದ್ದರೆ Supplementary budget ನಲ್ಲಿ ಮಾಡುತ್ತಾರೆ ಬಹಳ ತರಾತುರಿಯಿಂದ ಮಾಡಿರುವುದರಿಂದ plan ಮತ್ತು Non plan ನಲ್ಲಿ ಕೂಡ ಸರಿಯಾದ ರೀತಿಯಲ್ಲಿ ತಮ್ಮ ಲೆಕ್ಕಾಚಾರವಿಲ್ಲ ಇವತ್ತು ಬೇಜವಾಬ್ದಾರಿಯಾದ ಅಧಿಕಾರಿಗಳನ್ನು ತಾವು ಇಟ್ಟುಕೊಂಡು ಅವರು ಇವತ್ತು ಹೇಳಿದ್ದನ್ನೇ ಲೆಕ್ಕಚಾರ ಮಾಡಿ ಈ ಸದನದ ಸಮಯವನ್ನು ಹಾಳು ಮಾಡತಕ್ಕಂಥ ರೀತಿಯಲ್ಲಿ ಏನು ತಂದಿದ್ದೀರಿ, ಇದಕ್ಕೆ ನಮಗೆ ಒಪ್ಪಿಗೆಯಿಲ್ಲವೆನ್ನುವಂಥ ಮಾತನ್ನು ಹೇಳುತ್ತಿದ್ದೇವೆ. Centrally Sponsored Scheme, SC/ST scheme ನಲ್ಲಿ matching grant ನಿಮಗೆ, ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬರುತ್ತದೆ? ಎಸ್ ಸಿ/ಎಸ್ ಟಿ ಸ್ಕಾಲರ್‌ಷಿಪ್‌ಗಾಗಿ ಮ್ಯಾಚಿಂಗ್ ಗ್ರಾಂಟ್‌ಗಾಗಿ ಎಷ್ಟು ಹಣ ಬರುತ್ತದೆ ಗೊತ್ತಿದೆಯೇ ನಿಮಗೆ? ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನವರು ಸಮಾಲೋಚನೆ ಮಾಡುವಂಥ ರೀತಿಯಲ್ಲಿ ಹೇಳುವುದಿಲ್ಲ ಇವತ್ತು 6-8 ದಿವಸಗಳಲ್ಲಿ already ಕೇಂದ್ರ ಸರ್ಕಾರದ ನಿರ್ಧಾರಿತ ಏನು ಒಂದು social service sector ನಲ್ಲಿ ಹಣ ಕೊಡಬೇಕಾಗುತ್ತದೆ ಆಗಲೇ ಆ ಮ್ಯಾಚಿಂಗ್ ಗ್ರಾಂಟ್ ಕೊಡುತ್ತಾರೆ SC/ST ಗೆ ಸಬ್ಸಿಡಿ ಕೊಡುವಂಥ ರೀತಿಯಲ್ಲಿ, ಎಲ್ಲಾ ಕಡೆಗೂ ನೋಟಿಸ್‌ಗಳು ಕೂಡ ಇಷ್ಯೂ ಆಗಿವೆ ಬಡವರ, ಹಿಂದುಳಿದ ವಿದ್ಯಾರ್ಥಿಗಳಿಗೆ ವಿಶೇಷವಾಗಿ SC/ST ವಿದ್ಯಾರ್ಥಿಗಳಿಗೆ 25 00 ಕೋಟಿ ರೂ ಗಳನ್ನು ಇದುವರೆಗೂ ಕೊಟ್ಟಿಲ್ಲ ನಮ್ಮ ಖಜಾನೆ ಭರ್ತಿಯಾಗಿದೆ, ಈಗಲ್ಲ, ನನ್ನ ಕಾಲದಲ್ಲಿ, ಸಿದ್ಧರಾಮಯ್ಯನವರ ಕಾಲದಲ್ಲಿ ನಮ್ಮ ಸಮ್ಮಿಶ್ರ ಸರ್ಕಾರದಲ್ಲಿ 4,000 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು, ಅದೇ ಖಜಾನೆ ಭರ್ತಿಯಾಗಿದೆ ನಿಮ್ಮಲ್ಲೆಲ್ಲಿ ಖಜಾನೆ ಭರ್ತಿಯಾಗಿದೆ ಕೊಟ್ಟು

ಬಿಡುತ್ತಿದ್ದೀರಿ, ಇಲ್ಲಿಯವರೆಗೆ ತಾವು ಕೊಟ್ಟಿದ್ದೀರಾ? ಇಲ್ಲಿಯವರೆಗೆ ರಾಜ್ಯದಲ್ಲಿ notices ಎಷ್ಟು issue ಆಗಿವೆ? ನೀವು ಅವರ ಜೊತೆ ಮಾತನಾಡಿ ನಾನೂ ಕೂಡ ಎಷ್ಟೋ ಸಲ ಸುಬ್ರಮಣ್ಯಂರವರಿಗೆ ಹೇಳಿದ್ದೇನೆ ಬೇರೆ ಇಲಾಖೆಗಳವರೊಂದಿಗೆ ಮಾತನಾಡಿದ್ದೇನೆ, ಅಗವಾನೆಯವರೊಂದಿಗೆ ಮಾತನಾಡಿದ್ದೇನೆ ಏಕೆ ಇವತ್ತಿನ ದಿವಸ SC/ST ವಿದ್ಯಾರ್ಥಿಗಳಿಗೆ 25 00 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದು ಒಂದು ವರ್ಷ, ಆರು ತಿಂಗಳುಗಳ ಹಿಂದೆ ಹೇಳಿದ್ದೀರಿ ಇನ್ನೂ ಕೂಡ ತಾವು ಬಿಡುಗಡೆ ಮಾಡಿಲ್ಲ ಮ್ಯಾಚಿಂಗ್ ಗ್ರಾಂಟ್ ಎಲ್ಲಿಯವರೆಗೆ ತಾವು ಕೊಡುವುದಿಲ್ಲ, ಅಲ್ಲಿಯವರೆಗೆ ಈ ರಾಜ್ಯದಲ್ಲಿ ಅಭಿವೃದ್ಧಿ ಕೆಲಸ ಆಗುವುದಕ್ಕೆ ಸಾಧ್ಯವಿಲ್ಲ, ಈಗಾಗಲೇ ನಮ್ಮ ಖರ್ಗೆಯವರು, ಸಿದ್ಧರಾಮಯ್ಯನವರು ಹೇಳಿದರು ಪ್ರಧಾನ ಮಂತ್ರಿಗಳು ವಿದರ್ಭಕ್ಕೆ ಹೋಗಿದ್ದಾರೆ ವಿದರ್ಭ ಪ್ಯಾಕೇಜ್ ಕೇವಲ ಅಲ್ಲಿ ಮಾತ್ರವೇ ಅಲ್ಲ, ಇಡೀ ರಾಜ್ಯದಲ್ಲಿ ಬೆಳಗಾಂ ಆಗಲಿ, ದಾವಣಗೆರೆ, ತುಮಕೂರು, ಹಾಸನ ಆಗಲಿ, ಇವತ್ತು ನಮ್ಮ ಉಡುಪಿಯ 6 ಜಿಲ್ಲೆಗಳಿಗೆ 2,679–00 ಕೋಟಿ ರೂಪಾಯಿಗಳು ನೀವು Action plan prepare ಮಾಡಿರುವಿರಾ? ನಿಮ್ಮ ಸರ್ಕಾರದಿಂದ ಏನು ಮ್ಯಾಚಿಂಗ್ ಗ್ರಾಂಟ್ ಕೊಡಬೇಕಾಗಿದೆ, 2,689–00 ಕೋಟಿ ಎಲ್ಲಿ ರೈತರ ಆತ್ಮಾಹುತಿ ಆಗುತ್ತಿತ್ತು, ತಾವು ಬಂದ ಮೇಲೆ 172 ರೈತರು ಆತ್ಮಾಹುತಿ ಮಾಡಿಕೊಂಡಿದ್ದಾರೆ ಇದೇ ರೀತಿಯಾದಂಥ ಮಹಾರಾಷ್ಟ್ರದಲ್ಲಿ ಹಿಂದುಳಿದ ಪ್ರದೇಶವಾದ ವಿದರ್ಭದಲ್ಲಿ ಈ ರೀತಿ ಆಗುತ್ತಿದೆ ಕರ್ನಾಟಕ ರಾಜ್ಯದಲ್ಲೂ ಈ ರೀತಿ ಆಗುತ್ತಿದೆ They accepted ಸರ್ಕಾರಕ್ಕೆ ಹಣ ಬಂದಿದೆ, ಮೊನ್ನೆ ರಾಜ್ಯಸಭೆಯಲ್ಲಿಯೂ ಕೂಡ ನಮ್ಮ ಭಾಗದ ಬಿ ಜೆ ಪಿ ಸದಸ್ಯರಾದ ಶ್ರೀ ಕೆ ಬಿ ಶಾಣಪ್ಪನವರು ಶರದ್ ಪವಾರ್‌ರವರಿಗೆ "ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ"? ಎಂದು ಕೇಳಿದರು ಆಗ ಅದಕ್ಕೆ 133 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿರುವುದಾಗಿ ಹೇಳಿದರು ನೀವು ಈಗಾಗಲೇ ಬಹಳ ದಿನಗಳಿಂದ ಹೇಳುತ್ತಿದ್ದೀರಿ, ಕೇಂದ್ರ ಸರ್ಕಾರದಿಂದ ಹಣ ಬಂದಿಲ್ಲವೆಂದು ಶ್ರೀ ಶಿವರಾಜ್ ಪಾಟೀಲ್ ಬಂದಾಗ ನಾವು ಖರ್ಗೆಯವರು, ನೀವು ಮತ್ತು ನಿಮ್ಮ ರೆವಿನ್ಯೂ ಮಿನಿಸ್ಟರ್ ಕೂಡ ಜೊತೆಯಲ್ಲಿದ್ದರು ಅವರ ಜೊತೆ ಮಾತನಾಡಿದ್ದೇವೆ ಮಾತನಾಡಿದ ಮೇಲೆ ಅವರು "How much money you expected from me?" ಎಂದು ಕೇಳಿದರು

ಅದಕ್ಕೆ ನಾವು ಆದಷ್ಟು ಸ್ವಲ್ಪ ಹೆಚ್ಚಿನ ಮೊತ್ತವನ್ನು ಕೊಟ್ಟು ಸಹಾಯ ಮಾಡಿ ಎಂದು ಕೇಳಿದೆವು ಇವರು ನಿರೀಕ್ಷೆಯೇ ಮಾಡಿರಲಿಲ್ಲ, 250-00 ಕೋಟಿ ರೂಪಾಯಿಗಳನ್ನು ಕೊಡಲಿಲ್ಲವೇ? Natural Calamity Relief Fund ನಿಂದ ತಮಗೆ ಹಣ ಬರಲಿಲ್ಲವೇ? ಇವತ್ತು ಕೇಂದ್ರದಿಂದ ಏನೂ ಹಣ ಬರುತ್ತಿಲ್ಲ, ರೈತರಿಗೆ ಏನೂ ಸಹಾಯವಾಗುತ್ತಿಲ್ಲವೆನ್ನುವ ಮಾತನ್ನು ಹೇಳುತ್ತಿದ್ದೀರಿ ಕೇಂದ್ರದಿಂದ ಬರತಕ್ಕಂಥ ಹಣವೇನಿದೆ? ಶ್ರೀ ರಘುವಂಶಿ ಪ್ರಸಾದ್‌ರವರು, ಈಗಾಗಲೇ I have already given 88 crores to Karnataka State ಎಂದು ಹೇಳಿದ್ದಾರೆ Out of that you have spent only 42 crores ಕುಡಿಯುವ ನೀರಿನ ಬಗ್ಗೆ ಹಾಹಾಕಾರ ಇರತಕ್ಕಂಥ ಪ್ರದೇಶದಲ್ಲಿ, ಇವತ್ತು ಬರ ಪರಿಸ್ಥಿತಿ ನಿರ್ವಹಣೆ ಮಾಡತಕ್ಕಂಥ ಜವಾಬ್ದಾರಿ ಪ್ರಕಾಶರವರಿಗಿದೆ ಪ್ರಕಾಶ್‌ರವರು ಮೊನ್ನೆ ಎಲ್ಲಾ ಜಿಲ್ಲಾಧಿಕಾರಿಗಳ ಸಭೆ ನಡೆಸಿದ್ದಾರೆ ಎಲ್ಲಾ ಕಡೆಯಲ್ಲಿಯು ಪಿ ಡಿ ಅಕೌಂಟ್‌ನಲ್ಲಿ 243 ಕೋಟಿ ರೂಪಾಯಿಗಳಿವೆ ಎಂದು ಅವರೇ ಹೇಳಿದ್ದಾರೆ ನಾವು ಹೇಳಿಲ್ಲ ಕೇಂದ್ರದಿಂದ ಬಂದಂಥ ಹಣ 128 ತಾಲ್ಲೂಕುಗಳಲ್ಲಿ ಬರಪೀಡಿತ ಪ್ರದೇಶವೇನಿದೆ ಇವತ್ತಿಗೆ ರಾಜ್ಯ ಸರ್ಕಾರದಿಂದ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ? ಅದೇ ರೀತಿ employment guarantee scheme ನಲ್ಲಿ ಸರ್ಕಾರಕ್ಕೆ ಐದಾರು ಜಿಲ್ಲೆಗಳು ಸೇರ್ಪಡೆಯಾಗಿವೆ ಮತ್ತಷ್ಟು ಜಿಲ್ಲೆಗಳು ಕೂಡ ಬರುತ್ತಿವೆ ನಾನು ಉಪಮುಖ್ಯಮಂತ್ರಿಯವರಲ್ಲಿ ಕೇಳುವುದೇನೆಂದರೆ ಕೇಂದ್ರದಿಂದ ಬಂದಂಥ ಹಣವನ್ನು ಸರಿಯಾಗಿ ಉಪಯೋಗಿಸಿಕೊಂಡು ರಾಜ್ಯದ ಜನರಿಗೆ ಸಹಾಯವಾಗುವ ರೀತಿಯಲ್ಲಿ ಒದಗಿಸಬೇಕು ಎಲ್ಲಿ ಹಣ ಬಂದಿದೆ ಎಂದರೆ ನಾಳೆ ಪತ್ರಿಕೆಗಳಲ್ಲಿ ಹಾಗೆ ವಿಷಯ ಬರುತ್ತದೆ ಹೊರಗಡೆಯೂ ಹಾಗೆ ಹೇಳುತ್ತೀರಿ, ಹೊರಗಡೆ ಮಾತನಾಡಿದರೆ ನಡೆಯುತ್ತದೆ, ಹೊರಗಡೆ ಮರಕ್ಕೆ, ಬೇರೆ ಕಡೆಗಳಲ್ಲಿ ನಿಮ್ಮ ಕಾರ್ಯಕ್ರಮಗಳಲ್ಲಿ ಭಾಗವಹಿಸಿದಾಗ ಮಾತನಾಡಿ ನಾವು ಕೂಡ ಅಂತಹ ಪದಗಳನ್ನು ಉಪಯೋಗಿಸಿಕೊಂಡು ರಾಜಕೀಯದಲ್ಲಿ ಕೆಲಸ ಮಾಡಿದ್ದೇವೆ ರಾಜಕೀಯದಲ್ಲಿ ಕೆಲಸ ಮಾಡುವಾಗ it requires a commitment ಮನಃಪೂರ್ವಕವಾಗಿ ಬಡಜನತೆಗೆ ಸಹಾಯ ಮಾಡುವಂಥ ರೀತಿಯಲ್ಲಿರಬೇಕು ಅದಕ್ಕೆ ಇವತ್ತಿನ ದಿವಸ ನಾವೇನು ಲೆಕ್ಕ ಹಾಕಿಲ್ಲ, Karnataka fiscal responsibility act

ಕೆಳಗೆ management fund ಯಾವುದು 250–00 ಕೋಟಿ ರೂಪಾಯಿಗಳಿವೆ, ಕಿಯೋನಿಕ್ಸ್ ಸಂಸ್ಥೆಗೆ ಹಣ ಬೇಕೆಂದು ಹೇಳಿದ್ದೀರಿ, ಕಿಯೋನಿಕ್ಸ್ ಸಂಸ್ಥೆ ಮೊನ್ನೆ ತಾವು ಬಂದ ಮೇಲೆ ಮಾಡಿರುವಿರಾ? Accelerated water supply scheme ಅದಕ್ಕೆ drinking facilities for Schools and Rural areas These are all committed programmes ನಿಮಗೆ ಸರ್ಕಾರವನ್ನು ನಡೆಸುವಂಥ ಜವಾಬ್ದಾರಿ ಕೆಲಸವನ್ನು ಕೊಟ್ಟಿದ್ದಾರೆ ಜನ ನೇರವಾಗಿ ಅಧಿಕಾರ ವಹಿಸಿಕೊಟ್ಟಿಲ್ಲ, ಏನೋ ಒಂದು ಹೊಂದಾಣಿಕೆಯಿಂದ ಇಲ್ಲಿಗೆ ಬಂದಿದ್ದೀರಿ ಆದರೆ ಸಮಸ್ಯೆಯೆಲ್ಲಾ ಒಂದೇ ಅಲ್ಲವೇ? ನಮ್ಮ ಕಾಲದಲ್ಲಿಯೂ ಒಂದೇ, ನಿಮ್ಮ ಕಾಲದಲ್ಲಿಯೂ ಒಂದೇ ರಾಜ್ಯದ ಜನತೆಗೆ ಕುಡಿಯುವ ನೀರಿಗೆ ವ್ಯವಸ್ಥೆ ಮಾಡುವುದು ಇವತ್ತು ಬಂದಿದೆಯೇ? ಇವೆಲ್ಲವನ್ನೂ ಕೂಡ ಮೊದಲೇ ಸಮಗ್ರವಾಗಿ ಲೆಕ್ಕ ಹಾಕಿ ಬಜೆಟ್‌ನಲ್ಲಿ provide ಮಾಡಬೇಕಾಗಿತ್ತು, ಮಾಡಲಿಲ್ಲ ಅದಕ್ಕೆ ಎಲ್ಲಾ ಕಡೆ ಇವತ್ತಿನ ದಿವಸ ನೀರಿನ ಹಾಹಾಕಾರ ನಡೆಯುತ್ತಿದೆ ಸರ್ಕಾರ ರೆಂಟಲ್ ಅರಿಯರ್ಸ್ 20 00 ಲಕ್ಷ ರೂಪಾಯಿಗಳನ್ನು ಕೊಡುವುದು, ಅದು ಇವತ್ತೇ ನಿಮ್ಮಲ್ಲಿ ಬಂತೇ? ಧಾರವಾಡ ಕೆಸಿಸಿ ಬ್ಯಾಂಕ್ ಅನ್ನು ಯಾರೋ ಗದಗದಲ್ಲಿರತಕ್ಕಂಥ ಗೌಡರು ಪ್ರಾರಂಭ ಮಾಡಿದ್ದರು ಅದು ನಮಗೆ ಹಾಗೂ ಪ್ರಕಾಶ್‌ರವರಿಗೂ ಗೊತ್ತು ಕೆಸಿಸಿ ಬ್ಯಾಂಕ್ ನಡೆಯುತ್ತಿಲ್ಲ, ಅದಕ್ಕೆ ರಾಜ್ಯ ಸರ್ಕಾರದ ಹಣವನ್ನು ಕೊಡತಕ್ಕಂಥ ರೀತಿಯಲ್ಲಿ ಬಹಳಷ್ಟೂ ದಿವಸಗಳಿಂದ ಒಂದು ಕಮಿಟ್‌ಮೆಂಟ್ ಇದೆ ಅದಕ್ಕೂ ಕೂಡ ಇವತ್ತಿನ ದಿವಸ ತಾವು ಹಣವನ್ನು ಒದಗಿಸುವಂತದ್ದನ್ನು ಮಾಡುತ್ತಿದ್ದೀರಿ Package ನಲ್ಲಿ failed wells 7 00 ಕೋಟಿ ಕೇಳುತ್ತಿದ್ದೀರಿ ರಾಜ್ಯದಲ್ಲಿ ಇವತ್ತು P L D ಬ್ಯಾಂಕ್‌ಗಳಿಂದ ಹಣ ಕೊಡುತ್ತೀರಿ ಎಷ್ಟು failed wells ಇದೆಯೆಂಬ ಅಂಕಿ ಅಂಶಗಳು ನಿಮಗೆ ಗೊತ್ತಾಗಲಿಲ್ಲವೇ? ಮೊದಲೇ provide ಮಾಡಲಿಕ್ಕಾಗಲಿಲ್ಲವೇ? ನಾವು ಹೇಳತಕ್ಕಂಥ ತಾತ್ಪರ್ಯ ಇಷ್ಟೇ 16ನೇ ತಾರೀಖು ಬಜೆಟ್ ಮಂಡನೆಯಾದಾಗಿನಿಂದ ಇಲ್ಲಿಯವರೆಗೆ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಏನು 6,000 ಕೋಟಿ ರೂಪಾಯಿಗಳ ಬೇಡಿಕೆಗಳನ್ನು ಕೇಳುತ್ತಿದ್ದೀರಿ ಅದು ಸರಿಯಾದ ರೀತಿಯಲ್ಲಿಲ್ಲ, ಸರ್ಕಾರದವರು ಮಾಡತಕ್ಕಂಥ ಕೆಲಸಕಾರ್ಯಗಳೇನು ಅಂದರೆ ಎತ್ತಿ ತೋರಿಸುವುದು Pre metric scholorship, additionally 56 00

ಲಕ್ಷ, ಇವತ್ತು OBC Scholorship ಗಳಿಗಾಗಿ ಅಡಿಷನಾಲಿಟಿ 265 00 ಲಕ್ಷ, students scholorship ಗಳಿಗಾಗಿ 850–00 ಲಕ್ಷ ರೂಪಾಯಿಗಳು ಇದು ರಾಜ್ಯದ ವಿದ್ಯಾರ್ಥಿಗಳಿಗೆ ಸಹಾಯ ಮಾಡತಕ್ಕಂಥ ರೀತಿಯಲ್ಲಿ ಇದೆ These are all committed programmes ಅದೇ ರೀತಿಯಾಗಿ ಗಂಗಾ ಕಲ್ಯಾಣ, flood relief, ಮತ್ತೆ ಜಲಸಂಪನ್ಮೂಲ ಇಲಾಖೆಯ ನೀರಾವರಿಗೆ 3,773–00 ಕೋಟಿ ರೂಪಾಯಿಗಳಿಂದ 4,800–00 ರೂಪಾಯಿಗಳು ಮೊನ್ನೆ ನಮ್ಮ ಈಶ್ವರಪ್ಪನವರು ಮಾತನಾಡುತ್ತಿದ್ದರು, ಈಶ್ವರಪ್ಪನವರು ಅವರದ್ದೇ ಆದ ಧಾಟಿಯಿಂದ ಮಾತನಾಡುತ್ತಾರೆ Incomplete projects ಗೆ ಎಷ್ಟು ಹಣ ಬೇಕಾಗಿದೆ ಎಂದು ಸಿದ್ಧರಾಮಯ್ಯನವರಿಗೆ ಕೇಳಿದರು ಆಗ 2000ನೇ ಇಸವಿಯಲ್ಲಿ 3,024 ಕೋಟಿ ರೂಪಾಯಿಗಳಿದ್ದರೆ ಸಿದ್ಧರಾಮಯ್ಯನವರು ಹಣಕಾಸಿನ ಸಚಿವರಾಗಿದ್ದಾಗ 3,924–00 ಕೋಟಿ ರೂಪಾಯಿಗಳು ಇತ್ತು, 900–00 crores we have increased ಆಗ 29% irrigation ನಲ್ಲಿ ಒದಗಿಸಿದ್ದರೆ, last year budget ನಲ್ಲಿ 26% ಇದೆ ಇವತ್ತಿನ ಬಜೆಟ್‌ನಲ್ಲಿ 17% ನೀವು ಮಾಡಿದ್ದೀರಿ ಹೀಗಾಗಿ ಹೇಗೆ irrigation ರೈತರಿಗೆ ಏನು ಸಹಾಯ ಮಾಡುತ್ತೀರಿ? ಇವತ್ತು ರೈತರಿಗೆ ಸಹಾಯ ಮಾಡತಕ್ಕಂಥ ರೀತಿಯಲ್ಲಿ ಆಯಾಯ ಪ್ರಾಜೆಕ್ಟ್ ಕೆಳಗಿರತಕ್ಕಂಥ ಎಲ್ಲಾ ಕೃಷ್ಣಾ, ಕಾವೇರಿ ಬೇಸಿನ್‌ನಲ್ಲಿರತಕ್ಕಂಥದ್ದನ್ನು ಸರಿಯಾಗಿ ನಿರ್ವಹಣೆ ಮಾಡುವಂಥ ರೀತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ ಅಲ್ಲಿಯೂ ಕೂಡ ಯಾವರೀತಿ ಕೆಲಸ ಮಾಡಿದ್ದಾರೆಂಬುದು ನಮಗೆ ಗೊತ್ತಿಲ್ಲ ಬೇಡಿಕೆ ನಂ 19 ಮತ್ತು 179 – ಪುರಸಭೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ಗುಲ್ಬರ್ಗ ಹಾಸನ, ಮಂಡ್ಯ ಪುರಸಭೆಗಳಿಗೆ 10 ಕೋಟಿ ಹುಬ್ಬಳ್ಳಿ ಧಾರವಾಡಕ್ಕೆ 12 ಕೋಟಿ, ಶಿವಮೊಗ್ಗಕ್ಕೆ 17 50 ಕೋಟಿ, ಉಳಿದ 17 ಜಿಲ್ಲೆಗಳಿಗೆ ತಲಾ 5 ಕೋಟಿ ಬೃಹತ್ ಬೆಂಗಳೂರು ಮಹಾನಗರಪಾಲಿಕೆಗೆ 11 ಕೋಟಿ ಈ ರೀತಿ ತಾರತಮ್ಯ ಮಾಡಿದ್ದೀರಿ ನಾನೂ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದೇನೆ ಎಂದೂ ಪ್ರತ್ಯೇಕವಾಗಿ ನಮ್ಮ ಜಿಲ್ಲೆಗೆ ಅಂತ ಹಣ ಕೇಳಲಿಲ್ಲ ಹಿಂದುಳಿದ ಪ್ರದೇಶಕ್ಕೆ ಕೇಳಿದ್ದೇವೆ ಬೀದರ್, ರಾಯಚೂರು ಗುಲ್ಬರ್ಗ ಹಿಂದುಳಿದ ಪ್ರದೇಶಗಳ ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಕೇಳಿದ್ದೆವು ಇವತ್ತು ಎಲ್ಲಾ

ಜಿಲ್ಲೆಗೆ ಹೋಲಿಸಿದರೆ ಕೇವಲ 17 ಕೋಟಿ ಮಾತ್ರ ಯಾಕೆ ಸಿಕ್ಕಿದ್ದೇ ಚಾನ್ಸು 50 ಕೋಟಿಯನ್ನೇ ಕೇಳಬೇಕಾಗಿತ್ತು ಮತ್ತೆ ಜಲಸಂಪನ್ಮೂಲ ಇಲಾಖೆಯ ಪೆಂಡಿಂಗ್ ಬಿಲ್ಸ್ 12185 ಲಕ್ಷ ಇದೆ ವಿದ್ಯುತ್ ಬಿಲ್ 80 ಲಕ್ಷ, energy and REC debt services ಗೆ 13 ಸಾವಿರ ಲಕ್ಷ, ಆಡಳಿತ ವೆಚ್ಚ KSRC ಗೆ 1 ಕೋಟಿ, ಈ ರೀತಿಯಾಗೇ ಎಲ್ಲ ಕಡೆ ಮಾಡಿದ್ದೀರಿ ಎಲ್ಲ ಇಲಾಖೆಗಳದನ್ನೂ ನಾವು ಚರ್ಚೆ ಮಾಡಬೇಕಾಗಿತ್ತು ಸಹಕಾರ ಇಲಾಖೆಗೆ 2007–08ರ ಆಯವ್ಯಯ ಭಾಷಣದಲ್ಲಿ ಸಾಲ ಮನ್ನಾ ಮಾಡಲು 1950 ಕೋಟಿ ಎಂದು ಹೇಳಿದ್ದೀರಿ ಇದಕ್ಕಾಗಿ ಬಜೆಟ್ ನಲ್ಲಿ 500 ಕೋಟಿ ಒದಗಿಸಿದ್ದೀರಿ, nationalized banks ದು ಹೇಳುತ್ತಲೇ ಇದ್ದಿರಿ, ಒಬ್ಬ ಮುಖ್ಯಮಂತ್ರಿ ಕೇಂದ್ರ ಸರ್ಕಾರದೊಡನೆ ಸಮಾಲೋಚನೆ ಮಾಡಲಿಲ್ಲ ತಾವೂ ಭರಾಟೆಯಲ್ಲಿ ಹೇಳಿದಿರಿ ಸೇಡಂನಲ್ಲಿ ಗೋಳವಲ್ಕರ್ ಜನ್ಮಶತಾಬ್ದಿಗೆ ಬಂದಿದ್ದರು, ಮರುದಿವಸವೇ ಹೇಳಿದರು ಎಲ್ಲ ಕಡೆಯ ಸಾಲ ಮನ್ನಾ ಮಾಡುತ್ತೇನೆ ಎಂದು ಇವತ್ತು ಸಹಕಾರ ಬ್ಯಾಂಕಿನ ಅಧ್ಯಕ್ಷರುಗಳ ಜತೆ, ಆ ಕ್ಷೇತ್ರದಲ್ಲಿ ಕೆಲಸ ಮಾಡಿರುವವರ ಜೊತೆ ಪಕ್ಷಭೇದ ಮರೆತು ಇವತ್ತು ಸಹಕಾರ ಚಳುವಳಿಯನ್ನೇ ದೇಶದಲ್ಲಿ ಹಾಳು ಮಾಡುತ್ತಿದ್ದಾರೆ ಎಂಬ ಮಾತು ಕೇಳಬರುತ್ತಿದೆ ದೇವರಾಜ ಅರಸರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು ಫೋರ್ಪಡೆ ಹಣಕಾಸಿನ ಸಚಿವರಾಗಿದ್ದರು ಬಡತನದ ರೇಖೆಯೊಳಗಿನ ಬಡವರ ಬಗ್ಗೆ ಅರಸರು ಹೆಚ್ಚಿನ ವಿಶ್ವಾಸ ಮೂಡಿಸುವ ರೀತಿಯಲ್ಲಿ ಮಾಡಿದಂತಹ ಕಾರ್ಯಕ್ರಮ 8 ವರ್ಷಗಳ ಕಾಲ ಕರ್ನಾಟಕದಲ್ಲಿ ಯಾವ ಮುಖ್ಯಮಂತ್ರಿಯೂ ಮಾಡಲಿಲ್ಲ ಆದರೆ ಇಲ್ಲಿ ಯದ್ವಾತದ್ವಾ ಯಾಕೋ ಚುನಾವಣೆಗೆ ಹೋಗುವ ಹಾಗೆ ಕಾಣುತ್ತಿದೆ ಈ ಬಜೆಟ್ ಪಾಸಾಗುವುದರಲ್ಲಿ ನಮಗೇನು ಅನುಮಾನವಿಲ್ಲ ನಾವಿವತ್ತು ಸದನದಲ್ಲಿದ್ದೇವೆ, ಯಾವುದೇ ಸರ್ಕಾರವಿರಲಿ ಅದಕ್ಕೆ ಸಲಹೆ ಸೂಚನೆ ಕೊಡಬೇಕೆಂಬುದು ನಮ್ಮ ಅಭಿಪ್ರಾಯ You are causing financial crisis in the Karnataka State, today ನಾವು ಯಾವ ಗುಡಿಗುಂಡಾರಗಳಿಗೆ ಕೊಡಿ ಅಂತ ಕೇಳಲಿಲ್ಲ ಬೇರೆಯದಕ್ಕೆ ಮಾಡಲು ನಾವು ಹೇಳಲಿಲ್ಲ ಇವತ್ತು ಸಾರಾಸಗಟಾಗಿ ಯಾವ ಇಲಾಖೆಗೂ ಇವರು ಬಿಡದೆ ತಾವೇ announce ಮಾಡಿಬಿಟ್ಟರು ಇದು ಸರಿಯಾದ ನೀತಿಯಲ್ಲ ರಾಜ್ಯದ ಅರ್ಧಸಚಿವರಾಗಿ ತಮ್ಮ ಜೀವನದಲ್ಲಿ ಸಿಕ್ಕಂತಹ ಅವಕಾಶ

ಏನಿದೆ ಯಡಿಯೂರಪ್ಪನವರೇ ರಾಜ್ಯದ ಎಕಾನಮಿ ದೃಷ್ಟಿಯಿಂದ ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡುವ ರೀತಿ ಉತ್ತಮ ಬಜೆಟ್ ಕೊಡಬೇಕು ರಾಜ್ಯದ ಬಗ್ಗೆ ವಿಚಾರ ಮಾಡುವ ಅರ್ಥಶಾಸ್ತ್ರಜ್ಞರಿದ್ದಾರೆ ಬೇರೆಯವರು ಸಹ ಹೇಳುತ್ತಾರೆ Cheap popularity ಗಾಗಿ ಬಜೆಟ್ ಮಂಡನೆ ಆಗಬಾರದು They will ask us also, ಅವರೇನೋ ಮಾಡಿದರು, ಅದನ್ನು ನೀವು ಸದನದಲ್ಲಿ ಪ್ರಶ್ನೆ ಮಾಡಿದ್ವಿ ಅಂತ ಇದರ ಜೊತೆಗೆ ಪೂರ್ಣ ಪ್ರಮಾಣದ ಬಜೆಟ್ ಚರ್ಚೆಯಲ್ಲಿ ನಾವು ಭಾಗವಹಿಸುತ್ತೇವೆ ಆದರೆ ಇವತ್ತೇನು ಹೆಚ್ಚುವರಿ ಬಜೆಟ್ ಮಂಡನೆ ಮಾಡಿದ್ದೀರಿ, ಇದರ ಬಗ್ಗೆ ಸಾಕಷ್ಟು ಜಿಜ್ಞಾಸೆ ಇದೆ ಸರಿಯಾದ ರೀತಿ ನೀವು ಮಂಡನೆ ಮಾಡಿಲ್ಲ ಮತ್ತು ಊಹಿಸಲಿಲ್ಲ You have not properly anticipated the expenditure ಸುಮ್ಮನೆ ಎಲ್ಲಾ ಕಡೆಗಾಗಿ ಹಣ ಕೇಳುವುದು ಬೆಳಗಾವಿಯಲ್ಲೂ ಕೇಳಿದ್ದಿರಿ ಇದು ಸರಿಯಾದದ್ದಲ್ಲ ಹೀಗೆ ನನ್ನ ಅಭಿಪ್ರಾಯ ಹೇಳಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) – ಅಧ್ಯಕ್ಷರೇ ಕ್ಷಮಿಸಬೇಕು, ಇವತ್ತು ನಾವ್ಯಾರು ಇದರ ಬಗ್ಗೆ ಚರ್ಚೆ ಮಾಡಲು ತಯಾರಾಗಿಲ್ಲ 5 ಸಾವಿರ ಮತ್ತು ಚಿಲ್ಲರೆ ಕೋಟಿ ಹೆಚ್ಚುವರಿ ಬಜೆಟ್‌ನಲ್ಲಿ ಬರುತ್ತದೆ ಅಂತ ನಾವು ನಿರೀಕ್ಷೆನೂ ಮಾಡಿರಲಿಲ್ಲ ಎರಡನೆಯದು, ಇದರ ಚರ್ಚೆ ನಾವೀಗ ಆರಂಭ ಮಾಡಿದರೆ ಮೂಲ ಬಜೆಟಿನ ಮೇಲೆ ನಡೆಯುವ ಚರ್ಚೆಯ ಪಾವಿತ್ರ್ಯತೆ ಹೋಗುತ್ತೇನೋ ಅಂತ ಹಣಕಾಸು ಸಚಿವರು ಯೋಚಿಸಬೇಕಾಗಿತ್ತು ಅಲ್ಲಿ ಏನೇನು ಹಂಚಿಕೆ ಮಾಡಿದ್ದೀರಿ ಮತ್ತೆ ಇಲ್ಲೂ ಕೊಟ್ಟುಕೊಂಡು ಹೋಗಿದ್ದೀರಿ ಅಲ್ಲಿ ಸಾಲಲಿಲ್ಲ ಇಲ್ಲಿ ಕೊಟ್ಟೆವು ಅಂತ ಆಮೇಲೆ ಹೇಳಬಹುದಾಗಿತ್ತು ಆದರೆ ದಿಢೀರಂತ ಯಾಕೆ ಇಲ್ಲಿ ಪ್ಲೇಸ್ ಮಾಡಿದಿರೋ ನನಗೆ ಗೊತ್ತಿಲ್ಲ ಬಹುಶಃ ಶಾಸನಸಭೆಯಲ್ಲಿ ಚರ್ಚೆಯಾಗುತ್ತದೋ ಇಲ್ಲವೋ, ಅದು ಗಿಲಿಟಿನ್ ಆಗುವಾಗ ಇದೂ ಗಿಲಿಟಿನ್ ಆಗಿಬಿಡಲಿ ಅಂತ ಅಭಿಪ್ರಾಯವಿತ್ತೇನೋ ಆದರೂ ಅನೇಕ ಸಲ ನಾವು ಈ ಸದನದಲ್ಲಿ ಮಾತನಾಡಿದ್ದೇವೆ ಇದು ಒಳ್ಳೆಯ ಪದ್ಧತಿಯಲ್ಲ ಬಜೆಟ್ ಮಂಡಿಸಿ ಅದರ ಮೇಲೆ ಚರ್ಚೆಯಾಗುವ ಮೊದಲೇ ಪೂರಕ ಅಂದಾಜುಗಳನ್ನು ತಂದಿಟ್ಟು ನಾವು ಅದನ್ನು ಇದನ್ನು ಕೈಬಿಟ್ಟಿದ್ದೆವು,

ಆ ಲೆಕ್ಕ ಹೊಂದಾಣಿಕೆಯಾಗಲಿಲ್ಲ ಎಂದರೆ the entire process of budgeting has to be questioned ಹಾಗಾದರೆ ಬಜೆಟ್ ಮಾಡುವ ಮುನ್ನ ನೀವು ಪೂರ್ಣ ಪ್ರಮಾಣದ ಚರ್ಚೆ ಮಾಡಿರಲಿಲ್ಲವೇ ಎಲ್ಲ ಇಲಾಖೆಗಳೂ ಅವರವರ ಬೇಡಿಕೆ ಹೇಳಿರಲಿಲ್ಲವೇ ಅಂತ ಕೇಳಬೇಕಾಗುತ್ತದೆ ಇವತ್ತು ಬಜೆಟ್ ಇಟ್ಟ ಮೇಲೆ ಯಾರ್‍ಯಾರಿಗೆ ಪ್ರಭಾವವಿದೆ ಅವರು ಮುಖ್ಯಮಂತ್ರಿಗಳ ಮೇಲೆ ಒತ್ತಡ ತಂದು ಪೂರಕ ಅಂದಾಜುಗಳಲ್ಲಿ ಇನ್ನೊಂದಷ್ಟು ಸೇರಿಸಿಕೊಂಡಿರುವುದು ಕಾಣುತ್ತಿದೆ ಇದು ರಾಜ್ಯಕ್ಕೆ ಇಡುವ ಬಜೆಟ್? ಅಂತ ನಾವು ಕೇಳಬೇಕಾಗುತ್ತದೆ ಈ ಪುಸ್ತಕ ಓದಿದರೆ ಹಾಗೆ ಅನ್ನಿಸುತ್ತದೆ ಈ demands ಅನಿರೀಕ್ಷಿತ ವೆಚ್ಚಗಳಿಗೆ ಆಕಸ್ಮಿಕಗಳನ್ನು ಕವರ್ ಮಾಡಿಕೊಳ್ಳಲು ಮಾಡಬೇಕಾಗಿದ್ದಂಥವು ಇವತ್ತು ಅಂಥದ್ದು ಇಲ್ಲಿ ಕಾಣುತ್ತಿಲ್ಲ ಇದರ ಮೇಲೆ ಎಷ್ಟೇ ಕಟ್ ಮಾಡಿ ಮಾತನಾಡಬೇಕೆಂದರೂ ಮೂಲ ಬಜೆಟ್‌ನ ಅಂಶಗಳ ಮೇಲೆ ಮಾತನಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ ಆ demands ಇನ್ನೂ start ಆಗಿಲ್ಲ ಆದ್ದರಿಂದ ಎಷ್ಟು ಮಿತಿಯೊಳಗೆ ಇದರ ಮೇಲೆ ಚರ್ಚೆ ಮಾಡಬೇಕೋ ನನಗೆ ಅರ್ಥವಾಗುತ್ತಿಲ್ಲ ಯಡಿಯೂರಪ್ಪನವರು ನಮಗೆ ದಾರಿತೋರಿಸಬೇಕಾಗುತ್ತದೆ ಈ ಪೂರಕ ಅಂದಾಜು ಬಗ್ಗೆ ಈಗ ಮಾತನಾಡಿ ಮೂಲ ಬಜೆಟ್ ಮೇಲೆ ಆಮೇಲೆ ಮಾತನಾಡುವುದು ನಮಗೊಂದು ಹೊಸ ಪರೀಕ್ಷೆ ಅಥವಾ ಪ್ರಯೋಗ ಅಂತ ತಿಳಿದುಕೊಂಡು, ಉಪ ಮುಖ್ಯಮಂತ್ರಿಗಳೇನು ಹಣಕಾಸು ಸಚಿವರಾಗಿದ್ದಾರೆ ಕೆಲವು ಬಾಬ್ತುಗಳಲ್ಲಿ ಅನಿವಾರ್ಯತೆಯಿತ್ತೇ ಎಂದು ಕೇಳಬೇಕಾಗುತ್ತದೆ ಮತ್ತೆ ಕೆಲವು ಬಾಬ್ತುಗಳಲ್ಲಿ ಯಾರ ಹೆಸರಲ್ಲಿ ಏನು ಮಾಡುವುದಕ್ಕೆ ಹೊರಟಿದ್ದೀರಿ ಅಂತ ಕೇಳಬೇಕಾಗುತ್ತದೆ ಕೃಷಿ ತೋಟಗಾರಿಕೆ ಅಂತ ಹಣ ತರುತ್ತೀರಿ, ಮುಖ್ಯಮಂತ್ರಿಗಳ ಮನೆ ಮುಂದೆ ಪಾರ್ಕ್ ಮಾಡುವುದಕ್ಕೆ ಅಂತ 12 ಲಕ್ಷ ಕೊಡುತ್ತೀರಿ ಪೂರ್ತಿ ಓದದೇ ಏನೋ ನಮ್ಮ ರೈತರಿಗೆ ಸಹಾಯ ಮಾಡಲು ಕೊಟ್ಟಿದ್ದಾರೇನೋ ಅಂತ ನಾವು ಭಾವಿಸಿಕೊಂಡರೆ ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳ ಮನೆಯ ಉದ್ಯಾನವನವನ್ನು ಮೇಂಟೇನ್ ಮಾಡಲು 12 ಲಕ್ಷ ಬೇಕಾ? Fisheries ನಲ್ಲಿ ಹಣ ಇಡುತ್ತೀರಿ, ಇಡೀ ಕರಾವಳಿ ಪ್ರದೇಶದಲ್ಲಿ ರಸ್ತೆ ರಿಪೇರಿ ಮಾಡುತ್ತೇವೆ ಅನ್ನುತ್ತೀರಿ ಇದೆಲ್ಲ ನಿಮಗೆ ಸಮಾಧಾನ ಆಗುತ್ತದೆಯೇ? ಯಾರೋ ಮೀನುಗಾರರ ಹೆಸರಿನಲ್ಲಿ ರಸ್ತೆಯನ್ನು ಮಾಡುವುದು, ಯಾರೋ ಕೃಷಿ ಮಾಡುವವರ

ಹೆಸರಿನಲ್ಲಿ ಬೆಂಗಳೂರಿನಲ್ಲಿ ಪಾರ್ಕ್‌ನ್ನು ಮಾಡುವುದು, ಇನ್ಯಾರೋ ಹೆಸರಿನಲ್ಲಿ ನಿಮ್ಮ ಮಂತ್ರಿಗಳಿಗೆಲ್ಲ subsidized ಮಾಡಿಕೊಡುವುದು, ಅವರವರ ಕ್ಷೇತ್ರಕ್ಕೆ ವೆಟರ್‌ನರಿ ಆಸ್ಪತ್ರೆಗಳನ್ನು ಕಟ್ಟುವುದು, ಅವರು ಹುಟ್ಟಿದ ಜಾಗಗಳಿಗೆಲ್ಲ ಈಗಲೇ ಸಮಾಧಾನಗಳನ್ನು ಕಟ್ಟುವುದು, ತಾಜ್‌ಮಹಲ್‌ನ್ನು ನಿರ್ಮಾಣ ಮಾಡುವುದು, ಇದೆಲ್ಲಾ ಮಾಡಬೇಕಾ ಸಾರ್? ಈ ರಾಜ್ಯಕ್ಕೆ ನೀವು ಶಹಜಹಾನ್ ಆಗಬೇಕಾ? ಇದನ್ನು ಶಹಜಹಾನ್ ಇಟ್ಟಿರುವುದು ಮಮ್ತಾಜ್ ಬೇಗಂ ಹೆಸರಿನಲ್ಲಿ ಇಡುತ್ತಿರುವ ಬಜೆಟ್ ಮತ್ತು ಪೂರಕವಾದ ಬೇಡಿಕೆಗಳು ಇವು ಯಾವ ಯಾವ ಊರಿನಲ್ಲಿ ನೀವು ಇಟ್ಟಿದ್ದೀರಿ, ಊರುವೈಸ್ ಓದಿಕೊಂಡು ಹೋಗಿಬಿಟ್ಟರೆ ನಾವೆಲ್ಲ ಈ ಶಾಸನಸಭೆಯಲ್ಲಿ ಕುಳಿತುಕೊಳ್ಳುವುದಕ್ಕೆ ನಾಚಿಕೆಪಡಬೇಕಾಗುತ್ತದೆ ಯಾರ ಸಮಾಧಾನಕ್ಕೆ ಪೂರಕ ಬಜೆಟ್‌ನಲ್ಲಿ ಇಷ್ಟು ವಿಷಯಗಳು ಬಂದಿದೆ? ಬಡ್ಡಿಯೆನೋ ನೀವು 50 ಸಾವಿರದವರೆಗೆ ತೆಗೆದುಕೊಂಡು ಹೋಗಿದ್ದೀರಿ 300 ಕೋಟಿ ಹಿಂದೆ ಕೊಟ್ಟಿದ್ದೀರಿ, ಇನ್ನು ಕೊಡಬೇಕಾಗಿತ್ತು, ಹೌದು, ಈಗ ಕೇಳಿದ್ದೀರಿ, ನಾವು ಒಪ್ಪಿಕೊಳ್ಳಬೇಕಾಗುತ್ತದೆ ಅದು ನಿಮ್ಮ ಕಾರ್ಯಕ್ರಮ ಇವೆಲ್ಲಾ ಯಾರ ಕಾರ್ಯಕ್ರಮಗಳು ಸಾರ್? ಏಕೆ ಆ ಕಾರ್ಯಕ್ರಮಗಳನ್ನು ನೀವು ಇಲ್ಲಿ ತರುತ್ತಿದ್ದೀರಿ ಎಂದು ನನಗೆ ಗೊತ್ತಾಗುತ್ತಿಲ್ಲ ಇದನ್ನು ನೀವು ಹೇಳಬೇಕು Fisheries head ಕೆಳಗೆ ರಸ್ತೆ ನಿರ್ಮಾಣವನ್ನು ಏಕೆ ತೆಗೆದುಕೊಳ್ಳುತ್ತೀದ್ದೀರಿ? ಮೀನುಗಾರರ ಹೆಸರಿನಲ್ಲಿ ಕರಾವಳಿ ಪ್ರದೇಶದ ರಸ್ತೆಗಳ ಗುಂಡಿಗಳನ್ನು ಮುಚ್ಚುತ್ತಾರಂತೆ ಬಾಬ್ತು ಸಂಖ್ಯೆ 101 ರಿಂದ 107 ಮೀನುಗಾರಿಕೆ ಇಲಾಖೆಯಲ್ಲಿ ಹುದ್ದೆಗಳನ್ನು ಭರ್ತಿ ಮಾಡಲು ಹಣ ಕೇಳುತ್ತಿದ್ದೀರಿ ಆಮೇಲೆ 288 ಲಕ್ಷ ಅಭಿಯಾಚನೆಗೆ ಸೇರಿಸಿದೆ ಹಾಳಾದ ಗುಂಡಿ ರಸ್ತೆಗಳ ರಿಪೇರಿಗೆ ಹೆಚ್ಚುವರಿಯಾಗಿ 23 33 ಲಕ್ಷ ರೂಪಾಯಿಗಳನ್ನು ಸೇರಿಸಲಾಗಿದೆ ಚಿಕ್ಕಮಗಳೂರಿನಲ್ಲಿ ಎಲ್ಲ ಕಡೆ ನೀವು ಇದನ್ನೇ ಮಾಡುತ್ತಿದ್ದೀರಿ ಕರಾವಳಿ ಜಿಲ್ಲೆಯಲ್ಲಿ ಹೆಚ್ಚಿನ ಮಳೆಯಿಂದ 94–98 ರಲ್ಲಿ 10 ಲಕ್ಷ ರೂಪಾಯಿ Extra ಕೊಡುತ್ತಿದ್ದೇವೆ, 109–122 ರಲ್ಲಿ ಹಾಳಾದ ಗುಂಡಿ ರಸ್ತೆಗಳ ರಿಪೇರಿಗಾಗಿ 33 ಲಕ್ಷ ರೂಪಾಯಿಗಳು ಮತ್ತು ಮಧ್ಯಂತರ ಪರಿಹಾರಕ್ಕಾಗಿ 0 8 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ, ಆಮೇಲೆ ಮೀನುಗಾರಿಕಾ ಅಭಿವೃದ್ಧಿ ನಿಗಮವನ್ನು ಮುಚ್ಚಲು ತೀರ್ಮಾನಿಸಲಾಗಿತ್ತು ಮತ್ತೆ

ಪುನಶ್ಚೇತನಗೊಳಿಸಲಿಕ್ಕೆ 412 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೀರಿ ಮತ್ತೆ 10 ಕೋಟಿ ಕೊಡುತ್ತೀರಿ ನೀವು ಇಲ್ಲಿ ಒಂದು ಆಯೋಗವನ್ನು ನೇಮಿಸಿಕೊಂಡಿದ್ದೀರಿ ರಾಜ್ಯ ಹಣಕಾಸು ಆಯೋಗಕ್ಕೆ ಯಾರನ್ನು ನೇಮಿಸಿದ್ದೀರಿ? ಅದಕ್ಕೆ 60 ಲಕ್ಷ ಬಜೆಟ್ ಇದ್ದುದೇ 60 ಲಕ್ಷ ಅಷ್ಟನ್ನು ಕೊಟ್ಟಿದ್ದೀರಿ ಯಾವ ಯಾವ ವಲಯದಲ್ಲಿ ಯಾರ್ಯಾರನ್ನು meet ಮಾಡಿದ್ದಾರೆ? ಆ ಆಯೋಗದವರು ಏನು ವರದಿಯನ್ನು ಕೊಟ್ಟಿದ್ದಾರೆ? ಇದರಿಂದ ರಾಜ್ಯಕ್ಕೆ ಏನು ಪ್ರಯೋಜನವಾಗಿದೆ ಎನ್ನುವುದನ್ನು ತಾವು ಅದರ ಬಗ್ಗೆಯೂ ಸ್ವಲ್ಪ ಹೇಳಬೇಕು ಸಾರ್ ಯಾವ Economist ಅವರು? ಯಾವ ಕ್ಷೇತ್ರದಲ್ಲಿ ಅವರು ನುರಿತರಿದ್ದರು? ಈ ಆಯೋಗದ ಅಧ್ಯಕ್ಷ ಆಗುವವರ ಹಕ್ಕುಗಳು ಎಲ್ಲಿಂದ ಇತ್ತು? ಯಾವ ಯಾವ ಇಲಾಖೆಯಲ್ಲಿ ಅವರು ಅನುಭವ ಇಟ್ಟುಕೊಂಡು ಬಂದು ಅಥವಾ ಬಹಳ ಮೇಲ್ಮಟ್ಟದ ಸುಧಾರಣೆಗಳನ್ನು ಸೂಚಿಸುವಂಥವರು ಇದ್ದರು, ಇದನ್ನು ಹೇಳಬೇಕಲ್ಲ ಹಣಕಾಸು ಆಯೋಗಕ್ಕೆ ಹಣ ಸಾಲಲಿಲ್ಲ ನಾನು 60 ಲಕ್ಷ ಇಟ್ಟಿದ್ದೇನೆ ಏತಕ್ಕೆ? TA, DA ಗೆ ಇನ್ನು Officers ಬಗ್ಗೆ ಹೇಳುವುದಾದರೆ, ನಾನು ಹೋದಸಲವೂ ಭಾರೀ ತೀಕ್ಷ್ಣವಾಗಿ ಮಾತನಾಡಿದ್ದೆ ದೆಹಲಿಯಲ್ಲಿ ಯಾರಾದರೂ ಯಾವುದಾದರೂ building useless ಎಂದು ಹರಾಜು ಹಾಕುತ್ತಾರೆಂದರೆ, ಇದು ಕರ್ನಾಟಕ ಸರ್ಕಾರದವರಿಗೆ ಏಕೆ ಬೇಕು ಸಾರ್? Reserve Bank ನವರು ಕಟ್ಟಿಸಿರುವ building ಗಳನ್ನು ಮಾರುತ್ತೇವೆಂದು ಹೇಳಿ, ನೀವು 35 ಕೋಟಿ ಚಿಲ್ಲರೆ ಕೊಟ್ಟು ದೆಹಲಿಯಲ್ಲಿ building ಅನ್ನು ಕೊಂಡುಕೊಳ್ಳುತ್ತೇವೆಂದು ಹೋಗುತ್ತಿದ್ದಿರಲ್ಲ, Is it your policy? ದೆಹಲಿಯಲ್ಲಿ Resident Commissioner ಅವರ office ನಲ್ಲಿ, ದೆಹಲಿಯಲ್ಲಿ ಕರ್ನಾಟಕ ಭವನದಲ್ಲಿ ಕೆಲಸ ಮಾಡುವ ಎಲ್ಲ ನೌಕರರ ವಸತಿ ಗೃಹಕ್ಕೆ ಈ ಹಣವನ್ನು ಇಡುತ್ತಿರುವುದು ಇದು emergency ಅಲ್ಲ ಏತಕ್ಕೆ ಬೇಕಾಗಿತ್ತು ಸಾರ್ ಇದು ಕರ್ನಾಟಕದಲ್ಲಿರುವವರಿಗೆ ಏನು ಮಾಡುತ್ತೀರಿ ಎಂದು ಮೊದಲು ಹೇಳಿ ನೀವು ಹಾಗಾದರೆ ಎಲ್ಲ ನೌಕರರಿಗೂ ವಸತಿ ಗೃಹಗಳನ್ನು ಮೊದಲೇ ನಿರ್ಮಾಣ ಮಾಡಿಬಿಡಿ ದೆಹಲಿಯಲ್ಲಿರುವವರಿಗೆ ದೆಹಲಿಯ HRA ಮತ್ತು CCA ಯನ್ನು ಕೊಡುವುದಿಲ್ಲವೇ? ಅವರು ಬಾಡಿಗೆ ಮನೆಯಲ್ಲಿದ್ದರೆ ಅಪರಾಧವೇ?

ಹಾಗಾದರೆ ನೀವು ಸಂಬಳ ನಿಗದಿ ಮಾಡುವಾಗ ಇದನ್ನೆಲ್ಲಾ ನೋಡಿ ಮಾಡುವುದಿಲ್ಲವೇ? Transfer ಮಾಡಬೇಕಾದರೆ ಇದನ್ನೆಲ್ಲ ನೋಡಿ ನಿಗದಿ ಮಾಡುವುದಿಲ್ಲವೇ? Every year, ದೆಹಲಿ ಕರ್ನಾಟಕ ಭವನದ ಹೆಸರಿನಲ್ಲಿ ಅಲ್ಲಿ Resident Commissioner ಅವರ ಹೆಸರಿನಲ್ಲಿ ಎಷ್ಟು ಹಣ ಖರ್ಚಾಗುತ್ತಿದೆ ಎಂದು ಒಂದು ಲೆಕ್ಕವನ್ನು ಇಟ್ಟುಬಿಡಿ ಯಾರಿಗೋಸ್ಕರ ಇದು ಖರ್ಚಾಗುತ್ತಿದೆ ? ನಿಮ್ಮ ಕರ್ನಾಟಕ ಮೂರನೇ ಭವನ ನಮಗೆ ಎಷ್ಟು ಬಳಕೆಯಾಗಿದೆ ಎಂದು ಹೇಳಿ ಯಾರ್‍ಯಾರು ಹೋಗಿದ್ದಾರೆ ಆ ಕರ್ನಾಟಕ ಭವನಕ್ಕೆ ನಮಗೆ ಒಂದು ಪಟ್ಟಿ ಕೊಡಿಸಿ ಯಾರ್‍ಯಾರು Officers transfer ಆಗಿರುವವರು permanent ಆಗಿ ಎಷ್ಟು ಎಷ್ಟು ವರ್ಷ, ಎಷ್ಟೆಷ್ಟು ತಿಂಗಳಿಂದ ಅಲ್ಲಿದ್ದಾರೆ ಎಂದು ಒಂದು ಪಟ್ಟಿ ಕೊಡಿಸಿ ಇವರ ಮೋಜಿಗೆ Exchequer ದುಡ್ಡನ್ನು ನೀವು ಇಲ್ಲಿ ಕುಳಿತುಕೊಂಡು, ಖರ್ಚು ಮಾಡುತ್ತೀರಾ? ಅದು supplementary demands ನಲ್ಲಿ ಇದು ಅರ್ಥವಾಗುತ್ತಿಲ್ಲ ಇದನ್ನೆಲ್ಲ ನೀವು ಏಕೆ ತರುತ್ತಿದ್ದೀರಿ ಎಂದು ಹೇಳಬೇಕಾಗುತ್ತದೆ ಯಾವ ಇಲಾಖೆಯಲ್ಲಾದರೂ plan ಕೆಳಗಡೆ ಏನಾದರೂ ನಿಮಗೆ ಕೊರತೆ ಬಂದು ಕೇಂದ್ರ ಸರ್ಕಾರದವರು reimburse ಮಾಡಬೇಕಾಗಿರುವ ಹಣ ಇದೆ, ಇದನ್ನು ನಾನು release ಮಾಡುತ್ತಿದ್ದೇನೆಂದು ತಾವು ಮಾಡಿದ್ದೀರಾ? ಸಾರ್ ಇವತ್ತು ನಮ್ಮ ದುರ್ದೈವ ಇಡೀ ರಾಜ್ಯದ ಅರಣ್ಯೀಕರಣ ನಾಶವಾಗುತ್ತಿದೆ ನನಗೆ ಗೊತ್ತಿಲ್ಲ ಇದು, ಸನ್ಮಾನ್ಯ ಸಚಿವರು ಇದನ್ನು ಹೇಗೆ ತೆಗೆದುಕೊಂಡಿದ್ದಾರೋ ಗೊತ್ತಿಲ್ಲ ನಿಮಗೆ ದುಡ್ಡು ಇಲ್ಲಾದರೂ ಬರುತ್ತದೆ ಎಂದು ನಾನು ತಿಳಿದುಕೊಂಡಿದ್ದೆ ಚನ್ನಿಗಪ್ಪನವರೇ Afforestation, ನಿಮ್ಮ Water conservation ಎರಡೇ ಕರ್ನಾಟಕಕ್ಕೆ ಆಗಬೇಕಾಗಿತ್ತು ಒಂದು ಕಡೆ ಮರವನ್ನು ಬೆಳೆಸಬೇಕಾಗಿತ್ತು, ಮತ್ತೊಂದು ಕಡೆ ಭೂ ಮಟ್ಟದ ನೀರನ್ನು ಸುಧಾರಣೆ ಮಾಡಬೇಕಾಗಿತ್ತು ನೀವು ಯಾವ ಅಭಿಯಾಚನೆಯಲ್ಲೂ ನಿಮಗೆ ದುಡ್ಡಿಲ್ಲ ಚನ್ನಿಗಪ್ಪನವರೇ ಕಾಡಿನೊಳಗೆ ಇದ್ದುಬಿಡಿ ಎಂದು ಕೈಬಿಟ್ಟುಬಿಟ್ಟಿದ್ದಾರೆ ಅಂಥ ಯಾವ ಕಾರ್ಯಕ್ರಮವನ್ನು ಇಡದೇ ಒಂದೇ ಒಂದು ಒಪ್ಪಬಹುದಾದಂಥ ಕಾರ್ಯಕ್ರಮ ಇದರಲ್ಲಿ ಇಲ್ಲ ತಾವು ಕೂಡ defend ಮಾಡುವಂಥ ಐದು ಸಾವಿರ ಚಿಲ್ಲರೆ ಕೋಟಿ ಇಟ್ಟು ತಾವೇನು supplementary demands ಅನ್ನು ಮಾಡುತ್ತಿದ್ದೀರಿ, ಇದರ ಮೇಲೆ ನಾವು

ಜಾಸ್ತಿ ಖರ್ಚು ಮಾಡಲಿಕ್ಕೆ ಮಾತನಾಡಲಿಕ್ಕಾಗುವುದಿಲ್ಲ ಇದು ಒಂದು ಎರಡನೆಯದು, ಬೆಳಗಾವಿ ಬಗ್ಗೆ ನಾವು ಸ್ವಲ್ಪ ಮಾತನಾಡಬೇಕಾಗಿದೆ ಬೆಳಗಾವಿಯಲ್ಲಿ ಅಸೆಂಬ್ಲಿ ಮಾಡುವುದಕ್ಕೆ ಎಷ್ಟು ಖರ್ಚಾಯಿತು? ಅಲ್ಲಿ ಅಷ್ಟು ದಿವಸಕ್ಕೆ? ಇದು ಯಾರ ಸಾನಿಧ್ಯದಲ್ಲಿ ಆಯಿತು? ನಾವೇನೋ ತಿಳಿದುಕೊಂಡಿದ್ದೆವು, ಏನೋ ಅಲ್ಲಿಯವರು ಬಹಳ ಕಷ್ಟಪಟ್ಟು ನಮ್ಮೆಲ್ಲರನ್ನು ಕರೆದುಕೊಂಡು ಹೋಗಿ ಆತಿಥ್ಯವನ್ನು ನೀಡಿ ಅಲ್ಲಿ ಶಾಸನಸಭೆಯನ್ನು ನಡೆಸಿಕೊಟ್ಟಿದ್ದಾರೆ ಎಂದು ಹೇಳಿ The thinking was like that Deputy Commissioner ಗೆ ಕಾಗದವನ್ನು ಬರೆಯುವುದು Resident Commissioner ಗೆ ಕಾಗದವನ್ನು ಬರೆಯುವುದು ಅಲ್ಲೊಂದು ಕಮಿಟಿ ಆಗಿಬಿಟ್ಟಿತ್ತು ತಮಗೂ ಗೊತ್ತು ಅಲ್ಲೂ ಇದರ ಬಗ್ಗೆ ಮಾತನಾಡಿದೆವು, ಎಷ್ಟೆಷ್ಟು ಖರ್ಚಾಗಿದೆ ಎಂದು ತಾವೇ ಅದನ್ನು ಓದಿಬಿಡಿ ಬಾಬ್ತು ಸಂಖ್ಯೆ 19 ರೆವಿನ್ಯೂನಲ್ಲಿ ಎಷ್ಟು ಇದೆ ಎಂದು " ವಿಶೇಷ ಅಧಿವೇಶನವನ್ನು ನಡೆಸಲು ತೀರ್ಮಾನಿಸಲಾಯಿತು ಆದ್ದರಿಂದ 220 ಲಕ್ಷ ರೂಪಾಯಿಗಳನ್ನು ಹೆಚ್ಚುವರಿ ಮೊತ್ತವನ್ನು ಮಂಜೂರಿ ಮಾಡಿತು " ಮತ್ತು ಬೆಳಗಾವಿ ವಿಭಾಗದ ಕಚೇರಿ ನಿರ್ವಹಣೆಗಾಗಿ 50 ಲಕ್ಷ ಆಯಿತು ಆಮೇಲೆ ಬಾಬ್ತು 21 ರಲ್ಲಿ 10 ಲಕ್ಷ ರೂಪಾಯಿ ಖರ್ಚಾಯಿತು ಇನ್ನು ನಮಗೆಲ್ಲ TA, DA ಕೊಡಲು ಇದೆಲ್ಲ ಹೆಚ್ಚುವರಿ ಬಾಬ್ತು ಆಯಿತು ನೀವು ತೆಗೆದುಕೊಳ್ಳುವ ತೀರ್ಮಾನಗಳಿಗೆ ಏನು ಆಗಬೇಕಾಗಿದೆ? ಎಲ್ಲಾದರೂ ಇದು ಶಾಸನಸಭೆಯಲ್ಲಿ ತೀರ್ಮಾನವಾಗಿತ್ತಾ? ಮತ್ತು ಖರ್ಚನ್ನು ನೀವೇ ಮಾಡಿದ ಮೇಲೆ ಅಲ್ಲಿ host ಎಂದು ಏಕೆ ನೀವು creat ಮಾಡಿದಿರಿ? ಇದು ನಮಗೆ ಅರ್ಥವಾಗಲಿಲ್ಲ ಯಾರದೋ ದಾಕ್ಷಿಣ್ಯದಲ್ಲಿ ಇದ್ದುಕೊಂಡು ಶಾಸನಸಭೆಯನ್ನು ನಡೆಸುವ ಸ್ಥಿತಿಯನ್ನು ನಮಗ್ಯಾಕೆ ತಂದಿರಿ? ಶಾಸನಸಭೆಯಲ್ಲಿ ಮಾತನಾಡಬೇಕಾದರೂ ಉತ್ತರ ಕರ್ನಾಟಕಕ್ಕೆ ಸೀಮಿತವಾಗಿ ಚರ್ಚೆ ಮಾಡಿ ಎನ್ನುವ ಸ್ಥಿತಿಯನ್ನು ನಮಗ್ಯಾಕೆ ತಂದಿರಿ? ನೀವು Was it called an Assembly Session? It was nothing but Zilla Panchayat meeting ಏತಕ್ಕೆ ಇಷ್ಟು ಹಣವನ್ನು ಖರ್ಚು ಮಾಡುತ್ತಿದ್ದೀರಿ? ಎಂದು ತಾವು ಹೇಳಬೇಕಲ್ಲ ನಾವು ಅದನ್ನು ಅಸೆಂಬ್ಲಿ ಸೆಷನ್ ಎಂದು ತಿಳಿದುಕೊಳ್ಳಲಿಲ್ಲ ನೀವು ಕರೆಯಬೇಕಾದರೂ ನೀವು ಕರೆದು ಆ ನಂತರ ನಮಗೆ ಹೇಳಿದಿರಿ ಈ ಭಾಗದವರಿಗೆ ಮಾತನಾಡುವುದಕ್ಕೆ ಬಿಡಿ ಎಂದು ಹಾಗಾದರೆ

ಅಸೆಂಬ್ಲಿಯನ್ನು ನೀವು ಹೀಗೆ ನಡೆಸಿಕೊಂಡು ಹೋಗುವುದಾದರೆ ದಯಮಾಡಿ ನಾವು demand ಮಾಡುತ್ತಿದ್ದೇವೆ, ಪ್ರತಿ ಜಿಲ್ಲಾ ಕೇಂದ್ರದಲ್ಲೂ ಶಾಸನ ಸಭೆ ನಡೆಯಬೇಕು ನಮ್ಮಲ್ಲೂ ನಡೆಸಿ ನಮ್ಮದೂ ಚರ್ಚೆ ಮಾಡಿ ನಮಗೂ ಅವತ್ತು ರೋಡ್ ಮಾಡಿ ನಮಗೂ ಅವತ್ತು building ಮಾಡಿ ನೀವು ಅಸೆಂಬ್ಲಿ ನಡೆಸುತ್ತೇವೆಂದು ಬೆಳಗಾಂ ಸಿಟಿಯಲ್ಲಿ ಖರ್ಚುಮಾಡಿದ account ಅನ್ನು ಇವತ್ತು ಮುಂದಿಡಿ ಅಸೆಂಬ್ಲಿಗೋಸ್ಕರ ಅಲ್ಲದೆ ಮಾಡಿರುವುದನ್ನು ಇವತ್ತು ಚರ್ಚೆ ಮಾಡಿಸಿ ಇವತ್ತು ಯಾರು ಸಾರ್ ಇದಕ್ಕೆ ಜವಾಬ್ದಾರರು? ಏತಕ್ಕೆ conclude ಆಗಲಿಲ್ಲ? ಏತಕ್ಕೆ ನಿಮ್ಮ ಕನ್ನಡ ಸಾಹಿತ್ಯ ಸಮ್ಮೇಳನ, ಕನ್ನಡಿಗರಿಗೆ ವ್ಯವಸ್ಥೆ ಮಾಡುವುದಕ್ಕೆ ಈ ಶಾಸನಸಭೆ ಇರುವುದು ನಾವು ಎಲ್ಲರಿಗಿಂತ ಹೆಚ್ಚು ಅಭಿಮಾನ ಇಟ್ಟುಕೊಂಡಿರುವುದು ಬೆಳಗಾವಿ ಮೇಲೆ ತಾವು ಖರ್ಚುವೆಚ್ಚದ ಬಗ್ಗೆ ಇಲ್ಲಿ ಹೇಳಬೇಕು ಎಷ್ಟು ಖರ್ಚು ಮಾಡಿ ಈ ಕೆಲಸವನ್ನು ಮಾಡುತ್ತಿದ್ದೇವೆಂದು ನಾಳೆ ನಾವು ಜನರಿಗೆ ಉತ್ತರವನ್ನು ಹೇಳಬೇಕಲ್ಲ ಏನಪ್ಪ ಬೆಳಗಾಂಗೆಂದು excursion ಗೆ ಹೋಗಿದ್ದಿರಾ? Sight seeing ಗೆ ಹೋಗಿದ್ದಿರಾ? ಏನೇನು ಮಾಡಿ ಬಂದೆವು ಎಂದು ಹೇಳಬೇಕಲ್ಲ ಇವೆಲ್ಲವನ್ನು ನೋಡಿದರೆ ಸರ್ಕಾರಕ್ಕೆ ಒಂದು ನಿರ್ದಿಷ್ಟವಾದ ನಿಲುವೇ ಇಲ್ಲ ನೀವೇನು ಮಾಡಬೇಕೆಂದು ಇದ್ದೀರಿ ಎಂದು ಹೇಳಿ ನಿಲುವೇ ಇಲ್ಲ ಇನ್ನು ಬರ ಪರಿಹಾರದ್ದು ನಾವು ಈಗಾಗಲೇ ಕೇಳಿದೆವು ಮೇವಿಗಾಗಿ ಹೆಚ್ಚುವರಿಯಾಗಿ 50 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದೆ, ಇದರಲ್ಲಿ ಮೂವತ್ತೇಳುವರೆ ಲಕ್ಷ ಕೇಂದ್ರದ ಬಾಬ್ತು, ಉಳಿದದ್ದು ಹನ್ನೆರಡೂವರೆ ಲಕ್ಷ ಸಾರ್, ನಾವು ಬರಗಾಲದ ದವಡೆಗೆ ಸಿಲುಕಿರುವವರು ನಮಗೆ ಒಂದು ಪಟ್ಟಿ ಕೊಡಿ ನಮ್ಮ ಜಿಲ್ಲೆಗಳಲ್ಲಿ ಇವತ್ತು ಮೇವಿಗಾಗಿ ಎಷ್ಟು ಹಣವನ್ನು release ಮಾಡಿದ್ದೀರಿ? ಒಂದು ರೂಪಾಯಿ ಕೂಡ ಮಾಡಿಲ್ಲ ನಮ್ಮ ಡಿಸ್ಟ್ರಿಕ್ಟ್ ಇನ್ ಚಾರ್ಜ್ ಮಿನಿಸ್ಟರ್ ಅವರು ಹೇಳಲಿ ಮೇವಿಗಾಗಿ ಇವತ್ತಿನವರೆಗೂ release ಆಗಿಲ್ಲ ನಾವು ಕಾಮಗಾರಿಗಳನ್ನು ಮಾಡಿದ್ದೇವೆ ಮೇವನ್ನು ಕೊಳ್ಳಬೇಕೆಂದರೆ ಗೋಶಾಲೆಯನ್ನು ಮಾಡುತ್ತೇವೆಂದರು ಗೋಶಾಲೆ ಮಾಡುತ್ತಾರೆ ಎಂದರೆ ಇಲ್ಲ, ಮೇವನ್ನು ತೆಗೆದುಕೊಳ್ಳಬಹುದು ಎಂದು ಇಲ್ಲಿ ಉತ್ತರವನ್ನು ಹೇಳಿದಿರಿ ಸನ್ಮಾನ್ಯ ಸಚಿವರು ಇಲ್ಲಿದ್ದೀರಿ in charge

Minister Scarcity ಗೆ ಮೇವಿಗೆ ಇವತ್ತಿನವರೆಗೆ ರೈತರಿಗೆ ಯಾವುದೇ ರೀತಿ ಸಬ್ಸಿಡಿಯನ್ನು ನಿಮ್ಮ ಸರ್ಕಾರದ ವತಿಯಿಂದ ಕೊಟ್ಟಿಲ್ಲ ಯಾರಿಗೂ ಹೇಳಿಲ್ಲ ನೀವು ಮೇವನ್ನು ತೆಗೆದುಕೊಂಡು ಬನ್ನಿ, ಮೇವಿನ ದುಡ್ಡನ್ನು ಕೊಡುತ್ತೇವೆಂತಲೋ, transportation ದುಡ್ಡನ್ನು ಕೊಡುತ್ತೇವೆಂತಲೋ ಹೇಳಿಲ್ಲ ಇನ್ನು ಪ್ರವಾಹ, ಎಲ್ಲಿ ಖರ್ಚಾಗುತ್ತಿದೆ ಈ ಹಣ? ನಮ್ಮವು ಇನ್ನು ಬಿಲ್‌ಗಳೇ ಆಗಿಲ್ಲ ಪ್ರವಾಹ ಪರಿಹಾರ ಕಾಮಗಾರಿಗಳಲ್ಲಿ ಕೆಲಸಗಳು ಸಣ್ಣಪುಟ್ಟವು ಐದೈದು ಲಕ್ಷ, ಹತ್ತತ್ತು ಲಕ್ಷ ರೂಪಾಯಿ ಒಂದೊಂದು ತಾಲ್ಲೂಕಿಗೆ ಡಿಸಿ ಗಳಿಗೆ ಕೊಟ್ಟಿದ್ದರು, ಇವತ್ತಿನವರೆಗೂ ಬಿಲ್ ಪೇಮೆಂಟ್ ಆಗಿಲ್ಲ ಹಣವನ್ನು ಇಲ್ಲಿ ಕೊಡುತ್ತೇವೆಂದು ಹೇಳಿದ ಮೇಲೆ ಏತಕ್ಕೆ ಪೇಮೆಂಟ್‌ನ್ನು ಮಾಡಿಲ್ಲವೆಂದು ಹೇಳಬೇಕಾಗುತ್ತದೆ ಆಮೇಲೆ PWD ಯಲ್ಲಿ ನಾನು ಕೇಳುತ್ತಿದ್ದೇನೆ, PWD ಯಲ್ಲಿರುವ arrears bill ಎಷ್ಟು? ಎಷ್ಟು ವರ್ಷದಿಂದ ಇದೆ? ಯಾವ ಮಾನದಂಡವನ್ನು ಇವತ್ತು ತಾವು adopt ಮಾಡಿಕೊಂಡು arrears payment ಮಾಡಿದ್ದೀರಿ ಎಂದು ಹೇಳಬೇಕು ಮತ್ತು ಯಾವ್ಯಾವ ಜಿಲ್ಲೆಗಳಿಗೆ ಕೊಟ್ಟಿದ್ದೀರೆಂದು ಹೇಳಬೇಕು ಇರಿಗೇಶನ್‌ನಲ್ಲೂ ನೀವು ಹೇಳಬೇಕು ಇರಿಗೇಶನ್‌ನಲ್ಲಿ ಕಂಟ್ರಾಕ್ಟ್ ಮಾಡಿದವರು ಎಷ್ಟು ದಿವಸಗಳಿಂದ ಬಿಲ್‌ಗೆ ಕಾಯುತ್ತಿದ್ದಾರೆಂದು ನೀವು ಹೇಳಬೇಕು ಯಾವ ಆಧಾರದ ಮೇಲೆ ನೀವು ಕೊಟ್ಟುಕೊಂಡು ಹೋಗುತ್ತಿದ್ದೀರಿ? ಹೇಳಿ ಯಾರಿಗೆ ಬಿಲ್ ಕೊಡುತ್ತಿದ್ದೀರಿ? ಯಾವ್ಯಾವ ಜಿಲ್ಲೆಗಳಿಗೆ ಕೊಟ್ಟಿದ್ದೀರಿ? LOC ಹೇಗೆ ರಿಲೀಸ್ ಆಗುತ್ತಿದೆ? ವಿಧಾನಸೌಧದೊಳಗೆ, ಈ ಶಾಸನ ಸಭೆಯೊಳಗೆ ಯಾರಿಗೆ ಪ್ರಭಾವವಿದೆಯೋ, ಅವರವರ ಹೆಸರಿಗೆ ಇಷ್ಟಿಷ್ಟು ಎಂದು, ನಾನು Original Budget ನಲ್ಲಿ ಇಟ್ಟಿಲ್ಲ, Supplementary Budgetನಲ್ಲಿ ಇಟ್ಟುಕೊಳ್ಳುತ್ತೇನೆಂದು ಉಪಮುಖ್ಯಮಂತ್ರಿಗಳು ರಾಜಿಯಾಗಿಬಿಟ್ಟರೆ, ರಾಜ್ಯ ಯಾವ ದಿಕ್ಕಿಗೆ ಹೋಗಬೇಕಾಗುತ್ತದೆ? ನಮಗೆ ಅರ್ಥವಾಗುತ್ತಿಲ್ಲ What is the emergency in placing such a supplementary demand in the Assembly ? ಇದರಲ್ಲಿ ಕನಿಷ್ಠ ಮೂರನೇ ಒಂದು ಭಾಗದಷ್ಟು ಕೂಡ ಅತ್ಯಂತ ತುರ್ತು ಎಂದು ಇದ್ದು, ಪಾಸ್ ಮಾಡಲೇಬೇಕು ಎಂದು ನನಗನ್ನಿಸುವುದಿಲ್ಲ ಸಿದ್ಧರಾಮಯ್ಯನವರು ಆ ಖಾತೆಯನ್ನು ನಿರ್ವಹಿಸಿದರು ಅವರು ಏನು ಹೇಳುತ್ತಾರೋ, ನನಗೆ ಗೊತ್ತಿಲ್ಲ ಸುಮಾರು 5 ಸಾವಿರ ಚಿಲ್ಲರೆ ಕೋಟಿ ರೂಪಾಯಿಗಳಷ್ಟು supplementary

demand ಇಡುತ್ತಿದ್ದೇವೆ Not one thousand crore is worth for discussion under this supplementary demands ನಿಮ್ಮದು ಬಜೆಟ್ ಚರ್ಚೆ ಇತ್ತು, ಮಾಡಬೇಕಾಗಿತ್ತು ಇದೆಲ್ಲಕ್ಕೂ ಪೂರಕವಾಗಿ ಏನು additional ಆಗಿ ಬಜೆಟ್ ಇಟ್ಟುಕೊಂಡು, ಬಂದಿರುವುದನ್ನೆಲ್ಲಾ ನೀವು emergency ಎಂದು ತಂದಿದ್ದೀರಿ What is your policy in Housing? Slum Board ಏನಿತ್ತು KHSDP, IHSDP ಅನ್ನು ಏನೇನು ಮಾಡುವುದಕ್ಕೆ ಹೊರಟಿದ್ದೀರಿ? ಅದನ್ನು ಈ ಶಾಸನಸಭೆಯಲ್ಲಿ ನಿಂತುಕೊಂಡು ಹೇಳಿ ನಗರದಲ್ಲಿ ಮನೆ ಕಟ್ಟುವ ಕಾರ್ಯಕ್ರಮವೇನು? ಹಳ್ಳಿಗಳಲ್ಲಿ ಮನೆಗಳನ್ನು ಕಟ್ಟುತ್ತಿರುವ ಕಾರ್ಯಕ್ರಮವೇನು? ಹಳ್ಳಿಗಳಲ್ಲಿ ಮನೆ ಕಟ್ಟುವ ಕಾರ್ಯಕ್ರಮವಾದ ಇಂದಿರಾ ಆವಾಸ್ ಯೋಜನೆಯಡಿ 2004–05 ಮತ್ತು 2005–06 ನೇ ಸಾಲಿನ ದುಡ್ಡನ್ನು ಕೊಟ್ಟಿದ್ದೀರಾ? ಏಕೆ ಕೊಟ್ಟಿಲ್ಲ? ಕೇಂದ್ರ ಸರ್ಕಾರದ ಹಣವನ್ನೇಕೆ ನೀವು ಬಳಸಲಿಲ್ಲ? ಇಲ್ಲಿ ನಮ್ಮನ್ನೆಲ್ಲಾ ಕೇಳಿ list ಮಾಡಿಸಿದಿರಿ ವಾಲ್ಮೀಕಿ–ಅಂಬೇಡ್ಕರ್ ಯೋಜನೆಯಲ್ಲಿ ನೀವು ಫಲಾನುಭವಿಗಳಿಂದ ಹತ್ತು ಸಾವಿರ ಹಣವನ್ನು ಕೊಡಿಸಿಬಿಡಿ ನಾವು ಮನೆ ಕೊಡುತ್ತೇವೆಂದು ಒಂದು ಯೋಜನೆ ಮಾಡಿದಿರಿ ಆ ದುಡ್ಡೂ ಇಲ್ಲ, ಮನೆಯೂ ಇಲ್ಲ ಈಗ Slum Board ನವರು ನಿಮ್ಮ D D ಗಳನ್ನು ವಾಪಸ್ ತೆಗೆದುಕೊಳ್ಳಿರೆಂದು ಆದೇಶ ಮಾಡಿದ್ದಾರೆ What is your programme ? ಇನ್ನು IHSDP programme ನಲ್ಲಿ ಎಷ್ಟು ಕೋಟಿ ರೂಪಾಯಿಯನ್ನು ಇಲ್ಲಿ ನಿಗದಿ ಮಾಡಿಕೊಂಡಿದ್ದೀರಿ? ಈಗ ಎಷ್ಟು ಕೋಟಿ ರೂಪಾಯಿಗಳಿಗೆ ಅದು ಇಳಿದಿದೆ? ಹಾಗಾದರೆ, ಪೂರಕ ಬಜೆಟ್‌ನಲ್ಲಿ ಬೇರೆ ಊರುಗಳಿಗೆ ಅಂದರೆ ನಿಮ್ಮ ರಾಮನಗರ, ಶಿಕಾರಿಪುರ ಅಥವಾ ಹೊನ್ನಾಳಿ, ಇಂತಹ 4–5 ತಾಲ್ಲೂಕುಗಳನ್ನು ಬಿಟ್ಟು, ಬೇರೆ ಊರುಗಳಿಗೆ ತಾವು Slum Board ನಿಂದ ಎಷ್ಟು ಮನೆಗಳನ್ನು ಕೊಡಿಸುತ್ತೀರೆಂದು ಇಲ್ಲಿ ತಾವು ಎದೆ ಮೇಲೆ ಕೈಯನ್ನಿಟ್ಟುಕೊಂಡು ಹೇಳಬೇಕು? ನಮಗೆ ಗೊತ್ತಿದೆ Slum Board ಗೆ ಬಂದಿರುವ 15 ಕೋಟಿ ರೂಪಾಯಿಗಳು ನಿಮ್ಮಿಬ್ಬರು–ಮೂವರ ಮಧ್ಯ ಹಂಚಿಕೆಯಾಗುತ್ತದೆಂದು ನಮಗೆ ಇವತ್ತೇ ಗೊತ್ತಿದೆ ಇದನ್ನು ಯಾರೂ ಹೇಳಬೇಕಾಗಿಲ್ಲ Things go without saying ಶಾಸನಸಭೆ ಮುಂದೆ ಇದನ್ನೆಲ್ಲಾ ಏತಕ್ಕಾಗಿ ಇಡಬೇಕು? ಬೇರೆ ಪ್ರದೇಶಗಳಿಂದ ಗೆದ್ದು ಬಂದಿರುವ ಶಾಸಕರಾದ ನಾವುಗಳು ಏನು ಮಾಡಬೇಕು?

ಕಾರ್ಯಕ್ರಮಗಳನ್ನು ನಿಮ್ಮ ನಿಮ್ಮ ಕ್ಷೇತ್ರಗಳಿಗೆ ನೀವು ಸೀಮಿತವಾಗಿ ಇಟ್ಟುಕೊಂಡರೆ ಹೇಗೆ? ಚಲುವರಾಯ ಸ್ವಾಮಿಯವರು ಆವತ್ತಿನ ದಿವಸ ದೂರದರ್ಶನದಲ್ಲಿ ಮಾತನಾಡುತ್ತಾ, Individualised Budget ಎಂದು ನೇರವಾಗಿ ಹೇಳಿದರು ಅವರನ್ನು ತೃಪ್ತಿ ಮಾಡುವುದಕ್ಕೋಸ್ಕರ ಇವತ್ತು ನಾಗಮಂಗಲಕ್ಕೆ ದುಡ್ಡು ಕೊಡುತ್ತೀರಿ ಅವರು open ಆಗಿ ಹೇಳಿದ್ದು I challenge in this House He made a statement, about "Individualised Budget" ವ್ಯಕ್ತಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಿರುವ ಬಜೆಟ್ ಎಂದು ನಿಮ್ಮ ಕ್ಯಾಬಿನೆಟ್ ಸಚಿವರು public ನಲ್ಲಿ ಹೇಳಿದರು

ಶ್ರೀ ಬಿ ಶಿವರಾಮು – ಅವರು ಅದಕ್ಕೆ deny ಸಹ ಮಾಡಿಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ – ಅವರು deny ಮಾಡಲಿಲ್ಲ ನೀವು ಅವರನ್ನು ತೃಪ್ತಿ ಪಡಿಸುವುದಕ್ಕೋಸ್ಕರ ದುಡ್ಡನ್ನು ಇಟ್ಟುಕೊಂಡರೆ, ಇದನ್ನು ಪೂರಕ ಅಂದಾಜು ಎಂದು ನಾವು ಕರೆಯಬೇಕೆ?

ಶ್ರೀ ಬಿ ಶಿವರಾಮು – ಬೇರೆಯವರೂ ಸ್ವಲ್ಪ ಹಾಗೇ ಮಾತನಾಡಿದ್ದರೆ, ಅವರಿಗೂ ಸ್ವಲ್ಪ ಅನುಕೂಲವಾಗುತ್ತಿತ್ತು ! ಏಕೆಂದರೆ, ಅವರೆಲ್ಲಾ, ತಣ್ಣಗಾಗಿದ್ದಾರೆ, ಅವರಿಗೆ ದುಡ್ಡಿಲ್ಲ ಅಷ್ಟೇ

ಶ್ರೀ ಜೆ ಸಿ ಮಾಧುಸ್ವಾಮಿ – ಬೇರೆ ಎಂ ಎಲ್ ಎ ಗಳಿಗೆ ಬುದ್ಧಿ ಬೇಡವೇ? ನೀವೂ ಎದ್ದೆದ್ದು ಒಂದೊಂದು ಟೀಕೆ ಮಾಡಿದ್ದರೆ, supplementary demands ನಲ್ಲಿ ದುಡ್ಡು ಜಾಸ್ತಿ ಮಾಡಿಕೊಡುತ್ತಿರಲಿಲ್ಲವೇ?

ಶ್ರೀ ಬಿ ಶಿವರಾಮು .– ರೇವಣ್ಣನವರಿಗೆ, ಒಂದಿಬ್ಬರಿಗೆ ಬಿಟ್ಟುಕೊಟ್ಟರು ಬಾಕಿಯವರು ಸುಮ್ಮನಿದ್ದಾರೆ ಅದಕ್ಕೆ ಅವರಿಗೆ ಸಿಗಲಿಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ – ತಾವು ಬಜೆಟ್ ಮೇಲೆ ಪ್ರತಿಕ್ರಿಯೆ ಮಾಡಬೇಕಾದರೆ, ಇದು Individualised Budget, ಹೆಚ್ಚು ಗಮನವನ್ನು ವ್ಯಕ್ತಿಗಳ ದೃಷ್ಟಿಯಿಂದ ತೆಗೆದುಕೊಂಡಿದ್ದಾರೆಂದು ಹೇಳಿದ್ದೀರೆಂದು ಹೇಳಿದ್ದೇನೆ ನಾನು ಇನ್ನೇನೂ ಹೇಳಿಲ್ಲ

ಶ್ರೀ ಎನ್ ಚಲುವರಾಯಸ್ವಾಮಿ – ಬಜೆಟ್ ಬಗ್ಗೆ ಕಾಮೆಂಟ್ ಆಗಲಿ, ಉಪಮುಖ್ಯಮಂತ್ರಿಯವರು ಬಜೆಟ್‌ನ್ನು ಸರಿಯಾಗಿ ಕೊಟ್ಟಿಲ್ಲ ಎಂದಾಗಲಿ ನಾನು ಹೇಳಲಿಲ್ಲ ಎಲ್ಲವನ್ನೂ ಸ್ವಾಗತ ಮಾಡಿ, ಸ್ವಲ್ಪ ವ್ಯತ್ಯಾಸ ಇದೆ, ಅದರ ಬಗ್ಗೆ ನಾವು ಅವರ ಹತ್ತಿರ ಮಾತನಾಡುತ್ತೇವೆಂದು ಹೇಳಿದ್ದೇವಷ್ಟೆ

ಶ್ರೀ ಜೆ ಸಿ ಮಾಧುಸ್ವಾಮಿ .– ನಾವು ದೂರದರ್ಶನದಲ್ಲಿ ನೋಡಿದ್ದೇವೆ ಅಷ್ಟು ಹೇಳಿದ್ದೇವೆ ನಿಮ್ಮ reaction ನೀವೇನೂ ಕೆಟ್ಟ ಮಾತಗಳನ್ನಾಡಿದ್ದೀರೆಂದು ನಾವೇನೂ ಹೇಳಿಲ್ಲ ಅದಕ್ಕೆ ಈಗ ನಾಗಮಂಗಲ ಬಂದು ಬಿಟ್ಟಿತು

ಶ್ರೀ ಎನ್ ಚಲುವರಾಯಸ್ವಾಮಿ – ಈ ಸರ್ಕಾರ ಎಷ್ಟು transparent ಆಗಿದೆ, at least ನಿಮ್ಮ ಕೈಯಿಂದ ನಾವು ತಪ್ಪು ಹೇಳಿಸಿಕೊಳ್ಳುವ ಮೊದಲೇ ಏನಾದರೂ ವ್ಯತ್ಯಾಸವಾಗಿದ್ದರೆ, ನಾವೇ ಅದನ್ನು ಮಾತನಾಡಿಕೊಂಡು ಸರಿಪಡಿಸಿಕೊಳ್ಳುತ್ತೇವೆಂದು ಹೇಳಿದ್ದೆ

ಶ್ರೀ ಬಿ ಶಿವರಾಮು – ಎಷ್ಟು transparent ಆಗಿದೆ ಎನ್ನುವುದಕ್ಕೆ ಇದೊಂದು ನಿದರ್ಶನ ನಿಮ್ಮ reaction ಗೆ ಈಗ supplementary Budget ನಲ್ಲಿ ಬಂದಿದೆ ಇಷ್ಟೇ ಆಗುವುದು

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಬೀದಿ ಜಗಳವನ್ನೆಲ್ಲಾ transparency ಎಂದು ಹೇಳಿಬಿಟ್ಟರೆ, ಇನ್ನು ಆ transparency Act ಗೆ ಬೆಲೆಯೇ ಇಲ್ಲ ಇದು ಇವರ ಬೀದಿ ಜಗಳ ಚಲುವರಾಯಸ್ವಾಮಿಯವರು ಬೀದಿ ಜಗಳವನ್ನೇ transparency Act ಗೆ ಹೋಲಿಕೆ ಮಾಡುತ್ತಿದ್ದಾರೆ ಹೀಗಾದರೆ, transparency Act ಏನಾಗಬೇಕು? ಹಾಗಾದರೆ, transparency Act ಏಕೆ ಬೇಕು? ಅದರ ಗತಿ ಏನಾಗಬೇಕು?

ಶ್ರೀ ಬಿ ಶಿವರಾಮು – ಈಗ Transparency Act ಎಂದರೆ, ಏನೆಂದು ಅವರನ್ನು ಕೇಳಬೇಕಾಗುತ್ತದೆ ಇವರ ದೃಷ್ಟಿಯಲ್ಲಿ ಅದೇನಾ? ಬೀದಿ ಜಗಳ ನಿಮ್ಮದು

(ಗೊಂದಲ)

ಶ್ರೀ ಎನ್ ಚಲುವರಾಯಸ್ವಾಮಿ – ಅದರ ಬಗ್ಗೆ ಒಳ್ಳೆಯದನ್ನು ಹೇಳಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಸರ್ಕಾರದಲ್ಲಿ ಹೊಂದಾಣಿಕೆ ಇಲ್ಲ ಎನ್ನತಕ್ಕಂಥಾದ್ದು, ಅದಕ್ಕೂ Transparency Actಗೂ ಏಕೆ ಸಂಬಂಧ ಬೆಳೆಸುತ್ತೀರಿ?

ಶ್ರೀ ಎನ್ ಚಲುವರಾಯಸ್ವಾಮಿ – ರಾಷ್ಟ್ರದಿಂದ ರಾಜ್ಯದವರೆಗೆ ಎಲ್ಲಾ ಪಕ್ಷಗಳಲ್ಲೂ ಹೊಂದಾಣಿಕೆ ಯಾವ ರೀತಿ ಇದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ ಆದರೆ, ಒಂದು ವಿನಂತಿ ಶಿವರಾಮಣ್ಣನವರೆ, ಒಂದು ನಿಮಿಷ ಕೇಳಿ ಒಳ್ಳೆಯ ಬಜೆಟ್‌ನ್ನು ಕೊಟ್ಟಿದ್ದೇವೆ ಆ ಬಜೆಟ್ ಬಗ್ಗೆ ಒಳ್ಳೆಯ ಅಭಿಪ್ರಾಯ, ಸಮಸ್ಯೆ ಇದ್ದರೂ ಹೇಳಿ

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ – That is what exactly we mean ಚಲುವರಾಯ ಸ್ವಾಮಿಯವರೆ, ಅದು ಒಳ್ಳೆಯ ಬಜೆಟ್ ಚಲುವರಾಯಸ್ವಾಮಿಯವರು ಇವತ್ತು ಹೇಳುತ್ತಿದ್ದಾರೆ ಆದರೆ, 16 ನೇ ತಾರೀಖು ಅದನ್ನು ಒಪ್ಪಲಿಲ್ಲ

ಶ್ರೀ ಎನ್ ಚಲುವರಾಯಸ್ವಾಮಿ – ಆವತ್ತೂ ಹೇಳಿದ್ದೇವೆ ಆವತ್ತೂ ಪತ್ರಿಕೆಯಲ್ಲಿ, electronic media ದಲ್ಲಿ ಹೇಳಿದ್ದೇವೆ ಸಾರಾಯಿ ರದ್ದು ಮಾಡಿರುವುದು, ಲಾಟರಿ ರದ್ದು ಮಾಡಿರುವುದು, ರೈತರಿಗೆ ಸಾಲ ಮನ್ನಾ ಮಾಡಿರುವುದು, ಬಡ್ಡಿ ಮನ್ನಾ ಮಾಡಿರುವುದು, ಈ ರೀತಿ ಪ್ರತಿಯೊಂದನ್ನು ಅವತ್ತೂ ಸ್ವಾಗತ ಮಾಡಿದ್ದೇವೆ ಅದರ ಬಗ್ಗೆ ಸ್ವಾಗತ ಮಾಡದೇ, ನಾವೆಂದೂ ಕಾಮೆಂಟ್ಸ್ ಮಾಡಿಲ್ಲ ದಯಮಾಡಿ ಅದನ್ನು ಮುಂದುವರೆಸುವುದು ಬೇಡ

ಶ್ರೀ ವಾಟಾಳ್ ನಾಗರಾಜ್ – ಹೋಗಲಿ, ಸ್ವಾಗತ ಮಾಡದಿರುವುದು ಯಾವುದು ಎಂಬುದನ್ನಾದರೂ ಹೇಳಿಬಿಡಿ!

ಶ್ರೀ ಬಿ ಶಿವರಾಮು – ಅವರು ಸ್ವಾಗತ ಮಾಡಿಲ್ಲ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಎಲೆಕ್ಟ್ರಾನಿಕ್ ಮೀಡಿಯಾದಲ್ಲಿ ಹೇಳಿರುವುದಕ್ಕೆ ದಾಖಲೆ ಇರುತ್ತದೆ ಪತ್ರಿಕೆಯಲ್ಲಿ ಬಂದಿರುವುದನ್ನು ಬೇಕಾದರೆ, ನೀವು deny

ಮಾಡಬಹುದು ದಯವಿಟ್ಟು ನೀವು ಅದನ್ನು ತರಿಸಿ ಹೇಳಿಬಿಡಿ ಪ್ರಾಮಾಣಿಕವಾಗಿ ಹೇಳಿಬಿಡಿ ಚಲುವರಾಯಸ್ವಾಮಿಯವರ ಮೇಲೆ ನನಗೆ ವಿಶ್ವಾಸವಿದೆ ಪ್ರಾಮಾಣಿಕವಾಗಿ electronic media ದಲ್ಲಿ ಬಂದಿರುವುದು, It is an Individualised Budget ಎಂದೇ ಅವರು ಹೇಳಿರತಕ್ಕಂಥಾದ್ದು

ಶ್ರೀ ಎನ್ ಚಲುವರಾಯಸ್ವಾಮಿ – ಮೀಡಿಯಾ ಒಂದು ಕಡೆ ಇಲ್ಲಿ ನಾನೇ ನಿಂತಿದ್ದೇನೆ ಹೇಳಿರತಕ್ಕಂಥವರು ನಾನೇ ಇಲ್ಲಿ ನಿಂತಿದ್ದೇನೆ ನಾನು ಹೇಳಿದ್ದು ಏನೆಂದರೆ, ಎಲ್ಲೋ ಒಂದು ಕಡೆ ಸ್ವಲ್ಪ ವೈಯಕ್ತಿಕ ಹಿತಾಸಕ್ತಿಯನ್ನು ತೋರಿಸಿದಂತಿದೆ ಅದರ ಬಗ್ಗೆ ನಾನು ಮಾತನಾಡುತ್ತೇನೆಂದು ನಾನು ಹೇಳಿದ್ದು

ಶ್ರೀ ಬಿ ಶಿವರಾಮು – ನಿಮಗೀಗ ಸಾಕೇ?

(ಗೊಂದಲ)

ಶ್ರೀ ಎನ್ ಚಲುವರಾಯಸ್ವಾಮಿ – ಶಿವರಾಮ್‌ಜಿ, ನಾವು ಸದನದಲ್ಲಿ ಸುಳ್ಳನ್ನು ಹೇಳುವ ಅವಶ್ಯಕತೆ ಇಲ್ಲ ಹಾಗೆ ಸುಳ್ಳು ಹೇಳಿ ನಿಮ್ಮಿಂದ ತೆಗೆದುಕೊಳ್ಳಬೇಕಾದ್ದೇನೂ ಇಲ್ಲ ನಾನು ಅವರ ಜೊತೆ ಮಾತನಾಡಿದ್ದೇನೆ

ಶ್ರೀ ಎನ್ ಧರ್ಮಸಿಂಗ್ – ಏಕೆ ಮಾತನಾಡುತ್ತೀರಿ ?

ಶ್ರೀ ಎನ್ ಚಲುವರಾಯಸ್ವಾಮಿ – ಯಾಕೆ ಮಾತನಾಡುತ್ತೀರಿ ಎಂದರೆ, ನಿಮ್ಮವರು ಕೇಳಿದರು ಅದಕ್ಕೆ ಮಾತನಾಡಿದೆ ಕೇಳದಿದ್ದರೆ, ನಾವೇಕೆ ಮಾತನಾಡುತ್ತಿದ್ದೆವು? ಬಜೆಟ್ ಬಗ್ಗೆ ಹೇಳಲಿ ಈಗ ನಿಮಗೆ ಏನಾಗುತ್ತದೆಂದರೆ, ಏನೂ ಸಿಗದಿದ್ದಾಗ ಇದರ ಬಗ್ಗೆ ಸುಮ್ಮನೆ ಮೊಸರಿನಲ್ಲಿ ಕಲ್ಲು ಹುಡುಕುವ ಕೆಲಸ ಮಾಡುವುದರ ಬದಲು, ಹೃದಯ ಶ್ರೀಮಂತಿಕೆ ಇದ್ದರೆ, ಸ್ವಾಗತ ಮಾಡಿ ಇಲ್ಲದಿದ್ದರೆ, ವಿರೋಧ ಮಾಡಿ ಜನರು ತೀರ್ಮಾನ ಮಾಡುತ್ತಾರೆ ಯಾವ ಬಜೆಟ್ ಸರಿ, ತಪ್ಪು ಎಂದು ತೀರ್ಮಾನ ಮಾಡುತ್ತಾರೆ

ಶ್ರೀ ಎನ್ ಧರ್ಮಸಿಂಗ್ – 16 ನೇ ತಾರೀಖು ಯಡಿಯೂರಪ್ಪನವರು ಬಜೆಟ್ ಮಂಡನೆ ಮಾಡಿದರು ಕರ್ನಾಟಕ ರಾಜ್ಯದಲ್ಲಿ ನಾವು ಎಷ್ಟೋ ಸಮ್ಮಿಶ್ರ

ಸರ್ಕಾರಗಳನ್ನು ನೋಡಿದ್ದೇವೆ ಮರು ದಿವಸವೇ ಬಿ ಜೆ ಪಿ ಅಜೆಂಡಾ ಎಂದು ಚಲುವರಾಯಸ್ವಾಮಿಯವರು ಹೇಳಿದ್ದಾರೆ ಬಂಡೆಪ್ಪಾ ಕಾಶೆಂಪೂರ್‌ರವರು ಹೇಳಿದ್ದಾರೆ ಮತ್ತು ರೇವಣ್ಣನವರೂ ಹೇಳಿದ್ದಾರೆ ಅದರ ಬಗ್ಗೆ ಪತ್ರಿಕೆಯಲ್ಲಿ ಬಂದಾಗ deny ಮಾಡಬೇಕಾಗಿತ್ತು, ಇವತ್ತು ಅದರ ಬಗ್ಗೆ ಹೇಳುತ್ತಿಲ್ಲ ಶಿವರಾಮುರವರು ಏನು ಹೇಳುತ್ತಿದ್ದಾರೆಂದರೆ, supplementary Budget ನಲ್ಲಿ ನೀವು ನಾಗಮಂಗಲಕ್ಕೆ ಏನು ದುಡ್ಡು ತೆಗೆದುಕೊಂಡಿದ್ದೀರಲ್ಲ, ಅದರ ಬಗ್ಗೆ ಹೇಳಿದರು ನಾಗಮಂಗಲಕ್ಕೆ ದುಡ್ಡು ತೆಗೆದುಕೊಂಡ ನಂತರವೇ ನೀವು ಮೇಲೆ ಸುಮ್ಮನೆ ಆಗಿದ್ದು

ಶ್ರೀ ಎನ್ ಚಲುವರಾಯಸ್ವಾಮಿ .– ನಾನು ಆವತ್ತೇ ಪತ್ರಿಕೆಗಳಲ್ಲಿ ಬಂದಿರುವುದನ್ನು deny ಮಾಡಿದ್ದೇನೆ ದಯವಮಾಡಿ ನೀವು ಅರ್ಥ ಮಾಡಿಕೊಳ್ಳಬೇಕು 19 ನೇ ತಾರೀಖು ಯುಗಾದಿ ಹಬ್ಬದ ದಿವಸವೇ ನಾನು ಪತ್ರಿಕೆಗಳಲ್ಲಿ, electronic media ದಲ್ಲಿ deny ಮಾಡಿದ್ದೇನೆ ನೀವು ನಿನ್ನೆ ವಿರೋಧ ವ್ಯಕ್ತಪಡಿಸಿದ್ದೀರಲ್ಲ ಎಂದು ಕೇಳಿದಾಗ, ಏಟ್ರಿಯಾ ಹೋಟೆಲ್‌ನಲ್ಲಿ electronic media ದವರು ನನ್ನನ್ನು ಕೇಳಿದಾಗ, " ಇಲ್ಲ, ನಾವು ವಿರೋಧ ಮಾಡಿಲ್ಲ ಇಂತಿಂತಹ ಸ್ವಾಗತ ಮಾಡಿದ್ದೇವೆ ಸಣ್ಣ ಪುಟ್ಟ ವ್ಯತ್ಯಾಸವೇನಾದರೂ ಇದ್ದರೆ, ಅದನ್ನು ಸಮನ್ವಯ ಸಮಿತಿಯನ್ನು ಮುಖ್ಯಮಂತ್ರಿಯವರು, ಉಪಮುಖ್ಯಮಂತ್ರಿಯವರು ಕರೆಯುತ್ತಾರೆ, ಅಲ್ಲಿ ನಾವು ಮಾತನಾಡುತ್ತೇವೆ," ಎಂದು ಹೇಳಿದ್ದೇನೆ ನಾವು ಒಟ್ಟಾರೆ ಬಜೆಟ್‌ನ್ನು ಸ್ವಾಗತ ಮಾಡಿದ್ದೇವೆಯೇ ವಿನಃ ವಿರೋಧ ಮಾಡಿಲ್ಲವೆಂದು ನಾನು ಸ್ಪಷ್ಟವಾಗಿ deny ಮಾಡಿದ್ದೇನೆ

ಅಧ್ಯಕ್ಷರು – ಮಾನ್ಯ ಮಾಧುಸ್ವಾಮಿಯವರೆ, ಈಗ 1 ಗಂಟೆ 35 ನಿಮಿಷವಾಯಿತು

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಅಧ್ಯಕ್ಷರೆ, ನಾವು ಮಾತನಾಡಬೇಕಾಗಿದೆ

ಶ್ರೀ ಜೆ ಸಿ ಮಾಧುಸ್ವಾಮಿ '– ಮಧ್ಯಾಹ್ನದ ಮೇಲೆ ಮಾತನಾಡುತ್ತೇವೆ

ಅಧ್ಯಕ್ಷರು – ಈಗ ಸಣ್ಣ ಕೈಗಾರಿಕಾ ಸಚಿವರು ಭೋಜನಕ್ಕೆ ಏರ್ಪಾಟು ಮಾಡಿದ್ದಾರೆ

ಶ್ರೀ ಸಿದ್ಧರಾಮಯ್ಯ – ಮಾನ್ಯ ಅಧ್ಯಕ್ಷರೆ, ಸ್ವಲ್ಪ ಕೇಳಿ supplementary demands ನಲ್ಲಿ ದೊಡ್ಡ ಮೊತ್ತ ಇಟ್ಟುಬಿಟ್ಟು, ಅದರ ಬಗ್ಗೆ ಮಾತನಾಡಲೇಬಾರದು ಹಾಗೆಯೇ pass ಆಗಬೇಕೆಂದರೆ ಹೇಗೆ?

ಅಧ್ಯಕ್ಷರು – ಮಾತನಾಡಬಾರದೆಂದು ಹೇಳುತ್ತಿಲ್ಲ

ಶ್ರೀ ಸಿದ್ಧರಾಮಯ್ಯ .– ಮತ್ತೆ ಮಾತನಾಡಬೇಕಾಗುತ್ತದೆ ಸುಮಾರು ಆರು ಸಾವಿರ ಕೋಟಿ ರೂಪಾಯಿಗಳ supplementary demands ಆಗಿರುವುದರಿಂದ ಮಾತನಾಡಬೇಕು

ಅಧ್ಯಕ್ಷರು – ಮಾತನಾಡಿ ಭೋಜನ ಕೂಟಕ್ಕೆ ತಾವೆಲ್ಲರೂ ದಯಮಾಡಿಸಬೇಕು ಭಾರಿ ಕೈಗಾರಿಕೆ ಮತ್ತು ಸಣ್ಣ ಕೈಗಾರಿಕೆ ಸಚಿವರು ವಿನಂತಿಸಿದ್ದಾರೆ ಆದ್ದರಿಂದ, ಭೋಜನದ ನಂತರ ಚರ್ಚೆಗೆ ತೆಗೆದುಕೊಳ್ಳೋಣ ಈಗ ಸದನವನ್ನು 2–30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ

(ಸದನವು 1 ಗಂಟೆ 29 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ಮತ್ತೆ ಮಧ್ಯಾಹ್ನ 2 30 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ 2 ಗಂಟೆ 54 ನಿಮಿಷಕ್ಕೆ ಸೇರಿತು, ಸಭಾಧ್ಯಕ್ಷರು ಪೀಠದಲ್ಲಿದ್ದರು)

(B) 25216

3 ವಿತ್ತೀಯ ಕಾರ್ಯಕಲಾಪ

2006–07 ನೇ ಸಾಲಿನ ಪೂರಕ ಅಂದಾಜುಗಳು(ಎರಡನೇ ಹಾಗೂ ಅಂತಿಮ ಮುಂದುವರೆದ ಕುರಿತು ಚರ್ಚೆ)

ಶ್ರೀ ಜೆ ಸಿ ಮಾಧುಸ್ವಾಮಿ – ಮಾನ್ಯ ಅಧ್ಯಕ್ಷರೆ, ನಾನು ಪೂರಕ ಅಂದಾಜುಗಳ ಮೇಲೆ ಮಾತನಾಡುತ್ತಾ ಹೇಳುತ್ತಿದ್ದೆ, ನಮ್ಮ ಮುಂದೆ ಪೂರಕ ಅಂದಾಜಾಗಿ ಬಂದಿಲ್ಲ, ಅಧಿಕ ಅಥವಾ ಹೆಚ್ಚುವರಿ ಅಧಿಕ ಅಥವಾ ಹೆಚ್ಚುವರಿ ಅಂದಾಜು ಎಂದು ಹೇಳಬಹುದು ಯಾರ್‍ಯಾರಿಗೆ ಡಿಮ್ಯಾಂಡ್‌ಗಳು ಜಾಸ್ತಿ ಇವೆ, ಅದೆಲ್ಲಾ ಇಲ್ಲಿ ಬಂದು ಏನು ಎಮರ್ಜೆನ್ಸಿಗೆ, ಎಕ್ಸಿಜೆನ್ಸಿಗೆ ಪೂರಕ ಅಂದಾಜು ಎಂದು ಹೇಳಬೇಕಾಗಿತ್ತು, ಅದನ್ನು ಇಟ್ಟಿಲ್ಲ ಸನ್ಮಾನ್ಯ ಉಪಮುಖ್ಯಮಂತ್ರಿಗಳೇ ಕೆಲವು ಕಡೆ ನಾವು ತೀಕ್ಷ್ಣವಾಗಿ ಮಾತನಾಡಬೇಕಾಗುತ್ತದೆ ಈ ವರ್ಷದಿಂದ ನೀವು ಲಾಟರಿಯನ್ನು ಬ್ಯಾನ್ ಮಾಡುತ್ತೇವೆಂದು ಹೇಳಿದ್ದೀರಿ ತಾವು 636 ಪ್ಲಸ್ 568 ಲಕ್ಷ ಹೆಚ್ಚುವರಿಯಾಗಿ ಇಡುತ್ತಿದ್ದೀರಿ ಲಾಟರಿಯನ್ನು ಕಂಪ್ಲಿಟ್ಲಿ ನಿಷೇಧ ಮಾಡುತ್ತಿದ್ದೇವೆಂದು ಹೇಳಿದ್ದೀರಿ ಇದನ್ನು ಸ್ಟೇಟ್ ಪಾಲಿಸಿ ಎಂದು ನೀವೇ ಬಜೆಟ್‌ನಲ್ಲಿ ಹೇಳಿಬಿಟ್ಟಿದ್ದೀರಿ ಸುಮಾರು 12 ಕೋಟಿ ರೂಪಾಯಿಗಳನ್ನು ಅಲ್ಲಿ ತಾವು ನಾನ್ ಪ್ಲಾನ್‌ನಲ್ಲಿ ಪ್ರೊವೈಡ್ ಮಾಡುತ್ತಿದ್ದೀರಿ, ಏಕೆಂದು ನನಗೆ ಗೊತ್ತಿಲ್ಲ, ತಾವು ಹೇಳಬೇಕು ಆಮೇಲೆ ರಾಜ್ಯ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಬಹಳ ನಿರ್ದಿಷ್ಟವಾಗಿ ಡೈಲಿ ವೇಜ್ ಮೇಲೆ ಅಪಾಯಿಂಟ್‌ಮೆಂಟ್ ಮಾಡುವುದಕ್ಕೆ ಅವಕಾಶವಿಲ್ಲವೆಂದು ಹೇಳಿದೆ ತಾವು ಈ ಪುಸ್ತಕದಲ್ಲಿ ಪ್ರಿಂಟ್ ಮಾಡಿ, ಡೈಲಿ ವೇಜ್ ಕೊಡುವುದಕ್ಕೆ ನಾನು ಹಾರ್ಟಿಕಲ್ಚರ್ ಇಲಾಖೆಗೆ 14–15 ಲಕ್ಷ ಖರ್ಚು ಮಾಡುತ್ತಿದ್ದೇನೆಂದು ಹೇಳುತ್ತಿದ್ದೀರಿ It is an illegal act ನಿಮಗೆ ಡೈಲಿ ವೇಜ್ ಮೇಲೆ ಅಪಾಯಿಂಟ್‌ಮೆಂಟ್ ಮಾಡುವುದಕ್ಕೆ ಅಧಿಕಾರವಿಲ್ಲ, ನೀವು ಡೈಲಿ ವೇಜ್ ಅನ್ನು ಹೇಗೆ ಕೊಡುತ್ತಿರೆಂದು ಪ್ರಶ್ನೆ ಮಾಡಬೇಕಾಗುತ್ತದೆ ಏಕೆಂದರೆ ತಾವು ಇದನ್ನು ಇಲ್ಲಿ ಹೇಳಿದ್ದೀರಿ ಆಮೇಲೆ ಇದಕ್ಕೆ ಒಂದು ಮಾಹಿತಿಯನ್ನು ತಾವು ಕೊಡಬೇಕು ಹರದನಹಳ್ಳಿ ಗ್ರಾಮದ ಪಶುವೈದ್ಯಕೀಯ ಸಂಸ್ಥೆಯ ಕಟ್ಟಡ ನಿರ್ಮಾಣ ಕಾಮಗಾರಿಗೆ ಹೆಚ್ಚುವರಿಯಾಗಿ 17 11 ಲಕ್ಷ ಕೊಡುತ್ತೇವೆಂದು ಹೇಳಿದಿರಿ What is the actual estimate of

that building? ಒಂದು ರೂರಲ್ ವೆಟರ್‌ನರಿ ಹಾಸ್ಪಿಟಲ್ ಅನ್ನು ಎಷ್ಟು ಲೆಕ್ಕದಲ್ಲಿ ಕಟ್ಟಿಸುವುದಕ್ಕೆ ಹೊರಟಿದ್ದೀರಿ? ಹೆಚ್ಚುವರಿಯಾಗಿ 17 ಲಕ್ಷ ಕೊಡುತ್ತೇವೆಂದರೆ, ಹೆಚ್ಚುವರಿ ಮಾಹಿತಿ ಇದರಲ್ಲಿ ಎಲ್ಲಾದರೂ ಇದೆಯಾ ಎಂದು ಹುಡುಕಿದೆ ತಾವು ವೆಟರ್‌ನರಿ ಮಿನಿಸ್ಟರ್ ಆಗಿದ್ದವರು, 17–18 ಲಕ್ಷಕ್ಕಿಂತ ದೊಡ್ಡದಾಗಿ ರೂರಲ್ ವೆಟರ್‌ನರಿ ಡಿಸ್ಪೆನ್ಸರಿಗೆ ಹೆಚ್ಚುವರಿಯಾಗಿ ಅಷ್ಟು ಕೊಡುತ್ತೇವೆಂದು ಹೇಳಲಾಗಿದೆ ಇದರಲ್ಲಿ ಪ್ರಮುಖವಾಗಿ ನಾನು ತಮ್ಮನ್ನು ಕೇಳಬಯಸುತ್ತೇನೆ, ನಾನೊಂದು ಸಲ ಇಲ್ಲಿ ಈ ಬಗ್ಗೆ ಮಾತನಾಡಿದ್ದೇನೆ ಈ ಫೈರ್ ಸ್ಟೇಷನ್ ಮಾಡುವುದಕ್ಕೆ ಜನರಲ್ ಇನ್ಸೂರೆನ್ಸ್ ಕಂಪನಿಯಿಂದ ನಿಮಗೆ 25 ಕೋಟಿ ರೂಪಾಯಿಗಳ ವಂತಿಕೆಯನ್ನು ಕೊಟ್ಟಿದ್ದರು ಅಥವಾ ನಿಮಗೆ ದಾನ ಕೊಟ್ಟಿದ್ದರೆಂದು ಇಟ್ಟುಕೊಳ್ಳಿ ಇವತ್ತು ಆ 25 ಕೋಟಿ ರೂಪಾಯಿ ಎಲ್ಲಿ ಹೋಯಿತೋ ಗೊತ್ತಿಲ್ಲ ಆ ಹಣವನ್ನು ಇವರು ಫೈರ್ ಸ್ಟೇಷನ್ ಮಾಡಲೇ ಇಲ್ಲ ಆ ದುಡ್ಡನ್ನು ಏನು ಮಾಡಿದಿರಿ? ಆ ದುಡ್ಡನ್ನು ತೆಗೆದುಕೊಂಡು ಬಂದು ಈ ವರ್ಷವೇನಾದರು ನಮಗೆ ಹೆಚ್ಚಾಗಿ ಫೈರ್ ಸ್ಟೇಷನ್ ಕೊಡುತ್ತೀರಾ ಹೇಗೆ? ತಾವು ಉತ್ತರವನ್ನು ಹೇಳಬೇಕಾಗುತ್ತದೆ ನಾನು ಕಳೆದ ವರ್ಷ ಇಲ್ಲಿ ಸ್ಪಷ್ಟವಾಗಿ ಕೇಳಿದ್ದೆ

ಶ್ರೀ ಎಂ ಮಲ್ಲಿಕಾರ್ಜುನ್ ಖರ್ಗೆ .– ಬಿಜೆಪಿ ಎಂದರೆ ಫೈರ್ ಸ್ಟೇಷನ್ ಇದ್ದ ಹಾಗೆ ಮತ್ತೊಂದು ಫೈರ್ ಸ್ಟೇಷನ್ ಬೇಕಾ?

ಶ್ರೀ ಜೆ ಸಿ ಮಾಧುಸ್ವಾಮಿ '– ಯಾರೋ ಕೊಟ್ಟಂತಹ ದುಡ್ಡನ್ನು ಖರ್ಚು ಮಾಡಲಿಲ್ಲ, ಎಲ್ಲಿ ಹೊಯಿತೆಂದು ಹೇಳಲಿ ಎಂದು ಕೇಳಿದ್ದು, ಫೈರ್ ಸ್ಟೇಷನೊ, ಪೆಟ್ರೋಲ್ ಬಂಕೊ ನಾನು ಅದರ ಚರ್ಚೆಗೆ ಹೋಗುವುದಿಲ್ಲ ನಾವು ಫೈರ್ ಸ್ಟೇಷನ್ ಕೇಳಿದ್ದು ಹಚ್ಚಿಕೊಂಡಿರುವ ಬೆಂಕಿಯನ್ನು ಆರಿಸುವುದಕ್ಕೆ ಏನಾದರು ಮಾಡುತ್ತೀರಾ ಎಂದು ಕೇಳಿದ್ದು ಇನ್ನು ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಪೂರಕ ಅಂದಾಜಿನಲ್ಲಿ ಒಂದು ಇಲಾಖೆಗೆ ಎಷ್ಟು ದುಡ್ಡನ್ನು ಕೊಡಬಹುದು ಅಧ್ಯಕ್ಷರು ಒಂದು ಸಲ ನೋಡಬೇಕು, ನಾವು ಏತಕ್ಕೆ ಇಷ್ಟೊಂದು ಮಾತನಾಡಬೇಕಾಗಿದೆ ಎಂದರೆ, ಎಷ್ಟು ಕೊಡುತ್ತಿದ್ದೇವೆಂದು ಅವರು ಮೊದಲನೇ ಪುಟಗಳಲ್ಲೇ ಕೊಟ್ಟುಬಿಟ್ಟಿದ್ದಾರೆ ಗ್ರಾಮೀಣಾಭಿವೃದ್ಧಿ ಪಂಚಾಯತ್

ರಾಜ್ 200 ಕೋಟಿ, ಶಿಕ್ಷಣ 388 ಕೋಟಿ ವಾಣಿಜ್ಯ ಮತ್ತು ಕೈಗಾರಿಕೆ 646 ಕೋಟಿ, ನಗರಾಭಿವೃದ್ಧಿ 157 ಕೋಟಿ, ಲೋಕೋಪಯೋಗಿ 537 ಕೋಟಿ, ಜಲಸಂಪನ್ಮೂಲ 1043 13 ಕೋಟಿ, ಇಂಧನ 435 ಕೋಟಿ, ಇದು ಪೂರಕ emergency/exigency ಗೆ ಕೊಡುತ್ತಿರುವ ಹಣ

ಶ್ರೀ ಅಮರೇಗೌಡ ಲಿಂಗನಗೌಡ ಬೈಯ್ಯಾಪುರ – ಮಾಧುಸ್ವಾಮಿಯವರೇ 5–6 ವರ್ಷಗಳ ಹಿಂದಿನ ಬಜೆಟ್‌ಗಿಂತ ಎಷ್ಟು ಪರ್ಸೆಂಟ್ ಪೂರಕ ಅಂದಾಜು ಹೆಚ್ಚಾಗಿರಬಹುದು ಉದಾಹರಣೆಗೆ 2001 ರಿಂದ ತೆಗೆದುಕೊಂಡರೆ ಇಲ್ಲಿಯವರೆಗೆ ಎಷ್ಟು ಪರ್ಸೆಂಟ್ ಹೆಚ್ಚಾಗಿರಬಹುದು?

ಶ್ರೀ ಜೆ ಸಿ ಮಾಧುಸ್ವಾಮಿ – ಬೈಯ್ಯಾಪುರರವರೇ ಕನಿಷ್ಟ 20–15 ಪಟ್ಟು ಜಾಸ್ತಿಯಾಗಿರಬಹುದು 600 ಕೋಟಿ, 700 ಕೋಟಿ ಪೂರಕ ಬಜೆಟ್ ಅನ್ನು ನಾವು ಇಲ್ಲಿ ಕುಳಿತುಕೊಂಡು ಏನ್ರಿ 600 ಕೋಟಿ, 700 ಕೋಟಿ ತರುತ್ತಿದ್ದೀರೆಂದು ಬಹಳ ಟೀಕೆ ಮಾಡಿದ್ದೇವೆ ಇವತ್ತು ನಾವು 6000 ಕೋಟಿ ಚರ್ಚೆ ಮಾಡುತ್ತಿದ್ದೇವೆ

ಶ್ರೀ ಅಮರೇಗೌಡ ಲಿಂಗನಗೌಡ ಬೈಯ್ಯಾಪುರ – ಈಗ ಕೋಟಿ ಎಂದರೆ, ಸಂಪನ್ಮೂಲ ಜಾಸ್ತಿ ಇದ್ದಾಗ ಜಾಸ್ತಿ ಇರಬಹುದು ಸಂಪನ್ಮೂಲ ಜಾಸ್ತಿಯಾದಾಗ ಜಾಸ್ತಿ ಇರಬಹುದು ನನಗೆ ತಿಳಿದ ಮಟ್ಟಿಗೆ ಮಾನ್ಯ ಎಸ್ ಎಂ ಕೃಷ್ಣರವರು ಇದ್ದಾಗ 18 ರಿಂದ 20% ಪೂರಕ ಅಂದಾಜು ಇತ್ತು ಎಂದು ತಿಳಿದುಕೊಂಡಿದ್ದೇನೆ

ಶ್ರೀ ಜೆ ಸಿ ಮಾಧುಸ್ವಾಮಿ – ನೀವು original budget ನ inflation rate ತೆಗೆದುಕೊಂಡು, escalation calculation ಮಾಡಬೇಕಾಗಿರುವುದು Supplementary demands ಅಲ್ಲ ಇದು ಇರುವುದು emergency ಗೆ ನಿಮ್ಮ ಊರಲ್ಲಿ ಏನೋ ಪ್ರವಾಹ ಆಯಿತು ಖರ್ಚು ಮಾಡಬೇಕಾಗಿತ್ತು, ಆ fund ನಿಂದ ಕೊಟ್ಟರು ಇಲ್ಲಿ ಇಟ್ಟುಕೊಳ್ಳಬೇಕಾಗಿತ್ತು ಈಗ ನಾವು ಕೇಳುತ್ತೇವೆ ಈ 6000 ಕೋಟಿ ರೂಪಾಯಿ ಬಜೆಟ್‌ನಲ್ಲಿ ಎಲ್ಲಿ ತೋರಿಸಿದ್ದೀರಿ, ಬಜೆಟ್‌ನಲ್ಲಿ ನಿಮ್ಮ ರೆವಿನ್ಯೂ ಎಲ್ಲಿ ಬರುತ್ತದೆ ಎಂದು ತೋರಿಸಬೇಕಾಗುತ್ತದೆ ನಾವು ಇಲ್ಲಿ ಕೇಳುವುದಕ್ಕಾಗುತ್ತಾ? ಅಲ್ಲಿ ನೀವು ಅಷ್ಟೊಂದು ಹಣ ಇಟ್ಟವರು ಮತ್ತೇ ಬಂದು 6000 ಕೋಟಿ ಇಲ್ಲಿ ಪೂರಕ ಬಜೆಟ್‌ನಲ್ಲಿ ಬೇಡಿಕೆ ಇಡುತ್ತೀರಿ ಎಂದರೆ ದುಡ್ಡು ಎಲ್ಲಿಂದ ಹೊಂದಾಣಿಕೆ ಆಗುತ್ತದೆ ಎನ್ನುವುದು ಬೇಕು

ಶ್ರೀ ಬಿ ಎಸ್ ಯಡಿಯೂರಪ್ಪ – ಮಾನ್ಯ ಅಧ್ಯಕ್ಷರೇ ಮಾತನಾಡಿದ ಎಲ್ಲ ಹಿರಿಯ ಸದಸ್ಯರು ಈ ಪೂರಕ ಅಂದಾಜು ಬಹಳ ದೊಡ್ಡದು ಇದೆ ಹೇಗಾಯಿತು ಎಂದು ಪ್ರಶ್ನೆ ಮಾಡುತ್ತಿದ್ದಾರೆ ನಿಮಗೆ ಅಂಕಿ ಅಂಶ ಹೇಳುತ್ತೇನೆ 2004–05 ಮತ್ತು 2005–06 ನೇ ಸಾಲಿನಲ್ಲಿ ಮೂರು ಪೂರಕ ಅಂದಾಜುಗಳನ್ನು ಮಂಡಿಸಲಾಗಿದೆ ಈ ವರ್ಷ 2006–07 ರಲ್ಲಿ ಕೇವಲ ಎರಡು ಪೂರಕ ಅಂದಾಜುಗಳನ್ನು ನಾವು ಮಂಡಿಸುತ್ತಿದ್ದೇವೆ 2002–03 ನೇ ಸಾಲಿನಲ್ಲಿ ಪೂರಕ ಅಂದಾಜು ಸಂಚಿತ ನಿಧಿ, ಶೇ 18 11, 2003–04 ನೇ ಸಾಲಿನಲ್ಲಿ ಶೇ 28 25, 2004–05 ನೇ ಸಾಲಿನಲ್ಲಿ ಶೇ 10 23, 2005–06 ನೇ ಸಾಲಿನಲ್ಲಿ 12 05 ಪ್ರಸ್ತುತ ಆರ್ಥಿಕ ವರ್ಷದಲ್ಲಿ ಪೂರಕ ಅಂದಾಜು ಸಂಚಿತ ನಿಧಿ ಶೇ 17 2 ರಷ್ಟು ಇದೆ ಕಳೆದ ನಾಲ್ಕು ವರ್ಷಗಳಿಗೆ ಹೋಲಿಸಿದರೆ ಇದು ಅಂತಹ ಹೆಚ್ಚಳ ಅಲ್ಲ ಈ ವರ್ಷ ಸುಮಾರು 4,000 ಕೋಟಿ ರೂಪಾಯಿಗಳು ಹೆಚ್ಚುವರಿ ಸಂಪನ್ಮೂಲ ಲಭ್ಯ ಇದೆ ಹಿಂದಿನ ಯಾವುದೇ ಪೂರಕ ಅಂದಾಜುಗಳು ಮಂಡಿಸಿದ ಸಂದರ್ಭದಲ್ಲಿ ಇಂತಹ ಹೆಚ್ಚುವರಿ ಸಂಪನ್ಮೂಲದ ಲಭ್ಯತೆ ಇರಲಿಲ್ಲ ಆದ್ದರಿಂದ ಕಳೆದ 4–5 ವರ್ಷಗಳಿಗೆ ನೀವು ಹೋಲಿಕೆ ಮಾಡಿದಾಗ ಇದು ಅಂತಹ ಹೆಚ್ಚಳ ಅಲ್ಲವೆಂದು ಸನ್ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ – ಬಜೆಟ್ ಇಟ್ಟು ಬಹಳ ದಿವಸಗಳಾಗಿ ನಿಮಗೆ ಅನಿರೀಕ್ಷಿತವಾಗಿ ರೆವಿನ್ಯೂ ಜಾಸ್ತಿ ಕಂಡು ನಿಮಗೆ ಅನಿರೀಕ್ಷಿತವಾಗಿ ಕೇಂದ್ರಸರ್ಕಾರದ ಅನುದಾನಗಳು ಹೊಸ ಹೊಸ ಯೋಜನೆಗಳಲ್ಲಿ ಮ್ಯಾಚಿಂಗ್ ಗ್ರ್ಯಾಂಟ್ ಬರುವುದು ಕಂಡು ಅನಿರೀಕ್ಷಿತವಾಗಿ emergency ಬಂದು ಪ್ರಮಾಣವನ್ನು ಪೂರಕ ಅಂದಾಜಿನಲ್ಲಿ ಲೆಕ್ಕ ಹಾಕುವುದಕ್ಕಾಗುವುದಿಲ್ಲ, ಇಷ್ಟು ಪರ್ಸೆಂಟ್ ನೀವು original budget ಮೇಲೆ Supplementary demands ಇಟ್ಟುಕೊಳ್ಳಬಹುದು ಎಂದು ನಿಮ್ಮ ಅಧಿಕಾರಿಗಳು ಹೇಳಿದ ಹಾಗೆ ಇಡುವುದಕ್ಕಾಗಿ ಇಟ್ಟಿರುವ ಹೆಚ್ಚುವರಿ ಬಜೆಟ್ ಅಲ್ಲ ಇದು This is not an additional or excessive budget placed before the Assembly ನಮ್ಮ ಗಮನಕ್ಕೆ ಬಾರದ ಹಾಗೆ ಬಜೆಟ್ ಮಾಡಬೇಕಾದರೆ, ನಮ್ಮ ಗಮನ ಮೀರಿ ಅಥವಾ ನಮ್ಮ ಕ್ಷೇತ್ರದ ವ್ಯಾಪ್ತಿ ಮೀರಿ

ಏನಾದರೂ ಖರ್ಚು ಆಗಿದ್ದರೆ ಅದನ್ನು ಪೂರಕ ಬಜೆಟ್‌ನಲ್ಲಿ ಕೇಳುವುದಕ್ಕೋಸ್ಕರ ತಾವು ಈ ಆಯುಧವನ್ನು ಇಟ್ಟುಕೊಂಡಿರುವುದು ಯಾರ್‍ಯಾರು ಎಷ್ಟೆಷ್ಟನ್ನು ಕೇಳಿದರು, ಅವತ್ತಿನ ಪರಿಸ್ಥಿತಿ ಎಷ್ಟು ಇತ್ತು ಎಂಬುದರ ಬಗ್ಗೆ ನಾವು ಇಲ್ಲಿ ನಿಂತು ಇಂದು ವಿಶ್ಲೇಷಣೆ ಮಾಡುವುದಕ್ಕಾಗುವುದಿಲ್ಲ inflation ಕೂಡ ಅಷ್ಟೆ ನಿಮ್ಮ ಬಜೆಟ್ ಅಷ್ಟು ಕೋಟಿ ಇಷ್ಟು ಕೋಟಿ ಇಡುತ್ತೀರಿ, ತಾವು ಸ್ವಲ್ಪ ಮಟ್ಟಿಗೆ economics ಕೇಳಿ inflation ಆಗುವುದು ಬಿಟ್ಟರೆ, money value ಜಾಸ್ತಿಯಾಗುತ್ತಿಲ್ಲ ನಿನ್ನೆ ದಿವಸ ನಿಮ್ಮ ಬಳಿ ಇದ್ದ 10 ರೂಪಾಯಿಗೆ ಇವತ್ತು 11 1/4 ರೂಪಾಯಿ ಬಡ್ಡಿ ಸೇರಿಸಿಕೊಂಡು money value 11 1/4 ರೂಪಾಯಿ, ಆದರೆ ನಾವು ಕರೆಯುವುದು 10 ರೂಪಾಯಿಯೇ ನಾನು ಅನೇಕ ಸಲ ಹೇಳಿದ್ದೇನೆ, one who invests on his own ಅದು asset ಆಗುತ್ತದೆ Who borrows and invests ಅದು liability ಆಗುತ್ತದೆ We are borrowing and investing Original budget ಮೇಲೆ ನಾನು ಮಾತನಾಡುವಾಗ ತಮಗೆ ಹೇಳುತ್ತೇನೆ ತಾವು-repayment ಕಡಿಮೆ ಮಾಡಿದ್ದರಿಂದ ಎಷ್ಟು ತೊಂದರೆಯಾಗುತ್ತಿದೆ, borrowings ಎಲ್ಲಿ ಹೆಚ್ಚಾಗಿದೆ, we are ready to discuss ಅದಕ್ಕೇ ನಾನು ಮೊದಲೇ ಹೇಳಿದೆ ಬಜೆಟ್ ಚರ್ಚೆಯಾಗದೇ ಇದನ್ನು ಮಾಡುವುದು ಕಷ್ಟವಾಗುತ್ತದೆ ಎಂದು when you borrow and invest, it will be the liability of the State We have no our funds to invest, It cannot be called as an investment on asset ಇಲ್ಲಿ ನಮ್ಮ ಪ್ರಶ್ನೆ ಇರುವುದು ಏನೆಂದರೆ, ನಾವು ಈಗ emergency/exigency ಗೆ ಒಂದು ಇಲಾಖೆಗೆ ಎಷ್ಟು ಕೊಡಬಹುದು, 1800 ಕೋಟಿ ರೂಪಾಯಿಗಳಷ್ಟು ನೀರಾವರಿ ಇಲಾಖೆಗೆ emergency ಇತ್ತಾ?

ಶ್ರೀ ಬಿ ಎಸ್ ಯಡಿಯೂರಪ್ಪ – Borrowings ನಮ್ಮ ಇತಿ ಮಿತಿ ದಾಟಿಲ್ಲ ಇತ್ತೀಚಿನ ವರ್ಷಗಳಲ್ಲಿ ನಮ್ಮಿಂದ Borrowings ಅತ್ಯಂತ ಕಡಿಮೆ ಆಗಿದೆ savings ಆಗಿದೆ income ಜಾಸ್ತಿಯಾಗಿದೆ ವಿವರಗಳನ್ನು ಕೊಡುವ ಸಮಯದಲ್ಲಿ ನಾನು ಹೇಳುತ್ತೇನೆ ಅಂಕಿ ಅಂಶಗಳ ದಾಖಲೆ ಇದೆ ಅದಕ್ಕಾಗಿ ಹಣಕಾಸಿನ ನಿರ್ವಹಣೆ ಒಳ್ಳೆಯದು ಇದೆ ಎಂದು ಕೇಂದ್ರ ಸರ್ಕಾರದವರು ಒಪ್ಪಿ ನಮಗೆ ಹೆಚ್ಚು ಹಣವನ್ನು ಬಿಡುಗಡೆ ಮಾಡಿರುವಂಥದ್ದು

ಶ್ರೀ ಜೆ ಸಿ ಮಾಧುಸ್ವಾಮಿ – ನೀವು ವಿವರಗಳನ್ನು ಕೊಡಿ ನಾವು ಬಜೆಟ್ ಮೇಲೆ ಮಾತನಾಡುತ್ತೇವೆ ಹಣಕಾಸಿನ ನಿರ್ವಹಣೆಯೇ ಬೇರೆ ಒಂದನ್ನು ನಾನು ನಿಮಗೆ ಸ್ಪಷ್ಟ ಮಾಡುತ್ತೇನೆ We are against borrowings ಯಾರೇ development oriented person ಇದ್ದರೆ borrow ಮಾಡಿ invest ಮಾಡಲೇಬೇಕು Borrow ಮಾಡಿ development ಮಾಡಲೇಬೇಕು ಶ್ರೀ ಕೃಷ್ಣರಾಜ ಒಡೆಯರ್‌ರವರೇ borrow ಮಾಡಿದ್ದರು ಹೈದರಾಲಿ ಹತ್ತಿರ ಸಾಲ ತೆಗೆದುಕೊಂಡಿದ್ದರು ಇಲ್ಲದಿದ್ದರೆ ಹಳೆಯ ಮೈಸೂರು ಉದ್ಧಾರವಾಗುತ್ತಿರಲಿಲ್ಲ ಇವತ್ತು ನೀವು borrow ಮಾಡಿದ್ದರ value ನಾಳೆ ಗೊತ್ತಾಗುತ್ತದೆ

ಶ್ರೀ ಬಿ ಎಸ್ ಯಡಿಯೂರಪ್ಪ – ನಾನು ನಂತರ reply ಮಾಡುತ್ತೇನೆ ನೀರಾವರಿ ಯೋಜನೆಗಳಿಗೆ ಬೇರೆ ಕಡೆಯಿಂದ ಸಾಲ ತರುವುದನ್ನು ತಪ್ಪಿಸಿ, ನಮ್ಮ ಹತ್ತಿರವೇ ಹೆಚ್ಚಿನ ಸಂಪನ್ಮೂಲಗಳಿವೆ ಎಂದು ನಾವೇ ಕೊಟ್ಟಿದ್ದೇವೆ ನೀವು detail ಚರ್ಚೆ ಮಾಡುವಂತಹ ಕಾಳದಲ್ಲಿ appreciate ಮಾಡಬೇಕು

ಶ್ರೀ ಜೆ ಸಿ ಮಾಧುಸ್ವಾಮಿ – ನಾನು detail ಚರ್ಚೆ ಮಾಡುವಾಗ ಹೇಳುತ್ತೇವೆ ಇಲ್ಲಿ ಏನಾಗಿದೆ, ತಾವು ವೈಯಕ್ತಿಕವಾಗಿ ತೆಗೆದುಕೊಳ್ಳಬಾರದು ನಾನು ಕೇಳುತ್ತೇನೆ, ಅಭಿಯಾಚನೆ 20 public works ಬಗ್ಗೆ ಇರುವುದು ತಾವು ಓದಿಕೊಂಡು ಹೋಗಿ ಶಿವಮೊಗ್ಗ ಜಿಲ್ಲೆ ಗ್ರಾಮೀಣ ರಸ್ತೆ ಅಭಿವೃದ್ಧಿಗಾಗಿ 3 26 ಲಕ್ಷ ರೂಪಾಯಿಗಳು, ಭದ್ರಾವತಿ ತಾಲ್ಲೂಕಿನ ಹೊಳೆ ಹೊನ್ನೂರು ಕ್ಷೇತ್ರದ ರಸ್ತೆ ಅಭಿವೃದ್ಧಿಗಾಗಿ 10 ಲಕ್ಷ ರೂಪಾಯಿಗಳು, 336 ಲಕ್ಷ ರೂಪಾಯಿಗಳು, 320 ಲಕ್ಷ, ಇವು ಯಾವುವು? ನಿಮ್ಮ ತಾಲ್ಲೂಕಿನ ದೇವಸ್ಥಾನಕ್ಕೆ ಅರ್ಧ ಸಚಿವರು ಒಂದು ಚಿಲ್ಲರೆ ಕೋಟಿ ರೂಪಾಯಿ ಇಟ್ಟುಕೊಂಡು ರಾಜ್ಯದ ಹಿತಾಸಕ್ತಿ ಮರೆತು ಕುಳಿತು ಬಿಟ್ಟರೆ ನೀವು ಹೇಗೆ ಶಿಕಾರಿಪುರದಲ್ಲಿ ಶಿಥಿಲವಾಗಿರುವ ದೇವಸ್ಥಾನಗಳಿಗೆ ಇಷ್ಟು ಹಣ ರಿಲೀಸ್ ಮಾಡುತ್ತೇನೆಂದು ನೀವು Supplementary budget ನಲ್ಲಿ ತಂದರೆ, ನಮಗೆಲ್ಲಾ ಏನನ್ನಿಸುತ್ತದೆ ಎಂದು ತಾವೇ ಯೋಚನೆ ಮಾಡಿ ಈ ಶಾಸನ ಸಭೆಯಲ್ಲಿ ಕುಳಿತಿರುವವರು ನಾವು ಏನು feel ಮಾಡಿಕೊಳ್ಳಬೇಕು? ಕಾರ್ಯಕ್ರಮಗಳನ್ನೂ ನೀವೇ ಮಾಡಿಕೊಳ್ಳುತ್ತೀರಿ ನಾವು ದೇವರಲ್ಲಿ ಒಂದೇ ಒಂದು ಪ್ರಾರ್ಥಿಸುವುದು,

ನಾವು ಒಂದು ದಿನ ಅಲ್ಲಿ ಕುಳಿತು ಈ ಶಾಸನವನ್ನು ಹೇಳುವಂತಹ ಅಧಿಕಾರ ಕೊಟ್ಟರೆ, ನಮಗೆ ಓಟು ಹಾಕಿರುವ ಜನರ ಋಣವನ್ನೂ ತೀರಿಸಿ ಬಿಡುತ್ತೇವೆ ಅಷ್ಟೆ Where are we landing ? ನೀವು supplementary demand ನಲ್ಲಿ ದೇವಸ್ಥಾನಗಳನ್ನು ಜೀರ್ಣೋದ್ಧಾರ ಮಾಡುತ್ತೇವೆ ಎನ್ನುವ ಲೆವೆಲ್‌ಗೆ ಇಳಿದರೆ ಇದು ಒಂದು supplementary demand ಎನ್ನುತ್ತಾರೆ ಯಾರಾದರೂ? ಹಾಗಾದರೆ ನೀವು ಹಣ ಅದಕ್ಕಾಗಿ ಇಡಲಿಲ್ಲವಾ? ಆಗಬಾರದ್ದಾಗಿದ್ದಕ್ಕೆ , ನಡೆಯಬಾರದ್ದು ನಡೆದು ಹೋಗಿ ಖರ್ಚಾಗಿರುವುದಕ್ಕೆ ಇಲ್ಲಿ ಬಂದು approval ತೆಗೆದುಕೊಳ್ಳಲಿಕ್ಕೆ ಇರುವಂತಹ ಅಸ್ತ್ರಗಳನ್ನು ನೀವು ಹೀಗೆ ಬಳಸುತ್ತಾ ಹೋಗುತ್ತೀರಿ KRDCL road ಗೆ ನಬಾರ್ಡ್ ರೋಡ್‌ಗಳಿಗೆ ನೀವು original budget ನಲ್ಲಿ ನೀವು ಏಕೆ ಅನುದಾನವನ್ನು ಇಡಲಿಲ್ಲ? Who prevented you? ಈ ಶಾಸನ ಸಭೆಯಲ್ಲಿ ನಿಮಗೆ ಹಣ ಇಡಬೇಡಿ ಎಂದು ಹೇಳಿದವರು ಯಾರು ? ಒತ್ತಡ ಬಿದ್ದ ತಕ್ಷಣ, ಅವರ reaction ಗಳು ಬೇರೆ ಆದ ತಕ್ಷಣ ಇಂಧನ ಇಲಾಖೆಗೆ PWD ಇಲಾಖೆಗೆ Irrigation demand ಗೆ money flow ಆಗುತ್ತದೆ ಎಂದರೆ, ಇದು ಪೂರಕ ಅಲ್ಲ This is an additional grant, given on pressure

ಶ್ರೀ ಮಲ್ಲಿಕಾರ್ಜುನ ಖರ್ಗೆ .– ಮಾನ್ಯ ಯಡಿಯೂರಪ್ಪನವರ ಬಜೆಟ್ ಎಂದರೆ ಬಫೆ ಸಿಸ್ಟಮ್ ಇದ್ದ ಹಾಗೆ ಯಾರಿಗೆ ಬೇಕು ಎಷ್ಟು ಬೇಕು ಅಷ್ಟು ಬಡಿಸಿಕೊಂಡು ತಿನ್ನುವುದು ಹಾಗೆಯೇ ಇಲ್ಲಿಯೂ ಮಾಡಿದ್ದಾರೆ

ಶ್ರೀ ಜಯಪ್ರಕಾಶ್ ಹೆಗ್ಡೆ .– ಬಫೆ ಸಿಸ್ಟಮ್ ಎಲ್ಲರಿಗೂ ಅಲ್ಲ ಬಫೆ ಸಿಸ್ಟಮ್ ಎಲ್ಲರಿಗೂ ಒಂದೇ ಇರುತ್ತದೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಕೆಲವರು ಮಾತ್ರ ತೆಗೆದುಕೊಂಡು ಹೋಗಿದ್ದಾರೆ

ಶ್ರೀ ಮಲ್ಲಿಕಾರ್ಜುನ ಖರ್ಗೆ :– ಯಾರ್ಯಾರಿಗೆ ಶಕ್ತಿ ಇತ್ತೋ ಅವರು ತೆಗೆದುಕೊಂಡು ಹೋಗಿದ್ದಾರೆ ನಿಮಗೆ ಶಕ್ತಿ ಇಲ್ಲ, ಇಲ್ಲಿಯೇ ಕುಳಿತಿದ್ದೀರಿ ಅಲ್ಲಿ PWD ಮತ್ತು electricity ಶಕ್ತಿ ಜಾಸ್ತಿ ಇದೆ ಹೋದರು ಮೊದಲೇ ಬಡಿಸಿಕೊಂಡರು ಕೊನೆಗೆ ಹೋದರೆ ಏನು ಮಾಡುತ್ತೀರಿ?

ಶ್ರೀ ಜಯಪ್ರಕಾಶ್ ಹೆಗ್ಡೆ – ದೊಡ್ಡ ಔತಣದಲ್ಲಿ VIP ಗಳಿಗೆ separate arrange ಮಾಡುತ್ತಾರಲ್ಲಾ ಹಾಗಾಯಿತು

ಶ್ರೀ ಮಲ್ಲಿಕಾರ್ಜುನ ಖರ್ಗೆ – ಎಲ್ಲರನ್ನೂ ಕೂರಿಸಿ ಬಡಿಸಿದಾಗ ಸಮನಾಗಿ ಬರುತ್ತದೆ ಬಫೆ ಸಿಸ್ಟಮ್ ಮಾಡಿದರೆ ಮೊದಲು ಯಾರು ಹೋದರು ಅವರು ತೆಗೆದುಕೊಂಡರು Knowingly package system ಮಾಡಿದಾಗ ಅದು special concession ಇದು special concession ಅಲ್ಲ As and when you needed you have given

ಶ್ರೀ ಸಿ ಟಿ ರವಿ – ಮಾನ್ಯ ಖರ್ಗೆ ಸಾಹೇಬರೇ, ಯಡಿಯೂರಪ್ಪನವರು ಬಫೆ ಸಿಸ್ಟಮ್, ಅವರು ಮಾಡಿದ್ದು ಬಕಾಸುರನ ಸಿಸ್ಟಮ್

ಶ್ರೀ ಜೆ ಸಿ ಮಾಧುಸ್ವಾಮಿ – ಬಫೆ ಸಿಸ್ಟಮ್ ಆದರೂ ಮಾಡಿ ಬಕಾಸುರನ ಸಿಸ್ಟಮ್ ಆದರೂ ಮಾಡಿ ಶೃಂಗೇರಿಯಲ್ಲಿ ಆಚೆ ಕೂರಿಸಿ ಊಟ ಕೊಟ್ಟ ಹಾಗೆ ಕೊಡಬೇಡಿ ನಮಗೆ ಅಷ್ಟೇ ನಾವು ಕೇಳುವುದು

ಶ್ರೀ ಡಿ ಎನ್ ಜೀವರಾಜ್ – ಮಾಧುಸ್ವಾಮಿಯವರೇ ನೀವು ಬೇರೆ ಏನನ್ನಾದರೂ ಮಾತನಾಡಿ, ಆದರೆ ಅನಾವಶ್ಯಕವಾಗಿ ಶೃಂಗೇರಿ ಊಟದ ಬಗ್ಗೆ ಇಲ್ಲಿ ಚರ್ಚೆ ಬೇಡ

ಶ್ರೀ ಜೆ ಸಿ ಮಾಧುಸ್ವಾಮಿ – Yes, we have been treated as untouchables

ಶ್ರೀ ಡಿ ಎನ್ ಜೀವರಾಜ್ – ನಾವೇನು ಮಾಡಿದ್ದೇವೆ ಶೃಂಗೇರಿಯವರು? ಶೃಂಗೇರಿಯವರ ಬಗ್ಗೆ ಮಾತನಾಡಬೇಡಿ ಶೃಂಗೇರಿಯಲ್ಲಿ ಸಾರ್ವಜನಿಕ ಊಟ ಹಾಕುತ್ತೇವೆ

ಶ್ರೀ ಜೆ ಸಿ ಮಾಧುಸ್ವಾಮಿ – ನಾವೇನು ಮಾಡಿದ್ದೇವೆ ಈ ರಾಜ್ಯದಲ್ಲಿ? ನಾವು ಹಾಗಾದರೆ ಎಮ್‌ಎಲ್‌ಎ ಗಳಲ್ಲಾ? ಆಚೆ ಕೂರಿಸಿ ಊಟ ಹಾಕಬೇಡಿ ಎಂದು ಅಷ್ಟೇ ಹೇಳಿದ್ದು ಊಟವನ್ನು ಎಲ್ಲರಿಗೂ ಹಂಚಿ ನಮ್ಮನ್ನು ಅಲ್ಲಿ ಒಳಗೆ ಕರೆದು ಊಟಕ್ಕೆ ಹಾಕಿಲ್ಲ ನಾನು ಹೇಳಿದ್ದೇನೆ

ಶ್ರೀ ಡಿ ಎನ್ ಜೀವರಾಜ್ – ನೀವು ಶೃಂಗೇರಿಗೆ ಬಂದಿದ್ದರೆ ಗೊತ್ತಾಗುತ್ತಿತ್ತು ಈ ರೀತಿ ವಾದ ಮಾಡುವುದು ಸರಿಯಲ್ಲ ನೀವು ಏನನ್ನು ಬೇಕಾದರೂ ವಾದ ಮಾಡಿ ವಾದ ಮಾಡುವ ಸಂದರ್ಭದಲ್ಲಿ ಇನ್ನೊಬ್ಬರ ಭಾವನೆಗಳಿಗೆ ಧಕ್ಕೆ ಬರುವ ರೀತಿಯಲ್ಲಿ ಮಾತನಾಡಬೇಡಿ

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ .– ಇದು ವೈಯಕ್ತಿಕ ಟೀಕೆ ಅಲ್ಲ

(ಗೊಂದಲ)

ಅಧ್ಯಕ್ಷರು – ಎಲ್ಲರೂ ಕುಳಿತುಕೊಳ್ಳಿ ಇತ್ತೀಚೆಗೆ ಫೈನಾನ್‌ಶಿಯಲ್ ಇನ್‌ಡಿಸಿಪ್ಲಿನ್ ಕಾಮನ್ ಆಗಿಬಿಟ್ಟಿದೆ ಅವರು ಆ ಕಡೆ ಇದ್ದಾಗ ಅವರು ಹೇಳುತ್ತಾರೆ, ಈ ಕಡೆ ಇದ್ದಾಗ ಇನ್ನೊಂದು ತರಹ ಹೇಳುತ್ತಾರೆ, ಅದೆಲ್ಲಾ ನಾವು ಕಂಡಿದ್ದೇವೆ, ಪತ್ರಿಕೆಗಳಲ್ಲಿ ಬರೆದಿದ್ದಾರೆ, ಜನರೂ ಕಂಡಿದ್ದಾರೆ ಆದರೆ ಫೈನಾನ್‌ಶಿಯಲ್ ಇನ್‌ಡಿಸಿಪ್ಲಿನ್ ಈ ತರಹ ಆಗಬಾರದು ಆದರೆ ಅವರಿಗೆ ಕಂಡಿದ್ದನ್ನು ಅವರು ಹೇಳುತ್ತಿದ್ದಾರೆ ಯಡಿಯೂರಪ್ಪನವರೂ ಕೂಡ ತಮ್ಮ ಸಮರ್ಥನೆಯನ್ನು ಆ ತರಹ ನಿಮಗೆ ಗೊತ್ತಿದ್ದರೆ ನೀವು ಸರಿಯಾಗಿ ಹೇಳಿ

ಶ್ರೀ ಚಿಕ್ಕನಗೌಡ ಈಶ್ವರಗೌಡ ಪಾಟೀಲ್ – ಮಾನ್ಯ ಅಧ್ಯಕ್ಷರೇ ಅವರಿಗೆ ದೇವರು ಅಂದರೆ ಗುಡಿ ಅಂದರೆ ಯಾವುದೂ ಗೊತ್ತಿಲ್ಲ ಇವರು ದುಡ್ಡನ್ನು ಕೊಟ್ಟಿದ್ದಾರೆ ಅದನ್ನು ಅವರಿಗೆ ತಡೆದುಕೊಳ್ಳುವುದಕ್ಕೆ ಆಗುತ್ತಿಲ್ಲ

ಅಧ್ಯಕ್ಷರು – ಮಾಧುಸ್ವಾಮಿಯವರೇ ತಾವು ಮಾತನಾಡಿ

ಶ್ರೀ ದಿನೇಶ್ ಗುಂಡೂರಾವ್ '– ಮಾನ್ಯ ಅಧ್ಯಕ್ಷರೆ, ಪ್ರತಿಯೊಂದಕ್ಕೂ ಕೂಡ ಅವರು ಹಿಂದೆ ಏನಾಯಿತು, ಹಿಂದೆ ಯಾರು ಏನು ಮಾಡಿದರು, ನೀವು ಹಿಂದೆ ಮಾಡಿಲ್ಲವೇ ಎಂದು ಇದನ್ನೇ ಆ ಕಡೆಯವರು ಹೇಳುತ್ತಿದ್ದಾರೆ ಹೀಗಾದರೆ ಸರಿ ದಾರಿಯಲ್ಲಿ ನಾವು ಯಾವಾಗ ಹೋಗುವುದು ?

ಅಧ್ಯಕ್ಷರು – ವಿಚಾರಕ್ಕೆ ಸೀಮಿತವಾಗಿ ಚರ್ಚೆಯಾದರೆ ಈ ರೀತಿ ಆಗುವುದಿಲ್ಲ ಸುಮ್ಮನೇ ಏನೋ ಪ್ರಾಸಂಗಿಕವಾಗಿ ಎಲ್ಲರೂ ಒಟ್ಟಾಗಿ ಮಾತನಾಡುವುದು ಸರಿಯಲ್ಲ

(ಗೊಂದಲ)

ಅಧ್ಯಕ್ಷರು – ಮಾಧುಸ್ವಾಮಿಯವರೇ, ಬೇರೆ ಬೇರೆ ವಿಷಯಗಳ ಕಡೆಗೆ ಮಾತನಾಡಲು ಅವಕಾಶ ಮಾಡುವುದು ಬೇಡ ತಾವು ಮಾತನಾಡಿ

ಶ್ರೀ ಸಿದ್ದು ಸವದಿ – ಮಾನ್ಯ ಅಧ್ಯಕ್ಷರೇ ಒಂದು ನಿಮಿಷ ಮಾಧುಸ್ವಾಮಿಯವರೇ ಒಂದು ನಿಮಿಷ

ಅಧ್ಯಕ್ಷರು '– ಮೊದಲು ಮಾಧುಸ್ವಾಮಿಯವರು ಮಾತನಾಡಲಿ ಆಮೇಲೆ ಅವಕಾಶ ಸಿಕ್ಕಿದಾಗ ನೀವೂ ಮಾತನಾಡಬಹುದು

ಶ್ರೀ ಸಿದ್ದು ಸವದಿ – ಮಾನ್ಯ ಅಧ್ಯಕ್ಷರೇ, ಒಂದೆ ಒಂದು ನಿಮಿಷ ನಮಗೆ ರಸ್ತೆ ಕಾಮಗಾರಿಗೆಂದು 10 ಲಕ್ಷ ರೂಪಾಯಿಗಳನ್ನೂ ಕೂಡ ಹಿಂದೆ ಅವರು ಕೊಟ್ಟಿರಲಿಲ್ಲ ಅವರ ಪಕ್ಷ ಇದ್ದಾಗ ಅವರ ಪಕ್ಷದವರಿಗೆ ಮೂರು ಮೂರು ಕೋಟಿ ಆರು ಆರು ಕೋಟಿ ರೂಪಾಯಿಗಳನ್ನು ಕೊಟ್ಟಿರುವ ಉದಾಹರಣೆಯನ್ನು ನಾನು ತೋರಿಸುತ್ತೇನೆ ಆಗ ಆ ರೀತಿ ಮಾಡಿದಾಗ ಏಕೆ ಕೇಳಲಿಲ್ಲ ಈಗ ಮಾತ್ರ ಕೇಳುತ್ತಿದ್ದೀರಲ್ಲ

(ಗೊಂದಲ)

ಅಧ್ಯಕ್ಷರು – ನೀವು ಈಗ ಕುಳಿತುಕೊಳ್ಳಿ ನಾನು ಜೆ ಸಿ ಮಾಧುಸ್ವಾಮಿಯವರನ್ನು ಮಾತನಾಡಲು ಕರೆದಿದ್ದೇನೆ ಅವರು ಮಾತನಾಡುತ್ತಿದ್ದಾರೆ ತಾವು ಕೂಡ ಮಾತನಾಡಲು ಅವಕಾಶ ತೆಗೆದುಕೊಂಡು ಮುಂದೆ ಹೇಳಿ ಮಾಧುಸ್ವಾಮಿಯವರೆ, ನೀವೂ ಅವರಿಗೆ ಉತ್ತರ ಕೊಡುವುದಕ್ಕೆ ಹೋಗಬೇಡಿ ಈ ಕಡೆ ತಿರುಗಿಕೊಂಡು ಮಾತನಾಡಿ ಸದಸ್ಯರುಗಳೂ ಅಷ್ಟೆ, ಮಧ್ಯೆ ಮಧ್ಯೆ ಮಾತನಾಡಬೇಡಿ ಆ ರೀತಿ ಮಧ್ಯೆ ಪ್ರವೇಶ ಮಾಡಿ ಮಾತನಾಡುವುದು ಸರಿಯಲ್ಲ

ಅಗತ್ಯ ಬಿದ್ದರೆ ಸಂಬಂಧಪಟ್ಟ ಮಂತ್ರಿಗಳು ಏನಿದ್ದಾರೆ ಅವರು ಎದ್ದು ನಿಂತು ಸಮಂಜಸವಾಗಿ ಉತ್ತರ ಕೊಡುತ್ತಾರೆ ಆದರೆ ನೀವೆಲ್ಲಾ ಮಧ್ಯೆ ಎದ್ದು ನಿಂತು ಅಡ್ಡ ಮಾತನಾಡಿ ಚರ್ಚೆಯ ದಾರಿಯನ್ನು ಬೇರೆ ಕಡೆಗೆ ತೆಗೆದುಕೊಂಡು ಹೋಗುವುದು ಸರಿಯಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ – ಮಾನ್ಯ ಅಧ್ಯಕ್ಷರೇ, ನಾನು ಸನ್ಮಾನ್ಯ ಹಣಕಾಸಿನ ಸಚಿವರನ್ನು ಕೇಳಬಯಸುತ್ತೇನೆ ಎನರ್ಜಿ ಕೆಳಗೆ ಅಭಿಯಾಚನೆ ಸಂಖ್ಯೆ 24 ಬಾಬ್ತು ಸಂಖ್ಯೆ 5, ಪುಟ ಸಂಖ್ಯೆ 257 " ವಿದ್ಯುತ್ ವಲಯ ಪುನರ್ ರಚನೆ ಪ್ರಕ್ರಿಯೆಯಲ್ಲಿ ಭಾಗವಾಗಿ ಕರ್ನಾಟಕ ವಿ ವಿ ನಿ ನಿಯಮಿತಕ್ಕೆ ಬಂಡವಾಳ ಹೂಡಿಕೆ ಅವಶ್ಯವೆಂದು ಕಂಡುಬಂದಿದೆ ಆದಕಾರಣ ಅಭಿಯಾಚನೆಯಲ್ಲಿ 300 ಕೋಟಿ ರೂಪಾಯಿಗಳನ್ನು ಸೇರಿಸಿದೆ " 300 ಕೋಟಿ ಸೇರಿಸಬೇಕಾದರೆ ಏನು ಸ್ವಾಮಿ, ಅಂಥ ಎಮರ್ಜೆನ್ಸಿ? ತಮಗೆ ಮೊದಲೇ ಬಜೆಟ್ ಮಾಡುವ ಮುಂಚೆಯೇ ಏಕೆ ಗೊತ್ತಿರಲಿಲ್ಲ? ಅಂಥ ಏನು ಎಮರ್ಜೆನ್ಸಿ? 300 ಕೋಟಿ ರೂಪಾಯಿಗಳ ಕ್ಯಾಪಿಟಲ್ ಇನ್ವೆಸ್ಟ್‌ಮೆಂಟ್ ಮಾಡುವಂಥದ್ದು What is the emergency? Why it is brought in the supplementary demands? Why it is not taken in original demand? ಪ್ರಕ್ರಿಯೆಗಳು ಬಂದಮೇಲೆ, ಎಲ್ಲರು ನಾವು ಟಿ ವಿ ಮುಂದೆ ಹೇಳುವಾಗ, ಕೋರ್ ಏರಿಯಾಗಳಿಗೆ, ಇರಿಗೇಶನ್‌ಗೆ, ಪವರ್‌ಗೆ ಯಡಿಯೂರಪ್ಪನವರು ದುಡ್ಡಿಲ್ಲವೆಂದರೆ, ಅಲ್ಲಿ ಉತ್ತರ ಹೇಳುವುದಕ್ಕೆ ಮೊದಲೇ ಇಲ್ಲಿ ಸಪ್ಲಿಮೆಂಟರಿ ಡಿಮ್ಯಾಂಡ್‌ನ್ನು ತಂದುಬಿಡುತ್ತೀರಿ ಇಲ್ಲಿ ನಮ್ಮ ಮುಂದೆ ಹೇಳುವುದಕ್ಕೆ? ಇಲ್ಲಾ, ಇಲ್ಲಾ, ಜಾಸ್ತಿ ಮಾಡಿಕೊಟ್ಟಿದ್ದೇನೆ, ಆದಕಾರಣ ಇಲ್ಲಿ ಆ ಚರ್ಚೆಗಳನ್ನು ಮಾಡಬೇಡಿ ಎಂದು ಡಿಮ್ಯಾಂಡನ್ನೇ ಮೊದಲು ಸ್ಟಾರ್ಟ್ ಮಾಡಿಸುತ್ತೀರಿ? Is it the custom? Is it the practice of the Assembly? 300 ಕೋಟಿ ರೂಪಾಯಿಗಳನ್ನು ಸೇರಿಸಿದ್ದೀರಿ 2006-07 ನೇ ಸಾಲಿನಲ್ಲಿ 135 ಕೋಟಿ ರೂಪಾಯಿಗಳನ್ನು ಬಾಬ್ತು ಸಂಖ್ಯೆ 6 ರಲ್ಲಿ ಒದಗಿಸಿದ್ದೇನೆ ಒಂದು ಇಲಾಖೆಯಲ್ಲಿ ಇಂಥ ಒಂದು ಎಮರ್ಜೆನ್ಸಿ ಅಥವಾ ಎಕ್ಸಿಜೆನ್ಸಿ ನೀವು ಬಜೆಟ್ ಇಟ್ಟಮೇಲೆ ಬಂದದ್ದು ಏನು? ನಾವು ಇದನ್ನು ಕೇಳಬೇಕೋ ಬೇಡವೋ ಸಾರ್ ? ನಿಮ್ಮ ಹತ್ತಿರ ರಿಸೋರ್ಸ್

ಇದ್ದರೆ ನೀವು ಬಜೆಟ್‌ನಲ್ಲಿ ಏಕೆ ಇಡಲಿಲ್ಲ? ನಿಮ್ಮ ಹತ್ತಿರ ರೆವಿನ್ಯೂ ಇದ್ದರೆ, why you have not included all these items in the budget proposal? ಇಲ್ಲಿ ತಾವು ಇಡಬೇಕಾದ್ದು, ಮ್ಯಾಚಿಂಗ್ ಇದ್ದರೆ, ನೀವು ಕಂಟಿನ್‌ಜೆನ್ಸಿ ಫಂಡ್‌ನಿಂದ ಕೊಟ್ಟಿದ್ದು ರಿ-ಎಂಬರ್ಸ್ ಆಗಬೇಕಾಗಿದ್ದರೆ, ಏನಾದರೂ ಎಮರ್ಜೆನ್ಸಿ ಆಗಿದ್ದರೆ, ಎಕ್ಸಿಜೆನ್ಸಿ ಆಗಿದ್ದರೆ, ಅಕಸ್ಮಾತ್ ಏನೋ ನಿಮಗೆ ಮುಂದಿನ ವರ್ಷ ಯಾರೋ ಚೀನಾದಲ್ಲಿ ಒಲಂಪಿಕ್ಸ್ ನಡೆಸುವುದಕ್ಕೆ ಆಗುವುದಿಲ್ಲ ಒಲಂಪಿಕ್ಸ್‌ನ್ನು 2008 ನೇ ಇಸವಿಯಲ್ಲಿ ಕರ್ನಾಟಕದಲ್ಲಿ ನಡೆಸಿ ಎಂದು ಹೇಳಿದ್ದರೆ, ಆಗ ನೀವು ನಾನು ಅರ್ಜೆಂಟ್ ಆಗಿ ಒಲಂಪಿಕ್ಸ್ ಗೇಮ್ ಅನ್ನು ಆಡಿಸಬೇಕಾಗಿದೆ, ಇದು ಈ ದೇಶದ ಪ್ರತಿಷ್ಠೆಯ ಪ್ರಶ್ನೆ ಆದಕಾರಣ 6 ಸಾವಿರ ಕೋಟಿ ರೂಪಾಯಿಗಳ ಸಪ್ಲಿಮೆಂಟರಿ ಡಿಮ್ಯಾಂಡನ್ನು ತಂದಿದ್ದೇನೆ ಎಂದರೆ ನಾವು ಅದನ್ನು ಒಪ್ಪಿಕೊಳ್ಳಬಹುದಾಗಿತ್ತು ಏನು ಸಾರ್ ಇದು? ಬಜೆಟ್ ಇಟ್ಟು ಇನ್ನೂ ಎಂಟು ದಿವಸಗಳಾಗಿಲ್ಲ ಆಗಲೇ ಇನ್ನೂ 6 ಸಾವಿರ ಕೋಟಿ ರೂಪಾಯಿಗಳ ಸಪ್ಲಿಮೆಂಟರಿ ಡಿಮ್ಯಾಂಡ್ ಎಂದರೆ ಏನು ಫೈನಾನ್‌ಶಿಯಲ್ ಡಿಸಿಪ್ಲೆನ್ ಇರಬಹುದು? ಹಿಂದೆ ನಾವು ಕೇಳಿದೆವು ಮೂರು ದಿವಸ ಶಾಸನಸಭೆಯಲ್ಲಿ ನಾವು ಕೇಳಿದ್ದೆವು ಒಂದೈವತ್ತು ಅರವತ್ತು ಕೋಟಿ ರೂಪಾಯಿಗಳನ್ನು ರೈತರ ಸಾಲ ಮನ್ನಾ ಮಾಡುವುದಕ್ಕೆ ಜಾಸ್ತಿ ಇಡಿ, ಒಂದು ಲಕ್ಷದವರೆಗೆ ಬೆಳೆ ಸಾಲ ತೆಗೆದುಕೊಂಡವರಿಗಾಗಿ ಎಂದಾಗ ಯಡಿಯೂರಪ್ಪನವರು "ಇಲ್ಲಾ ಇಲ್ಲಾ ರಿಸೋರ್ಸ್ ನೋಡಿಕೊಂಡು ನಾವು ಹೇಳಬೇಕಾಗುತ್ತದೆ" ಎಂದರು ಆದರೆ ಈಗ ಇದಕ್ಕೆಲ್ಲಾ 6 ಸಾವಿರ ಕೋಟಿ ಎಲ್ಲಿಂದ ಬರುತ್ತದೆ? ಇದು ಯಾವ ದುಡ್ಡು ಇವರಿಗೆ ಕೊಡುತ್ತಿರುವುದು? ನಮಗೆ ಇದರ ಬಗ್ಗೆ ನೀವು ಹೇಳಬೇಕಲ್ಲ Where are you generating this amount ? ಟಂಕಸಾಲೆಯನ್ನು ತಾವು ಎಲ್ಲಿಟ್ಟಿದ್ದೀರಿ? ನಾವು ಕೇಳಿದ್ದಕ್ಕೆ ಟಂಕಸಾಲೆ ಇಲ್ಲವೆಂದು ಹೇಳಿದರು ಈಗ ಟಂಕಸಾಲೆಯನ್ನು ಎಲ್ಲಿಟ್ಟಿದ್ದೀರಿ? ಏನು ಮೈಸೂರಿನಲ್ಲಿರುವ ಟಂಕಸಾಲೆಯನ್ನು ನೀವು ಡೆವಲಪ್ ಮಾಡಿದ್ದೀರಾ ಅಥವಾ ಶಿಕಾರಿಪುರದಲ್ಲಿ ಏನಾದರೂ ಒಂದು ಟಂಕಸಾಲೆಯನ್ನು ಆರಂಭ ಮಾಡಿದ್ದೀರಾ ಎಂಬ ಬಗ್ಗೆಯಾದರೂ ಹೇಳಬೇಕಲ್ಲ ಟಂಕಸಾಲೆ ನನಗೆ ಗೊತ್ತಿರುವ ಹಾಗೆ ಮೈಸೂರಿನಲ್ಲಿರುವ ಚಾಮುಂಡಿ

ಬೆಟ್ಟದಿಂದ ಆ ಕಡೆ ಇದೆ ಇನ್ನೊಂದು ಟಂಕಸಾಲೆ ಎಲ್ಲಿದೆ ಎಂದು ನಮಗೆ ಗೊತ್ತಾಗಬೇಕು ಬಜೆಟ್ ಇಟ್ಟ ಒಂದು ವಾರದೊಳಗೆ 6 ಸಾವಿರ ಕೋಟಿ ರೂಪಾಯಿಗಳನ್ನು ಇನ್ನೊಂದು ಬಜೆಟ್‌ನ್ನು ತಾವು ಪ್ಲೇಸ್ ಮಾಡಿದ್ದೀರಿ ಸಾರ್ ಇದು ನಿಜವಾಗಿ ಪಾಸ್ ಮಾಡುವುದಕ್ಕೆ ಯೋಗ್ಯವಾದ ಬಜೆಟ್ ಅಲ್ಲ ಮತ್ತೊಂದನ್ನು ನಾವು ದುರ್ದೈವದಿಂದ ಹೇಳಬೇಕಾಗಿದೆ ಪ್ರತಿಸಲ ಜ್ಯುಡಿಶಿಯವರಿಗೆ ನೀವು ಅವರು ಕೇಳಿದಷ್ಟು ಹಣವನ್ನು ಇಡುತ್ತೀರಿ ಅದಾದ ನಂತರ ಮತ್ತೆ ಅವರಿಗೆ ಸಪ್ಲಿಮೆಂಟರಿ ಡಿಮ್ಯಾಂಡ್‌ನಲ್ಲಿ ಹಣವನ್ನು ಕೊಡುತ್ತೀರಿ ಸಾರ್, ಎಲ್ಲರೂ ಕೂಡ ಮನುಷ್ಯರೇ ಒಂದು ಇತಿಮಿತಿಯೊಳಗೆ ಕೆಲಸವನ್ನು ಮಾಡಬೇಕು, ಅವರಿಗೆ ಬಜೆಟ್ ಕೊಟ್ಟಿರುತ್ತೀರಿ ಅದರಲ್ಲಿ ಅವರು ಅವರ ಖರ್ಚುಗಳನ್ನು ಅವರು ನೋಡಿಕೊಳ್ಳಬೇಕು ಒಂದು ಕಾಲ ಇತ್ತು, ಡೀಟೈಲ್ಡ್ ಎಸ್ಟಿಮೇಟ್‌ನ್ನು ಜ್ಯುಡಿಶಿಯರಿ ಎಕ್ಸ್‌ಪೆಂಡಿಚರ್‌ನ್ನು ಇಲ್ಲಿ ಪಾಸ್ ಮಾಡುತ್ತಿದ್ದೆವು ಅದು ತಪ್ಪಿ ಹೋಯಿತು ಅವರಿಗೇ ಅಟನಮಿ ಕೊಟ್ಟು ನೀವೇ ಪಾಸ್ ಮಾಡಿಕೊಳ್ಳಿ ಎಂದು ಬಿಟ್ಟುಬಿಟ್ಟಿರಿ ಅವರು ಜಡ್ಜ್‌ಗಳಮನೆಗಳಿಗೆ ಕೇಸ್ ಫೈಲ್ ಬಾಕ್ಸ್ ತೆಗೆದುಕೊಂಡು ಹೋಗುವುದಕ್ಕೆ ನಾವು ದುಡ್ಡು ಇಟ್ಟುಕೊಡುತ್ತಿದ್ದೇವೆ ಕಾರ್ ಕೊಂಡುಕೊಳ್ಳಿ, ಮೋಟಾರ್‌ಸೈಕಲ್ ಕೊಂಡುಕೊಳ್ಳಿ, ಸ್ಕೂಟರ್‌ಕೊಂಡುಕೊಳ್ಳಿ ಎಂದು ಕೇಸ್ ಫೈಲ್ ತೆಗೆದುಕೊಂಡು ಹೋಗುವುದಕ್ಕೆ ಸ್ಟೇಟ್ ಬಜೆಟ್‌ನಲ್ಲಿ ಸಪ್ಲಿಮೆಂಟರಿ ಡಿಮ್ಯಾಂಡ್ಸ್‌ನಲ್ಲಿ ಇಟ್ಟು ನಾವು ದುಡ್ಡು ಕೊಡುವುದು ಏಕೆ ನೀವು ಜ್ಯಡಿಶಿಯರಿಗೆ ದುಡ್ಡು ಇಟ್ಟಿರುವುದಿಲ್ಲವೆ? ಏನು ಮಾಡುತ್ತಿದ್ದಾರೆ ಅವರು? ಅವರು ಈ ಬಗ್ಗೆ ಹೇಳಬೇಕಲ್ಲ ಇಲ್ಲಿ ಪ್ರಿಂಟ್ ಆಗಬೇಕು ಅವರಿಗೆ ಮನೆಗೆ ಕೇಸ್ ಫೈಲ್‌ಗಳನ್ನು ತೆಗೆದುಕೊಂಡು ಹೋಗುವ ಬಾಕ್ಸ್‌ಗೆ ನಾವು ಇಷ್ಟು ದುಡ್ಡನ್ನು ಕೊಟ್ಟಿದ್ದೇವೆ ಎಂದು ಪ್ರಿಂಟ್ ಆಗಬೇಕು ಅಧ್ಯಕ್ಷರೇ ನನಗೆ ಗೊತ್ತಾಗಬೇಕು, ಈಗ ರಾಜ್ಯ ಯೋಜನಾ ಮಂಡಳಿ ಉಪಾಧ್ಯಕ್ಷರ ಆಪ್ತ ಖಾತೆಗೆ ಜಾಸ್ತಿ ಮಾಡುತ್ತೇವೆಂದು ಹೇಳುತ್ತೀರಿ Hon'ble Minister is the Chairman ಅಲ್ಲೊಂದು ಖಾತೆ ನೀವು ಏಕೆ ತೆಗೆಯುತ್ತಿದ್ದೀರಿ? ಯಾರನ್ನು ಮಾಡಿದ್ದೀರಿ ಯೋಜನಾ ಮಂಡಳಿಗೆ? ಸನ್ಮಾನ್ಯ ರಾಮಚಂದ್ರಗೌಡರು ಎಕ್ಸ್-ಅಫಿಶಿಯೋ ಅಧ್ಯಕ್ಷರಾಗಿದ್ದಾರೆ ಇವತ್ತು ಅದಕ್ಕೆ ಹೀಗಿರುವಾಗ ಇಲ್ಲಿ ಏಕೆ ಎಕ್ಸ್‌ಪೆಂಡಿಚರ್ ಜಾಸ್ತಿ ಆಯಿತು?

ನಾನು ಆಗಲೇ ಕೇಳಿದೆ, ಲಾಟರಿ ಡಿಪಾರ್ಟ್‌ಮೆಂಟ್‌ನ್ನು ಮುಚ್ಚಬೇಕಾಗಿರುವ ಕಡೆ 12 ಕೋಟಿ ಜಾಸ್ತಿ ಮಾಡುತ್ತೇವೆ ಎಂದು ಹೇಳುತ್ತೀರಿ ನಾನು ಬಹಳ ಆಸೆ ಇಟ್ಟುಕೊಂಡಿದ್ದೆ, ಕನ್ನಡ ಕಲ್ಚರ್‌ಗೆ ಆ ಕಡೆ ಈ ಕಡೆ ನೋಡುತ್ತೀರೇನೋ, ಸುವರ್ಣ ರಾಜ್ಯೋತ್ಸವ ಮಾಡುತ್ತಾರಲ್ಲ ಎಂದು ಆದರೆ ಇಲ್ಲಿ ಏನನ್ನೂ ಮಾಡಲಿಲ್ಲ ಕನಿಷ್ಟ ನಮ್ಮ ಬಿ ಎಂ ಶ್ರೀಕಂರಯ್ಯ ಎಂದು ಏನಿದ್ದರೋ ಯಡಿಯೂರಪ್ಪನವರೆ, ಅವರು ಪಂಪಮಹಾಕವಿ ಪ್ರಶಸ್ತಿ ತೆಗೆದುಕೊಂಡಿದ್ದರು, ತಾವು ದೊಡ್ಡವರು, ಹೋದ ಬಾರಿ ಅಸೆಂಬ್ಲಿಯಲ್ಲಿ ರೈಸ್ ಮಾಡಿದರೂ ಕೂಡ ಅವರಿಗೋಸ್ಕರ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಲಿಲ್ಲ ನಾವು ಅವರಿವರನ್ನು ಕೈ ಕಾಲು ಕಟ್ಟಿ ಶತಮಾನೋತ್ಸವವನ್ನು ಮಾಡಿದ್ದೇವೆ ಏನಾದರೂ ಮಾಡಿ ಎಂದು ನಾವೆಲ್ಲಾ, ಚಿಕ್ಕನಾಯಕನಹಳ್ಳಿ ಜನರೆಲ್ಲಾ ಬೇಡಿದೆವಲ್ಲಾ ಸ್ವಾಮಿ ಶಿಶುನಾಳ ಷರೀಫ್‌ರಿಗೋಸ್ಕರ ಏನಾದರೂ ಮಾಡಿ, ಸನ್ಮಾನ್ಯ ಬಿ ಎಂ ಶ್ರೀಕಂರಯ್ಯನವರು ಭಾರತೀಯ ಕಾವ್ಯ ಮೀಮಾಂಸೆಯನ್ನು ಬರೆದು ಇವೊತ್ತಿಗೆ ಅಂಧ ಗಂಧ ಇಡೀ ದೇಶದಲ್ಲಿಯೇ ಇಲ್ಲವೆನ್ನುವ ಹೆಸರನ್ನು ತೆಗೆದುಕೊಂಡ ಬಂದ ಮನುಷ್ಯನ ಸೆಂಟಿನರಿ ಸೆಲಬ್ರೇಟ್ ಮಾಡುತ್ತಿದ್ದೇವೆ ಇದಕ್ಕೆ ಕೇವಲ 5 ಲಕ್ಷ ರೂಪಾಯಿಗಳನ್ನು ಮಾತ್ರ ಇಟ್ಟಿದ್ದೀರಲ್ಲ ಬಿ ಎಂ ಶ್ರೀಕಂರಯ್ಯನವರ ಸಮಾಧಿ ಮೇಲೆ ಫಸ್ಟ್‌ಕ್ಲಾಸ್ ಇಟಾಲಿಯನ್ ಮಾರ್ಬಲ್ ಹಾಕುವುದಕ್ಕೆ ಇದು ಸಾಲುವುದಿಲ್ಲ ಕೇವಲ 5 ಲಕ್ಷ ತುಮಕೂರು ಜಿಲ್ಲೆಯಲ್ಲಿ ಹುಟ್ಟಿದವರೆಲ್ಲಾ ಪಾಪ ಮಾಡಿದವರೇ ಎಂದಂತಾಯಿತು ಇವರೆಲ್ಲಾ ಗ್ರಹಚಾರದವರು, ಇವರೆಲ್ಲರೂ ಶಿವಮೊಗ್ಗ ಜಿಲ್ಲೆಯಲ್ಲಿ ಏಕೆ ಹುಟ್ಟಲಿಲ್ಲ ಎಂದು ನಮ್ಮ ಚಿಂತೆ ನಮ್ಮ ಕಡೆ ಹುಟ್ಟಿದವರು ಆದರೆ ನಾವು ಏನೂ ಮಾಡುವ ರೀತಿಯಲ್ಲಿ ಇಲ್ಲ ನಮ್ಮ ಕ್ಷೇತ್ರದ ಜನರು ನಮಗೆ ಅನ್ನುವುದನ್ನು ಬಿಡೋದಿಲ್ಲ ನೀವೇನ್ರಿ ನೀವು ಇಲ್ಲಿ ಸೆಂಟಿನರಿ ಆಚರಣೆ ಮಾಡುತ್ತಿದ್ದೀರಿ, ನಿಮಗೆ ಏನೂ ಕೊಟ್ಟಿಲ್ಲ ಯಡಿಯೂರಪ್ಪನವರು ನೋಡ್ರಿ ಹೇಗೆ ಕೊಟ್ಟಿದ್ದಾರೆ, ಅವರ ತಾಲ್ಲೂಕಿನಲ್ಲಿ ಇರುವ ದೇವಸ್ಥಾನದಿಂದ ಹಿಡಿದು ಅವರ ತಾಲ್ಲೂಕಿನ ಕವಿಗಳಿಗೆ ಏನೇನೋ ಬೇಕೋ ಅವೆಲ್ಲವನ್ನೂ ಮಾಡಿಕೊಳ್ಳುತ್ತಿದ್ದಾರೆ ಆದರೆ ನೀವು ಮಾತ್ರ ಕುಳಿತುಕೊಂಡು ನೋಡುತ್ತಿದ್ದೀರಿ ಎಂದರೆ ನಾವು ಏನು ಹೇಳೋದು ಹೇಳಿ ನಮಗೆ ಶಿವರುದ್ರಪ್ಪನವರ ಬಗ್ಗೆ ಗೌರವ ಇದೆ ನೀವೆಷ್ಟಾದರೂ

ಮಾಡಿ ಸ್ವಲ್ಪ ಪಕ್ಕದವರಿಗೂ ಮಾಡಿ ಶಿವಮೊಗ್ಗದಲ್ಲಿ ಹುಟ್ಟಿದರೂ ಎನ್ನುವ ಒಂದೇ ಕಾರಣಕ್ಕಾಗಿ ಎಲ್ಲ ದುಡ್ಡು ಡೈವರ್ಟ್ ಮಾಡಬೇಡಿ ಸಾಹಿತ್ಯಕ್ಕಾಗಿ ಸೇವೆ ಮಾಡಿದ್ದಾರೆ ಅವರಿಗಾಗಿ ಖರ್ಚು ಮಾಡಲಿ ಆದರೆ ಈ ಕಡೆಗೂ ಸ್ವಲ್ಪ ನೋಡಬೇಕಾಗಿತ್ತು ಇದನ್ನು ಮಾಡಿಲ್ಲದಿರುವುದರಿಂದ ಸಾರ್ ಇದು ಯಾವುದೇ ವಿವೇಚನೆ ಇರುವಂಥ ಮನುಷ್ಯ ಈ ಮಟ್ಟದ ಪೂರಕ ಅಂದಾಜುಗಳನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ ನೀವೇನು ತಂದಿದ್ದೀರಿ ಇದು ವೈಯಕ್ತಿಕ ಹಿತಾಸಕ್ತಿಗೆ, ನಿಮ್ಮಲ್ಲಿರುವ ವ್ಯತ್ಯಾಸಗಳನ್ನು ತೃಪ್ತಿಪಡಿಸುವುದಕ್ಕಾಗಿ, ನಿಮ್ಮಲ್ಲಿ ಯಾರಾದರೂ ನಿಮ್ಮ ಸಚಿವ ಸಂಪುಟದ ಸದಸ್ಯರು, ಶಾಸಕರು ನಿಮ್ಮ ವಿರುದ್ಧ ಟೀಕೆ ಮಾಡುವವರನ್ನು ತೃಪ್ತಿಪಡಿಸುವುದಕ್ಕೆ ಈ ಪೂರಕ ಅಂದಾಜಿನಲ್ಲಿ ಪ್ರಾವಿಶನ್ ಮಾಡಿದ್ದೀರಿ ಬಜೆಟ್ ಪಾಸ್ ಆಗುವವರೆಗಾದರೂ ನಾವು ನೆಮ್ಮದಿಯಾಗಿ ವಿಧಾನಸೌಧದಲ್ಲಿ ಕುಳಿತುಕೊಂಡು ಎದ್ದುಹೋಗೋಣ, ಮಧ್ಯೆ ಏನಾದರೂ ನಮ್ಮ ಮಂತ್ರಿಗಳು ಎದ್ದು ನಿಂತು ಮಾತನಾಡಿಬಿಟ್ಟಾರು ಎಂದು ರೇವಣ್ಣನವರೆ ಇಲ್ಲಿ ಇಟ್ಟಿದ್ದಾರೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ :– ನೀವು ಇಷ್ಟು ಟೀಕೆ ಮಾಡಿದಮೇಲೆ ನಿಮಗೆ ಏನಾದರೂ ಸಿಗಬಹುದು

ಶ್ರೀ ಜೆ ಸಿ ಮಾಧುಸ್ವಾಮಿ – ಒಂದೆರಡು ಲಕ್ಷ ಸಿಕ್ಕಬಹುದು ತೀ ನಂ ಶ್ರೀಕಂಠಯ್ಯನವರ ಹೆಸರಿನಲ್ಲಿ ಎಂದು ಆಲೋಚನೆ ಇಟ್ಟುಕೊಂಡು ಮಾತನಾಡುತ್ತಿದ್ದೇನೆ ಅದೇನು ಸಿಗುತ್ತದೋ ಇಲ್ಲವೋ ಗೊತ್ತಿಲ್ಲ ಸನ್ಮಾನ್ಯ ಯಡಿಯೂರಪ್ಪನವರು ಶಿಸ್ತನ್ನು ತರಬೇಕು ನಾವೇನು ಅಂದುಕೊಂಡಿದ್ದೆವೆಂದರೆ, ಇಷ್ಟೊಂದು ಇದೆಯೆಂದರೆ, ಬಹುಶಃ ಸರ್ಕಾರಿ ನೌಕರರ ವೇತನ ಪರಿಷ್ಕರಣೆಗೆ ಸಂಬಂಧಪಟ್ಟಂತೆ ಪೇ ಕಮಿಶನ್‌ನವರು ಕೊಟ್ಟಿರುವ ರಿಪೋರ್ಟ್‌ನ್ನು ತಾವು ಒಪ್ಪಿಕೊಂಡಿದ್ದೀರಿ ಅದನ್ನು ಬಜೆಟ್‌ನಲ್ಲಿ ಇಡುವಾಗ ಬಿಟ್ಟು ಬಿಟ್ಟಿದ್ದೀರಿ, ನಾನು ಅದೆಲ್ಲಾ ಇಲ್ಲಿ ಬರಬಹುದು ಎಂದುಕೊಂಡಿದ್ದೆ ನನಗೆ ಅದೇನು ಕಾಣಲಿಲ್ಲ Pay Commission revision ನಿಂದ ಇಷ್ಟು ಆಗುತ್ತಿದೆ, ಅವರ arrears ಗೆ ಎಷ್ಟು ಕೊಡಬೇಕು, ಅದೆಲ್ಲಾ figures ಆಗಿರಬಹುದು, ಇಷ್ಟೊಂದು amount crop up ಆಗುವುದಕ್ಕೆ ಎಂದುಕೊಂಡಿದ್ದೆ ಅದು ಇನ್ನೊಂದು ಕಂತು ಬರಬಹಬುದು ನಾವೇ ಹೇಳಿ

ಕೊಟ್ಟು ಬಿಟ್ಟಿದ್ದೇವೆ ಇನ್ನೊಂದು ಕಂತನ್ನು ನಮ್ಮ ಮುಂದೆ ತೆಗೆದುಕೊಂಡು ಬನ್ನಿ ಎಂದು Capital investment ಅನ್ನು ಕೂಡ ಇದರಲ್ಲಿ ತರುವಂತಹ ಸ್ಥಿತಿಯನ್ನು ಈ ರಾಜ್ಯಕ್ಕೆ ತರಬಾರದು This shows Budgeting process ನಲ್ಲಿ ಎಷ್ಟು indiscipline ಇದೆ ಆ ಇಲಾಖೆ ಕೆಳಗಡೆ ದಯಮಾಡಿ ಇಂತಹ ಪೂರಕ ಡಿಮ್ಯಾಂಡ್‌ಗಳನ್ನು ಅಸೆಂಬ್ಲಿ ಮುಂದೆ ಇಡುವುದನ್ನು ಕಡಿಮೆ ಮಾಡಬೇಕು ಎಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ

ಅಧ್ಯಕ್ಷರು – ಮಾನ್ಯ ವಾಟಾಳ್ ನಾಗರಾಜ್‌ರವರೆ, ಇನ್ನು ನಿಯಮ 69 ಇದೆ, ಬಜೆಟ್ ಮೇಲೆ discussion ಆರಂಭ ಮಾಡಬೇಕು

ಶ್ರೀ ವಾಟಾಳ್ ನಾಗರಾಜ್ – ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಮಾತನಾಡಲೇಬೇಕು ಮಾತನಾಡದ ಹಾಗೆ ಹೋಗುವುದು ಸರಿಯಲ್ಲ

ಅಧ್ಯಕ್ಷರು – ಪೂರಕ ಅಂದಾಜಿನ ಮೇಲೆಯೇ ಇಷ್ಟೊಂದು ಮಾತನಾಡಿದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ :– ಇದು ಒಂದು ರೂಪಾಯಿ ಅಥವಾ ಎರಡು ರೂಪಾಯಿಯ ವ್ಯವಹಾರವಾಗಿದ್ದರೆ, ಇದು ಆರು ಸಾವಿರ ಕೋಟಿ ರೂಪಾಯಿ ವ್ಯವಹಾರ

ಅಧ್ಯಕ್ಷರು – ಇದರ ಮೇಲೆ ಮಾತನಾಡಿದರೆ ಬೇರೆ ವಿಷಯಕ್ಕೆ ಸಮಯ ಬಹಳ ಕಡಿಮೆಯಾಗಿಬಿಡುತ್ತದೆ ಎಂದು ಅವೆಲ್ಲಾ ಚರ್ಚೆಯಾಗದೇ ಉಳಿದುಬಿಡುತ್ತದೆ

ಶ್ರೀ ವಾಟಾಳ್ ನಾಗರಾಜ್ .– ಇದು ಹಳೇ ಮೈಸೂರಿನ ಆಯವ್ಯಯ ಇದ್ದಹಾಗೆ ಇದೆ ಹಳೇ ಮೈಸೂರಿನ ಕಾಲದಲ್ಲಿ ಹೀಗೆ ಇತ್ತು

ಅಧ್ಯಕ್ಷರು .– ಹಿಂದೆ ನಾವು ನೋಡಿದ್ದೇವೆ ಕೆಲವರು ಪ್ರಮುಖರು ನಿಂತು ಕೆಲವು ವಿಚಾರಗಳಲ್ಲಿ time ಅಥವಾ subject ಅನ್ನು ತೆಗೆದುಕೊಂಡು ಮಾತನಾಡುತ್ತಿದ್ದರು ಈಗ ಎಲ್ಲರೂ ಇದರ ಬಗ್ಗೆ ಚರ್ಚೆ ಮಾಡಿದರೆ Budget ಮತ್ತು ನಿಯಮ 69 ರ ಮೇಲೆ ಚರ್ಚೆ ಇದೆ ಅವುಗಳ ಗತಿ ಏನು ಅಂತ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಇದು ಬಜೆಟ್ ಅಲ್ವಾ?

ಅಧ್ಯಕ್ಷರು – ಇದು ಬಜೆಟ್ ಸರಿ, ಆದರೆ ಎಲ್ಲಾ ಮಾತನಾಡಿದ್ದಾರೆ

ಶ್ರೀ ಶಿವಾನಂದ ಎಸ್ ಪಾಟೀಲ್ :– ಮಾನ್ಯ ಅಧ್ಯಕ್ಷರೆ, Co- operative Banks ದು ಸ್ವಲ್ಪ ಸ್ವಲ್ಪ problem ಇದೆ ಅದರ ಬಗ್ಗೆ ನಾವು ಒಂದು ನಿಮಿಷ mention ಮಾಡುತ್ತೇವೆ ನಾವು ಬಹಳ ಸಮಯವನ್ನು ತೆಗೆದುಕೊಳ್ಳುವುದಿಲ್ಲ ನಮಗೆ ಅದಕ್ಕೆ ಅವಕಾಶ ಕೊಡಿ DCC Bank ಮತ್ತು Apex Bank ದು ಸ್ವಲ್ಪ problem ಇದೆ ಅದನ್ನು submit ಮಾಡುತ್ತೇವೆ ಅದನ್ನು ಏನು ಮಾಡುತ್ತಾರೆ? ಏಕೆಂದರೆ Supplementary budget ಮುಗಿದಮೇಲೆ ಮತ್ತೆ ಅದರ ಮೇಲೆ demand ಇಲ್ಲವಲ್ಲ ಈ main budget already ಮಾಡಿಮುಗಿಸಿದ್ದಾರೆ At least ಹೇಳುವುದಕ್ಕೆ ಅವಕಾಶ ಕೊಡಿ 200 ಕೋಟಿ Supplementary budget ಗೆ House ನಲ್ಲಿ ಎರಡೆರಡು ದಿವಸ discussion ಆಗಿದೆ

ಅಧ್ಯಕ್ಷರು :– ಬೇಗ ಮುಗಿಸಿಬಿಡಿ ನಾಗರಾಜುರವರೇ

ಶ್ರೀ ವಾಟಾಳ್ ನಾಗರಾಜ್ – ಮುಗಿಸುತ್ತೇನೆ ಮಾನ್ಯ ಅಧ್ಯಕ್ಷರು ಬೇಗ ಮುಗಿಸಿ ಎಂದು ಹೇಳಿದರು, ನಾನು ಮುಗಿಸುತ್ತೇನೆ ಎಂದು ಹೇಳಿದೆ ಇದು ಅಶಿಸ್ತು ಆಗುತ್ತದೆ ಎಲ್ಲೋ ಒಂದು ಕಡೆ ಈ ರೀತಿ ಪೂರಕ ಅಂದಾಜನ್ನು ಮೂಲಭೂತವಾಗಿ ಸಂಪೂರ್ಣವಾಗಿ ಬಜೆಟ್ ಬಗ್ಗೆ ಸಮಗ್ರವಾಗಿ ಚರ್ಚೆಯಾಗಿ, ಅದು ಆದಮೇಲೆ ಬಂದಿದ್ದರೆ ಆಗ ಅದಕ್ಕೆ ನಿಜಕ್ಕೂ ಮಹತ್ತರ ಬೆಲೆ ಇತ್ತು ಏಕೋ ಮಾನ್ಯ ಯಡಿಯೂರಪ್ಪನವರು ಬಂದಮೇಲೆ ಇದಕ್ಕೆ ಬೇರೆ ದಿಕ್ಕನ್ನೇ ತಲುಪಿಸಿಬಿಟ್ಟಿದ್ದಾರೆ ಮಾನ್ಯ ಯಡಿಯೂರಪ್ಪನವರು ಆಯವ್ಯಯ ಮಂಡಿಸಿದರು ಎಂದರೆ ಇದಕ್ಕೆ ಏನೋ ಒಂದು ವಿಶೇಷ ಇರಬೇಕು ಈ ಪೂರಕ ಅಂದಾಜನ್ನು ಮಂಡಿಸಿ, ಇದರ ಬಗ್ಗೆ ಚರ್ಚೆಯಾಗಬೇಕು ಎನ್ನುವುವು ನೋಡಿದರೆ ಏಕೆ ಅವರು ಈ ರೀತಿ ತೀರ್ಮಾನ ತೆಗೆದುಕೊಂಡರು ಗೊತ್ತಿಲ್ಲ ಇದು ಸರಿಯಾದ ಕ್ರಮವಲ್ಲ ಇದು ಅನಾಗರೀಕವಾದದ್ದು ಮತ್ತು ಆರೋಗ್ಯಕರವಲ್ಲ ಮಾನ್ಯ ಮಾಧುಸ್ವಾಮಿಯವರು ಆಗಲೇ ಅದನ್ನೇ ವಾದ

ಮಾಡಿದರು, ಬಜೆಟ್ ಮೇಲೆ ಚರ್ಚೆಯಾಗುವುದಿಲ್ಲ ಎಂದು ನೀವು ತಿಳಿದುಕೊಂಡಿದ್ದರೆ, ಆ ನಷ್ಟ ನಿಮಗೆ ಆಗುತ್ತಿತ್ತು ನಾನು ನಿಮಗೆ ಹೊರಗಡೆ ಹಾಗೂ ಒಳಗಡೆ ಕೂಡ ಹೇಳಿದೆ ಆಯವ್ಯಯದ ಬಗ್ಗೆ ಉತ್ತರ ಕೊಡಲಿಲ್ಲವೆಂದರೆ ಮಾನ್ಯ ಹಣಕಾಸು ಸಚಿವರು ಆಗಿರುವಂತಹ ಉಪ ಮುಖ್ಯಮಂತ್ರಿಗಳು ಈ ನಷ್ಟ ಯಾರಿಗೆ ಜಾಸ್ತಿ ಆಗುತ್ತದೆ ಎಂದರೆ ನಿಮಗಾಗುತ್ತದೆ ಏಕೆಂದರೆ ನಾವು ಚರ್ಚೆ ಮಾಡುತ್ತೇವೆ, ನೀವು ಇಡೀ ರಾಜ್ಯದ ಮುಂದಿನ ಭವಿಷ್ಯದ ಬಗ್ಗೆ ಮುಂದಿನ ಚಿಂತನೆ ಬಗ್ಗೆ ಈ ರಾಜ್ಯದಲ್ಲಿ ಏನೇನು ಮಾಡುತ್ತೇವೆ ಎನ್ನುವ ವಿಚಾರದಲ್ಲಿ ಅದರಲ್ಲೂ ಜಾಸ್ತಿ ಮಾನ್ಯ ಯಡಿಯೂರಪ್ಪನವರು ಎಂದರೆ ತಲೆಯೆಲ್ಲಿ ಏನೆಲ್ಲಾ ಹೇಳಬೇಕು ಎಂದು ಬಹಳ ತುಂಬಿಕೊಂಡಿದ್ದೀರಿ ಇನ್ನೂ ನಿಮಗೆ ಸಮಾಧಾನವಾಗಿಲ್ಲ ಮೊನ್ನೆ ಬಜೆಟ್ ಮಂಡಿಸಿದ್ದೀರಿ ನಿಮಗೆ ಸಮಾಧಾನವಾಗಿಲ್ಲ ಇನ್ನೂ ಸಮಾಧಾನವಾಗಿಲ್ಲ ನನಗೆ ಅನಿಸುತ್ತದೆ ನಿಮಗೆ ಏನೋ ಇದೆ ನಿಮಗೆ ಒಂದು ತಲೆ ಸಾಕಾಗುವುದಿಲ್ಲ ರಾವಣನ ತರಹ ಮಾನ್ಯ ಯಡಿಯೂರಪ್ಪನವರಿಗೆ ಹತ್ತು ತಲೆ ಇದ್ದರೆ ಸಾಕಾಗುತ್ತಿತ್ತು ಏನೋ ಒಂದು ತಲೆ ಸಾಕಾಗುವುದಿಲ್ಲ ಈ ಕಡೆ ಐದು, ಇಲ್ಲಿ ಒಂದು ಈ ಕಡೆ ನಾಲ್ಕು ಹತ್ತು ಕೈಗಳು ಇದ್ದರೆ ಸಾಕಾಗುತ್ತಿತ್ತು ಎಂದು ನನಗೆ ಅನಿಸುತ್ತದೆ

ಶ್ರೀ ಬಿ ಎಸ್ ಯಡಿಯೂರಪ್ಪ :– ಕಳೆದ ಒಂದು ವರ್ಷದಲ್ಲಿ ಇಡೀ ಅಧಿವೇಶನದಲ್ಲಿ ಎಂದರೆ 14 ತಿಂಗಳಲ್ಲಿ ನಾನು ಸುಮಾರು ಒಂದೂವರೆ ಗಂಟೆ ಕೂಡ ಮಾತನಾಡಿಲ್ಲ ಈ ಶಾಸನಸಭೆಯಲ್ಲಿ Ruling party ನಲ್ಲಿ ಕುಳಿತು ಅತ್ಯಂತ ಕಡಿಮೆ ಮಾತನಡಿರುವವನು ನಾನು

ಶ್ರೀ ಜೆ ಸಿ ಮಾಧುಸ್ವಾಮಿ :– ನೀವು ಇಲ್ಲಿ ಕುಳಿತುಕೊಂಡಿರುವುದು ಅಧಿಕಾರ ಮಾಡುವುದಕ್ಕೆ ನಾವು ಇಲ್ಲಿ ಕುಳಿತುಕೊಂಡಿರುವುದು ಮಾತನಾಡುವುದಕ್ಕೆ ನೀವು ಮಾತನಾಡುತ್ತಾ ನಿಂತರೆ ನಮಗೆ ಕಷ್ಟ

ಶ್ರೀ ಬಿ ಎಸ್ ಯಡಿಯೂರಪ್ಪ – ನನ್ನ ತಲೆಯಲ್ಲಿ ತುಂಬಿಕೊಂಡಿರುವುದೆಲ್ಲಾವನ್ನು ನಾನು ಬಜೆಟ್‌ನಲ್ಲಿ ಹೇಳಿಬಿಟ್ಟಿದ್ದೇನೆ

ಶ್ರೀ ಜೆ ಸಿ ಮಾಧುಸ್ವಾಮಿ – ನಾವು ಎರಡು ದಿವಸ ಮಾತನಾಡಿದ್ದಕ್ಕೆ, ಉತ್ತರ ಎರಡೇ ಲೈನ್ ನಲ್ಲಿ ಹೇಳಬೇಕು ಸರ್

ಶ್ರೀ ಬಿ ಎಸ್ ಯಡಿಯೂರಪ್ಪ .– ನನಗೆ ನನ್ನದೇ ಆದಂತಹ ಕಲ್ಪನೆ ಏನಿತ್ತು, Ruling Party ಯಲ್ಲಿ ಇದ್ದಾಗ ಮಾತನಾಡುವ ಅಗತ್ಯ ಇಲ್ಲ ಅದನ್ನು ಕೃತಿಯಲ್ಲಿ ಆಯವ್ಯಯದ ಮೂಲಕ ಜನರಿಗೆ ತಲುಪುವ ರೀತಿಯಲ್ಲಿ ಮಾಡಿದ್ದೇನೆ ಎನ್ನುವ ಸಂತೃಪ್ತಿ, ಸಮಾಧಾನ ನನಗೆ ಇದೆ

ಶ್ರೀ ವಾಟಾಳ್ ನಾಗರಾಜ್ – ನೀವು ಆಯವ್ಯಯವನ್ನು ಮೂರು ಗಂಟೆ ಓದಿದ್ದೀರಿ 12 ಗಂಟೆಗೆ ನೀವು ಶಾಸ್ತ್ರ, ಸೂತ್ರ, ಮಾಟ, ಮಂತ್ರ, ಎಲ್ಲಾ ಕೇಳಿಕೊಂಡು ಆಮೇಲೆ ಹೂವು, ಕುಂಕುಮ, ವೀಳ್ಯದೆಲೆ ಕಟ್ಟಿಸಿಕೊಂಡು ಬಂದು correct ಆಗಿ ಇಲ್ಲಿಗೆ ಬರುವಷ್ಟು ಹೊತ್ತಿಗೆ 12 ಗಂಟೆಯಾಯಿತು ನೀವು ಆರಂಭ ಮಾಡಿದ ಮೇಲೆ ನಮ್ಮ ಭಾಷಣ ಕೇಳಬೇಕು ಎನ್ನುವುದು ಒಂದು ಕಡೆಯಾದರೆ, ಇನ್ನೊಂದು ಕಡೆ ಹೊಟ್ಟೆ ಹಸಿವು, ನೀವು ಹೇಳುವುದನ್ನೆಲ್ಲಾ ಕೇಳುವುದಕ್ಕೆ ಶಕ್ತಿ ಬೇಕಲ್ಲ ಎಲ್ಲಾ ಹೇಳಿಬಿಟ್ಟಿದ್ದೀರಿ ಬಿಡಿ ಹೆಚ್ಚು ಕಡಿಮೆ ಇನ್ನು ಮೂರ್ನಾಲ್ಕು ಜನ ಅರ್ಧಸಚಿವರು ಬಂದರೆ ಏನು ಹೇಳಬೇಕು ಅದನ್ನೆಲ್ಲಾ ಹೇಳಿದ್ದೀರಿ

ಶ್ರೀ ಮಲ್ಲಿಕಾರ್ಜುನ ಖರ್ಗೆ – ಮಾನ್ಯ ಅಧ್ಯಕ್ಷರೇ, ತಮ್ಮ ಕೊರಡಿಯಲ್ಲಿ ನಾನು ಏನೇ ಮಾಡಬೇಕಾದರೂ ಕೂಡ ವಾಟಾಳ್ ನಾಗರಾಜ್‌ರವರನ್ನು ಕೇಳಿಯೇ ಮಾಡುವುದು ಎಂದು ಹೇಳಿದರು ಅದಕ್ಕಾಗಿ ಇದನ್ನು ನಿಮ್ಮನ್ನು ಕೇಳಿಯೇ ಮಂಡಿಸಿದ್ದಾರೆ ಆದುದರಿಂದ ನೀವು ಮಾತನಾಡುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೆ

ಶ್ರೀ ವಾಟಾಳ್ ನಾಗರಾಜ್ – ನೀವು ಇದುವರೆಗೂ ಕೇಳುತ್ತಿದ್ದಿರಿ, ನನ್ನನ್ನು ಏಕೆ ಕೇಳಲಿಲ್ಲವೆಂದು ಅವರನ್ನು ಕೇಳಿದಾಗ, ಅವರು ಈ ಸಲ ಮಾನ್ಯ ಖರ್ಗೆಯವರನ್ನು ಕೇಳಿದ್ದೇವೆ ಆದ್ದರಿಂದ ನಿಮ್ಮನ್ನು ಕೇಳುವುದು ಬೇಕಾಗಿಲ್ಲವೆಂದು ಹೇಳಿದರು ಆದ್ದರಿಂದ ನಿಮಗೂ ಅವರಿಗೂ ಒಳಗೊಳಗೆ ಏನೇನು ಇದೆಯೋ ನನಗಂತೂ ಗೊತ್ತಿಲ್ಲ ಅವರನ್ನು ಕೇಳಿ ನೀವು ಅವರು ಹೇಳಿದ ಮಾತನ್ನು ನಾನು ಹೇಳುತ್ತಿದ್ದೇನೆ

ಶ್ರೀ ಮಲ್ಲಿಕಾರ್ಜುನ ಖರ್ಗೆ – ನೀವು ಬಿಜೆಪಿ, ಆರ್‌ಎಸ್‌ಎಸ್‌ದು ವಾಸನೆಯಾದರೂ ತೆಗೆದುಕೊಳ್ಳುತ್ತೀರಿ, ನಮಗೆ ವಾಸನೆ ಕೂಡ ಗೊತ್ತಿಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ :– ವಾಸನೆ ಏಕೆ ? ಊಟವೇ ನಿಮಗೆ ಸಿಗುತ್ತದೆ

ಶ್ರೀ ವಾಟಾಳ್ ನಾಗರಾಜ್ – ವಾಸನೆ ಏಕೆ ಸ್ವಾಮಿ? ನಿಮಗೆ ಊಟವೇ ಸಿಗುತ್ತದೆ ನಾವು ಬರೀ ವಾಸನೆ ಕುಡಿಯುವವರು ನಾವಿಲ್ಲಿದ್ದೇವೆ ನೋಡಿ ಐದು ಜನ, ನಾವು ಬರೀ ವಾಸನೆ ಕುಡಿದು ಬದುಕಿರುವವರು ನೀವು ಮೃಷ್ಟಾನ್ನ ಭೋಜನ ಊಟ ಮಾಡಿರುವವರು ನಾವು ವಾಸನೆ ಜನ

ಶ್ರೀ ಮಲ್ಲಿಕಾರ್ಜುನ ಖರ್ಗೆ :– ಸದ್ಯಕ್ಕೆ ಸ್ವಲ್ಪ ದೋಸ್ತಿ ಇದೆ ಅದನ್ನು ನೀವು ಒಪ್ಪಿಕೊಳ್ಳಿ ಅದನ್ನು ನೀವು ಸುಮ್ಮನೆ ಏಕೆ ಹೇಳುತ್ತೀರಿ? ಸದ್ಯಕ್ಕೆ ಇದೆ

ಶ್ರೀ ವಾಟಾಳ್ ನಾಗರಾಜ್ .– ಸದ್ಯಕ್ಕೆ ಇದೆ ಎನ್ನುತ್ತೀರಾ? ಇಲ್ಲಿ ಏನಾಗಿದೆ ಎಂದರೆ ಆಯವ್ಯಯ ಮಂಡನೆ ಮಾಡುವಾಗ ಹೇಳುವಂಥದ್ದು ಒಂದು ಮತ್ತೆ ಇಲ್ಲಿ ಅದಕ್ಕೆ 5 50 ಯಿಂದ 6 ಸಾವಿರ ಕೋಟಿ ರೂಪಾಯಿ ಅದಕ್ಕೆ ಸೇರಿಸುವಂಥದ್ದು ಇನ್ನೊಂದು ಇದು ಏನಾಗುತ್ತದೆ ಎಂದರೆ ಆಯವ್ಯಯ ಎನ್ನುವ ಒಂದು ಅರ್ಥವನ್ನು ಕಳೆದುಕೊಳ್ಳುತ್ತದೆ ಈ ಅರ್ಥ ವ್ಯವಸ್ಥೆಯನ್ನೇ ಬುಡಮೇಲು ಮಾಡುತ್ತದೆ ನಿಜಕ್ಕೂ ಇದು ಒಳ್ಳೆಯದಲ್ಲ ನೀವು ಅನೇಕ ವಿಚಾರದಲ್ಲಿ ಹೇಳಿರತಕ್ಕಂಥಾದ್ದು ಎಂದರೆ, ಒಂದು ವೀರಪ್ಪನ್ ಕಾರ್ಯಾಚಾರಣೆಗೆ ನೇಮಿಸಲಾಗಿದ್ದ ಜಂಟಿ STF ನಿಂದ ನೊಂದವರಿಗೆ, ಮೃತಪಟ್ಟವರಿಗೆ, ಸಮೀಪದ ಬಂಧುಗಳಿಗೆ ಮತ್ತು ಅದರ ಜೊತೆಗೆ ನ್ಯಾಯಮೂರ್ತಿ ಶ್ರೀ ಎ ಜಿ ಸದಾಶಿವ ಆಯೋಗದ ವರದಿ ಆಧಾರದ ಮೇಲೆ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದಿಂದ ಶಿಫಾರಸ್ಸು ಮಾಡಿರುವ ಪ್ರಕಾರ 89 ಮಂದಿಗೆ ಪರಿಹಾರ ನೀಡುವುದಕ್ಕೆ 248 ಲಕ್ಷ ರೂಪಾಯಿಗಳನ್ನು ಇನ್ನು ಹೆಚ್ಚುವರಿಯಾಗಿ ನೀವು ಕೇಳಿದ್ದೀರಿ ನನಗೆ ಅನಿಸುತ್ತದೆ, ತಾವು ನಾಗಪ್ಪನವರ ಬಗ್ಗೆ ಕೇಳಿರಬೇಕು ನಾಗಪ್ಪನವರನ್ನು ಮರೆತು ಬಿಟ್ಟಿರೇನೋ ಏನೋ ಗೊತ್ತಿಲ್ಲ ನಮ್ಮ ಕೊಳ್ಳೆಗಾಲದ ಹನೂರು ಶಾಸಕರಾಗ ನಾಗಪ್ಪನವರನ್ನು ಮರೆತು ಬಿಟ್ಟಿರೇನೋ ಗೊತ್ತಿಲ್ಲ ಆದ್ದರಿಂದ ಅವರನ್ನು ನೀವು ಮರೆತಿರಾ? ಅವರದ್ದು ಯಾವ ರೀತಿ

ಅಪಹರಣವಾಯಿತು? ಅವರ ಅಂತ್ಯ ಯಾವ ರೀತಿಯಾಯಿತು? ಅದಾದಮೇಲೆ ಅದರ ತನಿಖೆಗೆ ಶ್ರೀ ವೈದ್ಯನಾಥನ್ ನೇಮಕವಾಯಿತು ಅದರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ ಆ ವರದಿಯನ್ನು ಸಲ್ಲಿಸಿ ಎಷ್ಟು ವರ್ಷವಾಯಿತು? ಅದರ ವರದಿಯನ್ನು ಸಲ್ಲಿಸಿ ಆರರಿಂದ ಏಳು ತಿಂಗಳಾಗಿದೆ ಈ ವರದಿಯನ್ನು ಸದನದ ಮುಂದೆ ಏಕೆ ಮಂಡಿಸಲಿಲ್ಲ? ಕಾರಣವೇನು? ಆ ವರದಿಯನ್ನು ಸದನದ ಮುಂದೆ ಮಂಡಿಸಿ, ಅವರ ಬಗ್ಗೆ ಇಲ್ಲಿ ಚರ್ಚೆಯಾಗಬೇಕು ಮಾನ್ಯ ಗೃಹಸಚಿವರು ಬಂದಿದ್ದಾರೆ ಆ ವರದಿ ಏನಾಯಿತು? ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ ಮೇಲೆ ತಾವು ಅದನ್ನು ಸದನದ ಮುಂದೆ ಮಂಡಿಸಬೇಕಾಗಿತ್ತು ಮತ್ತು ಚರ್ಚೆಗೆ ಅವಕಾಶ ಕೊಡಬೇಕಾಗಿತ್ತು ನಾವು ನಾಗಪ್ಪನವರ ಅಪಹರಣವನ್ನು ಅಷ್ಟು ಲಘುವಾಗಿ ತೆಗೆದುಕೊಳ್ಳುವುದಲ್ಲ ಅದರ ಬಗ್ಗೆ ಏನು ವರದಿ ಕೊಟ್ಟಿದ್ದಾರೆ ಎನ್ನುವುದು ನಮಗೆ ಗೊತ್ತಿಲ್ಲ ಅದನ್ನು ಗೌಪ್ಯವಾಗಿ ಇಟ್ಟಿದ್ದೀರಿ ಆ ವರದಿಯನ್ನು ಗೌಪ್ಯವಾಗಿ ಇಡುವಂತಹ ಕಾರಣವೇನು? ಆದ್ದರಿಂದ ನಾನು ಈಗಲೂ ತಮ್ಮಲ್ಲಿ ಒತ್ತಾಯ ಮಾಡುತ್ತಿದ್ದೇನೆ, ಆ ವರದಿಯನ್ನು ಸಂಪೂರ್ಣವಾಗಿ ಬಹಿರಂಗಪಡಿಸಬೇಕು, ಜೊತೆಗೆ ಅವರ ಕುಟುಂಬಕ್ಕೆ ಎರಡು ಕೋಟಿ ರೂಪಾಯಿಗಳನ್ನು ಸರ್ಕಾರ ಕೊಡಬೇಕು ನಾನು ಬಹಳ ಸಲ ಹೇಳಿದ್ದೇನೆ ನೀವು ಎಲ್ಲರಿಗೂ ಕೊಟ್ಟಿದ್ದೀರಿ, ಕಾರ್ಯಾಚರಣೆ ನಡೆಸಿದಂತಹ ಎಸ್‌ಟಿಎಫ್ ಪೊಲೀಸ್ ಅಧಿಕಾರಿಗಳಿಗೆ, ನಿವೃತ್ತ ಅಧಿಕಾರಿಗಳಿಗೆ ಅನೇಕರಿಗೆ ಕೊಟ್ಟಿದ್ದೀರಿ ನೀವು ಬಹಳ ಪ್ರಾಮುಖ್ಯವಾಗಿ ಕೊಡಬೇಕಾಗಿರುವುದು ಒಂದು ನಾಗಪ್ಪನವರ ಸಂಸಾರಕ್ಕೆ ಕನಿಷ್ಟ ಎರಡು ಕೋಟಿ ರೂಪಾಯಿಯನ್ನು ಕೊಡಬೇಕು ಮಾನ್ಯ ನಾಗಪ್ಪನವರ ಸಂಸಾರಕ್ಕೆ ಎರಡು ಕೋಟಿ ರೂಪಾಯಿಗಳನ್ನು ಕೊಡಬೇಕು ಅವರು ಈ ಸದನದ ಶಾಸಕರಾಗಿದ್ದವರು, ಮಂತ್ರಿಯಾಗಿದ್ದವರು, ರಾಜ್ಯದಲ್ಲಿ 30 ವರ್ಷಗಳ ಕಾಲ ರಾಜಕಾರಣವನ್ನು ಮಾಡಿದಂಥವರು ಅವರು ಅಪಹರಣಕ್ಕೊಳಗಾಗಿ ಅಂತಿಮ ಯಾವ ಒಂದು ಕೆಟ್ಟ ರೀತಿಯಲ್ಲಿ ಮರಣವನ್ನು ಹೊಂದಿದ್ದಾರೆ, ಆದುದರಿಂದ ಅವರ ಸಂಸಾರಕ್ಕೆ ಹಣವನ್ನು ಕೊಡಬೇಕಾಗುತ್ತದೆ ಇದು ಅತ್ಯಂತ ಗಂಭೀರವಾದುದು ಇನ್ನು ಅಬ್ದುಲ್ ಕರೀಂ ಎಂದು ಇವರು ಮೈಸೂರಿನಲ್ಲಿದ್ದು ಶಕೀಲ್ ಎನ್ನುವವರು ಅವರ ಮಗ ಸಬ್ ಇನ್‌ಸ್ಪೆಕ್ಟರ್ ಆಗಿದ್ದು ಇವರು ಕಾಡುಗಳ್ಳನಿಂದ ಸತ್ತಂಥ ಶಕೀಲ್‌ರವರ ತಂದೆ ಕರೀಂರವರು ಸರ್ವೋಚ್ಚ

ನ್ಯಾಯಾಲಯದವರೆಗೂ ಹೋರಾಟ ಮಾಡಿದ್ದಾರೆ ಸರ್ಕಾರ–ಕನಿಷ್ಟ ಸೌಜನ್ಯಕ್ಕಾದರೂ ಅವರನ್ನು "ನೀವೇನು ಮಾಡಿದ್ದೀರಿ, ಏನು ನಡೆಸುತ್ತಿದ್ದೀರಿ? ನಿಮ್ಮ ಪರಿಸ್ಥಿತಿ ಏನು? ನಿಮ್ಮ ಹಣಕಾಸಿನ ಪರಿಸ್ಥಿತಿ ಏನು? ಎಂದು ಇದುವರೆಗೂ ಕೇಳಲಿಲ್ಲ" ಮಾನ್ಯ ಎಂ ಪಿ ಪ್ರಕಾಶ್‌ರವರೇ, ಸರ್ವೋಚ್ಚ ನ್ಯಾಯಾಲಯ ಕರೀಂರವರಿಗೆ ಹೇಳಿತು, "ಈ ದೇಶ ಉಳಿಸುವಂತಹ ಮಹೋನ್ನತವಾದ ಕೆಲಸವನ್ನು ನೀವು ಮಾಡಿದ್ದೀರಿ" ಎಂದು ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರೇ ಬಹಿರಂಗವಾಗಿ ಇಡೀ ನ್ಯಾಯಾಲಯದಲ್ಲಿ ಅವರಿಗೆ ಗೌರವವನ್ನು ಸೂಚಿಸುತ್ತಾರೆ ನನಗನ್ನಿಸುವೇನೆಂದರೆ ಈ ಸರ್ಕಾರ ಅವರನ್ನು ಕೇಳಿ, ಏನು ಮಾಡಬೇಕೆಂಬ ಚಿಂತನೆಯನ್ನು ಸರ್ಕಾರದವರು ಮಾಡಲಿಲ್ಲ "ಇನ್ನು ವಿಧಾನಸೌಧ, ಶಾಸಕರ ಭವನ, ಉಚ್ಚನ್ಯಾಯಾಲಯ, ಹಾಗೂ ಮತ್ತಿತರ ಕಟ್ಟಡಗಳ ಸೂಕ್ತ ಭದ್ರತೆಗಾಗಿ ಆಯವ್ಯಯದಲ್ಲಿ ಹಣವನ್ನು ಒದಗಿಸಲಾಗಿರಲಿಲ್ಲವಾದ್ದರಿಂದ ಇನ್ನೂರು ಲಕ್ಷ ರೂಪಾಯಿಗಳನ್ನು ಹೆಚ್ಚುವರಿಯಾಗಿ ಒದಗಿಸಿದ್ದೇವೆ" ಅಂದರೆ ಎರಡು ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ ಇಲ್ಲಿ ನನಗನಿಸುವುದೇನೆಂದರೆ, ಈ ಭದ್ರತೆಯನ್ನು ಮಾಡತಕ್ಕಂಥವರು ಪೊಲೀಸ್ ಇಲಾಖೆಯವರು, ತಮಗೂ ಗೊತ್ತಿದೆ ಇತ್ತೀಚಿನ ದಿವಸಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಭಯೋತ್ಪಾದನೆ ಜಾಸ್ತಿಯಾಗುತ್ತಿದೆ ಒಂದು ಕಡೆ ನಕ್ಸಲ್ ಅವರದ್ದೇ ಬೇರೆ, ಅವರ ತತ್ವ, ಸಿದ್ಧಾಂತದ ಬಗ್ಗೆ ಅವರದೇ ಆದಂತಹ ಹೋರಾಟ ಮಾಡಿದ್ದಾರೆ ಅವರ ಬಗ್ಗೆ ಸರ್ಕಾರ ಇದುವರೆಗೂ ಅವರ ಜೊತೆಗೆ ಮಾತನಾಡುತ್ತೇವೆಂದು ಹೇಳಲಿಲ್ಲ ಅವರನ್ನು ಮಾತನಾಡುವುದಕ್ಕೆ ಕರೆಯುತ್ತೇವೆಂದು ಹೇಳಲಿಲ್ಲ, ಅವರ ಬೇಡಿಕೆ ಏನು ಎಂದು ಕೇಳಲಿಲ್ಲ ಆದರೆ ಆ ಪ್ರದೇಶದಲ್ಲಿ ಅನೇಕ ದುರಂತಗಳು ನಡೆದಿದೆ ಆ ದುರಂತದ ಬಗ್ಗೆ ಕೂಡ ಸರ್ಕಾರ ಮೌನವಾಗಿದೆ ಈ ದೃಷ್ಟಿಯಲ್ಲಿ ನೋಡಿದರೆ ಒಂದು ಕಡೆ ನಕ್ಸಲರ ಬಗ್ಗೆ ಸರ್ಕಾರದ ನಿಲುವು ಏನು? ಸರ್ಕಾರದ ಚಿಂತನೆ ಏನು? ಇದು ಕರ್ನಾಟಕದಲ್ಲಿ ಒಂದು ಕಡೆ ಭಯೋತ್ಪಾದನೆ ಇನ್ನೊಂದು ಕಡೆ ನಕ್ಸಲರು, ಈ ರೀತಿಯಾದರೆ ಶಾಂತಿಯುತವಾದಂಥ ಕರ್ನಾಟಕ ಅಶಾಂತ ವಾತಾವರಣಕ್ಕೆ ತಿರುಗಿ ಭಯೋತ್ಪಾದನೆ ಬೇರೆ ಕಡೆಗಳಂತೆ ಕರ್ನಾಟಕದಲ್ಲೂ ಅದೇ ಪರಿಸ್ಥಿತಿಗೆ ಹೋಗುತ್ತದೆಂದು ಆದರೆ, ನಾನು ತಮ್ಮಲ್ಲಿ

ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ ತಾವು ಉಪ ಮುಖ್ಯಮಂತ್ರಿಗಳಾಗಿದ್ದೀರಿ, ಇಲ್ಲಿ ಮಾನ್ಯ ಗೃಹ ಸಚಿವರು ಇದ್ದಾರೆ ತಾವೆಲ್ಲರೂ ಚಿಂತನೆ ಮಾಡಿ ಈ ರಾಜ್ಯದಲ್ಲಿ ಯಾವ ರೀತಿಯಾಗಿ ಈ ಒಂದು ಪಿಡುಗನ್ನು ತಪ್ಪಿಸಬೇಕೆಂಬ ಬಗ್ಗೆ ಸಮಗ್ರವಾದ ಚಿಂತನೆಯಾಗಬೇಕೆಂಬ ಬಗ್ಗೆ, ತಮ್ಮಿಂದ ಪ್ರಾಮಾಣಿಕವಾದ ಕೆಲಸವಾಗಿಲ್ಲವೆಂದು ನನಗೆ ನೋವಾಗಿದೆ ಮಾನ್ಯ ಗೃಹಮಂತ್ರಿಯವರು ಅನೇಕ ಸಾರಿ ಹೇಳಿದರು ನಕ್ಸಲರ ಬಗ್ಗೆ ಅವರ ತತ್ವ ಸಿದ್ಧಾಂತಗಳೇನು? ಸರ್ಕಾರದ್ದು ಏನು? ಹೊರಗಡೆ ಏನು? ಇದರ ಬಗ್ಗೆ ಅವರು ಏನೂ ಸ್ಪಷ್ಟಪಡಿಸಿಲ್ಲ ಇದು ಹೀಗೆ ಬೆಳೆಯುತ್ತಾ ಹೋಗುತ್ತಿದ್ದರೆ, ಯಾರಾದರೂ ಒಂದು ಕಡೆ ಅವರ ಸಮಸ್ಯೆಗಳು ಏನೆಂದು ಕೇಳಿ, ಏನು ಮಾಡಬೇಕೆಂಬ ಬಗ್ಗೆ ಒಂದು ಚಿಂತನೆಯನ್ನು ಮಾಡುವಂಥಾದ್ದು ಕರ್ತವ್ಯವಾಗಿದೆ, ಅದರ ಬಗ್ಗೆ ಚಿಂತನೆ ಮಾಡಬೇಕು ಇನ್ನು ಇಡೀ ಪೊಲೀಸ್ ಇಲಾಖೆಯಲ್ಲಿ ಅಸಮಾಧಾನವಿದೆಯೆಂಬ ವಿಚಾರವನ್ನು ಮಾನ್ಯ ಗೃಹಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ ತಾವು ಈ ಅಸಮಾಧಾನವನ್ನು ಸರಿಪಡಿಸುವುದಕ್ಕೆ ಕನಿಷ್ಟ ನಿಮ್ಮ ಕಾಲದಲ್ಲಿಯಾದರೂ ಆಗಬೇಕು ನಾನು ಅನೇಕ ಗೃಹಮಂತ್ರಿಗಳನ್ನು ಇಲ್ಲಿ ನೋಡಿದ್ದೇನೆ ತಾವು ಈಗ ಆ ಸ್ಥಾನದಲ್ಲಿ ಕುಳಿತಿದ್ದೀರಿ **ಶ್ರೀ ಎಂ ವಿ ರಾಮರಾವ್‌ರವರು ಇದ್ದದ್ದನ್ನು ನೋಡಿದ್ದೇನೆ, ಶ್ರೀ ಹೆಚ್ ಎಂ ಚನ್ನಬಸಪ್ಪನವರನ್ನು, ಶ್ರೀ ಸಿದ್ಧವೀರಪ್ಪನವರನ್ನು, ಶ್ರೀ ಬಸವಲಿಂಗಪ್ಪನವರನ್ನು,** ಆ ಸ್ಥಾನದಲ್ಲಿ ನೋಡಿದ್ದೇನೆ

ಶ್ರೀ ಜೆ ಸಿ ಮಾಧುಸ್ವಾಮಿ .– ಮಾನ್ಯ ಗೃಹಮಂತ್ರಿಯವರಿಗೆ ಅಸಮಾಧಾನವಿರಬೇಕು ಅವರಿಗೆ ಇವತ್ತು ಒಂದೇ ಒಂದು ಹೊಸ ಪೊಲೀಸ್ ಸ್ಟೇಷನ್ ಅನ್ನು ಮಂಜೂರು ಮಾಡುವುದಕ್ಕೆ ಅಧಿಕಾರವಿಲ್ಲ, ಹಣವಿಲ್ಲ ನೀವು ಇಲಾಖೆಯ ಅಸಮಾಧಾನವನ್ನು ಪರಿಹರಿಸಿಯೆಂದು ಅವರಿಗೆ ಹೇಳುತ್ತಿದ್ದೀರಿ

ಶ್ರೀ ವಾಟಾಳ್ ನಾಗರಾಜ್ – ನಿಜ, ಅವರ ಪರಿಸ್ಥಿತಿ ನನಗೆ ಗೊತ್ತಿದೆ ಆದರೂ ಗೃಹಮಂತ್ರಿಗಳಾಗಿದ್ದಾರೆ, ಅವರ ಪರಿಸ್ಥಿತಿ ನನಗೆ ಗೊತ್ತು ಆದರೂ ಅವರು ಗೃಹಮಂತ್ರಿಗಳಾಗಿದ್ದಾರೆ ಅವರು ಆ ಹೊಣೆಯನ್ನು ಹೊರಬೇಕಲ್ಲಾ

ಶ್ರೀ ಜೆ ಸಿ ಮಾಧುಸ್ವಾಮಿ – ಆದರೂ, ಎನ್ನುವ ಪದಕ್ಕೆ ಬಹಳ ಮಹತ್ವವಿದೆ, ಆದರೂ ಎನ್ನುವ ಪದವನ್ನು ಯಾರೂ ಇದುವರೆಗೂ ಅರ್ಥೈಸುವುದಕ್ಕೆ ಆಗಿಲ್ಲ

ಶ್ರೀ ವಾಟಾಳ್ ನಾಗರಾಜ್ – ಆದರೂ, ಎನ್ನುವ ಪದವನ್ನು ಈಗ ವಿಶ್ಲೇಷಿಸುವುದಕ್ಕೆ ಇದು ಸಮಯವಲ್ಲ

ಶ್ರೀ ಎಂ ಪಿ ಪ್ರಕಾಶ್ – ಆದರೂ ಆಗಿದ್ದೀರಿ, ಪಾಪ ಎನ್ನುವ ಮಾತದು ಆದರೂ ಎನ್ನುವಂಥಾದ್ದು ನನಗೂ ತಿಳಿಯುತ್ತದೆ ಆದುದರಿಂದ ನೀವು ಆ ಬಗ್ಗೆ ಯೋಚನೆ ಮಾಡಬೇಕಾಗಿಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ – ನೀವು ನೊಂದುಕೊಳ್ಳಬಾರದು

ಶ್ರೀ ವಾಟಾಳ್ ನಾಗರಾಜ್ – ತಾವು ನನ್ನ ಮಾತಿನಿಂದ ನೋವು ಪಡಬಾರದು, ನೊಂದುಕೊಳ್ಳಬಾರದು, ನಾನು ವಸ್ತುಸ್ಥಿತಿಯನ್ನು ಹೇಳುತ್ತಿದ್ದೇನೆ ನೀವು ಬಹಿರಂಗವಾಗಿ ಒಪ್ಪಿಕೊಳ್ಳದೇ ಇರಬಹುದು, ಅಂತರಂಗವಾಗಿಯಾದರೂ ಒಪ್ಪಿಕೊಳ್ಳುತ್ತೀರಿ ಅದು ನನಗೆ ಗೊತ್ತಿದೆ ಆದರೆ ಇದನ್ನು ಚರ್ಚೆ ವಸ್ತುವಾಗಿ ಮಾಡುವುದು ಬೇಕಾಗಿಲ್ಲ ನಿಮಗೆ ನಾನು ಹೇಳುವುದೇನೆಂದರೆ ಒಂದು ಸವಾಲಾಗಿ ಸ್ವೀಕರಿಸಿ, ಸಮಾಜವಾದಿ ಹಿನ್ನೆಲೆ ಇದೆ, ಅನೇಕ ಚಳುವಳಿಗಳ ಹಿನ್ನೆಲೆ ಇದೆ, ತಾವು ಎಲ್ಲರ ಜೊತೆಯಲ್ಲಿ ಸೇರಿದ್ದೀರಿ ಇವೆಲ್ಲದರ ಹಿನ್ನೆಲೆಗಳಿಂದ, ನಾನು ನಿಮಗೆ ಏನು ಹೇಳುತ್ತೇನೆಂದರೆ, ತಮಗೆ ಕಳಕಳಿ ಇದೆ, ಅದನ್ನು ನಾನು ಒಪ್ಪುತ್ತೇನೆ ಆದರೆ ನಿಮಗೆ ಸಿಕ್ಕಿರುವ ಇಲಾಖೆ ಗೃಹ ಇಲಾಖೆ, ಈ ಇಲಾಖೆಯಲ್ಲಿ ಎಲ್ಲೊ ಕಡೆ ತೀವ್ರ ಅಸಮಾಧಾನ ಇದೆ ತಮಗೆ ಈ ಬಗ್ಗೆ ಹೇಳುತ್ತೇನೆ ಅನೇಕ ಸಂದರ್ಭದಲ್ಲಿ ಪೊಲೀಸ್‌ನವರಿಗೆ ಯಾವ ಕಾಲದಲ್ಲೂ ಯಾವ ಸರ್ಕಾರವೂ ಪ್ರಾಮಾಣಿಕವಾಗಿ ಅವರಿಗೆ ಸಹಾಯವನ್ನು ಮಾಡಲಿಲ್ಲ ನಾನು ಒಂದು ವಿಚಾರವನ್ನು ನೇರವಾಗಿ ಕೇಳುತ್ತೇನೆ ಅವರಿಗೆ ಪ್ರತಿ ದಿವಸ ಬೇರೆ ಸರ್ಕಾರಿ ನೌಕರರಂತೆ ಬೆಳಿಗ್ಗೆ 11 00 ಗಂಟೆಗೆ ಬಂದು ಸಂಜೆ 5 30 ಗಂಟೆಗೆ ಹೋಗುವುದಕ್ಕೆ ಎಲ್ಲಿ ಇದೆ? ಅವರು 24 ಗಂಟೆಗಳ ಕಾಲ ಅವರು ಸರ್ಕಾರಿ ಕೆಲಸದಲ್ಲಿ ಇರಲೇ ಬೇಕು ಅವರಿಗೆ ನಿದ್ರೆ ಇಲ್ಲ, ವ್ಯವಸ್ಥೆ ಇಲ್ಲ, ಅವರಿಗೆ ಏನಾದರೂ ವಿಶೇಷ ಭತ್ಯೆಯನ್ನು ಕೊಡುವುದಾಗಲಿ,

ವಿಶೇಷ ಸವಲತ್ತುಗಳನ್ನು ಕೊಡುವುದಾಗಲಿ, ಎಲ್ಲಾದರೂ ನೀವು ನೋಡಿದ್ದೀರಾ? ಖಂಡಿತ ಇಲ್ಲ ಇದರಿಂದ ಏನಾಗುತ್ತದೆಂದರೆ, ಅಸಮಾಧಾನವೆನ್ನುವ ಹೊಗೆ ಜಾಸ್ತಿಯಾದಾಗ ಇದು ಎಲ್ಲಿಗೆ ತಲುಪಬಹುದು? ಮನುಷ್ಯತ್ವದಿಂದ ನಾವು ಎಲ್ಲೋ ಒಂದು ಕಡೆ ಸಮಾಧಾನ ಪಟ್ಟರೆ ಸಂತೋಷ, ಸಮಾಧಾನ ಆಗಲಿಲ್ಲವೆಂದರೆ, ಅವರು ಬೀದಿಗೆ ಬರುವಂಥ ಕಾಲ ಸನ್ನಿಹಿತವಾಗುತ್ತದೆ ಅದು ಆಗಬಾರದು, ಅದು ಒಳ್ಳೆಯ ಸೂಚನೆಯಲ್ಲ ನಾನು ಎರಡು, ಮೂರು ವಿಚಾರಗಳನ್ನು ತಮಗೆ ತಿಳಿಸುತ್ತೇನೆ ಪೊಲೀಸರ ಗಂಡಾಂತರ ಭತ್ಯೆ ಎಂದು ಇದೆ, ಅಂದರೆ risk allowance ಇದೆ ಅದನ್ನು ಇದುವರೆಗೂ ಕೊಟ್ಟಿಲ್ಲ ಇದರ ಬಗ್ಗೆ ಏನು ಮಾಡಿದ್ದೀರಿ? ಕೊಟ್ಟಿದೀರಾ? ಕೊಟ್ಟಿಲ್ಲ ಕನಿಷ್ಟ ಇವರಿಗೆ ಸಮವಸ್ತ್ರವನ್ನು ಕೊಟ್ಟು ಎಷ್ಟು ದಿವಸಗಳು ಆಯಿತು? ಅದು ವರ್ಷಗಟ್ಟಲೆ ಆಗಿ ಹೋಗಿದೆ ವೈದ್ಯಕೀಯ ಭತ್ಯೆಯನ್ನು ಕೊಟ್ಟಿದ್ದೀರಾ? ಕೊಟ್ಟಿಲ್ಲ ಇನ್ನು ಅಂಗರಕ್ಷಕರಿಗೆ ಸಫಾರಿ ಬಟ್ಟೆಯನ್ನು ಕೊಟ್ಟಿದ್ದೀರಾ? ಕೊಟ್ಟಿಲ್ಲ ನಾನು ಇದನ್ನು ಪಟ್ಟಿ ಮಾಡಿ ಹೇಳುತ್ತಿದ್ದೇನೆ ಕನಿಷ್ಟ ಸೊಂಟಕ್ಕೆ ಕಟ್ಟುವಂಥ ಬೆಲ್ಟ್ ಕೊಟ್ಟು ಎಷ್ಟು ವರ್ಷಗಳಾಗಿರಬಹುದು? ಮೂರು ವರ್ಷ, ನಾಲ್ಕು ವರ್ಷಗಳು ಕನಿಷ್ಟವೆಂದು ಹೇಳಬಹುದು, ಇನ್ನು ಬೂಟ್ 3,4 ವರ್ಷಗಳಾಗಿರಬಹುದು

ಶ್ರೀ ಅಂಜನಮೂರ್ತಿ – ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಪೊಲೀಸ್‌ನವರ ಬಗ್ಗೆ ಮಾತನಾಡುತ್ತಿದ್ದಾರೆ ಅವರು ಕನ್ನಡ ಚಳುವಳಿ ಮಾಡಿದಾಗ ಇನ್ನಿತರ ಸನ್ನಿವೇಶಗಳಲ್ಲಿ ಪೊಲೀಸ್‌ನವರಿಂದಲೇ ಅವರಿಗೆ ಹಿಂಸೆಯಾಗಿರುವುದು ಇವತ್ತು ಅವರ ಬಗ್ಗೆಯೇ ಒತ್ತು ಕೊಟ್ಟು ಹೇಳುತ್ತಿದ್ದಾರೆ ಅವರ ಬೂಟ್‌ಗಳ ಬಗ್ಗೆ, ಬಟ್ಟೆಯ ಬಗ್ಗೆ ಕೇಳುತ್ತಿದ್ದಾರೆ ಏನೆಂಬುದು ಗೊತ್ತಾಗುತ್ತಿಲ್ಲ ತಾವು ಚಳುವಳಿ ಮಾಡಿದಾಗ ಪೊಲೀಸರ ಅತಿಥಿಯಾಗಿದ್ದೀರಿ ಅವರ ಬಗ್ಗೆ ಹೆಚ್ಚಿನ ಕಳಕಳಿಯನ್ನು ತೋರಿಸುತ್ತಿದ್ದೀರಿ

(ಈ ಹಂತದಲ್ಲಿ ಅಧ್ಯಕ್ಷ ಪೀಠವನ್ನು ಉಪಾಧ್ಯಕ್ಷರು ಅಲಂಕರಿಸಿದರು)

ಶ್ರೀ ವಾಟಾಳ್ ನಾಗರಾಜ್ – ಅವರು ನಮಗೆ ತೊಂದರೆ ಕೊಡುವ ವಿಚಾರ ಬೇರೆ, ಅವರನ್ನು ಮನುಷ್ಯರಾಗಿ ನೋಡಿಕೊಳ್ಳಬೇಕಲ್ಲಾ, ಅವರು ಕಾನೂನನ್ನು

ಪಾಲನೆ ಮಾಡಲೇಬೇಕು ಇನ್ನು ಸಂಚಾರಿ ಪೊಲೀಸ್‌ನವರ ಬಗ್ಗೆಯೂ ಒಂದು ಸ್ಪಷ್ಟ ನಿಲುವಿಲ್ಲ ' ನಾನು ಅನೇಕ ಸಾರಿ ಹೇಳಿದ್ದೇನೆ ಅವರಿಗೆ ಸುಮಾರು 40 ವರ್ಷಗಳಿಗೆ ಕಿವಿ ಕಿವುಡಾಗುತ್ತದೆ ಕಂಟ್ರೋಲ್ ರೂಮ್‌ನವರಿಗೂ ಕಿವಿ ಕೇಳಿ ಕೇಳಿ, ಎಷ್ಟೋ ಜನರಿಗೆ ಕಿವಿ ಕಿವುಡಾಗಿದೆ ಇನ್ನು ಗುಪ್ತದಳದವರನ್ನು ಕೇಳುವವರೇ ಗತಿ ಇಲ್ಲ ಅವರನ್ನು ನಾವೆಲ್ಲಾ ಸುಮ್ಮನೆ ಉಪಯೋಗಿಸಿಕೊಳ್ಳುತ್ತೇವೆ ಅವರನ್ನು ಯಾರು ಕೇಳುವವರೇ ಇಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ – ನೀವು ಹೇಗೆ ಗುಪ್ತದಳವರನ್ನು ಉಪಯೋಗಿಸಿಕೊಳ್ಳುತ್ತೀರಿ?

ಶ್ರೀ ವಾಟಾಳ್ ನಾಗರಾಜ್ '– ನಾವು ಎಂದರೆ ಸರ್ಕಾರ ನಾವೆಲ್ಲಾ ಟ್ರಸ್ಟಿಗಳೇ, ಆದುದರಿಂದ ತಾವು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು, ಮತ್ತೊಂದು ಧರ್ಮವೀರ ಸಮಿತಿ ವರದಿ ಅದು ಎಲ್ಲೋ ಒಂದು ಕಡೆ ಮೂಲೆ ಗುಂಪಾಗಿ ಬಿದ್ದಿದೆ ಆ ವರದಿ ಬಗ್ಗೆ ನಿಮ್ಮ ಕಾಲದಲ್ಲಾದರೂ ಪ್ರಾಮಾಣಿಕವಾಗಿ ಆ ವರದಿ ಏನಾಯಿತು? ಯಾವ ರೀತಿ ಆಯಿತು? ಎಲ್ಲಿಗೆ ಬಂತು? ಎಂದು ಹೇಳಬೇಕಲ್ಲವೇ? ಇದು ಬಹಳ ಪ್ರಾಮುಖ್ಯವಾಗಿದೆ ಇದರ ಬಗ್ಗೆ ತಾವು ಸ್ಪಷ್ಟವಾದಂಥ ನಿಲುವನ್ನು ತೆಗೆದುಕೊಳ್ಳಬೇಕು ಇನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸಂಬಂಧಪಟ್ಟಂತೆ -'ಇಂದಿರಾನಗರ ಸಂಗೀತ ಸಭಾಭವನ ಪುರಂದರಭವನ ನಿರ್ಮಾಣಕ್ಕೆ ಕರ್ನಾಟಕ ಅಕಾಡೆಮಿ ವತಿಯಿಂದ ಆಗಿರುವ ರಂಗಮಲ್ಲಿಗೆ ರಾಮೋತ್ಸವಕ್ಕೆ' ಹೀಗೆ ಅನೇಕ ವಿಚಾರಗಳಿಗೆ ನೀವು ಸದನದ ಅಂಗೀಕಾರವನ್ನು ಕೇಳಿದ್ದೀರಿ ಇಲ್ಲಿ ಶ್ರೀ ಮಹದೇವ ಪ್ರಸಾದ್‌ರವರು ಮಂತ್ರಿಯಾದ ಮೇಲೆ ಏನಾಯಿತೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ ಅವರು ಮಂತ್ರಿಯಾಗಿ ಇತ್ತೀಚೆಗೆ ಅಂದರೆ ಬಹುಶಃ 3 ತಿಂಗಳು ಆಗಿರಬಹುದು ನಾನು ಅದನ್ನು ಕೇಳುವುದಕ್ಕೆ ಹೋಗುವುದಿಲ್ಲ ಸುವರ್ಣ ಕರ್ನಾಟಕದ ಬಗ್ಗೆ ಮಾನ್ಯ ಪ್ರಕಾಶ್‌ರವರಿಗೆ ಮತ್ತು ಅವರ ಹಿಂದಿನವರು, ಅವರ ತಂದೆಯವರಿಗೆ ಗೊತ್ತಿದೆ ಹಾಗೂ ಯಡಿಯೂರಪ್ಪನವರಿಗೂ ಗೊತ್ತಿದೆ 50 ವರ್ಷಗಳ ಕಾಲ ಈ ಕರ್ನಾಟಕ ಕಂಡಿದ್ದು ಸಂತೋಷ ಸುವರ್ಣ ಕರ್ನಾಟಕವೆಂದರೇನು? ಸುವರ್ಣ ಕರ್ನಾಟಕವೆಂದರೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ

ಪಟಾಕಿ ಹೊಡೆಯುವುದೇ? ಸುರುಸುರು ಬತ್ತಿ ಹಚ್ಚುವುದೇ? ದೀಪಗಳನ್ನು ಬೆಳಗಿ ಬಿಡುವುದೇ? ಇದು ಸುವರ್ಣ ಕರ್ನಾಟಕವೇ? ಸುವರ್ಣ ಕರ್ನಾಟಕ ಎನ್ನುವ ಕಲ್ಪನೆ ಏನು? ಸುವರ್ಣ ಕರ್ನಾಟಕದಲ್ಲಿ 50 ವರ್ಷ ಎಂದರೆ 1956 ರಿಂದ ಇಲ್ಲಿಯವರೆಗೆ 50 ವರ್ಷಗಳು ಏನು ಮಾಡಿದ್ದೇವೆ? ಕರ್ನಾಟಕ ಏಕೀಕರಣ ಯಾವ ಉದ್ದೇಶಕ್ಕಾಯಿತೋ ಆ ಉದ್ದೇಶ ಈಡೇರಲಿಲ್ಲ ಭಾಷಾವಾರು ಪ್ರಾಂತ್ಯ ಯಾವುದಕ್ಕಾಯಿತು? ಆ ಉದ್ದೇಶ ಈಡೇರಲಿಲ್ಲ ಉತ್ತರ ಕರ್ನಾಟಕ, ಹೈದರಾಬಾದ್-ಕರ್ನಾಟಕ ಮತ್ತು ಕೊಡಗು ಈ ರೀತಿ ಇನ್ನೂ ನಮ್ಮಲ್ಲಿ ನಾವು ಭಾವನಾತ್ಮಕವಾಗಿ ಒಂದಾಗಿಲ್ಲ ಈ ಸುವರ್ಣ ಕರ್ನಾಟಕದ ಮಾಡಬೇಕಾಗಿದ್ದ ಕರ್ತವ್ಯವೇನೆಂದರೆ ಭಾವೈಕ್ಯತೆಯನ್ನು ತರಬೇಕಾಗಿತ್ತು ಉತ್ತರ ಕರ್ನಾಟಕ ಜನತೆ, ಹೈದರಾಬಾದ್ ಕರ್ನಾಟಕದ ಜನತೆ, ಕೊಡಗಿನ ಜನತೆ ಕಣ್ಣೀರಿಡುತ್ತಿದ್ದಾರೆ ಈ ರೀತಿ ಗಡಿನಾಡನೆಲ್ಲವನ್ನೂ ಸೇರಿಸಿ 50ನೇ ವರ್ಷದ ಸುವರ್ಣ ಕರ್ನಾಟಕ ಎನ್ನುವುದಕ್ಕೆ ಅನ್ವರ್ಥನಾಮವಾಗಿ ಆಚರಣೆಯಾಗಲಿಲ್ಲ ಕರ್ನಾಟಕ ಏಕೀಕರಣ ಎಲ್ಲಿ ಆಯಿತೆಂದು ಸರ್ಕಾರಕ್ಕೆ ಗೊತ್ತೇ ಇಲ್ಲವೆಂದು ನಾನು ಅಂದುಕೊಂಡಿದ್ದೇನೆ ಗೊತ್ತಿದ್ದರೆ, ನೀವು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸಮಾರಂಭ ಮಾಡುತ್ತಿರಲಿಲ್ಲ 1956 ರಲ್ಲಿ ರಾಜೇಂದ್ರ ಪ್ರಸಾದ್‌ರವರಿಂದ Central College ನ Cricket ಮೈದಾನದಲ್ಲಿ ಕರ್ನಾಟಕ ಏಕೀಕರಣದ ಉದ್ಘಾಟನೆಯಾಯಿತು ದಿವಂಗತ ಜಯಚಾಮರಾಜೇಂದ್ರ ಒಡೆಯರ್, ದಿವಂಗತ ಕೆಂಗಲ್ ಹನುಮಂತಯ್ಯ ಮತ್ತು ದಿವಂಗತ ನಿಜಲಿಂಗಪ್ಪನವರು, ದಿವಂಗತ ಪಿ ಕಾಳಿಂಗರಾಯರು – 'ಉದಯವಾಯಿತು ಚೆಲುವ ಕನ್ನಡ ನಾಡು' ಎಂದು ಹಾಡಿರುವುದು ತಮಗೆಲ್ಲ ಗೊತ್ತಿದೆ

ಶ್ರೀ ಎಂ ಪಿ ಪ್ರಕಾಶ್ – ಆ ಸಮಯದಲ್ಲಿ ಅಲ್ಲಿ ನಾವೆಲ್ಲ volunteers ಆಗಿ ಕೆಲಸ ಮಾಡಿದ್ದೇವೆ

ಶ್ರೀ ವಾಟಾಳ್ ನಾಗರಾಜ್ – ಖಂಡಿತ ನಾನು ಅದನ್ನೇ ಹೇಳಿದೆ ನೀವು ಮತ್ತು ನಿಮ್ಮ ತಂದೆಯವರನ್ನು ನಾನೇಕೆ ನೆನೆದೆ ಎಂದರೆ, ಕರ್ನಾಟಕ ಏಕೀಕರಣಕ್ಕೆ ನಿಮ್ಮ ಕೊಡುಗೆ ಮತ್ತು ಬಳ್ಳಾರಿಯವರ ಕೊಡುಗೆ ಇದೆ ಎಂದು ನಾನು ಅತ್ಯಂತ ಗಂಭೀರವಾಗಿ ಈ ಮಾತು ಹೇಳುತ್ತಿದ್ದೇನೆ ಸುವರ್ಣ ಕರ್ನಾಟಕ

ಎಂದರೆ ನಾಲ್ಕೂ ಕಡೆ ಬಾಜಾ ಭಜಂತ್ರಿ ಬಂತು, ಅಂದರೆ ಅಲ್ಲಿ ಜಾನಪದದವರು ತಾಳ ಮೇಳದ ಜೊತೆ ಬೆಂಗಳೂರಿಗೆ ಬಂದರು ನಾನು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬೆಳಿಗ್ಗೆ ಹೊತ್ತು ನೋಡಿದೆ ಇಡೀ ಸುವರ್ಣ ಕರ್ನಾಟಕ ಕಾರ್ಯಕ್ರಮವನ್ನು ಒಬ್ಬ IAS ಅಧಿಕಾರಿ ಕೈಗೆ ಕೊಟ್ಟಿದ್ದೀರಿ ಸುವರ್ಣ ಕರ್ನಾಟಕಕ್ಕೆ ರಾಜ್ಯ ಮಟ್ಟದ ಸಮಿತಿ, ಜಿಲ್ಲಾ ಮಟ್ಟದ ಸಮಿತಿ, ತಾಲ್ಲೂಕು ಮಟ್ಟದ ಸಮಿತಿ, ಕರ್ನಾಟಕ ಏಕೀಕರಣಕ್ಕೆ ದುಡಿದವರು, ಹೋರಾಟ ಮಾಡಿದವರು, ಗಡಿನಾಡು, ಹೊರನಾಡು, ಸೊಲ್ಲಾಪುರ, ಅಕ್ಕಲಕೋಟೆ, ತಾಳವಾಡಿ, ಹೊಸೂರು, ಕಾಸರಗೋಡು, ಎಲ್ಲಾ ಕಡೆಯಿಂದ ಒಂದು ಹೊಸ ಹುರುಪನ್ನು ತಂದು, ಆವತ್ತು ಒಂದು ವಿಶೇಷವಾದಂಥ package ಯೋಜನೆ ಉತ್ತರ ಕರ್ನಾಟಕಕ್ಕೆ ಈ ರೀತಿ ಮಾಡಿದ್ದೇವೆ, ರಾಯಚೂರಿಗೆ ಈ ತರಹ, ಗುಲ್ಬರ್ಗಾಕ್ಕೆ ಈ ತರಹ ಬಿಜಾಪುರಕ್ಕೆ ಈ ತರಹ, ಬೆಳಗಾಂಗೆ ಈ ತರಹ, ಬೀದರ್‌ಗೆ ಈ ತರಹ, ಎಲ್ಲ ಮಾಡಿದ್ದೇವೆ, ನೀವೆಲ್ಲ ಬರಬೇಕು, ಎಲ್ಲ ಶಾಸಕರು ಒಟ್ಟಾಗಿ ಬರಬೇಕು, ಮಾಜಿ ಶಾಸಕರುಗಳು, ಹಾಲಿ ಶಾಸಕರುಗಳು, ಎಲ್ಲರೂ ಸೇರಿದಂತೆ 50 ವರ್ಷಗಳ ಕಾಲ ಬದುಕಿರತಕ್ಕಂಥ ಎಲ್ಲ ಜನರನ್ನು ನೀವು ಕರೆಯಬೇಕಾಗಿತ್ತು ಅದು ಸುವರ್ಣ ಕರ್ನಾಟಕವಾಗುತ್ತದೆ ಅದು ಬಿಟ್ಟು ಸುವರ್ಣ ಕರ್ನಾಟಕವೆಂದರೆ ದೀಪಾವಳಿ ಹಬ್ಬವಲ್ಲ ಪಟಾಕಿ ಹೊಡೆಯುವ ಹಬ್ಬವಲ್ಲ ಸುವರ್ಣ ಕರ್ನಾಟಕಕ್ಕೆ ಒಂದು ಇತಿಹಾಸವಿದೆ ನೀವು ನಿಜಲಿಂಗಪ್ಪನವರನ್ನು ಎಲ್ಲಿ ನೆನಪಿಸಿಕೊಂಡಿರಿ?

ಶ್ರೀ ಅಮರೇಗೌಡ ಬಯ್ಯಾಪುರ – ಮಾನ್ಯ ಅಧ್ಯಕ್ಷರೇ, ಯಾವ ವಿಷಯದ ಬಗ್ಗೆ ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡುತ್ತಿದ್ದಾರೆಂದು ನಮಗೆ ಗೊತ್ತಾಗುತ್ತಿಲ್ಲ

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೇ, ನಾನು ಕೆಲವು ವಿಷಯಗಳನ್ನು ಈ ಸಂದರ್ಭದಲ್ಲಿಯೇ ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ ನನಗನ್ನಿಸುವೇನೆಂದರೆ, ಒಂದು ಸುವರ್ಣ ಕರ್ನಾಟಕ ಸಮಾರಂಭದಲ್ಲಿ ನಿಜಲಿಂಗಪ್ಪನವರ ಚಿತ್ರ ಒಂದೂ ಸಹ ಇಲ್ಲ ಕೆಂಗಲ್ ಹನುಮಂತಯ್ಯನವರ ಚಿತ್ರ ಒಂದೂ ಸಹ ಇಲ್ಲ ದೇವರಾಜ ಅರಸ್‌ರವರ ಚಿತ್ರ ಒಂದೂ ಸಹ ಇಲ್ಲ ವಾಲಿ ಚೆನ್ನಪ್ಪನವರದು ಸಹ ಒಂದೂ ಚಿತ್ರ ಇಲ್ಲ ಹಳ್ಳಿಕೇರಿಯವರ ಚಿತ್ರ

ಒಂದೂ ಸಹ ಇಲ್ಲ ಹಾಗಾದರೆ, ಸುವರ್ಣ ಕರ್ನಾಟಕವೆಂದರೇನು? ನಿಮ್ಮ ಉದ್ದೇಶವೇನು? ಸುವರ್ಣ ಕರ್ನಾಟಕ ಕಾರ್ಯಕ್ರಮಕ್ಕೆಂದು ಏಕೆ ಹಣ ಖರ್ಚು ಮಾಡಿದಿರಿ, ಇಷ್ಟು ಹಣ ಖರ್ಚು ಮಾಡುವುದರ ಉದ್ದೇಶವೇನು? ಯಾವ ದಿಕ್ಕಿನಲ್ಲಿ ಹೋಗುತ್ತಿದೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ ಇದನ್ನೆಲ್ಲ ನೋಡಿದಾಗ ನಮ್ಮ ರಾಜ್ಯದಲ್ಲಿ ನಡೆದಂಥ ಸುವರ್ಣ ಕರ್ನಾಟಕ ಸಂಪೂರ್ಣವಾಗಿ ವಿಫಲವಾಗಿದೆ ಆದ್ದರಿಂದ, ಕನಿಷ್ಟ ಈ ವರ್ಷದ ಕೊನೆಯ ದಿನಗಳಲ್ಲಾದರೂ ಸುವರ್ಣ ಕರ್ನಾಟಕದ ಬಗ್ಗೆ ಒಂದು ಚಿಂತನೆ, ಒಂದು ಕಲ್ಪನೆ ಇಟ್ಟುಕೊಂಡು ಕೆಲಸ ಮಾಡಬೇಕು ಪ್ರಪ್ರಥಮ ಮೈಸೂರಿನ ಮುಖ್ಯಮಂತ್ರಿ ಕ್ಯಾಸಂಬಳ್ಳಿ ಚೆಂಗಲರಾಯರೆಡ್ಡಿಯವರನ್ನು ನಾವು ನೆನೆಯುತ್ತಿಲ್ಲ ಯಾವ ರೀತಿ ನಡೆಯಿತು, ಹೇಗಾಯಿತು ಎನ್ನುವುದು ಬಳ್ಳಾರಿ ಹನುಮಂತಯ್ಯನವರ ಬಗ್ಗೆ ನಿಮಗೆ ಗೊತ್ತಿದೆ ಇವರನ್ನೆಲ್ಲ ನಾವು ನೆನೆದುಕೊಳ್ಳಬೇಕಾಗಿತ್ತು ಇದನ್ನೆಲ್ಲ ಏಕೆ ಹೇಳುತ್ತಿದ್ದೇನೆಂದರೆ, ಇದು ಅತ್ಯಂತ ಗಂಭೀರವಾದ ಪರಿಸ್ಥಿತಿ ಇನ್ನು ವಿಶ್ವಕನ್ನಡ ಸಮ್ಮೇಳನವನ್ನು ತಾವು ಈಗಾಗಲೇ ಮುಂದಕ್ಕೆ ಹಾಕಿದ್ದೀರಿ ವಿಶ್ವಕನ್ನಡ ಸಮ್ಮೇಳನದ ಮಂಟಪಕ್ಕೆ ಶ್ರೀಮಾನ್ ನಿಜಲಿಂಗಪ್ಪನವರ ಹೆಸರನ್ನಿಡಬೇಕು ನಾನು ಅತ್ಯಂತ ಗಂಭೀರವಾಗಿ ಈ ಮಾತನ್ನು ಹೇಳುತ್ತೇನೆ ದೇವರಾಜು ಅರಸು ಕರ್ನಾಟಕ ನಾಮಕರಣಕ್ಕೆ ದುಡಿದಂಥವರು ಮತ್ತು ಹನುಮಂತಯ್ಯನವರು ಕರ್ನಾಟಕದಲ್ಲಿ ಅಧಿಕಾರ ಕಳೆದುಕೊಂಡಂಥವರು ಈ ದೃಷ್ಟಿಯಿಂದ ಇವೆಲ್ಲವನ್ನು ಯೋಚನೆ ಮಾಡಿ ನೀವು ಇದನ್ನು ಮಾಡಲಿಲ್ಲವೆಂದರೆ ಇದಕ್ಕೆ ನಿಜಕ್ಕೂ ಅರ್ಥ ಬರುವುದಿಲ್ಲವೆನ್ನುವ ಮಾತನ್ನು ನಾನು ಕಳಕಳಿಯಿಂದ ಹೇಳುತ್ತಿದ್ದೇನೆ ನವದೆಹಲಿಯಲ್ಲಿ ಕರ್ನಾಟಕ ಭವನ ಇದೆ ಯಾರ್‍ಯಾರು ಮಂತ್ರಿಗಳು ಬಂದರೆ, ಮುಖ್ಯಮಂತ್ರಿಗಳು ಬಂದರೆ ಅಲ್ಲಿ ಅವರ ಹಿಂದೆಮುಂದೆ ಓಡಾಡುತ್ತರೆಯೇ ಹೊರತು, ಯಾರೇ ಶಾಸಕರುಗಳು ಹೋದರೆ ನೀವು ಯಾವ ಊರಿನ ಸಂತೆ ಎಂದು ಕರ್ನಾಟಕ ಭವನದಲ್ಲಿ ಕೇಳುವುದಿಲ್ಲ ಕರ್ನಾಟಕ ಭವನ ಅದು ಕನ್ನಡ ಭವನ ಅಲ್ಲ ಕರ್ನಾಟಕ ಭವನ ಬೇರೆ ಭಾಷೆಯ ಭವನ ಅಲ್ಲಿ ಕರ್ನಾಟಕ ಭವನವನ್ನು ತಾವು ನಿರ್ಮಾಣ ಮಾಡಿರುವುದು ಕೇವಲ ಮಂತ್ರಿಗಳು, ಮುಖ್ಯಮಂತ್ರಿಗಳು ಇವರಿಗೆ ಮಾತ್ರ ಅಲ್ಲ ನಮ್ಮ ಶಾಸಕರು ಯಾವುದೇ ಪಕ್ಷದವರು ಇರಲಿ, ಈ ಶಾಸಕರುಗಳು ಹೋದಾಗಲೂ ಅಲ್ಲಿ ನೋಡಿಕೊಳ್ಳುವ ಬಗ್ಗೆ ಚಿಂತನೆ ಇಲ್ಲವೇ

ಇಲ್ಲ ಆದ್ದರಿಂದ, ನೀವು ಸುಮ್ಮನೆ ಅಲ್ಲಿ ಹಣವನ್ನು ವಿಪರೀತವಾಗಿ ಖರ್ಚು ಮಾಡುತ್ತಿದ್ದೀರಿ ಅದರ ಬಗ್ಗೆ ನೀವು ತೀವ್ರವಾಗಿ ಚಿಂತನೆ ಮಾಡಬೇಕು ಇನ್ನು ಸರ್ಕಾರದ ಅಭಿವೃದ್ಧಿ ಕಾಮಗಾರಿಗಳ ಜಾಹೀರಾತು, ಪ್ರಚಾರ ಆಂದೋಲನಕ್ಕಾಗಿ 750 ಲಕ್ಷ ರೂ ಗಳು ಬೇಕೆಂದು ಸರ್ಕಾರದ ಕಡೆಯಿಂದ ತಾವು ಈಗ ಹೊಸದಾಗಿ ಕೇಳಿದ್ದೀರಿ ನೀವು ಯಾವ ಪತ್ರಿಕೆಗಳಲ್ಲಿ ಕೊಡುತ್ತಿದ್ದೀರಿ? ಕರ್ನಾಟಕದ ಕನ್ನಡ ಪತ್ರಿಕೆಗಳಿಗೆಷ್ಟು ? English ಪತ್ರಿಕೆಗಳಿಗೆಷ್ಟು ? ದೆಹಲಿ ಪತ್ರಿಕೆಗಳಿಗೆ ಎಷ್ಟು ಕೊಡುತ್ತಿದ್ದೀರಿ? ದೆಹಲಿಯಲ್ಲಿ ಹಗಲು ರಾತ್ರಿ ಕಷ್ಟಪಡತಕ್ಕಂಥ ಒಂದು ಪತ್ರಿಕೆ ತಮಗೆ ದೆಹಲಿ ವಾರ್ತೆ ಎಂದು ಮೊದಲು ನಾವು ಬೆಳಿಗ್ಗೆ ಎದ್ದು ಹಲ್ಲು ಉಜ್ಜಿ ಮುಖ ತೊಳೆದ ತಕ್ಷಣ ಮೊದಲು ನೋಡತಕ್ಕಂಥ ಪತ್ರಿಕೆ ಇಡೀ ರಾಜ್ಯದ ಕನ್ನಡ ಪತ್ರಿಕೆ ಅಲ್ಲಿ ಇದೆ ದೆಹಲಿ ಪತ್ರಿಕೆ ಬಗ್ಗೆ ಕನಿಷ್ಟ ಸೌಜನ್ಯ ನಮಗಿಲ್ಲ ಸಣ್ಣ ಪತ್ರಿಕೆಗಳ ಬಗ್ಗೆ ನೀವೇನು ಗಮನ ಹರಿಸಿದ್ದೀರಿ? ಯುಗಾದಿ ಹಬ್ಬಕ್ಕೆ ಒಂದು, ವರ್ಷಕ್ಕೊಂದು, ಈ ರಾಜ್ಯದಲ್ಲಿ ಜಿಲ್ಲಾ ಪತ್ರಿಕೆಗಳು ಮತ್ತು ರಾಜ್ಯ ಪತ್ರಿಕೆಗಳಷ್ಟೇ ಸಮಾನಾಗಿ ಸಣ್ಣ ಪತ್ರಿಕೆಗಳು ಇವೆ ಈ ಸಣ್ಣ ಪತ್ರಿಕೆಗಳ ಬಗ್ಗೆ ಕನಿಷ್ಟ ನೀವು ಪ್ರತಿ ತಿಂಗಳು 2 ಬಾರಿ 15 ದಿವಸಗಳಿಗೊಂದು ಸಾರಿ ಜಾಹೀರಾತನ್ನು ನೀಡತಕ್ಕಂಥ ವ್ಯವಸ್ಥೆ ಸಮಗ್ರವಾಗಿ ಆಗಬೇಕಾಗಿದೆ ಇಲ್ಲದಿದ್ದರೆ ಅದು ಸರಿಯಾಗಿ ಕಾಣತಕ್ಕಂಥದ್ದಲ್ಲ ನಮಗೆ ಇಚ್ಛೆ ಬಂದ ಹಾಗೆ ಯಾವ್ಯಾವುದೋ ದೇಶದ ಪತ್ರಿಕೆಗಳಿಗೆ ಕೊಡುವ ಬದಲು ನಮ್ಮ ರಾಜ್ಯದ ಕನ್ನಡ ಪತ್ರಿಕೆಗಳು, ನಮ್ಮ ರಾಜ್ಯದ ಪತ್ರಿಕೆಗಳ ಬೆಳವಣಿಗೆಗೆ ಸಮಗ್ರವಾಗಿ ಚಿಂತನೆ ಆಗಬೇಕಾದದ್ದು ನಮ್ಮ ಕರ್ತವ್ಯ ಈ ದೃಷ್ಟಿಯಿಂದ ತಮಗೆ 2–3 ಮಾತುಗಳನ್ನು ತಿಳಿಸಿ ಈ ಸಮಗ್ರ ಸುವರ್ಣ ಕರ್ನಾಟಕದ್ದು ಅನೇಕ ಕಡತಗಳಿವೆ ಅದರ ಬಗ್ಗೆ ಆಯವ್ಯಯ ಮಂಡಿಸುವಾಗ ಅಂಕಿಅಂಶಗಳನ್ನು ಕೊಡುತ್ತೇನೆ ಏನೇನು ಆಗಿದೆ ಎಂಬುದನ್ನು ತಮಗೆ ತಿಳಿಸುತ್ತೇನೆ ತಾವು ಮುಂದೆ ಯಾವ ರೀತಿ ಮಾಡುತ್ತೀರಿ, ಅದನ್ನು ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ (ಬಾಗೇಪಲ್ಲಿ) – ಈಗ ಪೂರಕ ಅಂದಾಜುಗಳನ್ನು ಮಂಡಿಸಿದ್ದಾರೆ ನಾನು ನಿಜ ಹೇಳಬೇಕಾದರೆ ಇದನ್ನು ಪೂರ್ತಿಯಾಗಿ ಓದಿಲ್ಲ ಓದಲಿಕ್ಕೆ ಅವಕಾಶ ಕೊಟ್ಟಿಲ್ಲ ಈಗ ಮಾತ್ರವೇ ಒದಗಿಸಿದ್ದಾರೆ ಮತ್ತೆ, ನಾನು

ಬಹಳ ಕಳಕಳಿಯಿಂದ ಉಪಮುಖ್ಯಮಂತ್ರಿಗಳಿಗೆ ಕೇಳುತ್ತಿದ್ದೇನೆ, ಬೇಸರ ಮಾಡಿಕೊಳ್ಳಬೇಡಿ, ಅರ್ಥ ಶಾಸ್ತ್ರದ ಕನಿಷ್ಟ ನೀತಿ–ನಿಯಮಗಳು, ಆಯವ್ಯಯದ ನೀತಿ–ನಿಯಮಗಳೇನಾದರೂ ಈ ಸರ್ಕಾರ ಪಾಲನೆ ಮಾಡಬೇಕೆಂದು ಇದ್ದಿದ್ದರೆ, ಈ ಸರ್ಕಾರಕ್ಕೆ ಗೊತ್ತಿದ್ದರೆ, ಈ ಸಂದರ್ಭದಲ್ಲಿ ಈ supplementary budget ಅನ್ನು ಮಂಡಿಸಲಿಕ್ಕೆ ಹೋಗುತ್ತಿರಲಿಲ್ಲ ಏಕೆಂದು ಈಗಾಗಲೇ ಮಾಧುಸ್ವಾಮಿಯವರು ಹೇಳಿದ್ದಾರೆ ನಾನೂ ಅದನ್ನೇ ಒತ್ತಿ ಹೇಳಬೇಕಾಗುತ್ತದೆ ಇನ್ನೂ ನಾವು ಮೂಲ ಬಜೆಟ್ ಬಗ್ಗೆ ಚರ್ಚೆಯನ್ನೇ ಪ್ರಾರಂಭ ಮಾಡಿಲ್ಲ ಆ ಬಜೆಟ್ ಅನ್ನು ಅಂಗೀಕಾರ ಮಾಡಿಲ್ಲ ಏಕೆಂದರೆ, ಆ ಬಜೆಟ್‌ನಲ್ಲಿರತಕ್ಕಂಥ ಎಲ್ಲಾ ಅಂಶಗಳನ್ನೂ ಈ ಮನೆ ಒಪ್ಪುತ್ತೆ ಎಂದು guarantee ಇಲ್ಲ ಅಥವಾ ತಿರಸ್ಕಾರ ಮಾಡುತ್ತದೆ ಅಂತಲೂ guarantee ಇಲ್ಲ ನೀವು ಮಂಡಿಸಿದ್ದೀರಿ, ಅದು ಸದನದ ಮುಂದೆ ಇದೆ ಅಷ್ಟೇ ಅದನ್ನು ನಾಳೆ reject ಮಾಡಬಹುದು ಅಥವಾ ಒಪ್ಪಬಹುದು ಅದು ಬೇರೆ ವಿಚಾರ ಏನೂ ತೀರ್ಮಾನವಾಗಿಲ್ಲ ಅಂದರೆ, ನೀವೇನು ಮೂಲ ಬಜೆಟ್ ಮಂಡಿಸಿದ್ದೀರಿ, ಅದರ ಬಗ್ಗೆ ಚರ್ಚೆಯಾಗಲಿಲ್ಲ, ಅದನ್ನು ಸದನ ಒಪ್ಪಿಲ್ಲ ಅಥವಾ ಒಪ್ಪಿಗೆಯನ್ನು ಕೊಡುತ್ತದೆಯೋ, ಇಲ್ಲವೋ ಗೊತ್ತಿಲ್ಲ ಆಗಲೇ ನೀವು supplementary budget ಮಂಡಿಸಿದ್ದೀರಿ ಎಂದರೆ, ಇದನ್ನು ಮಂಡಿಸುತ್ತಿರುವ ವಿಧಾನ, ಅನೈತಿಕವಾದಂಥ ಅರ್ಥ ನೀತಿ ಇದಕ್ಕೆ ಯಾವುದೇ ರೀತಿಯಾದಂಥ ಅರ್ಥ ನೀತಿಯ ಲವಲೇಶ ಅಂಶವೂ ಕೂಡ ಈ ಸರ್ಕಾರಕ್ಕೆ ಗೊತ್ತಿಲ್ಲವೆಂಬುವ ದಾರಿ ಸ್ಪಷ್ಟ ಇದನ್ನು ಭಾರೀ ನೋವಿನಿಂದ ನಾನು ಹೇಳಬೇಕಾಗುತ್ತದೆ 6 ಸಾವಿರ ಕೋಟಿ ರೂಪಾಯಿಗಳಿಗೆ ನೀವು supplementary budget ಕೇಳುತ್ತಿದ್ದೀರಿ, ಅಲ್ಲಿ 45 ಸಾವಿರ ಕೋಟಿ ರೂಪಾಯಿಗಳ ಬಜೆಟ್ ಮಂಡಿಸಿದ್ದೀರಿ, ಇದು ಯಾವ ರೀತಿ ನಿಯಮವೆಂದು ನನಗರ್ಥವಾಗುತ್ತಿಲ್ಲ ನಮಗೆಂಥ ದುಸ್ಥಿತಿ ಬಂದಿದೆ ಎಂದರೆ, ಮಾಜಿ ಅರ್ಥ ಮಂತ್ರಿಗಳಾದ ಸಿದ್ಧರಾಮಯ್ಯನವರು ಇಲ್ಲಿ ಕುಳಿತಿದ್ದಾರೆ, main budget ಬಗ್ಗೆ ಚರ್ಚೆ ಮಾಡದೇ supplementary budget ಬಗ್ಗೆ ಚರ್ಚೆ ಮಾಡುವಂಥ ದುಸ್ಥಿತಿ ನಮ್ಮ ಸದನಕ್ಕೆ ಬಂದಿದೆ ಇದು ಮೊದಲನೆಯದಾಗಿ ನಾನು ಹೇಳುತ್ತಿರತಕ್ಕ ಅಂಶ ಮತ್ತೆ, ನೀವು 6 ಸಾವಿರ ಕೋಟಿ ರೂಪಾಯಿಗಳಿಗೆ supplementary budget ನಲ್ಲೇನು ಬೇಡಿಕೆ ಇಟ್ಟಿದ್ದೀರಿ, ಇದಕ್ಕೆ ನಿಮಗೆ ಯಾವ

ರೀತಿಯಾದಂಥ ಸಮರ್ಥನೆ ಇದೆ? ಸರ್ಕಾರ ಇದರ ಬಗ್ಗೆ ಹೇಳಬೇಕು ಇಂಧನ ಇಲಾಖೆಗೆ ನೀವು 300 ಕೋಟಿ ರೂಪಾಯಿ ಕೊಟ್ಟಿದ್ದೀರಿ ಸಂತೋಷ ಇನ್ನೂ 300 ಕೋಟಿ ರೂಪಾಯಿ ಕೊಡಿ ಅವಶ್ಯಕತೆ ಇದೆ ನಾನೇನೂ ಬೇಡವೆಂದು ಹೇಳುವುದಿಲ್ಲ ಆದರೆ, ನೀವು ಎಲ್ಲಿ ಕೊಟ್ಟಿದ್ದೀರಿ? supplementary budget ನಲ್ಲಿ ಕೊಡುತ್ತೀರಾ? ಇಂಧನ ಇಲಾಖೆ ಎಂದರೆ ಏನು ಬೇಕಾಬಿಟ್ಟಿಯೇ? ಅದು ಭಾರೀ ಪ್ರಮುಖವಾದಂಥ ಮೂಲಸೌಲಭ್ಯಗಳನ್ನು ರಾಜ್ಯಕ್ಕೆ ಒದಗಿಸುವಂಥ, ವಿದ್ಯುಚ್ಛಕ್ತಿ ಉತ್ಪಾದನೆ ಮಾಡಬೇಕಾಗಿರುವಂಥ ಇಲಾಖೆ ಅದಕ್ಕೆ 300 ಕೋಟಿ ರೂಪಾಯಿಗಳಲ್ಲ, 600 ಕೋಟಿ ರೂಪಾಯಿ ಕೊಟ್ಟರೂ ಏನೂ ತೊಂದರೆಯಿಲ್ಲ ಕೊಡಬೇಕು ಆದರೆ, ಯೋಜನೆ ಎಲ್ಲಿ ಬರಬೇಕು? ಮೂಲ ಬಜೆಟ್‌ನಲ್ಲಿ ಬರಬೇಕು ಏಕೆ ಬರಲಿಲ್ಲ? ಇಲ್ಲೇಕೆ ತಂದಿರಿ ಎಂದರೆ, ನಿಮಗೆ ಆ ಬಜೆಟ್ ಅನ್ನು ಮಂಡಿಸುವಾಗ ಇಂಧನ ಇಲಾಖೆಯ ಬಗ್ಗೆ ಪಕ್ಷಪಾತ ಧೋರಣೆಯನ್ನು ಮಾನ್ಯ ಉಪ ಮುಖ್ಯಮಂತ್ರಿಗಳು ಹೊಂದಿದ್ದಾರೆ ಎಂದು ಹೇಳಬೇಕಾಗುತ್ತದೆ, ಇದು ಎರಡೇ ಅಂಶಗಳು ಇಲ್ಲದಿದ್ದರೆ, ಮೂಲ ಬಜೆಟ್‌ನಲ್ಲಿ ಸೇರಿಸಬೇಕಾಗಿರುವಂಥದ್ದನ್ನು supplementary budget ನಲ್ಲಿ ತರುತ್ತಿದ್ದೀರೆಂದರೆ, ಏಕೆಂದು ನೀವು ಹೇಳಬೇಕು ಏಕೆಂದರೆ, ಬಜೆಟ್ ಮಂಡನೆ ಮಾಡಿದ ಮೇಲೆ ನಿಮಗೆ ಗೊತ್ತಾಯಿತು, ವ್ಯತ್ಯಾಸವಾಗಿದೆ ಎಂದು ಹೇಳಿ ಸಂಬಂಧಪಟ್ಟಂಥ ಇಲಾಖಾ ಸಚಿವರು, ಬೇರೆ ಬೇರೆಯವರೆಲ್ಲ ಟೀಕೆ ಮಾಡಲಿಕ್ಕೆ ಪ್ರಾರಂಭ ಮಾಡಿದರು, ಇದನ್ನು ತಪ್ಪಿಸಿಕೊಳ್ಳಲಿಕ್ಕೋಸ್ಕರ ನೀವು ಇದನ್ನು ತಂದಿದ್ದೀರಿ ಎರಡನೆಯದಾಗಿ, ನಿಮಗೆ ಅರಣ್ಯ ಇಲಾಖೆ ಏನು ಪಾಪ ಮಾಡಿದೆ? ಇವತ್ತು ಇಡೀ ಜಗತ್ತು ಆತಂಕದಲ್ಲಿದೆ ಪರಿಸರ ಹಾಳಾಗಿದೆ ಪರಿಸರ ಮಾಲಿನ್ಯ ಹೆಚ್ಚಾಗುತ್ತಿದೆ Ecological imbalance ಆಗುತ್ತಿದೆ ಜಗತ್ತಿನಲ್ಲಿ ಉಷ್ಣಾಂಶ ಹೆಚ್ಚಾಗುತ್ತಾ ಹೋಗುತ್ತಿದೆ ಇವತ್ತು ಇಡೀ ಜಗತ್ತಿನ ಜನ ಆತಂಕಕ್ಕೊಳಗಾಗಿದ್ದಾರೆ ಅದಕ್ಕೆ ಒಂದೇ ಒಂದು ಮದ್ದು ಇರತಕ್ಕಂಥದ್ದು, ಕಾಡನ್ನು ಬೆಳೆಸಬೇಕು, ಪರಿಸರವನ್ನು ರಕ್ಷಣೆ ಮಾಡಬೇಕು ಇದೊಂದೆ ದಾರಿ ಇರತಕ್ಕಂಥದ್ದು, ಇವತ್ತು ಬೇರೆ ಏನೂ ದಾರಿ ಇಲ್ಲ ಆದರೆ, ಕರ್ನಾಟಕದಲ್ಲಿ ನೀವೇನು ಮಾಡಿದ್ದೀರಿ? ಮೂಲ ಬಜೆಟ್‌ನಲ್ಲಿ ನಾನು ಓದಿದೆ, ಹಿಂದಿನ ವರ್ಷ ಕೊಟ್ಟಿದ್ದ ಬಜೆಟ್‌ಗಿಂತ 60 ಕೋಟಿ ರೂಪಾಯಿಗಳನ್ನು ಕಡಿಮೆ ಕೊಟ್ಟಿದ್ದೀರಿ ಹೋಗಲಿ, ಇದನ್ನು

supplementary budget ನಲ್ಲಾದರೂ ತಂದಿದ್ದೀರಾ ಎಂದು ಆಲೋಚನೆ ಮಾಡಿದರೆ, ಈ supplementary budget ನಲ್ಲಿ ಒಂದು ಪೈಸೆ ಹಣವನ್ನು ಸಹ ನೀವು ಅದಕ್ಕೆ ಕೊಟ್ಟಿಲ್ಲ ಇಲಾಖೆಯ ಯಾವುದೋ building renovation ಗೆ ಕೊಟ್ಟಿದ್ದೀರಿ ಮತ್ತೆ, ನೀವೆಲ್ಲ ಮಾತನಾಡುತ್ತೀರಿ, ದಿನ ಬೆಳಗಾದರೆ ಪರಿಸರ ದಿನಾಚರಣೆ ಮಾಡತಕ್ಕಂಥ ಸಂದರ್ಭದಲ್ಲಿ ಉದ್ದುದ್ದವಾದಂಥ ಭಾಷಣ ಮಾಡುತ್ತೀರಿ ಅರಣ್ಯ ಇಲಾಖೆಯವರು ಕಾಡು ಬೆಳೆಸಬೇಕು, park ಗಳನ್ನು ನಿರ್ಮಾಣ ಮಾಡಬೇಕು, ಅದಕ್ಕೆ ನೀರಿನ ವ್ಯವಸ್ಥೆಯಾಗಬೇಕು, ಕೋಟ್ಯಾಂತರ ಸಸಿ ನೆಡಬೇಕು, ಅದಕ್ಕೆ ಹಣ ಬೇಕಾಗಿದೆ ಇವತ್ತು ಇಡೀ ಕರ್ನಾಟಕ ರಾಜ್ಯದಲ್ಲಿ 15% forest ಕೂಡ ಬೆಳೆಸಲಿಲ್ಲ ಆದರೆ, ಕಳೆದ ವರ್ಷ ಕೊಟ್ಟಂಥ ಹಣಕ್ಕಿಂತ 60 ಕೋಟಿ ರೂಪಾಯಿಗಳನ್ನು ಮೂಲ ಬಜೆಟ್‌ನಲ್ಲಿ ಕಡಿಮೆ ಮಾಡಿದ್ದೀರಿ, ಈಗ ಇದರಲ್ಲೇನಾದರೂ ಕೊಟ್ಟಿದ್ದೀರಾ ಎಂದರೆ, ಇದರಲ್ಲಿಯೂ ಕೊಟ್ಟಿಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ – Mining area ಗಳಲ್ಲಿ RFO ಗಳಿಗೆ ಕನಿಷ್ಟ ಒಂದು Jeep ಕೊಟ್ಟಿಲ್ಲ, ಒಂದು weapon ಇಲ್ಲ ಇವತ್ತು ಹಳ್ಳಿ ಹಳ್ಳಿಗಳಲ್ಲಿ RFO ಗಳು ಹೋದರೆ mines ಮಾಡುವ ಹುಡುಗರು ಒದೆಯುತ್ತಾರೆ ನಾವು ಹೇಗೆ face ಮಾಡಬೇಕು? Do you know? They are not provided with vehicle RFO ಗಳಿಗೆ ಒಂದು Jeep ಇಲ್ಲ, ಒಂದು weapon ಇಲ್ಲ ನೀವೇನೋ western ghat ನಲ್ಲಿ ಕೊಟ್ಟಿದ್ದೀರಿ ಅಥವಾ wild life ನಲ್ಲೇನೋ ಕೊಟ್ಟಿದ್ದೀರಿ ಎನ್ನುವುದು ಬಿಟ್ಟರೆ ಬೇರೆ ಎಲ್ಲಿ ಕೊಟ್ಟಿದ್ದೀರಿ? ಬಳ್ಳಾರಿಯಲ್ಲಿ ನಿಮಗೆ ಗೊತ್ತಿಲ್ಲವೇ? Do you know? Forest Officer ಹತ್ತಿರ Jeep ಇಲ್ಲ, ರಾತ್ರಿ ಯಾವುದಾದರೂ mining ಆಗುತ್ತಿದೆಯೆಂದರೆ RFO ಹೋಗುವುದಕ್ಕಾಗುವುದಿಲ್ಲ ಆ ತರಹ ಪರಿಸ್ಥಿತಿ ನಿರ್ಮಾಣ ಮಾಡಿದ್ದೀರಿ ಇದೇನು ಉದ್ದೇಶಪೂರ್ವಕವೇ? ಇಲ್ಲಿಯಾದರೂ ಯಡಿಯೂರಪ್ಪನವರೇ ಸ್ವಲ್ಪ ಹಣವನ್ನು ಕೊಟ್ಟು, RFO ಗಳಿಗೆ ಒಂದು Jeep ಕೊಡಿಸಿ ಸಾರ್

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಕರ್ನಾಟಕ ರಾಜ್ಯದಲ್ಲಿ 15% forest ಇಲ್ಲ forest ಬೆಳೆಸಲಿಕ್ಕೆ ಜಾಗವಿಲ್ಲವೇ? ಜಾಗವಿದೆ ಹೋಗಲಿ, ಅದನ್ನೇನಾದರೂ

ಕೃಷಿಗೆ ಬಳಸಿಕೊಂಡಿದ್ದೀರಾ? ಅದೂ ಇಲ್ಲ Forest ಬೆಳೆಸಲಿಲ್ಲ, ಕೃಷಿಗೂ ಬಳಸಿಕೊಳ್ಳಲಿಲ್ಲ Forest ಅನ್ನು ಅಭಿವೃದ್ಧಿ ಮಾಡತಕ್ಕಂಥದ್ದಕ್ಕೆ ಹಣವನ್ನೂ ಕೊಡುವುದಿಲ್ಲ ಹಾಗಾದರೆ, ನಿಮ್ಮ ಉದ್ದೇಶವೇನು? ನೀವು forest ಅನ್ನು ಬೆಳೆಸದೇ ಕರ್ನಾಟಕ ರಾಜ್ಯವನ್ನು ಕೇವಲ ಮರಳುಗಾಡು ಮಾಡಲಿಕ್ಕೆ ಹೊರಟಿದ್ದೀರಾ? Forest ಅನ್ನು ಬೆಳೆಸಲಿಕ್ಕೆ ಬೇಕಾಗಿರತಕ್ಕಂಥದ್ದಕ್ಕೆ ನೀವು ಹಣ ಕೊಟ್ಟಿಲ್ಲ RFO ಗಳಿಗೆ Jeep ಇಲ್ಲ ಎಂದು ಮಾಧುಸ್ವಾಮಿಯವರು ಹೇಳಿದ್ದಾರೆ ಕಾಡಿನಲ್ಲಿ ಓಡಾಡತಕ್ಕಂಥ ಜನರಿಗೆ Jeep, Bike ಇಲ್ಲ ನಮ್ಮಲ್ಲಿ RFO ಇದ್ದಾರೆ ಎಲ್ಲಿ ಹೋಗಿದ್ದಿರಿ ಎಂದರೆ, ನಾನು ಎಲ್ಲಿಯೂ ಹೋಗಲಿಕ್ಕಾಗುವುದಿಲ್ಲ ಸಾರ್, ನನ್ನ ಹತ್ತಿರ vehicle ಇಲ್ಲವೆಂದು ಹೇಳುತ್ತಾರೆ ಬೆಳೆಸಿರುವ forest ಅನ್ನು ಉಳಿಸುವುದು ಹೇಗೆ? ಹೊಸ forest ಅನ್ನು ಬೆಳೆಸುವುದು ಹೇಗೆ? ಇಡೀ ಕಾಡನ್ನು ಬೆಳೆಸಲಿಕ್ಕೆ ಅವರು ಹೋಗಿ ಜಾಗಗಳನ್ನು ನೋಡಬೇಕಾದರೆ, ಯಾವ ವಿಧಾನದಲ್ಲಿ ಹೋಗಬೇಕು? ಅವರು ಹೇಗೆ ಹೋಗಬೇಕು? ಯಾವ ರೀತಿ? ನಿಮಗೆ ಅವಶ್ಯಕತೆ ಇಲ್ಲ ನಮಗಿಂತ ಹೆಚ್ಚಿಗೆ ಶಿವಮೊಗ್ಗದಲ್ಲಿ RFO ಗಳಿಗೆಲ್ಲ Jeep ಗಳು ಬೇಕು ನಿಮಗೆ ಕಡ್ಡಾಯವಾಗಿ ಬೇಕೇ ಬೇಕು Mines ಇರುವ ಕಡೆ ಬೇಕು ಇಲ್ಲವೆಂದರೆ, ಅವರು ಹೋಗುವಷ್ಟು ಹೊತ್ತಿಗೆ ಗಣಿಯಲ್ಲೆಲ್ಲ ಕಳ್ಳತನ ಮಾಡಿಕೊಂಡು ಹೋಗಿಬಿಟ್ಟಿರುತ್ತಾರೆ ಅದಕ್ಕೇನೂ ವ್ಯವಸ್ಥೆಯಿಲ್ಲ ಯಡಿಯೂರಪ್ಪನವರೇ ನೀವು ಸಹಕಾರ ರಂಗದಕ್ಕೆ supplementary budget ನಲ್ಲಿ ಕೇಳಿದ್ದೀರಿ? ಯಾವುದಕ್ಕೆ ಕೇಳಿದ್ದೀರಿ? ನಾನು ಒಂದೇ ಒಂದು ಉದಾಹರಣೆಯನ್ನು ಯಡಿಯೂರಪ್ಪನವರ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ ಈಗ ನೀವು ಸಾಲ ಮನ್ನಾ ಮಾಡಿದ್ದೀರಿ ಬಡ್ಡಿ ಮನ್ನಾ ಮಾಡಿದ್ದೀರಿ 25 ಸಾವಿರ ರೂಪಾಯಿ ಎಂದು ಘೋಷಣೆ ಮಾಡಿದ್ದೀರಿ ನಾವು ಕೋಲಾರ ಜಿಲ್ಲೆಯವರು ನಿಮ್ಮ ಸಾಲ, ಬಡ್ಡಿ ಮನ್ನಾದಿಂದ ಕೋಲಾರ ಜಿಲ್ಲೆಗೆ ಒಂದೇ ಒಂದು ನಯಾಪೈಸೆ benefit ಇಲ್ಲ ಏಕೆಂದರೆ, ಕಳೆದ ವರ್ಷ ನಮ್ಮ ಕೋಲಾರ ಜಿಲ್ಲೆಯಲ್ಲಿರತಕ್ಕಂಥ ಯಾವುದೇ Society, DCC Bank ಗೆ re-financing capacity ಇರಲಿಲ್ಲ ಹಾಗಾಗಿ, ಒಂದೇ ಒಂದು ನಯಾಪೈಸೆ ಕೂಡ ಅವರು ಸಾಲ ಕೊಟ್ಟಿಲ್ಲ ನಮ್ಮ ರೈತರು ಸಾಲ ತೆಗೆದುಕೊಂಡಿಲ್ಲ ನಿಮ್ಮ ಬಡ್ಡಿ, ಸಾಲ ಮನ್ನಾ ಕೋಲಾರ ಜಿಲ್ಲೆಯವರಿಗೇನು ಪ್ರಯೋಜನವಾಗುತ್ತದೆ?

ಅದಕ್ಕೋಸ್ಕರ, ಏನಾದರೂ supplementary budget ನಲ್ಲಿ ತೆಗೆದಿಟ್ಟಿದ್ದೀರಾ? ಬಜೆಟ್‌ನಲ್ಲಿ ತೆಗೆದಿಟ್ಟಿಲ್ಲ, ನಮ್ಮನ್ನು ಮರೆತು ಹೋಗಿಬಿಟ್ಟಿದ್ದೀರಿ At least, ನಮಗೆ re-financing ಕೊಡಿ ಸಹಕಾರ ರಂಗದಲ್ಲಿ ನಮ್ಮ ಕೋಲಾರ ಜಿಲ್ಲೆಯ ಸಹಕಾರ ಸಂಘಗಳು, DCC Bank re-financing capacity ಕಳೆದುಕೊಂಡು ಕಳೆದ ವರ್ಷ ಒಂದು ರೂಪಾಯಿ ಸಾಲವನ್ನೂ ನಮ್ಮ ರೈತರಿಗೆ ಕೊಡಲಿಲ್ಲ ಧಾರವಾಡಕ್ಕೆ ಕೊಟ್ಟಿದ್ದೀರಿ ನಿಮಗೆ ನಮ್ಮ ಕೋಲಾರ ಜಿಲ್ಲೆ ಏನು ಪಾಪ ಮಾಡಿತ್ತು? ನಿಮಗೆ ಚಿನ್ನ ಕೊಟ್ಟೆವಲ್ಲಾ ಸ್ವಾಮಿ, ಜಗತ್ತಿನಲ್ಲಿ ಅತ್ಯುನ್ನತವಾದಂಥ ಚಿನ್ನವನ್ನು ಕೊಟ್ಟೆವು ನಿಮಗೆ ಸಾವಿರಾರು ಕೋಟಿ ರೂಪಾಯಿಗಳ ಆದಾಯ ಮಾಡಿಕೊಟ್ಟೆವು ನಮಗೇನು ಕೊಟ್ಟಿದ್ದೀರಿ? ಕನಿಷ್ಟ ನಮ್ಮ society ಗಳ re-financing ಗೆ ನಿಮಗೆ ಹಣ ಕೊಡಲಿಕ್ಕಾಗಲಿಲ್ಲವೇ? ಧಾರವಾಡ ಜಿಲ್ಲೆಗೆ ಕೊಟ್ಟಿರಿ, ಕೋಲಾರ ಜಿಲ್ಲೆಯವರು ನಿಮಗೇನು ಪಾಪ ಮಾಡಿದ್ದಾರೆ? supplementary budget ನಲ್ಲಿ ಏನಾದರೂ ಅದಕ್ಕೆ ಹಣ ತೆಗೆದು ಇಟ್ಟಿದ್ದೀರಾ? ನಾವು ಕೋಲಾರ ಜಿಲ್ಲೆಯ ರೈತರಿಗೆ ಏನು ಉತ್ತರ ಹೇಳಬೇಕು? ನಾವು ಇಲ್ಲಿ 12 ಜನ ಸದಸ್ಯರು ಇದ್ದೇವೆ, ನಾಳೆ ನಮ್ಮ ರೈತರು ಕೇಳುತ್ತಾರೆ ಸಾಲ ಮನ್ನಾ ಮಾಡಿ ಬಡ್ಡಿ ಮನ್ನಾ ಮಾಡಿ ಎಂದು ನೀವು ಎಲ್ಲರೂ ಧರಣಿ ಮಾಡಿದಿರಿ, ಆದರೆ ನಮ್ಮ ಜಿಲ್ಲೆಗೆ ಅದರಿಂದ ಒಂದು ಪೈಸೆಯ ಪ್ರಯೋಜನವಾಗಿದೆಯೇ ಎಂದು ಕೇಳಿದರೆ, ನಾವು 12 ಜನ ಶಾಸಕರು ಏನು ಉತ್ತರ ಕೊಡಬೇಕು? ಇದಕ್ಕೆ ನೀವು ಏನಾದರೂ ಒಂದು ಪರಿಹಾರವನ್ನು ಹುಡುಕಬೇಕು ಅಥವಾ ನಮಗೆ special package ಮಾಡಿ society ಗಳನ್ನು re-financing ಮಾಡಲಿಕ್ಕೆ, ಹಣವಾದರೂ ಕೊಡಿ ಇಲ್ಲಾಂದ್ರೆ ಸುಸ್ತಿ ಬಡ್ಡಿ ಮನ್ನಾ ಮಾಡಿ ಎಲ್ಲಾ ರೈತರಿಗೂ 25 ಸಾವಿರ ಮಾಡಿ, ಆಗ ನಾವು ಉಳಿದುಕೊಳ್ಳುತ್ತೇವೆ ಇಲ್ಲಾಂದ್ರೆ ಕೋಲಾರ ಜಿಲ್ಲೆಯ ರೈತರು ಉಳಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ ನೀವು ಉತ್ತರ ಕೊಡುವಾಗ ಇದನ್ನು ಪ್ರಕಟಿಸದಿದ್ದರೆ ಆ ಸಮಯದಲ್ಲಿ ಕೋಲಾರ ಜಿಲ್ಲೆಯ ಎಲ್ಲಾ ಶಾಸಕರು ಧರಣಿ ಮಾಡಬೇಕಾಗುತ್ತದೆ ಸಚಿವರ ವಿಚಾರ ಅವರಿಗೆ ಬಿಟ್ಟಿದ್ದು ಧರಣಿಗೆ ಬಂದರೂ ಬರಬಹುದು, ಬಿಟ್ಟರೆ ಬಿಡಬಹುದು ಮಂತ್ರಿಗಳು ಕೋಲಾರ ಜಿಲ್ಲೆಯವರು, ಅವರು ಧರಣಿಗೆ ಬಂದರೆ ಸ್ವಾಗತ ಬರಲಿಲ್ಲವೆಂದರೆ ಅವರ ಹಣೆಬರಹ ಅದಕ್ಕೆ ನಾವೇನು ಮಾಡುವುದಕ್ಕಾಗುತ್ತದೆ?

ಹಾಗೆಯೇ ಕಾರ್ಮಿಕ ಇಲಾಖೆಗೆ supplementary budget ಕೇಳಿದಿರಿ ಈ ಇಲಾಖೆಯಲ್ಲಿ ಏಕೆ ಸ್ವಾಮಿ ನೀವು ಕೇಳಿರುವುದು? ಯಾವ ಉದ್ದೇಶಕ್ಕಾಗಿ ಈ ಇಲಾಖೆಗೆ supplementary budget ನಲ್ಲಿ ಹಣ ಕೇಳಿದಿರಿ? ಕಾರ್ಮಿಕರ ಕಲ್ಯಾಣ ನಿಧಿ ಏನಾಯಿತು? ಅವರ ESI ಆಸ್ಪತ್ರೆಗಳು ಏನಾಯಿತು? ಆ ಆಸ್ಪತ್ರೆಯಲ್ಲಿ ಔಷಧಿ ಇದೆಯೆ? ಎಷ್ಟು ಔಷಧಿ ಕೊಡುತ್ತಿದ್ದೀರಿ? ಕೈ–ಕಾಲು ಮುರಿದಂಥ ಯಾವ ಕಾರ್ಮಿಕರಿಗೆ ಹಣ ಕೊಟ್ಟಿದ್ದೀರಿ? ಇಂಥವರಿಗೆ ನೀವು ಏನು treatment ಕೊಟ್ಟಿದ್ದೀರಿ? ರಾಜಾಜಿನಗರದಲ್ಲಿ ಒಂದು ESI ಆಸ್ಪತ್ರೆ ಇದೆ ದಯಮಾಡಿ ತಾವು ಅಲ್ಲಿಗೆ ಬನ್ನಿ ಅದರ ಸ್ಥಿತಿಗತಿಗಳನ್ನು ನೋಡಿ ಮಾನ್ಯ ಉಪ ಮುಖ್ಯಮಂತ್ರಿಗಳು ಹೋಗಿ ನೋಡಿದರೆ, ಬಹುಶಃ ಏನಾದರೂ ಸಹಾಯ ಮಾಡಬಹುದು ಎಂದು ಅನ್ನಿಸುತ್ತದೆ supplementary budget ನಲ್ಲಿ ಅದಕ್ಕೆ ಏನಾದರೂ ಹಣವನ್ನು ಒದಗಿಸಿದ್ದೀರಾ? ಹಾಗಾದರೆ supplementary budget ನ ಉದ್ದೇಶ ಏನು? ನಮಗೂ ನಿಮಗೂ supplementary budget ನ ಉದ್ದೇಶ ಚೆನ್ನಾಗಿ ಗೊತ್ತಿದೆ ಏನಾದರೂ emergency ಆದಂಥ ಸಂದರ್ಭದಲ್ಲಿ ನಾವು budget ನಲ್ಲಿ provision ಮಾಡದೇ ಹೋದರೆ ಅಂಥದ್ದಕ್ಕೆ ನಾವು ಹಣ ಕೊಡಬೇಕು ಕೊಡಬೇಕಾದಂಥ ಪರಿಸ್ಥಿತಿ ಬರುತ್ತದೆ ಆ ರೀತಿ ಇದ್ದರೆ ನಾವು ಮತ್ತು ನೀವು supplementary budget ಅನ್ನು ಒಪ್ಪಬೇಕಾಗುತ್ತದೆ 100 ಕೋಟಿನೋ ಅಥವಾ ಸಾವಿರ ಕೋಟಿಯ ಒಳಗಡೆ ಇದ್ದರೆ emergency, exigency ಬಂದಂಥ ಸಂದರ್ಭದಲ್ಲಿ, drought ಬಂತು flood ಬಂತು ಅಥವಾ ಇನ್ನೇನಾದರೂ ಆಯಿತು, epidemic break down ಆಯಿತು ಅಂಥದ್ದಕ್ಕೆ ನಾವು supplementary budget ಅನ್ನು ಮಂಡಿಸುವುದು ಬಿಟ್ಟು ಪೂರಕ budget ನಲ್ಲಿ ಮಂಡಿಸಿ ಅದು ಇನ್ನು ಅಂಗೀಕಾರ ಆಗದೇ ನೀವು supplementary budget ಇಟ್ಟಿದ್ದೀರಲ್ಲ, ಇದು ಯಾವ ಅರ್ಥಶಾಸ್ತ್ರ? ಇದು ಯಾವ ಆಯವ್ಯಯದ ನಿಯಮ? ಇದಕ್ಕೇನು ಒಂದು ರೀತಿ, ನೀತಿ, ನಿಯಮ, ಪದ್ಧತಿ ಏನೂ ಇಲ್ಲವೇ? ಈ ಸದನ ಮತ್ತು ಈ ಆಯವ್ಯಯಕ್ಕಿರತಕ್ಕಂಥ ಪಾವಿತ್ರ್ಯತೆಯನ್ನು ನಾವು ಕಳೆಯಬೇಕಾ? ಈ ಸದನಕ್ಕಿರತಕ್ಕಂಥ ಪಾವಿತ್ರ್ಯತೆಯನ್ನು ಕಳೆಯತಕ್ಕಂಥ ಸ್ಥಿತಿಗೆ ಬಂದು ಬಿಟ್ಟಿದ್ದೇವೆ Budget ನ

ಪಾವಿತ್ರ್ಯತೆಯನ್ನು ಕಳೆದು ಬಿಟ್ಟಿದ್ದೇವೆ ಏಕೆಂದರೆ, budget ಮಂಡಿಸುವುದಕ್ಕೆ ಮೊದಲೇ ಎಲ್ಲಾ ವಿಚಾರಗಳು ಪತ್ರಿಕೆಯಲ್ಲಿ ಬಂದು ಬಿಟ್ಟಿತು ನಾವು ಇದನ್ನು ಹೇಳಬೇಕಾಗುತ್ತೆದೆ ಅಲ್ಲೂ ಪಾವಿತ್ರ್ಯತೆಯನ್ನು ಕಳೆದಿರಿ ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲೂ ಅದರ sanctity ಯನ್ನೇ ನೀವು ಹಾಳು ಮಾಡಿಬಿಟ್ಟಿರಿ supplementary budget ಅನ್ನು ಮಂಡಿಸಿ ಹಾಗಾದರೆ ನಾನು ಒಂದು ಮಾತು ಕೇಳುತ್ತೇನೆ ಆರ್ಥಿಕ ಇಲಾಖೆ ಮತ್ತು ಯೋಜನಾ ಇಲಾಖೆ ಇವೆರಡು ಏನು ಕೆಲಸ ಮಾಡುತ್ತಿವೆಂದು ಪ್ರಶ್ನೆಮಾಡಬೇಕಾಗುತ್ತದೆ ನೀವು budget ಅನ್ನು ಮಂಡಿಸಬೇಕಾದರೆ, ಪ್ರಧಾನ ಪಾತ್ರವನ್ನು ವಹಿಸತಕ್ಕಂಥದ್ದು ಯೋಜನಾ ಇಲಾಖೆ ಮತ್ತು ಆರ್ಥಿಕ ಇಲಾಖೆ ಯೋಜನಾ ಇಲಾಖೆಯವರು ಕಾರ್ಯಕ್ರಮಗಳನ್ನು ತಯಾರಿಸುತ್ತಾರೆ, ಅದಕ್ಕೆ ಹಣ ಒದಗಿಸತಕ್ಕಂಥ ಕೆಲಸ ಆರ್ಥಿಕ ಇಲಾಖೆಯವರು ಮಾಡುತ್ತಾರೆ ಒಂದು ವರ್ಷದಲ್ಲಿ ನಾವು ಹೇಗೆ ಈ ರಾಜ್ಯವನ್ನು ಅಭಿವೃದ್ಧಿಪಡಿಸಬೇಕು? ಯಾವ ರೀತಿಯಲ್ಲಿ ಅಭಿವೃದ್ಧಿಪಡಿಸಬೇಕು? ಯಾವ ದಿಕ್ಕಿನಲ್ಲಿ ಹೇಗೆ ಅಭಿವೃದ್ಧಿಪಡಿಸಬೇಕಾದರೆ ನಮಗೆ ಎಷ್ಟು ಹಣ ಬೇಕಾಗುತ್ತದೆ? ಯಾವ್ಯಾವ ಇಲಾಖೆಯಲ್ಲಿ ಎಷ್ಟು ಇರಬೇಕು? ಜೊತೆಗೆ ಅದರಲ್ಲಿ priority sector ಬರುತ್ತದೆ ಆ priority sector ನಲ್ಲಿ ನಾವು ಎಷ್ಟು ಹಣವನ್ನು ಇದಕ್ಕೆ ತೆಗಿದಿಡಬೇಕು ಎನ್ನತಕ್ಕಂಥ ಅಂಶ ಬರುತ್ತದೆ ನಿಮ್ಮ ಸರ್ಕಾರಕ್ಕೆ ಮತ್ತು ನಿಮ್ಮ ಇಲಾಖೆಗಳಿಗೆ ಆ ಯೋಜನೆಯನ್ನು ಮಾಡಲಿಕ್ಕೆ ಆಗಲಿಲ್ಲವೇ? ಏನು ಮಾಡುತ್ತಿದ್ದೀರಿ? ಆ ಯೋಜನೆಗಳನ್ನು ನೀವು ಸರಿಯಾಗಿ ವೈಜ್ಞಾನಿಕವಾದ ರೀತಿಯಲ್ಲಿ ಮಾಡಿದ್ದರೆ ಈ ಆರು ಸಾವಿರ ಕೋಟಿಯ supplementary budget ಬರತಕ್ಕಂಥ ಅವಶ್ಯಕತೆ ಇರಲಿಲ್ಲ ಅಂದರೆ ಈ ರಾಜ್ಯವನ್ನು ಹೇಗೆ ನಡೆಸಿಕೊಂಡು ಹೋಗಬೇಕು ಹೇಗೆ ಅಭಿವೃದ್ಧಿಪಡಿಸಬೇಕು ಎನ್ನುವುದಕ್ಕೆ ನಿಮ್ಮ ಹತ್ತಿರ ಸ್ಪಷ್ಟವಾದಂಥ ಕಾರ್ಯಕ್ರಮವಿಲ್ಲ, ಗೊತ್ತು– ಗುರಿಯಿಲ್ಲ ನೀವು ಬೇಕಾಬಿಟ್ಟಿಯಾಗಿ ಸರ್ಕಾರವನ್ನು ನಡೆಸಿಕೊಂಡು ಹೋಗಲಿಕ್ಕೆ ಹೊರಟಿದ್ದೀರಾ? ರಾಜ್ಯದ ಅಭಿವೃದ್ಧಿಯ ಮೂಲಮಂತ್ರ ಏನು? ಒಂದು ರಾಜ್ಯವನ್ನು ಹೇಗೆ ನಡೆಸಿಕೊಂಡು ಹೋಗಬೇಕೆನ್ನುವ ನಿರ್ದಿಷ್ಟವಾದ ಒಂದು ಗುರಿ ಇರಬೇಕು ಆ vision ನಿಮಗೆ ಇದೆಯೆ? ಬೂಕನಕರೆಗೆ ಒಂದು

ಕೋಟಿ, ಅದು ಯಾವುದೋ ಮರಕ್ಕೆ ಒಂದು ಕೋಟಿ, ಇದು ರಾಜ್ಯದ ಅಭಿವೃದ್ಧಿಯೇ? ನೀವು ಉದ್ಯೋಗಾವಕಾಶಗಳು ಹೆಚ್ಚಿಸಲಿಕ್ಕೆ ಏನು ಕಾರ್ಯಕ್ರಮ ಹಾಕಿದ್ದೀರಿ? ಯಾವುದೇ ಗೊತ್ತು – ಗುರಿಯಿಲ್ಲದ budget ಅನ್ನು ತಯಾರಿಸಿ, ಈಗ supplementary budget ನಲ್ಲಿ ಆರು ಸಾವಿರ ಕೋಟಿ ರೂಪಾಯಿ ಬೇಡಿಕೆ ತಂದು ಪುನಃ ಈಗ Vote on account ತೆಗೆದುಕೊಳ್ಳುತ್ತಿದ್ದೀರಿ ಮತ್ತೆ ಜೂನ್‌ನಲ್ಲಿ full budget ತರುವಾಗ ಮತ್ತೆ ಇನ್ನೊಂದು supplementary budget ತರುತ್ತೀರಿ ಇದು ಈಗ ಬಂದಿರತಕ್ಕಂಥ supplementary budget June ತಿಂಗಳಿನಲ್ಲಿ ಮತ್ತೆ ಇನ್ನೊಂದು supplementary budget ಅನ್ನು ನೀವು ತರುತ್ತೀರಿ ಅಂದರೆ ಅರ್ಥ ಏನು? You have no plans and programmes and you are running the Government What is this? ನಾಳೆ ಈ ರಾಜ್ಯ ಏನಾಗುತ್ತದೆ? ಯಾರೋ ಮಾಡಿದ ಪುಣ್ಯಕ್ಕೆ ಹಣ ನಿಮ್ಮ ಹತ್ತಿರ ಇದೆ ಯಾರೋ ಮಾಡಿದ ಶ್ರಮದಿಂದ ನಿಮಗೆ ಹಣ ಹರಿದು ಬರುತ್ತದೆ ನಿಮಗೆ ಇಷ್ಟ ಬಂದಾಗ ಹಣ ಖರ್ಚು ಮಾಡುವುದು ಮನಸ್ಸಿಗೆ ಹೇಗೆ ಬರುತ್ತದೋ ಹಾಗೆ ಹಣ ಖರ್ಚು ಮಾಡುವುದು ಇದು ಯಾರ ದುಡಿಮೆ? ನಾನು ಬಹಳ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ, ಬಾರಿ ವಿನಯದಿಂದ ಹೇಳುತ್ತಿದ್ದೇನೆ, ಈ ರಾಜ್ಯದಲ್ಲಿ ಬರತಕ್ಕಂಥ ಪ್ರತಿಯೊಂದು ಪೈಸೆ ಯಾರಪ್ಪನ ಸೊತ್ತು ಅಲ್ಲ, ಇದು ಈ ರಾಜ್ಯದ ಜನತೆಯ ಸೊತ್ತು ಇದು ಅವರಿಗೆ ಸೇರಬೇಕು ಸೇರತಕ್ಕಂಥ ಸಂದರ್ಭದಲ್ಲಿ ನಮ್ಮ ನಿಮ್ಮನ್ನು ಕಳುಹಿಸಿರುವ ಜನರ ಹಣಕ್ಕೆ we are watch-dogs of their money It is our duty to protect their interest and money ಅದನ್ನು ಬಿಟ್ಟು ಅವರಿಗೋಸ್ಕರವಾಗಿ ನಾವು ಖರ್ಚು ಮಾಡತಕ್ಕಂಥ ಹಣವನ್ನು ದುಂದುವೆಚ್ಚ ಮಾಡಿಕೊಂಡು, ಬೇಕಾಬಿಟ್ಟಿಯಾಗಿ ಪೋಲು ಮಾಡಿಕೊಂಡು, ಇವತ್ತು ಆರು ಸಾವಿರ ಕೋಟಿ ರೂಪಾಯಿ supplementary budget ನಲ್ಲಿ ತಂದು ನಮ್ಮ ಮುಂದೆ ಇಟ್ಟು, ದೇವಸ್ಥಾನದ ಜೀರ್ಣೋದ್ಧಾರ ಮರಗಳ ಜೀರ್ಣೋದ್ಧಾರ ಇದು ಏನು ಸ್ವಾಮಿ? ಒಂದು ಕೋಟಿ ರಸ್ತೆಗೆ ನೀವು budget ನಲ್ಲಿ ಇಡಬೇಕಾ? ಐವತ್ತು ಲಕ್ಷ ಸಮುದಾಯ ಭವನಕ್ಕೆ ನೀವು budget ನಲ್ಲಿ ಸೇರಿಸಬೇಕಾ? ನೀವು ಹೇಳಿ ಸೇರಿಸಬೇಕಾ? ಇದಾ budget ಇದಕ್ಕೆ ಏನಾದರೊಂದು ಘನತೆ, ಗೌರವ, ಪಾವಿತ್ರ್ಯತೆ

ಇದೆಯೆ? ಇದನ್ನು ನಾವು ಒಪ್ಪಬೇಕಾ? ಆದುದರಿಂದ ಇದನ್ನು ಖಂಡಿತವಾಗಿ ಯಾವುದೇ ಕಾರಣದಿಂದ ಒಪ್ಪಲಿಕ್ಕಾಗುವುದಿಲ್ಲ, ಇದು ಅನೈತಿಕವಾದಂಥ, ಅನಿಯಮವಾದಂಥ, ಯಾವುದೇ ಆರ್ಥಿಕವಾದಂಥ ಕನಿಷ್ಟ ನೀತಿ–ನಿಯಮ ಇಲ್ಲದೇ ಇರತಕ್ಕಂಥ ಈ supplementary budget ಅನ್ನು ಒಪ್ಪಲಿಕ್ಕೆ ಆಗುವುದಿಲ್ಲವೆಂದು ಹೇಳಿ ನನ್ನ ಮಾತು ಮುಗಿಸುತ್ತೇನೆ

ಶ್ರೀ ಎಸ್ ರಾಜೇಂದ್ರನ್ (ಕೆ ಜಿ ಎಫ್) – ಮಾನ್ಯ ಉಪಾಧ್ಯಕ್ಷರೇ ನಾನು ಎರಡೇ ನಿಮಿಷ ಮಾತನಾಡುತ್ತೇನೆ ಈ budget ನಲ್ಲಿ ಮಾತನಾಡುವುದಕ್ಕೆ ಏನು ಇದೆ? ಇದು Karnataka budget ಅಲ್ಲ Politician budget Politician ಮಾಡುವುದು budget ಅದು ಹೇಗೆಂದರೆ, ಒಂದು Politician ಕೆಟ್ಟು ಹೋಗಿರುವ ಹಲ್ಲು ತೆಗೆಯುವುದಕ್ಕೆ plan ಮಾಡಿದರು ಅವರ ಮನೆಗೆ doctor ಹಲ್ಲು ತೆಗೆಯಬೇಕೆಂದು ಬಂದಿದ್ದಾರೆ ಅಂಥ ಹಲ್ಲು ತೆಗೆಯುವ ಸಂದರ್ಭದಲ್ಲಿ ಹೊರಗಡೆ ದೇಶದಿಂದ ಇನ್ನೊಬ್ಬ Politician ಇವರನ್ನು ನೋಡುವುದಕ್ಕೆ ಬಂದಿದ್ದಾರೆ ಈ ವಿಷಯ ಗೊತ್ತಾದ ಮೇಲೆ ಈ Politician ಏನು ಮಾಡಿದರು ಎಂದರೆ, " doctor ನಮ್ಮ anti-chamber ನಲ್ಲಿರಿ, ನಾನು ಕರೆಯುವ time ಗೆ ಬಂದರೆ ಸಾಕು, ಆಗ ಬಂದು ನೀವು ಹಲ್ಲು ತೆಗೆದುಬಿಡಿ" ಎಂದು ಹೇಳಿದರು ಹೊರಗಡೆಯಿಂದ ಬಂದಿರತಕ್ಕಂಥವರ ಜೊತೆಯಲ್ಲಿ tea ಕುಡಿದು ಮಾತನಾಡುತ್ತಾ ಕುಳಿತುಕೊಂಡಿದ್ದರು "ನಾವು ನಮ್ಮ ದೇಶದಲ್ಲಿ ಅಪಾರ ಭಕ್ತಿಯನ್ನಿಟ್ಟುಕೊಂಡಿರತಕ್ಕಂಥ politician, ನಮ್ಮ ದೇಶಕ್ಕಾಗಿ ನಾವು ಏನೇನು ಮಾಡುತ್ತೇವೆ, ನಮ್ಮ ದೇಶ ಮತ್ತು ನಮ್ಮ ರೈತರಿಗಾಗಿ ನಾವು ಯಾವುದೇ ಕಾರಣಕ್ಕಾಗಿ ನಾವು ನಿಜವಾಗಲೂ ತ್ಯಾಗವನ್ನೇ ಮಾಡುತ್ತೇವೆ ಬೇಕಾದರೆ ಈಗ ನೋಡಿ ನಮ್ಮ ದೇಶದ ಜನರ ಮೇಲಿರುವ ಪ್ರೀತಿಗೋಸ್ಕರ ನನ್ನ ಒಂದು ಹಲ್ಲನ್ನೇ ತೆಗೆದುಬಿಡುತ್ತೇನೆ, ನಿಮ್ಮ ದೇಶದಲ್ಲಿ ಈ ರೀತಿ ಇದ್ದೀರಾ ನೀವು ಹೇಳಿ" ಎಂದು ಹೇಳಿದರು ಆಗ ಅವರು ಆ doctor ಅನ್ನು ಕರೆದರು, ನಮ್ಮ politician ತಮ್ಮ ಹಲ್ಲು ತೆಗೆಯುವುದಕ್ಕೆ ಒಳ್ಳೆಯ plan ಮಾಡಿದ್ದಾರೆಂದು doctor ಹುಷಾರಾಗಿದ್ದರು doctor ಬಂದ ತಕ್ಷಣ ಇವರು ಹೇಳಿದ ಪ್ರಕಾರ ಅವರು ಕೆಟ್ಟು ಹೋಗಿರುವ ಹಲ್ಲನ್ನು ತೆಗೆದರು

"ನೋಡಿದಿರಾ ನಾನು ಹೇಳಿದ ಮಾತಿಗೆ ಬೆಲೆ ಕೊಟ್ಟು ಹಲ್ಲು ತೆಗೆದುಬಿಟ್ಟೆ ಆ ರೀತಿ ನಿಮ್ಮ ದೇಶ ಭಕ್ತಿ ನಿಮಗಿದ್ದರೆ ನೀವು ಈ ರೀತಿ ಮಾಡುವುದಕ್ಕಾಗುತ್ತದೆಯೆ? ನೋಡಿ, ನಾನು ಇಷ್ಟು ನೋವು ಇಟ್ಟುಕೊಂಡು ಈ ಹಲ್ಲು ಕಿತ್ತಿಸಿಕೊಂಡೆ" ಎಂದು ಹೇಳಿದರು foreign ನಿಂದ ಬಂದವರು ಗೌರವಕೊಸ್ಕರ ಏನು ಮಾಡಿದರು ಎಂದರೆ, "ನೀವು ನಿಮ್ಮ ಒಂದು ಹಲ್ಲು ತೆಗೆದಿರಿ ನೋಡಿ ನಾನು ಎರಡು ಹಲ್ಲು ತೆಗೆಯುತ್ತೇನೆ" ಎಂದು ತನ್ನಲ್ಲಿ ಇರತಕ್ಕಂಥ ಎರಡು ಒಳ್ಳೆಯ ಹಲ್ಲುಗಳನ್ನು ತೆಗೆದು ಬಿಸಾಕಿ ಹೋದರು ಇವನಿಗೆ ಬಾರಿ ಸಂತೋಷ ಅವನು ನಿಜವಾದ ಹಲ್ಲನ್ನು ಕಿತ್ತು ಹಾಕಿ ನೋವು ಇಟ್ಟುಕೊಂಡು ಹೊರಗೆ ಹೋದ, ಇವರು ಕೆಟ್ಟು ಹೋಗಿರುವ ಹಲ್ಲು ಕಿತ್ತುಕೊಟ್ಟು ನನ್ನ ದೇಶಭಕ್ತಿ ಹೇಗಿದೆ ನೋಡಿ ಎಂದನಂತೆ ಆ ರೀತಿಯಾಗಿ ಸುಮ್ಮನೆ ರೈತರ ಮೇಲೆ ಹೇಳಿ ಇವರು budget plan ಮಾಡಿದರು ಏನು ಪ್ರಯೋಜನ? ನಿಜವಾಗಲೂ ಇವರು ನೋವು ಇಟ್ಟುಕೊಂಡು ಬಂದಿರುವವರು, ಇವರು politician budget ಮಾಡಿದ್ದಾರೆ ಉದಾಹರಣೆಯಾಗಿ ಹೇಳುವುದಾದರೆ, ಗಂಗಾ ಕಲ್ಯಾಣ ಯೋಜನೆಗೆ additional budget ಕೇಳುತ್ತಾರೆ ಎಲ್ಲರಿಗೂ ಗೊತ್ತಿದೆ bore well ಹಾಕುವುದಿಲ್ಲ current ಕೊಡುವುದಿಲ್ಲ motor ಬರುವುದಿಲ್ಲ, ಕೊಟ್ಟಿರುವ ಹಣವನ್ನೇ ಇನ್ನೂ ಖರ್ಚು ಮಾಡಿಲ್ಲ ಇಂಥದ್ದಕ್ಕೂ ಕೂಡ ಇವರು ಅಡಿಷನಲ್ ಬಜೆಟ್‌ನಲ್ಲಿ ಹಣ ಕೇಳುತ್ತಾರೆಂದರೆ ಮತ್ತೆ ಅಧಿಕಾರಿಗಳು ಲೂಟಿ ಮಾಡಿಕೊಂಡು ತಿನ್ನುವುದಕ್ಕೋಸ್ಕರವೇ ಅಥವಾ ಜನರಿಗೆ ಅನುಕೂಲ ಮಾಡುವುದಕ್ಕೋಸ್ಕರವೇ ಉದಾಹರಣೆಗೆ ಹೇಳುವುದಾದರೆ, ನನ್ನ ಕ್ಷೇತ್ರದಲ್ಲಿ ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ 15 ಬೋರ್ ವೆಲ್‌ಗಳನ್ನು ಹಾಕುವುದಕ್ಕೆ ಅನುಮತಿ ಕೊಟ್ಟಿದ್ದಾರೆ ಆದರೆ, ಅಲ್ಲಿ ರೈತರೇ ಇಲ್ಲ ಇದನ್ನು ಕೊಟ್ಟು ಒಂದು ವರ್ಷವಾಗಿದೆ, ಇದುವರೆಗೂ ಅದರ ಬಗ್ಗೆ ಯಾರೂ ಮಾಡಿಲ್ಲ, ಚಿಂತೆಯನ್ನೇ ಮಾಡಿಲ್ಲ ನಾನು ಒಂದು ಪತ್ರ ಬರೆದು ಈಗಾಗಲೇ ಸ್ಯಾಂಕ್ಷನ್ ಆಗಿರುವ ಬೋರ್‌ವೆಲ್‌ಗೆ ಯಾರೂ ಫಲಾನುಭವಿಗಳಿಲ್ಲ, ಮತ್ತೆ ಮೊದಲು ನಮಗೆ 10 ಬೋರ್‌ವೆಲ್‌ಗೆ ಅನುಮತಿ ಕೊಟ್ಟಿದ್ದೀರಿ, ಅದಕ್ಕೂ ಕೂಡ ರೈತರ್‌ಯಾರು ಇರಲಿಲ್ಲ ಆದ್ದರಿಂದ, ಇದನ್ನು ಅಕ್ಕಪಕ್ಕದಲ್ಲಿರುವಂಥವರಿಗೆ ಕೊಡಿ, ಮತ್ತೆ ಈಗ 15 ಬೋರ್‌ವೆಲ್‌ಗಳನ್ನು ಏತಕ್ಕೆ

ಕೊಟ್ಟಿದ್ದೀರೆಂದು ಮತ್ತು ಇದನ್ನು ಕೊನೇ ಪಕ್ಷ ಕುಡಿಯುವ ನೀರಿಗೋಸ್ಕರವಾದರೂ ಉಪಯೋಗ ಮಾಡಬೇಕೆಂದು ನಾನು ಕಾಗದ ಬರೆದು 2 ತಿಂಗಳಾಗಿದೆ, ಇದುವರೆಗೂ ತಂದಿದ್ದಾರೆ ಇದೆಂಥ ನ್ಯಾಯ ನೋಡಿ ಇದರ ಬಗ್ಗೆ ತಾವು ಸ್ವಲ್ಪ ಯೋಚನೆ ಮಾಡಿ ಅಡಿಷನಲ್ ಬಜೆಟ್‌ನಲ್ಲಿ ಮತ್ತೆ ಕೊಟ್ಟರೆ ಸಂತೋಷ But who is utilizing it? No body It is a criminal waste ಜೊತೆಗೆ rehabilitation for employees of BGML and special package was approved for Kolar district ಎಂದು 5 ಕೋಟಿ ರೂಪಾಯಿ ಕೊಟ್ಟಿದ್ದೀರಿ ಇದನ್ನು 5 ಸಾವಿರ ನೌಕರರಿಗೆ ಕೊಡುತ್ತೇವೆಂದು ಹೇಳುತ್ತಿದ್ದಾರೆ ಇದು ಎಸ್‌ಸಿ ಎಸ್‌ಟಿ ನೌಕರರಿಗೆ ಸೇರಬೇಕಾಗಿದೆ ಆದರೆ, ಅಲ್ಲಿ 5 ಸಾವಿರ ಜನ ಕೂಡ ಎಸ್‌ಸಿ ಎಸ್‌ಟಿ ನೌಕರರೆ? ನಿಮಗೆ ಯಾರು ಲೆಕ್ಕ ಮಾಡಿ ಈ ರೀತಿಯ ಐಡಿಯಾ ಕೊಟ್ಟರು? Re habilitation for 5 thousand employees of BGML 5 ಸಾವಿರ ಜನರು ಎಸ್‌ಸಿ ಎಸ್‌ಟಿ ನೌಕರರಾಗಿದ್ದಾರೆಯೇ? ಅದಕ್ಕೆ ಕೊನೆಗೆ ಅಡಿಷನಲ್ ಬಜೆಟ್‌ನಲ್ಲಿ ಏನು ಮಾಡಿದ್ದೀರೆಂದರೆ, 1500 ನೌಕರರಿಗೆ ಸದ್ಯಕ್ಕೆ ಈಗ ಕೊಡುತ್ತೇವೆಂದು ಹೇಳಿದ್ದೀರಿ ಆದ್ದರಿಂದ ಉಳಿದ ಎಸ್‌ಸಿ ಎಸ್‌ಟಿ ಮತ್ತು ಬೇರೆ ಜಾತಿಯ ನೌಕರರು ಏನು ಮಾಡಬೇಕು? What is the meaning of rehabilitation? From the past five years, the entire BGML employees are suffering without any salary, without any benefit ಅವರಿಗೆ ನೀವು ಮಾಡಿರುವ ಕೆಲಸ ಹೇಗಿದೆ ನೋಡಿ? ಇದು ಸತ್ಯಾಂಶದ ಮತ್ತು ಧರ್ಮ ನೀತಿ ಕೆಲಸವೇ? ಇದನ್ನು ಯಾರು ಪ್ರಿಪೇರ್ ಮಾಡಿದರು? Who is the officer who prepared this? I am from that constituency I know very well what is happening there From the past six years, Karnataka Government has never bothered about BGML ನಾವು ಚಿನ್ನ ಕೊಟ್ಟಿರುವವರೆಂದು ಮಾನ್ಯ ಶ್ರೀರಾಮರೆಡ್ಡಿಯವರು ಈಗ ತಾನೇ ಹೇಳಿದರು ಆದ್ದರಿಂದ, ಚಿನ್ನವನ್ನು ತಿಂದು ಬಿಟ್ಟು ಜಾಲಿಯಾಗಿ ಕುಳಿತಿರುವ ಸರ್ಕಾರ ಇದಾಗಿದೆ ನಾವೇ ಚಿನ್ನ ಕೊಟ್ಟಿರುವುದು, ಈಗ ಬಿಜಿಎಂಎಲ್ ಮುಚ್ಚಿದ ಮೇಲೆ ಅಲ್ಲಿ 200 ಎಕರೆ ಜಾಗ ದೊರೆಯುತ್ತಿದೆ ಈಗ ಕೋಟಿಗಟ್ಟಲೆ ದುಡ್ಡು ಹಾಕಿ ಜಾಗ

ತೆಗೆದುಕೊಳ್ಳುವುದಕ್ಕೆ ಇಲ್ಲಿ, ಅಲ್ಲಿ ಹೋಗೋಣವೆಂದು ಹೇಳುತ್ತಿದ್ದೀರಿ ಆದರೆ, ಇಲ್ಲಿ ಉಚಿತವಾಗಿ ಲ್ಯಾಂಡ್ ಸಿಗುತ್ತಿದೆ, ಇದನ್ನು ನೀವು ಏತಕ್ಕಾಗಿ ತೆಗೆದುಕೊಳ್ಳಬಾರದು? why you have not moved Government of India to take over the land? ಏಕೆಂದರೆ, ಕಮಿಷನ್ ಸಿಗುವುದಿಲ್ಲವೆಂದು ಮತ್ತು ದುಡ್ಡು ಬರುವುದಿಲ್ಲವೆನ್ನತಕ್ಕಂಥದ್ದು ನಿಮ್ಮ ಚಿಂತನೆಯಾಗಿದೆ ಆದರೆ, ಇದಕ್ಕೆ ಅಡಿಷನಲ್ ಬಜೆಟ್ ಬೇರೆ ಮಾಡುತ್ತಿದ್ದೀರಿ 5 ಸಾವಿರ ನೌಕರರಿಗೆ ಪುನರ್‌ವ್ಯವಸ್ಥೆ ಮಾಡಿಕೊಡುತ್ತೇವೆಂದು ದೊಡ್ಡದಾಗಿ ಮಾತನಾಡಿದ್ದೀರಿ ಆದರೆ, ಅಲ್ಲಿ 5 ಸಾವಿರ ಜನರಿಗೆ ಎಲ್ಲಿ ಕೊಡುವುದಕ್ಕಾಗುತ್ತದೆ? ಎಸ್‌ಸಿ ಎಸ್‌ಟಿ ಜನರಿಗೆ ಕೊಡಬೇಕಾಗಿರತಕ್ಕಂಥ ದುಡ್ಡನ್ನು ಬೇರೆಯವರಿಗೆ ಕೊಡುವುದಕ್ಕಾಗುತ್ತದೆಯೇ? ಇಲ್ಲಿ ತಪ್ಪಾಗಿದೆ, ಸರಿಪಡಿಸಿಕೊಳ್ಳಿ, ನಿಮ್ಮ ಬಜೆಟ್‌ಗೆ ನಾನು ಕೋ-ಆಪರೇಟ್ ಮಾಡುವುದಕ್ಕೆ ಆಗುವುದಿಲ್ಲ ಏಕೆಂದರೆ, ನೀವು ಕೊಟ್ಟಿರತಕ್ಕಂಥ ಸಬ್ಜೆಕ್ಟ್ ನನ್ನ ಕಣ್ಣು ಮುಂದೆ ಇದೆ ಆ ಜಿಲ್ಲೆಯಲ್ಲಿ 5 ಸಾವಿರ ನೌಕರರಿಗೆ ರೀಹ್ಯಾಬಿಲಿಟೇಶನ್ ಮಾಡುತ್ತೇವೆಂದು ಹೇಳಿರತಕ್ಕಂಥದ್ದು ತಪ್ಪು ಆದ್ದರಿಂದ ಇದರ ಮೇಲೆ ಎಕ್ಸ್‌ಪ್ಲೇನ್ ಮಾಡತಕ್ಕಂಥ ಅವಶ್ಯಕತೆ ಇಲ್ಲ ಗಡಿ ಪ್ರದೇಶದಲ್ಲಿರತಕ್ಕಂಥವರೆಲ್ಲಾ ಕನ್ನಡ ಓದಬೇಕೆಂದು ಹೇಳುತ್ತಾರೆ ಮತ್ತೆ ಇವತ್ತಿನ ದಿವಸ ಬೋರ್‌ವೆಲ್‌ಗಳನ್ನು ಕೊರಿಯುವುದಕ್ಕೆ ಆಗುತ್ತಿಲ್ಲವೆಂದರೆ, ತಮಿಳುನಾಡಿನವರೇ ಇವತ್ತು ಬೋರ್‌ವೆಲ್‌ಗಳನ್ನು ಹಾಕತಕ್ಕಂಥ ಕೆಲಸ ಮಾಡುತ್ತಿದ್ದಾರೆ ಈಗಾ ಕಾವೇರಿ ಗಲಾಟೆ ನಡೆಯುತ್ತಿರುವುದರಿಂದ ನಾವು ಬರುವುದಿಲ್ಲವೆಂದು ಹೇಳುತ್ತಿದ್ದಾರೆ ಒಂದು ತಿಂಗಳಿಂದ ನಮ್ಮ ಜಿಲ್ಲೆಯ ಡಿ ಸಿ ಯವರು ರಿಗ್‌ಗಳನ್ನು ಹುಡುಕುತ್ತಿದ್ದಾರೆ ಅವರು ಇನ್ನೂ ಒಂದು ತಿಂಗಳು ಹುಡುಕಿದರೂ ರಿಗ್ ಬರುವುದಿಲ್ಲ what is the other alternative? ಗಡಿ ಪ್ರದೇಶದಲ್ಲಿರತಕ್ಕಂಥವರೆಲ್ಲಾ ಕನ್ನಡ ಓದಬೇಕೆಂದು ಹೇಳುತ್ತೀರಿ ಆದರೆ, ಕನ್ನಡ ಅಂಡ್ ಕಲ್ಚರ್ ಇಲಾಖೆಗೆ ನೀವು ಒದಗಿಸಿರುವ ಹಣ ನೋಡಿ? 50 ಸಾವಿರ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ ಇದು ಪೆಪ್ಪರ್‌ಮೆಂಟ್, ಮಿರಾಯಿಗೆ ಕೊಡುವ ರೀತಿಯಲ್ಲಿ ಕೊಟ್ಟಿದ್ದೀರಿ ಆದರೆ, ಗಡಿ ಪ್ರದೇಶದ ಅಭಿವೃದ್ಧಿಯ ಬಗ್ಗೆ ಮಾತನಾಡುತ್ತೀರಿ ಮಾನ್ಯ ವಾಟಾಳ್ ನಾಗರಾಜ್‌ರವರು ಒಂದು ವರದಿ ಕೊಟ್ಟು ಗಡಿ ಪ್ರದೇಶದಲ್ಲಿರುವ ಕನ್ನಡಿಗರ ಅಭಿವೃದ್ಧಿಗೆ ಏನು ಮಾಡಬೇಕೆಂದು ಮತ್ತು ಕನ್ನಡ ಸಂಸ್ಕೃತಿಯನ್ನು ಯಾವ

ರೀತಿಯಾಗಿ ಅಭಿವೃದ್ಧಿ ಮಾಡಬೇಕೆಂಬುದರ ಬಗ್ಗೆ ವರದಿ ಕೊಟ್ಟಿದ್ದರು ನಾನು ಇಲ್ಲಿ ಒಂದ ಪದ ಇಂಗ್ಲೀಷ್ ಮಾತನಾಡಿದರೆ, ಕನ್ನಡದಲ್ಲಿ ಮಾತನಾಡಿ ಎಂದು ಮಾನ್ಯ ವಾಟಾಳ್ ನಾಗರಾಜ್‌ನವರು ಹೇಳುತ್ತಾರೆ ಅವರು ಹೇಳತಕ್ಕಂಥದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ ಮತ್ತೆ ಅವರು ಹೇಳಿದ್ದಕ್ಕೋಸ್ಕರ ನಾನು ಕನ್ನಡದಲ್ಲೇ ಮಾತನಾಡುತ್ತೇನೆ ಆದರೆ, ನನ್ನ ತರಹ ನನ್ನ ಜನ ಮಾತನಾಡಬೇಕು ಮತ್ತು ಓದಬೇಕು ಆದರೆ, ನಮ್ಮ ಊರಿನಲ್ಲಿ ನಾನು ಸುವರ್ಣ ಕರ್ನಾಟಕವನ್ನು ನೋಡಿಲ್ಲ ಇಲ್ಲಿ ಏನಾಗಿದೆ ಎಂದರೆ, ಅಧಿಕಾರಿಗಳು ಬಂದು ದೀಪ ಹಚ್ಚಿ ನಮ್ಮ ಹೆಸರುಗಳನ್ನು ಹೇಳುವುದು ಸುವರ್ಣ ಕರ್ನಾಟಕ ಕಾರ್ಯಕ್ರಮವೇ? ಇದರ ಬಗ್ಗೆ ಯಾರು ಮಾತನಾಡುವುದು? ಸುವರ್ಣ ಕರ್ನಾಟಕ ಕಾರ್ಯಕ್ರಮವಿರಲಿ, ಆದರೆ, ಗಡಿ ಪ್ರದೇಶದಲ್ಲಿನ ಗತಿಗಳು ಏನಾಗಿವೆ ಎಂಬುದನ್ನು ನೋಡಿ ನೀವು ನಮಗೆ ಇನ್ನೂ 10 ಕೋಟಿ ರೂಪಾಯಿ ಕೊಟ್ಟು ಕೆ ಜಿ ಎಫ್‌ನಲ್ಲಿರತಕ್ಕಂಥ ಜನಗಳಿಗೆ ಅಲ್ಲಲ್ಲಿ ಟ್ಯೂಶನ್ ಕೊಟ್ಟು ಅವರಿಗೆಲ್ಲಾ ಕನ್ನಡ ಕಲಿಸಿಕೊಡಿ ಎಂದು ಹೇಳಬೇಕಲ್ಲವೇ?

ಶ್ರೀ ವಾಟಾಳ್ ನಾಗರಾಜ್ – ಮಾನ್ಯ ರಾಜೇಂದ್ರನ್ರವರು ಗಡಿ ಭಾಗದಿಂದ ಬಂದಿದ್ದಾರೆ ನಾನು ವರದಿ ಕೊಟ್ಟು ಎಷ್ಟು ವರ್ಷಗಳಾಗಿವೆ ಎಂದು ಅವರು ಕೇಳಿದರು ನಾನು ಗಡಿನಾಡು ವರದಿ ಕೊಟ್ಟು 7 ವರ್ಷವಾಯಿತು ಕನ್ನಡ ಸಂಸ್ಕೃತಿ ಇಲಾಖೆಗೆ ಭಿಕ್ಷೆ ಕೊಟ್ಟಂತೆ 5 ಲಕ್ಷ, 3 ಲಕ್ಷ ರೂಪಾಯಿ ಕೊಟ್ಟಿದ್ದಾರೆಂದು ಅವರು ಈಗಾಗಲೇ ಹೇಳಿದರು ಆದರೆ, ಪ್ರತಿ ಸರ್ಕಾರಗಳು ಕನ್ನಡ ಸಂಸ್ಕೃತಿ ಇಲಾಖೆಯನ್ನು ಕಡೆಗಣಿಸಿದ್ದಾರೆ ಇವತ್ತಿನ ದಿವಸ ಕನ್ನಡ ಸಂಸ್ಕೃತಿ ಇಲಾಖೆ ಬಹಳ ವಿಶಾಲವಾದಂಥ ಒಂದು ಇಲಾಖೆಯಾಗಿದೆ ಮತ್ತೆ ಇದರ ಅವಶ್ಯಕತೆ ಇಡೀ ಕರ್ನಾಟಕಕ್ಕೆ ಹೆಚ್ಚು ಇದೆ ಆದ್ದರಿಂದ ಈ ಇಲಾಖೆಗೆ ಹೆಚ್ಚಿನ ಹಣ ಮತ್ತು ಬೆಂಬಲ ಕೊಡಬೇಕಾಗುತ್ತದೆ ಮಾನ್ಯ ಮಹದೇವ್ ಪ್ರಸಾದ್‌ರವರು ಆ ಇಲಾಖೆಯ ಮಂತ್ರಿಗಳಾಗಿದ್ದಾರೆ ನಿನ್ನೆ ದಿವಸ ನಮ್ಮ ಚಾಮರಾಜನಗರ ಜಿಲ್ಲೆಯಲ್ಲಿ ಗಡಿನಾಡಿನ ಬಗ್ಗೆ ಒಂದು ಒಳ್ಳೆಯ ಸಮಾರಂಭವಾಯಿತು ಇದು ನಿಜವಾಗಿಯೂ ಸಂತೋಷಪಡತಕ್ಕಂಥ ವಿಚಾರ ಮಾನ್ಯ ಸಚಿವರು ಒಳ್ಳೆಯ ಕೆಲಸ ಮಾಡುತ್ತಾರೆ ಮತ್ತೆ ಕೆಲಸ ಮಾಡಬೇಕೆಂಬ ಉತ್ಸಾಹ ಸಹ ಇದೆ ಆದರೆ, ಅವರ ಜೋಳಿಗೆಯಲ್ಲಿ

ದುಡ್ಡಿಲ್ಲ ಆ ಇಲಾಖೆ ಕೊಟ್ಟಿರತಕ್ಕಂಥದ್ದು ಸರಿಯಿಲ್ಲ ತಮಗೆ ಬೇಕಾದವರೆಲ್ಲರೂ ಹಂಚಿಕೊಂಡಿದ್ದೇವೆ ಸದ್ಯಕ್ಕೆ ಮಂತ್ರಿಯಾಗಿರತಕ್ಕಂಥದ್ದೇ ಸಾಕು, ಮತ್ತೆ ಹಣ ಬೇಕೆಂದು ಅವರಿವರನ್ನು ಕೇಳುವುದಕ್ಕೆ ಹೋಗಿ ಮತ್ತೆ ಪಜೀತಿ ಆಗಬಹುದೆಂದು ಎಷ್ಟು ಕೊಟ್ಟಿದ್ದಾರೆಯೋ ಅಷ್ಟೇ ಹೋಗಲೆಂದು ಮತ್ತೆ ಏನಾದರೊಂದು ಕೊಡಲೆಂದು ಸುಮ್ಮನಿದ್ದಾರೆ ನಿಮಗೆ ಒಳ್ಳೆಯ ಇಲಾಖೆ ಕೊಟ್ಟಿದ್ದಾರೆ ನೀವು ಚೆನ್ನಾಗಿ ಕೆಲಸ ಮಾಡಿದರೆ ಒಳ್ಳೆಯ ಹೆಸರು ಬರುತ್ತದೆಂದು ಚಾಮರಾಜನಗರದಲ್ಲಿ ಅವರಿಗೆ ನಾನು ಹೇಳಿದ್ದೇನೆ

ಶ್ರೀ ಜೆ ಸಿ ಮಾಧುಸ್ವಾಮಿ – ಸಾಮಾನ್ಯವಾಗಿ ಈ ಖಾತೆಯನ್ನು ಮಹಿಳೆಯರಿಗೆ ಕೊಡಲಾಗುತ್ತಿತ್ತು ಆದರೆ, ಇದನ್ನು ಇವರಿಗೆ ಏಕೆ ಕೊಟ್ಟರೆಂದು ನಾವು ಮಾತನಾಡಿಕೊಳ್ಳುತ್ತಿದ್ದವು

ಶ್ರೀ ಹೆಚ್ ಎಸ್ ಮಹದೇವ ಪ್ರಸಾದ್ – ಅವರು ಕಾರ್ಯಕ್ರಮದಲ್ಲಿ ಏನೇನು ಹೇಳಬೇಕಾಗುತ್ತೋ ಅವೆಲ್ಲವನ್ನು ಹೇಳಿದ್ದಾರೆ ಆದರೆ, ಸದನದಲ್ಲಿ ಬಂದು ಒಳ್ಳೆಯ ಮಾತನ್ನು ಹೇಳುತ್ತಿರುವುದರಿಂದ ನಾನು ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ

ಶ್ರೀ ವಾಟಾಳ್ ನಾಗರಾಜ್ – ಮಹಿಳೆಯರಿಗೆ ಕೊಡಬೇಕಾಗಿರತಕ್ಕಂಥದನ್ನು ನಿಮಗೆ ಕೊಟ್ಟಿರುವ ಬಗ್ಗೆ ನಾನು ಹೇಳುತ್ತಿಲ್ಲ ಸಂಜೆಯ ಕಾರ್ಯಕ್ರಮದಲ್ಲಿ ಏನು ಹೇಳಿದ್ದೇನೆಂಬುದನ್ನು ಹೇಳಿ?

ಶ್ರೀ ಹೆಚ್ ಎಸ್ ಮಹದೇವ ಪ್ರಸಾದ್ – ಮಾನ್ಯ ಉಪಾಧ್ಯಕ್ಷರೇ, ಜಾನಪದ ಜಾತ್ರೆ ಕಾರ್ಯಕ್ರಮ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ನಡೆಯುತ್ತಿತ್ತು ಮೊನ್ನೆ ದಿವಸ ಇದನ್ನು ಚಾಮರಾಜನಗರಕ್ಕೆ ತೆಗೆದುಕೊಂಡು ಹೋಗಿ ಅಲ್ಲೂ ಒಂದು ಕಾರ್ಯಕ್ರಮ ಮಾಡಿ ನಮ್ಮ ಕನ್ನಡ ಚಳುವಳಿಯ ನಾಯಕರಾಗಿರುವ ಶೀ ವಾಟಾಳ್ ನಾಗರಾಜ್‌ರವರು ಹಿಂದೆ ಮೈಸೂರು ಬ್ಯಾಂಕ್ ವೃತ್ತದಲ್ಲಿ ಏನೊಂದು ಕನ್ನಡ ರಾಜ್ಯೋತ್ಸವ ಆಚರಿಸುತ್ತಿದ್ದ ಹಳೆಯ ನೆನಪುಗಳ ಬಗ್ಗೆ ಮೆಲುಕುಹಾಕುವ ರೀತಿಯಲ್ಲಿ 3 ಗಂಟೆಗಳ ಕಾಲ ಅವರು ಅಲ್ಲಿ ಕುಳಿತು ಆ ಕಾರ್ಯಕ್ರಮವನ್ನು ಆನಂದಿಸಿದ್ದಾರೆ ಹಾಗಾಗಿ, ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಬಗ್ಗೆ ವಿಶೇಷವಾದಂಥ ಗಮನ ಬಂದಿದೆ

ಶ್ರೀ ವಾಟಾಳ್ ನಾಗರಾಜ್ – ಮಾನ್ಯ ಉಪಾಧ್ಯಕ್ಷರೇ, ಈಗ ಬಹಳ ಗಂಭೀರವಾದಂಥ ಪರಿಸ್ಥಿತಿ ಇದೆ ಆದ್ದರಿಂದ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಡೆ ಮಾನ್ಯ ಹಣಕಾಸಿನ ಸಚಿವರು ಸ್ವಲ್ಪ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ ಏಕೆಂದರೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿಮ್ಮೆಲ್ಲರಿಗೂ ಗೌರವ ತರತಕ್ಕಂಥ ಇಲಾಖೆಯಾಗಿದೆ ಮತ್ತೆ ರಾಜ್ಯದ ಎಲ್ಲರ ಬಗ್ಗೆ ಮಾತನಾಡತಕ್ಕಂಥ ಇಲಾಖೆ ಸಂಸ್ಕೃತಿ ಇಲಾಖೆಯಾಗಿದೆ ಇದರಲ್ಲಿ ಬರತಕ್ಕಂಥ ಸಂಸ್ಕೃತಿ, ಸಾಹಿತ್ಯ, ಇತಿಹಾಸ, ಸಾಹಿತಿಗಳು, ಕವಿಗಳು, ಬರಹಗಾರರು ಮತ್ತು ಪತ್ರಕರ್ತರು ಅಂದರೆ, ಇಡೀ ರಾಜ್ಯವೇ ಕೇಂದ್ರಿಕೃತವಾದಂಥ ಒಂದು ಇಲಾಖೆಯಾಗಿದೆ ಇದಕ್ಕೆ ಅವರು ಒಳ್ಳೆಯ ಮಂತ್ರಿಗಳಾಗಿದ್ದಾರೆ ಮತ್ತೆ ಅವರು ಕೆಲಸ ಕೂಡ ಚೆನ್ನಾಗಿ ಮಾಡುತ್ತಾರೆ ನಮ್ಮ ಗಡಿನಾಡು ಜಿಲ್ಲೆಯಲ್ಲಿ ಪ್ರಪ್ರಥಮವಾಗಿ ನಿನ್ನೆ ನಡೆದಂಥ ಸಮಾರಂಭ ಆಗಿದೆ ಮತ್ತೆ ನಾವೆಲ್ಲರೂ ಯಾವುದೇ ಪಕ್ಷ ಭೇದ ಮರೆತು ಸೇರಿರತಕ್ಕಂಥದ್ದು ಬಹಳ ಚೆನ್ನಾಗಿತ್ತು ಆದರೆ, ಆ ಒಂದು ಇಲಾಖೆಗೆ ಹೆಚ್ಚಿನ ಹಣಕಾಸು ಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ ಸುವರ್ಣ ಕರ್ನಾಟಕ ವಿಫಲವಾಯಿತೆಂದು ನಾವೆಲ್ಲರೂ ಹೇಳಿದ್ದೆವು

ಡಾ॥ ಕೆ ಅನ್ನದಾನಿ – ಮಾನ್ಯ ಉಪಾಧ್ಯಕ್ಷರೇ, ಈಗ ಜಾನಪದ ಜಾತ್ರೆ ಮಾಡತಕ್ಕಂಥದ್ದು ಒಳ್ಳೆಯ ಕಾರ್ಯಕ್ರಮ ಸುವರ್ಣ ಕರ್ನಾಟಕದ ಅವಧಿಯಲ್ಲಿ ವಿಶೇಷವಾಗಿ ಒಂದು ಒಳ್ಳೆಯ ಕಾರ್ಯಾಕ್ರಮವನ್ನು ನಮ್ಮ ಕರ್ನಾಟಕ ಸರ್ಕಾರ ಕೊಡುತ್ತಿದೆ ಮತ್ತೆ ಇದರ ಬಗ್ಗೆ ತುಂಬಾ ಮೆಚ್ಚುಗೆಯನ್ನು ವ್ಯಕ್ತಪಡಿಸತಕ್ಕಂಥ ವಿಚಾರ ಕೂಡ ಆಗಿದೆ ಆದರೆ, ಬೆಂಗಳೂರಿನಲ್ಲಿ ಒಂದೇ ಕಡೆ ಜಾನಪದ ಜಾತ್ರೆಯನ್ನು ಮಾಡತಕ್ಕಂಥ ಸಂದರ್ಭ ಇತ್ತು ಆದರೆ, ಅದನ್ನು ಬದಲಾವಣೆ ಮಾಡಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಪ್ರತ್ಯೇಕವಾದ ಸಚಿವರು ಬಂದ ಮೇಲೆ ಅವರ ಜಿಲ್ಲೆಯಲ್ಲಿ ಮೊದಲು ಜಾನಪದ ಜಾತ್ರೆಯನ್ನು ಮಾಡಿಕೊಂಡಿರತಕ್ಕಂಥದ್ದು ಸಂತೋಷದ ವಿಚಾರ ಈ ವರ್ಷವೆಲ್ಲಾ ನಾವು ಸುವರ್ಣ ಕರ್ನಾಟಕ ಕಾರ್ಯಕ್ರಮವನ್ನು ಆಚರಿಸುತ್ತಿರುವುದರಿಂದ, ಕರ್ನಾಟಕದ 27 ಜಿಲ್ಲೆಗಳಲ್ಲಿಯೂ ಕೂಡ ಈ ಜಾನಪದ ಜಾತ್ರೆ ಕಾರ್ಯಕ್ರಮವನ್ನು ಆಚರಿಸಿದರೆ ತುಂಬಾ ಚೆನ್ನಾಗಿರುತ್ತದೆ

ಮತ್ತೆ ಸ್ಥಳೀಯ ಜಾನಪದ ಕಲಾವಿದರಿಗೆ ಹೆಚ್ಚಿನ ಅವಕಾಶವನ್ನು ಕೊಟ್ಟಂತೆ ಕೂಡ ಆಗುತ್ತದೆ ಕೇವಲ ಬೆಂಗಳೂರಿನಲ್ಲಿಯೇ ಇದನ್ನು ಆಚರಿಸುವುದರಿಂದ ಏನಾಗುತ್ತದೆಂದರೆ, ಅಧಿಕಾರಿಗಳು ಬೇಕಾದಂಥವರಿಗೆ ಸ್ವಲ್ಪ ಮಟ್ಟದ ರಾಜಕಾರಣವನ್ನು ನಮಗಿಂತ ಹೆಚ್ಚಾಗಿ ಮಾಡುವುದಕ್ಕೆ ಕಲಿತುಕೊಂಡಿದ್ದಾರೆ ಏಕೆಂದರೆ, ಅವರಿಗೆ ಬೇಕಾದಂಥವರನ್ನು ಮತ್ತೆ ಅವರಿಗೆ ಪರಿಚಯವಿರುವ ನಾಲ್ಕು ಜನರನ್ನು ಕರೆದುಕೊಂಡು ಬಂದು ಡ್ರಮ್ ಹೊಡೆಸುವುದು, ಹಾಗೆಯೇ, ಅವರ ಕಡೆಯವರ 5 ಜನರನ್ನು ಕರೆದುಕೊಂಡು ಬಂದು ತಮಟೆ ಹೊಡೆಸತಕ್ಕಂಥ ಕೆಲಸವನ್ನು ಅಧಿಕಾರಿಗಳು ಮಾಡುತ್ತಿದ್ದಾರೆ ಆದ್ದರಿಂದ, ಈ ಸಂದರ್ಭದಲ್ಲಿ ನನ್ನ ಮನವಿ ಏನೆಂದರೆ ಈಗ ಸುವರ್ಣ ಕರ್ನಾಟಕ ಉತ್ಸವವನ್ನು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಾಡಿದರು ಈ ಒಂದು ಕಾರ್ಯಕ್ರಮವನ್ನು ಕೂಡ ಮೆಚ್ಚಿಗೆ ವ್ಯಕ್ತಪಡಿಸತಕ್ಕಂಥದ್ದಾಗಿದೆ ಏಕೆಂದರೆ, ನಮ್ಮ ಕರ್ನಾಟಕ ರಾಜ್ಯ ಸರ್ಕಾರದ ವತಿಯಿಂದ ತುಂಬಾ ಚೆನ್ನಾಗಿ ಮಾಡಿದರು ಆದರೆ, ಇದನ್ನು ಮಾಡಿದಂಥ ಸಂದರ್ಭದಲ್ಲಿ ಕೆಲವು ಅಧಿಕಾರಿಗಳು ಅಲ್ಲಲ್ಲಿ ಏನೇನು ಭ್ರಷ್ಟಾಚಾರ ಮಾಡಿದ್ದಾರೆಂಬುದು ಸ್ವಲ್ಪ ಹೊರಗಡೆ ಬಂದರೆ ಸೂಕ್ತ ಏಕೆಂದರೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಎಂದ ತಕ್ಷಣವೇ ಇಡೀ ಕರ್ನಾಟಕದ ಇತಿಹಾಸ, ಸಂಸ್ಕೃತಿ, ಭಾಷೆ, ನೆಲ, ಜಲವನ್ನು ರಕ್ಷಣೆ ಮಾಡತಕ್ಕಂಥ ವಿಚಾರ ಮತ್ತು ಇದನ್ನು ಮಾಡತಕ್ಕಂಥ ಸಂಪೂರ್ಣ ಹೊರೆ ಹೊರಬೇಕಾಗಿರತಕ್ಕಂಥ ಜವಾಬ್ದಾರಿ ನಮಗೆ ಇರುತ್ತದೆ

ಮಾನ್ಯ ಉಪಾಧ್ಯಕ್ಷರೆ, ಒಂದು ನಿಮಿಷ, ಕರ್ನಾಟಕದ ಬಗ್ಗೆ ನಾವು ಇಷ್ಟು ಮಾತನಾಡಲಿಲ್ಲವೆಂದರೆ ಹೇಗೆ? ನಾನು ಮಾತನಾಡುತ್ತಿದ್ದೇನೆ

ಉಪಾಧ್ಯಕ್ಷರು – ಅವರು ಮಾತನಾಡಲಿ, ಬರೀ ಅದರ ಬಗ್ಗೆ ಹೇಳಿದರೆ ಹೇಗೆ?

ಡಾ॥ ಕೆ ಅನ್ನದಾನಿ – ಅವರು ಮಾತನಾಡಲಿ ಸರ್ ಒಂದು ನಿಮಿಷ, ನಾನು ಮಾತನಾಡಿ ಮುಗಿಸಿಬಿಡುತ್ತೇನೆ ಅವರು ಅಲ್ಲಿ ಹೇಳುತ್ತಾರೆ, ನಾವು ಮೂರು ಸಾವಿರ ಡೊಳ್ಳುಕುಣಿತದವರನ್ನು ಕರೆಸಿ ಕುಣಿಸಿದ್ದೇವೆಂದು ಹೇಳುತ್ತಾರೆ ಇಡೀ ಸ್ಟೇಡಿಯಂನಲ್ಲಿ ಮೂರು ಸಾವಿರ ಜನರನ್ನು ಸೇರಿಸುವುದಕ್ಕಾಗುವುದಿಲ್ಲ

ಒಂದು ಕಡೆ ತಾಳ ಬಡಿಯುವವರು, ಯಕ್ಷಗಾನದವರು ನಾಲ್ಕು ಸಾವಿರ, ಆ ಲಿಸ್ಟ್ ನೋಡಿದರೆ ಹೇಗೇಗೆ ಇದೆ ನೋಡಿ ಗೊತ್ತಾಗುತ್ತದೆ ಮೂರು ಸಾವಿರ ಜನರು ಇದ್ದರೆ? 300 ಜನ ಇದ್ದರೆ, 30 ಜನರು ಇದ್ದರೆ ಎನ್ನುವುದು ಗೊತ್ತಾಗುತ್ತದೆ ಇಷ್ಟೆಲ್ಲಾ ಇರುವಾಗ, ಅವರವರ ಇಲಾಖೆಯಲ್ಲಿ ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಹಣವನ್ನು ಅಲಾಟ್ ಮಾಡಿಕೊಳ್ಳುವುದನ್ನು ಕಲಿತುಕೊಂಡಿದ್ದಾರೆ ಮೊನ್ನೆ ನಾನು ಒಂದು ಪುಸ್ತಕವನ್ನು release ಮಾಡಿದೆ ನನ್ನ ಹತ್ತಿರ ಬರೆಯುವುದಕ್ಕೆ ದುಡ್ಡು ಇಲ್ಲವೆಂದು ಹೇಳಿ, ನಾನು ಮಾತನಾಡಿ ಮುಗಿಸಿ ಬಿಡುತ್ತೇನೆ

(ಗೊಂದಲ)

ಉಪಾಧ್ಯಕ್ಷರು – ಬಜೆಟ್ ಮೇಲೆ ಮಾತನಾಡುವುದು ಸಾಕಷ್ಟು ಇದೆ ಅದರ ಬಗ್ಗೆ ಸೆಪರೇಟಾಗಿ ತಾವು ಮಾತನಾಡಿ ಬಹಳ ಸಂತೋಷ ನೀವು ಚೆನ್ನಾಗಿ ಮಾತನಾಡುತ್ತಿದ್ದೀರಿ ರಾಜೇಂದ್ರನ್‌ರವರೇ ನಿಮ್ಮ ಎರಡು ನಿಮಿಷ ಆಗಿ ಹೋಯಿತು

ಶ್ರೀ ಎನ್ ರಾಜೇಂದ್ರನ್ – ಮಾನ್ಯ ಉಪಾಧ್ಯಕ್ಷರೇ, ಇಲ್ಲಿ, "A sum of Rs 478 00 lakhs has been provided in the year 2006-2007 budget for repayment of loan and interest to HUDCO, taken by Karnataka Backward Classes Department Association for the construction of BCM Hostels " ಇದು ಯಾವ Association? Is it SC ST Association, Backward Classes Association? What is the name of the Association? ಏನಿದು? ಸರ್ಕಾರದಿಂದ ಒಂದು Association ಮಾಡಿದ್ದೀರಾ? Association ಹೆಸರೇ ಇಲ್ಲ ಅದಕ್ಕೆ ಹಣ ಬಿಡುಗಡೆ ಮಾಡುತ್ತೀರಾ? ಅದಕ್ಕೆ ಇನ್ನಷ್ಟು ದುಡ್ಡು extra ಬೇಕು, Additional ಮಾಡಿ ಕೊಡುತ್ತೀರೆಂದರೆ, ನಾವು ಒಂದು Transparency Act ಅನ್ನು ಇಟ್ಟುಕೊಂಡಿದ್ದೇವೆ

ಶ್ರೀ ಜೆ ಸಿ ಮಾಧುಸ್ವಾಮಿ – ಮಾನ್ಯ ಉಪಾಧ್ಯಕ್ಷರೇ, ಹುಡ್ಕೋ ದಲ್ಲಿ loan ತೆಗೆದುಕೊಂಡು deposit ನಲ್ಲಿಟ್ಟು ಬಡ್ಡಿಯನ್ನು ಸರ್ಕಾರ ಕೊಡುವಂಥ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ್ದಾರೆ, ನಿಮಗೆ ಮಾಹಿತಿ ಇದೆಯೋ ಗೊತ್ತಿಲ್ಲ ಹುಡ್ಕೋದಿಂದ ಸಾಲವನ್ನು ತೆಗೆದುಕೊಂಡರು ಅದನ್ನು ಅವರು ಬ್ಯಾಂಕಿನಲ್ಲಿ deposit ಮಾಡಿ ಬಡ್ಡಿಯನ್ನು ತೆಗೆದುಕೊಂಡು ಬಿಟ್ಟರು ನೀವು ಗ್ಯಾರಂಟಿಯನ್ನು ಕೊಟ್ಟು ಬಿಟ್ಟು ಇವತ್ತು ಅದಕ್ಕೆ ನೀವು repayment ಅನ್ನು ಮಾಡುತ್ತಿದ್ದೀರಿ ಆ officers ಮೇಲೆ ನೀವು ಕ್ರಮವನ್ನು ಜರುಗಿಸಬೇಕು Whatever loans drawn from HUDCO, ಆಗಿನ ಎರಡು-ಮೂರು ವರ್ಷಗಳಲ್ಲಿ ಅದು utilize ಆಗಿಲ್ಲ ಅವರು ಆ ಹಣದ ಮೇಲೆ 5-6% interest ಅನ್ನು ತೆಗೆದುಕೊಂಡು, ನಾವು ದುಡಿದಿದ್ದೇವೆಂದು ವೆಹಿಕಲ್‌ಗಳನ್ನು ತೆಗೆದುಕೊಂಡು ಆಫೀಸಿನಲ್ಲಿ ಮೋಜು ಮಾಡು ಕಳೆದು, ಬಡ್ಡಿಯನ್ನು ನಿಮ್ಮ ಕೈಯಿಂದ ಕಟ್ಟಿಸುತ್ತಿದ್ದಾರೆ Repayment ಅನ್ನು ಸರ್ಕಾರದಿಂದ ಮಾಡಿಸುತ್ತಿದ್ದಾರೆ

ಶ್ರೀ ಎನ್ ರಾಜೇಂದ್ರನ್ – ಮಾನ್ಯ ಉಪಾಧ್ಯಕ್ಷರೇ, ನೀವು ಯೋಚನೆ ಮಾಡಿ, ಏನು ಇದು ಬಜೆಟ್, ಏನು additional budget, extra payment ನಾವು ಮಾಡಬೇಕು Blind ಆಗಿ ಒಂದು Association ಬಗ್ಗೆ ಹೇಳುತ್ತಾರೆ ಇದಕ್ಕೆ ನಾವು support ಮಾಡಬೇಕಾ? ಅದಕ್ಕೆ ಹೆಸರು ಏನು ಇಲ್ಲ ಯಾವ Association ಇಲ್ಲವೆ? Who is the person to whom you are giving? ಇದು ಸರ್ಕಾರದ ದುಡ್ಡಲ್ಲ, ಜನರ ದುಡ್ಡು ಸರ್ಕಾರ ನೀವು ಮಾಡುವುದು, ಆ ಕೆಲಸವನ್ನು ನೀವು ಸರಿಯಾಗಿ ಮಾಡಿಲ್ಲವೆಂದರೆ, ನಮ್ಮ ಹತ್ತಿರ ಸಹಾಯ ಕೇಳಿದರೆ, ನಾವು ಏನು ಮಾಡುವುದು, ನೀವು ಯೋಚನೆ ಮಾಡಿ ಇದರ ಮೇಲೆ ಇನ್ನು ಮಾತನಾಡಿದರೆ ಏನು ಪ್ರಯೋಜನವಿಲ್ಲ Association ಹೆಸರು ಕೊಟ್ಟಿಲ್ಲ ಯಾರು ನಿಮಗೆ prepare ಮಾಡಿ ಕೊಟ್ಟಿದ್ದಾರೆ ಇದರ ಮೇಲೆ ನಾವು ಮಾತನಾಡಿಕೊಂಡು ಹೋದರೆ, half an hour ಆಗಬಹುದು ಕೊನೆಗೆ ಪ್ರಯೋಜನವೇನು ಇದೆ No transparency in your Government You are not crystal clear, you have no bonafide

intention in mind ನೀವೇ ಯೋಚನೆ ಮಾಡಿ Malafide ಅಂತ ಹೇಳಿಬಿಟ್ಟರೆ ನಿಮಗೆ ಕೋಪ ಬಂದು ಬಿಡುತ್ತದೆ I am not mentioning that Then what is that? ನೀವೇ ಯೋಚನೆ ಮಾಡಿ ನಮ್ಮ ಬೆಂಬಲ ಪೂರ್ತಿ ಇದಕ್ಕೆ ಇಲ್ಲವೆಂದು ಹೇಳಿ, ನನಗೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) – ಮಾನ್ಯ ಉಪಾಧ್ಯಕ್ಷರೇ, ಜಿಲ್ಲಾ ಪಂಚಾಯತಿಯಲ್ಲಿ Horticulture Nurseries ಇದೆ ಅಲ್ಲಿ ಕೆಲವರು 15–20 ವರ್ಷದಿಂದ ಕೆಲಸವನ್ನು ಮಾಡಿಕೊಂಡು ಇದ್ದರು ಅವರನ್ನು ತೆಗೆದು ಹಾಕಿಬಿಟ್ಟರು, ಏಕೆ ಅಂದರೆ, daily wages ನವರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಕ್ಕಾಗಿ Supreme Court ಆದೇಶ ಇದೆ ಆದರೆ ಇಲ್ಲಿ ಪುನಃ 14 02 ಲಕ್ಷ ರೂ ಗಳನ್ನು daily wages ನಲ್ಲಿರುವವರಿಗೆ payment ಸಲುವಾಗಿ ಇಟ್ಟಿದ್ದೀರಿ ಆದರೆ ಕಾನೂನು ಒಬ್ಬೊಬ್ಬರಿಗೆ ಒಂದೊಂದು ರೀತಿ ಇದೆಯೇ? ನಾನು Director, Horticulture ಅವರಿಗೆ ಮಾತನಾಡಿದೆ ಜಿಲ್ಲಾ ಪಂಚಾಯತಿಯಲ್ಲಿ ಚರ್ಚೆಯಾಯಿತು, resolution ಅನ್ನು ಪಾಸ್ ಮಾಡಿದರು, ಅವರನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಆದರೆ ಇಲ್ಲಿ ಹಣ ಇಟ್ಟಿದ್ದಾರೆ ಅವರಿಗೆ ಯಾವುದು ಕಾನೂನು ಇಲ್ಲ, ಅಲ್ಲಿದ್ದರನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದರೆ, ಹಾಗಾದರೆ ಈ ದುಡ್ಡು ಯಾರಿಗೆ ಕೊಡುವುದಕ್ಕೆ ಇಟ್ಟಿದ್ದೀರಿ? ಅಲ್ಲಿ ಕೊಡುವುದಕ್ಕಾಗದಿದ್ದರೆ, ಯಾವ ಜಿಲ್ಲೆಗೆ ಕೊಡುವುದಕ್ಕಾಗುತ್ತದೆ? ಒಂದೊಂದು ಜಿಲ್ಲೆಗೆ ಒಂದೊಂದು ಕಾನೂನು ಇದೆಯೇ? ಇದನ್ನು ಸರಿಪಡಿಸಿಕೊಳ್ಳಬೇಕು ಇದರ ಬಗ್ಗೆ ಅವರು ಉತ್ತರವನ್ನು ಹೇಳಬೇಕಾಗುತ್ತದೆ ಮೀನುಗಾರಿಗೆ ಕೊಂಡಿ ರಸ್ತೆ ಬಗ್ಗೆ ಮಾನ್ಯ ಮಾಧುಸ್ವಾಮಿಯವರು ಮಾತನಾಡಿದರು 160 ರಿಂದ 170 ಕಿ ಮೀ ವರೆಗೆ ಕೊಂಡಿ ರಸ್ತೆ ಎಂದು ತೆಗೆದುಕೊಂಡಿದ್ದಾರೆ ಅನೇಕ ವರ್ಷಗಳಿಂದ ಆ ರಸ್ತೆಯನ್ನು ದುರಸ್ಥಿ ಮಾಡಿಲ್ಲ, ನಾವು ಬೈಸಿಕೊಳ್ಳುವ ಪರಿಸ್ಥಿತಿ ಬಂದಿದೆ, ನಾವು ಶಾಸಕರ ನಿಧಿಯಿಂದ ನಾವು ರಿಪೇರಿ ಮಾಡಿಸುತ್ತಿದ್ದೇವೆ ಅದನ್ನು ತೆಗೆದುಕೊಂಡು ಹೋಗಿ ಜಿಲ್ಲಾ ಪಂಚಾಯತಿ ರಸ್ತೆಗೆ ಹಾಕಿಬಿಟ್ಟರು State sector ನಲ್ಲಿದ್ದ ಕೊಂಡಿ ರಸ್ತೆಗಳು

ಗ್ರಾಮೀಣ ಪ್ರದೇಶಗಳಲ್ಲಿ ಇಲ್ಲ ಪಟ್ಟಣ ಪ್ರದೇಶಗಳಲ್ಲಿ ಇದೆ ನೀವು ತೆಗೆದುಕೊಂಡು ಹೋಗಿ ಅಲ್ಲಿ ಹಾಕಿ, ಗ್ರಾಮೀಣ ಪ್ರದೇಶದಲ್ಲಿರುವ ಕೊಂಡಿ ರಸ್ತೆಗಳ ದುರುಸ್ತಿಗೆ ಏನೂ ಹಣ ಕೊಡದಿರುವ ಪರಿಸ್ಥಿತಿ ಬಂತು ಇಲ್ಲಿ ಅಧಿಕಾರಿಗಳು ಏನೇನು ಹೇಳುತ್ತಾರೆ, ಸರ್ಕಾರ ಅದನ್ನು ಒಪ್ಪಿಕೊಳ್ಳುವಂಥದ್ದು, ಯಾವ್ಯಾವುದು State sector ನಲ್ಲಿ ಇರಬೇಕು, ಯಾವ್ಯಾವುದು ಜಿಲ್ಲಾ ಪಂಚಾಯತಿಗೆ ಹೋಗಬೇಕು ಎನ್ನುವಂಥದ್ದನ್ನು ಆಲೋಚನೆ ಮಾಡದೇ ಮಾಡಿದರೆ, ವಿತರಣೆ ಮಾಡುವಾಗ ಮೀನುಗಾರಿಕೆ ಹೆಚ್ಚು ಕೆಲಸವಾಗುವಂಥದ್ದು ಪಟ್ಟಣ ಪ್ರದೇಶದಲ್ಲಿ, ಮಂಗಳೂರು, ಉಡುಪಿ, ಕಾರವಾರ, ಪೆಣಂಬೂರು ಇಂತಹ ಪ್ರದೇಶದಲ್ಲಿ, ಇವೆಲ್ಲವನ್ನು ಬಿಟ್ಟು ಜಿಲ್ಲಾ ಪಂಚಾಯತಿ ಸೆಕ್ಟರ್‌ನಲ್ಲಿ ಹಾಕಿಬಿಟ್ಟರೆ, ಕೆಲಸವಾಗುವುದಿಲ್ಲ Last time sanction ಮಾಡಿಸಿಕೊಂಡು ಹೋಗಿರುವ ರಸ್ತೆಯ ದುಡ್ಡನ್ನು ಜಿಲ್ಲಾ ಪಂಚಾಯತಿಗೆ ಹಾಕಿಬಿಟ್ಟರೆ, ಅದೇ ಪರಿಸ್ಥಿತಿ ಇಲ್ಲಿ ಆಗಿದೆ ಪುನಃ ಈ ಸಲ ಏನು ನೀವು ದುಡ್ಡನ್ನು ಕೊಡುತ್ತಿದ್ದೀರಿ, ದಯವಿಟ್ಟು State sector ನಲ್ಲಿಡಿ, ಇಲ್ಲಿಂದಲೇ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಹೇಳಬೇಕಾಗುತ್ತದೆ ಪುನಃ ಅದನ್ನು ಜಿಲ್ಲಾ ಪಂಚಾಯತಿಗೆ ಹಾಕಬೇಡಿ, ಆ ರಸ್ತೆಗಳಲ್ಲಿ ನೀವು ಹೋದರೆ, ನಿಮಗೇ ಗೊತ್ತಾಗುತ್ತದೆ ನಾವು ಯಾವಾಗಲೂ ಬೈಸಿಕೊಳ್ಳುತ್ತಿದ್ದೇವೆ ಕೇವಲ ಕರಾವಳಿ ರಸ್ತೆಗಳು ಅಲ್ಲ ಒಳನಾಡು ಮೀನುಗಾರಿಕೆಯಲ್ಲಿಯೂ ಕೊಂಡಿ ರಸ್ತೆಗಳು ಇವೆ ಅದಕ್ಕೇನಾದರೂ ವ್ಯವಸ್ಥೆಯನ್ನು ಮಾಡಿದ್ದೀರಾ? ನಿಮ್ಮ ಈ ಪೂರಕ ಬಜೆಟ್‌ನಲ್ಲಿಯಾಗಲಿ, ಅಥವಾ ಬಜೆಟ್‌ನಲ್ಲಿಯಾಗಲಿ, ಒಳನಾಡು ಮೀನುಗಾರಿಕೆಯ ಬಗ್ಗೆ ಒಂದು ಶಬ್ಧವನ್ನು ಕೂಡ ಹೇಳಿಲ್ಲ ಅದರ ಬಗ್ಗೆ ಸ್ವಲ್ಪ ಹೇಳಬೇಕು ಮಾನ್ಯ ಮಾಧುಸ್ವಾಮಿಯವರು ಮಾತನಾಡುತ್ತಾ ಒಂದು ಮಾತನ್ನು ಹೇಳಿದರು ಹಣಕಾಸು ಆಯೋಗಕ್ಕೆ 60 ಲಕ್ಷ ರೂಪಾಯಿಗಳ ಹಣವನ್ನು ಇಟ್ಟಿದ್ದೀರಿ ಅವರು ಎಲ್ಲಿಯವರೆಂದರೆ ನಮ್ಮ ಜಿಲ್ಲೆಯವರು, ಅವರು ಮಾಜಿ ಶಾಸಕರು ಅವರು ಕೊಟ್ಟಿರುವ ಹೇಳಿಕೆಯನ್ನು ಸರ್ಕಾರದ ಪರವಾಗಿ ಓದುತ್ತೇನೆ ಸರ್ಕಾರಿ ಕಾಮಗಾರಿಕೆಯ ಬಗ್ಗೆ ಮೊನ್ನೆ ಮಾನ್ಯ ಕಾರಜೋಳ್‌ರವರಿಗೆ ಹೇಳಿದೆ ಗ್ರಾಮೀಣ ಪ್ರದೇಶದ ಅತೀ ಕಡುಬಡವರಿಗೆ ಜಾರಿ ಗೊಳಿಸಿರುವ ಅನ್ನಪೂರ್ಣ ಪಡಿತರ ಚೀಟಿಯ ವ್ಯವಸ್ಥೆ ಬಗ್ಗೆ ಇಲ್ಲಿ ಹಲವಾರು

ಲೋಪದೋಷಗಳು ಕಂಡು ಬಂದಿದ್ದು, ಫೆಬ್ರವರಿ ತಿಂಗಳಲ್ಲಿ 10 ಕೆಜಿ ಅಕ್ಕಿ ವಿತರಣೆಯಾಗಬೇಕಾಗಿದ್ದು, ಇದುವರೆಗೆ ವಿತರಣೆಯಾಗದಿರುವ ಕುರಿತು ಅವರು ಹೇಳುತ್ತಾರೆ ರಾಜ್ಯ ಸರ್ಕಾರ ಹೇಗೆ ಕೆಲಸ ಮಾಡುತ್ತದೆಂದು ಅವರು ಇನ್ನೊಂದು ವಿಷಯವನ್ನು ಹೇಳುತ್ತಾರೆ ವರಾಹಿ ಯೋಜನೆ ಬಗ್ಗೆ ಅವರು ಹೇಳುತ್ತಾರೆ ಹಣದ ಅಭಾವದಿಂದ ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಕ್ರಮ ನಿಂತಿಲ್ಲ ಈ ದಿಕ್ಕಿನಲ್ಲಿ ನಾವು ವಿದೇಶಿ ಸಾಲವನ್ನು ಎತ್ತಿದ್ದೇವೆ ವಿದೇಶಿ ಸಾಲವನ್ನು ಎತ್ತಿ ಕೆಲಸ ಮಾಡಲಿ, ಅದಕ್ಕೆ ನಮ್ಮ ವಿರೋಧವಿಲ್ಲ ಏಕೆಂದರೆ, ಅಭಿವೃದ್ಧಿಯಾಗಬೇಕಾದರೆ, ಸಾಲ ಪಡೆದು ಅಭಿವೃದ್ಧಿಯನ್ನು ಮಾಡಬೇಕಾಗುತ್ತದೆ ಇಲ್ಲದಿದ್ದರೆ ನಾವು ಹಣಕ್ಕೋಸ್ಕರವಾಗಿ ಕಾದರೆ ಅಷ್ಟು escalation ಆಗಿರುತ್ತದೆ, ಮುಂದೆ ತೊಂದರೆಯಾಗುತ್ತದೆ ನೀವು ಬಡ್ಡಿ ಕೊಟ್ಟಿದ್ದರಲ್ಲಿ ಇವತ್ತೇ ಅಭಿವೃದ್ಧಿಯಾಗುತ್ತದೆ ಆದರೆ ಮುಂದೆ ಹಣಕ್ಕಾಗಿ ಕಾದರೆ ಕೆಲಸವಾಗುವುದಿಲ್ಲ ಅದು ಗೊತ್ತಿದೆ ಆದರೆ ಇವರು ಏನು ಹೇಳುತ್ತಾರೆಂದರೆ, ಹಣದ ಲೂಟಿಯಾಗಿದ್ದು, ಯೋಜನಾ ಅನುಷ್ಠಾನದ ಕೊರತೆಯಿಂದಷ್ಟೇ ಅಭಿವೃದ್ಧಿಗೆ ಹಿನ್ನಡೆಯಾಗಿದೆ ಎಂದು ಅವರು ಖೇದ ವ್ಯಕ್ತಪಡಿಸಿದರು ಇದನ್ನು ರಾಜ್ಯ ಹಣಕಾಸು ಆಯೋಗದ ಅಧ್ಯಕ್ಷರು ಹೇಳಿದ್ದು, ಇದು ನಾನಲ್ಲ ಅವರು ಮುಂದೆ ಹೇಳುತ್ತಾರೆ, ಸರ್ಕಾರಿ ಕಾಮಗಾರಿಗಳ ಬಗ್ಗೆ ಗ್ರಾಹಕರು ಅಧಿಕಾರಿಗಳು ಗಮನಿಹರಿಸಬೇಕು ಎಂದು ಹೇಳಿದರು ಸರ್ಕಾರಿ ಆದೇಶಗಳು ವೈರುಧ್ಯಗಳಿದ್ದು ನೈಜ ಬಡವರಿಗೆ ಅನ್ಯಾಯವಾಗಿದೆ ವರಾಹಿ ಯೋಜನೆ ಈ ಶತಮಾನದಲ್ಲಿ ಆಗದು ಲೂಟಿ ಮಾತ್ರ ನಡೆಯುತ್ತಿದೆ ಎಂದು ಮೊದಲು ಅವರು ಸರ್ಕಾರಿ ಅಧಿಕಾರಿಗಳ ಕಣ್ಣು ತೆರೆಸಬೇಕೆಂದು ಹೇಳಿರುತ್ತಾರೆ ವರಾಹಿ ಯೋಜನೆಯಲ್ಲಿ ಸಾಕಷ್ಟು ಲೂಟಿಯಾಗುತ್ತಿದೆ ಎನ್ನುವುದನ್ನು ಅವರೇ ಹೇಳಿದ್ದಾರೆ, ನಾನು ಅಲ್ಲ ಹೇಳುತ್ತಿರುವುದು

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಮಾನ್ಯ ಉಪಾಧ್ಯಕ್ಷರೇ, ಹಣಕಾಸು ಆಯೋಗದ ಅಧ್ಯಕ್ಷರು ಈ ರೀತಿಯ ಹೇಳಿಕೆಯನ್ನು ಕೊಡಬಹುದೇ? ಅವರಿಗೆ ಆ ಅಧಿಕಾರ ಇದೆಯಾ? ಅಧಿಕಾರದ ವ್ಯಾಪ್ತಿಯನ್ನು ಅವರು ಮೀರಿ ಈ ರೀತಿಯ ಒಂದು ಹೇಳಿಕೆಯನ್ನು ಹೇಗೆ ಕೊಟ್ಟರು? ಅದನ್ನು ಸರ್ಕಾರ ಹೇಗೆ ನೊಡಿಕೊಂಡಿದೆ

ಎಂದು ಹೇಳಿ ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ ಹಣಕಾಸು ಆಯೋಗದ ಅಧ್ಯಕ್ಷ ಸ್ಥಾನವೆಂದರೆ, ಒಂದು ಜವಾಬ್ದಾರಿಯುತ ಸ್ಥಾನ ಆ ರೀತಿ ಹೇಳಿಕೆಯನ್ನು ಕೊಟ್ಟಾಗ ಸರ್ಕಾರದ ಮೇಲೆ ಯಾವ ರೀತಿಯಾದ ಪರಿಣಾಮವಾಗುತ್ತದೆ, ಮಾನ್ಯ ಯಡಿಯೂರಪ್ಪನವರೇ ತಾವು ರಾಜೀನಾಮೆಯನ್ನು ಕೊಡಬೇಕಾಗುತ್ತದೆ, ಅವರು ಹೇಳಿರುವುದನ್ನು ನೀವು ಒಪ್ಪುವುದಾದರೆ ಇಲ್ಲದಿದ್ದರೆ ಅವರ ಕೈಯಿಂದ ರಾಜೀನಾಮೆಯನ್ನು ತೆಗೆದುಕೊಳ್ಳಿ ಅಥವಾ ನೀವಾದರೂ ರಾಜೀನಾಮೆ ಕೊಡಿ ನಿಮ್ಮ ಸರ್ಕಾರದ ಮೇಲೆ ನೇರವಾದ ಆಪಾದನೆಯನ್ನು ವರಾಹಿ ಯೋಜನೆಯಲ್ಲಿ ಹಣ ಲೂಟಿಯಾಗುತ್ತಿದೆ ಎಂದು ಹೇಳಿದ್ದಾರೆ Either you must accept it or you must ask that man to resign If you are not in a position to ask him to resign, you must resign

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ – ಮಾನ್ಯ ಉಪಾಧ್ಯಕ್ಷರೇ, ನಾನು High Court ಗೆ ಒಂದು writ petition ಹಾಕಿರುತ್ತೇನೆ ಹಿಂದಿನ ಸರ್ಕಾರ ಎಂ ಪಿ ಗಳಿಗೆ ಕಾರುಗಳನ್ನು ಕೊಟ್ಟಿದ್ದರು ಅದು ಪೆಂಡಿಂಗ್ ಇದೆ ಆದರೆ ಅವರುಗಳಿಗೆ ಹೊಸ ಕಾರುಗಳ ಬದಲಾವಣೆಯನ್ನು ಮಾಡುತ್ತಿರುವುದು, ಸರ್ಕಾರ ಎಷ್ಟು ಪೆಟ್ರೋಲ್ ಮತ್ತು ಡೀಸಲ್‌ನ್ನು ಕೊಡುತ್ತಿರುವುದು ಅದರ ಬಗ್ಗೆ ನನಗೆ ಅರ್ಥವಾಗುತ್ತಿಲ್ಲ ಇವರಿಗೆ ಕಾರುಗಳು ಎಷ್ಟು ವರ್ಷಕ್ಕೆ ಬದಲಾವಣೆಯನ್ನು ಮಾಡಬೇಕು ಅವರಿಗೆ 500 ಲೀಟರ್ ಎಂದು ಲಿಮಿಟ್ ಮಾಡಿದ್ದಾರೆ ಇದರ ಬಗ್ಗೆ ಜಿಲ್ಲಾಧಿಕಾರಿಗಳ ಕಛೇರಿಯಿಂದ ಮಾಹಿತಿಯನ್ನು ತರಿಸಿಕೊಂಡು ನೋಡಬೇಕು ತಾವು ಕೊಟ್ಟಿರುವ ಲಿಮಿಟ್ ಪ್ರಕಾರ ಅವರು ಖರ್ಚು ಮಾಡುತ್ತಿದ್ದಾರಾ? ಅವರು ಕಾರನ್ನು ಡಿ ಸಿ ಆಫೀಸಿಗೆ ಕೊಡುತ್ತಿದ್ದಾರಾ, ಅಥವಾ ಅವರು ಸ್ವಂತಕ್ಕೆ ಉಪಯೋಗಕ್ಕೆ ಇಟ್ಟುಕೊಂಡಿದ್ದಾರಾ, ಅದರ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳಬೇಕು ಹಿಂದೆ ಈ ಬಗ್ಗೆ ಚರ್ಚೆಯಾಗಿತ್ತು, ಅವರಿಗೆ ಅದನ್ನು ಕೊಟ್ಟಾಗಲೇ ನಾನು ವಿರೋಧವನ್ನು ಮಾಡಿದ್ದೇ ಈ ಬಗ್ಗೆ High Court ನಲ್ಲಿ writ petition ನ್ನು ಸಹ ಹಾಕಿದ್ದೇನೆ ನಾನು ಅವತ್ತು ಮಾತನಾಡುವಾಗಲೂ ಸಹ ಹೇಳಿದ್ದೇನೆ, ನಾನು ಎಂ ಪಿ ಯಾದರೂ ಕೂಡ ಕಾರನ್ನು ಕೊಡಬೇಡಿ ಎಂದು ಹೇಳಿದ್ದೇನೆ

ಶ್ರೀ ವಾಟಾಳ್ ನಾಗರಾಜ್ – ನೀವು ಕಾರುಗಳನ್ನು ಲೋಕಸಭಾ ಸದಸ್ಯರುಗಳಿಗೆ ಕೊಡುವುದಾದರೆ ಶಾಸಕರುಗಳಿಗೂ ಕೊಡಿ ಅವರುಗಳಿಗೆ ಏನು ವಿಶೇಷ? ನೀವು ಕಾರನ್ನು ಶಾಸಕರುಗಳಿಗೆ ಕೊಡಬೇಡವೇ? ಲೋಕಸಭಾ ಸದಸ್ಯರಿಗಿಂತ ಕೆಲಸಕಾರ್ಯಗಳು ಆ ಕ್ಷೇತ್ರದಲ್ಲಿ ಎಲ್ಲರಿಗಿಂತ ಹೆಚ್ಚಾಗಿ ಇರುವುದು ಶಾಸಕರಿಗೆ ಶಾಸಕರಿಗೆ ಪ್ರತಿಯೊಂದು ಸಹ ಕಡೆಗಣಿಸಿ, ಲೋಕಸಭಾ ಸದಸ್ಯರುಗಳಿಗೆ ಕೊಡತಕ್ಕಂತಹ ವಿಚಾರ ಏನಿದೆ, ಅದರ ಬಗ್ಗೆ ತಾವು ತೀರ್ಮಾನವನ್ನು ತೆಗೆದುಕೊಳ್ಳಬೇಕು ಲೋಕಸಭಾ ಸದಸ್ಯರ ಬಗ್ಗೆ ಎಲ್ಲಾ ವಿಚಾರಗಳಲ್ಲಿಯೂ ವಿಶೇಷ ಸೌಲಭ್ಯಗಳನ್ನು ನೀಡಲಾಗಿದೆ ಅವರಿಗೆ ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ಒಂದು ಕಾರ್ಯಾಲಯ ಅವರಿಗೆ ವಿಶೇಷ ವ್ಯವಸ್ಥೆ, ಅವರಿಗೆ ಸಾಲದಕ್ಕೆ ರಾಜ್ಯಮಂತ್ರಿಯ ಸ್ಥಾನಮಾನ, ಇದನ್ನು ಏಕೆ ಕೊಟ್ಟಿದ್ದೀರಿ, ಏಕೆ ಅವರಿಗೆ ಬೇಕಾಗಿದೆ ಇದು ಸರಿಯಾದ ಕ್ರಮವಲ್ಲ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ – ಅದಕ್ಕಿಂತ ಅಸಹ್ಯ ಎಂದರೆ ಹಿಂದೆ ಮುಖ್ಯಮಂತ್ರಿಗಳಾಗಿದ್ದವರಿಗೂ, ಕೂಡ ಡೆಪ್ಯೂಟಿ ಮಿನಿಸ್ಟರ್ ಕೇಡರ್ ಈಗ ಬರೀ perks ಗೋಸ್ಕರ ಇದು ದುರಂತ ಹಿಂದೆ ಎಲ್ಲಿತ್ತು? Write petition ಪೆಂಡಿಂಗ್ ಇದೆ

ಶ್ರೀ ಜೆ ಸಿ ಮಾಧುಸ್ವಾಮಿ – Perks and privileges of Parliment member ಬಗ್ಗೆ list ತರಿಸಿನೋಡಿ ನೀವು ಏತಕ್ಕೆ ರಾಜ್ಯ ಸರ್ಕಾರದ exchequer ನಿಂದ ಅಷ್ಟೊಂದು ಹಣವನ್ನು ಖರ್ಚು ಮಾಡುತ್ತಿದ್ದೀರಿ, ಅದರ ಬಗ್ಗೆ ತಾವು ಯೋಚನೆ ಮಾಡಬೇಕು ಇದಕ್ಕೆ ನಮದೆಲ್ಲಾ ಬಹಳ ವಿರೋಧವಿದೆ ಇದನ್ನು ತಕ್ಷಣ withdraw ಮಾಡಬೇಕು ವರ್ಷ ವರ್ಷ ಹೊಸ ಹೊಸ ಕಾರುಗಳನ್ನು ಕೊಂಡುಕೊಂಡು ಲೋಕಸಭಾ ಸದಸ್ಯರಿಗೆ ಹೊಸ ಕಾರುಗಳೆಂದು ಬಜೆಟ್‌ನಲ್ಲಿ ತಂದರೆ ಗತಿ ಎಲ್ಲಿ?

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ – ಅದನ್ನು ನಾನು question ಮಾಡಿದ್ದು, Constitution ಪ್ರಕಾರ State Contingency Fund ನಿಂದ ಕೊಡುವುದಕ್ಕೆ ಬರುವುದಿಲ್ಲ ಅವರುಗಳಿಗೆ ಏನಾದರೂ ಕೊಡುವುದಿದ್ದರೆ ಸೆಂಟ್ರಲ್

ಗೋರ್ಮೆಂಟ್‌ನವರೆ ಕೊಡಬೇಕಾಗುತ್ತದೆ ಅದನ್ನು ಸ್ಟೇಟ್ ಗೋರ್ಮೆಂಟ್ ನವರು ಕೊಡುವುದಕ್ಕೆ ಬರುವುದಿಲ್ಲವೆಂದು ಸಂವಿಧಾನದಲ್ಲಿದೆ ಅದನ್ನು ನಾವು question ಮಾಡುತ್ತಿದ್ದೇವೆ

ಶ್ರೀ ಬಿ ಶಿವರಾಂ – ಅದು ಬೇರೆ ರಾಜ್ಯದಲ್ಲಿ ಇದೆಯೇ?

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ – ಇಲ್ಲ ಬೇರೆ ರಾಜ್ಯದವರು ಕೇಳಿದ್ದಾರೆ

ಶ್ರೀ ಬಿ ಶಿವರಾಂ – ಬೇರೆ ರಾಜ್ಯದವರು ಈ ವ್ಯವಸ್ಥೆಯನ್ನು ಮಾಡಿಲ್ಲವೆಂದಾಗ ಕರ್ನಾಟಕ ರಾಜ್ಯದಲ್ಲಿ ವಿಶೇಷವಾಗಿ ಲೋಕಸಭಾ ಸದಸ್ಯರಿಗೆ ಕೊಡತಕ್ಕಂತಹದ್ದು ಏನು? ಅಂತಹ ಅನಿವಾರ್ಯತೆ ಏನು ಇದೆ? ಹಾಗಾದರೆ ಶಾಸಕರುಗಳಿಗೂ ಕೊಡಿ

ಶ್ರೀ ಹೆಚ್ ಡಿ ಬಸವರಾಜು – ಸನ್ಮಾನ್ಯ ಉಪಾಧ್ಯಕ್ಷರೇ ನಿಮ್ಮ ಗಮನಕ್ಕೆ ಒಂದು ವಿಚಾರವನ್ನು ತರುವುದಕ್ಕೆ ಇಷ್ಟಪಡುತ್ತೇನೆ

ಶ್ರೀ ಬಿ ಶಿವರಾಂ – ಎಲ್ಲಿಯವರೆಗೆ ಈ ವ್ಯವಸ್ಥೆಯನ್ನು ತರುತ್ತೀರಿ?

ಶ್ರೀ ಹೆಚ್ ಡಿ ಬಸವರಾಜು – ತಾವು ಒಳ್ಳೆಯ ಮಾತನ್ನು ಹೇಳುತ್ತಿದ್ದೀರಿ, ಇಲ್ಲವೆಂದು ನಾನು ಹೇಳುವುದಿಲ್ಲ ಇದನ್ನು ಮಾಡಿದವರು ಯಾರು? ಇದು ಯಾವಾಗ ಆಯಿತು? ಮಾನ್ಯ ಶಿವರಾಮುರವರೇ ತಮ್ಮ ಬಗ್ಗೆ ನನಗೆ ಬಹಳ ಗೌರವವಿದೆ ತಾವು ಮಾತನಾಡಿ, ನಾನು ಈ ಬಗ್ಗೆ ಒಂದೆರಡು ಮಾತನಾಡುತ್ತೇನೆ ಅವರಿಗೆ ಕೊಟ್ಟಿರುವುದು ತಪ್ಪಲ್ಲವೆಂದು ನಾನು ಹೇಳುತ್ತಿಲ್ಲ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ – ಅವತ್ತು ಕೂಡ ಕೊಟ್ಟಿರುವುದು ತಪ್ಪು ಎಂದು ಹೇಳಿದ್ದೇನೆ ಇವತ್ತು ಸಹ ತಪ್ಪು ಎಂದು ಹೇಳುತ್ತಿದ್ದೇನೆ

ಶ್ರೀ ಹೆಚ್ ಡಿ ಬಸವರಾಜು .– ನೀವು ಹೇಳುತ್ತಿರುವುದು ಸರಿ ಇದೆ ಆದರೆ ಇದು ಯಾವಾಗ ನಡೆಯಿತು, ಯಾರಿಂದ ನಡೆಯಿತು, ಈಗ ನಾವೆಲ್ಲರೂ ಸುಮ್ಮನೆ ಇದ್ದೇವು, ಈಗ ನಾವುಗಳೆಲ್ಲರೂ ಮಾತನಾಡುತ್ತಿದ್ದೇವೆ ಈಗಲಾದರೂ ಜ್ಞಾನೋದಯವಾಗಿರುವ ಬಗ್ಗೆ ನಾವುಗಳು ಸಂತೋಷ ಪಡೋಣ ಅದರ ಬಗ್ಗೆ ಚರ್ಚೆ ಮಾಡಿ ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳೋಣ

ಶ್ರೀ ಬಿ ಶಿವರಾಂ – ಏನು ಮಾಡಬೇಕೆಂದು ಹೇಳಿ ಬಸವರಾಜುರವರೇ

ಶ್ರೀ ಬಸವರಾಜು .– ಅದನ್ನೇ ನಾನು ಹೇಳುತ್ತೀರುವುದು,

ಶ್ರೀ ಬಿ ಶಿವರಾಂ – ಇದೊಂದೇ ಮಂತ್ರವೇ?

ಶ್ರೀ ಹೆಚ್ ಡಿ ಬಸವರಾಜು – ಅದನ್ನು ಸರಿಮಾಡೋಣ ಅದನ್ನು ಸರಿಮಾಡಬೇಕೆಂದು ಹೇಳುತ್ತಿದ್ದೇನೆ ಅದು ಯಾವಾಗ ಆಯಿತು ಎಂದುದೇ ಪ್ರಶ್ನೆ ಅದು ಬರುವುದು ಬೇಡವೆಂದು ಹೇಳುವುದಿಲ್ಲ ಅದು ಯಾವಾಗ ಬಂತು ಎಂಬ ಚರ್ಚೆಗೆ ಬರುವುದು ಬೇಡವೇ?

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಇದರ ಬಗ್ಗೆ ಸರ್ಕಾರದವರು ಉತ್ತರವನ್ನು ಕೊಡಲಿ ಏಕೆ ಮಧ್ಯೆ ಮಧ್ಯೆ ಬೇರೆಯವರು ಮಾತನಾಡುವುದು ಇವರು ಉತ್ತರವನ್ನು ಕೊಡುವುದಕ್ಕೆ ಶುರು ಮಾಡುತ್ತಾರೆ

ಉಪಾಧ್ಯಕ್ಷರು – ಆಯಿತು ಈಗ ಸರ್ಕಾರದವರು ಉತ್ತರವನ್ನು ಕೊಡುತ್ತಾರೆ ಶ್ರೀರಾಮರೆಡ್ಡಿಯವರೆ ತಾವು ಕುಳಿತುಕೊಳ್ಳಿ

(ಗೊಂದಲ)

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಸರ್ಕಾರದವರು ಅದನ್ನು ಬೇಕಾದರೆ ಸಮರ್ಥನೆ ಮಾಡಲಿ ನಾವು ಬೇಡವೆಂದು ಹೇಳುವುದಿಲ್ಲ ಇದರ ಬಗ್ಗೆ ಸರ್ಕಾರದವರು ಹೇಳಲಿ ಬೇಡವೆಂದು ಹೇಳುವುದಿಲ್ಲ

ಉಪಾಧ್ಯಕ್ಷರು ·– ಅವರು ಉತ್ತರವನ್ನು ಕೊಡುವಾಗ ಇದರ ಬಗ್ಗೆ ಹೇಳುತ್ತಾರೆ

ಡಾ॥ ಕೆ ಅನ್ನದಾನಿ .– ಎಂ ಪಿ ಗಳಿಗೆ State Minister Carde ಕೊಟ್ಟಿದ್ದೀರಿ ಎಂಎಲ್ಎಗಳಿಗೂ ವಿಶೇಷ ಸ್ಥಾನಮಾನ ಕೊಡಿ

(ಗೊಂದಲ)

ಉಪಾಧ್ಯಕ್ಷರು – ಅನ್ನದಾನಿಯವರೆ, ಕುಳಿತುಕೊಳ್ಳಿ ಮಾನ್ಯ ಹೆಗ್ಡೆಯವರೇ ತಾವು ಮಾತನಾಡಿ

(ಗೊಂದಲ)

ಶ್ರೀ ಹೆಚ್ ಡಿ ಬಸವರಾಜು .– ಅವರು ಕೊಟ್ಟಿರುವ ಸವಲತ್ತುಗಳನ್ನು ನಮ್ಮ ಎಂಎಲ್ಎಗಳಿಗೂ ಕೊಡಬೇಕೆಂದು ನಾವು ಪ್ರತಿಪಕ್ಷದಲ್ಲಿರುವವರೆಲ್ಲರೂ ಒಟ್ಟಿಗೆ ಇರೋಣ ಅದರಲ್ಲಿ ಎರಡು ಮಾತಿಲ್ಲ ತಾವು ಎಂ ಪಿ ಗಳಿಗೆ ಕೊಟ್ಟಿರುವಂತಹ ಸವಲತ್ತುಗಳನ್ನು ಎಲ್ಲರಿಗೂ ಸಿಗುವುದರ ಬಗ್ಗೆ ನಾವು ಪ್ರತಿಪಾದನೆಯನ್ನು ಮಾಡೋಣ ಇವತ್ತು ಸರ್ಕಾರವನ್ನು ಕೇಳೋಣ ಅದರಲ್ಲಿ ತಪ್ಪು ಏನಿಲ್ಲ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಮಾನ್ಯ ಬಸವರಾಜುರವರೇ ಅವರು ತಪ್ಪು ಮಾಡಿರುವುದಕ್ಕಾಗಿಯೇ ಇಲ್ಲಿ ಬಂದು ಕುಳಿತಿದ್ದಾರೆ

(ಗೊಂದಲ)

ಶ್ರೀ ಹೆಚ್ ಡಿ ಬಸವರಾಜು – ಶಾಸಕರುಗಳಿಗೂ ಸಹ ಈ ಸವಲತ್ತುಗಳು ಸಿಗಲಿ, ಅದರಿಂದ ಜನಕ್ಕೆ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ

(ಗೊಂದಲ)

ಡಾ॥ ಕೆ ಅನ್ನದಾನಿ – ಮಾನ್ಯ ಉಪಾಧ್ಯಕ್ಷರೆ, ತಾಲ್ಲೂಕಿನಲ್ಲಿ

ಉಪಾಧ್ಯಕ್ಷರು ಅನ್ನದಾನಿಯವರೇ, ಅವರಿಗೆ ಅರ್ಥವಾಗಿದೆ, ತಾವು ಕುಳಿತುಕೊಳ್ಳಿ ಹೆಗ್ಡೆಯವರೇ ತಾವು ಬೇಗ ಮುಗಿಸಿ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ – ನಾನು ನಮಗೆ ಕೊಡಿ ಎಂದು ಕೇಳುತ್ತಿಲ್ಲ ಅವರಿಗೆ ಕೊಟ್ಟಿರುವ ಬಗ್ಗೆ ಮಾತ್ರ ನಾನು ಹೇಳುತ್ತಿದ್ದೇನೆ ಸಾಲ ಮನ್ನಾ ಮಾಡುವ ಕಾರ್ಯಕ್ರಮಕ್ಕೆ ಹಿಂದಿನ ಅವಧಿಯಲ್ಲಿ ಪುನಃ 500 ಕೋಟಿ ರೂಪಾಯಿಗಳನ್ನು ತೆಗೆದು ಇರಿಸಿದ್ದಾರೆ ಅದಕ್ಕೆ ನಾನು ವಿರೋಧವನ್ನು ಮಾಡುತ್ತಿಲ್ಲ ಬ್ರಹ್ಮಾವರ ಸಕ್ಕರೆ ಕಾರ್ಖಾನೆಯು ಮುಚ್ಚಿ ಹಲವಾರು ವರ್ಷಗಳು ಆಯಿತು ಕೇವಲ 15 ಕೋಟಿ ರೂಪಾಯಿಗಳನ್ನು ಕೊಡಬೇಕು, ಸಹಕಾರ ಸಂಸ್ಥೆಗಳಿಗೆ, ಕಾರ್ಮಿಕರಿಗೆ,

ಮತ್ತು ಅಲ್ಲಿಯ ರೈತರಿಗೆ ಅದನ್ನು ಕೊಡದೇ ನೀವು ಖಾಸಗೀಕರಣ ಮಾಡಿ ತೊಂದರೆ ಏನು ಇಲ್ಲ ಅವರಿಗೆ ಹಾಕಿರುವ terms & condition ನಲ್ಲಿ ಅವರು ಕೊಟ್ಟಂತಹ ಹಣವನ್ನು ರೈತರಿಗೆ ಕೊಡುವುದಕ್ಕಾಗುವುದಿಲ್ಲ, ಕಾರ್ಮಿಕರಿಗೆ ಕೊಡುವುದಕ್ಕಾಗುವುದಿಲ್ಲ, ಸಹಕಾರಿ ಸಂಘಗಳಿಗೂ ಕೊಡುವುದಕ್ಕಾಗುತ್ತಿಲ್ಲ ಅವರು ಸಹಕಾರ ಸಂಘದಲ್ಲಿ ಪಡೆದಿರುವಂತಹ ಸಾಲದ ಮೇಲೆ ಬಡ್ಡಿಯೂ ಏರುತ್ತಿದೆ ಅದಕ್ಕಾಗಿ ಸರ್ಕಾರದವರು ಇದರಲ್ಲಿ ಸ್ವಲ್ಪ ಪ್ರೊವಿಸನ್ ಮಾಡಿಕೊಳ್ಳಲಿ ಅದನ್ನು ಮೊದಲು ಕೊಡಬೇಕು ಅದನ್ನು ಕೊಟ್ಟಮೇಲೆ ಯಾರು ಖಾಸಗಿಯವರು ತೆಗೆದುಕೊಂಡಿದ್ದಾರೆ ಅವರಿಗೆ ಕೊಟ್ಟಂತಹ ಹಣವನ್ನು ನೀವು ಅದಕ್ಕೆ ಅಡ್ಜಸ್ಟ್ ಮಾಡಿಕೊಂಡು ಬರಬೇಕೆಂದು ನಾನು ತಮ್ಮಲ್ಲಿ ಕೇಳುತ್ತೇನೆ Disaster Management ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರ ಬಹಳ ವಿಚಿತ್ರ. ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಸುನಾಮಿ ಬಂದಾಗ ನಮ್ಮ ಭಾಗದಲ್ಲಿ ಸ್ವಲ್ಪ ಬದಲಾವಣೆಗಳು ಆಗಿ ಇದರಲ್ಲಿ ನೀರಿನ ಫೋರ್ಸಿನಲ್ಲಿ ಸ್ವಲ್ಪ ಕೊರತೆ ಜಾಸ್ತಿಯಾಯಿತು ಅವರು ತಕ್ಷಣ ಸುನಾಮಿ ಫಂಡ್‌ನಿಂದ ಕೆಲಸವನ್ನು ಮಾಡಿಸಿದರು ಆದರೆ ಇನ್ನು ಹಣವನ್ನು ಕೊಡುವುದು ಬಾಕಿ ಇದೆ ನೀವು ಅದಕ್ಕೆ ಏನು ಪ್ರೊವಿಸನ್ ಮಾಡಿರುವುದಿಲ್ಲ ಮೊನ್ನೆ ದಿವಸ ನಮ್ಮ private nursing college ನವರು Bayloor Education Trust ನವರು ನಿನ್ನೆ ಅದರ ಉದ್ಘಾಟನೆ ಆಯಿತು ಮಾನ್ಯ ವಿ ಎಸ್ ಆಚಾರ್ಯರವರು ಬಂದು ಉದ್ಘಾಟನೆಯನ್ನು ಮಾಡಿದರು Disaster Management ಬಗ್ಗೆ ಒಂದು ಕಾರ್ಯಕ್ರಮವನ್ನು ಮಾಡಿದರು ಅದನ್ನು ಸರ್ಕಾರದವರು ಮಾಡಲಿಲ್ಲ ಅದನ್ನು ಒಂದು ಖಾಸಗಿ ಸಂಸ್ಥೆಯವರು ಮಾಡಿದರು ಆಗ ಅವರು ವರ್ಷಗಳ ಕಾಲ ಲಕ್ಷ ಖರ್ಚು ಮಾಡುವುದಕ್ಕೆ ಸ್ವಲ್ಪ ಗ್ರಾಂಟ್‌ನ್ನು ಕೊಡಬೇಕೆಂದು ಕೇಳಿದರೂ ಇವತ್ತಿಗೂ ಹಣವನ್ನು ಕೊಡಲಿಲ್ಲ ನಾವು ಹಣವನ್ನು ಮರಕ್ಕೆ, ಮಂದಿರಕ್ಕೆ ಕೊಡುತ್ತೇವೆ ಆದರೆ ನಮ್ಮ ಊರಿಗೆ ಏನು ತೊಂದರೆಗಳು ಆಗುತ್ತದೆ flood damage ಆಗುತ್ತದೆ, ಸಮುದ್ರ ಕೊರೆತ ಆಗುತ್ತದೆ, ನದಿ ಕೊರೆತ ಬರುತ್ತದೆ ಇವೆಲ್ಲಕ್ಕೂ ಸುನಾಮಿ ಬಂದಾಗ ಏನು ಮಾಡಬೇಕು, ತರಬೇತಿಯನ್ನು ಕೊಡುವುದಕ್ಕೆ ಹಣವನ್ನು ಕೊಡುವುದರ ಬಗ್ಗೆ ಪ್ರತಿಯೊಂದಕ್ಕೂ ಅಧಿಕಾರಿಗಳು objection ನ್ನು ಹಾಕುತ್ತಾರೆ

ಇದಕ್ಕಾಗಿ ಹಣವನ್ನು ಬಿಡುಗಡೆ ಮಾಡಬೇಕು ಅದನ್ನೆ Disaster Management ಕಾರ್ಯಕ್ರಮವನ್ನು ಪ್ರತಿ ಜಿಲ್ಲೆಯಲ್ಲಿ ಹಾಕಿಕೊಳ್ಳಬೇಕು ತರಬೇತಿಯನ್ನು revenue department ನ ಎಲ್ಲಾ ಇಂಜಿನಿಯರಿಂಗ್ ಡಿವಿಜನ್‌ನವರಿಗೆ ಕೊಡಬೇಕು ಪ್ಯಾರಾ-ಮೆಡಿಕಲ್‌ನವರಿಗೆ ತರಬೇತಿಯನ್ನು ಕೊಡುವಂತಹ ವ್ಯವಸ್ಥೆ ಸರ್ಕಾರದಿಂದ ಆಗಬೇಕೆಂದು ಹೇಳುತ್ತೇನೆ ನಾನು ಮೊನ್ನೆ ದಿನ ಸಮುದ್ರದ ಕೊರೆತವನ್ನು ನೋಡಿದೆ ಒಬ್ಬ ಸ್ವಾಮೀಜಿಯವರು ಕುಳಿತು ಅವರಿಗೆ ಜ್ಞಾನೋದಯವಾದ ಜಾಗದ ಅಭಿವೃದ್ಧಿಗೆ ಹಣವನ್ನು ಕೊಟ್ಟಿದ್ದೀರಿ ನಮಗೂ ಕೂಡ ಸಮುದ್ರ ತಪ್ಪಲಿನಲ್ಲಿ ಜ್ಞಾನೋದಯವಾಗಿರುವುದು, ಆ ಜಾಗವು ಕೊರೆದುಕೊಂಡು ಹೋಗುತ್ತಿದೆ ಆ ಕೊರೆತವನ್ನು ತಡೆಯುವುದಕ್ಕಾದರೂ ಹಣವನ್ನು ಕೊಡಿ ಎಂದು ನಾನು ಕೇಳುತ್ತಿದ್ದೇನೆ ಯಾರಿಗೋ ಜ್ಞಾನೋದಯವಾಯಿತು, ಯಾರದೋ ಮರ ಮತ್ತು ಮಂದಿರವನ್ನು ಅಭಿವೃದ್ಧಿ ಮಾಡಬೇಕು ಪ್ರಾಯಶಃ ಇದಕ್ಕೆ Public Interset Litigation ಹಾಕಿದರೆ ಇದರಲ್ಲಿ ಎಲ್ಲವನ್ನು cancel ಮಾಡುವುದಕ್ಕೆ ಆಗುತ್ತದೆ ಎಂದು ನನ್ನ ಅಭಿಪ್ರಾಯವಾಗಿದೆ ಇದೆಲ್ಲವನ್ನು ಬಜೆಟ್‌ನಲ್ಲಿ ಹೇಳುವುದಕ್ಕೆ ಆಗುತ್ತದೆಯೇ, ಬಜೆಟ್‌ನಲ್ಲಿ ಇದರ ಬಗ್ಗೆ ಮಾತನಾಡೋಣ ಇದನ್ನು ಮಾಡುವುದು ಒಂದು ದೊಡ್ಡ ತಪ್ಪು ಇಂತಹದಕ್ಕೆ ಪೂರಕ ಬಜೆಟ್‌ನಲ್ಲಿ ಜಾಸ್ತಿ ತರುವಂತಹದ್ದು ಕಾಲೇಜುಗಳನ್ನು ಹಾಗೂ ಹೈಸ್ಕೂಲ್‌ಗಳನ್ನು ಕೊಡುತ್ತೇವೆಂದು ಹೇಳುತ್ತಾರೆ ಅಲ್ಲಿ ಟೀಚರ್ಸ್‌ಗಳನ್ನು ಕೊಡಲಿಲ್ಲ ಅಲ್ಲಿಗೆ ಪೇಪರ್ ಮತ್ತು ಸ್ಟೇಶನರಿಯನ್ನು ಸಹ ಕೊಡಲಿಲ್ಲ ಪಿ ಯು ಸಿ ಮತ್ತು ಹೈಸ್ಕೂಲ್ ಸಿಕ್ಕಿದ್ದಲ್ಲಿ ನಾನೇ ಅಲ್ಲಿಗೆ ಪೆನ್ಸಿಲ್ ಮತ್ತು ಪೇಪರ್‌ನ್ನು ಪ್ರೊವೈಡ್ ಮಾಡಬೇಕಾಯಿತು ಪೆನ್ಸಿಲ್, ಪೇಪರ್ ಮತ್ತು ಟೀಚರ್ಸ್ ಸಂಬಳ, ಇಲ್ಲಿ ಎಷ್ಟು ಇದೆ honorarium ಅನ್ನು ಸರ್ಕಾರದಿಂದ ಕೊಡುತ್ತೇವೆಂದು ಹೇಳುತ್ತೀರಿ ಇದನ್ನು ಕೊಡುವ ಬಗ್ಗೆ ಸರ್ಕಾರದಿಂದ ಹಣ ಬರಲಿಲ್ಲ ನಾನು ಸ್ವತಃ ಕೊಟ್ಟಿದ್ದೇನೆ ಆ ಬಗ್ಗೆ ನೆನಪು ಇದೆ ಎರಡು pre - University College ಗಳಿಗೆ ಕೊಟ್ಟಿದ್ದಾರೆ ಅದನ್ನು ಏತಕ್ಕಾಗಿ ಕೊಟ್ಟಿದ್ದಾರೆ ಎಲ್ಲೆಲ್ಲಿ ಕೊಟ್ಟಿದ್ದಾರೆ ಎಂಬುದರ ಬಗ್ಗೆ ಮಾಹಿತಿಯನ್ನು ಕೊಡಬೇಕು ಈ ಒಂದು PWD ರಸ್ತೆಯ ಬಗ್ಗೆ ಹೇಳುವುದಾದರೆ, ಅದನ್ನು ರೂರಲ್ ರೋಡ್‌ಗೆ ಕೊಟ್ಟಿದ್ದಾರೆ ಅದು ಸಾಧ್ಯ ಇದೆಯಾ? ನೀವು ಅದನ್ನು ಹೇಳಿದ್ದೀರಿ, ನೋಡಲಿಲ್ಲವೆಂದು ಕಾಣಿಸುತ್ತದೆ

For the improvement of rural roads and other works is Shimoga district, Public works Department ನಿಂದ ಕೊಟ್ಟಿದ್ದೀರಿ ಅಲ್ಲಿ ZP ಯವರು ಕೆಲಸವನ್ನು ಮಾಡುವುದಿಲ್ಲವೇ? Public Works Department ನಿಂದ ಕೊಡುವುದಕ್ಕಾಗುತ್ತದೆಯೇ? ನಾವು 12 th Finance ಅಥವಾ CMGSY ನಲ್ಲಿ ಕೇಳಿದರೆ link document ನಲ್ಲಿದೆ ಆದರೆ ಪಿಡಬ್ಲ್ಯೂಡಿಯಿಂದ ರುರಲ್‌ಗೆ ಕೊಡುವ ಬಗ್ಗೆ ಲಿಂಕ್ ಡೊಕ್ಯೂಮೆಂಟ್ ನಲ್ಲಿ ಇಲ್ಲ ನಾವು KRDCL ನಿಂದ Bridge ಗೆ ಕೇಳಿದರೆ ಆ ರೋಡ್ ಅಪ್‌ಗ್ರೇಡ್ ಆಗಿಲ್ಲ ಎಂದು ಹೇಳುತ್ತಾರೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಮಾನ್ಯ ಉದಾಸಿಯವರು ಎಲ್ಲೋ ಹೋಗಿದ್ದಾರೆ ಇದರ ಬಗ್ಗೆ ಅವರು ಹೇಳಬೇಕು CMGSY 12 th Finance ಕೊಡಿ ಎಂದು ಹೇಳಿದರೆ link document ನಲ್ಲಿ ಸೇರಿಸಿಬಿಟ್ಟಿದೆ ಅದನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತೀರಿ

ರೂರಲ್ ರೋಡ್ಸ್‌ಗೆ PWD ಗೆ ನೀವು ಹಣ ಕೊಡುತ್ತಿದ್ದೀರಲ್ಲಾ ಇದಕ್ಕೆ ಲಿಂಕ್ ಡ್ಯಾಕುಮೆಂಟ್ಸ್ ಬರುವುದಿಲ್ಲವೇ?

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ – roads, National Highways, ಮತ್ತು State Highways, mine lorry ಬಗ್ಗೆ ನಾನು ಒಂದು ಪ್ರಶ್ನೆಯನ್ನು ಕೇಳಿದ್ದೆ ನನಗೆ ಉತ್ತರ ಕೊಟ್ಟಿದ್ದು mines ನಿಂದ ಲಾಭದಾಯಕವಾಗಿ ಬಂದದ್ದು 84 00 ಕೋಟಿ ರೂಪಾಯಿಗಳು ಎಂದು ಉತ್ತರ ಕೊಟ್ಟಿದ್ದಾರೆ, ಹಾಗಿದ್ದರೆ ಇದನ್ನು ಏಕೆ export ಮಾಡಬೇಕಾಗಿತ್ತು ಪರ್ಮಿಷನ್ ಏಕೆ ಕೊಟ್ಟರೆಂದು ನಾನು ಕೇಳುವಂಥಾದ್ದು ಈಗ 84 00 ಕೋಟಿ ರೂಪಾಯಿಗಳು ಸರ್ಕಾರಕ್ಕೆ ಬರುವುದು, 1700 00 ಕೋಟಿ ರೂಪಾಯಿಗಳು ನಷ್ಟ ಆಗುವುದಾದರೆ ಇದಕ್ಕೆ ಏಕೆ ಪರ್ಮಿಷನ್ ಕೊಟ್ಟಿರಿ? ಅನುಮಾನ ಏನು ಗೊತ್ತೇ? ಎಲ್ಲಾ ಇಲ್ಲಿದ್ದವರೇ ಹೆಚ್ಚಿನವರು ಲೈಸೆನ್ಸ್ ತೆಗೆದುಕೊಂಡಿದ್ದಾರೆಂದು ಜನ ಮಾತನಾಡುತ್ತಿದ್ದಾರೆ ಅದಕ್ಕೋಸ್ಕರ ಇದರಲ್ಲಿ ಕೆಲವರೇ ಪಟ್ಟಭದ್ರಾಹಿತಾಸಕ್ತಿಗಳಿಗೆ ಲಾಭ ಮಾಡಿಕೊಡುವುದಾದರೆ ಇದಕ್ಕೆ ಪರ್ಮಿಷನ್ ಅನ್ನು ಕೊಡಬೇಡಿ ಕೇಂದ್ರಕ್ಕೆ ಪತ್ರ ಬರೆದು 84 00 ಲಕ್ಷ ರೂಪಾಯಿಗಳನ್ನಾದರೂ ತರಿಸಿಕೊಳ್ಳಿ ಆರೋಗ್ಯ ಇಲಾಖೆಯಿಂದ ಮೆಡಿಸಿನ್ ಸಪ್ಲೈ ಮಾಡಲಿಕ್ಕೆ ಪ್ರೊಫೆಷನಲ್ ಹಣ ಮಾಡಿಕೊಳ್ಳುತ್ತಾ

ಹೋಗಿದ್ದಾರೆ ಸದನದಲ್ಲಿ ಅಂದು ಹುಚ್ಚುನಾಯಿ ಕಡಿತದ ಬಗ್ಗೆ ಬಹಳ ಚರ್ಚೆಯಾಯಿತು, ನಮ್ಮಲ್ಲಿ ಇವತ್ತಿಗೂ ಸಹ vaccines ಇಲ್ಲ ನಾನು ಸ್ವತಃ ಆಸ್ಪತ್ರೆಗಳಿಗೆ ತೆಗೆಸಿಕೊಟ್ಟು ಬಂದಿದ್ದೇನೆ ಪ್ರೈಮರಿ ಹೆಲ್ತ್ ಸೆಂಟರ್‌ಗಳಲ್ಲಿ ಔಷಧಿಗಳಿಲ್ಲ ಇವತ್ತಿಗೂ ಆ ಸಮಸ್ಯೆ ಇದೆ ಮೊನ್ನೆ ದಿವಸ ನಾನೇ ಔಷಧಿಯನ್ನು ಅಂಗಡಿಯಿಂದ ತೆಗೆಸಿಕೊಟ್ಟು ಬಂದಿದ್ದೇನೆ ಅದಕ್ಕೇನಾದರೂ provision ಮಾಡಲಿಕ್ಕಾಗುವುದಿಲ್ಲವೇ ಇಲ್ಲಿ ಕೇಳಿದರೆ ರಾಜ್ಯದ ಮಂತ್ರಿಗಳು ಸಾಕಷ್ಟು ಔಷಧಿಗಳು, vaccines ಅನ್ನು Primary Health Centres ನಲ್ಲಿ ಇಟ್ಟಿದ್ದೇವೆಂದು ಉತ್ತರವನ್ನು ಕೊಡುತ್ತಾರೆ, ಆದರೆ ಇವತ್ತಿಗೂ ಅಲ್ಲಿನ Primary Health Centres ನಲ್ಲಿ, Paracetamol, Rabifer ಇಲ್ಲ ಇದು ಯಾವ ರೀತಿಯ ವ್ಯವಸ್ಥೆ? ದಯವಿಟ್ಟು ಅದರ ಬಗ್ಗೆ ಮಾಹಿತಿಯನ್ನು ತರಿಸಿಕೊಂಡು ಹೆಚ್ಚು ಹಣವನ್ನು ಒದಗಿಸಬೇಕೆಂದು ಹೇಳುತ್ತಾ ಈ ಒಂದು ಪೂರಕ ಬಜೆಟ್ 6,000 ಕೋಟಿ ರೂಪಾಯಿಗಳನ್ನೇನು ಮಂಡಿಸಿದ್ದಾರೆ ಅವರು ಬಜೆಟ್‌ನ total 17 58% ಎಂದು ಹೇಳಿದ್ದರು, It is much more than that Calculate ಮಾಡಿ ಸಿದ್ಧರಾಮಯ್ಯನವರು ಇದರ ಬಗ್ಗೆ ಮಾಹಿತಿಯನ್ನು ಕೊಡಬೇಕೆಂದು ಹೇಳಿ, ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಹೆಚ್ ಡಿ ಬಸವರಾಜು – ಸನ್ಮಾನ್ಯ ಉಪಾಧ್ಯಕ್ಷರೇ, ಎಲ್ಲಾ ಆ ಕಡೆ ಮಾತನಾಡುತ್ತಿದ್ದಾರೆ, ನಾನು ನಿಮ್ಮಷ್ಟು ಮಾತನಾಡಲಿಕ್ಕೆ ಆಗುವುದಿಲ್ಲ, ಒಂದೆರಡು ನಿಮಿಷ ನಾನು ಮಾತನಾಡಲಿಕ್ಕೆ ಅವಕಾಶ ಕೊಡಿ ಸಿದ್ಧರಾಮಯ್ಯನವರೇ ತಾವು ಅರ್ಧ ಮಂತ್ರಿಗಳಾಗಿದ್ದವರು, ಎರಡೇ ನಿಮಿಷ ನಾನು ಮಾತನಾಡುತ್ತೇನೆ ತಾವು ಹಿರಿಯರಿದ್ದೀರಿ, ನಾವು ಬಹಳ ಸಮಯದಿಂದ ಕಾಯುತ್ತಿದ್ದೇವೆ ನಾನು ಜಾಸ್ತಿ ಮಾತನಾಡುವುದಿಲ್ಲ, ಎರಡೇ ನಿಮಿಷ, ನಾವು juniors, ನೀವು ಇದ್ದಾಗ ನಿಮ್ಮ ಮುಂದೆ ಮಾತನಾಡಿದರೆ ನಮಗೆ ಇನ್ನೂ ಸಂತೋಷವಾಗುತ್ತದೆ ಹಾಗಾಗಿ ತಾವು ನನಗೆ ಮಾತನಾಡಲಿಕ್ಕೆ ಅವಕಾಶ ಕೊಡಬೇಕು ತಮ್ಮ ಮುಂದೆ ಮಾತನಾಡಬೇಕೆಂಬುದು ನನಗೊಂದು ಆಸೆ ಈಗ ನೀವೆಲ್ಲಾ ಹೇಳಿದ್ದನ್ನು ನಾವು ಕೇಳಲಿಲ್ಲವೇ?

ಉಪಾಧ್ಯಕ್ಷರು – ಬಸವರಾಜ್, ಸಿದ್ಧರಾಮಯ್ಯನವರು ಮಾತನಾಡಿ ಮುಗಿಸುತ್ತಾರೆ, ನಂತರ ಅವರು ಮಾತನಾಡಿದ ಕೂಡಲೇ ನೀವು ಮಾತನಾಡಿ

ಶ್ರೀ ಸಿದ್ಧರಾಮಯ್ಯ (ಚಾಮುಂಡೇಶ್ವರಿ) :– ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರು 2ನೇ ಕಂತಿನ ಪೂರಕ ಅಂದಾಜುಗಳನ್ನು ಸದನದಲ್ಲಿ ಇಟ್ಟು ಸದನದ ಒಪ್ಪಿಗೆಯನ್ನು ಕೇಳಿದ್ದಾರೆ ಸಾಮಾನ್ಯವಾಗಿ ಪೂರಕ ಅಂದಾಜುಗಳನ್ನು ಯಾರೂ ವಿರೋಧ ಮಾಡುವುದಿಲ್ಲ ಆದರೆ ಅದು ಇತಿಮಿತಿಯೊಳಗೆ ಇರಬೇಕಾಗುತ್ತದೆ ಅದಕ್ಕೆ Constitution ನ Article 205, clause(I) ರಲ್ಲಿ provision ಮಾಡಿಕೊಟ್ಟಿದ್ದಾರೆ ನಾವು ಒಂದು ಆರ್ಥಿಕ ವರ್ಷದಲ್ಲಿ ಮಂಡಿಸತಕ್ಕಂಥ ಆಯವ್ಯಯದಲ್ಲಿ ನಾವು ಹೇಳಿರತಕ್ಕಂಥ ಕಾರ್ಯಕ್ರಮಗಳಿಗೆ ಹಣ ಸಾಲದೇ ಹೋದರೆ, ಹೊಸ ಸೇವೆಗಳು ಬಂದರೆ ಮತ್ತೆ unforeseen expenditure ಬಂದರೆ, ನಾವು ಲೆಕ್ಕ ಹಾಕಿಕೊಳ್ಳಲಾಗದೇ ಇರುವಂಥದ್ದು, emergency ಬರುವಂಥದ್ದು ನಾವು ಬಜೆಟ್ ತಯಾರು ಮಾಡುವಾಗ estimated receipts and estimated expenditure ಮಾಡುವಾಗ, ನಮ್ಮ ಊಹೆಗೆ ನಿಲುಕದೇ ಇರುವಂತಹವು ಅಥವಾ ನಮ್ಮ ಜ್ಞಾನಕ್ಕೆ ಬರದೇ ಇರತಕ್ಕಂಥ ಖರ್ಚುಗಳು ಬಂದಾಗ ಅವೆಲ್ಲವನ್ನೂ ಈ ಪೂರಕ ಅಂದಾಜುಗಳಲ್ಲಿ ಸೇರಿಸಿ ಮತ್ತೆ ಸದನದ ಒಪ್ಪಿಗೆ ಪಡೆದುಕೊಳ್ಳಬೇಕೆಂದು ಕಾನೂನು ಹೇಳುತ್ತದೆ, ಆದರೆ ಎಷ್ಟು ಬೇಕಾದರೂ ಮಂಡಿಸಬಹುದೆಂದು ಹೇಳಲಿಕ್ಕೆ ಬರುವುದಿಲ್ಲ ಬಜೆಟ್ ಮಂಡಿಸುವಾಗಲೇ ನಾವು ಇವನ್ನೆಲ್ಲಾ ಕೂಲಂಕಷವಾಗಿ ಚರ್ಚೆ ಮಾಡಿ, ನಿಜ ಇವುಗಳನ್ನು estimated receipts and estimated expenditure ಎಂದೇ ಕರೆಯುವುದು ಯಾವಾಗಲೂ ಒಂದು ಆರ್ಥಿಕ ವರ್ಷದಲ್ಲಿ ಸರ್ಕಾರ ಒಂದು ಬಜೆಟ್ ಅನ್ನು ಮಂಡಿಸತಕ್ಕಂಥದ್ದು, it is an annual financial statement ಎಷ್ಟು ನಮಗೆ ಆದಾಯ ಬರುತ್ತದೆ, ಎಷ್ಟು ನಾವು ಖರ್ಚು ಮಾಡುತ್ತೇವೆನ್ನುವುದನ್ನೆಲ್ಲಾ ಲೆಕ್ಕ ಹಾಕಿಕೊಂಡು ಅದನ್ನು ಬಜೆಟ್‌ನಲ್ಲಿ ನಾವೆಲ್ಲಾ ಹೇಳಿರುತ್ತೇವೆ ಆದರೆ ಇವರು ಮಂಡಿಸಿರತಕ್ಕಂಥಾದ್ದು ಒಂದು ಮಿನಿ ಬಜೆಟ್ ಆಗಿಬಿಟ್ಟಿದೆ ಮೊದಲನೇ ಕಂತಿನಲ್ಲಿ 1,408/– ಕೋಟಿ ರೂಪಾಯಿಗಳಿಗೆ ಪೂರಕ ಅಂದಾಜಿನಲ್ಲಿ ಒಪ್ಪಿಗೆ

ಪಡೆದುಕೊಂಡಿದ್ದಾರೆ ಈಗ ಎರಡನೇ ಕಂತಿನಲ್ಲಿ 5,484/- ಕೋಟಿ ರೂಪಾಯಿಗಳೆಂದು ಇದೆ, ಒಟ್ಟು ಸುಮಾರು ಹೆಚ್ಚು ಕಡಿಮೆ 7,400/- ಕೋಟಿ ರೂಪಾಯಿಗಳಷ್ಟಾಗುತ್ತದೆ ಇವರು expected receipts 41,136/- ಕೋಟಿ ರೂಪಾಯಿಗಳು ಈ ವರ್ಷ 2006-07ಕ್ಕೆ ಬಜೆಟ್‌ನಲ್ಲಿ 41,136/- ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡುತ್ತೇವೆಂದು ಅವರು ಹೇಳಿಕೊಂಡಿದ್ದರು ಈಗ ಅದು 44,000/- ಕೋಟಿ ರೂಪಾಯಿಗಳಿಗಿಂತ ಹೆಚ್ಚಾಗುತ್ತದೆಂದು ಬಜೆಟ್‌ನ revised estimates ನಲ್ಲಿ ಹೇಳಿಕೊಂಡಿದ್ದೀರಿ ಕಳೆದ ವರ್ಷ 2005-06 ರಲ್ಲಿ ಏನೂ revised estimates expenditure ಏನಾಗಿತ್ತು ಅದಕ್ಕಿಂತ ಸುಮಾರು 7,000/- ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣ ನಮ್ಮ ರಾಜ್ಯಕ್ಕೆ ಈ ವರ್ಷ ಬಂದಿದೆ ಇದಕ್ಕೆ ಯಡಿಯೂರಪ್ಪನವರು ಕಾರಣರೆಂದು ಅವರು ಬೆನ್ನು ತಟ್ಟಿಕೊಳ್ಳುವ ಅಗತ್ಯವೇನಿಲ್ಲ ಏಕೆಂದರೆ ನೀವು ಮಾತೆತ್ತಿದ್ದರೆ, ನಾನು ಅದಕ್ಕೆ ಖರ್ಚು ಮಾಡಿದೆ, ಇದಕ್ಕೆ, ಅಲ್ಲಿಗೆ, ಇಲ್ಲಿಗೆ ಖರ್ಚು ಮಾಡಿದೆಯೆಂದು ಹೇಳುತ್ತೀರಿ ಕರ್ನಾಟಕ ರಾಜ್ಯದಲ್ಲಿ ಸುಮಾರು 1996-97 ರಿಂದ 2003-04 ರವರೆಗೆ deficit budget, revenue deficit ಇತ್ತು ನಾವು 2002ರಲ್ಲಿ Fiscal Responsibility Act ಅನ್ನು ಪಾಸ್ ಮಾಡಿಕೊಂಡು ಕರ್ನಾಟಕದಲ್ಲೂ ಕೂಡ ಆರ್ಥಿಕ ಶಿಸ್ತನ್ನು ತರಲಿಕ್ಕೆ ಪ್ರಯತ್ನ ಮಾಡಿದ ಮೇಲೆ Fiscal correction and fiscal consolidation ಮಾಡಲಿಕ್ಕೆ ಪ್ರಾರಂಭ ಮಾಡಿದೆ ಮೇಲೆ, ಆ Fiscal correction and fiscal consolidation ನಲ್ಲಿ 2005-06ರ ಮಾರ್ಚ್‌ನೊಳಗೆ ಏನೇನು ನಾವು achieve ಮಾಡಬೇಕೆಂದು ಹೇಳಿದ್ದೆವೋ ಅದನ್ನು ಧರಂಸಿಂಗ್‌ರವರು ಮುಖ್ಯಮಂತ್ರಿಯಾಗಿರುವಾಗ, ನಾನು ಹಣಕಾಸಿನ ಮಂತ್ರಿಯಾಗಿರುವಾಗ, ಆ ಸಮ್ಮಿಶ್ರ ಸರ್ಕಾರದಲ್ಲಿ ಗುರಿಗಳನ್ನು ಒಂದು ವರ್ಷ ಮುಂಚಿತವಾಗಿ reach ಆಗಿಬಿಟ್ಟೆವು 2004-06ರ ಮಾರ್ಚ್‌ನೊಳಗೆ revenue deficit ಏನಿತ್ತು ಆ ರೆವಿನ್ಯೂ ಖೋತಾವನ್ನು ತೆಗೆದು ಹಾಕಿ ರೆವಿನ್ಯೂ ಸರ್‌ಪ್ಲಸ್ ಅನ್ನು ತಂದೆವು For the first time in the year 2004-05 ನನಗೆ ಜ್ಞಾಪಕವಿರುವ ಮಟ್ಟಿಗೆ ಸುಮಾರು 854/- ಕೋಟಿ ರೂಪಾಯಿಗಳನ್ನು ಖೋತಾದಿಂದ ಸರ್‌ಪ್ಲಸ್‌ಗೆ ತಂದೆವು 4% ಗಿಂತ ಹೆಚ್ಚು fiscal deficit ಅನ್ನು 2 85% ಕ್ಕೆ ತಂದೆವು ಹಾಗಾಗಿ ಕರ್ನಾಟಕದಲ್ಲಿ

ಆರ್ಥಿಕ ಸುಧಾರಣೆಯನ್ನು ತಂದ ಮೇಲೆ ಆರ್ಥಿಕ ಶಿಸ್ತನ್ನು ತೆಗೆದುಕೊಂಡು ಬಂದು ಕರ್ನಾಟಕದ ಆರ್ಥಿಕ ಪರಿಸ್ಥಿತಿಯನ್ನು ಸುಸ್ಥಿತಿಗೆ ತಂದಂಥ credit ಯಾರಿಗೆ ಹೋಗಬೇಕೆಂದರೆ, it is not to Mr Yediyurappa, ನಮಗೆ ಸೇರಬೇಕು, ನಾವು ಬಂದ ಮೇಲೆ revenue surplus ಆಯಿತು revenue deficit ಕಡಿಮೆ ಆಯಿತು ಸಾಲದ ಭಾರ ಕಡಿಮೆಯಾಯಿತು, net savings ಕಡಿಮೆ ಆಯಿತು ತೆರಿಗೆ ಪ್ರಮಾಣವು ಜಾಸ್ತಿಯಾಯಿತು ಮೂರನೆಯದು 20%, 2004–05 ರಲ್ಲಿ 26% ರಿಂದ 27%, 2005–06ರಲ್ಲಿ again 25% ರಿಂದ 26% ಈ ವರ್ಷ 2006–07 ರಲ್ಲಿ ಸುಮಾರು 22% revenue growth ಆಗಿದೆ ಸುಮಾರು 22% ರೆವಿನ್ಯೂ ಗ್ರೋತ್ ಆಗಿದೆ ಮತ್ತು ಕೇಂದ್ರ ಸರ್ಕಾರದಿಂದ 2005–06ಕ್ಕೆ ಹೋಲಿಕೆ ಮಾಡಿದರೆ 3300 ಕೋಟಿ ರೂಪಾಯಿಗಳಿಗೂ ಹೆಚ್ಚು ನಮ್ಮ ತೆರಿಗೆ ಪಾಲು ಮತ್ತು Grant-in-Aid ಬಂದಿದೆ ಕೇಂದ್ರ ಸರ್ಕಾರದಿಂದ ಬಂದ ತೆರಿಗೆ ಪಾಲು, 2005–06 ಕ್ಕೆ ಕಂಪೇರ್ ಮಾಡಿದರೆ, 2006–07 ರಲ್ಲಿ ಸುಮಾರು 2 ಸಾವಿರ ಕೋಟಿಗಿಂತ ಹೆಚ್ಚು ಸೆಂಟ್ರಲ್ ಗ್ರಾಂಟ್ ಬಂದಿದೆ ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಮ್‌ನ ಪ್ಲಾನ್‌ನಲ್ಲಿ ಬರತಕ್ಕಂತಹ ಹಣ 2 ಸಾವಿರ ಕೋಟಿಗಿಂತ ಹೆಚ್ಚು ಹಣ ಬಂದಿದೆ ನಮ್ಮ ತೆರಿಗೆ ಪಾಲಿನಲ್ಲಿ 1 ಸಾವಿರ ಕೋಟಿಗಿಂತ ಹೆಚ್ಚು ಹಣ ಬಂದಿದೆ ಅಂದರೆ 3300 ಕೋಟಿ ರೂಪಾಯಿಗಳಿಗೂ ಹೆಚ್ಚು ಹಣ ಕೇಂದ್ರ ಸರ್ಕಾರದಿಂದ ಬಂದಿದೆ ಆದ್ದರಿಂದ ಈಗ ಯಡಿಯೂರಪ್ಪನವರು ಮೀಸೆ ತಿರುಗಿಸಲೇಬೇಕು ಅವರ ಶ್ರಮ ಏನೂ ಇಲ್ಲದೇ ಹೋದರೂ ಕೂಡ

ಶ್ರೀ ಎಂ ಶಿವಣ್ಣ – ಆಗ ತಾವು ಯಾವ ಪಾರ್ಟಿಯಲ್ಲಿದ್ದಿರಿ?

(ಗೊಂದಲ)

ಶ್ರೀ ಸಿದ್ಧರಾಮಯ್ಯ – ನೀವು ಆಗ ಬಂದಿದ್ದರಲ್ಲವೇ? ನೀವು ನನ್ನ ವಿರುದ್ಧ ಕೆಲಸ ಮಾಡುವುದಕ್ಕೆ ಬಂದಿದ್ದೀರಿ ತಾವು ಆಗ ಎಲ್ಲಿದ್ದಿರಿ ಅಂತ ಗೊತ್ತಾಯಿತಲ್ಲವೇ? ಹಣಕಾಸಿನ ಸಚಿವರು ಇದ್ದಾರೆ ಅವರು ಉತ್ತರ ಕೊಡುತ್ತಾರೆ ತಾವು ಕುಳಿತುಕೊಳ್ಳಿ ತಾವು ಮಧ್ಯದಲ್ಲಿ ಏತಕ್ಕೆ ಮಾತನಾಡುತ್ತೀರಿ?

ಶ್ರೀ ಮಹಿಮಾ ಜೆ ಪಟೇಲ್ – ತಾವು ಮಾತನಾಡುವಾಗ ನಿಮಗೆ ಸೇರಬೇಕಾದ್ದು ಅಂತ ಹೇಳಿದಿರಿ ಅದರ ಅರ್ಥವೇನು ಅಂತ ಅವರು ಕೇಳಿದರು

ಶ್ರೀ ಸಿದ್ಧರಾಮಯ್ಯ .– ಅದನ್ನು ಆಮೇಲೆ ಹೇಳುತ್ತೇನೆ

ಶ್ರೀ ಮಹಿಮಾ ಜೆ ಪಟೇಲ್ – ಆಗ ನಮಗೆ ಅಂದರೆ ಕಾಂಗ್ರೆಸ್ ಜನತಾದಳ ಎರಡೂ ಒಟ್ಟಿಗೆ ಇತ್ತು ಅದಕ್ಕೆ ಕೇಳಿದೆ

ಶ್ರೀ ಸಿದ್ಧರಾಮಯ್ಯ – ಆಗ ನಾನು ಸಹ ನಿಮ್ಮ ಜೊತೆಯಲ್ಲಿಯೇ ಇದ್ದೆ ಸಮ್ಮಿಶ್ರ ಸರ್ಕಾರ ಅಂದರೆ ಧರ್ಮಸಿಂಗ್ ಸರ್ಕಾರ ಎನ್ನುವುದು ಗೊತ್ತಿಲ್ಲವೇ? ಕಾಂಗ್ರೆಸ್ ಸರ್ಕಾರ ಅಂದರೆ ಜಗತ್ತಿಗೆ ಗೊತ್ತಿರುವ ವಿಷಯ ಪದೇ ಪದೇ ಬಿಡಿಸಿ ಹೇಳಬೇಕೆ? ತಾವು ಸ್ವಲ್ಪ ದಿನ ಧ್ಯಾನ ಮಾಡುವುದಕ್ಕೆ ಹೋಗಿದ್ದರಲ್ಲವೇ?

ಶ್ರೀ ಮಹಿಮಾ ಜೆ ಪಟೇಲ್ ·– ಧ್ಯಾನ ಮಾಡುವುದಕ್ಕೆ ನಾನು ಕೂಡಲ ಸಂಗಮಕ್ಕೆ ಹೋಗಿದ್ದೆ ನೀವು ಧ್ಯಾನ ಮಾಡುವುದಕ್ಕೆ ಕಾಂಗ್ರೆಸ್‌ಗೆ ಹೋಗಿದ್ದೀರಿ

ಶ್ರೀ ಸಿದ್ಧರಾಮಯ್ಯ – ಈಗ ಫಿಲಾಸಫಿ ಬಗ್ಗೆ ಮಾತನಾಡುವುದು, ಐಡಿಯಾಲಜಿ ಬಗ್ಗೆ ಮಾತನಾಡುವುದು, ಆ ಬಗ್ಗೆ ಚರ್ಚೆ ಬೇಡ ಅದು ಈಗ ಅನಗತ್ಯ ನಾನು ಹಣಕಾಸಿನ ಸಚಿವನಾಗಿದ್ದರಿಂದ ನಾನು ಸಪ್ಲಿಮೆಂಟರಿ ಏತಕ್ಕೆ ಮಂಡಿಸಿದಿರಿ, ಅದನ್ನು ವಿರೋಧ ಮಾಡಬೇಕೆನ್ನುವುದಕ್ಕೆ ನಾನು ಮಾತನಾಡುವುದಿಲ್ಲ ಮಾನ್ಯ ಅಧ್ಯಕ್ಷರೇ, ಮುಂದಿನ ವರ್ಷದ ಸಾಲ, ಈಗ ಇವರು 25 ಸಾವಿರ ರೂಪಾಯಿ ಸಾಲ ಮನ್ನಾ ಮಾಡುತ್ತೇವೆ, ಅದಕ್ಕೆ ಹಣ ಈಗಲೇ ಇಟ್ಟುಕೊಂಡಿದ್ದೇವೆಂದು ಹೇಳಿದರೆ ಹೇಗೆ? ಆ 500 ಕೋಟಿ ರೂಪಾಯಿಗಳನ್ನು ನೀವು ಈಗಲೇ ಏತಕ್ಕೆ ಇಟ್ಟುಕೊಳ್ಳಬೇಕಾಗಿತ್ತು ಹಿಂದಿನ ಸಾಲದ ಹಣ ಕೊಟ್ಟಿಲ್ಲ ಎಲ್ಲಾ ಡಿ ಸಿ ಸಿ ಬ್ಯಾಂಕ್‌ಗಳಿಗೆ ಹಣ ಬಾಕಿ ಇದೆ 2004–05 ನೇ ಇಸವಿಯಲ್ಲಿ 49 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ provide ಮಾಡಿ ಯಾರು ಪಿ ಎಲ್ ಡಿ ಬ್ಯಾಂಕ್ ನಲ್ಲಿ ಸಾಲ ತೆಗೆದುಕೊಂಡಿದ್ದಾರೆ ಯಾರು ಅಸಲಿಗಿಂತ ಬಡ್ಡಿಯನ್ನೇ ಜಾಸ್ತಿ ಕಟ್ಟಿದ್ದಾರೆ ಅವರ ಸಾಲ ಮನ್ನಾ ಮಾಡಬೇಕು ಅಂತ ಹೇಳಿ 49 ಕೋಟಿ ರೂಪಾಯಿಗಳನ್ನು ಸೇರಿಸಿದ್ದೀರಿ ಅದು ನಿಮಗೆ ಗೊತ್ತಿರಲಿಲ್ಲವೇ? 24 ಕೋಟಿ

ರೂಪಾಯಿಗಳು ಕೊಟ್ಟಿದ್ದೇವೆ, ಇನ್ನು 24 ಕೋಟಿ ರೂಪಾಯಿ ಕೊಡಬೇಕು ಅಂತ ಸೇರಿಸಿದ್ದೀರಿ Is it an unforeseen expenditure? ಇದು ಯಾವ ಪ್ರಿನ್ಸಿಪಲ್? ಅಥವಾ ಹೊಸ ಸೇವೆಗಳಲ್ಲಿ ಬರುತ್ತದೆಯೇ? ನಾನು ಪೂರಕ ಅಂದಾಜುಗಳ ಮೇಲೆಯೇ ಮಾತನಾಡುತ್ತಿದ್ದೇನೆ ಈಗ 5994 ಕೋಟಿ ರೂಪಾಯಿ ಕೇಳಿದ್ದೀರಿ ಹೋದ ಸಲ ಬೆಳಗಾಂನಲ್ಲಿ ಆದ ಅಧಿವೇಶನದಲ್ಲಿ 1408 ಕೋಟಿ ರೂಪಾಯಿ ಕೇಳಿದ್ದೀರಿ ಒಟ್ಟು ಎಷ್ಟು ಎಸ್ಟಿಮೇಟ್ ಮಾಡಿದ್ದೀರಿ ರೂಪಾಯಿ 41,136 ಕೋಟಿಯಲ್ಲವೇ? ಅದರಲ್ಲಿ ರೂ 7400 ಕೋಟಿ ಸಪ್ಲಿಮೆಂಟರಿಯಲ್ಲಿಯೇ ಅಂದರೆ, ಬಜೆಟ್‌ನಲ್ಲಿ ಎಷ್ಟು ಭಾಗ ಆಯಿತು ಹೇಳಿ It is nearly 1/6th of the total budget, it is of the total budget around 20% ಬಜೆಟ್‌ಗೆ ಒಂದು, Sanctity ಉಳಿಯುವುದಿಲ್ಲ ಅಂತ ಈಗಾಗಲ್ಲೇ ತಾವು ಕೆಲವೆಲ್ಲಾ ಹೊಸ ಸಂಪ್ರದಾಯಗಳನ್ನು ಹಾಕಿದ್ದೀರಿ ಬಜೆಟ್‌ಗಿಂತ ಮುಂಚಿತವಾಗಿಯೇ ಎಲ್ಲಾ ವಿಷಯಗಳನ್ನು ಹೇಳಿಬಿಟ್ಟಿದ್ದೀರಿ ಅದು ಟಿ ವಿ ಯಲ್ಲಿ ಎಲ್ಲಾ ಬಂತು ಪತ್ರಿಕೆಗಳಲ್ಲಿ ಎಲ್ಲಾ ಬಂತು ಮೊನ್ನೆ ಅಡಿಶನಲ್ ಬಜೆಟ್ ತಂದಿರಿ 50 ಸಾವಿರ ರೂಪಾಯಿ ಸಾಲದಲ್ಲಿ 25 ಸಾವಿರ ರೂಪಾಯಿ ಸಾಲ ಕಟ್ಟಿದರೆ 25 ಸಾವಿರ ಸಾಲ ಮನ್ನಾ, ಜನರಲ್ ಬಜೆಟ್ ಮೇಲೆ ಚರ್ಚೆಯೇ ಪ್ರಾರಂಭವಾಗಿಲ್ಲ, ಚರ್ಚೆ ಪ್ರಾರಂಭ ಮಾಡುವುದಕ್ಕಿಂತ ಮುಂಚಿತವಾಗಿ ಜನರಲ್ ಬಜೆಟ್‌ನಲ್ಲಿ ಹೇಳುವುದನ್ನು ಸಪ್ಲಿಮೆಂಟರಿ ಬಜೆಟ್‌ನಲ್ಲಿ ಹೇಳುವುದು ಸಪ್ಲಿಮೆಂಟರಿ ಬಜೆಟ್‌ನಲ್ಲಿ ಹೇಳುವುದು, ಈ ತರಹ ಆದರೆ ಇದನ್ನು ನಾವು ಒಪ್ಪಿಕೊಳ್ಳಬೇಕಾ? ಸಪ್ಲಿಮೆಂಟರಿ ಎಸ್ಟಿಮೇಟ್‌ನಲ್ಲಿ ಈ ತರಹ ನೀವು ಇಷ್ಟೆಲ್ಲಾ ಹೇಳಿದ ಮೇಲೆ ಒಪ್ಪಿಕೊಳ್ಳುತ್ತೇನೆ ಆದರೆ ಇಂತಹ ಸಂಪ್ರದಾಯವನ್ನು ನೀವು ಇನ್ನು ಮುಂದೆ ಬಿಡಬೇಕು ಇಂತದ್ದಕ್ಕೆಲ್ಲಾ ಅವಕಾಶ ಕೊಡಬಾರದು ಅದು ಒಳ್ಳೆಯದಲ್ಲ

ಶ್ರೀ ಅರಗ ಜ್ಞಾನೇಂದ್ರ – ತಾವು Finance Minister ಆಗಿದ್ದಾಗ ಇದನ್ನು ಮಂಡನೆ ಮಾಡುವಾಗ ನಾನು ಆ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದ್ದೆ ಆಗ ತಾವೇನು ಹೇಳಿದಿರಿ ಒಂದು ಸರ್ಕಾರ ಪೂರಕ ಅಂದಾಜುಗಳನ್ನು ಮಂಡನೆ ಮಾಡುತ್ತದೆಂದರೆ, ಆ ಸರ್ಕಾರ ಅಷ್ಟು ಹಣಕಾಸನ್ನು ನಿಭಾಯಿಸುವಂಥ

ಶಕ್ತಿಯನ್ನು ಪಡೆದಿದೆ, ಅದಕ್ಕಾಗಿ ತಾವು ನನಗೆ ಅಭಿನಂದನೆಗಳನ್ನು ಹೇಳಬೇಕು ಎನ್ನುವ ಮಾತನ್ನು ತಾವು ಹೇಳಿದ್ದೀರಿ ಅದು ರೆಕಾರ್ಡ್ ಆಗಿದೆ ನನಗೆ ನೆನಪಿದೆ, ಆದ್ದರಿಂದ 6,000, 7,000/- ಕೋಟಿ ರೂಪಾಯಿಗಳ ಪೂರಕ ಅಂದಾಜನ್ನು ಮಂಡಿಸುತ್ತದೆ ಅಂದರೆ ಬಹುಶಃ ಈ ಸರ್ಕಾರಕ್ಕೂ ಅದೇ ಅರ್ಥವಲ್ಲವೇ? ಅದೇನು ದೊಡ್ಡದಲ್ಲ, ಅವರೇ ಹೇಳಿದ್ದಾರೆ

ಶ್ರೀ ಸಿದ್ಧರಾಮಯ್ಯ – ಆಯಿತು, ಕರೆಕ್ಟ್ ಆಗಿದೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಜ್ಞಾನೇಂದ್ರರವರೇ ಅದನ್ನು ಯಾವಾಗ ಮಂಡಿಸಬೇಕು?

ಶ್ರೀ ಅರಗ ಜ್ಞಾನೇಂದ್ರ – ಅವರು ಹೇಳಿದ್ದಾರೆ

ಶ್ರೀ ಸಿದ್ಧರಾಮಯ್ಯ – ಹಾಗಾದರೆ ಒಂದು ಕೆಲಸವನ್ನು ಮಾಡೋಣ ಈ ಸಾರಿ 47,000/- ಕೋಟಿ ರೂಪಾಯಿಗಳು ಖರ್ಚಾಗುತ್ತದೆಂಬ ಒಂದು ಬಜೆಟ್ ಎಸ್ಟಿಮೇಟ್ ಇದೆ 47,000/- ರೂಪಾಯಿಗಳಲ್ಲಿ 27,000-00 ರೂಪಾಯಿಗಳನ್ನು ಮಂಡಿಸಿ, ನಂತರ 20,000-00 ರೂಪಾಯಿಗಳಿಗೆ ಸಪ್ಲಿಮೆಂಟರಿ ಬಜೆಟ್ ಆಮೇಲೆ ಮಂಡಿಸೋಣ ಸಪ್ಲಿಮೆಂಟರಿ ಮಾಡೋಣ ಹಾಗೆ ಮಾಡಲಿಕ್ಕೆ ಬರುವುದಿಲ್ಲ 50% fixed ಮಾಡಿ ಎರಡು ಸಾರಿ strict ಮಾಡಿಬಿಟ್ಟು ಮಾಡೋಣ 27,000-00 ರೂಪಾಯಿಗಳು ಒಂದು ಸಾರಿ, 20,000-00 ರೂಪಾಯಿಗಳು ಒಂದು ಸಾರಿ ಮಾಡೋಣ ನಾನು ಏನು ಹೇಳುತ್ತೇನೆಂದರೆ, I am not criticizing ಆದರೆ ಈ ರೀತಿ ಸರಿಯಿಲ್ಲ ಈಗ ನೀವು 1950-00 ಕೋಟಿ ರೂಪಾಯಿಗಳನ್ನು ಬೆಳೆ ಸಾಲಕ್ಕೆ ಕಟ್ಟಬೇಕಾಗುತ್ತದೆಂದು 500-00 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿಟ್ಟಿದ್ದೀರಿ ಸಪ್ಲಿಮೆಂಟರಿ 500 00 ಕೋಟಿ ರೂಪಾಯಿಗಳನ್ನಿಟ್ಟಿದ್ದೀರಿ, ಒಟ್ಟಿಗೆ 1,000-00 ಕೋಟಿ ರೂಪಾಯಿಗಳನ್ನು ಇಡೋಣ ಆಮೇಲೆ ಇದರ ಬಗ್ಗೆ ಒಟ್ಟಿಗೆ ಚರ್ಚೆ ಮಾಡಬಹುದಿತ್ತಲ್ಲಾ ಮುಂದಿನ ವರ್ಷದ ಖರ್ಚಿಗೆ ನೀವು ಈಗಲೇ ಇಟ್ಟುಕೊಂಡು ಕುಳಿತರೆ ಹೇಗೆ? ಹಾಗಾದರೆ 29 ಕೋಟಿ ಯಾಕೆ ಒಂದು ವರ್ಷದಿಂದ ಕಟ್ಟಲಿಲ್ಲ? ಇನ್ನೊಂದು 2002 ರಲ್ಲಿ ಬೆಳೆ

ಸಾಲ ಮನ್ನಾ ಮಾಡಿದ್ದು 12 ಕೋಟಿ ಇದೆ, ಮತ್ತೆ 6% ಗೆ ನಾವು ಬಡ್ಡಿದರ ಇಳಿಸಿದಾಗ ಅದರ ಬಾಕಿ ಈಗ ಸೇರಿಸಿಕೊಂಡು ಕೊಡುತ್ತಾ ಇದ್ದೀರಿ ಹೋದ ವರ್ಷವೇ ಕಟ್ಟಿಬಿಡಬಹುದಿತ್ತಲ್ಲ ಕಳೆದ ವರ್ಷವೇ ಬಜೆಟ್‌ನಲ್ಲೇ ಬಡ್ಡಿ ಮನ್ನಾ ಸೇರಿಸಿದ್ದೀರಿ ಪೂರಕ ಅಂದಾಜುಗಳಲ್ಲಿ ಯಾಕೆ ತೆಗೆದುಕೊಂಡು ಬಂದಿರಿ? 'Is it a unforeseen expenditure? ಅಥವಾ ಹೊಸ ಸೇವೆನಾ ಅದು? ಎಲ್ಲರಿಗೂ ಗೊತ್ತಿರುವುದೇ ಅದನ್ನು ಬಜೆಟ್‌ನಲ್ಲೇ ಸೇರಿಸಬಹುದಿತ್ತಲ್ಲ That is my question, ನಾವು ನೀವೂ ಅಂತ ಅಲ್ಲ ಇದು ಇದು ಜನರ ತೆರಿಗೆ ಹಣ

ಶ್ರೀ ಬಿ ಎಸ್ ಯಡಿಯೂರಪ್ಪ – ಇದು ಹೆಚ್ಚು ಗಳಿಕೆಯದು, ನಾವು ಹಣಕಾಸನ್ನು ಚೆನ್ನಾಗಿ ನಿರ್ವಹಣೆ ಮಾಡಿದ್ದರಿಂದ ಹೆಚ್ಚು ಹಣ ಬಂದಿರುವುದು

ಶ್ರೀ ಸಿದ್ಧರಾಮಯ್ಯ – ಹಾಗಾದರೆ ಕೇಂದ್ರ ಸರ್ಕಾರದ್ದೂ ನೀವೇ ನಿರ್ವಹಣೆ ಮಾಡಿಬಿಟ್ಟಿರ? 3300 ಕೋಟಿ ಬಂದಿದೆಯಲ್ಲ ಅದೂ ನಿಮ್ಮದೇ ನಿರ್ವಹಣೆ? ಪಾಪ ಅಲ್ಲಿ ಹಣಕಾಸು ಸಚಿವರಿದ್ದಾರಲ್ಲ ಚಿದಂಬರಂ ಅವರದೇನೂ ನಿರ್ವಹಣೆ ಇಲ್ಲವ? ಅವರದು ಕಳೆದ ವರ್ಷಕ್ಕೂ ಈ ವರ್ಷಕ್ಕೂ 20 ಸಾವಿರ ಕೋಟಿ ತೆರಿಗೆ ಹೆಚ್ಚಾಗಿದೆ ಅದಕ್ಕೂ ನೀವೇ ಜವಾಬ್ದಾರರೇ?

ಶ್ರೀ ಬಿ ಎಸ್ ಯಡಿಯೂರಪ್ಪ – ನೀವು ಹಣಕಾಸು ಸಚಿವರಾಗಿದ್ದಾಗ ಯಾವತ್ತಾದರೂ ಸಾರ್ವಜನಿಕವಾಗಿಯಾಗಲಿ ಸದನದಲ್ಲಾಗಲಿ ನಿಮ್ಮ ಹಣಕಾಸಿನ ನಿರ್ವಹಣೆ ಚೆನ್ನಾಗಿರಲಿಲ್ಲ ಅಂತ ಹೇಳಿದ್ದೀನಾ?

ಶ್ರೀ ಸಿದ್ಧರಾಮಯ್ಯ – ಇಲ್ಲೇ ಹೇಳಿದ್ದೀರಿ ಬಿಡಿ ಅದನ್ನು ಹೇಳಬಾರದು ಅಂತ ಇದ್ದೆ, ಹೇಳುತ್ತೇನೆ 4% ಬಡ್ಡಿ ದರದಲ್ಲಿ ರೈತರಿಗೆ ಸಾಲ ಸಿಗುವಂಥದು ಸಹಕಾರ ಸಂಸ್ಥೆಗಳಿಂದ ಇತಿಹಾಸ ನಿರ್ಮಾಣ ಮಾಡಿದ್ದೇವೆ ಅಂತ ಹೇಳಲಿಲ್ಲವೇ? 11 5% ಇತ್ತು, ಅದನ್ನು 6% ಗೆ ಇಳಿಸಿದಾಗ ಎಷ್ಟು ವ್ಯತ್ಯಾಸ? 5 5% ನೀವು 6% ನಿಂದ ಈಗ 4% ಗೆ ಇಳಿಸಿದಾಗ ಎಷ್ಟು ವ್ಯತ್ಯಾಸ? 2% 2% ಗೆ ಇಳಿಸಿದವರು ದೊಡ್ಡ ಕಿರೀಟ ಹಾಕಿಕೊಳ್ಳಬೇಕೋ 5 5% ಇಳಿಸಿದವರು ಕಿರೀಟ ಹಾಕಿಕೊಳ್ಳಬೇಕೋ? ಹೇಳಿ ಮಾತೆತ್ತಿದರೆ ಇತಿಹಾಸ ಅಂತ ಹೇಳುತ್ತೀರಿ

ಶ್ರೀ ಬಿ ಎಸ್ ಯಡಿಯೂರಪ್ಪ – ಹಾಗಾದರೆ ಬೇರೆ ರಾಜ್ಯಗಳಲ್ಲಿದ್ದ ಕಾಂಗ್ರೆಸ್ ನವರು ಯಾಕೆ ಮಾಡಲಿಲ್ಲ, ಇದನ್ನು?

ಶ್ರೀ ಸಿದ್ಧರಾಮಯ್ಯ – ಅದನ್ನು ಆ ರಾಜ್ಯಗಳಲ್ಲಿ ಕೇಳಬೇಕು ಹಾಗಾದರೆ 11 5% ಇದ್ದದನ್ನು 6% ಗೆ ಇಳಿಸಿದಾಗ ನಿಮ್ಮ ಬಿಜೆಪಿ ಸರ್ಕಾರಗಳು ಯಾಕೆ ಮಾಡಲಿಲ್ಲ ? ಗುಜರಾತ್ ಮಧ್ಯಪ್ರದೇಶಗಳಲ್ಲಿ ಮಾಡಿದ್ದೀರ?

(ಗೊಂದಲ)

ನಾನು ಯಾರ ಮೇಲೆಯೂ ಆರೋಪ ಮಾಡಲು ಹೋಗುವುದಿಲ್ಲ ಹಾಗೆ ಹೇಳಲು ಬರುವುದಿಲ್ಲ ನಮ್ಮ ಆರ್ಥಿಕ ಪರಿಸ್ಥಿತಿ ಚೆನ್ನಾಗಿದೆ ನಮಗೆ ತೆರಿಗೆ ಹೆಚ್ಚಾಗಿ ಬರುತ್ತದೆ ಕೇಂದ್ರ ಸರ್ಕಾರದಿಂದ ಕೂಡ ನಮ್ಮ ಪಾಲಿಗೆ ತೆರಿಗೆ ಹೆಚ್ಚಾಗಿ ಬರುತ್ತಾ ಇದೆ ಆದ್ದರಿಂದ ನಾವು ಹೆಚ್ಚಿಗೆ ಕೆಲಸ ಮಾಡುತ್ತೇವೆ ಬಿಹಾರದಲ್ಲಿ even today there is a revenue deficit Even today there is a fiscal deficit ಬಿಹಾರ ಉತ್ತರ ಪ್ರದೇಶಗಳಲ್ಲಿ ಇಷ್ಟು ಕಡಿಮೆ ಬಡ್ಡಿಗೆ ಕೊಡುತ್ತಾರೆ? ಹಾಗೆ ಲೆಕ್ಕ ಹಾಕಿದರೆ ನಾವು ಬಹಳ ಎದೆತಟ್ಟಿಕೊಳ್ಳಬೇಕಾಗಿಲ್ಲ ನಾವು poverty ಯಲ್ಲಿ 8ನೇ ಜಾಗದಲ್ಲಿದ್ದೇವೆ ನಾನೂ ನಿಮಗೆ ಹೇಳಲಿಲ್ಲ, ನಮ್ಮ ರಾಜ್ಯದ ಪರಿಸ್ಥಿತಿ ಹೇಳುತ್ತಿದ್ದೇನೆ ಇವತ್ತು ನಮ್ಮ ರಾಜ್ಯದಲ್ಲಿ 1 39 ಕೋಟಿ ಬಡತನದ ರೇಖೆಗಿಂತ ಕೆಳಗಿರುವವರು ಅಂತ ಹೇಳುತ್ತಾರೆ, ನಾನು ಅದನ್ನು ನಂಬುವುದಿಲ್ಲ 5 5 ಕೋಟಿ ಜನಸಂಖ್ಯೆಯಲ್ಲಿ 2 ಕೋಟಿ below poverty line ಇದ್ದಾರೆ ಯಾಕೆಂದರೆ, ಅವರು ಏನು ಹೇಳುತ್ತಾರೆ ಒಂದು ತಿಂಗಳಿಗೆ 324 ರೂಪಾಯಿಗಳಿಗಿಂತ ವರಮಾನ ಕಡಿಮೆ ಇದ್ದರೆ ಅವನ below poverty line ಗಿಂತ ಕೆಳಗಿದ್ದಾನೆ ಅಂತ ಲೆಕ್ಕ 325 ಇತ್ತು ಅಂದರೆ ಇಲ್ಲ ಅದೇ ಪಟ್ಟಣದಲ್ಲಿ 356ಕ್ಕಿಂತ ಒಂದು ತಿಂಗಳ ವರಮಾನ ಕಡಿಮೆ ಇದ್ದರೆ ಆತ BPL ಗಿಂತ ಕೆಳಗಿದ್ದಾನೆ ಅಂತ ಹೇಳುತ್ತಾರೆ 357 ಆಗಿಬಿಟ್ಟರೆ ಇಲ್ಲ ಆ ಲೆಕ್ಕಾಚಾರವೇ ಅವೈಜ್ಞಾನಿಕ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಯೋಜನಾ ಆಯೋಗದ ತೀರ್ಮಾನದಂತೆ 2200 ಕ್ಯಾಲರೀಸ್ ಒಬ್ಬನಿಗೆ ಸಿಕ್ಕಿದರೆ ಅವನು ಕನಿಷ್ಠ ಬದುಕಲು ಸಾಧ್ಯ ಆದರೆ

ಇದೇ ಯೋಜನಾ ಆಯೋಗದ ಪ್ರಕಾರ ಈಗ ಇಂಡಿಯಾದ ಸರಾಸರಿ 1300 ಮಾತ್ರ. ಆದ್ದರಿಂದ ಈ ಲೆಕ್ಕಾಚಾರ ಸರಿಯಲ್ಲ

ಶ್ರೀ ಸಿದ್ಧರಾಮಯ್ಯ – ಆದ್ದರಿಂದ ನಾನು ಹೇಳುತ್ತಿದ್ದೇನೆ ಅಂದರೆ ನಮ್ಮ ರಾಜ್ಯವನ್ನು ಇನ್ನೂ ಬಹಳ ಮುಂದಕ್ಕೊಯ್ಯಬೇಕಾಗಿದೆ ಶಿಕ್ಷಣ, ಅಭಿವೃದ್ಧಿ, ಮೂಲಭೂತ ಸೌಕರ್ಯಗಳಲ್ಲಿ ಮುಂದಕ್ಕೆ ಕೊಂಡೊಯ್ಯಬೇಕಾಗಿದೆ ಯಾಕೆಂದರೆ ಒಬ್ಬ ವ್ಯಕ್ತಿಯ ವರಮಾನದ ಮೇಲೆ ರಾಜ್ಯ ಬೆಳವಣಿಗೆಯಾಗಿದೆಯಾ ಇಲ್ಲವ, ಜನರ ಬದುಕಿನಲ್ಲಿ ಗುಣಮಟ್ಟದ ಸುಧಾರಣೆಯಾಗಿದೆಯಾ ಇಲ್ಲವೇ? ಅಂತ ಹೇಳಲು ಬರುವುದಿಲ್ಲ ಅವನಿಗೆ ಎರಡು ಹೊತ್ತು ಊಟ ಸಿಕ್ಕುತ್ತಿದೆಯಾ, ಆರೋಗ್ಯ ನೋಡಿಕೊಳ್ಳಲು ದುಡ್ಡಿದೆಯಾ? ಮಕ್ಕಳ ಶಿಕ್ಷಣ, ಕುಡಿಯಲು ನೀರು, ಮನೆ ಇಂಥಾದ್ದನ್ನೆಲ್ಲ ನೋಡಿ ಲೆಕ್ಕಹಾಕಬೇಕು ಇವರೇನು ಮಾಡುತ್ತಾರೆ ಅಂದರೆ ವರಮಾನ ತಗೊಂಡುಬಿಡುತ್ತಾರೆ ವರಮಾನ ಬೆಂಗಳೂರು ಜಿಲ್ಲೆಯಲ್ಲಿ ಒಂದು ತರಹ ಇದೆ, ಗುಲ್ಬರ್ಗದಲ್ಲಿ ಒಂದು ತರಹ ಇದೆ ಇವೆರಡನ್ನು ಸರಾಸರಿ ಮಾಡಿ ವರಮಾನ ತಗೊಂಡರೆ ಆಗುತ್ತದ? ನಿಮಗೆ ಸುಮ್ಮನೆ ಉದಾಹರಣೆ ಹೇಳುತ್ತೇನೆ ಈಗ debt servicing supplementary ಯಲ್ಲಿ ತಂದಿದ್ದೀರ ನಿಮಗೆ debt servicing ಎಷ್ಟು ಅಂತ ಗೊತ್ತಿರಲಿಲ್ಲವ? ಅದೇನು unforeseen expenditure? ಏನೋ ಹೊಸ ಕೆಲಸ ಮಾಡಿದರೆ, ಅಭಿವೃದ್ಧಿ ಕೆಲಸ ಮಾಡಿದರೆ ತುರ್ತು ಕೆಲಸ ಮಾಡಿದಾಗ ಅಂಥ ಖರ್ಚು ಇಲ್ಲಿ ತಂದರೆ ತಕರಾರಿಲ್ಲ ಈಗ PWD ಇಲಾಖೆಯದು ಒಟ್ಟು ಬಜೆಟ್ ಈ ವರ್ಷ ಇದ್ದುದು 2400 ಕೋಟಿ ಅದರಲ್ಲಿ 750 ಕೋಟಿ ಬರೀ supplementary ಯಲ್ಲೇ ಕೊಟ್ಟಿದ್ದೀರಿ One fourth of the total budget ಕೊಟ್ಟಿದ್ದೀರಿ ಈ ತರಹ ಅಸಂಬದ್ಧವಾದದ್ದನ್ನು supplementary ಯಲ್ಲಿ ತಂದಿದ್ದೀರಲ್ಲ, ಇದು bad ಆಮೇಲೆ ನೀವು ನಗರಪ್ರದೇಶಗಳಿಗೆ ಹಣ ಹಂಚಿದ್ದೀರಿ, ಒಂದು ಕಡೆ ನಂಜುಂಡಪ್ಪ ವರದಿ ಜಾರಿಗೆ ತರಬೇಕು, ಅದು ನಮಗೆ ಮಂತ್ರ ಅನ್ನುತ್ತೀರಿ ಇನ್ನೊಂದು ಕಡೆ ನಿಮಗಿಷ್ಟ ಬಂದಂತೆ ನಿಮಗೆ ಯಾವ್ಯಾವ ಜಿಲ್ಲೆಗೆ ಬೇಕೋ ದುಡ್ಡು ಕೊಟ್ಟುಕೊಳ್ಳುತ್ತೀರಿ ಶಿವಮೊಗ್ಗದ ನಗರಾಭಿವೃದ್ಧಿಗೆ 17 5 ಕೋಟಿ ಕೊಟ್ಟುಕೊಂಡಿದ್ದೀರಿ ಅದು

ನಂಜುಂಡಪ್ಪ ವರದಿಯಲ್ಲಿ ಬಂದಿದೆಯಾ ಹೇಳಿ ನೋಡೋಣ ಒಂದು ಕಡೆ imbalance ಆಗಿದೆ ಸಮಾನ ಬಳೆವಣಿಗೆ ಮಾಡಬೇಕು ಎಂದು argument ಮಾಡುತ್ತಾ ಇನ್ನೊಂದು ಕಡೆ imbalance ಅನ್ನು widen ಮಾಡುತ್ತಾ ಹೋದರೆ ನಿಮ್ಮ argument ನಲ್ಲಿ ಏನು ಸತ್ವ ಇದೆ, ಹೇಳಿ ನೋಡೋಣ ಏನು ಸತ್ವ ಇದೆ? This is my point ನೀವು 17 ಜಿಲ್ಲೆಗಳಿಗೆ ಐದೈದು ಕೋಟಿ ಕೊಟ್ಟಿದ್ದೀರಿ ಶಿವಮೊಗ್ಗಕ್ಕೆ ಏಕೆ 17 ಕೋಟಿ ಕೊಟ್ಟಿದ್ದೀರಿ? ಸಮಾನವಾಗಿ ಎಲ್ಲರಿಗೂ ಹಂಚಿ

ಶ್ರೀ ಬಿ ಎಸ್ ಯಡಿಯೂರಪ್ಪ – ಹಿಂದೆ ಎಲ್ಲ ನಮಗೆ ಅನ್ಯಾಯ ಮಾಡಿದ್ದೀರಿ ಅದಕ್ಕೆ ಸ್ವಲ್ಪ ಹೆಚ್ಚಿಗೆ ಮಾಡಿಕೊಂಡಿದ್ದೇವೆ

ಶ್ರೀ ಸಿದ್ಧರಾಮಯ್ಯ – ಹೌದೌದು ನಾವು ಅನ್ಯಾಯ ಮಾಡಿಕೊಳ್ಳಬೇಕೆಂದರೆ ಬೇರೆಯವರಿಗೆ ಅನ್ಯಾಯ ಮಾಡಿದ್ದೇವೆಂದು ಅರ್ಥವೇ? ಈ ರೀತಿ ನಾನು ಒಂದು ಜಿಲ್ಲೆಗೆ ಕೊಟ್ಟಿರುವುದನ್ನು ತೋರಿಸಿಬಿಡಿ ನೋಡೋಣ ಹಾಗಾದರೆ ನಿಮಗೆ ಅನ್ಯಾಯವಾಗಿದ್ದರೆ ನಂಜುಂಡಪ್ಪನವರ ವರದಿಯಲ್ಲಿ ಶಿವಮೊಗ್ಗ ಬರಬೇಕಾಗಿತ್ತಲ್ಲ ನಿಮಗೆ ಅನ್ಯಾಯವಾಗಿದೆಯಲ್ಲ, ಬಹಳ ಹಿಂದಿನಿಂದ ಅನ್ಯಾಯವಾಗಿಬಿಟ್ಟಿದೆಯಲ್ಲ, ನಿಮ್ಮಲ್ಲಿ literacy percentage ಎಷ್ಟಿದೆ? ಗುಲ್ಬರ್ಗದಲ್ಲಿ ಎಷ್ಟಿದೆ? ಈ ರೀತಿ argument ಗೆ ಏನಾದರೂ ಅರ್ಥವಿದೆಯೇ? Supplementary budget ನಲ್ಲಿ ಶಿಕಾರಿಪುರ ದೇವಸ್ಥಾನಕ್ಕೆ ಹಾಕಿಕೊಂಡಿದ್ದೀರಿ ಅದು ಯಾವ imbalance ನಲ್ಲಿ ಬರುತ್ತದೆ? This is my point ಈ ರೀತಿ ನಮಗೆ ಭಯವೇನೆಂದರೆ ನಾವು ಒಂದು ಆರ್ಥಿಕ ಶಿಸ್ತನ್ನು ತೆಗೆದುಕೊಂಡು ಬಂದಿದ್ದೇವೆ ಆರ್ಥಿಕ ಪರಿಸ್ಥಿತಿ ಸುಸ್ಥಿತಿಯಲ್ಲಿದೆ ಇದನ್ನು ದಯಮಾಡಿ ಯಡಿಯೂರಪ್ಪನವರ ಕಾಲದಲ್ಲಿ ಹಾಳಾಯಿತು ಎನ್ನುವ ಅಪವಾದಕ್ಕೆ ಗುರಿಯಾಗಬೇಡಿ That is my point ಅದು ಆ ಕಡೆ ಹೋಗುತ್ತಿದೆ ಗೊತ್ತು ಗುರಿ ಇಲ್ಲದೇ ಇರುವ ರೀತಿಯಲ್ಲಿ ನಾವು ಮಾಡಿಕೊಂಡು ಹೋದರೆ non developmental expenditure ಬಗ್ಗೆ ನಾನು ಬಜೆಟ್ ಬಗ್ಗೆ ಚರ್ಚೆ ಬಂದಾಗ ಹೇಳುತ್ತೇನೆ 2004–05 ರಲ್ಲಿ developmental expenditure 56 72 ಇತ್ತು Out of the total expenditure ನಾನು 2005–06 ರಲ್ಲಿ ಬರುವಷ್ಟರಲ್ಲಿ ಒಂದು

ವರ್ಷದಲ್ಲಿ 62 95 ಇತ್ತು ಈಗ ಇವರು ಬಂದಮೇಲೆ ಒಂದು ವರ್ಷದಲ್ಲಿ 63 ಬರೀ 0 5 ಮಾತ್ರ ಹೆಚ್ಚಾಗಿದೆ developmental expenditure Do you agree with this? ಇದನ್ನು development ಎಂದು ಕರೆಯುತ್ತೀರಾ? ನೀವೇ Economic Survey ಯಲ್ಲಿ ಕೊಟ್ಟಿರುವ figures ಇದು ಅದರಲ್ಲಿ ನೀವೇನು ಹೇಳಿದ್ದೀರಿ ಎಂದರೆ 2004-05 ನೇ ಇಸವಿಯಲ್ಲಿ total developmental expenditure 56 72 ಇದ್ದರೆ ಅದು 2005-06 ಕ್ಕೆ 92 95 ಆಗುತ್ತದೆ It is more than 6% Developmental Expenditure ಬೆಳವಣಿಗೆಯಾಗುತ್ತದೆ ಆದರೆ ನೀವು ಒಂದು ವರ್ಷದ ಅವಧಿಯಲ್ಲಿ 62 95 ರಿಂದ 0 5 ಬರೀ ಮಾತ್ರ ಹೆಚ್ಚಾಗಿದೆ That means to say, ನೀವು non developmental ಕಡೆಗೆ ಹೆಚ್ಚು ಗಮನವನ್ನು ಕೊಟ್ಟಿದ್ದೀರಿ ನೀವು ಆರ್ಥಿಕ ಶಿಸ್ತನ್ನು ಕಡೆಗಾಣಿಸಿದ್ದೀರಿ, Plan ಕಡೆಗೆ asset creation ಗೆ ನೀವು ಹೆಚ್ಚು ಗಮನವನ್ನು ಕೊಟ್ಟಿಲ್ಲವೆನ್ನುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ This is the figures given in the Economic Survey 2006-07 This is not my figure ನೀವು ಕೊಟ್ಟಿರುವ ಅಂಕಿ ಅಂಶಗಳೇ ಇಷ್ಟೊಂದು ಹಣಕಾಸಿನ ಪರಿಸ್ಥಿತಿ ಸುಧಾರಣೆಯಾಗಿ, ನೀವು ಬಜೆಟ್‌ನಲ್ಲಿ ಹೇಳಿದ್ದೀರಿ", ನಮ್ಮ ಹತ್ತಿರ ಹಣಕಾಸು ತುಂಬಿ ತುಳುಕುತ್ತಿದೆ" ಎಂದು ಹೇಳಿದ್ದೀರಿ ಹಾಗಾದರೆ 0 5 development ಸಾಕೋ? ಈ ರೀತಿಯಾದರೆ ನಮ್ಮ ರಾಜ್ಯದ ಬೆಳವಣಿಗೆ ಆಯಿತೋ? ಕೇಂದ್ರ ಸರ್ಕಾರದ ಬೆಳವಣಿಗೆ 2006-07ಕ್ಕೆ GDP ಬೆಳವಣಿಗೆ 9 2 ಆದರೆ ನಮ್ಮದು 7 9 2005-06 ರಲ್ಲಿ ಅವರದ್ದು 7 8 ಆದರೆ ಅವರದ್ದು 9% ಅಂದರೆ ಕೇಂದ್ರ ಸರ್ಕಾರದ್ದು ನಾವು ಎಲ್ಲಿದ್ದೇವೆ? 7 8, 7 9, Can we claim that our State is growing rapidly? we can't ನಾನು ಇಷ್ಟಕ್ಕೆ ನಿಲ್ಲಿಸುತ್ತೇನೆ ನಾನು ಹೆಚ್ಚು details ಗೆ ಹೋಗುವುದಿಲ್ಲ ಆದ್ದರಿಂದ ನಾನೇನು ಹೇಳುತ್ತೇನೆ ಎಂದರೆ ನೀವು ಕಳೆದ ಒಂದು ವರ್ಷದಲ್ಲಿ developmental ಕಡೆಗೆ ಹೆಚ್ಚು ಗಮನವನ್ನು ಕೊಟ್ಟಿಲ್ಲ, ಇಷ್ಟೊಂದು supplementary budget ನಲ್ಲಿ ಹಣ ಖರ್ಚು ಮಾಡಿದರೂ ಕೂಡು development ಗೆ ರಾಜ್ಯದ ಬೆಳವಣಿಗೆಗೆ, ಆರ್ಥಿಕ ಬೆಳವಣಿಗೆಗೆ ಜನರ ತಲಾ ಆದಾಯದ ಬೆಳವಣಿಗೆಗೆ, ಜನರ ಬದುಕಿನಲ್ಲಿ ಸುಧಾರಣೆ, ಗುಣಮಟ್ಟದ ಬದುಕು

ಆಗುವುದಕ್ಕೆ ಇವೆಲ್ಲ ಮಾಡಿಲ್ಲ This is my objection ಇಷ್ಟಾದರೂ ಕೂಡ ನಾನು ಇದನ್ನು ಒಪ್ಪುವುದಿಲ್ಲವೆಂದು ಹೇಳುವುದಿಲ್ಲ ಆದರೆ ಇನ್ನು ಮುಂದೆ ಈ ರೀತಿ ನಮ್ಮ principleಗಳು ಏನಿವೆಯಲ್ಲ ಕಾನೂನಿನಲ್ಲಿ, ಅವೆಲ್ಲವನ್ನು ಗಾಳಿಗೆ ತೂರಿ, ಬಜೆಟ್ ತಯಾರು ಮಾಡುವುದಾಗಲಿ, ಖರ್ಚು ಮಾಡುವುದಾಗಲಿ, ಮಾಡದೇ ಇದನ್ನು ಸ್ವಲ್ಪ ಕಾನೂನಿನ ಚೌಕಟ್ಟಿನೊಳಗಡೆಯೇ ಸಾಧ್ಯವಾದ ಮಟ್ಟಿಗೆ ಕರಾರುವಾಕ್ಕಾಗಿ ಬಜೆಟ್‌ನ್ನು ತಯಾರುಮಾಡಬೇಕಾಗುತ್ತದೆ hundred percent ಕರಾರುವಾಕ್ಕಾಗಿ ಯಾರೂ ಮಾಡುವುದಕ್ಕಾಗುವುದಿಲ್ಲ ಅದಕ್ಕೋಸ್ಕರವೇ constitutional provision ಅನ್ನು ಮಾಡಿಕೊಂಡಿರುವುದು ಅಂದರೆ 5%, 6%, 7% ಹೋಗಲಿ maximum 10% ಇರಬಹುದು, ಆದರೆ ಇದು 20% ಇದು ಒಪ್ಪತಕ್ಕದ್ದಲ್ಲ ಇದು ಸರಿಯಾದಂಥದ್ದೂ ಅಲ್ಲ ಇದು ಆರ್ಥಿಕ ಶಿಸ್ತಿನ ಚೌಕಟ್ಟಿನೊಳಗಡೆ ಹೋಗತಕ್ಕದ್ದಲ್ಲ ಇದನ್ನು ನಾನು ಮಾನ್ಯ ಯಡಿಯೂರಪ್ಪನವರ ಗಮನಕ್ಕೆ ತರುತ್ತೇನೆ ಸಲಹೆ ಬೇಕಾದರೆ ತೆಗೆದುಕೊಳ್ಳಲಿ ಬಿಟ್ಟರೆ ಬಿಡಲಿ ಆದರೆ ರಾಜ್ಯದ ಆರ್ಥಿಕ ಪರಿಸ್ಥಿತಿಗೆ ಏನು ಬುನಾದಿಯನ್ನು ಹಾಕಿದ್ದೇವೆ ಕಳೆದ 4–5 ವರ್ಷಗಳಿಂದ, ಅದು ಹಾಳಾಗಬಾರದು ಎನ್ನುವ ಕಳಕಳಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ ಇಷ್ಟು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಹೆಚ್ ಡಿ ಬಸವರಾಜ್ (ವಿರಾಜಪೇಟೆ) – ಮಾನ್ಯ ಅಧ್ಯಕ್ಷರೇ, ಇವತ್ತು ಸನ್ಮಾನ್ಯ ಆರ್ಥಿಕ ಮಂತ್ರಿಗಳಾದ ಯಡಿಯೂರಪ್ಪನವರು ಎರಡನೇ ಹಾಗೂ ಅಂತಿಮ ಕಂತಿನ ಒಂದು ಪೂರಕ ಬಜೆಟ್‌ನ್ನು ಮಂಡನೆ ಮಾಡಿದ್ದಾರೆ ಈ ವಿಚಾರದಲ್ಲಿ ಪ್ರತಿ ಪಕ್ಷದಲ್ಲಿರುವ ನಮ್ಮೆಲ್ಲ ನಾಯಕರು ಹಲವಾರು ವಿಚಾರಗಳನ್ನು ಇಲ್ಲಿ ಹೊರಗೆಡಹಿದ್ದಾರೆ ತಿಳಿಸಿದ್ದಾರೆ ತಿಳಿಸುವಂಥದ್ದನ್ನು ಮಾಡಿದ್ದಾರೆ ಇದು ಸಂವಿಧಾನದ ಚೌಕಟ್ಟಿನೊಳಗಡೆ ಯಾವ ರೀತಿ ಮಾಡಬೇಕಾಗಿತ್ತು, ಇದು ಮಂಡನೆ ಮಾಡಿರುವಂಥದ್ದು ಯಾವ ರೀತಿ ವಿಭಿನ್ನವಾಗಿದೆ, ಆದ್ದರಿಂದ ಈ ತರಹ ಮಾಡಬಾರದಾಗಿತ್ತು, ಮುಂದೆ ಸಲಹೆಗಳನ್ನು ತೆಗೆದುಕೊಳ್ಳಿ, ಎನ್ನುವಂಥ ಮಟ್ಟದವರೆಗೂ ಮಾತನಾಡಿದ್ದಾರೆ ಹಾಗೆಯೇಇದನ್ನೂ ಅನೈತಿಕವಾದ ರೀತಿಯಲ್ಲಿ ತಂದುಬಿಟ್ಟಿದ್ದೀರಿ, ಈ ತರಹ ತರಬಾರದಾಗಿತ್ತು ಎನ್ನುವ ರೀತಿಯಲ್ಲೂ ಕೂಡ

ಹಿರಿಯರು ಪ್ರತಿಪಾದನೆ ಮಾಡಿದ್ದಾರೆ ಈಗ ನಾನು ತಮಗೆ ಈ ಒಂದು ಬಜೆಟ್‌ನಲ್ಲಿ ಎರಡೇ ಎರಡು ವಿಚಾರಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ ಈ ಪ್ರಾರಂಭದ ಟಿಪ್ಪಣಿಯಲ್ಲಿ ಅವರು ಹೇಳಿದ್ದಾರೆ "2006–07ನೇ ಸಾಲಿನ ಪೂರಕ ಅಂದಾಜುಗಳ ಮೊದಲನೇ ಕಂತನ್ನು ಮಂಡಿಸಿದ ತರುವಾಯ ಸಾದಿಲ್ವಾರು ನಿಧಿಯಿಂದ ಮಂಜೂರಾದ ಮುಂಗಡಗಳಿಗೆ ಮತ್ತು ಇತರ ಅನಿರೀಕ್ಷಿತ ವೆಚ್ಚಗಳಿಗೆ ಸಂಬಂಧಿಸಿದ ಬಜೆಟ್ ಇದು" ಅಂದರೆ ನಮ್ಮ ಆರ್ಥಿಕ ಸಚಿವರು ಇಷ್ಟು ಪಾರದರ್ಶಕತೆಯಿಂದ ಈ ಒಂದು ಕೆಲಸಗಳನ್ನು ಮಾಡುತ್ತಿದ್ದಾರೆ, ಜನ ಸಾಮಾನ್ಯ ಕೊಡುವಂಥ ತೆರಿಗೆಯ ಒಂದೊಂದು ನಯಾ ಪೈಸೆಯ ಖರ್ಚನ್ನು ಕೂಡ ವೆಚ್ಚ ಮಾಡುವುದಕ್ಕೆ ಮುಂಚೆಯೇ ಈ ಒಂದು ಸದನದ ಮುಂದೆ ಇಟ್ಟು ಸದನದ ಪರಿಶೀಲನೆಗೆ ಒಳಪಡಿಸಿ ತದನಂತರ ವೆಚ್ಚ ಮಾಡಬೇಕೆನ್ನುವಂಥ ಮನೋಭಿಪ್ರಾಯವನ್ನು ಇಟ್ಟಿಕೊಂಡಿದ್ದಾರೆ, ಅಂದಾಗ ನಾವು ಅಭಿನಂದಿಸಬೇಕಾ? ಅಥವಾ ಸಂವಿಧಾನದ ಚೌಕಟ್ಟಿನೊಳಗಡೆ ಇದು ಬರಲಿಲ್ಲ ಎಂದು ಟೀಕೆಗಳ ಸುರಿಮಳೆಯನ್ನು ನಾವು ಕೊಡಬೇಕಾ? ನಾವು ಯೋಚನೆ ಮಾಡಬೇಕು ಇವತ್ತು ಒಟ್ಟು ಈ ಒಂದು ಪೂರಕವಾದ ಬಜೆಟ್ ನಲ್ಲಿ 28 ಇಲಾಖೆಗಳಲ್ಲೂ ಕೂಡ ಒಂದೊಂದರಲ್ಲೂ ಕೂಡ ಈ ರಾಜ್ಯದಲ್ಲಿ ತೆರಿಗೆಯಿಂದ ಸಂಗ್ರಹವಾದ ಹಣವನ್ನು ಹೇಗೆ ಖರ್ಚು ಮಾಡುತ್ತಿದ್ದೇವೆ ಎನ್ನುವುದನ್ನು ಮೊದಲನೇ ಕಂತಿನ ಬಜೆಟ್ ನಲ್ಲಿ ಸುಮಾರು 45 ಸಾವಿರ ಕೋಟಿಯಲ್ಲಿ ತಿಳಿಸಿ, ಇವತ್ತು ಎರಡನೇ ಕಂತಿನಲ್ಲಿ ಇನ್ನೂ ನನಗೆ ಈ ಒಂದು ರಾಜ್ಯದ ಅಭಿವೃದ್ಧಿಯನ್ನು ಮಾಡಬೇಕೆಂದರೆ ಸುಮಾರು ಆರು ಸಾವಿರ ಕೋಟಿ ಹಣದ ಅಗತ್ಯತೆ ಇರುವಂಥದ್ದನ್ನು, ಅವಶ್ಯಕತೆ ಇರುವಂಥದ್ದನ್ನು ವಿಷದವಾಗಿ ಟಿಪ್ಪಣಿಗಳ ಸಹಿತ ನಮ್ಮ ಮುಂದೆ ಇಟ್ಟಿದ್ದಾರೆ ಇದರಲ್ಲಿ ನಾನು ಒಂದು ಅಂಶವನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ ಬಹುಶಃ ಆರ್ಥಿಕ ಮಂತ್ರಿಗಳಾಗಿದ್ದಂಥ ಸಿದ್ಧರಾಮಯ್ಯನವರು ಹೇಳಿದರು, ನಾನು ಕೂಡ ಬಜೆಟ್ ಮಂಡನೆ ಮಾಡುವಂಥ ಸಂದರ್ಭದಲ್ಲಿ ಬೇಕಾದಷ್ಟು ರೀತಿಯಲ್ಲಿ ಯೋಚನೆಯನ್ನು ಮಾಡಿದ್ದೇನೆ, ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದೇನೆ, ಅವರ ಜೊತೆ ಸಮಗ್ರವಾಗಿ ಈ ರಾಜ್ಯಕ್ಕೆ ಏನೇನು ಹಣವನ್ನು ಒದಗಿಸಬೇಕಾಗಿದೆ ಎನ್ನುವಂಥದ್ದನ್ನು ಮಾಡಿದ್ದೇನೆ ಎಂದು ಅವರು ಕೂಡ ಈ ಪೂರಕ ಅಂದಾಜು ಬಜೆಟ್‌ಗಳನ್ನು ಮಂಡನೆ ಮಾಡಿರಲಿಲ್ಲವೇ?

ಬಹುಶಃ ನಮ್ಮ ರಾಜ್ಯದಲ್ಲಿ ಒಳ್ಳೆಯ ಆರ್ಥಿಕ ಮಂತ್ರಿಗಳು ಎನ್ನುವ ಹೆಸರನ್ನು ಅವರು ಪಡೆದಿದ್ದಾರೆ ನಾನು ಅವರ ಒಬ್ಬ ಅಭಿಮಾನಿ ಕೂಡ ಏಕೆಂದರೆ ಒಳ್ಳೆಯ ಆರ್ಥಿಕ ಮಂತ್ರಿಯಾಗಿ ಒಳ್ಳೆಯ ಕೆಲಸವನ್ನು ಅವರು ಮಾಡಿದ್ದಾರೆ ಅದಕ್ಕಿಂತ ಹೆಚ್ಚಾಗಿ ವಿಭಿನ್ನವಾಗಿ ಸನ್ಮಾನ್ಯ ಯಡಿಯೂರಪ್ಪನವರು ಮಾಡಲಿಕ್ಕೆ ಹೊರಟಿದ್ದಾರೆ ಒಂದು ರೀತಿಯಲ್ಲಿ ಸಾಧನೆ ಮಾಡಬೇಕು, ಇದುವರೆಗೂ ಸಿದ್ಧರಾಮಯ್ಯನವರು ಹೇಗೆ ಹೆಸರು ತರುವಂತೆ ಬಜೆಟ್ ಮಂಡಿಸಿದ್ದಾರೋ, ಅದಕ್ಕಿಂತಲೂ ಹೆಚ್ಚು ಹೆಸರು ತರುವಂಥಾದ್ದು, ರೈತರಿಗೆ ಅನುಕೂಲವಾಗುವಂಥಾದ್ದು, ಬಡ ಕಾರ್ಮಿಕರಿಗೆ ಅನುಕೂಲವಾಗುವಂಥಾದ್ದು ಮತ್ತು ಎಲ್ಲಾ ವರ್ಗದ ಜನರಿಗೂ ಅನುಕೂಲವಾಗುವ ಬಜೆಟ್ ತರಬೇಕೆಂದು ಅವರು ಪ್ರಯತ್ನ ಮಾಡುತ್ತಿರುವಾಗ, ಆ ಪ್ರಯತ್ನದಲ್ಲಿ ಅವರು 2ನೇ ಬಾರಿಗೆ ಯಶಸ್ವಿಯಾಗಿರುವಾಗ ನಾವು ಅವರಿಗೆ ಅಭಿನಂದನೆಗಳನ್ನು ಸಲ್ಲಿಸಬೇಕೇ? ಬೇಡವೇ? ಅದನ್ನು ನಾವು ಯೋಚಿಸಬೇಕು ಪ್ರತಿಪಕ್ಷದಲ್ಲಿ ತಾವು ಕುಳಿತಿದ್ದೀರೆಂಬ ಮಾತ್ರಕ್ಕೆ ಟೀಕೆಗಳನ್ನು ಮಾಡುವುದು ಸರಿಯಲ್ಲ ನಾವು ಓದುವುದಕ್ಕಾಗುವುದಿಲ್ಲವೆಂದರೆ, ಏಕೆ ಓದುವುದಕ್ಕಾಗುವುದಿಲ್ಲ? ಇದು ನಮ್ಮ ಕರ್ತವ್ಯ ಅಲ್ಲವೇ? 2 ಇಲಾಖೆಗಳಲ್ಲಿ, ಅಷ್ಟನ್ನೂ ಓದುವುದು ಬೇಡ, ಒಬ್ಬೊಬ್ಬರು ಓದಿದರೂ ನಾವು 224 ಜನ ಸದಸ್ಯರಿದ್ದೇವೆಂದರೆ, ಮಂತ್ರಿಗಳನ್ನು ಹೊರತುಪಡಿಸಿದರೂ, ಬಹಳಷ್ಟು ಚರ್ಚೆ ಮಾಡಬಹುದು ನಾನು ಒಂದೇ ಒಂದು ವಿಚಾರವನ್ನು ಪ್ರಸ್ತಾಪಿಸಲು ಕೊನೆಯ ಪುಟಕ್ಕೆ ಹೋಗುತ್ತಿದ್ದೇನೆ

ಶ್ರೀ ಜೆ ಸಿ ಮಾಧುಸ್ವಾಮಿ – ನಿಮ್ಮ ಮೇಲಿದ್ದ ಅನುಮಾನಗಳೆಲ್ಲವೂ ಪರಿಹಾರವಾಗಿವೆ ಸುಮ್ಮನೇಕೆ ಆಗಿನಿಂದಲೂ ಯಡಿಯೂರಪ್ಪನವರನ್ನು ಒಪ್ಪಿಸುವುದಕ್ಕೆ try ಮಾಡುತ್ತಿದ್ದೀರಿ? ನಿಮ್ಮ ಮೇಲೆ ಅವರಿಗೆ ಅನುಮಾನವಿಲ್ಲ, ಬಿಡಿ

ಶ್ರೀ ಹೆಚ್ ಡಿ ಬಸವರಾಜು – ನೀವೆಲ್ಲರೂ ಹಿರಿಯರಿದ್ದೀರಿ ನೀವೇನೇ ಹೇಳಿದರೂ ಅದು ನಮಗೆ ಆಶೀರ್ವಾದವೆಂದು ನಾವು ತೆಗೆದುಕೊಳ್ಳಬೇಕು ನೀವು ಮಾರ್ಗದರ್ಶನ ಮಾಡುವವರು ನಿಮ್ಮ ಮಾತುಗಳನ್ನು ಅಷ್ಟು ಹಗುರವಾಗಿ ತೆಗೆದುಕೊಳ್ಳುವುದಕ್ಕಾಗುತ್ತದೆಯೇ? ನೀವೇನೇ ಹೇಳಿದರೂ ಅದು ನಮಗೆ ಒಳ್ಳೆಯದಾಗುತ್ತದೆ ಹಾಗಾಗಿ, ನಾನು ಕೊನೆಗೆ ಪುಟಕ್ಕೆ ಬರುತ್ತೇನೆ ಎಲ್ಲವನ್ನೂ

ಓದುವುದಿಲ್ಲ ಅಭಿಯಾಚನೆ ಸಂಖ್ಯೆ 28 ನೀವು ಓದಿ ಮಾತಿಗೆ ಮುಂಚೆ ಮಾಜಿ ಸದಸ್ಯರ ಬಗ್ಗೆ ಬಹಳ ಕಳಕಳಿ ತೋರಿಸುತ್ತೀರಿ ಪ್ರಾಮಾಣಿಕವಾಗಿ ನೀವು ಮಾತನಾಡುತ್ತೀರಿ ಅದರ ಬಗ್ಗೆ ಎರಡು ಮಾತಿಲ್ಲ ಅವರು ಕರ್ನಾಟಕ ವಿಧಾನಸಭೆಯ ಮಾಜಿ ಸದಸ್ಯರ ವೈದ್ಯಕೀಯ ವೆಚ್ಚಗಳ ನಿಯಮಗಳಿಗೆ, ಸಂಬಂಧಪಟ್ಟ ಹಾಗೆ ಹೆಚ್ಚುವರಿ ಹಣವನ್ನು ಒದಗಿಸಿರಲಿಲ್ಲ ಈ ಅಂದಾಜು ಪೂರಕ ಬಜೆಟ್‌ನಲ್ಲಿ ಒದಗಿಸಿದ್ದಾರೆಂದರೆ, ನಾವು ಅವರನ್ನು ಅಭಿನಂದಿಸುವುದು ಬೇಡವೇ? Vote on Account ಮುಗಿಯುವ ಸಂದರ್ಭ ಬಂದು, ಇನ್ನೊಮ್ಮೆ ಬರುವಾಗ ಆ ಬಿಲ್ಲುಗಳನ್ನೆಲ್ಲಾ ಪೆಂಡಿಂಗ್ ಇಟ್ಟು ಅನಂತರ ನಾವು ಅವರಿಗೆ ಹಣ ಮಂಜೂರು ಮಾಡುತ್ತೇವೆ ಎಂದರೆ, ನೀವು ಒಪ್ಪುತ್ತಿದ್ದೀರಾ? ಎಲ್ಲೋ ಒಂದು ಸಲ ನೀವು ಹೇಳಬಹುದು, ನಾವು main Budget ಮೇಲೆ discuss ಮಾಡಲಿಲ್ಲ ಈಗ ಏಕೆ ತೆಗೆದುಕೊಂಡುಬಿಟ್ಟಿರಿ? ಅದರಲ್ಲಿ ಸೇರಿಸಬಹುದಾಗಿತ್ತು ಎಂದು ಸೇರಿಸುವುದಕ್ಕಾಗಲಿಲ್ಲ ಅದಕ್ಕೆ ತಾನೇ ಈ ಎರಡನೇ ಪೂರಕ ಬಜೆಟ್ ತಂದಿರುವುದು ಸೇರಿಸುವುದಕ್ಕೆ ಆಗದಿದ್ದುದರಿಂದಲೇ ತಾನೇ ತಂದಿರುವುದು ತದನಂತರ, ನಾವು ಅನಮೋದನೆ ಕೊಡಬೇಕಲ್ಲವೇ? ಅದರಲ್ಲಿ ಅನುಮೋದನೆ ಕೊಡುವುದಕ್ಕಿಂಧ ಮುಂಚೆ

ಚೇರ್ಮನ್ – ಬಸವರಾಜುರವರೇ ನೀವು ಅವರಿಗೆ ಉತ್ತರ ಕೊಡುವುದಕ್ಕೆ ಹೋಗಬೇಡಿ ನೀವು ನೇರವಾಗಿ ನನಗೆ ಕೊಡಿ

ಶ್ರೀ ಹೆಚ್ ಡಿ ಬಸವರಾಜು – ನಾನು ಖಂಡಿತವಾಗಿಯೂ ಅವರಿಗೆ ಉತ್ತರ ಕೊಡುತ್ತಿಲ್ಲ ಅವರ ಮನಸ್ಸಿನಲ್ಲಿ ಎಲ್ಲೋ ಒಂದಿಷ್ಟು ಶಂಕೆಗಳಿವೆ ಆ ಶಂಕೆಗಳು ಪರಿಹಾರ ಮಾಡಲು ಪ್ರಯತ್ನಿಸುತ್ತಿದ್ದೇನೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ .– ಇಲ್ಲ, ನಾವು ತೀರ್ಮಾನಕ್ಕೆ ಬಂದಿದ್ದೇವೆ ಯಡಿಯೂರಪ್ಪನವರು ಇನ್ನು ಉತ್ತರ ಕೊಡುವುದು ಬೇಡ, ಸಾಕು! We are convinced

ಶ್ರೀ ಹೆಚ್ ಡಿ ಬಸವರಾಜು – ಹಾಗಲ್ಲ ನೀವು ಇಷ್ಟು ಜನರು ಬರೀ ಟೀಕೆಗಳ ಸುರಿಮಳೆಯನ್ನೇ ಸುರಿಸಿದ್ದೀರಿ ಅದರಲ್ಲಿ ಒಬ್ಬರಾದರೂ ಒಪ್ಪುವಂತಹ ವಿಚಾರವನ್ನು ಹೇಳಿದ್ದಾರೆಯೇ? ನೀವು ಹೇಳಿದ್ದರೆ, ನಾನು ನಿಂತುಕೊಂಡು ನಿಜವಾಗಿಯೂ ಮಾತನಾಡುತ್ತಿರಲಿಲ್ಲ ಯಡಿಯೂರಪ್ಪನವರು ಪೂರಕ ಬಜೆಟ್ ತಂದಿದ್ದಾರೆ, ಇದರಲ್ಲಿ ನಾವು ಒಪ್ಪುವಂತಹ ವಿಚಾರಗಳಿವೆ ಕೊನೆಯ ಪುಟದಲ್ಲಿರುವುದನ್ನು ಹೇಳಿದೆ ಮೊದಲನೆಯ ಪುಟ ಬೇಡ ಮೊದಲನೆಯದು ಬೇಕಾದಷ್ಟು ಇದೆ ಪೂರಕ ಬಜೆಟ್‌ನಲ್ಲಿ ಏನು ಹೇಳುತ್ತಾರೆ ವಿಧಾನಸಭೆಯ ಮಾಜಿ ಸದಸ್ಯರು ವಿಧಾನ ಪರಿಷತ್ತಿನ ಮಾಜಿ ಸದಸ್ಯರ ವೈದ್ಯಕೀಯ ವೆಚ್ಚಗಳನ್ನು ಭರಿಸುವುದಕ್ಕೆ ಅನುಮೋದನೆ ಕೊಡುವುದು ಬೇಡವೇ? ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುವುದು ಬೇಡವೇ? ಇದರತ್ತ ಗಮನ ಕೊಡುವುದು ಬೇಡವೇ? ಇದರ ಬಗ್ಗೆ ನಾವು ಟೀಕೆ ಮಾಡುವುದಕ್ಕಾಗುತ್ತದೆಯೇ? ಅದು ನಂಬರ್ 1

ಶ್ರೀ ಜೆ ಸಿ ಮಾಧುಸ್ವಾಮಿ .– ಅದು ನಿಯಮವಾಗಿ ಎಷ್ಟು ದಿವಸವಾಯಿತು? ಬಜೆಟ್ ಮಾಡಬೇಕಾದರೆ, ಏಕೆ ದುಡ್ಡು ಇಟ್ಟುಕೊಳ್ಳಲಿಲ್ಲ? ನಿನ್ನೆ ದಿವಸ ನಿಯಮ ಮಾಡಿದಿರಾ?- ಯಾರಾದರೂ spouses of deceased MLAs family ಗೆ Medical Reimbursement ಅನ್ನು ನಿನ್ನೆ ದಿವಸ ಮಾಡಿದಿರಾ? ಕಾನೂನು ಮಾಡಿದ್ದು ಯಾವಾಗ? ಅದನ್ನು original budget ನಲ್ಲಿ ಏಕೆ ಇಟ್ಟಿಲ್ಲ? ಇಲ್ಲಿ ಏಕೆ ಬಂತು? ಅದು ನಮ್ಮ ಚರ್ಚೆ

ಶ್ರೀ ಹೆಚ್ ಡಿ ಬಸವರಾಜು – ಈಗ ಒಂದು ಮಾತನ್ನು ಹೇಳುತ್ತೇನೆ ಇದನ್ನು ಬ್ಯಾಕ್‌ಲಾಗ್ ಎಂದು ಇಟ್ಟುಕೊಳ್ಳೋಣ ಈಗ ನಾವು ಎಷ್ಟೋ ವರ್ಗದವರಿಗೆ ಕೆಲಸ ಕೊಡುತ್ತೇವೆ ಎಂದು ಹೇಳಿ, ಸಂದರ್ಭದಲ್ಲಿ ಕೊಡುವುದಕ್ಕಾಗಲಿಲ್ಲ ಅನಂತರವಾದರೂ ಪ್ರಯತ್ನ ಮಾಡಬೇಕಲ್ಲವೇ? ಆ ರೀತಿ ಕೊಡುವಂಥ ಸಂದರ್ಭದಲ್ಲಿ ಆಗಲಿಲ್ಲ ಈಗಲಾದರೂ ನಾವು ಮಾಡಬೇಕಲ್ಲ ಅದಕ್ಕೋಸ್ಕರವೇ, ಅವರು ಪೂರಕ ಬಜೆಟ್ ಕೊಟ್ಟಿರುವುದು ಅದಕ್ಕೆ ಅನುಮೋದನೆ ಕೇಳುತ್ತಿರುವುದು ಈಗ ನಾನು ಇಷ್ಟನ್ನೂ ಓದುವುದಕ್ಕೆ ಹೋಗುತ್ತಿಲ್ಲ ತಮ್ಮಲ್ಲಿರುವ ಸಂದೇಹವನ್ನು ದೂರ ಮಾಡಿ ಇವತ್ತು ಮಾನ್ಯ ಯಡಿಯೂರಪ್ಪನವರು ತುಂಬಾ ಪಾರದರ್ಶಕವಾಗಿ

ಪೂರಕ ಅಂದಾಜನ್ನು ಮಂಡಿಸಿದ್ದಾರೆ ಈಗ 5 ಲಕ್ಷ ರೂಪಾಯಿ ದೇವಸ್ಥಾನಕ್ಕೆ "ನಿಮ್ಮ ಊರಿಗೆ ಕೊಟ್ಟಿದ್ದೀರಿ" ಎಂದು ಹೇಳುತ್ತಾರೆ ಅವರು ಅದನ್ನು ಹೇಳದೇ ಮಾಡಬಹುದಾಗಿತ್ತಲ್ಲವೇ? ತಾವು ಅರ್ಥಮಂತ್ರಿಗಳಾಗಿದ್ದಿರಿ ಹೇಳದೇ ಮಾಡಬಹುದಾಗಿತ್ತಲ್ಲವೇ? ಇಲ್ಲಿ ಚರ್ಚೆಯಾಗಿ ವಿಚಾರ ತೆಗೆದುಕೊಂಡು ನಾವು ಮಾತನಾಡಿದರೆ, ಬಹುಶಃ ಪ್ರತಿಪಕ್ಷದಲ್ಲಿರುವ ನಮ್ಮ ನಾಯಕರ ಮನಸ್ಸಿಗೆ ಹಿತವಾಗಿ ಟೀಕೆ – ಟಿಪ್ಪಣಿಗಳನ್ನು ನಿಲ್ಲಿಸುವ, ಯಡಯೂರಪ್ಪನವರನ್ನು ಅಭಿನಂದಿಸುವ, ಇಲ್ಲಿ ಏನು 5,994 ಕೋಟಿ ರೂಪಾಯಿಗಳನ್ನು ಪೂರಕ ಅಂದಾಜುಗಳಲ್ಲಿ ಕೇಳಿದ್ದಾರೆ, ಅದನ್ನು ನೀವು ಒಪ್ಪುವಂತಹ, ಎಲ್ಲರೂ ಸರ್ವಸಮ್ಮತವಾಗಿ, ಒಟ್ಟಾಗಿ ಬರಲಿ ಎಂಬ ದೃಷ್ಟಿಯಿಂದ ನಾನು ಮಾತನಾಡುತ್ತಿದ್ದೇನೆಯೇ ಹೊರತು ಬೇರೆ ಯಾವ ದೃಷ್ಟಿಯಿಂದಲೂ ಇಲ್ಲ ನೀವೆಲ್ಲರೂ ಒಪ್ಪಿದ್ದೀರಿ ಎಂದರೆ, ಇನ್ನು ನಾನು ಜಾಸ್ತಿ ಚರ್ಚೆ ಮಾಡುವುದಿಲ್ಲ ಸನ್ಮಾನ್ಯ ಯಡಿಯೂರಪ್ಪನವರು ಉತ್ತರ ಕೊಡುತ್ತಾರೆ ನಾನು ಇಷ್ಟಕ್ಕೆ ನಿಲ್ಲಿಸಿ, ನೀವೆಲ್ಲರೂ ಒಪ್ಪಿರುವುದಕ್ಕೆ ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ ಮಾನ್ಯ ಯಡಿಯೂರಪ್ಪನವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ

ಶ್ರೀ ಡಿ ಕೆ ಶಿವಕುಮಾರ್ :– ಬಸವರಾಜುರವರು, ಇಷ್ಟು ಹೊತ್ತು ಮಾತನಾಡಿದರು ಅವರು ಯಡಿಯೂರಪ್ಪನವರ ಪರವಾಗಿ ಇದ್ದಾರೆಯೇ? ಅಥವಾ ಇಲ್ಲವೇ? ಅಷ್ಟು ಹೇಳಿಬಿಡಲಿ, ಸಾಕು

ಶ್ರೀ ಹೆಚ್ ಡಿ ಬಸವರಾಜು – ಆ ವಿಚಾರದಲ್ಲಿ ಶಂಕೆ ಬೇಡ ಅವರ ಪರವಾಗಿ ಇಲ್ಲವೆಂದರೆ, ನಿಮ್ಮ ಹತ್ತಿರ ಬರಬೇಕಾಗಿತ್ತು ಅಲ್ಲವೇ? ಬಂದಿದ್ದೇನೆಯೇ? ಬರಲಿಲ್ಲ

ಶ್ರೀ ಎ ಕೃಷ್ಣಪ್ಪ (ವರ್ತೂರು) – ಮಾನ್ಯ ಅಧ್ಯಕ್ಷರೇ, Page 118ರಲ್ಲಿ ಸಂಖ್ಯೆ 13", ಸರ್ಕಾರವು ಇತ್ತೀಚೆಗೆ 7 ನಗರಸಭೆಗಳು ಮತ್ತು ಒಂದು ಪುರಸಭೆಯನ್ನು ಮಹಾನಗರ ಪಾಲಿಕೆಯಲ್ಲಿ ವಿಲೀನಗೊಳಿಸಿ ಬೃಹತ್ ಬೆಂಗಳೂರು ಎಂದು ರಚಿಸುವುದಾಗಿ ಘೋಷಿಸಿದೆ ಆದುದರಿಂದ, ಮಹಾನಗರ ಪಾಲಿಕೆ ಪ್ರದೇಶದಲ್ಲಿ ಬಂಡವಾಳ ಕಾಮಗಾರಿ ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ 100 ಕೋಟಿ ರೂಪಾಯಿಗಳ ಅನುದಾನವನ್ನು ಅಭಿಯಾಚನೆಯಲ್ಲಿ ಸೇರಿಸಿದೆ" ಅಲ್ಲಾ ಸ್ವಾಮಿ,

741 ಕಿಲೋಮೀಟರ್‌ಗಳಷ್ಟು ಪ್ರದೇಶ Greater Bangalore ಗೆ ಈಗ ಸೇರಿದೆ ಬೆಳಿಗ್ಗೆ ಮೀಟಿಂಗ್ ಕರೆದರು, ರಾತ್ರಿ ಕ್ಯಾಬಿನೆಟ್‌ನಲ್ಲಿ ಪಾಸ್ ಮಾಡಿದರು, ಬೆಳಿಗ್ಗೆ ನೋಟಿಫಿಕೇಶನ್ ಆಯಿತು! ಈ ಸರ್ಕಾರಕ್ಕೆ ಏನು ತರಾತುರಿ ಇತ್ತೋ ಗೊತ್ತಿಲ್ಲ ಯಾವ ಯೋಚನೆಗಳಿಲ್ಲ, ಯೋಜನೆಗಳ ಒಂದು ಅಪ್ರೋಚ್ ಇಲ್ಲ, ತರಾತುರಿಯಲ್ಲಿ ಡಿಸೈಡ್ ಮಾಡಿದ್ದಾರೆ ಈಗ ಹಾಹಾಕಾರವಾಗಿದೆ ಮುನಿಸಿಪಾಲಿಟಿಗಳಲ್ಲಿ ಇದ್ದ ದುಡ್ಡನ್ನು ನಮ್ಮ ಕ್ಷೇತ್ರದ ಅಭಿವೃದ್ಧಿಗೆ ನಾವು ಖರ್ಚು ಮಾಡುವಂತಿಲ್ಲ, particular ಆಗಿ ಕುಡಿಯುವ ನೀರಿಗೆ ಗ್ರಾಮ ಪಂಚಾಯಿತಿಗಳಲ್ಲಿ ಏನು ದುಡ್ಡಿತ್ತು, ಬೆಂಗಳೂರು ಪೂರ್ವ ಮತ್ತು ದಕ್ಷಿಣ, ಹಾಗೆಯೇ, ಉತ್ತರ ಭಾಗದ ತಾಲ್ಲೂಕುಗಳಲ್ಲಿ, ಈ ದುಡ್ಡನ್ನು ನಾವು ಖರ್ಚು ಮಾಡುವಂತಿಲ್ಲ ಈಗ ಬಿಸಿಲಿನ ಪರಿಸ್ಥಿತಿ ಇದೆ ಅಲ್ಲಿ ಹೇಳುವವರು, ಕೇಳುವವರಿಲ್ಲ ಇವರು Greater Bangalore ಗೆ merge ಮಾಡುವವರು, ಇಚ್ಛಾನುಸಾರ, ಸ್ವೇಚ್ಛಾನುಸಾರ ಮಾಡಿದರೆ, ಹೇಗೆ? ಮಾಡಲಿ ಸರ್ಕಾರ ಇದೆ, ಇವರಿಗೆ ಅಧಿಕಾರ ಇದೆ, ಕಿಮ್ಮತ್ತು ಇಟ್ಟುಕೊಂಡಿದ್ದಾರೆ ಮಾಡಲಿ ಆದರೆ, ಇವತ್ತು ಅಲ್ಲಿ ಏನು ಸಮಸ್ಯೆಯಾಗಿದೆ ಎಂದರೆ, ಅದರಲ್ಲಿ ಏನೇನು ಕೊಡುತ್ತಾರೋ, 5–6 ಸಾವಿರ ಕೋಟಿ ಕೊಡುತ್ತಾರೆಂದು ನಿರೀಕ್ಷಿಸಿದ್ದೆವು ಒಟ್ಟಾರೆ, ಈ ಖಜಾನೆಗೆ ಬರುವ ದುಡ್ಡಿನಲ್ಲಿ highest contribution ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಪ್ರದೇಶದಿಂದ, ಅದರಲ್ಲೂ ನಮ್ಮ ಪೂರ್ವ ವರ್ತೂರು ವಿಧಾನಸಭಾ ಕ್ಷೇತ್ರದಿಂದ ಅಂದರೆ, ಬಜೆಟ್‌ನಲ್ಲಿ ಕೊಟ್ಟಿರುವ details ನನ್ನ ಹತ್ತಿರ ಇದೆ ಏನೇನು ಕೊಟ್ಟಿದ್ದಾರೆಂದು ಬಜೆಟ್ ಮೇಲೆ ಮಾತನಾಡುವಾಗ ಹೇಳೋಣ ಈಗ ಕುಡಿಯುವ ನೀರು ಇಲ್ಲ, ರಸ್ತೆಗಳಿಲ್ಲ, infrastructure ಇಲ್ಲದೇ, ಎಲ್ಲಾ Investors ಚೆನ್ನೈ ಮತ್ತು ಹೈದರಾಬಾದ್‌ಗೆ ದೌಡಾಯಿಸುತ್ತಿದ್ದಾರೆ 83 ದೇಶಗಳಿಂದ ಬಂದ ಜನರು ಇಲ್ಲಿ ಬಂಡವಾಳ ಹಾಕಬೇಕಾದಂತಹ ಜಾಗದಲ್ಲಿ ಇವತ್ತು ಪಕ್ಕದ ರಾಜ್ಯಗಳಿಗೆ ಹೋಗುತ್ತಿದ್ದಾರೆ ಮತ್ತೆ ಇವರು ಎಷ್ಟು ದಯೆ ತೋರಿಸಿದ್ದಾರೆಂದರೆ, 15–16 ಕೋಟಿ ರೂಪಾಯಿಗಳಷ್ಟು ಬಂಡವಾಳವನ್ನು ಖಜಾನೆಗೆ ತುಂಬುವಂತಹ ಪ್ರದೇಶಕ್ಕೆ ಎಂದರೆ, Greater Bangalore ಗೆ ಸುಮಾರು 496 ಕಿಲೋಮೀಟರ್‌ಗಳಷ್ಟು ಹೊಸ ಪ್ರದೇಶ ಸೇರಿದೆ ಇಲ್ಲಿ ಕೇಳಿರುವುದು ಎಷ್ಟೆಂದರೆ,

100 ಕೋಟಿ ರೂಪಾಯಿಗಳು ಇವರಿಗೇನಾದರೂ ಜನರ ಮೇಲೆ ಅಭಿಮಾನವಿದ್ದು merge ಮಾಡಿದರೋ? ಅಥವಾ ಇವರು ಬೇರೆ ಹಿತವನ್ನು ಗಮನದಲ್ಲಿಟ್ಟುಕೊಂಡು merge ಅನ್ನು ಘೋಷಿಸಿ ನಮಗೆ ಈ ಒಂದು ತಾಪತ್ರಯವನ್ನು ಸೃಷ್ಟಿಸಿದ್ದಾರೆ ಜೊತೆಗೆ, ಮುನಿಸಿಪಾಲಿಟಿಗಳಲ್ಲಿ ಇದ್ದ ದುಡ್ಡು ಏನಾಯಿತು? ಗ್ರಾಮ ಪಂಚಾಯಿತಿಗಳಲ್ಲಿ ಇದ್ದ ಹಣ ಏನಾಯಿತು? ನೀರಿಗಾಗಿ, ರಸ್ತೆಗಾಗಿ, infrastructure ಗೆ ಒಟ್ಟಾರೆ ನೀವು ಖರ್ಚು ಮಾಡುವುದಕ್ಕೆ ಇವತ್ತಿನವರೆಗೂ ಆದೇಶ ಕೊಟ್ಟಿಲ್ಲ ಅಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಲ್ಲ ಯಾರ್ಯಾರನ್ನೋ ಬೆಂಗಳೂರಿನಲ್ಲಿ ಇದ್ದವರನ್ನು ತೆಗೆದುಕೊಂಡು ಬಂದು ಅಲ್ಲಿ ಕೂರಿಸಿದ್ದಾರೆ ಅವರಿಗೆ powers ಇಲ್ಲ ನಮಗೆ powers ಇಲ್ಲವೆಂದು ಹೇಳುತ್ತಾರೆ ಕುಡಿಯುವ ನೀರಿಗೆ ಬಹಳಷ್ಟು ದೊಡ್ಡ ಹಾಹಾಕಾರವಾಗಿದೆ 94% ರೂಪಾಯಿಗಳಷ್ಟು ಹಣವನ್ನು CMC ಗೆ ಕಾವೇರಿ ನೀರಿಗಾಗಿ ದುಡ್ಡು ಕಟ್ಟಿದ ನಂತರ, ಏನು ಇವರ agreement ನಲ್ಲಿ ಇತ್ತು, ಅದರ ಪ್ರಕಾರ ಕಾವೇರಿ ನೀರಿನ connection ಕೊಡುವುದಕ್ಕಾಗಲಿಲ್ಲ ಇವತ್ತು 14–15 ಲಕ್ಷದಷ್ಟು ಒಂದೊಂದು ವಿಧಾನಸಭಾ ಕ್ಷೇತ್ರದಲ್ಲಿ ಜನರು ಕುಡಿಯುವ ನೀರಿಗಾಗಿ ಹಾಹಾಕಾರ ಪಡುತ್ತಿದ್ದಾರೆ ಮಾನ್ಯ ಅಧ್ಯಕ್ಷರೇ ಇವರು ಈ ಪೂರಕ ಬಜೆಟ್‌ನಲ್ಲಿ ಒಟ್ಟಾರೆ 100 ಕೋಟಿ ರೂಪಾಯಿಗಳನ್ನು ಕೇಳಿದ್ದಾರೆ ಏನು ಮಾಡುತ್ತಾರೆ? ಯಾವಾಗ ಮಾಡುತ್ತಾರೆ? ಅದುವರೆಗೆ ಜನರು ಬದುಕುವುದು ಹೇಗೆ? ಇವರ ಆಡಳಿತದಲ್ಲಿ ಏನಾದರೂ ಪರಿಹಾರ ಇದೆಯೇ? ಕೇಳಿ ಮೊನ್ನೆ ಎ ಕೆ ಅಂಟನಿಯವರು, Defence Minister ಬೆಂಗಳೂರಿಗೆ ಬಂದಿದ್ದಾಗ Scientist ಗಳನ್ನು ಮೀಟ್ ಮಾಡಿ ಮಾತನಾಡುವ ಕಾಲಕ್ಕೆ ಅವರು ಹೇಳಿದರು "ನಾವು ಇಲ್ಲಿ ಬೆಂಗಳೂರಿನಲ್ಲಿ ಬದುಕುವುದಕ್ಕೆ ರಕ್ಷಣೆ ಇಲ್ಲ ಎಲ್ಲಿ ನೋಡಿದರೂ ದಾರಿದೀಪಗಳಿಲ್ಲ, ಯಾರ್ಯಾರು ರಾತ್ರಿ ಶಿಫ್ಟ್‌ನಲ್ಲಿ ಬರುತ್ತಾರೆ, ಅವರನ್ನೆಲ್ಲಾ ಲೂಟಿ ಮಾಡುತ್ತಿದ್ದಾರೆ, ಸಾಯಿಸುತ್ತಿದ್ದಾರೆ, ದಾರಿದೀಪಗಳಿಲ್ಲ" ಇಂತಹ ಪರಿಸ್ಥಿತಿಯಲ್ಲಿ ಶ್ರೀಮಾನ್ ಯಡಿಯೂರಪ್ಪನವರು, ಆರ್ಥಿಕ ಮಂತ್ರಿಗಳು 100 ಕೋಟಿ ರೂಪಾಯಿಗಳನ್ನು ಇಲ್ಲಿ ಸೂಚಿಸಿದ್ದಾರೆ ಕೊಡಲೇ ಬಾರದಾಗಿತ್ತು ಆ 100 ಕೋಟಿ ರೂಪಾಯಿ ತಾನೇ ಏಕೆ ಕೊಡುತ್ತೀರಿ? Main budget ನಲ್ಲಿ ಏನೇನು

ಕೊಟ್ಟಿದ್ದೀರಿ items ಇಲ್ಲಿದೆ ಆ item ನ್ನು ಜಾರಿಮಾಡದೇ infrastructure ಮೇಲೆ ಎಷ್ಟು impact ಆಗುತ್ತದೆ ಎಂಬ ಬಗ್ಗೆ ನಾವು ವಿವರಗಳನ್ನು ಹೇಳುತ್ತೇವೆ Power ವಿಚಾರದಲ್ಲಿ ಸರ್ಕಾರವೇನಾಗಿದೆ ಎಂಬ ಬಗ್ಗೆ ಸಹ ಮಾತನಾಡೋಣ ಕುಡಿಯುವ ನೀರಿನ ಬಾಬ್ತು ಏನಾಗಿದೆ ಎಂಬುದನ್ನೂ ಹೇಳೋಣ ಕಾಂಗ್ರೆಸ್ ಸರ್ಕಾರ ಹೋದ ಮೇಲೆ flyovers ಏನಾಯಿತು ಎಂಬ ಬಗ್ಗೆ ಹೇಳೋಣ ನೀವೇನು ಇಲ್ಲಿ ತೋರಿಸಿದ್ದೀರಾ? 15–16 ಸಾವಿರ ಕೋಟಿ ರೂಪಾಯಿಗಳನ್ನು ಖಜಾನೆಗೆ ತುಂಬುವಂತಹ ಪ್ರದೇಶಕ್ಕೆ ನಿಮ್ಮ ಆದ್ಯ ಗಮನವೇನಾಗಿದೆ ಎಂದು ಮಾನ್ಯ ಯಡಿಯೂರಪ್ಪನವರು ಹೇಳಬೇಕಾಗುತ್ತದೆ ಲಕ್ಷಾಂತರ ಜನರನ್ನೇನು ತಂದು ಹೊಸ ಬದುಕು, ಹೊಸ ಚಿಂತನೆಯನ್ನು ಮಾಡಲು ಹೋಗಿ ಅವರಿಗೇನು ನಿಮ್ಮ ಆಡಳಿತದಲ್ಲಿ ಹಾಹಾಕಾರವನ್ನು ಸೃಷ್ಟಿಮಾಡಲು ಹೊರಟಿದ್ದೀರಿ ಅದನ್ನು ಹೇಳಬೇಕಾಗುತ್ತದೆ ನೂರು ಕೋಟಿಯಲ್ಲ ತೀರಾ ಕಡಿಮೆಯೆಂದರೆ ಎರಡು ಸಾವಿರ ಕೋಟಿಯನ್ನು ಈ ಬಾಬ್ತಿಗೆ ಅವರು ಹೇಳಲೇ ಬೇಕಾಗುತ್ತದೆ Main Budget ನಲ್ಲೂ ಹೇಳಿಲ್ಲ, ಅಲ್ಲಿ drainage ಗಳಿಗೇನು ಮಾಡುತ್ತೇವೆ, Power Sector ಗಳಿಗೇನು ಮಾಡುತ್ತೇವೆ, ಉದ್ಯಾನವನಗಳಿಗೇನು ಮಾಡುತ್ತೇವೆ, ಕೆರೆಗಳನ್ನು ಸರಿಮಾಡಲು ಏನು ಮಾಡುತ್ತೇವೆ ಯಾವ ಪ್ರಸ್ತಾಪಗಳೂ ಇಲ್ಲ ಇವರು ಹೇಳಿದ್ದ 3–4 items ಇಲ್ಲೇ ಇದೆ ಹಾಗೆಂದ ಮೇಲೆ ಇವರು ಈ ರೀತಿ ಕಳಕಳಿ ಇಟ್ಟುಕೊಂಡಿರುವವರು Greater Bangalore ನ್ನು ಏಕೆ declare ಮಾಡಬೇಕಾಗಿತ್ತು? ನಾವು meeting ನಲ್ಲಿ ಸುಧಾರಣೆ ಮಾಡಲು, ಒಳ್ಳೆಯ ಆಡಳಿತವನ್ನು ಕೊಡಲು, Financial resources ನ್ನು ನಮ್ಮ ಕಂಟ್ರೋಲ್‌ಗೆ ತೆಗೆದುಕೊಳ್ಳುವುದಕ್ಕೆ ಬಾಂಬೆ ಮಾದರಿಯಲ್ಲಿ ಎರಡು ಕಾರ್ಪೋರೇಷನ್‌ಗಳನ್ನು ಮಾಡಿ ಎಂದು ಹೇಳಿದೆವು ನಮ್ಮನ್ನು ಕೇಳಿದರು ಸಂಜೆ ಕ್ಯಾಬಿನೇಟ್‌ನಲ್ಲಿ ಇಟ್ಟು ಪಾಸ್ ಮಾಡಿಬಿಟ್ಟರು ಅದರ ಅರ್ಥವೇನು? ಅದಕ್ಕೆ ನಾನು ತಮ್ಮ ಮೂಲಕ ಅವರಲ್ಲಿ ಪ್ರಾರ್ಥನೆ ಮಾಡುತ್ತೇನೆ, ಕಡೆಯ ಪಕ್ಷ ನೀವು ಇದರಲ್ಲಿ ಎರಡು ಸಾವಿರ ಕೋಟಿ ಘೋಷಣೆ ಮಾಡಬೇಕು ಅಲ್ಲಿನ ಆಗುಹೋಗುಗಳಿಗೆ ತ್ವರಿತವಾಗಿ ಕಾರ್ಯಕ್ರಮಗಳನ್ನು ಹಾಕಬೇಕು ಇಲ್ಲದಿದ್ದರೆ ಬಂಡವಾಳವನ್ನು ಹಾಕುವಂತಹ

ಜನ ಇಲ್ಲಿರುವವರೂ ಬಿಟ್ಟುಹೋಗುತ್ತಿದ್ದಾರೆ ಯಾವುದು ಹೀಗೆ rise ಆಯಿತೋ ಇವರ ಕಾಲದಲ್ಲಿ ಹಾಳಾಗುತ್ತಿದೆ ಅದು ಸತ್ಯದ ಸಂಗತಿ ಬೇಕಾದರೆ ಅವರು ವಿಚಾರಣೆ ಮಾಡಿ ತಿಳಿದುಕೊಳ್ಳಿ ನಾನೇನು ಸುಳ್ಳನ್ನು ಹೇಳುತ್ತಿಲ್ಲ ಯಾವ inverstors ಇಲ್ಲಿ Delhi ನೋಡದೆಯೇ ಬೆಂಗಳೂರನ್ನು ನೋಡಲು ಓಡೋಡಿ ಬರುತ್ತಿದ್ದರು, ತಾಜ್‌ಮಹಲ್‌ಗಿಂತಾ ಬೆಂಗಳೂರೇ ಅಂದ, ಚೆಂದವೆಂದು ಬರುತ್ತಿದ್ದರು ಅವರೆಲ್ಲಾ ಇವತ್ತು ಆ ಕಡೆ ಹೋಗುತ್ತಿದ್ದಾರೆ ಚೆನ್ನೈ ಸಬರ್‌ಬನ್‌ನಲ್ಲಿ ಇವತ್ತು 7400 ರೂಪಾಯಿ ಚದರ ಅಡಿ ಇಲ್ಲಿಗೆ ಬರಬೇಕಾಗಿದ್ದ ಅಭಿವೃದ್ಧಿ ಆ ಕಡೆಗೆ ಹೋಗುತ್ತಿದೆ ನೀವು Greater Bangalore ಎಂದೇನು declare ಮಾಡಿದಿರಿ ಮನಸ್ಸಿನಲ್ಲೇನನ್ನು ಇಟ್ಟುಕೊಂಡು declare ಮಾಡಿದಿರೋ, ಎಲ್ಲಿಂದ resources ತರುತ್ತಾರೋ, resources mobilisation ಗೆ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೋ ಗೊತ್ತಿಲ್ಲ ಆದರೆ ಈಗ ತತ್‌ಕ್ಷಣ ಎರಡು ಸಾವಿರ ಕೋಟಿ ರೂಪಾಯಿಗಳನ್ನು ನೀವು ಕೊಡಬೇಕು ನಮ್ಮ ಮುನಿಸಿಪಾಲಿಟಿಗಳಲ್ಲಿ ಒಂದೊಂದರಲ್ಲಿ 20–25 ಕೋಟಿ ದುಡ್ಡು ಇತ್ತು Ending March 31 target ಇನ್ನೂ ಹತ್ತತ್ತುಕೋಟಿ ಇದೆ ಅದು ಯಾವುದನ್ನೂ ಗಮನದಲ್ಲಿಟ್ಟುಕೊಳ್ಳದೆಯೇ, ಅವರನ್ನು ಈ ರೀತಿ neglect ಮಾಡುವುದು ಸರ್ಕಾರಕ್ಕೆ ಸಾಧುವಲ್ಲ ಆದ್ದರಿಂದ ಕಡೆಯ ಪಕ್ಷ ಎರಡು ಸಾವಿರ ಕೋಟಿ ರೂಪಾಯಿಗಳನ್ನು ತೋರಿಸಿ ತತ್‌ಕ್ಷಣ ಬಿಡುಗಡೆ ಮಾಡಬೇಕೆಂದು ವಿನಂತಿಸುತ್ತೇನೆ Thank you very much

ಶ್ರೀ ಧರ್ಮಸಿಂಗ್ :– ಗ್ರೇಟರ್ ಬೆಂಗಳೂರಿನ ಬಗ್ಗೆ ಕೃಷ್ಣಪ್ಪನವರು ಹೇಳಿದ್ದಾರೆ ಇವತ್ತು 100 ಕೋಟಿ ರೂಪಾಯಿಗಳನ್ನು general ಆಗಿ ಬೆಂಗಳೂರು ನಗರದ ಕುಡಿಯುವ ನೀರಿಗಾಗಿ ಇಟ್ಟಿದ್ದೇವೆ ಇವತ್ತು ಬೆಂಗಳೂರು ನಗರದ ಎಲ್ಲಾ ಕಡೆ ಕುಡಿಯುವ ನೀರಿಗೆ ಹಾಹಾಕಾರವಿದೆ ಸಿದ್ಧರಾಮಯ್ಯನವರು ಉಪಮುಖ್ಯಮಂತ್ರಿಗಳು, ಹಣಕಾಸಿನ ಮಂತ್ರಿಗಳಾಗಿದ್ದಾಗ ನಾವು ಜಪಾನ್ ರಾಷ್ಟ್ರದ ಬ್ಯಾಂಕ್‌ನ ಜೊತೆ ಮಾತನಾಡಿ 3384 ಕೋಟಿ ಹಣವನ್ನು ಕೊಟ್ಟಿದ್ದಾರೆ ಆಗಿನ ಕೇಂದ್ರದ ಸಚಿವರಾದ ಗುಲಾಮ್‌ನಬಿ ಆಜಾದ್‌ರವರು ಮೂರು ವರ್ಷಗಳ ಹಿಂದೆ ರಾಮಲಿಂಗಾರೆಡ್ಡಿಯವರು ಸಚಿವರಾಗಿದ್ದಾಗ ಶಂಕುಸ್ಥಾಪನೆ ಮಾಡಿದ್ದರು ಆ

ಕೆಲಸವೇನಾಯಿತು? ಇವತ್ತು ಕುಡಿಯುವ ನೀರಿನ ಸಮಸ್ಯೆ ಹಳ್ಳಿಗಳ ಪ್ರದೇಶದಲ್ಲಿ ಬೇರೆ ಪ್ರದೇಶಗಳಲ್ಲಿದೆ ಇಡೀ ರಾಷ್ಟ್ರದಲ್ಲಿ ಬೆಂಗಳೂರಿನ 6ನೇ ಸಿಟಿ This is the 6th city in the world ಎಲ್ಲಿ ಲೊಯರ್ ಲೆವಲ್‌ನಿಂದ ಹೈಯರ್ ಲೆವೆಲ್‌ಗೆ 1500 ಫೀಟ್ water ಅನ್ನು pump ಮಾಡಬೇಕಾಗಿದೆ ಇದು ರಾಕ್ ಏರಿಯಾ ನೀವಿಲ್ಲಿ ಬಾವಿತೋಡಿದರೂ ನೀರು ಬರುವುದಿಲ್ಲ ಪತ್ರಕರ್ತ ಮಿತ್ರರೂ ಇದ್ದಾರೆ, ಇದು world ನಲ್ಲಿ 6ನೇ ಸಿಟಿ ಬಾಂಬೆ is different ಅಲ್ಲಿ ಗ್ರಾವಿಟಿ ಇದೆ When I was HUD Minister I had visited Bombay ಅಲ್ಲಿ ಗ್ರಾವಿಟಿ ಇದೆ ಅಲ್ಲಿ foot ball ground ಇದ್ದಂತೆ water tank ಇದೆ ಅಲ್ಲಿ ಗ್ರಾವಿಟಿ ಇರುವುದರಿಂದ ನೀರು ಹರಿದು ಬರುತ್ತದೆ ಆದರೆ, ಇಲ್ಲಿ ಕೆಳಗಿನಿಂದ higher level ಗೆ 1500 ಫೀಟ್ ನೀರನ್ನು ಪಂಪ್ ಮಾಡಬೇಕಾಗಿದೆ ಇವತ್ತು ಪೂರಕ ಅಂದಾಜುಗಳ ಬಗ್ಗೆ ಮಾತನಾಡತಕ್ಕ ಸಂದರ್ಭದಲ್ಲಿ ಸಿದ್ಧರಾಮಯ್ಯನವರು ಸ್ಪಷ್ಟವಾದ ತಮಗೆ ಹೆಚ್ಚಿನ ಸಹಾಯ ಮಾಡಿದ್ದಾರೆ ಅವರು oppose ಮಾಡುತ್ತಿಲ್ಲ ಇವತ್ತು ತಾವು ಬಜೆಟ್‌ನಲ್ಲಿ ಬೆಂಗಳೂರಿಗೆ ಮುಂದೆ ಬರತಕ್ಕ ದಿವಸಗಳಲ್ಲೇನು ಅಪಾಯವಾಗುತ್ತಿದೆ, ಎಷ್ಟು ಜನಸಂಖ್ಯೆ ಬೆಳೆಯುತ್ತಿದೆ ಅದಕ್ಕೇನು ಮಾಡುತ್ತಿದ್ದೀರಿ? ಜಪಾನ್‌ನಿಂದ ತಂದಂತಹ ಹಣವನ್ನು, ನಮ್ಮ ಕಾಲದಲ್ಲಿ ಏನು ಶಂಕು ಸ್ಥಾಪನೆ ಮಾಡಿದ್ದೇವೆ, ಇವತ್ತು ಮಹಾನಗರ ಪಾಲಿಕೆ, Bangalore Water Supply Board ಏನೂ ಕೆಲಸ ಮಾಡುತ್ತಿಲ್ಲ ಇದರ ಬಗ್ಗೆ ಅವರು ಪ್ರಸ್ತಾಪ ಮಾಡಿದರೆಂದು ನಾನು ಹೇಳುತ್ತಿದ್ದೇನೆ ಮತ್ತೆ ಮುಂದೆ ಮಾತನಾಡುತ್ತೇವೆ ನೀವೇನು ಬೆಂಗಳೂರಿನ ಬಗ್ಗೆ ಕನಸು ಕಾಣುತ್ತಿದ್ದೀರಿ ಅದರ ಬಗ್ಗೆ ಇರತಕ್ಕ ಸಮಸ್ಯೆಗಳನ್ನೂ ಕೂಡ ಬಗೆಹರಿಸುವ ಪ್ರಯತ್ನ ಮಾಡಬೇಕು

ಶ್ರೀ ಶಿವಾನಂದ ಎಸ್ ಪಾಟೀಲ್ (ಬಸವನ ಬಾಗೇವಾಡಿ) – ಮಾನ್ಯ ಅಧ್ಯಕ್ಷರೇ, ನಾನು ಕೇವಲ ಎರಡು ನಿಮಿಷದಲ್ಲಿ ಮಾನ್ಯ ಉಪಮುಖ್ಯಮಂತ್ರಿಯವರ ಗಮನಸೆಳೆಯಲು ಇಷ್ಟಪಡುತ್ತೇನೆ. ಅಭಿಯಾಚನೆ ಸಂಖ್ಯೆ 9, Co-operative department ಬಗ್ಗೆ ಹೇಳಬಯಸುತ್ತೇನೆ. ಇವತ್ತು supplementary budget ನಲ್ಲಿ ಭವಿಷ್ಯದಲ್ಲಿ ಕೊಡಬೇಕಾಗಿರುವ ಹಣದ ಬಗ್ಗೆ ಒಂದು ಪ್ರಾವಿಜನ್ ಮಾಡಿದ್ದಾರೆ

ಆದರೆ, ಈಗಾಗಲೇ ಮಾನ್ಯ ಸಿದ್ಧರಾಮಯ್ಯನವರು ಹೇಳಿದಂತೆ 2002 ರಿಂದ ಇಲ್ಲಿಯವರೆಗೆ ರಾಜ್ಯದಲ್ಲಿರುವ ಅಷ್ಟೂ ಡಿ ಸಿ ಸಿ ಬ್ಯಾಂಕುಗಳಿಗೆ ಇನ್ನೂ 450 ಕೋಟಿ ರೂಪಾಯಿ ಬಾಕಿ ಇರಬೇಕಾಗಿದೆ ಅದು inter subsidy, 2006 January ಗೆ ಬರತಕ್ಕ reimbursement ಹಣವನ್ನೂ ಇಟ್ಟುಕೊಂಡು 450 ಕೋಟಿ ಹಣವನ್ನೇನಾದರು ಕೊಟ್ಟು ಬಡ್ಡಿ ಮನ್ನಾ ಮಾಡಿದರೆ, ಸಾಲ ಮನ್ನಾ ಮಾಡಿದರೆ ಡಿ ಸಿ ಸಿ ಬ್ಯಾಂಕು ಉಳಿಯುತ್ತಿದ್ದವು ಅಥವಾ ಕೋಆಪರೇಟಿವ್ structure ಉಳಿಯುತ್ತಿದ್ದವು ಈಗ 2006 ಆದಮೇಲೆ ಸಹಕಾರಿ ಶತಮಾನೋತ್ಸವವನ್ನು ಮಾಡಲು ಹೋಗುತ್ತಿದ್ದೀರಿ 2006 ಆದಮೇಲೆ ನಾವು ಈ ಶತಮಾನೋತ್ಸವವನ್ನು ಮಾಡಿದಂತೆ, ಈ ಇಲಾಖೆಯನ್ನೇ ಸಮಾಪ್ತಿ ಮಾಡಲು ಹೋಗುತ್ತಿದ್ದೇವೆ ಎಂಬ ಭಯ ನಮ್ಮ ಮನಸ್ಸಿನಲ್ಲಿದೆ ನಾನು ಸಿದ್ಧರಾಮಯ್ಯನವರಿಗೂ ವಿನಂತಿ ಮಾಡಿಕೊಳ್ಳುತ್ತೇನೆ, ತಾವು Fiscal Responsibility Act ತಂದಿರಿ ಆದರೆ, ಯಾವಾಗಲೂ ನಬಾರ್ಡ್‌ನವರು ನಿಮ್ಮನು inter subsidy waive off ಮಾಡುವುದಾಗಲಿ, loan waive off ಮಾಡುವುದಾಗಲಿ repeatedly ನಿಮಗೆ request ಮಾಡಿಕೊಳ್ಳುತ್ತಾರೆ "ಬಜೆಟರಿ ಪ್ರಾವಿಜನ್ ಮಾಡಿ ಅನಂತರ ಬೇಕಾದರೆ ನೀವು ಇದಕ್ಕೆ ಕೈಹಾಕಿ" ಎಂದು request ಮಾಡಿಕೊಳ್ಳುತ್ತಾರೆ ಹೋದ ವರ್ಷದ್ದೇ 450 ಕೋಟಿ ರೂಪಾಯಿಗಳನ್ನು ನೀವು ಕೊಟ್ಟಿಲ್ಲ ಪುನಃ ಈ ವರ್ಷ 1950 ಕೋಟಿ ನಾವು ಕೊಡುತ್ತೇವೆಂಬ ಸಾಹಸಕ್ಕೆ ಕೈಹಾಕುತ್ತಿದ್ದೀರಿ ಆಕಸ್ಮಾತ್ ನೀವು ಏನಾದರೂ ಈ packs ನಿಂತುಹೋದರೆ ನಾಳೆ ಭವಿಷ್ಯದಲ್ಲಿ ನಾವೆಲ್ಲರೂ ಇದಕ್ಕೆ ಹೊಣೆಗಾರರಾಗುತ್ತೇವೆ ಇವತ್ತು ನಾನು ನಿಮ್ಮನ್ನು ಬೊಟ್ಟುಮಾಡಿ ಹೇಳುತ್ತಿಲ್ಲ ಇದು 2002ರಿಂದ ಉಳಿದಿರತಕ್ಕ ಹಣ ಎಸ್ ಎಂ ಕೃಷ್ಣರವರು ಮಾಡಿದಾಗಿನಿಂದಲೂ ನಾವು ಹೇಳುತ್ತಲೇ ಬಂದಿದ್ದೇವೆ ಅದರ ಜೊತೆಗೆ ಇನ್ನೊಂದು ಭಯಾನಕ ಆದೇಶವನ್ನು ಮೊನ್ನೆ ತಂದಿದ್ದಾರೆ Finance department ನವರು interest subsidy ಯನ್ನು ಸಿದ್ಧರಾಮಯ್ಯನವರಿದ್ದಾಗ 5 5% ಕೊಡುತ್ತಿದ್ದರು ಅದಕ್ಕೀಗ ನಬಾರ್ಡ್‌ಗೆ ಒಂದು ರೇಟು, own fund ಗೆ ಒಂದು ರೇಟು ಮಾಡಿದ್ದಾರೆ ನಬಾರ್ಡ್ fund ನಿಂದೇನು ಸಾಲ ಕೊಡುತ್ತೇವೆ ಅದಕ್ಕೆ 3% interest subsidy

ಕೊಡುತ್ತೇನೆಂದು ಹೇಳುತ್ತೀರಿ ಇವತ್ತು 5% ಗೆ ಹಣವನ್ನು ಇಟ್ಟುಕೊಳ್ಳುತ್ತಾರೆ? Commercial Banks ನವರು 8%, 9% deposit ಗೆ ಬಡ್ಡಿ ಹಣವನ್ನು ಕೊಡುತ್ತಿದ್ದಾರೆ ಆದರೆ, ಇವತ್ತು ನೀವು 5% ಕೊಟ್ಟು ನಾವು depositors ಗೆ ಹಣವನ್ನೇನು ಕೊಡಬೇಕು? ಡಿ ಸಿ ಸಿ ಬ್ಯಾಂಕುಗಳು ಎಷ್ಟು ಲುಕ್ಸಾನಿಗೆ ಬರುತ್ತವೆ ಎಂದು ಗಮನಿಸಬೇಕು ತಾವು ಬರತಕ್ಕ ಆಯವ್ಯಯದಲ್ಲಾದರೂ at least 450 ಕೋಟಿ ರೂಪಾಯಿಗಳನ್ನು clear ಮಾಡಿ ಭವಿಷ್ಯದಲ್ಲಿ ತಾವು ಕೊಡಬೇಕಾಗಿರುವ 1950 ಕೋಟಿ ಕೊಡದಿದ್ದರೆ ಸಹಕಾರಿ ಇಲಾಖೆಯ ಸಮಾಪ್ತಿಗೆ ತಾವೇ ಕಾರಣೀಭೂತರಾಗುತ್ತೀರಿ ಎಂಬ ಮಾತನ್ನು ನಾನು ನೇರವಾಗಿ ಸರ್ಕಾರಕ್ಕೆ ಮನದಟ್ಟಣೆ ಮಾಡಿಕೊಟ್ಟು ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) – ಮಾನ್ಯ ಅಧ್ಯಕ್ಷರೇ ಪೂರಕ ಅಂದಾಜುಗಳಲ್ಲಿ ಸಹಕಾರ ಇಲಾಖೆ ಬಗ್ಗೆಯೇ ನಾನು ಮಾತನಾಡುತ್ತಿದ್ದೇನೆ ಮಾನ್ಯ ಶಿವಾನಂದ್ ಪಾಟೀಲ್‌ರವರು ಹೇಳಿದ್ದನ್ನು ನಾನು ಸಮರ್ಥಿಸುತ್ತೇನೆ ಎಲ್ಲಾ ಬ್ಯಾಂಕ್‌ಗಳು, ಸಹಕಾರ ಸಂಘಗಳು ಮುಳುಗಿ ಹೋಗುವ ಪರಿಸ್ಥಿತಿಗೆ ಬಂದಿವೆ ಈಗ 460 ಕೋಟಿ ರೂಪಾಯಿಗಳು ಬಾಕಿ ಇವೆ ಆ ಬಾಕಿಯನ್ನು ಕೊಡುವುದಕ್ಕೆ ನೀವು ಯೋಚನೆ ಮಾಡಿದ್ದೀರಾ? ನಬಾರ್ಡ್‌ರವರು ನಮಗೆ ಎಲ್ಲಾ ರೀತಿಯ ಸಾಲವನ್ನೂ ಸಹ ನಿಲ್ಲಿಸಿದ್ದಾರೆ ಮಾನ್ಯ ಯಡಿಯೂರಪ್ಪನವರೇ ನಮ್ಮ ಬ್ಯಾಂಕ್‌ನ್ನು ನಾವು already ಮುಚ್ಚಿದ್ದೇವೆ ಒಂದೊಂದು ಜಿಲ್ಲೆ ಒಂದೊಂದು ರೀತಿಯ ಪರಿಸ್ಥಿತಿಯಲ್ಲಿವೆ ಅದನ್ನು ತಾವು ದಯವಿಟ್ಟು ಗಮನದಲ್ಲಿಟ್ಟುಕೊಳ್ಳಬೇಕು ತಾವು ಮೊದಲು ಏಪ್ರಿಲ್ 1 ರಿಂದ ಎಂದು ಹೇಳಿದ್ದೀರಿ, ಈಗ ಎರಡನೇ ತಿಂಗಳಿನಿಂದ ಎಂದು ಹೇಳುತ್ತಿದ್ದೀರಿ ಎರಡು ತಿಂಗಳು ಹಿಂದಕ್ಕೆ ಹಾಕಿದಿರಿ ಒಂದೊಂದು district ನಲ್ಲಿ ಒಂದೊಂದು ಸಮಯದಲ್ಲಿ ಸಾಲ ಕೊಡಲಾಗುತ್ತದೆ ನಮ್ಮಲ್ಲಿ ನವೆಂಬರ್‌ನಿಂದ ಸಾಲ ಕೊಡುತ್ತೇವೆ ಡಾ ನಂಜುಂಡಪ್ಪ ವರದಿಯ ಪ್ರಕಾರ ಬೀದರ್, ಗುಲ್ಬರ್ಗಾ backward district ಗಳಾಗಿವೆ ನಮ್ಮಲ್ಲಿ ನವೆಂಬರ್ 1 ರಿಂದ ಸಾಲ ಕೊಡುತ್ತೇವೆ ಸಾಲ ತೆಗೆದುಕೊಳ್ಳುವವರು ನವೆಂಬರ್ 1ಕ್ಕೆ ನಮ್ಮಲ್ಲಿ ಸಾಲ ತೆಗೆದುಕೊಳ್ಳುತ್ತಾರೆ ಕಿಸಾನ್ ಕಾರ್ಡ್‌ಗಳ ವಿಚಾರದಲ್ಲಿಯೂ ಅಷ್ಟೇ ಕಿಸಾನ್

ಕ್ರೆಡಿಟ್ ಕಾರ್ಡ್ ಇವತ್ತು ತೆಗೆದುಕೊಳ್ಳುತ್ತಾನೆ, ನಾಳೆ ವಾಪಸ್ ಕೊಡುತ್ತಾನೆ, ನಾಡಿದ್ದು ಮತ್ತೆ ತೆಗೆದುಕೊಳ್ಳುತ್ತಾರೆ ನಮ್ಮಲ್ಲಿ system ಈ ರೀತಿ ಇದೆ ಈಗ ಎರಡನೇ ತಿಂಗಳಿನಲ್ಲಿ ಎಂದರೆ ಕಷ್ಟವಾಗುತ್ತದೆ ಮೊದಲು ನಾಲ್ಕನೇ ತಿಂಗಳು ಎಂದು ಹೇಳಿದ್ದೀರಿ, ಈಗ ಎರಡನೇ ತಿಂಗಳು ಎಂದು ಹೇಳುತ್ತಿದ್ದೀರಿ ಎರಡನೇ ತಿಂಗಳು ಎಂದು ಹೇಳಿದರೆ, ಅದರ ವ್ಯಾಪ್ತಿಗೆ ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳು ಬರುವುದಿಲ್ಲ ನಮ್ಮ ಬ್ಯಾಂಕುಗಳು ಚೆನ್ನಾಗಿದ್ದರೂ ನಾವು ಅವುಗಳನ್ನು ಮುಚ್ಚುವ ಪರಿಸ್ಥಿತಿಯಲ್ಲಿದ್ದೇವೆ ಎಲ್ಲಾ ಸಹಕಾರ ಸಂಘಗಳ ಸ್ಥಿತಿಯೂ ಹಾಗೆಯೇ ಇದೆ ತಾವು ಸಾಲ ಮನ್ನಾ ಮಾಡುವ ನಿರ್ಣಯವನ್ನು ಮಾಡಿದ್ದೀರಿ ತಾವು ಒಳ್ಳೆಯ ನಿರ್ಣಯವನ್ನು ತೆಗೆದುಕೊಂಡಿದ್ದೀರಿ ಅದನ್ನು ಜಾರಿಗೆ ತನ್ನಿ ಸಾಲ ಮನ್ನಾ ಮಾಡುವುದು ಒಳ್ಳೆಯದು ಅದನ್ನು ನಾವೆಲ್ಲಾ ಸ್ವಾಗತ ಮಾಡುತ್ತೇವೆ ಸಾಲ ಮನ್ನಾ ಮಾಡುವುದಿದ್ದರೆ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡಿ ಅಥವಾ ಎಲ್ಲಾ ರೈತರಿಗೂ ಸಮಾನವಾಗಿ ಮಾಡಿ ನವೆಂಬರ್ 1 ರಿಂದ ಸಾಲ ಮನ್ನಾ ಎಂದು ನೀವು ಘೋಷಣೆ ಮಾಡಿದ್ದರೆ, ಬೀದರ್, ಗುಲ್ಬರ್ಗಾ ಮತ್ತಿತರ ಕೆಲವು ಬೇರೆ ಬೇರೆ ಖರೀಬ್ ಜಿಲ್ಲೆಗಳಿಗೆ ಅನುಕೂಲವಾಗುತ್ತದೆ ಇಲ್ಲದಿದ್ದರೆ ಆ ಜಿಲ್ಲೆಗಳ ಯಾವ ರೈತರಿಗೂ ಕೂಡ ಅನುಕೂಲವಾಗುವುದಿಲ್ಲ ಸಾಲ ಮನ್ನಾ ಘೋಷಿಸಿದ್ದರೂ ಅವರಿಗೆ ಅದರಿಂದ ಏನೂ ಉಪಯೋಗವಾಗುವುದಿಲ್ಲ ತಾವು ದಯವಿಟ್ಟು ಇದರ ಬಗ್ಗೆ ಗಮನ ಹರಿಸಬೇಕೆಂಬುದು ನನ್ನ ಭಾಷಣದ ಉದ್ದೇಶವಾಗಿದೆ

ಆ) 2006–07ನೇ ಸಾಲಿನ ಪೂರಕ ಅಂದಾಜುಗಳ [ಎರಡನೇ ಹಾಗೂ ಅಂತಿಮ ಕಂತು] ಕುರಿತು ನಡೆದ ಚರ್ಚೆಗೆ ಸರ್ಕಾರದ ಉತ್ತರ

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿ ಹಾಗೂ ಹಣಕಾಸಿನ ಸಚಿವರು) – ಮಾನ್ಯ ಅಧ್ಯಕ್ಷರೆ, ಈ ಪೂರಕ ಅಂದಾಜುಗಳ ಬಗ್ಗೆ ಪ್ರತಿಪಕ್ಷದ ನಾಯಕರಾದಂತಹ ಸನ್ಮಾನ್ಯ ಧರ್ಮಸಿಂಗ್‌ರವರು, ಮಾನ್ಯ ಸಿದ್ಧರಾಮಯ್ಯನವರು, ಮಾನ್ಯ ಮಾಧುಸ್ವಾಮಿಯವರು, ಮಾನ್ಯ ವಾಟಾಳ್ ನಾಗರಾಜ್‌ರವರು, ಮಾನ್ಯ ಶ್ರೀರಾಮರೆಡ್ಡಿಯವರು, ಮಾನ್ಯ ರಾಜೇಂದ್ರನ್‌ರವರು, ಮಾನ್ಯ ಜಯಪ್ರಕಾಶ್ ಹೆಗ್ಡೆಯವರು, ಮಾನ್ಯ ಬಸವರಾಜ್‌ರವರು, ಮಾನ್ಯ ಕೃಷ್ಣಪ್ಪನವರು, ಮಾನ್ಯ ಶಿವಾನಂದ

ಪಾಟೀಲ್‌ರವರು, ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರು ಸೇರಿದಂತೆ ಒಟ್ಟು 11 ಜನ ಸವಿಸ್ತಾರವಾಗಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ ಅನೇಕ ಇಲಾಖೆಗಳಲ್ಲಿ ಇರುವಂತಹ ಲೋಪದೋಷಗಳ ಬಗ್ಗೆ ಬೆಳಕನ್ನು ಚೆಲ್ಲುವಂತಹ ಪ್ರಯತ್ನ ಮಾಡಿದ್ದಾರೆ ಬಹುಶಃ ಇಲಾಖೆಗಳ ಬಗ್ಗೆ ಚರ್ಚೆಯಾಗುವಂತಹ ಕಾಲದಲ್ಲಿ, ನೀವೇನು ಪ್ರಮುಖವಾದಂತಹ ಸಲಹೆಗಳನ್ನು ಕೊಟ್ಟಿದ್ದೀರೋ, ಅದರ ಕಡೆಗೆ ವಿಶೇಷವಾದಂತಹ ಗಮನವನ್ನು ಕೊಡಲಾಗುತ್ತದೆ ಮಾನ್ಯ ಸದಸ್ಯರು ಬಹಳ ಉಪಯುಕ್ತವಾದಂತಹ ಸಲಹೆಗಳನ್ನು ಕೊಟ್ಟಿದ್ದಾರೆ ಅದಕ್ಕಾಗಿ ನಾನು ನಿಮಗೆಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ 2006–07ನೇ ಸಾಲಿನ ಆಯವ್ಯಯ ಪತ್ರವನ್ನು ಮಂಡಿಸಿದ ಮೇಲೆ, ರಾಜ್ಯ ಸರ್ಕಾರ ತೆರಿಗೆ ಮುಖೇನ ಹೆಚ್ಚುವರಿಯಾಗಿ ಸುಮಾರು 1100 ಕೋಟಿ ರೂಪಾಯಿಗಳನ್ನು ಸಂಗ್ರಹಿಸಿದೆ ಅಲ್ಲದೆ ಹಿಂದಿನಂತೆ ರಾಜ್ಯದ ಆರ್ಥಿಕ ಸುಸ್ಥಿತಿಯನ್ನು ನಾವು ಕಾಪಾಡಿಕೊಂಡು ಬಂದಿದ್ದೇವೆ ಇದಕ್ಕಾಗಿ ಕೇಂದ್ರ ಸರ್ಕಾರ 358 ಕೋಟಿ ರೂಪಾಯಿಗಳ ರಿಯಾಯಿತಿಯನ್ನು ನಮಗೆ ಕೊಟ್ಟಿದೆ ಈ ಹಣವನ್ನು ಸಾಲ ಕಟ್ಟುವುದಕ್ಕೆ ಉಪಯೋಗ ಮಾಡದೇ ಇತರೆ ಅಭಿವೃದ್ಧಿ ಕಾರ್ಯಗಳಿಗೆ ನಾವು ಉಪಯೋಗಿಸುವಂತಹ ಅವಕಾಶ ಸಿಕ್ಕಿದೆ ಒಂದು ಮಾತನ್ನು ನಾನು ಸ್ಪಷ್ಟ ಮಾಡಲಿಕ್ಕೆ ಇಚ್ಛೆಪಡುತ್ತೇನೆ ಸನ್ಮಾನ್ಯ ಸಿದ್ಧರಾಮಯ್ಯನವರೇ ಕಳೆದ ವರ್ಷಕ್ಕೆ ಹೋಲಿಸಿದರೆ, ಕೇಂದ್ರ ಸರ್ಕಾರದಿಂದ ಬಂದಿರುವಂತಹ ಹೆಚ್ಚಿನ ಹಣ, ತೆರಿಗೆ ಪಾಲು, ಕೇವಲ 400 ಕೋಟಿ ರೂಪಾಯಿಗಳು ಮಾತ್ರ. ಇದಲ್ಲದೇ ಇಡೀ ರಾಷ್ಟ್ರದಲ್ಲಿ ತೆರಿಗೆ ಸಂಗ್ರಹ ಹೆಚ್ಚಾಗಿದ್ದು, ಹಣಕಾಸು ಆಯೋಗದ ನಿಯಮಾವಳಿಗಳಂತೆ, ಈಗ ತಾನೇ ನಾನು ಹೇಳಿದಂತೆ, ರಾಜ್ಯ ಸರ್ಕಾರಕ್ಕೆ ಸುಮಾರು 400 ಕೋಟಿ ರೂಪಾಯಿಗಳಷ್ಟು ಹೆಚ್ಚು ಹಣ ದೊರಕಿದೆ 2005–06ನೇ ಸಾಲಿನಲ್ಲಿ, ಆಗಿದ್ದ ಮೌಲ್ಯವರ್ಧಿತ ತೆರಿಗೆ ನಷ್ಟದ ಸಂಬಂಧ 230 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರ 2006–07ನೇ ಸಾಲಿನಲ್ಲಿ ಬಿಡುಗಡೆ ಮಾಡಿದೆ ಇದಲ್ಲದೆ, ಈ ಮೌಲ್ಯವರ್ಧಿತ ತೆರಿಗೆ ನಷ್ಟದ ಕಾರಣ ಸುಮಾರು 390 ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ ಈ ರಾಜ್ಯದ ಬೆಳವಣಿಗೆ ದರ ಪೂರ್ವ ಅಂದಾಜಿನ ಬೆಳವಣಿಗೆ ದರಕ್ಕಿಂತ ಹೆಚ್ಚಾದ ಕಾರಣ, ಸುಮಾರು

600 ಕೋಟಿ ರೂಪಾಯಿಗಳ fiscal deficit margin ಹಣ ನಮಗೆ ಲಭಿಸಿದೆ ಇದಲ್ಲದೆ 2004–05ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಕಟಾಯಿಸಿಕೊಂಡಿದ್ದಂತಹ ಪ್ರಕೃತಿ ವಿಕೋಪ ನಿಧಿ 158 ಕೋಟಿ ರೂಪಾಯಿಗಳನ್ನೂ ಸಹ ಮರು ಪಡೆಯುವಲ್ಲಿ ನಮ್ಮ ಸರ್ಕಾರ ಸಫಲವಾಗಿದೆ ಕೇಂದ್ರ ಸರ್ಕಾರ ವಿವಿಧ ಯೋಜನೆ ಅಡಿಯಲ್ಲಿ ಅಂದಾಜಿಗಿಂತ ಹೆಚ್ಚಾಗಿ 238 53 ಕೋಟಿ ರೂಪಾಯಿಗಳನ್ನು ನೀಡಿದೆ ಹೀಗಾಗಿ ಎಲ್ಲಾ ಬಾಬ್ತುಗಳಿಂದ ನಮಗೆ ಒಟ್ಟು 3474 ಕೋಟಿ ರೂಪಾಯಿಗಳ ಹಣ ನಮಗೆ ಲಭ್ಯವಾಗಿದೆ ಇದಲ್ಲದೆ 2006–07ನೇ ಸಾಲಿನಲ್ಲಿ ಆಯವ್ಯಯವನ್ನು ಮಂಡಿಸುವಂತಹ ಸಂದರ್ಭದಲ್ಲಿ 500 ಕೋಟಿ ರೂಪಾಯಿಗಳನ್ನು ವೇತನ ಆಯೋಗದ ಶಿಫಾರಸ್ಸಿನಂತೆ ಮಧ್ಯಂತರ ಪರಿಹಾರವಾಗಿ ಕೊಡಲು ಮತ್ತು ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು 200 ಕೋಟಿ ರೂಪಾಯಿಗಳನ್ನು ಹಂಚಿಕೆ ಮಾಡಿದ್ದೆವು ಅದರಂತೆ ಮಧ್ಯಂತರ ಪರಿಹಾರ ನೀಡಲಾಗಿದೆ ಮತ್ತು ಖಾಲಿ ತುಂಬಲಾದ ಹುದ್ದೆಗಳಿಗೆ ನಾವು ಹಣವನ್ನು ಒದಗಿಸಿದ್ದೇವೆ ಇವೆರಡೂ ಸೇರಿ ಒಟ್ಟಿಗೆ 700 ಕೋಟಿ ರೂಪಾಯಿಗಳನ್ನು ನಾನು ಪೂರಕ ಅಂದಾಜಿನಲ್ಲಿ ಈಗಾಗಲೇ ಅಡಕ ಮಾಡಿದ್ದೇನೆ ಹೀಗಾಗಿ ನಮಗೆ ಒಟ್ಟು ಲಭ್ಯವಿರುವಂತಹ ಸಂಪನ್ಮೂಲ 4174 ಕೋಟಿ ರೂಪಾಯಿಗಳು ಮಾತ್ರ. ಹಲವು ಯೋಜನೆಗಳಲ್ಲಿ ಹೆಚ್ಚಿನ ಹಣವನ್ನು ಆಯವ್ಯಯದ ಸಮಯದಲ್ಲಿ ತೋರಿಸಿದ್ದು, Revised Estimates ಸಂದರ್ಭದಲ್ಲಿ ಜಲ ನಿರ್ಮಲ ಯೋಜನೆ, ಸೃಜಲ ಯೋಜನೆ, ಈ ರೀತಿಯ ಬಾಹ್ಯ ನೆರವಿನ ಯೋಜನೆಗಳಲ್ಲಿ ಉಳಿತಾಯವಾಗುವ ಸಾಧ್ಯತೆ ಕಂಡು ಬಂದಿದ್ದು, ಈ ಎಲ್ಲಾ ಸಂಪನ್ಮೂಲಗಳನ್ನು ಬಳಸಿ ಪೂರಕ ಅಂದಾಜಿನಲ್ಲಿ ಪ್ರಸ್ತಾಪ ಮಾಡಿದ್ದೇನೆ ಪೂರಕ ಅಂದಾಜಿನಲ್ಲಿ ಕೋರಿರುವ ಪ್ರಸ್ತಾವನೆಗಳಲ್ಲಿ ಕೆಲವೊಂದು ಮುಖ್ಯವಾದ ಪ್ರಸ್ತಾವನೆಗಳನ್ನು ಈಗಾಗಲೇ ನಾವು ಪ್ರಸ್ತಾಪ ಮಾಡಿದ್ದೇವೆ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, BMTC, ಮತ್ತು ವಾಯುವ್ಯ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆ, NWKRTC, ವ್ಯಾಪ್ತಿಯಲ್ಲಿ ವಿದ್ಯಾರ್ಥಿಗಳಿಗೆ ರಿಯಾಯಿತಿ ದರದಲ್ಲಿ ಬಸ್ ಪಾಸ್‌ಗಳನ್ನು ಏನು ನೀಡಿದ್ದೆವೋ, ಅದರಲ್ಲಿ ಸರ್ಕಾರದ ನೀತಿಯಂತೆ ಬಸ್ ಪಾಸ್‌ಗಳ ವೆಚ್ಚದ ಎರಡರಷ್ಟು ಹಣವನ್ನು ಸರ್ಕಾರ ಸಬ್ಸಿಡಿ ರೂಪದಲ್ಲಿ ಈ ಸಂಸ್ಥೆಗಳಿಗೆ ನೀಡಬೇಕಾಗಿದೆ ಈ ಹಣವನ್ನು

BMTC ಸಂಸ್ಥೆಗೆ 2004–05, 2005–06, 2006–07ನೇ ಸಾಲಿನಲ್ಲಿ ಬಸ್ ಪಾಸ್ ರಿಯಾಯಿತಿ ಸಲುವಾಗಿ ನೀಡಬೇಕಾಗಿತ್ತು ಹಿಂದಿನವರು ಇದನ್ನು ಮಾಡಿರಲಿಲ್ಲ ಆಯಾ ವರ್ಷದಲ್ಲಿ ಇದನ್ನು adjust ಮಾಡಬೇಕಾಗಿತ್ತು, ಆದರೆ ಅದು ಆಗಿರಲಿಲ್ಲ ಈ ಹಿನ್ನೆಲೆಯಲ್ಲಿ BMTC ಸಂಸ್ಥೆಗೆ 87 ಕೋಟಿ 54 ಲಕ್ಷ ರೂಪಾಯಿಗಳನ್ನು ಕೊಡಲು ಪ್ರಸ್ತಾಪ ಮಾಡಿದ್ದೇನೆ ಅದೇ ರೀತಿಯಲ್ಲಿ NWKRTC ಸಂಸ್ಥೆಗೆ 57 ಕೋಟಿ 99 ಲಕ್ಷ ರೂಪಾಯಿಗಳ ಹೆಚ್ಚಿನ ಅನುದಾನವನ್ನು ನೀಡಲು ಯೋಜಿಸಲಾಗಿದೆ ಇದಲ್ಲದೆ, BMTC & NWKRTC ಸಂಸ್ಥೆಗೆ capital ಅನುದಾನವಾಗಿ 53 ಕೋಟಿ 21 ಲಕ್ಷ ರೂಪಾಯಿಗಳನ್ನು ನೀಡಲು ಯೋಜಿಸಲಾಗಿದೆ ಈ ಅನುದಾನವನ್ನು ಸದ್ಯ ಇರುವ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸಲು BMTC & NWKRTC ಗೆ ಒದಗಿಸಿಕೊಂಡು ಸಾಧ್ಯವಾಗುತ್ತದೆ 2002ನೇ ಸಾಲಿನಲ್ಲಿ ಸರ್ಕಾರ ಎಲ್ಲಾ ಬೆಳೆ ಸಾಲಗಳ ಮೇಲೆ ಇದ್ದಂತಹ ಬಡ್ಡಿಯನ್ನು ಮನ್ನಾ ಮಾಡಿದೆ ಆ ಬಗ್ಗೆ ಈಗ ನೀವೆಲ್ಲಾ ಪ್ರಸ್ತಾಪ ಮಾಡಿದಿರಿ ಈ ಸಂಬಂಧ 127 ಕೋಟಿ ರೂಪಾಯಿಗಳಲ್ಲಿ 115 ಕೋಟಿ ರೂಪಾಯಿಗಳನ್ನು ಮಾತ್ರ ನೀಡಲಾಗಿತ್ತು ಬಾಕಿ ಉಳಿದಿರುವಂತಹ 12 ಕೋಟಿ ರೂಪಾಯಿಗಳನ್ನು 2006–07ನೇ ಸಾಲಿನಲ್ಲಿ ಬಡ್ಡಿ ಮನ್ನಾ ಸಲುವಾಗಿ ನಾವು ಈಗಾಗಲೇ ಪ್ರಾವಿಷನ್ ಮಾಡಿದ್ದೇವೆ 'ದಾಮ್ ದುಪ್ಪಟು' ಯೋಜನೆ ಅಡಿಯಲ್ಲಿ ಅಸಲಿಗಿಂತ ಒಂದು ಪಟ್ಟು ಹೆಚ್ಚಾಗಿದ್ದ ಬಡ್ಡಿಯನ್ನು 2004–05ನೇ ಸಾಲಿನಲ್ಲಿ ಸರ್ಕಾರ ಮಾಡಿರಲಿಲ್ಲ ಮಾನ್ಯ ಸಿದ್ಧರಾಮಯ್ಯನವರೇ 2004–05ರಲ್ಲಿ ದಾಮ್‌ದುಪ್ಪಟು ಯೋಜನೆ ಅಡಿಯಲ್ಲಿ ಅಸಲಿಗಿಂತ ಹೆಚ್ಚಾಗಿದ್ದ ಬಡ್ಡಿಯನ್ನು ಮನ್ನಾ ಮಾಡಿದ್ದರೂ ಸಹ, ಅವತ್ತು ಸರ್ಕಾರ 49 ಕೋಟಿ ರೂಪಾಯಿಗಳನ್ನು ಸಹಕಾರ ಸಂಸ್ಥೆಗಳಿಗೆ ನೀಡಬೇಕಾಗಿತ್ತು, ಈ ಹಣದಲ್ಲಿ 24 1/2 ಕೋಟಿ ರೂಪಾಯಿಗಳನ್ನು ಮಾತ್ರ ಅವರು ನೀಡಿದ್ದರು, ಉಳಿದಂತಹ 24 1/2 ಕೋಟಿ ರೂಪಾಯಿಗಳನ್ನು ನೀಡಲು ನಾನು ಪ್ರಸ್ತಾವನೆ ಮಾಡಿದ್ದೇನೆ ಆ ಹಣವನ್ನು ಆಗಲೇ ಕೊಟ್ಟಿದ್ದರೆ ಈಗ ನಾವು ಕೊಡುವ ಪರಿಸ್ಥಿತಿ ಬರುತ್ತಿರಲಿಲ್ಲ ವಿಫಲ ಬಾವಿ ಯೋಜನೆ ಬಗ್ಗೆ ಹೇಳುವುದಾದರೆ, ನಾವು ಎಲ್ಲಿಗೆ ಹೋದರೂ ನಮಗೆ ಇದರ ದುಡ್ಡು ಬಂದಿಲ್ಲ ಎಂದು ಎಲ್ಲಾ ಕಡೆಯೂ ಕೇಳುತ್ತಲೇ ಇದ್ದರು ಮಾನ್ಯ ಧರ್ಮಸಿಂಗ್‌ರವರ ಹಿಂದಿನ ಕಾಲದಿಂದಲೂ ಸಹ ಈ ವಿಫಲ ಬಾವಿ ಯೋಜನೆ

ಅಡಿಯಲ್ಲಿ ಪರಿಹಾರದ ಹಣ ಕೊಟ್ಟಿರಲಿಲ್ಲ ಎನ್ನುವಂತಹ ಕೂಗು ಕೇಳುತ್ತಿತ್ತು ಅದಕ್ಕೋಸ್ಕರ 7 ಕೋಟಿ ರೂಪಾಯಿಗಳನ್ನು ನಾನು ಒದಗಿಸಿದ್ದೇನೆ ಇನ್ನು ಮುಂದೆ ವಿಫಲ ಬಾವಿಗಳಿಗೆ ಸಂಬಂಧಿಸಿದಂತೆ ಯಾರೂ ಹೊಸದಾಗಿ ದುಡ್ಡು ಕೇಳುವ ಪ್ರಶ್ನೆ ಇಲ್ಲ ಅದನ್ನು ಸಂಪೂರ್ಣವಾಗಿ ನಾನು clear ಮಾಡಿದ್ದೇನೆ COMARK ಸಂಸ್ಥೆಗೆ ಸಹಾಯ ನೀಡಲು ನಾನು 10 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇನೆ 2007–08ನೇ ಸಾಲಿನಲ್ಲಿ ಆಯವ್ಯಯ ಪತ್ರವನ್ನು ಮಂಡಿಸುವ ಸಂದರ್ಭದಲ್ಲಿ ರೈತರು ಸಹಕಾರ ಸಂಸ್ಥೆಗಳಿಗೆ ಪಾವತಿಸಬೇಕಾಗಿದ್ದ 25 ಸಾವಿರ ರೂಪಾಯಿಗಳವರೆಗಿನ ಬೆಳೆ ಸಾಲ ಮನ್ನಾ ಮಾಡುವುದಕ್ಕಾಗಿ 500 ಕೋಟಿ ರೂಪಾಯಿಗಳಿಗೆ ಈಗಾಗಲೇ ನಾನು provision ಮಾಡಿದ್ದೇನೆ

ಶ್ರೀ ಶಿವಾನಂದ ಎಸ್ ಪಾಟೀಲ್ – ಸಾರ್, ಆ ಹಣವನ್ನು ನೇರವಾಗಿ ಡಿ ಸಿ ಸಿ ಬ್ಯಾಂಕಿಗೆ ಕೊಡಿ

ಶ್ರೀ ಬಿ ಎಸ್ ಯಡಿಯೂರಪ್ಪ – ದಯವಿಟ್ಟು ನಾನು ಹೇಳುವುದನ್ನು ಪೂರ್ತಿಯಾಗಿ ಕೇಳಿ ಅನಂತರ ತಮ್ಮ ಅನುಮಾನಗಳು ಏನಾದರೂ ಇದ್ದರೆ, ಅದನ್ನು ಪರಿಹರಿಸಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ ಈ ಸಾಲ ಮನ್ನಾ ಯೋಜನೆ ಹೊಸದಾಗಿ ನೀಡಿದಂತಹ ಯೋಜನೆ unforeseen expenditure ಆಗಿರುವುದು ಈ ಯೋಜನೆಗೆ 2006–2007 ರಿಂದಲೆ ಸಾಲ ತೆಗೆದುಕೊಂಡವರಿಗೆ ಇದು ಅನ್ವಯವಾಗುತ್ತದೆ 2006–2007ನೇ ಸಾಲಿನಲ್ಲಿ ಸಂಪನ್ಮೂಲ ಲಭ್ಯವಿರುವುದರಿಂದ ನಾವು 500 ಕೋಟಿ ರೂಪಾಯಿಗಳನ್ನು ಸಾಲ ಮನ್ನಾ ಯೋಜನೆಗೆ ನೀಡಲು ಉದ್ದೇಶಿಸಿದ್ದೇನೆ ಇದರಿಂದ ಸಹಕಾರಿ ಸಂಸ್ಥೆಗಳು 2007–08 ನೇ ಸಾಲಿನಲ್ಲಿ ರೈತರಿಗೆ ಸಾಲ ನೀಡಲು ಸಾಧ್ಯವಾಗುತ್ತದೆ ಹಾಗೆಯೆ ಡೆಟ್ ಸರ್ವೀಸಿಂಗ್ ಕೆಬಿಜೆನಲ್ಲಿ ಸಾಲ ತೀರುವಳಿಗೋಸ್ಕರ 391 ಕೋಟಿಯನ್ನು ಕಾಲ್ ಅಪ್‌ಶನ್ ನಮಗೆ ಬಂದಿದೆ ಈಗ ಹೆಚ್ಚು ಲಭ್ಯವಿರುವುದರಿಂದ ಮುಂಚಿತವಾಗಿ ಸಾಲ ತೀರಿಸುವುದಕ್ಕೆ ಅನುಕೂಲವಾಗುತ್ತೆಂದು 2006–07ನೇ ಸಾಲಿನ ಆಯವ್ಯಯವನ್ನು ಮಂಡಿಸುವಂತಹ ಸಂದರ್ಭದಲ್ಲಿ ಮುಂಚಿತವಾಗಿ ಸಾಲ ತೀರಿಸುವುದನ್ನು ಯೋಚಿಸಿರಲಿಲ್ಲ, ಅದಕ್ಕಾಗಿ ಈ ಹಣವನ್ನು ಪ್ರಾವಿಷನ್ ಮಾಡುವ

ಪ್ರಯತ್ನವನ್ನು ಮಾಡಿದ್ದೇನೆ 2006-07ನೇ ಸಾಲಿನಲ್ಲಿ ಆಯವ್ಯಯ ಮಂಡನೆ ಮಾಡುವ ಸಂದರ್ಭದಲ್ಲಿ ಕುಡಿಯುವ ನೀರಿನ ಬಗ್ಗೆ ಪ್ರಸ್ತಾಪಿಸಿರಲಿಲ್ಲ ಕೇಂದ್ರ ಸರ್ಕಾರ ಕುಡಿಯುವ ನೀರಿನ ಸಲುವಾಗಿ ಎಷ್ಟೇ ಹೆಚ್ಚಿನ ಅನುದಾನವನ್ನು ಕೊಟ್ಟರೂ ಸಹ ರಾಜ್ಯ ಸರ್ಕಾರ ತಮ್ಮ ಪಾಲನ್ನು ಭರ್ತಿ ಮಾಡುತ್ತೇವೆನ್ನುವ ಭರವಸೆಯನ್ನು ಕೊಟ್ಟಿರಲಿಲ್ಲ ಈ ತ್ವರಿತ ನೀರಾವರಿ ಯೋಜನೆಯಡಿ, ಶಾಲೆಗಳಿಗೆ ನೀರು ಮತ್ತು ನೈರ್ಮಲ್ಯ ಒದಗಿಸುವ ಯೋಜನೆಗೆ ಕೇಂದ್ರ ಸರ್ಕಾರ 188 ಕೋಟಿ 95 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ, ಈ ಪೂರಕ ಅಂದಾಜಿನಲ್ಲಿ ಅದನ್ನು ಸೇರಿಸಿದ್ದೇವೆ ಅಂದರೆ ಕೇಂದ್ರ ಸರ್ಕಾರ ಹೆಚ್ಚು ಬಿಡುಗಡೆ ಮಾಡಿದ್ದರಿಂದ ರಾಜ್ಯ ಸರ್ಕಾರ ಹೆಚ್ಚುವರಿಯಾಗಿ ತನ್ನ ಪಾಲನ್ನು ಬಿಡುಗಡೆ ಮಾಡಬೇಕಾಗಿತ್ತು, ಹೆಚ್ಚುವರಿಯಾಗಿ 188 ಕೋಟಿ 95 ಲಕ್ಷ ರೂಪಾಯಿಗಳನ್ನು ನೀಡುವ ಪ್ರಸ್ತಾಪವನ್ನು ನಾನು ಮಾಡಿದ್ದೇನೆ ತ್ವರಿತ ನೀರಾವರಿ ಯೋಜನೆ ಬಗ್ಗೆ, ಶಾಲೆಗಳಿಗೆ ನೀರು ಮತ್ತು ನೈರ್ಮಲ್ಯ ಯೋಜನೆಗೆ ಕೇಂದ್ರ ಸರ್ಕಾರ 188 ಕೋಟಿ 75 ಲಕ್ಷ ರೂಪಾಯಿಗಳನ್ನು ಕೊಟ್ಟಿತ್ತು, ಅದನ್ನು ನಾವು ಬಿಡುಗಡೆ ಮಾಡಿದ್ದೇವೆ

ಶ್ರೀ ಸಿದ್ಧರಾಮಯ್ಯ – ಕೇಂದ್ರ ಸರ್ಕಾರ ನೀಡುವ ಅನುದಾನಕ್ಕೆ ಮ್ಯಾಚಿಂಗ್ ಗ್ರಾಂಟ್ ಇಟ್ಟಿರಲಿಲ್ಲ ಅದನ್ನು ಈಗ ಪೂರಕ ಅಂದಾಜಿನಲ್ಲಿ ತೆಗೆದುಕೊಂಡು ಬಂದಿದ್ದೀರಿ ಆದರೆ, ಕೇಂದ್ರ ಸರ್ಕಾರದಿಂದ ಕುಡಿಯುವ ನೀರಿಗೆ ಅಡಿಷನಲ್ ಆಗಿ ಎಷ್ಟು ದುಡ್ಡು ಬಂದಿದೆ ?

ಶ್ರೀ ಬಿ ಎಸ್ ಯಡಿಯೂರಪ್ಪ – ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಹಣಕ್ಕೆ ರಾಜ್ಯ ಸರ್ಕಾರ ತನ್ನ ಪಾಲಿನ 188 ಕೋಟಿ 95 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಿದೆ, ಫಿಗರ್ಸ್ ಕೊಡುತ್ತೇನೆ ಇದಲ್ಲದೇ 17 ಜಿಲ್ಲೆಗಳ ನಗರ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗಾಗಿ 5 ಕೋಟಿಯಂತೆ ನಾನು 85 ಕೋಟಿ ರೂಪಾಯಿಗಳನ್ನು ಪೂರಕ ಬೇಡಿಕೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ ನಗರ ಪ್ರದೇಶಗಳಲ್ಲಿ ರಸ್ತೆಗಳು ಸಮರ್ಪಕವಾಗಿಲ್ಲ ಇದನ್ನು ಮನಗಂಡು ಹಾಸನ, ಬಳ್ಳಾರಿ, ಗುಲ್ಬರ್ಗಾ ಮತ್ತು ಮಂಡ್ಯ ಪುರಸಭೆಗಳ ಅಭಿವೃದ್ಧಿಕಾರ್ಯವನ್ನು ತ್ವರಿತವಾಗಿ ಕೈಗೊಳ್ಳುವ ಸಲುವಾಗಿ 40 ಕೋಟಿ ರೂಪಾಯಿಯನ್ನು, ಈಗಾಗಲೇ ಪ್ರಸ್ತಾಪ ಮಾಡಿದಂತೆ ಶಿವಮೊಗ್ಗ ನಗರಸಭೆಗೆ ಹಣವನ್ನು ಬಿಡುಗಡೆ ಮಾಡಿದ್ದೇನೆ ಕೃಷಿ ಇಲಾಖೆಯಲ್ಲಿ ಮೈಕ್ರೊ

ಮ್ಯಾನೇಜ್‌ಮೆಂಟ್‌ಗೆ ಕೇಂದ್ರ ಸರ್ಕಾರ 5 ಕೋಟಿಯನ್ನು ಹೆಚ್ಚುವರಿಯಾಗಿ ನೀಡಿತ್ತು ಈ ಯೋಜನೆಯ ಅನುಷ್ಠಾನಕ್ಕೆ ರಾಜ್ಯ ಸರ್ಕಾರ ತನ್ನ ಪಾಲಿನ 55 ಕೋಟಿ 55 ಲಕ್ಷ ರೂಪಾಯಿಗಳನ್ನು ನೀಡಬೇಕಾಗಿದೆ, ಈಗ ಒಟ್ಟು ಹೆಚ್ಚುವರಿಯಾಗಿ 5 5 ಕೋಟಿ ರೂಪಾಯಿಗಳನ್ನು ನೀಡಲು ನಾನು ಪ್ರಸ್ತಾಪ ಮಾಡಿದ್ದೇನೆ ಇದಲ್ಲದೇ ಹೊಸ ಕೃಷಿ ತಂತ್ರಜ್ಞಾನವನ್ನು ನೀಡುವ ಸಲುವಾಗಿ, ಎತ್ತು, ಚಕ್ಕಡಿಗಳನ್ನು, ಉತ್ತಮ ಬೀಜಗಳನ್ನು ಸರಬರಾಜು ಮಾಡುವುದಕೋಸ್ಕರ ಹೆಚ್ಚುವರಿಯಾಗಿ ಬಂದಂತಹ 37 ಕೋಟಿ 14 ಲಕ್ಷ ರೂಪಾಯಿಗಳನ್ನು ಹೆಚ್ಚುವರಿಯಾಗಿ ನೀಡಲು ಪ್ರಸ್ತಾಪ ಮಾಡಿದ್ದೇನೆ ಈ 12ನೇ ಹಣಕಾಸು ಆಯೋಗದಿಂದ ಕೇಂದ್ರ ಸರ್ಕಾರ ಹೆಚ್ಚುವರಿಯಾಗಿ ಬಿಡುಗಡೆ ಮಾಡಿದ ಅನುದಾನ 7 32 ಕೋಟಿ ರೂಪಾಯಿಗಳನ್ನು, ಇ ಗೌರ್ನೆಸ್ ಇಲಾಖೆಗೆ ನೀಡಲು ಪ್ರಸ್ತಾಪವಾಗಿತ್ತು ಅರಣ್ಯ ಸಂರಕ್ಷಣೆಗೆ 12ನೇ ಹಣಕಾಸು ಆಯೋಗದಿಂದ 5 5 ಕೋಟಿ ರೂಪಾಯಿಗಳ ಅನುದಾನವನ್ನು ನಾವು ಪ್ರಸ್ತಾಪ ಮಾಡಿದ್ದೇನೆ ಮುಖ್ಯಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯಡಿಯಲ್ಲಿ ರಸ್ತೆಗಳನ್ನು ಸುಧಾರಣೆ ಮಾಡುವುದಕೋಸ್ಕರ 100 ಕೋಟಿ ರೂಪಾಯಿಗಳ ಪ್ರಸ್ತಾಪ ಮಾಡಿದ್ದೇನೆ ಅದರಂತೆ GMSY ಯೋಜನೆಯಲ್ಲಿಯು ಸಹ ಹೆಚ್ಚುವರಿಯಾಗಿ 82 ಕೋಟಿ 80 ಲಕ್ಷ ರೂಪಾಯಿಗಳನ್ನು ನೀಡಲು ಪ್ರಸ್ತಾಪ ಮಾಡಿದ್ದೇನೆ ತಲಕಾಡಿನಲ್ಲಿ ಪಂಚಲಿಂಗದರ್ಶನ ಕಾರ್ಯಕ್ರಮಕ್ಕಾಗಿ ತಲಕಾಡಿನ ರಸ್ತೆ ಅಭಿವೃದ್ಧಿ ಮಾಡುವುದಕೋಸ್ಕರ 8 2 ಕೋಟಿ ರೂಪಾಯಿಗಳನ್ನು ಪೂರಕ ಅಂದಾಜಿನಲ್ಲಿ ಸೇರಿಸಲಾಗಿದೆ

ಶ್ರೀ ಸಿದ್ಧರಾಮಯ್ಯ :– ಯಡಿಯೂರಪ್ಪನವರೇ 100 ಕೋಟಿ ಮುಖ್ಯಮಂತ್ರಿ ರಸ್ತೆ ಅಭಿವೃದ್ಧಿ ಇದೆಯಲ್ಲ, ಆ 100 ಕೋಟಿಯನ್ನು ಎಲ್ಲಾ ಕ್ಷೇತ್ರಕ್ಕೂ ಕೊಟ್ಟಿದ್ದೀರಾ ಅಥವಾ ಕೆಲವೇ ಕ್ಷೇತ್ರಕ್ಕೆ ಕೊಟ್ಟಿದ್ದೀರಾ ಎಂಬುದರ ಬಗ್ಗೆ ಸ್ವಲ್ಪ ವಿವರ ಕೊಟ್ಟರೆ ಒಳ್ಳೆಯದು

ಶ್ರೀ ಎ ಕೃಷ್ಣಪ್ಪ – ಅದರ ಬಗ್ಗೆ ಹಿಂದೆ ಇಲ್ಲೇ ಪ್ರಸ್ತಾಪ ಮಾಡಿ ಮುಖ್ಯಮಂತ್ರಿಗಳು, ಆಗಿರುವ ಅನ್ಯಾಯವನ್ನು ಸರಿಮಾಡುತ್ತೇನೆಂದು ಭರವಸೆಯನ್ನು ಕೊಟ್ಟರು, ಅದನ್ನು ಸರಿ ಮಾಡಲಿಲ್ಲ, ಆ ಕಡೆಗೆ ಹಣವೂ ಬರಲಿಲ್ಲ

ಶ್ರೀ ಬಿ ಎಸ್ ಯಡಿಯೂರಪ್ಪ – ಕೇಂದ್ರ ಸರ್ಕಾರ ಕುಡಿಯುವ ನೀರಿಗೆ 188 75 ಕೊಟ್ಟಿದ್ದಾರೆ accelerated drinking water supply scheme ಗೆ ಈ ಹಣ ಬಿಡುಗಡೆಯಾಗಿದೆ ಒಟ್ಟು ಮೊತ್ತ 188 ಕೋಟಿ 75 ಲಕ್ಷ

ಶ್ರೀ ಸಿದ್ಧರಾಮಯ್ಯ – ಪ್ರಶ್ನೆ ಏನೆಂದರೆ, 188 ಕೋಟಿ ಮ್ಯಾಚಿಂಗ್ ಗ್ರಾಂಟ್ ಅನ್ನು ನಮ್ಮ ಪಾಲಿನಿಂದ ಕೊಡುವುದಕ್ಕೆ ಇದರಲ್ಲಿ ನೀವು ಇಟ್ಟಿದ್ದೀರಿ, ಕೇಂದ್ರ ಸರ್ಕಾರದಿಂದ ಎಷ್ಟು ಬಂದಿದೆ?

ಶ್ರೀ ಬಿ ಎಸ್ ಯಡಿಯೂರಪ್ಪ – ಕೇಂದ್ರ ಸರ್ಕಾರದಿಂದ 188 ಕೋಟಿ 75 ಲಕ್ಷ ರೂಪಾಯಿಗಳು accelerated drinking water supply scheme ನಿಂದ ಬಂದಿದೆ

ಶ್ರೀ ಸಿದ್ಧರಾಮಯ್ಯ – ಬೇರೆ ಬೇರೆ ಸ್ಕೀಂಗಳಿಗೆ?

ಶ್ರೀ ಬಿ ಎಸ್ ಯಡಿಯೂರಪ್ಪ – ಸರ್ಕಾರದ ಕಟ್ಟಡಗಳನ್ನು ಕಟ್ಟುವುದಕೋಸ್ಕರ ಅಪೆಂಡಿಕ್ಸ್‌ಸಿನಲ್ಲಿ ಅನುಮೋದನೆಯನ್ನು ನೀಡಿದ್ದೇವೆ, ಇದರ ಸಲುವಾಗಿ 88 ಕೋಟಿ 68 ಲಕ್ಷ ರೂಪಾಯಿಗಳನ್ನು ಮೊದಲನೇ ವರ್ಷದಲ್ಲಿ ನೀಡಬೇಕಾಗಿತ್ತು, ಇದಕ್ಕೆ ನಾನು ಪೂರಕ ಅಂದಾಜಿನಲ್ಲಿ ಅವಕಾಶ ಮಾಡಿದ್ದೇನೆ ಮತ್ತೇ ಉಡುಪಿ, ಮೊಣಕಾಲ್ಮೂರು ರಸ್ತೆ ಅಭಿವೃದ್ಧಿಗೋಸ್ಕರ ಭೂ ಸ್ವಾಧೀನ ಮಾಡಿದ್ದಕ್ಕೆ ಅಪೆಂಡಿಕ್ಸ್ ಸಿ ಪ್ರಕಾರ ಕೈಗೆತ್ತಿಕೊಳ್ಳಬೇಕಾಗಿತ್ತು, ಈ ಕಾರ್ಯಕ್ರಮಕೋಸ್ಕರ 54 ಕೋಟಿ 86 ಲಕ್ಷ ರೂಪಾಯಿಗಳನ್ನು ನಾನು ಕೊಟ್ಟಿದ್ದೇನೆ ಈ ನಬಾರ್ಡ್ RIDP ಯೋಜನೆಯಡಿಯಲ್ಲಿ ರಸ್ತೆ ಕಾರ್ಯಕ್ರಮ ಕೈಗೆತ್ತಿಕೊಳ್ಳುವುದಕೋಸ್ಕರ RIDF 11 ಮತ್ತು 12 ಯೋಜನೆಗಳು ತ್ವರಿತವಾಗಿ ನಡೆಯುವುದಕೋಸ್ಕರ 130 ಕೋಟಿಗಳ ಪ್ರಸ್ತಾಪವನ್ನು ಮಾಡಿದ್ದೇನೆ ಹೀಗೆ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ಹಲವಾರು ಕಾರ್ಯಕ್ರಮಗಳಿಗಾಗಿ 2006–07ನೇ ಸಾಲಿನ ಆಯವ್ಯಯವನ್ನು ಮಂಡಿಸುವ ಸಮಯದಲ್ಲಿ 100 ಕೋಟಿ ರೂಪಾಯಿಗಳನ್ನು ಇತರೆ ಸಂಸ್ಥೆಗಳಿಂದ ಪಡೆಯುವುದಕೋಸ್ಕರ ಸರ್ಕಾರಿ ಖಾತರಿ ಕೊಡಲು ತೀರ್ಮಾನ ಮಾಡಿದ್ದೆವು ಈಗ ಸರ್ಕಾರದ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗಿರುವುದರಿಂದ IEBR ಮುಖೇನ

ಒದಗಿಸಬೇಕಾದ 100 ಕೋಟಿ ರೂಪಾಯಿಗಳನ್ನು ಹೊರತುಪಡಿಸಿ ಹೆಚ್ಚುವರಿಯಾಗಿ 111 ಕೋಟಿ ರೂಪಾಯಿಗಳನ್ನು ಸೇರಿಸಿ ಒಟ್ಟು 211 44 ಕೋಟಿ ಒದಗಿಸಲಾಗಿದೆ IEBR ಮುಖೇನ ಕೃಷ್ಣಾ ಜಲಭಾಗ್ಯ ನಿಗಮಕ್ಕೆ 115 ಕೋಟಿ ರೂಪಾಯಿಗಳು ಮತ್ತು ಕಾವೇರಿ ನೀರಾವರಿ ನಿಗಮಕ್ಕೆ 100 ಕೋಟಿ ರೂಪಾಯಿಗಳು ಬೇಕಾಗಿತ್ತು ಆದರೆ ಈಗ ಸಂಪನ್ಮೂಲ ಲಭ್ಯವಿರುವುದರಿಂದ ಸರ್ಕಾರದಿಂದ ನೇರವಾಗಿ ಅನುದಾನವನ್ನು ಕೊಡುತ್ತಿದ್ದೇವೆ, ಸಾಲ ತೆಗೆದುಕೊಳ್ಳದೇ ನಾವೇ ಕೊಟ್ಟಿದ್ದೇವೆ

ಶ್ರೀ ಸಿದ್ಧರಾಮಯ್ಯ – ದಯವಿಟ್ಟು, ನೀವು ತಪ್ಪು ತಿಳಿದುಕೊಳ್ಳಬೇಡಿ, ನೀವು ಹೇಳುವುದೆಲ್ಲಾ ಪೂರಕ ಅಂದಾಜಿನಲ್ಲಿ ಬಂದುಬಿಟ್ಟಿವೆ, ನಾವು ಹೇಳಿದ್ದಕ್ಕೆ ಸ್ವಲ್ಪ ಉತ್ತರ ಕೊಟ್ಟರೆ ಮುಗಿದುಹೋಯಿತು

ಶ್ರೀ ಬಿ ಎಸ್ ಯಡಿಯೂರಪ್ಪ – 'ತಾವೊಂದು ಪ್ರಶ್ನೆಯನ್ನು ಕೇಳುತ್ತಿದ್ದೀರಿ, ಆ ಸಮಯದಲ್ಲಿ ನೀವು ಇರಲಿಲ್ಲ, ಈ ಪೂರಕ ಅಂದಾಜು ದೊಡ್ಡ ಮೊತ್ತ ಹೇಗಾಯಿತು ಎನ್ನುವ ಪ್ರಸ್ತಾಪವನ್ನು ತಾವು ಮಾಡಿದ್ದೀರಿ 2004–05, 2005–06 ರಲ್ಲಿ ನೂರು ಪೂರಕ ಅಂದಾಜುಗಳನ್ನು ಮಂಡಿಸಲಾಯಿತು, 2006–07ರಲ್ಲಿ ಕೇವಲ ನಾವು 2 ಪೂರಕ ಅಂದಾಜನ್ನು ಮಂಡನೆ ಮಾಡಿದ್ದೇವೆ 2002–03 ನೇ ಸಾಲಿನ ಪೂರಕ ಅಂದಾಜು ಸಂಚಿತ ನಿಧಿಯಿಂದ 18 11% ಇದ್ದರೆ, 2003–04 ರಲ್ಲಿ 28 25% ಇದ್ದರೆ, 2004–05ನೇ ಸಾಲಿನಲ್ಲಿ 10 23% ಇದ್ದರೆ, 2005–06ನೇ ಸಾಲಿನಲ್ಲಿ 12 05% ಹಾಗೂ ಪ್ರಸ್ತುತ ಆರ್ಥಿಕ ವರ್ಷದಲ್ಲಿ ಪೂರಕ ಅಂದಾಜು ಸಂಚಿತ ನಿಧಿ 17 2% ಇದೆ

ಶ್ರೀ ಸಿದ್ಧರಾಮಯ್ಯ – ಬಹಳ ಸಿಂಪಲ್ ಅಲ್ಲವೆ, ಒಟ್ಟು ಖರ್ಚಿನಲ್ಲಿ 7400 ಅಂದರೆ, ಡಿವೈಡ್ ಮಾಡಿದರೆ nearly 20% ಎಂದು ಗೊತ್ತಾಗಿಬಿಡುತ್ತದೆ

ಶ್ರೀ ಬಿ ಎಸ್ ಯಡಿಯೂರಪ್ಪ – ನಾನೇ ಹೇಳುತ್ತೇನೆ ಸ್ವಾಮಿ, ಅದಕ್ಕೆ ಈ ವರ್ಷ ಸುಮಾರು 4000 ಕೋಟಿಗಳಷ್ಟು ಹೆಚ್ಚುವರಿ ಸಂಪನ್ಮೂಲ ಲಭ್ಯವಿದೆ

ಶ್ರೀ ಸಿದ್ಧರಾಮಯ್ಯ – ನೀವು ಕೊಟ್ಟಿರುವ ಅಂಕಿಅಂಶಗಳ, Expenditure Book, Annual Financial Statement ಪ್ರಕಾರ, 2005–06ನೇ ಸಾಲಿನಲ್ಲಿ

ಕೇಂದ್ರ ಸರ್ಕಾರದಿಂದ revised estimates ಗೆ ಮತ್ತೆ ಇವತ್ತಿನ revised estimates ಗೆ compare ಮಾಡಿದರೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ್ದು 7000 ಕೋಟಿಗಿಂತ ಹೆಚ್ಚಿಗೆ ಬರುತ್ತದೆ

ಶ್ರೀ ಬಿ ಎಸ್ ಯಡಿಯೂರಪ್ಪ – ಹಣಕಾಸಿನ ಸಚಿವನಾಗಿ ಜವಾಬ್ದಾರಿ ಸ್ಥಾನದಲ್ಲಿದ್ದುಕೊಂಡು, ನಾನು ಏನೇನು ಹೇಳಿದ್ದೇನೆ ಎಲ್ಲವು ದಾಖಲೆಯಲ್ಲಿದೆ, ಅಂಕಿಅಂಶಗಳನ್ನು ಯಾರು ತಿರುಚಿ ಹೇಳುವುದಕ್ಕಾಗುವುದಿಲ್ಲ ಆದುದರಿಂದ ಹಿಂದ ಪೂರಕ ಅಂದಾಜು ಮಂಡಿಸುವ ಸಮಯದಲ್ಲಿ ಹೆಚ್ಚುವರಿ ಸಂಪನ್ಮೂಲವಿರಲಿಲ್ಲವೆಂದು ಮಾತ್ರ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ ಮತ್ತೆ ನೀವು development expenditure ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೀರಿ 2005–06ನೇ ಸಾಲಿನಲ್ಲಿ 67% ಎಂದಿತ್ತು, 2006–07ನೇ ಸಾಲಿನಲ್ಲಿ 67 5% ಆಗಿದೆ, ಏಕೆಂದರೆ, ಈ ಡೆಟ್ ಸರ್ವೀಸ್, ಸಾಲ ತಿರುವಳಿ, ಪ್ಲಾನ್‌ನಲ್ಲಿ ಇದ್ದದ್ದನ್ನು ನಾನ್ ಪ್ಲಾನ್‌ಗೆ ಸೇರಿಸಲಾಗಿದೆ

ಶ್ರೀ ಸಿದ್ಧರಾಮಯ್ಯ .– ನಾನು ಬಜೆಟ್ ಮೇಲೆ ಮಾತನಾಡುವಾಗ ನಿಮಗೆ ತಂದು ತೋರಿಸುತ್ತೇನೆ Economic Survey ನಲ್ಲಿ ನೀವೇ print ಮಾಡಿ Planning Department ನವರು ಕೊಟ್ಟಿರತಕ್ಕಂತಹ ಪುಸ್ತಕ ಅದರಲ್ಲಿ ಏನು ಹೇಳಿದ್ದೀರಿ ಎಂದರೆ, 2006–07ರಲ್ಲಿ total expenditure, developmental expenditure 63% ಇದೆ ಅದು 2005–06ನೇ ಇಸವಿಯಲ್ಲಿ 62 95% ಇತ್ತು 2004–05ರಲ್ಲಿ ಅದು 56 72% ಇತ್ತು ಅಂದರೆ 6% ಜಂಪ್ ಆಗಿದ್ದು ಬರೀ 0 5% ಅಷ್ಟೇ ಆಗುವುದಲ್ಲ ಇನ್ನು ಹೆಚ್ಚಿಗೆ ಹೋಗಬೇಕಾಗಿತ್ತು ಎಂದು That is my point ಇನ್ನು ಹೆಚ್ಚಿಗೆ ಆಗಬೇಕಾಗಿತ್ತು, ಕಡಿಮೆ ಆಗಿ ಬಿಟ್ಟಿತು ಎಂದು ಹೇಳಿದೆ ಕಳೆದ ವರ್ಷಕ್ಕೂ ಈ ವರ್ಷಕ್ಕೂ ಹೆಚ್ಚಾಗಿರುವುದು ಬರೀ 0 5% ಅಷ್ಟೇ ಅದು ಇನ್ನು 6–7% ಆಗಿದ್ದರೆ ಇನ್ನು ನಮ್ಮ ಬೆಳವಣಿಗೆ ಜಾಸ್ತಿಯಾಗುತ್ತಿತ್ತು ಎಂದು ಹೇಳಿದೆ

ಶ್ರೀ ಬಿ ಎಸ್ ಯಡಿಯೂರಪ್ಪ – ನಿಮಗೆ ಗೊತ್ತಿರುವ ಹಾಗೆ, First year 12th plan ಆಗಿರುವುದರಿಂದ ಅನೇಕ plan expenditure ಗಳನ್ನು non-plan expenditure ಗೆ ಸೇರಿಸಿದ್ದೇವೆ ಇದು ನಿಮಗೆ ಗೊತ್ತಿರುವಂಥದ್ದು

ಶ್ರೀ ಸಿದ್ಧರಾಮಯ್ಯ – 11ನೇ ಪಂಚವಾರ್ಷಿಕ ಯೋಜನೆ ಪ್ರಾರಂಭವಾಗುವುದು 2007–08 ರಿಂದ, ಇದು ಕೊನೆಯ ವರ್ಷ 10ನೇ ಪಂಚವಾರ್ಷಿಕ ಯೋಜನೆಯ ಕೊನೆಯ ವರ್ಷ ಈ ಮಾರ್ಚ್ 31ಕ್ಕೆ 10ನೇ ಪಂಚವಾರ್ಷಿಕ ಯೋಜನೆ ಮುಗಿಯುತ್ತದೆ 11ನೇ ಪಂಚವಾರ್ಷಿಕ ಯೋಜನೆ ಪ್ರಾರಂಭವಾಗುವುದು 2007–08 ರಿಂದ ಅದು ಮುಂದಿನ ವರ್ಷ ಚರ್ಚೆ ಮಾಡೋಣ ಈಗ ನೀವು ತಂದಿರತಕ್ಕಂತಹ ಪೂರಕ ಅಂದಾಜು ಯಾವುದಕ್ಕೆ, ಈ current year ಗೆ ಅದಕ್ಕೋಸ್ಕರ ಇಲ್ಲಿಗೆ ಸೀಮಿತವಾಗಿ ನಾನು ಮಾತನಾಡುತ್ತಿದ್ದೇನೆ

ಶ್ರೀ ಬಿ ಎಸ್ ಯಡಿಯೂರಪ್ಪ – ನೀವು ಬಜೆಟ್ ಬಗ್ಗೆ ಮುಂದಿನ ಎಲ್ಲ ವಿಷಯಗಳನ್ನು ಮಾತನಾಡಿ, ನಾನು ನಿಮಗೆ ಹೇಳುವುದು ಇಷ್ಟೇ First year 12th plan ಆದ್ದರಿಂದ ಅನೇಕ plan expenditure ಗಳನ್ನು non-plan ನಲ್ಲಿ ಸೇರಿಸುವುದು ಸರ್ವೇ ಸಾಮಾನ್ಯವಾದುದು

ಶ್ರೀ ಸಿದ್ಧರಾಮಯ್ಯ – 11th Five Year Plan April 1 ರಿಂದ ಪ್ರಾರಂಭವಾಗುತ್ತದೆ

ಶ್ರೀ ಬಿ ಎಸ್ ಯಡಿಯೂರಪ್ಪ .– ಹೌದು 11ನೇ five year plan ಬಗ್ಗೆ ನಾನು ಹೇಳುತ್ತಿರುವುದು ನಮ್ಮ ವಿರೋಧ ಪಕ್ಷದ ನಾಯಕರು ಮಾತನಾಡಿದ ಪ್ರಕಾರ ಕೇಂದ್ರ ಸರ್ಕಾರದಿಂದ ಪ್ರವಾಹ ಪರಿಹಾರಕ್ಕೆ ಏನು ಹಣ ಬಂದಿಲ್ಲವೆಂದು ಹೇಳಿದ್ದೇನೆ, 362 ಕೋಟಿ ರೂಪಾಯಿಗಳು ಕೇಂದ್ರ ಸರ್ಕಾರದಿಂದ ಹಣ ಬಂದಿದೆ ಎಂದು ನೀವು ಹೇಳಿದಿರಿ ಕೇಂದ್ರ ಸರ್ಕಾರದಿಂದ ಹಣ ಬಂದಿದೆ ಅದಕ್ಕೆ ನಾನು ಮಾತನಾಡುವ ಕಾಲದಲ್ಲಿ ಕೃತಜ್ಞತೆಯನ್ನು ಕೂಡ ಸಲ್ಲಿಸಿದ್ದೇನೆ Supplementary Estimate ಏಕೆ ತಂದಿದ್ದೀರಿ ಎಂದು ಕೇಳಿದ್ದೀರಿ ಇಷ್ಟೊಂದು ದೊಡ್ಡ Estimate ಏಕೆ ಎಂದು ಕೇಳಿದ್ದೀರಿ ನಾನು ಈಗ ಹೇಳಿದ್ದೇನೆ ಎರಡೇ supplementary estimate ಬಂದಿರುವುದು ಇಷ್ಟು ಜಾಸ್ತಿ ಮೊತ್ತ ಏಕೆ ಆಯಿತು ಎನ್ನುವಂತಹ ಮಾತನ್ನು ಕೂಡ ಹೇಳಿದ್ದೇನೆ SC/ST ವಿದ್ಯಾರ್ಥಿಗಳಿಗೆ matching grant ಏಕೆ ನೀಡಿಲ್ಲವೆಂದು ಹೇಳಿದ್ದೀರಿ ಆದರೆ demond No 10 ಬಾಬ್ತು

ಸಂಖ್ಯೆ 56–80 ರಲ್ಲಿ ತೋರಿಸಿರುವಂತೆ ರಾಜ್ಯ ಸರ್ಕಾರದ ಪಾಲು ಸೇರಿ 32 ಕೋಟಿ 40 ಲಕ್ಷ ರೂಪಾಯಿಗಳನ್ನು SC (2) ನಲ್ಲಿ ನಾನು ಸೇರಿಸಿದ್ದೇನೆ ಮಾತನಾಡುವುದನ್ನು ಕೇಳದೇ ಇದ್ದರೆ ನಾನೇನು ಹೇಳಬೇಕು ಅವರು ಹೇಳಿದ್ದನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ

ಶ್ರೀ ಧರ್ಮಸಿಂಗ್ – Detail ಹೇಳಿದರೆ ನಾವು ಕೂಡ ಹೇಳಬೇಕಾಗುತ್ತದೆ ಇನ್ನು ಕೂಡ SC ST ಯವರಿಗೆ notice ಕೊಟ್ಟಿದ್ದಾರೆ ಆ institution ಗೆ ಇನ್ನು ಕೂಡ 25 ಕೋಟಿ ದುಡ್ಡು ಕೊಟ್ಟಿಲ್ಲ ವಿಧಾನ ಪರಿಷತ್ತಿನಲ್ಲಿ, 25 ಕೋಟಿ ಖಜಾನೆ ತುಂಬಿ ಹೋಗಿದೆ, SC ST ಯವರಿಗೆ ಕೊಡುತ್ತೇವೆಂದು ಹೇಳಿದಿರಿ, ಇನ್ನು ಕೊಟ್ಟಿಲ್ಲ ಅವರಿಗೆ ಸಂಸ್ಥೆಯಿಂದ notice ಹೋಗಿದೆ ಇದು ಒಂದು ಎರಡನೆಯದಾಗಿ ನಾವು ಹೇಳುತ್ತೇವೆಂದರೆ, ಆಗಿನ ಕಾಲದಲ್ಲಿ ಪ್ರವಾಹ ಪೀಡಿತ ಪ್ರದೇಶಕ್ಕೆ ಹೆಚ್ಚಿನ ಹಣ ಬಂದಿತ್ತು ತಾವೇ ಹೇಳಿದ್ದೀರಿ, ಎಲ್ಲಿದೆ ಹಣ ಸುಮ್ಮನೆ ಹೇಳುತ್ತಿದ್ದೀರಿ ಎಂದು ಈಗ ತಾವು ಪೂರಕ ಅಂದಾಜಿನಲ್ಲಿ ಬೆಳಗಾಂನಲ್ಲಿ ಪ್ರಸ್ತಾಪ ಮಾಡಿದ್ದೀರಿ, ಇಲ್ಲಿಯೂ ಪ್ರಸ್ತಾಪ ಮಾಡಿದಿರಿ ಕೇಂದ್ರ ಸರ್ಕಾರದಿಂದ ಪ್ರವಾಹ ಪೀಡಿತ ಪ್ರದೇಶಕ್ಕೆ, ಬರಗಾಲದ ಪರಿಸ್ಥಿತಿಗೆ, ನೀರಿನ ಬವಣೆ ಈಡೇರಿಸುವುದಕ್ಕಾಗಿ 188 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದೇನೆಂದು ಈಗ ತಾನೆ ಹೇಳಿದಿರಿ ಅದನ್ನು ನೀವು ರಿಲೀಸ್ ಮಾಡಬೇಕು ಕೇವಲ ಪತ್ರಿಕೆ ಮುಖಾಂತರ ಅಲ್ಲ ಎಲ್ಲ ಕಡೆಗೂ ನೀರಿನ ತೊಂದರೆ ಇದೆ ನಮ್ಮ ಜೇವರ್ಗಿಯ ಅಂದೋಳ ಗ್ರಾಮದಲ್ಲಿ ಶಂಕರೇಗೌಡರು ದೂರವಾಣಿ ಮಾಡಿ ಹತ್ತಾರು ಹಳ್ಳಿಗಳಿಗೆ ನೀರು ಸಿಗುತ್ತಿಲ್ಲವೆಂದು ಹೇಳಿದರು ಹೀಗೆಯೇ ನಾನು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯದರ್ಶಿಯವರಿಗೆ ದೂರವಾಣಿ ಮಾಡಿ ಹೇಳಿದ್ದೇನೆ ದುಡ್ಡು ಇಲ್ಲವೆಂದು ಹೇಳುತ್ತಿದ್ದಾರೆ ದುಡ್ಡು ಬಿಡುಗಡೆ ಮಾಡಿ ಸುಮ್ಮನೆ ನೀವು ಅಂಕಿ ಅಂಶಗಳು ಇಟ್ಟುಕೊಂಡು ಕುಳಿತರೆ ಆಗುವುದಿಲ್ಲ ದುಡ್ಡು ಬಿಡುಗಡೆ ಮಾಡಿದರೆ ಕೆಲಸ ಆಗುತ್ತದೆ

ಶ್ರೀ ಬಿ ಎಸ್ ಯಡಿಯೂರಪ್ಪ – ನಿಮ್ಮ ಸಲಹೆ ನಾನು ಒಪ್ಪುತ್ತೇನೆ ನಾವು ಇದುವರೆಗೆ ಏನು ಮಾಡಿದ್ದೇವೆ, ಮುಂದೇನು ಮಾಡಬೇಕೆಂಬ ಬಗ್ಗೆ ನಿಮ್ಮ

ಸಲಹೆಯನ್ನು ನಾನು ಗಮನಿಸಿದ್ದೇನೆ ಈಗ ಇಷ್ಟು ಮಾಡಿದ್ದೇವೆನ್ನುವಂತಹ ಸಂಗತಿಯನ್ನು ಹೇಳಿದ್ದೇನೆ ನಮ್ಮ fisheries head of account ನಲ್ಲಿ ರಸ್ತೆ ರಿಪೇರಿಯನ್ನು ನೀವು ಏಕೆ ಮಾಡುತ್ತಿದ್ದೀರಿ ಎನ್ನುವಂತಹ ಮಾತನ್ನು ನೀವು ಹೇಳಿದಿರಿ Fisheries ರಸ್ತೆಗಳನ್ನು ರಿಪೇರಿ ಮಾಡುವುದಕ್ಕೋಸ್ಕರ ಹಣ ಬೇಕು ಮೀನುಗಾರರು ಓಡಾಡುವಂತಹ ರಸ್ತೆಗಳನ್ನು ರಿಪೇರಿ ಮಾಡುವುದಕ್ಕೆ ಹಣ ಎಲ್ಲಿಂದ ತರಬೇಕು? ಅದಕ್ಕೋಸ್ಕರ ಹಣವನ್ನು ನಾವು ಖರ್ಚು ಮಾಡಿದ್ದೇವೆ ಕೆಲಸ ಮಾಡಿದ್ದೇವೆ ಹಣಕಾಸು ಆಯೋಗ ಏಕೆ ರಚನೆಯಾಗಿದೆ ಎಂದು ನೀವು ಕೇಳಿದ್ದೀರಿ ಸ್ನೇಹಿತರು ಮಾತನಾಡಿದರು ನೀವು ಏಕೆ ಖರ್ಚು ಮಾಡಿದಿರಿ, ಏನು ಮಾಡಿದಿರಿ ಎಂದು

ಶ್ರೀ ಸಿದ್ಧರಾಮಯ್ಯ .– ಹಣಕಾಸು ಆಯೋಗದ ಅಧ್ಯಕ್ಷರು ಈ ತರಹ ಹೇಳಿದ್ದಾರೆ, ಅವರು ಒಂದು statement ಕೊಟ್ಟಿದ್ದಾರೆ, ಅವರು ಯಾರು statement ಕೊಡುವುದಕ್ಕೆ ಅಂತ ಅವರು ಹೇಳಿರುವುದು

ಶ್ರೀ ಬಿ ಎಸ್ ಯಡಿಯೂರಪ್ಪ – statement ಒಂದಾಯಿತು ಅವರು statement ಕೊಟ್ಟಿದ್ದು ಸರಿ ಎಂದು ನಾನು ಹೇಳುತ್ತಿಲ್ಲ ಮಾನ್ಯ ಮಾಧುಸ್ವಾಮಿಯವರು ಮತ್ತು ಇನ್ನಿತರರು ಮಾತನಾಡುವಂತಹ ಕಾಲದಲ್ಲಿ ಹಿಂದೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ನಾನು ಕೇಳಿದ್ದು ಅವರಿಗೆ statement ಕೊಡತಕ್ಕಂತಹ ಅಧಿಕಾರ ಇಲ್ಲ ಅವರು statement ಕೊಟ್ಟಿರುವುದರಿಂದ Government should ask his resignation or the concerned Minister has to resign

ಶ್ರೀ ಬಿ ಎಸ್ ಯಡಿಯೂರಪ್ಪ – ಮಾನ್ಯ ಮಾಧುಸ್ವಾಮಿಯವರು ಮಾತನಾಡಬೇಕಾದರೆ, ಅವರು ಪ್ರಸ್ತಾಪ ಮಾಡಿದರು ನಾನು ಮಾನ್ಯ ಮಾಧುಸ್ವಾಮಿಯವರಿಗೆ ಅಷ್ಟೇ ಹೇಳುತ್ತಿದ್ದೇನೆ ಹಿಂದೆ ಎರಡು ಆಯೋಗಗಳನ್ನು ರಚನೆ ಮಾಡಿದ್ದರು

ಶ್ರೀ ಮಲ್ಲಿಕಾರ್ಜುನ ಖರ್ಗೆ – ನೀವು ಕೊಡಲಾರದ ಶಕ್ತಿ ಅವರು ಬಿಡಲಾರದ ಶಕ್ತಿ ಅದಕ್ಕೆ ಏನು ಹೇಳಬೇಕೋ ಹೇಳಿದ್ದಾರೆ

ಶ್ರೀ ಬಿ ಎಸ್ ಯಡಿಯೂರಪ್ಪ – ಅವರು ಕೇಳಿದರು, ಹಿಂದೆ ಎರಡು ಆಯೋಗಗಳನ್ನು ರಚನೆ ಮಾಡಿದ್ದರು, ಈ ಆಯೋಗ ಸ್ಥಳೀಯ ಸಂಸ್ಥೆಗಳಿಗೆ ಎಷ್ಟು ಹಣ ನೀಡಬೇಕೆನ್ನುವುದನ್ನು ನಿರ್ಧಾರ ಮಾಡುತ್ತದೆ ಅದಕ್ಕಾಗಿ ಆಯವ್ಯಯವನ್ನು ರಚನೆ ಮಾಡುವಂತಹ ಪದ್ಧತಿ ಇದೆ ಅದರಂತೆ ರಚನೆ ಮಾಡಿದ್ದೇವೆ ಮೇವಿಗಾಗಿ ನೀವು ಒಂದು ರೂಪಾಯಿಯನ್ನೂ ಖರ್ಚು ಮಾಡಿಲ್ಲವೆಂದು ಹೇಳಿದ್ದೀರಿ 50 ಲಕ್ಷ ರೂಪಾಯಿಗಳನ್ನು ಬಿಡುಗಡೆ, ಮಾಡಿದ್ದೇವೆ ಪ್ರವಾಹದ ಸಲುವಾಗಿ payment ಆಗಿಲ್ಲವೆಂದು ಹೇಳಿದ್ದೀರಿ ನಾವು ಹಣ ಬಿಡುಗಡೆ ಮಾಡಿದ್ದೇವೆ PWD ಮತ್ತು irrigation ನಲ್ಲಿ ಎಷ್ಟು ಬಿಲ್ಲುಗಳು ಬಾಕಿ ಇದ್ದವು, ಆ ಬಾಕಿ ಬಿಲ್ಲುಗಳನ್ನು ಪಾವತಿ ಮಾಡುವುದಕ್ಕೋಸ್ಕರ ನಾನು ಹಣವನ್ನು ಬಿಡುಗಡೆ ಮಾಡಿದ್ದೇನೆ ವಸತಿ ಬಗ್ಗೆ ನಿಮ್ಮ ಪಾಲಿಸಿ ಏನು ಎಂದು ಯಾರೋ ಪ್ರಶ್ನೆ ಮಾಡಿದರು, 150 ಕೋಟಿ ರೂಪಾಯಿಗಳನ್ನು ನಾವು SC head ನಲ್ಲಿ ಈಗಾಗಲೇ provision ಮಾಡಿದ್ದೇವೆ ಲಾಟರಿಗೆ ಏಕೆ ಹಣವನ್ನು ನೀಡಲಾಗಿದೆ ಎಂದು ಕೇಳಿದ್ದೀರಿ, ಲಾಟರಿಗಾಗಿ SC (2) ನಲ್ಲಿ ಹಣ ಒದಗಿಸಿಲ್ಲ ತಪ್ಪು ಗ್ರಹಿಕೆಯಿಂದ ಅದು ಆಗಿರಬಹುದು ನೀವು ಯಾರೋ ಪ್ರಶ್ನೆಯನ್ನು ಕೇಳಿದಿರಿ, energy sector ಗೆ 300 ಕೋಟಿ ರೂಪಾಯಿ ನೀಡುವುದರ ಬಗ್ಗೆ ನಾನು ಈಗಾಗಲೇ ಪ್ರಸ್ತಾಪ ಮಾಡಿದ್ದೇನೆ 2006–07ನೇ ಸಾಲಿನಲ್ಲಿ ಆಯವ್ಯಯ ಮಂಡಿಸಿದಾಗ ಅನೇಕ ಸದಸ್ಯರು power sector ಗೆ capital investment ನಲ್ಲಿ ಹಣ ನೀಡಿಲ್ಲವೆಂದು ತಿಳಿಸಿದರು ಆದರೆ ನಾನು ಹಣಕಾಸು ಲಭ್ಯವಾದರೆ 2006–07ನೇ ಸಾಲಿನಲ್ಲಿ power sector ನಲ್ಲಿ capital investment ಗೆ ಹಣ ನೀಡುತ್ತೇನೆ ಎಂದು ಹೇಳಿದ್ದೆ ಅದರಂತೆ ಹಣಕಾಸು ಲಭ್ಯವಿರುವುದರಿಂದ 300 ಕೋಟಿ ರೂಪಾಯಿಗಳನ್ನು ಅದಕ್ಕೆ ಕೊಡುವುದಕ್ಕೋಸ್ಕರ ನಾನು ತೆಗೆದು ಇಟ್ಟಿದ್ದೇನೆ ಮಾನ್ಯ ಸಿದ್ಧರಾಮಯ್ಯನವರು electronic media ದಲ್ಲಿ ಚರ್ಚೆಯಾಗುವಂತಹ ಸಂದರ್ಭದಲ್ಲಿ ತಾವು ಒಂದು ವಿಷಯವನ್ನು ಪ್ರಸ್ತಾಪ ಮಾಡಿದಿರಿ ಅದು

ಯಾವುದೆಂದರೆ major & medium irrigation works ಗೆ ಹಣ ಕಡಿಮೆ ಆಗಿದೆ ಎನ್ನುವಂತಹ ಮಾತನ್ನು ಹೇಳಿದಿರಿ ನಿಮಗೆ ನಾನು ಅಂಕಿ ಅಂಶಗಳನ್ನು ಹೇಳುತ್ತೇನೆ ಬಹಳಷ್ಟು ಚರ್ಚೆಯಾಗುತ್ತಿದೆ Irrigation works ಗೆ ಈ ವರ್ಷ ಹಣ ಕಡಿಮೆ ಕೊಟ್ಟಿದ್ದೀರಿ ಎಂದು ಹೇಳಿದ್ದೀರಿ 2003–04ರಲ್ಲಿ irrigation ನ major & medium irrigation works ಗೆ irrigation ಗೆ 692 ಕೋಟಿ ಕೋಟಿ 72 ಲಕ್ಷ ರೂಪಾಯಿಗಳು ಇದ್ದವು 2004–05ರಲ್ಲಿ 1080 ಕೋಟಿ 55 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದರು 2005–06ರಲ್ಲಿ 1963 94 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದರು 2006–07ರಲ್ಲಿ 2426 69 ಕೋಟಿ ರೂಪಾಯಿಗಳು ಬಿಡುಗಡೆ ಆಗಿದ್ದವು 2007–08ರಲ್ಲಿ 2863 ಕೋಟಿ 64 ಲಕ್ಷ ರೂಪಾಯಿಗಳನ್ನು provision ಮಾಡಿದ್ದೇವೆ

ಶ್ರೀ ಸಿದ್ಧರಾಮಯ್ಯ – ಈಗ ನಾನು ನಿಮಗೆ ಪ್ರಶ್ನೆ ಕೇಳಬೇಕಾಗಿದೆ ಏಕೆ ಕಡಿಮೆ ಆಗಿದೆ ಎನ್ನುವುದಕ್ಕೆ ನೀವು ಸಮುಜಾಯಿಷಿ ಏನು ಕೊಡುತ್ತಿದ್ದೀರಿ, ನಾವು ಬಡ್ಡಿಯನ್ನು ಸೇರಿಸಿ plan ನಲ್ಲಿ ಹೇಳುತ್ತಿದ್ದೆವು ನೀರಾವರಿಗೆ ಅಲೋಕೇಷನ್ ಮಾಡಿರತಕ್ಕಂಥದ್ದಕ್ಕೆ ವಾಪಸ್ ಕೊಡಬೇಕಾದ ಬಡ್ಡಿ ಮತ್ತು ಅಸಲು ಸೇರಿಸಿ ಮಾಡುತ್ತಿದ್ದೆವು ಅದು ಇನ್ನು ಜಾಸ್ತಿಯಾಗುತ್ತಿತ್ತು ಈ ಸಾರಿ ಅಸಲು ಮತ್ತು ಬಡ್ಡಿ ಕೊಡುವುದಕ್ಕೆ ಬೇರೆ ಕಡೆ ಇಟ್ಟುಕೊಂಡಿದ್ದೇವೆ ಎಂದು ಹೇಳುತ್ತಿದ್ದೀರಿ ಅಷ್ಟೇ ತಾನೆ ಇದನ್ನು ಸೇರಿಸಿಕೊಂಡರೂ ಕಡಿಮೆಯಾಗುತ್ತದೆ ಅದನ್ನು ನಾನು ಬಜೆಟ್ ಮೇಲೆ ಹೇಳುವಾಗ ಹೇಳುತ್ತೇನೆ

ಶ್ರೀ ಬಿ ಎಸ್ ಯಡಿಯೂರಪ್ಪ – ನೀವು ಆಗಲೇ ಚರ್ಚೆ ಮಾಡುವಿನಂತೆ, ಈ debt servicing ಇನ್ನು ನಮಗೆ ಕಡಿಮೆಯಾಗಿದೆ ಭಾರ ಕಡಿಮೆಯಾಗಿದೆ ಹೋದ ವರ್ಷ 1547 ಕೋಟಿ 93 ಲಕ್ಷ ರೂಪಾಯಿಗಳು provision ಮಾಡಿದರೆ, ಈ ವರ್ಷ 813 ಕೋಟಿ provision ಮಾಡಿದ್ದೇನೆ

ಶ್ರೀ ಸಿದ್ಧರಾಮಯ್ಯ – Plan ನಲ್ಲಿ ಹೇಳಿದ್ದೀರಿ Plan side ಹೋದ ಸಾರಿ 16,166 ಕೋಟಿ ರೂಪಾಯಿಗಳು ಮಾಡಿದ್ದೀರಿ ಹೇಳಿದರೆ ಚರ್ಚೆ ಬೇಡವೆಂದು

ಹೇಳುತ್ತೀರಿ 16,166 ಕೋಟಿ ರೂಪಾಯಿಗಳಲ್ಲಿ ನೀರಾವರಿಗೆ ಎಂದು ಹೇಳಿ minor irrigation ಮತ್ತು major irrigation medium irrigation ಎಲ್ಲ ಸೇರಿ 4,200 ಚಿಲ್ಲರೆ ಕೋಟಿ ಇಟ್ಟಿದ್ದರು ಅದು ಒಟ್ಟು plan size ನ 26% ಆಗಿತ್ತು ಈ ಸಾರಿ ಏನು ಮಾಡಿದ್ದೀರಿ, 3,100 ಚಿಲ್ಲರೆ ಕೋಟಿ ಇದ್ದುದು 17,782 ಕೋಟಿ ರೂಪಾಯಿ plan size ನಲ್ಲಿ ಅದು 17 ಚಿಲ್ಲರೆ percent ಬಂದಿದೆ ಇದಕ್ಕೆ ನೀವು ಬಜೆಟ್ ಪುಸ್ತಕದಲ್ಲಿ ಎಲ್ಲಿಯೂ explanation ನೀಡಿಲ್ಲ ಬಜೆಟ್‌ನಲ್ಲಿ ಎಲ್ಲಿಯೂ ಏಕೆ ಹೇಗೆ ಕಡಿಮೆ ಆಯಿತು ಎನ್ನುವುದು ಹೇಳಲಿಲ್ಲ But Prima facie 26% ನಿಂದ 17% ಗೆ ಇಳಿದಿದೆ ಕಳೆದ ವರ್ಷ 29% ಇದ್ದುದು 26% ಗೆ ಇಳಿದಿದೆ ಇದನ್ನು ನಾವು ಹೇಳಿದ್ದು, This is according to your own figures mentioned in the budget speech ಇದಲ್ಲದೇ ಇನ್‌ಫ್ಲೇಶನ್ 6 58 ಇದೆ ಅದನ್ನೂ ಕೂಡ ಲೆಕ್ಕಕ್ಕೆ ತೆಗೆದುಕೊಂಡರೆ ಅದು ದೊಡ್ಡ ಗಾತ್ರ ಆಗಬೇಕಾಗುತ್ತದೆ

ಶ್ರೀ ಶಿವಾನಂದ ಪಾಟೀಲ್ .– ಮಾನ್ಯ ಯಡಿಯೂರಪ್ಪನವರೇ ಇದಲ್ಲದೇ ಅಪ್ಪರ್ ತುಂಗಾ ಲಿಫ್ಟ್ ಇರಿಗೇಶನ್ ಸ್ಕೀಂಗಳನ್ನು ಸೇರಿಸಿಬಿಟ್ಟಿದ್ದೀರಿ ಅವುಗಳಿಗೂ ಒಂದುನೂರು ಕೋಟಿ, ಎರಡುನೂರು ಕೋಟಿ ನೀವು ಆನ್ ಗೋಯಿಂಗ್ ಸ್ಕೀಂಗಳನ್ನು ಕರ್ಟೈಲ್ ಮಾಡಿ ಹೊಸ ಹೊಸ

ಶ್ರೀ ಬಿ ಎಸ್ ಯಡಿಯೂರಪ್ಪ .– ನಾನು ಹೇಳುತ್ತಿರುವುದು ಇಷ್ಟೇ ಇವತ್ತು ಚರ್ಚೆ ಆಗುತ್ತಿರುವಂಥ ವಿಷಯ ಏನು, ನೀರಾವರಿ ಯೋಜನೆಗಳಿಗೆ ಕಡಿಮೆ ಹಣವನ್ನು ಕೊಟ್ಟಿದ್ದೀರಿ ಎಂದು ನೀವು ಹೇಳಿದ್ದೀರಿ ನಾನು ಹೇಳುತ್ತಿದ್ದೇನೆ, ಅದೆಷ್ಟು ಪರ್ಸೆಂಟ್ ಎನ್ನುವ ಬಗ್ಗೆ ಬಜೆಟ್ ಮೇಲೆ ಮಾತನಾಡುವಾಗ ಚರ್ಚೆ ಮಾಡೋಣ ಆದರೆ ನೀರಾವರಿ ಯೋಜನೆಗಳಿಗೆ ಕಳೆದ ವರ್ಷಕ್ಕಿಂತ ಜಾಸ್ತಿ ಹಣವನ್ನು ವರ್ಕ್ ಸೈಡ್‌ನಲ್ಲಿ ಕೊಟ್ಟಿದ್ದೇನೆ ಎಂದು ಹೇಳುತ್ತಿದ್ದೇನೆ

ಶ್ರೀ ಧರ್ಮಸಿಂಗ್ – ಮಾನ್ಯ ಯಡಿಯೂರಪ್ಪನವರೇ ಆ ಕಡೆ ಗ್ಯಾಲರಿಯಲ್ಲಿರುವ ಅಧಿಕಾರಿಗಳು ಕೊಟ್ಟ ಚೀಟಿಯಲ್ಲಿರುವುದನ್ನು ಓದಬೇಡಿ ನಮ್ಮಲ್ಲೂ ಕೂಡ ವಿವರಗಳಿವೆ ಸೆಕ್ಟರ್ ಔಟಲೇ ನೀರಾವರಿಗೆ 2005–06ನೇ

ಸಾಲಿನಲ್ಲಿ 3942 ಕೋಟಿ ರೂಪಾಯಿಗಳು, ಅಂದರೆ 29 ಪರ್ಸೆಂಟ್ ಕೊಡಲಾಗಿದೆ 2006–07ರಲ್ಲಿ 4280 ಕೋಟಿ ರೂಪಾಯಿಗಳು, ಅಂದರೆ ಶೇಕಡ 26 ರಷ್ಟನ್ನು ಕೊಡಲಾಗಿದೆ 2007–08ನೇ ಸಾಲಿಗೆ 3145 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ ಅಂದರೆ 17% ಇಟ್ಟಿದ್ದೀರಿ ನಾವು ಮೊದಲು ನೀರಾವರಿಗೆ 29 ಪರ್ಸೆಂಟ್ ಕೊಟ್ಟಿದ್ದೆವು ತದನಂತರ ಅದು 26 ಪರ್ಸೆಂಟ್‌ಗೆ ಬಂದಿದ್ದು ಈಗ 17 ಪರ್ಸೆಂಟ್ ಇಟ್ಟಿದ್ದೀರಿ ಇದರ ಬಗ್ಗೆ ತಾವು ಹೇಳಿ

ಶ್ರೀ ಬಿ ಎಸ್ ಯಡಿಯೂರಪ್ಪ – ವಿರೋಧ ಪಕ್ಷದ ನಾಯಕರಿಗೆ ನಾನು ಇಷ್ಟು ಮಾತ್ರ ಹೇಳಬಯಸುತ್ತೇನೆ 2006–07ನೇ ಸಾಲಿನಲ್ಲಿ ಮೇಜರ್ ಅಂಡ್ ಮೈನರ್ ಇರಿಗೇಶನ್‌ಗೆ ತಾವು ಹೇಳಿದಂತೆ 4582 97 ಕೋಟಿ ರೂಪಾಯಿಗಳನ್ನು ಕೊಟ್ಟಿತ್ತು ಈ ಬಾರಿ debt service ನಲ್ಲಿ ಹೋದ ಬಾರಿ 1547 93 ಇತ್ತು ಅದು ಈ ಸಾರಿ 813 ಕೋಟಿಗೆ ಇಳಿಯಿತು ಅಂದರೆ ವರ್ಕ್ ಸೈಡ್‌ನಲ್ಲಿ ಮೊದಲಿಗಿಂತ ಜಾಸ್ತಿ ಕೊಟ್ಟಿದ್ದೇವೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ ಅಂದರೆ ಕಳೆದ ವರ್ಷಕ್ಕಿಂತ ಕಡಿಮೆಯಾಗಿಲ್ಲ ಎಂದು ನಾನು ನಿಮಗೆ ಹೇಳುತ್ತಿರುವುದು

ಶ್ರೀ ಸಿದ್ಧರಾಮಯ್ಯ – ಮಾನ್ಯ ಯಡಿಯೂರಪ್ಪನವರೇ ಕಳೆದ ವರ್ಷ ಅಂದರೆ 2006–07 ರಲ್ಲಿ ಪ್ಲಾನ್‌ನಲ್ಲಿ ನಾಲ್ಕು ಸಾವಿರದ ಇನ್ನೂರು ಚಿಲ್ಲರೆ ಕೋಟಿ ರೂಪಾಯಿ ಇತ್ತು ಅದು compared to previous year 2005–2006ಕ್ಕೆ ಕಂಪೇರ್ ಮಾಡಿದರೆ the growth is 26% 2004–05ಕ್ಕೆ ಕಂಪೇರ್ ಮಾಡಿದರೆ 2005–2006ರಲ್ಲಿ ಗ್ರೋತ್ 29 ಪರ್ಸೆಂಟ್ ಆ 29 ಪರ್ಸೆಂಟ್ ಏನಿತ್ತು ಅದು ಮುಂದಿನ ವರ್ಷಕ್ಕೆ 26ಕ್ಕೆ ಬಂತು 26 ಇದ್ದದ್ದು ಈಗ 17ಕ್ಕೆ ಬಂದಿದೆ ನಾನು ಏನು ಹೇಳುತ್ತಿದ್ದೇನೆಂದರೆ 17,782 ಕೋಟಿ ರೂಪಾಯಿಗಳಿಗೆ ಪ್ಲಾನ್ ಸೈಸ್ ಜಾಸ್ತಿ ಆಯಿತು ಆ ಪ್ಲಾನ್ ಸೈಸ್‌ಗೆ ಅನುಗುಣವಾಗಿ ಅಲೊಕೇಶನ್ ಕೂಡ ಜಾಸ್ತಿಯಾಗಬೇಕು ಇದು ಒಂದನೆಯ ಪಾಯಿಂಟ್ ಎರಡನೆಯದಾಗಿ ಈಗ ಇನ್‌ಫ್ಲೇಶನ್ ಜಾಸ್ತಿಯಾಗಿದೆ ಆ ಇನ್‌ಫ್ಲೇಶನ್ ಲೆಕ್ಕ ಹಾಕಿದರೆ ಅಲೊಕೇಶನ್ ಇನ್ನೂ ಜಾಸ್ತಿಯಾಗಬೇಕು ಆದರೆ ಈಗ 17%ಕ್ಕೆ ಬಂದಿದೆ Assuming for the argument sake, ನೀವು ಬಡ್ಡಿ ಅಸಲನ್ನೆಲ್ಲಾ ಬೇರೆ ಕಡೆ ನಾವು ನಾನ್

ಪ್ಲಾನ್ ಎಕ್ಸ್‌ಪೆಂಡೀಚರ್‌ನಲ್ಲಿ ಸೇರಿಸಿಕೊಂಡುಬಿಟ್ಟಿದ್ದೇವೆ ಎಂದು ಹೇಳಿದರೂ ಕೂಡ ಆಗಲೂ ಕಡಿಮೆ ಬೀಳುತ್ತದೆ

ಶ್ರೀ ಜೆ ಸಿ ಮಾಧುಸ್ವಾಮಿ – ಬಡ್ಡಿ ತೀರುವಳಿ ಕೂಡ 14 ಪೈಸೆ ಇದ್ದದ್ದು 12 ಪೈಸೆಗೆ ಬಂದಿದ್ದಾರೆ ಅಲ್ಲೇನೂ ಜಾಸ್ತಿಯಾಗಿಲ್ಲ ಏಕೆಂದರೆ ಇದು ಅಲ್ಲಿಗೆ ಟ್ರಾನ್ಸ್‌ಫರ್ ಆಗಿದ್ದರೆ ಅದು ಜಾಸ್ತಿಯಾಗಿರಬೇಕಾಗಿತ್ತಲ್ಲ

ಶ್ರೀ ಸಿದ್ಧರಾಮಯ್ಯ – ಅದಕ್ಕೇ ನಾನು ಆಗಲೇ ಹೇಳಿದೆ, ಇವೆಲ್ಲಾ ನೋಡಿಕೊಂಡು ಆಮೇಲೆ ಡೀಟೈಲ್ ಆಗಿ ಹೇಳುತ್ತೇನೆಂದೆ

ಶ್ರೀ ಬಿ ಎಸ್ ಯಡಿಯೂರಪ್ಪ .– ಬಜೆಟ್ ಮೇಲೆ ಚರ್ಚೆ ಮಾಡುವಾಗ ಹೇಳಿ ಆದರೆ ಒಟ್ಟಾರೆಯಾಗಿ ನಾನು ನಿಮಗೆ ಹೇಳುವುದಕ್ಕೆ ಇಚ್ಛೆಪಡುವುದೇನೆಂದರೆ,

ಶ್ರೀ ಸಿದ್ಧರಾಮಯ್ಯ – ನೀವು ಕಡಿಮೆ ಕೊಟ್ಟೀದ್ದೀರೆಂದು ತೋರಿಸಿದರೆ ರಾಜೀನಾಮೆ ಕೊಟ್ಟುಬಿಡುತ್ತೇನೆ ಎಂದು ಅವತ್ತು ಹೇಳಿದ್ದೀರಿ ಕೊಡಬಾರದು ನೀವು ರಾಜೀನಾಮೆ ಕೊಟ್ಟ ಮೇಲೆ ನಿಮಗೆ ತಾಪತ್ರಯವಾಗುತ್ತದೆ

ಶ್ರೀ ಬಿ ಎಸ್ ಯಡಿಯೂರಪ್ಪ – ಸಿದ್ಧರಾಮಯ್ಯನವರೇ ಈ ಅಣಕವೆಲ್ಲಾ ಬೇಡ, ಒಂದು ನಿಮಿಷ ತಾವು ಕೇಳಿ, ನಾನು ಹೇಳುತ್ತೇನೆ, ಅವತ್ತು ಹೇಳಿರುವುದಕ್ಕೆ ನಾನು ಈಗಲೂ ಬದ್ಧನಾಗಿದ್ದೇನೆ ಹಿಂದಿನ ವರ್ಷದಲ್ಲಿ ನೀರಾವರಿ ಯೋಜನೆಗೆ ನಾನು ಏನು ಕೊಟ್ಟಿದ್ದೇನೆ ಅದಕ್ಕಿಂತ ಹೆಚ್ಚು ಹಣವನ್ನು ಕೊಟ್ಟಿದ್ದೇನೆ ಅದರಲ್ಲಿ ಅಂಕಿ ಅಂಶಗಳಿವೆ, ಚರ್ಚೆ ಮಾಡೋಣ ಅದರ ಬಗ್ಗೆ ನನ್ನದು ಏನೂ ಭಿನ್ನಾಭಿಪ್ರಾಯವಿಲ್ಲ ಆದುದರಿಂದ ನಾನು ಈಗ ಪೂರಕ ಅಂದಾಜುಗಳಿಗೆ ಸಭೆಯ ಅನುಮೋದನೆಯನ್ನು ಪಡೆಯಬಯಸುತ್ತೇನೆ

ಶ್ರೀ ಎ ಕೃಷ್ಣಪ್ಪ – ಮಾನ್ಯ ಛೇರ್ಮನ್‌ರವರೇ ಸಪ್ಲಿಮೆಂಟರಿ ಬಜೆಟ್‌ಗೆ ಸಂಬಂಧಪಟ್ಟಂತೆ ಹಣಕಾಸಿನ ಸಚಿವರು ಏನೂ ಉತ್ತರವನ್ನು ಕೊಡಲಿಲ್ಲ

ಛೇರ್ಮನ್ – ಕೃಷ್ಣಪ್ಪನವರೇ ಬಜೆಟ್ ಮೇಲೆ ನಾಳೆ ಬೆಳಿಗ್ಗೆಯಿಂದಲೇ ಚರ್ಚೆ ಪ್ರಾರಂಭವಾಗುತ್ತದೆ ಆಗ ಸಾಕಷ್ಟು ಮಾತನಾಡುವುದಕ್ಕೆ ಮತ್ತು ಕ್ಲಾರಿಫಿಕೇಶನ್ ಕೇಳುವುದಕ್ಕೆ ಅವಕಾಶಗಳಿವೆ

ಶ್ರೀ ಎ ಕೃಷ್ಣಪ್ಪ – ಮಾನ್ಯ ಛೇರ್ಮನ್‌ರವರೇ ಅವರು ಮಂಡಿಸಿದ ಪೂರಕ ಅಂದಾಜುಗಳ ಪ್ರಸ್ತಾವನೆಗೆ ಸಂಬಂಧಪಟ್ಟಂತೆ ನಾವು ಕೆಲವು ಸಲಹೆಗಳನ್ನು ನೀಡಿದ್ದೇವೆ ಆ ಸಲಹೆಗಳಿಗೆ ಒಂದಕ್ಕೂ ಉತ್ತರವನ್ನು ಕೊಟ್ಟಿಲ್ಲ ಏನಿದು?

ಶ್ರೀ ಬಿ ಎಸ್ ಯಡಿಯೂರಪ್ಪ – ಪಾಸ್ ಆದಮೇಲೆ ಹೇಳುತ್ತೇನೆ ಬಿಡಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಪಾಸ್ ಆದಮೇಲೆ ಕ್ಲಾರಿಫಿಕೇಶನ್ ಕೊಡುತ್ತಾರೆಯೇ? ನಾವು ಏನೇನು ಇಶ್ಯೂಗಳನ್ನು ರೈಸ್ ಮಾಡಿದ್ದೇವೋ ಎನ್ನುವುದನ್ನಾದರೂ ಹೇಳಬೇಡವೇ?

ಶ್ರೀ ಎ ಕೃಷ್ಣಪ್ಪ .– ಇವರು ಗ್ರೇಟರ್ ಬೆಂಗಳೂರು ಎಂದು ಮಾಡಿ ಇವರು ಏನು ಗ್ರೇಟ್ ಮಾಡುವುದಕ್ಕೆ ಹೋಗಿದ್ದಾರೆ ಎಂಬುದನ್ನು ನಾವು ಹೇಳುತ್ತೇವೆ

ಶ್ರೀ ಜಗದೀಶ್ ಶೆಟ್ಟರ್ – ಪ್ರತಿ ಪಕ್ಷದ ನಾಯಕರೇ ಹೇಳಿದರು ಪೂರಕ ಅಂದಾಜಿಗೆ ಅನುಮೋದನೆಗೆ ಕೇಳಿ ಎಂದು

ಶ್ರೀ ಬಿ ಎಸ್ ಯಡಿಯೂರಪ್ಪ – ಮಾನ್ಯ ಛೇರ್ಮನ್‌ರವರೇ, ಶ್ರೀ ರಾಮರೆಡ್ಡಿಯವರು ಹೇಳಿದರು, ಕೋಲಾರದಲ್ಲಿ ರೈತರು ಸಾಲವನ್ನೇ ತೆಗೆದುಕೊಂಡಿಲ್ಲ, ಇದರಿಂದಾಗಿ ರೈತರಿಗೆ ಏನೂ ಲಾಭವಾಗಿಲ್ಲವೆಂದಿದ್ದಾರೆ ಸುಸ್ತಿಯಾಗಿತ್ತು, ಆದರೆ ಹಿಂದಿನ ಸಾಲ ಏನಿತ್ತೋ ಅದಕ್ಕೆ ಬಡ್ಡಿ ಮನ್ನಾ ಆಗಿದೆ ಅದಕ್ಕೆ ನಾನೇನು ಮಾಡಬೇಕು? ಉತ್ತರ ಕೊಡುವುದಕ್ಕೆ ನಾನು ಇನ್ನೂ ಒಂದು ಗಂಟೆ ನಿಂತುಕೊಳ್ಳುತ್ತೇನೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ನಾನು ಹೇಳಿದ್ದೇನೆಂದರೆ, ನಾವು ರೈಸ್ ಮಾಡಿದ ಪಾಯಿಂಟ್‌ಗಳಿಗೆ ಉತ್ತರವನ್ನೇ ಕೊಡದೇ ಪಾಸ್ ಮಾಡಿ ಎಂದರೆ ಹೇಗೆ?

ಶ್ರೀ ಎ ಕೃಷ್ಣಪ್ಪ – ಮಾನ್ಯ ಛೇರ್ಮನ್‌ರವರೇ, ಸಪ್ಲಿಮೆಂಟರಿ ಬಜೆಟ್ ಮೇಲೆ ಅವರು ಉತ್ತರವನ್ನೇ ಕೊಡಲಿಲ್ಲವಲ್ಲ

ಶ್ರೀ ಧರ್ಮಸಿಂಗ್ – ಮಾನ್ಯ ಛೇರ್ಮನ್‌ರವರೇ ಪೂರಕ ಅಂದಾಜಿಗೆ ಅನುಮೋದನೆಯನ್ನು ಕೇಳುತ್ತಿದ್ದೀರಿ ಈಗ ಸಮಯ ಬಹಳ ಆಗಿದೆ ಪೂರಕ

ಅಂದಾಜಿನ ಬಗ್ಗೆ ಮಾನ್ಯ ಸಿದ್ಧರಾಮಯ್ಯನವರು ಕೂಡ ದೀರ್ಘವಾಗಿ ಮಾತನಾಡಿದ್ದಾರೆ ನಾವುಗಳು ಬಜೆಟ್ ಮೇಲೆ ಕೂಡ ಇದರ ಬಗ್ಗೆ ಮಾತನಾಡುತ್ತೇವೆ ಎನ್ನತಕ್ಕಂಥ ಮಾತನ್ನು ನಾವು ಹೇಳಿದ್ದೇವೆ ಆದರೆ ಮಾನ್ಯ ಕೃಷ್ಣಪ್ಪನವರು ಎತ್ತಿದ ಪ್ರಶ್ನೆಗೆ ಮತ್ತು ಮಾನ್ಯ ಶ್ರೀರಾಮರೆಡ್ಡಿಯವರು ಎತ್ತಿದ ಪ್ರಶ್ನೆಗೆ ತಾವು ಉತ್ತರವನ್ನು ಕೊಡಬೇಕಾಗುತ್ತದೆ

ಶ್ರೀ ಎ ಕೃಷ್ಣಪ್ಪ – ಮಾನ್ಯ ಛೇರ್ಮನ್‌ರವರೇ ನಾನು ಹೆಚ್ಚು ವಿಚಾರಗಳ ಬಗ್ಗೆ ಅವರಿಗೆ ಒತ್ತಾಯ ಮಾಡುವುದಕ್ಕೆ ಹೋಗಿಲ್ಲ ಡೀಟೈಲ್ಡ್ ಬಜೆಟ್ ಬಗ್ಗೆ ಮಾತನಾಡಿದಾಗ ಸೋಶಿಯಲ್ ವೆಲ್‌ಫೇರ್, ಅನಿಮಲ್ ಹಸ್‌ಬೆಂಡರಿ ಡಿಪಾರ್ಟ್‌ಮೆಂಟ್ ಮತ್ತು ಎಜುಕೇಶನ್‌ಗೆ ಇವರು ಅಲೊಕೇಶನ್ ಏನು ಕೊಟ್ಟಿದ್ದಾರೆ ಮತ್ತು ಡೆವಲಪ್‌ಮೆಂಟ್, ಇನ್‌ಫ್ರಾಸ್ಟ್ರಕ್ಚರ್‌ಗೆ ಏನು ಕೊಟ್ಟಿದ್ದಾರೆ ಎಂಬ ಬಗ್ಗೆ ಮುಂದೆ ವಿವರವಾಗಿ ಮಾತನಾಡೋಣ ಅವರು ಎಷ್ಟು ಈ ಬಗ್ಗೆ ಉತ್ತರ ಕೊಡುತ್ತಾರೋ ಕೊಡಲಿ ಆದರೆ ಇವತ್ತು ಗ್ರೇಟರ್ ಬೆಂಗಳೂರು ಡಿಕ್ಲೇರ್ ಮಾಡಿದ ಮೇಲೆ ಡೆವಲಪ್‌ಮೆಂಟ್ ಆಕ್ಟಿವಿಟೀಸ್‌ನಲ್ಲಿ ಏರುಪೇರಾಗಿದೆ ಪರ್ಟಿಕ್ಯುಲರ್ ಆಗಿ ಕುಡಿಯುವ ನೀರು, ಸ್ಟ್ರೀಟ್ ಲೈಟ್ಸ್ ಮತ್ತು ಗಾರ್ಬೇಜ್ ರಿಮೂವಲ್, ಬಗ್ಗೆ ಈಗ ಯಾರೂ ಹೇಳುವವರು ಕೇಳುವವರಿಲ್ಲದಾಗಿದೆ ಅದರ ಬಗ್ಗೆ 100 ಕೋಟಿ ರೂಪಾಯಿಗಳನ್ನು ಪ್ರಸ್ತಾಪ ಮಾಡಿದ್ದಾರೆ, ಅದು 750 ಸ್ಕ್ವೇರ್ ಕಿಲೋಮೀಟರ್‌ಗೆ ಏನೇನು ಸಾಕಾಗುವುದಿಲ್ಲ ಅದನ್ನು ಹೆಚ್ಚು ಮಾಡಬೇಕೆಂದು ಕೇಳಿಕೊಂಡಿದ್ದೇವೆ ನಾನು ಬೇರೆ ಏನೂ ಹೇಳಿಲ್ಲ

ಶ್ರೀ ಬಿ ಎಸ್ ಯಡಿಯೂರಪ್ಪ – ನಾವು ಗ್ರೇಟರ್ ಬೆಂಗಳೂರು ಬಗ್ಗೆ ಕಲ್ಪನೆಯನ್ನು ಇಟ್ಟಮೇಲೆ ಇವತ್ತು ಕುಡಿಯುವ ನೀರಿನ ಬಗ್ಗೆ ಇರಬಹುದು, ವಿದ್ಯುತ್ ಸಮಸ್ಯೆ ಬಗ್ಗೆ ಇರಬಹುದು, ಆ ಕಡೆ ಗಮನ ಕೊಡಬೇಕಾದುದು ಸರ್ಕಾರದ ಜವಾಬ್ದಾರಿಯಾಗಿದೆ ಈಗಾಗಲೇ ವಿರೋಧ ಪಕ್ಷದ ನಾಯಕರು ಸೇರಿದಂತೆ ನೀವೆಲ್ಲಾ ಅದರ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ ಈಗ ಇಮ್ಮಿಡಿಯೆಟ್ ಆಗಿ ಗ್ರೇಟರ್ ಬೆಂಗಳೂರಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಏನಿದೆ, ವಿದ್ಯುತ್ ಅಭಾವ ಏನಿದೆ, ಈ ಕಡೆ ಗಮನ ಕೊಡುವುದಕ್ಕೆ ಸೂಕ್ತವಾದಂಥ ಕ್ರಮವನ್ನು ತೆಗೆದುಕೊಳ್ಳುತ್ತೇವೆ

ಸಂಬಂಧಪಟ್ಟ ಸಚಿವರಿಗೆ ಸೂಚನೆಯನ್ನು ಕೊಟ್ಟು ಅದಕ್ಕೆ ಅಗತ್ಯ ಇದ್ದರೆ ಹಣವನ್ನು ಬಿಡುಗಡೆ ಮಾಡಿ ಆ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಮಾನ್ಯ ಯಡಿಯೂರಪ್ಪನವರೇ ಕೋಲಾರ ಜಿಲ್ಲೆ ಬಗ್ಗೆ ನಿಮಗೆ ಸ್ಪೆಸಿಫಿಕ್ ಆಗಿ ಒಂದು ಪ್ರಸ್ತಾಪವನ್ನು ಮಾಡಿದ್ದೆ

ಶ್ರೀ ಬಿ ಎಸ್ ಯಡಿಯೂರಪ್ಪ – ನೀವೇ ಸಲಹೆ ಕೂಡಿ ನಿಮ್ಮ ಪಾಯಿಂಟ್ ಏನು, ಕೋಲಾರ ಜಿಲ್ಲೆಯಲ್ಲಿ ರೈತರಿಗೆ ಸಹಕಾರಿ ಸಂಘಗಳಿಂದ ಸಾಲವನ್ನೇ ತೆಗೆದುಕೊಳ್ಳುವಂಥ ಪರಿಸ್ಥಿತಿ ಬರಲಿಲ್ಲ ಅಲ್ಲೆಲ್ಲವೂ ಸಹಕಾರಿ ಸಂಘಗಳು ಡಿಫಾಲ್ಟ್ ಆಗಿವೆ, ರೈತರಿಗೆ ಮೂರು ಕಾಸಿನ ಉಪಯೋಗ ಆಗಲಿಲ್ಲ ಎನ್ನುವಂಥ ಮಾತನ್ನು ನೀವು ಹೇಳಿದ್ದೀರಿ ಅದು ನನ್ನ ಗಮನಕ್ಕೆ ಬಂದಿದೆ ನಾನೇನು ನಿಮಗೆ ಹೇಳುವುದಕ್ಕೆ ಹೊರಟಿದ್ದೇನೆಂದರೆ ದೀರ್ಘಾವಧಿ ಸಾಲ, ಮಧ್ಯಮಾವಧಿ ಸಾಲಗಳೇನಿತ್ತು ಅದರ ಎಲ್ಲಾ ಹಳೆಯ ಬಡ್ಡಿಯನ್ನು ಮನ್ನಾ ಮಾಡುವಂಥ ಯೋಜನೆ ಜಾರಿಗೆ ತಂದಿರುವಂಥದ್ದು, ಅಷ್ಟು ಮಾತ್ರ ಸೀಮಿತವಾಗಿ ಕೋಲಾರಕ್ಕೆ ಉಪಯೋಗವಾಗುತ್ತದೆ ಅದಕ್ಕಿಂತ ಹೆಚ್ಚು ನಾನು ಏನೂ ಹೇಳುವಂಥ ಸ್ಥಿತಿಯಲ್ಲಿ ಈಗಿಲ್ಲ ಮುಂದೆ ಅಲ್ಲಿರುವಂಥ ಸಹಕಾರಿ ಸಂಘಗಳನ್ನು ರೈತರಿಗೆ ಅನುಕೂಲವಾಗುವ ರೀತಿಯಲ್ಲಿ, ಯಾವ ರೀತಿ ಮಾಡಬೇಕು, ಯಾವ ರೀತಿ ನೆರವನ್ನು ಕೊಡಬೇಕು ಎನ್ನುವುದರ ಬಗ್ಗೆ ಚರ್ಚೆ ಮಾಡೋಣ ಮತ್ತೆ ಶಿವಾನಂದ ಪಾಟೀಲರೇ ನೀವು ಹೇಳಿದಿರಿ, ಸುಮಾರು 450 ಕೋಟಿ ಬಾಕಿ ಇದೆಯೆಂದು ನಾನು ಪರಿಶೀಲನೆ ಮಾಡಿ ನೋಡುತ್ತೇನೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ – ಮಾನ್ಯ ಯಡಿಯೂರಪ್ಪನವರೇ ನೀವು ಧಾರವಾಡಕ್ಕೆ ಕೊಟ್ಟಿದ್ದೀರಿ ಕೋಲಾರ ಡಿ ಸಿ ಸಿ ಬ್ಯಾಂಕ್‌ಗೆ 25 ಕೋಟಿ ರೂಪಾಯಿಗಳನ್ನು ಕೊಡಿ ಅದು ಉಳಿದುಕೊಳ್ಳುತ್ತದೆ

(ಗೊಂದಲ)

ಛೇರ್ಮನ್ – ಶಿವಾನಂದ ಪಾಟೀಲರೇ ನಾನು ನಿಮ್ಮ ಹೆಸರನ್ನು ಕರೆದಿದ್ದೇನೆ ಮಾತನಾಡಿ

ಶ್ರೀ ಶಿವಾನಂದ ಪಾಟೀಲ್ – ಮಾನ್ಯ ಛೇರ್ಮನ್‌ರವರೇ ನಾನು ಹೇಳಿದ್ದು 2002 ರಿಂದ 450 ಕೋಟಿ ರೂಪಾಯಿ ಪೆಂಡಿಂಗ್ ಇದೆ ಇಡೀ ರಾಜ್ಯದಲ್ಲಿರುವ ಎಲ್ಲಾ 21 DCC Bank ಸೇರಿಸಿ ನಾವು ಹೇಳುತ್ತಿರುವುದು, ಅದರಲ್ಲಿ ಕೋಲಾರ ಜಿಲ್ಲೆ ಬಂತು, KCC ಬಂತು 450 ಕೋಟಿ ರೂಪಾಯಿ pending ಇದೆ

ಶ್ರೀ ಬಿ ಎಸ್ ಯಡಿಯೂರಪ್ಪ – ಅದನ್ನು ಯಾರು ಇಟ್ಟುಕೊಂಡು ಬಂದರು? ಯಾವಾಗಿನಿಂದ ಇಟ್ಟುಕೊಂಡು ಬಂದರು? ಯಡಿಯೂರಪ್ಪ ಬರುವಾಗ ಇಟ್ಟುಕೊಂಡು ಬರಲಿಲ್ಲ

ಶ್ರೀ ಶಿವಾನಂದ ಎಸ್ ಪಾಟೀಲ್ – ಅದನ್ನು ನಾನು ವಾದ ಮಾಡುವುದಿಲ್ಲ

ಶ್ರೀ ಬಿ ಎಸ್ ಯಡಿಯೂರಪ್ಪ – ನಾನು ಇಷ್ಟೇ ಹೇಳುವುದಕ್ಕೆ ಇಚ್ಛೆಪಡುತ್ತೇನೆ ಸ್ವಲ್ಪ ಕೇಳಿ ಸ್ವಾಮಿ ಸಹಕಾರ ಸಂಘವನ್ನು ಯಾರ್‌ಯಾರೋ ಮುಳುಗಿಸಿದ್ದಕ್ಕೆಲ್ಲಾ ನಾನು ಉತ್ತರ ಕೊಡುವುದಕ್ಕೆ ಆಗುವುದಿಲ್ಲ

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ – ನೀವು ಇಟ್ಟುಕೊಂಡಿಲ್ಲ,

ಶ್ರೀ ಬಿ ಎಸ್ ಯಡಿಯೂರಪ್ಪ – ನಮ್ಮ ಸಂಪನ್ಮೂಲದ ಚೌಕಟ್ಟಿನ ಅಡಿಯಲ್ಲಿ ಈ ವರ್ಷ ರೈತರಿಗೆ maximum ನನ್ನಿಂದ ಏನೂ ಸಾಧ್ಯವಾಗುತ್ತದೆ ಅದರಂತೆ ಅನುಕೂಲವನ್ನು ಮಾಡುವಂತಹ ಪ್ರಯತ್ನವನ್ನು ಈ ಸರ್ಕಾರ ಮಾಡಿದೆ DCC Bank ನಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಬಾಕಿ ಇದೆ, ಅದು ಯಾವ್ಯಾವ ವರ್ಷದಿಂದ ಉಳಿದುಕೊಂಡು ಬಂದಿದೆ? ಅದನ್ನು ಏನು ಮಾಡಬಹುದು ಎಂಬ ಪರಿಶೀಲನೆ ಮಾಡುತ್ತೇನೆ ತಾವು ಕೋಲಾರದ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ, ಅದಕ್ಕೆ ನಾನು ಇಲ್ಲೇ ದಿಢೀರ ಎಂದು ಉತ್ತರ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ ಅದರ ಬಗ್ಗೆ ಕುಳಿತುಕೊಂಡು ಚರ್ಚೆ ಮಾಡೋಣ ಮತ್ತು ಅದಕ್ಕೆ ಪರಿಹಾರ ಹುಡುಕುವುದರ ಬಗ್ಗೆ ಯೋಚನೆ ಮಾಡೋಣ

ಶ್ರೀ ಎ ಕೃಷ್ಣಪ್ಪ – Greater Bangalore notification ಮಾಡಿದ ದಿನದಿಂದ ಇವತ್ತಿನವರೆಗೂ ಬಿಡಿಗಾಸನ್ನು ಈ ಸರ್ಕಾರ ಬಿಡುಗಡೆ ಮಾಡಿಲ್ಲ

ಅಧ್ಯಕ್ಷರು – ಈ ಪೂರಕ ಅಂದಾಜಿಗೆ ಸಂಬಂಧಪಟ್ಟ ಹಾಗೆ ಮಾತನಾಡಿ

ಶ್ರೀ ಎ ಕೃಷ್ಣಪ್ಪ – ನೂರು ಕೋಟಿ ರೂಪಾಯಿ ಹೇಳಿದ್ದೀರಿ 2000 ಕೋಟಿ ರೂಪಾಯಿ ಎಂದು ಹೇಳಿದ್ದು ಅಷ್ಟೇ ಏನು ನಾಳೆ ಖರ್ಚು ಮಾಡುತ್ತೀರಾ?

(ಗೊಂದಲ)

ಶ್ರೀ ಬಿ ಎಸ್ ಯಡಿಯೂರಪ್ಪ – ಮಾನ್ಯ ಕೃಷ್ಣಪ್ಪನವರೇ, ಸರಿಯಾಗಿ ನೋಡಿ 2006–07 ನೇ ಸಾಲಿನಲ್ಲಿ 100 ಕೋಟಿ ರೂಪಾಯಿ ಕೊಟ್ಟಿದ್ದೇನೆ ಈಗ ಅದಕ್ಕೆ 250 ಕೋಟಿ ರೂಪಾಯಿ provision ಮಾಡಿದ್ದೇನೆ ಗೊತ್ತಿಲ್ಲದೇ ಏನೇನೋ ಮಾತನಾಡಿದರೆ ಹೇಗೆ? ಪುಸ್ತಕ ತೆಗೆದು ಓದಿಬಿಟ್ಟು ಹೇಳಿ

ಶ್ರೀ ಎ ಕೃಷ್ಣಪ್ಪ – ನಾನು ಎರಡು ಪುಸ್ತಕ ಇಟ್ಟುಕೊಂಡಿದ್ದೇನೆ ಸ್ವಾಮಿ ನೂರು ಕೋಟಿ ರೂಪಾಯಿ ಎಂದು ಇರುವುದನ್ನು ನೋಡಿದೆ

ಶ್ರೀ ಬಿ ಎಸ್ ಯಡಿಯೂರಪ್ಪ – ಏನು ನೋಡಿದ್ದೀರಾ? 2006–07 ನೇ ಸಾಲಿಗೆ 100 ಕೋಟಿ ರೂಪಾಯಿ ಕೊಟ್ಟಿದ್ದೇವೆ 2007–08 ನೇ ಸಾಲಿನಲ್ಲಿ-ನಮ್ಮ ಹಣಕಾಸಿನ ಲಭ್ಯತೆ ನೋಡಿಕೊಂಡು 250 ಕೋಟಿ ರೂಪಾಯಿ provision ಮಾಡಿದ್ದೇವೆ ಅದಕ್ಕಿಂತ ಹೆಚ್ಚು ಕೊಡುವಂತಹ ಸ್ಥಿತಿಯಲ್ಲಿ ನಾನಿಲ್ಲ ಬಜೆಟ್ ಬಗ್ಗೆ ಚರ್ಚೆ ಮಾಡಬೇಕಾದರೆ ನೋಡೋಣ ಈಗ ಇದರ ಬಗ್ಗೆ ಮಾತನಾಡಿ

ಶ್ರೀ ಎ ಕೃಷ್ಣಪ್ಪ – ನಾನು ಸರ್ಕಾರವನ್ನು ಕೇಳಿಕೊಂಡಿದ್ದು ಏನೆಂದರೆ Notification ಆದ ಸಮಯದಿಂದ ಇವತ್ತಿನವರೆಗೂ ಒಂದು ರೂಪಾಯಿ ಸರ್ಕಾರ ಬಿಡುಗಡೆ ಮಾಡಿಲ್ಲ Munucipality ಗಳಲ್ಲಿ ಇದ್ದಂತಹ ದುಡ್ಡು ಏನಾಯಿತು ಎಂದು ಗೊತ್ತಿಲ್ಲ ಗ್ರಾಮ ಪಂಚಾಯತಿಗಳಲ್ಲಿ ಇದ್ದಂತಹ ದುಡ್ಡು ಏನಾಯಿತು ಗೊತ್ತಾಗಲಿಲ್ಲ ಇನ್ನು ಇವತ್ತು ತ್ವರಿತವಾಗಿ ಆಗಬೇಕಾದಂತಹ ಕೆಲಸಗಳಿಗೆ ನೂರು ಕೋಟಿ ರೂಪಾಯಿ ಏನು ಮಾಡಿದ್ದೀರಿ ಅದನ್ನು ಹೆಚ್ಚು ಮಾಡಿ ಎಂದು ನಾನು ಕೇಳಿದ್ದೇನೆ Bangalore ನಿಮ್ಮ ಕೈಯಲ್ಲಿ, ನಿಮ್ಮ ಆಡಳಿತದಲ್ಲಿ ನೀವು ಕೊಟ್ಟಿರುವಂತಹಯೋಜನೆಯಲ್ಲಿ ಬದುಕಬೇಕೋ ಹಾಳಾಗಬೇಕೋ ಅದನ್ನು ನಾವು ಬಜೆಟ್‌ನಲ್ಲಿ detail ಆಗಿ ಮಾತನಾಡೋಣ ಈಗ ನೂರು ಕೋಟಿ ರೂಪಾಯಿ

ಏನು ಪ್ರಸ್ತಾಪ ಮಾಡಿದ್ದೀರಿ ಅದನ್ನು ದಯವಿಟ್ಟು ಹೆಚ್ಚು ಮಾಡಿ 500 Sq km ಪ್ರದೇಶವನ್ನು ನಿಮ್ಮ ಮಡಿಲಿಗೆ ಹಾಕಿಕೊಂಡಿದ್ದೀರಿ ಅದಕ್ಕೆ ಸಾಕಾಗುವುದಿಲ್ಲ ಎನ್ನುವ ಕಾರಣಕ್ಕೆ ನಾನು ಕೇಳಿದೆ

ಶ್ರೀ ಬಿ ಎಸ್ ಯಡಿಯೂರಪ್ಪ – ಮಾನ್ಯ ಕೃಷ್ಣಪ್ಪನವರೇ, ತಮ್ಮ ಸಲಹೆ ಒಪ್ಪುವಂತಾದ್ದು, ಹಣ ಸಾಲುವುದಿಲ್ಲವೆಂದು ಹೇಳಿದ್ದೀರಿ, ನನ್ನ ಹಣಕಾಸಿನ ಲಭ್ಯತೆ ಪ್ರಕಾರ ಇಷ್ಟು ಮಾಡಿದ್ದೇನೆ ಅದನ್ನು ಹೆಚ್ಚು ಮಾಡುವುದಕ್ಕೆ ಏನು ಪ್ರಯತ್ನ ಮಾಡಬೇಕು ಎನ್ನುವುದನ್ನು ಹಣಕಾಸಿನ ಸಂಪನ್ಮೂಲವನ್ನು ನೋಡಿಕೊಂಡು ಪ್ರಯತ್ನ ಮಾಡೋಣ Greater Bangalore ಮಾಡುತ್ತಿರಬೇಕಾದರೆ ಅಲಲಿ ಕುಡಿಯುವ ನೀರು ಹಾಗೂ ಅಲ್ಲಿನ ಸಮಸ್ಯೆಗಳನ್ನು ಬಗೆಹರಿಸುವಂತಹ ಜವಾಬ್ದಾರಿ ಸರ್ಕಾರದ ಮೇಲೆ ಇದೆ ಯಾವುದೇ ರೀತಿಯಲ್ಲಿ ಜನರಿಗೆ ತೊಂದರೆ ಆಗದಂತೆ ಅದಕ್ಕೆ ಇನ್ನು ಹೆಚ್ಚಿನ ಅನುದಾನವನ್ನು ಕೊಡುವುದಕ್ಕೆ ನಾನು ಪರಿಶೀಲನೆ ಮಾಡುತ್ತೇನೆ

ಶ್ರೀ ಆರ್ ಧ್ರುವನಾರಾಯಣ್ – ಕಳೆದ ಅಧಿವೇಶನದಲ್ಲಿ ತೋಟಗಾರಿಕಾ ಬೆಳೆಗಳಿಗೆ drip irrigation 75% subsidy ಇತ್ತು ಅದನ್ನು ಕೃಷಿ ಬೆಳೆಗಳಿಗೂ ಕೂಡ ಕಳೆದ ವರ್ಷದಲ್ಲೇ ವಿಸ್ತರಣೆ ಮಾಡುತ್ತೇನೆ ಎಂದು ಹೇಳಿದ್ದೀರಿ ಆದರೆ ಕೃಷಿ ಇಲಾಖೆಗೆ ಹಣವನ್ನು ತಾವು ಬಿಡುಗಡೆ ಮಾಡಿಲ್ಲ ಕೃಷಿ ಮಂತ್ರಿಗಳನ್ನು ಕೇಳಿದಾಗ Central Government ನಿಂದ ಹಣ ಬಂದಿದೆ ಆದರೆ matching grant ಬಂದಿಲ್ಲವೆಂದು ಹೇಳಿದರು ಆದ್ದರಿಂದ ತಾವು ಕಳೆದ ಅಧಿವೇಶನದಲ್ಲಿ ಪ್ರಸ್ತಾಪ ಮಾಡಿ ಆ ಕೃಷಿ ಬೆಳೆಗಳಿಗೂ ಕೂಡ drip irrigation ಗೆ 75% subsidy ಕೊಡುತ್ತೇವೆ ಎಂದು ಏನು ಹೇಳಿದ್ದಿರಿ, ಕಳೆದ ಸಾರಿ ತಾವು ಕೊಟ್ಟಿಲ್ಲ ದಯಮಾಡಿ ಕಳೆದ ವರ್ಷದ ಹಣವನ್ನು ತಾವು ಬಿಡುಗಡೆ ಮಾಡಬೇಕೆಂದು ತಮ್ಮಲ್ಲಿ ನಾನು ಕೇಳಿಕೊಳ್ಳುತ್ತೇನೆ

ಶ್ರೀ ಬಿ ಎಸ್ ಯಡಿಯೂರಪ್ಪ :– ನೀವು ಹೇಳಿದಂತಹ ಸಲಹೆ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ Greater Bangalore ಗೆ ಸಂಬಂಧಪಟ್ಟ ಹಾಗೆ ಎಂಟು ದಿವಸದ ಹಿಂದೆ ಎಂಟು ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿನ ಸಮಸ್ಯೆಗೋಸ್ಕರ ಬಿಡುಗಡೆ ಮಾಡಿದ್ದೇನೆ ಇನ್ನು ಹೆಚ್ಚಿನ ಹಣವನ್ನು ಬಿಡುಗಡೆ ಮಾಡುತ್ತೇವೆ

ಶ್ರೀ ಮಲ್ಲಿಕಾರ್ಜುನ ಖರ್ಗೆ – ಮಾನ್ಯ ಅಧ್ಯಕ್ಷರವರೇ, ನಾನು ಎರಡು ವಿಷಯಗಳನ್ನು ಮಾತ್ರ clarification ಕೇಳುತ್ತೇನೆ ಒಂದು ಹೋದ ಸಲ ಈ flood scheme ನಲ್ಲಿ ಏನು ಹಣ ಬಿಡುಗಡೆ ಮಾಡಬೇಕಾಗಿತ್ತು, ಅದನ್ನು ಮಾಡಲಿಲ್ಲ ಕೆಲವು ಜಿಲ್ಲೆಗಳಲ್ಲಿ ಕೆಲಸ ಮಾಡಿದ್ದಾರೆ, ಆದರೆ ಅದಕ್ಕೆ ಹಣ ಈ head ನಲ್ಲಿ ಬಂದಿಲ್ಲವೆಂದು ಹೇಳಿಕೊಡುವುದಕ್ಕೆ ಆಗಲಿಲ್ಲ ಅದನ್ನು ಎಷ್ಟು ಬಿಡುಗಡೆ ಮಾಡುತ್ತೀರಿ ಎಂದು ಹೇಳಬೇಕು ಏಕೆಂದರೆ ಕೇಂದ್ರ ಸರ್ಕಾರದಿಂದ ಅದಕ್ಕಾಗಿ ಹಣ ಕೂಡ ಬಂದಿದೆ ನಿಮ್ಮ contribution ಕೂಡ ಅದರಲ್ಲಿ ಇದೆ ಇನ್ನು ಎರಡನೆಯದಾಗಿ scarcity works ಗೆ ಎಷ್ಟು ಹಣವನ್ನು ತಾವು ಬಿಡುಗಡೆ ಮಾಡುತ್ತಿದ್ದೀರಿ? ಹಿಂದೆ ಒಂದು ಕೋಟಿ ರೂಪಾಯಿ ಕೊಟ್ಟಿತ್ತು ಅದಕ್ಕೆ ಹಿಂದೆ ಒಂದು ಕೋಟಿ ರೂಪಾಯಿ ಹಣ ಏನು ಕೊಟ್ಟಿತ್ತು, ಅದಕ್ಕೆ Task Force Committee ಯವರು ಈಗಾಗಲೇ ಕೆಲಸ ಮಾಡಿಸಿ ಮುಗಿಸಿದ್ದಾರೆ ಈಗ ಹಣ ಒಂದು ಜಿಲ್ಲಾಧಿಕಾರಿಗಳಲ್ಲಿ ಕೂಡ ಇಲ್ಲ ಕೆಲವು ಕಡೆ ಎಲಾದರೂ ಇದ್ದರೆ PD account ಗಳಲ್ಲಿ utilization ತೋರಿಸುವುದಕ್ಕೆ ಇಟ್ಟುಕೊಂಡಿರಬಹುದು ಆದರೆ ನೀವು work ಗೋಸ್ಕರ ಎಷ್ಟು ಹಣವನ್ನು ಬಿಡುಗಡೆ ಮಾಡುತ್ತೀರಿ ಎನ್ನುವುದನ್ನು ಹೇಳಬೇಕು ಇನ್ನು ಮೂರನೆಯದಾಗಿ drinking water ಗೆ ತಾಲ್ಲೂಕು ಮಟ್ಟದಲ್ಲಿ 8 ಲಕ್ಷ ರೂಪಾಯಿ ಮಾತ್ರ ತಾವು ಬಿಡುಗಡೆ ಮಾಡಿದ್ದೀರಿ ಇವತ್ತು ಉಳಿದ ಹಣ ಹೋಗಿಲ್ಲ ನಿಮಗೆ ಗೊತ್ತಿದ್ದ ಹಾಗೆ ಎಲ್ಲಾಕ್ಕಿಂತಲೂ ಕುಡಿಯುವ ನೀರಿನದು ಜ್ವಲಂತ ಸಮಸ್ಯೆ ಇದೆ ಅದಕ್ಕೆ ತಕ್ಷಣ ಕುಡಿಯುವ ನೀರಿಗಾಗಿ ಹಾಗೂ ಕೆಲಸಕ್ಕಾಗಿ ಮತ್ತು ಅತೀವೃಷ್ಟಿಯಿಂದ ತೊಂದರೆಗೊಳಗಾದಂತಹ ಕಡೆಗಳಲ್ಲಿ ಕೆಲಸ ಏನಾಗಿತ್ತು ಅದರ ಕೆಲಸಕ್ಕಾಗಿ ದಯವಿಟ್ಟು ತಾವು ಎಷ್ಟು ಹಣ ಬಿಡುಗಡೆ ಮಾಡುತ್ತೀರಿ ಎಂದು ಸ್ಪಷ್ಟಪಡಿಸಬೇಕು ಇನ್ನೊಂದು ತಾವು ಎಲ್ಲರಿಗೂ ಅನುಕೂಲ ಮಾಡಿಕೊಡುತ್ತಿದ್ದೀರಿ ಆದರೆ ನಮ್ಮ ಹೈದರಾಬಾದ್ ಕರ್ನಾಟಕಕ್ಕೆ ಅನುಕೂಲವಾಗುವುದಿಲ್ಲವಲ್ಲ ಅದು ಯಾವುದೆಂದರೆ ಈ ಸಾಲ ಮನ್ನಾ scheme ಏನಿದೆ ಅದನ್ನು ನೀವು February 2 ರಿಂದ ಎಂದು ಮಾಡಿದ್ದೀರಿ ನಮ್ಮಲ್ಲಿ ದುರ್ದೈವದಿಂದ November ತಿಂಗಳಿನಿಂದ loan disburse ಆಗಿದ್ದು, ಅದಕ್ಕೆ

ತಾವು Co-operative Department ಹಾಗೂ Finance Department ಅನ್ನು consult ಮಾಡಿ ನಿರ್ಣಯ ತೆಗೆದುಕೊಳ್ಳಿ ಬೇಡ ಎಂದು ಹೇಳುವುದಿಲ್ಲ ಆದರೆ ಅವರಿಗೂ ಲಾಭ ಆಗಬೇಕು ಎನ್ನುವಂತಹ ನಿರ್ಣಯ ತಮಗೆ ಇದ್ದರೆ ಅದನ್ನು ತಾವು November ನಿಂದ ಮಾಡಬೇಕಾಗುತ್ತದೆ ದಯವಿಟ್ಟು ಈ ನಾಲ್ಕು ವಿಷಯದ ಬಗ್ಗೆ ತಾವು clear ಆಗಿ ಹೇಳಿದರೆ ಇಡೀ ರಾಜ್ಯಕ್ಕೆ ಒಂದು message ಹೋಗುತ್ತದೆ

ಶ್ರೀ ಬಿ ಎಸ್ ಯಡಿಯೂರಪ್ಪ – ರಾಜ್ಯದಲ್ಲಿ ದಿನೇ ದಿನೇ ಕುಡಿಯುವ ನೀರಿನ ಹಾಹಾಕಾರ, ಬರಗಾಲದ ಪರಿಸ್ಥಿತಿ, ಜಲಾಶಯಗಳಲ್ಲಿ ನೀರಿಲ್ಲದೇ ಇರುವಂತಾದ್ದು ಇಂತಹ ಪರಿಸ್ಥಿತಿಯನ್ನು ನಾವು ಎದುರಿಸುತ್ತಿದ್ದೇವೆ ಅದಕ್ಕಾಗಿ ತಾವು ಸ್ವಲ್ಪ ಗಮನ ಕೊಟ್ಟರೆ ಬಜೆಟ್ ಆದ ಮೇಲೆ ಒಂದನೇ ತಾರೀಖಿನ ನಂತರ ಈ ರೀತಿ ಬರಗಾಲಕ್ಕೆ ತುತ್ತಾಗಿ ಕುಡಿಯುವ ನೀರಿನ ಹಾಹಾಕಾರ ಇರುವ ಕಡೆ ಬರಗಾಲ ಕಾಮಗಾರಿ ಮಾಡುವಂತಹ ವಿಷಯದಲ್ಲಿ ಒಂದು ವಿಶೇಷವಾದಂತಹ ಸಭೆಯನ್ನು ನಾನು ಮತ್ತು ಮಾನ್ಯ ಮುಖ್ಯಮಂತ್ರಿಗಳು ಕರೆಯುತ್ತೇವೆ ಆ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳ ಹತ್ತಿರ ಎಷ್ಟೆಷ್ಟು ಹಣ ಇದೆ? ಎಷ್ಟು ಖರ್ಚಾಗಿದೆ? ನಾವು ಮುಂದೆ ಏನು ಮಾಡುಬೇಕು? ಅದಕ್ಕೆ ಇರುವಂತಹ ಹೆಚ್ಚಿನ ಹೆಚ್ಚಿನ ಹಣ ಅನಿವಾರ್ಯವಾಗಿ ಬೇಕಾಗುತ್ತದೆ ಅದನ್ನು ಬಿಡುಗಡೆ ಮಾಡುವುದಕ್ಕೆ ಸಿದ್ಧನಿದ್ದೇನೆ ಕೇಂದ್ರ ಸರ್ಕಾರಕ್ಕೂ ಸಹ ನಾವೇನು ಕೇಳಿದ್ದೇವೆ ಅದರಲ್ಲಿ ಸ್ವಲ್ಪ ಭಾಗ ಮಾತ್ರ ಬಂದಿದೆ ನಾವು ಕೇಂದ್ರಕ್ಕೆ ಒತ್ತಡ ತರಬೇಕಾಗುತ್ತದೆ ಬರಗಾಲ ಕಾಡುತ್ತಿರುವಂತಹ ಈ ಸಂದರ್ಭದಲ್ಲಿ ಕೇಂದ್ರ ಸಹ ನಮ್ಮ ನೆರವಿಗೆ ಬರಬೇಕಾಗುತ್ತದೆ ಈಗ ನಾವೇನು ಒಂದು ತಾಲ್ಲೂಕಿಗೆ ಒಂದು ,ಕೋಟಿ ರೂಪಾಯಿಯಂತೆ ಹಣವನ್ನು ಬಿಡುಗಡೆ ಮಾಡಿ, ಮತ್ತೊಂದು ಬಾರಿ ಇನ್ನೊಂದು ಕೋಟಿ ರೂಪಾಯಿ ಸೇರಿಕೊಂಡು, ಒಟ್ಟು ಎರಡು ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಿದ್ದೇವೆ ಅದು ಹಿಂದಿನದಾಯಿತು ಈಗ ಹೊಸದಾಗಿ ಇನ್ನು ಹೆಚ್ಚು ಹಣವನ್ನು ಬಿಡುಗಡೆ ಮಾಡಬೇಕಾದರೆ ಏನು ಮಾಡಬೇಕು? ಕೇಂದ್ರಕ್ಕೆ ಒತ್ತಡವನ್ನು ತಂದು ಅಲ್ಲಿಂದ ಎಷ್ಟು ತರಬಹುದು ಎನ್ನುವುದರ ಬಗ್ಗೆ ನಾನು ಮತ್ತು ಮಾನ್ಯ ಮುಖ್ಯಮಂತ್ರಿಗಳು ಪ್ರತಿ ಪಕ್ಷದ ನಾಯಕರ ಜೊತೆ

ಸಮಾಲೋಚನೆ ಮಾಡಿ ಅದಕ್ಕೆ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡುವಂತಹ ಪ್ರಯತ್ನವನ್ನು ಮಾಡುತ್ತೇನೆ ನಾನು ಅದರ ಬಗ್ಗೆ ನಿಮಗೆ ಸ್ಪಷ್ಟವಾದಂತಹ ಭರವಸೆಯನ್ನು ಈ ಸಂದರ್ಭದಲ್ಲಿ ಕೊಡುತ್ತೇನೆ ಇದರ ಬಗ್ಗೆ ಚರ್ಚೆ ಮಾಡೋಣ ಅದಕ್ಕೆ ಪರಿಹಾರವನ್ನು ಕೂಡ ಹುಡುಕೋಣ

ಶ್ರೀ ಮಲ್ಲಿಕಾರ್ಜುನ ಖರ್ಗೆ – ಚರ್ಚೆಗಿಂತ ಮುಖ್ಯವಾಗಿ ಒಂದು decision ಅನ್ನು ಕುಡಿಯುವ ನೀರಿಗೆ ಪ್ರತಿ ತಾಲ್ಲೂಕಿಗೆ ಎಷ್ಟು ಕೊಡಬೇಕು ಎಂದು ತೆಗೆದುಕೊಳ್ಳಿ ಆಮೇಲೆ ಬೇಕಾದರೆ ಇದರ ಬಗ್ಗೆ detail ಆಗಿ ಚರ್ಚೆ ಮಾಡೋಣ ಏಕೆಂದರೆ flood relief ಹಣ 158 ಕೋಟಿ ರೂಪಾಯಿ ಬಂದು ಇವತ್ತಿಗೆ 15 ದಿವಸವಾಯಿತು ಅದನ್ನು ಯಾವುದು urgent ಕೆಲಸ ಇದೆ ಅದಕ್ಕೆ divert ಮಾಡಿ

ಶ್ರೀ ಬಿ ಎಸ್ ಯಡಿಯೂರಪ್ಪ – ಖಂಡಿತವಾಗಿ ತಾವು ಕೊಡುತ್ತಿರುವಂತಹ ಸಲಹೆ ಸರಿ ಇದೆ Flood relief ಗೆ ಬರಗಾಲ ಕಾಮಗಾರಿಗ, ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವುದಕ್ಕೆ ಈ ಸರ್ಕಾರ ಹೆಚ್ಚಿನ ಅನುದಾನವನ್ನು ಕೊಡುವುದಕ್ಕೆ ಸಿದ್ಧವಿದೆ ಅದಕ್ಕೆ ಒಂದು ವಿಶೇಷ ಸಭೆಯನ್ನು ಕರೆದು ಮಾನ್ಯ ಮುಖ್ಯಮಂತ್ರಿಗಳು ಮತ್ತು ನಾವು ನಿಮ್ಮ ಜೊತೆ ಸಮಾಲೋಚನೆ ಮಾಡುತ್ತೇವೆ ಅಗತ್ಯ ಇದ್ದರೆ ಇಲ್ಲೇ ಚರ್ಚೆ ಮಾಡೋಣ Budget pass ಆದಮೇಲೆ ಹೇಗೂ ನಾವು 5 ನೇ ತಾರೀಖಿನವರೆಗೂ ಇಲ್ಲೇ ಕುಳಿತುಕೊಳ್ಳುತ್ತೇವೆ ಇದರ ಬಗ್ಗೆ ಒಂದು ವಿಶೇಷ ಚರ್ಚೆ ಮಾಡಿ, ಇದಕ್ಕೆ ಏನು ಪರಿಹಾರ ಒದಗಿಸಬೇಕು ಎನ್ನುವುದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳೋಣ ಸಾಲ ಮನ್ನಾ ವಿಚಾರದಲ್ಲಿ ನೀವು date ಬಗ್ಗೆ ಹೇಳಿದ್ದೀರಿ Budget ಬಗ್ಗೆ ಚರ್ಚೆಯಾಗಲಿ, ಆ ಸಂದರ್ಭದಲ್ಲಿ ಕುಳಿತು ಅದಕ್ಕೆ ಏನು ಮಾಡಬೇಕು ಎಂದು ಒಂದು ಸಲಹೆಯನ್ನು ನೀವು ಕೊಡಿ ಅದಕ್ಕೆ ಅಂತಿಮವಾಗಿ ಒಂದು ತೀರ್ಮಾನವನ್ನು ಒಟ್ಟಾಗಿ ಸೇರಿ ತೆಗೆದುಕೊಳ್ಳೋಣ

ಚೇರ್‌ಮನ್ – ಈಗ ಚರ್ಚೆ ಮುಕ್ತಾಯವಾಗಿದೆ

ಶ್ರೀ ಬಿ ಎಸ್ ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು) – ಮಾನ್ಯ ಚೇರ್‌ಮನ್‌ರವರೇ, "ದಿನಾಂಕ 31–03–2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ 1 ರಿಂದ 28 ರವರೆಗಿನ ಅಭಿಯಾಚನೆಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು ಈ ಸಭೆ ಮಂಜೂರು ಮಾಡಬೇಕೆಂದು ಕೋರುತ್ತೇನೆ"

ಚೇರ್‌ಮನ್ – ಪ್ರಸ್ತಾವ ಏನೆಂದರೆ, " ದಿನಾಂಕ 31–03–2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ 1 ರಿಂದ 8 ರವರೆಗಿನ ಅಭಿಯಾಚನೆಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರಿದ ಮೊತ್ತವನ್ನು ಈ ಸಭೆಯು ಮಂಜೂರು ಮಾಡುವುದು"

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

(ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

1 2007 ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಕೃಷಿ ಮತ್ತು ತೋಟಗಾರಿಕೆ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 5521 20 ಲಕ್ಷ ರೂ ಗಳಿಗೆ ಮೀರಿದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು

2 2007 ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಪಶುಸಂಗೋಪನೆ ಮತ್ತು ಮೀನುಗಾರಿಕೆ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1892 56 ಲಕ್ಷ ರೂ ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ 1412 29 ಲಕ್ಷ ರೂ ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು

3 2007 ನೇ ಮಾರ್ಚ್ 31 ರ ಅಂತ್ಯದೊಳಗೆ **'ಆರ್ಥಿಕ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲಕ್ಕದಲ್ಲಿ 27943 78 ಲಕ್ಷ ರೂ ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ 1262 00 ಲಕ್ಷ ರೂ ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು

4 2007 ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಸಿ ಆ ಸು ಇ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1458 65 ಲಕ್ಷ ರೂ ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ 3553 00 ಲಕ್ಷ ರೂ ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು

5 2007 ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಒಳಾಡಳಿತ ಮತ್ತು ಸಾರಿಗೆ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 20857 06 ಲಕ್ಷ ರೂ ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ 12693 00 ಲಕ್ಷ ರೂ ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು

6 2007 ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಮೂಲಭೂತ ಸೌಕರ್ಯ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ಬಂಡವಾಳ ಲೆಕ್ಕದಲ್ಲಿ 3867 17 ಲಕ್ಷ ರೂ ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು

7 2007 ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತ್ ರಾಜ್'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1063 75 ಲಕ್ಷ ರೂ ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ 20095 23 ಲಕ್ಷ ರೂ ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು

8 2007 ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ '** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 2982 92 ಲಕ್ಷ ರೂ ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ 265 50 ಲಕ್ಷ ರೂ ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು

9 2007 ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಸಹಕಾರ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 55221 77 ಲಕ್ಷ ರೂ ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ 1710 50 ಲಕ್ಷ ರೂ ಗಳಿಗ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು

10 2007 ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಸಮಾಜ ಕಲ್ಯಾಣ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 4295 59 ಲಕ್ಷ ರೂ ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ 247 31 ಲಕ್ಷ ರೂ ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು

11 2007 ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 347 07 ಲಕ್ಷ ರೂ ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು

12 2007 ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1224 62 ಲಕ್ಷ ರೂ ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು

13 2007 ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಆಹಾರ ಮತ್ತು ನಾಗರೀಕ ಸರಬರಾಜು'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 3367 34 ಲಕ್ಷ ರೂ ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು

14 2007 ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಕಂದಾಯ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 27200 61 ಲಕ್ಷ ರೂ ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು

15 2007 ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಮಾಹಿತಿ ತಂತ್ರಜ್ಞಾನ '** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 154 40 ಲಕ್ಷ ರೂ ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು

16 2007 ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ವಸತಿ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 8066 71 ಲಕ್ಷ ರೂ ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ 7500 00 ಲಕ್ಷ ರೂ ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು

17 2007 ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಶಿಕ್ಷಣ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 38806 36 ಲಕ್ಷ ರೂ ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ 4443 93 ಲಕ್ಷ ರೂ ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು

18 2007 ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ವಾಣಿಜ್ಯ ಮತ್ತು ಕೈಗಾರಿಕೆ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 64631 39 ಲಕ್ಷ ರೂ ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ 6867 00 ಲಕ್ಷ ರೂ ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು

19 2007 ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ನಗರಾಭಿವೃದ್ಧಿ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 15725 65 ಲಕ್ಷ ರೂ ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ 12300 00 ಲಕ್ಷ ರೂ ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು

20 2007 ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಲೋಕೋಪಯೋಗಿ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 22060 40 ಲಕ್ಷ ರೂ ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ 53794 65 ಲಕ್ಷ ರೂ ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು

21 2007 ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಜಲಸಂಪನ್ಮೂಲ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 3132 26 ಲಕ್ಷ ರೂ ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ 104313 66 ಲಕ್ಷ ರೂ ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು

22 2007 ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 5872 07 ಲಕ್ಷ ರೂ ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ 3000 00 ಲಕ್ಷ ರೂ ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು

23 2007 ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಕಾರ್ಮಿಕ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 915 75 ಲಕ್ಷ ರೂ ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ 400 00 ಲಕ್ಷ ರೂ ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು

24 2007 ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಇಂಧನ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1094 32 ಲಕ್ಷ ರೂ ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ 43500 00 ಲಕ್ಷ ರೂ ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು

25 2007 ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಕನ್ನಡ ಮತ್ತು ಸಂಸ್ಕೃತಿ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 299 60 ಲಕ್ಷ ರೂ ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು

26 2007 ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಯೋಜನೆ ಮತ್ತು ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 674 81 ಲಕ್ಷ ರೂ ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು

27 2007 ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಕಾನೂನು'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 1469 83 ಲಕ್ಷ ರೂ ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು

28 2007 ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ '** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ 189 08 ಲಕ್ಷ ರೂ ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡುವುದು

ಇ) ಕರ್ನಾಟಕ ಧನವಿನಿಯೋಗ ವಿಧೇಯಕ, 2007
ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) – ಮಾನ್ಯ ಚೇರ್ಮನ್‌ರವರೆ, 2007 ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ

ಚೇರ್ಮನ್ – ಪ್ರಸ್ತಾಪ ಏನೆಂದರೆ ,

"2007 ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು "

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) – ಮಾನ್ಯ ಚೇರ್ಮನ್‌ರವರೆ, 2007 ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ

ಚೇರ್ಮನ್ – ವಿಧೇಯಕವನ್ನು ಮಂಡಿಸಲಾಗಿದೆ

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ಧನವಿನಿಯೋಗ ವಿಧೇಯಕ, 2007

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) – ಮಾನ್ಯ ಚೇರ್ಮನ್‌ರವರೆ, 2007 ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ

ಪ್ರಸ್ತಾವವನ್ನು ಮಂಡಿಸಲಾಯಿತು

ಚೇರ್ಮನ್ – ಪ್ರಸ್ತಾವ ಏನೆಂದರೆ,

2007 ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸುವುದು "

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಹಾಗೂ 3

ಚೇರ್ಮನ್ – ಖಂಡ 2 ಹಾಗೂ 3 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ "

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಹಾಗೂ 3 ಎರಡನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಚೇರ್ಮನ್ – ಪ್ರಸ್ತಾವ ಏನೆಂದರೆ,

" ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ "

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) – ಮಾನ್ಯ ಚೇರ್ಮನ್‌ರೇ, 2007 ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ

ಚೇರ್ಮನ್ – ಪ್ರಸ್ತಾವ ಏನೆಂದರೆ,

" 2007 ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಅಂಗೀಕರಿಸುವುದು "

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಶ್ರೀ ಜೆ ಸಿ ಮಾಧುಸ್ವಾಮಿ – ಮಾನ್ಯ ಚೇರ್ಮನ್‌ರೇ ಈ ಪ್ರಸ್ತಾವಕ್ಕೆ ಕೊನೆಗೆ ಅಂಗೀಕಾರ ಒಂದನ್ನು ಕೇಳಿದ್ದರೆ ಸಾಕಾಗಿತ್ತು ಎಲ್ಲವನ್ನು ಚರ್ಚೆ ಮಾಡಿ, ಪ್ರಸ್ತಾವ ಮಂಡಿಸುತ್ತೇವೆ ಪ್ರಸ್ತಾವವನ್ನು ಪರ್ಯಾವಲೋಚನೆಗೆ ಹಾಕುತ್ತೇವೆಂದು ಓದುತ್ತಾ ಕುಳಿತರೆ, ಏನು ಇದು? ನಾವು ಎಲ್ಲಾ ಪ್ರಸ್ತಾವವನ್ನು ಪರ್ಯಾಲೋಚನೆ ಮಾಡಿದ್ದು ಒಂದು ಮಾತನ್ನು ಅವರ ಹತ್ತಿರ ಅಂಗೀಕರಿಸಬೇಕೆಂದು ಕೇಳಿಸಿ, close ಮಾಡುವುದು ಬೇಡವಾ

ಚೇರ್ಮನ್ – ಈಗ ನಿಯಮ 69 ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆಯನ್ನು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಪ್ರಾರಂಭಿಸಬೇಕು

ಶ್ರೀ ಮಲ್ಲಿಕಾರ್ಜುನ ಖರ್ಗೆ – ಇದನ್ನು ನಾಳೆ ತೆಗೆದುಕೊಳ್ಳಿ

ಚೇರ್ಮನ್ – ಈಗ ಸದನದಲ್ಲಿ ಉತ್ತರಿಸುವ ಪ್ರಶ್ನೆಗಳನ್ನು ತೆಗೆದುಕೊಳ್ಳೋಣ ಮಾನ್ಯ ಎಸ್ ಎಸ್ ಪಾಟೀಲ್‌ರವರೆ ಪ್ರಶ್ನೆಯನ್ನು ಕೇಳಿ

4 ಪ್ರಶ್ನೋತ್ತರಗಳು

ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಪ್ರಶ್ನೆ 256(1330)

ಚೇರ್ಮನ್ – ಮಾನ್ಯ ಎಸ್ ಎಸ್ ಪಾಟೀಲ್‌ರವರೇ ತಮ್ಮ ಪ್ರಶ್ನೆ ಕಂದಾಯ ಇಲಾಖೆಯಿಂದ ವಸತಿ ಇಲಾಖೆಗೆ ವರ್ಗಾವಣೆಯಾಗಿದೆ ಇನ್ನು ವಿಶ್ವೇಶ್ವರ ಹೆಗಡೆ ಕಾಗೇರಿಯವರೇ ಪ್ರಶ್ನೆಯನ್ನು ಕೇಳಿ

ಪ್ರಶ್ನೆ ಸಂಖ್ಯೆ 257(1937)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ – ಮಾನ್ಯ ಚೇರ್ಮನ್‌ರವರೇ, ನಾನು ಪ್ರಶ್ನೆಯನ್ನು ಕೇಳುವುದಕ್ಕೆ ತಾಯಾರಿದ್ದೇನೆ ಆದರೆ ಸರ್ಕಾರದವರು ಉತ್ತರ ಕೊಡಲು ಕಾಲಾವಕಾಶಬೇಕೆಂದು ಕೇಳಿದ್ದಾರೆ

ಶ್ರೀ ಡಿ ಕೆ ಶಿವಕುಮಾರ್ – ಮಾನ್ಯ ಚೇರ್ಮನ್‌ರವರೇ, ನಿಯಮ 69 ರ ಮೇಲಿನ ವಿಷಯ ಚರ್ಚೆಯನ್ನು ನಾಳೆ ತೆಗೆದುಕೊಳ್ಳಿಯೆಂದು ಹೇಳಿದ್ದು, ಆಯಿತು ಆದರೆ ನಾವು Zero hour ನಲ್ಲಿ ವಿಷಯ ಪ್ರಸ್ತಾಪಿಸಲು ಕೊಟ್ಟಿದ್ದೇವೆ

ಚೇರ್ಮನ್ – ಈಗ ಪ್ರಶ್ನೋತ್ತರ ಆಗಬೇಕಲ್ಲಾ, ತಾವು ಕೊಟ್ಟಿರುವುದು, list ನಲ್ಲಿ ಇದೆ, ಅದು ನಾಳೆಗೆ ಇದೆ ಇನ್ನು ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್‌ರವರ ಪ್ರಶ್ನೆ

ಭೂಮೌಲ್ಯ ನಿಗದಿಪಡಿಸುವ ಮಾರ್ಗಸೂಚಿಗಳು

258 (1313) ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

a) The guide lines are followed or fixing of the land guidance value of Agricultural land,

ಕೃಷಿ ಜಮೀನುಗಳ ದರ ನಿಗದಿ ಪಡಿಸುವಲ್ಲಿ ಮಾರ್ಗಸೂಚಿಗಳನ್ನು ಅನುಸರಿಸಲಾಗಿದೆಯೇ,

b) The land guidance value of Agricultural lands around Bangalore city and Sedam taluk of Gulbarga Dist

ಬೆಂಗಳೂರು ನಗರ ಮತ್ತು ಸೇಡಂ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಕೃಷಿ ಜಮೀನುಗಳ ಮಾರ್ಗಸೂಚಿ ದರಗಳು,

c) Reasons for difference in land guidance values in Bangalore

city and Sedam Taluk of Gulbarga District, which there is no much difference in crop productivity,

ಸಾಗುವಳಿಯಲ್ಲಿ ಹೆಚ್ಚಾಗಿ ವ್ಯತ್ಯಾಸವಿಲ್ಲದಿದ್ದಾಗ್ಯೂ ಬೆಂಗಳೂರು ನಗರದ ಜಮೀನು ಹಾಗೂ ಸೇಡಂ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆಯ ಜಮೀನುಗಳ ಮಾರ್ಗಸೂಚಿ ದರದಲ್ಲಿನ ವ್ಯತ್ಯಾಸಕ್ಕೆ ಕಾರಣವೇನು,

ಶ್ರೀ ಜಗದೀಶ ಶೆಟ್ಟರ್ (ಕಂದಾಯ ಸಚಿವರು)

a) Yes, ಹೌದು

b) The rates of Agricultural Land in and around the Bangalore (Urban) District have been revised on 05-08-2006

The rates of Agricultural land in Sedam Taluk, Gulbarga District have been revised on 01-04-2003 i e before the establishment of Central Valuation Committee

ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿರುವ ಕೃಷಿ ಜಮೀನುಗಳ ದರಗಳನ್ನು ದಿನಾಂಕ 05–08–2006 ರಂದು ಪರಿಷ್ಕರಿಸಲಾಗಿದೆ

ಸೇಡಂ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆಯ ವ್ಯಾಪ್ತಿಯ ಕೃಷಿ ಜಮೀನುಗಳ ದರಗಳನ್ನು ದಿನಾಂಕ 01–04–2003 ಕ್ಕೆ ಮೊದಲು ಅಂದರೆ ಕೇಂದ್ರೀಯ ಮೌಲ್ಯ ಮಾಪನ ಸಮಿತಿ ಅಸ್ತಿತ್ವದಲ್ಲಿ ಬರುವ ಮೊದಲು ನಿಗದಿಪಡಿಸಲಾಗಿದೆ

As the Bangalore city has widely developed, the Agricultural and non-agricultural land rate around the city increased to a greater extent These rates cannot be compared to the agricultural and non - agricultural land in and around Sedam Taluk, Gulbarga District

ಬೆಂಗಳೂರು ನಗರ ಬೃಹತ್ತಾಗಿ ಬೆಳವಣಿಗೆ ಹೊಂದುತ್ತಿರುವುದರಿಂದ ನಗರದ ಸುತ್ತಮುತ್ತಲಿನ ಕೃಷಿ ಮತ್ತು ಕೃಷಿಯೇತರ ಜಮೀನುಗಳ ದರಗಳಲ್ಲಿ ಭಾರಿ ಏರಿಕೆ ಇದೆ ಈ ದರಗಳನ್ನು ಸೇಡಂ ತಾಲ್ಲೂಕಿನ ಕೃಷಿ ಮತ್ತು ಕೃಷಿಯೇತರ ಜಮೀನುಗಳ ದರಗಳಿಗೆ ಹೋಲಿಸುವುದು ಸಾಧ್ಯವಿಲ್ಲ

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ – ಮಾನ್ಯ ಚೇರ್ಮನ್‌ರೇ ನಾನು ಕೇಳಿರುವಂತಹ ಪ್ರಶ್ನೆಗೆ ಸರ್ಕಾರದವರು ಸರಿಯಾದ ಉತ್ತರವನ್ನು ಕೊಟ್ಟಿಲ್ಲವೆಂದರೆ, ಇವರು ಮೂಲಭೂತವಾಗಿ ಇವತ್ತು ತಪ್ಪು ಉತ್ತರವನ್ನು ಕೊಟ್ಟಿದ್ದಾರೆ ನಾನು ಈ ಬಗ್ಗೆ ಮಾನ್ಯ ಮಂತ್ರಿಯವರಿಗೆ ಹೇಳಿದ್ದೇನೆ ನಾನು ಕೇಳಿರುವಂಥ ಪ್ರಶ್ನೆ ಇಷ್ಟೇ Agricultural Land ಗೆ Land Value ವನ್ನು Fix ಮಾಡುವುದಕ್ಕೆ ಇವತ್ತು ಏನು ಮಾರ್ಗಸೂಚಿಗಳಿವೆ ಎಂಬ ಪ್ರಶ್ನೆಯನ್ನು ಕೇಳಿದ್ದೇನೆ ಅದಕ್ಕೆ ಸರ್ಕಾರದ ಉತ್ತರ ಹೌದು ಎಂದು ಕೊಟ್ಟಿದ್ದಾರೆ ಅಂದರೆ ಇವತ್ತು ಇದನ್ನು ನೀವೇ decide ಮಾಡಬೇಕು ಅದಕ್ಕೆ ಮಾನ್ಯ ಮಂತ್ರಿಯವರು ಉತ್ತರ ತಪ್ಪು ಉತ್ತರವನ್ನು ಕೊಟ್ಟಿದ್ದೇವೆಂದು ಒಪ್ಪಿಕೊಂಡಿದ್ದಾರೆ

ಶ್ರೀ ಜಗದೀಶ್ ಶೆಟ್ಟರ್ – ಮಾನ್ಯ ಚೇರ್ಮನ್‌ರವರೇ ಇಲ್ಲಿ ಮಾನ್ಯ ಸದಸ್ಯರು ಮೂಲವಾಗಿ ಏನು ಪ್ರಶ್ನೆಯನ್ನು ಕೇಳಿದ್ದರು ಅದಕ್ಕೆ ನಮ್ಮ ಇಲಾಖೆಯಲ್ಲಿ ಉತ್ತರವನ್ನು ಕೊಡುವಂಥ ಸಂದರ್ಭದಲ್ಲಿ ಅದು ತಪ್ಪಾಗಿದೆ, ಅದನ್ನು ನಾನು ಒಪ್ಪಿಕೊಳ್ಳುತ್ತಿದ್ದೇನೆ ಅದನ್ನು ನಾನು with draw ಮಾಡಿಕೊಂಡು ಇದೇ ಅಧಿವೇಶನದಲ್ಲಿ ಸರಿಯಾದ ಉತ್ತರವನ್ನು ಕೊಡುತ್ತೇನೆ

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ – ಮಾನ್ಯ ಚೇರ್ಮನ್‌ರವರೇ, ನನಗೆ ಇದೇ ಅಧಿವೇಶನದಲ್ಲಿ ಉತ್ತರ ಕೊಡಬೇಕು

ಶ್ರೀ ಜಗದೀಶ್ ಶೆಟ್ಟರ್ '– ಕೊಡುತ್ತೇನೆ

ಶ್ರೀ ಡಿ ಕೆ ಶಿವಕುಮಾರ್ – ತಾವು ಇದೇ ಅಧಿವೇಶನದಲ್ಲಿ ಉತ್ತರವನ್ನು ಕೊಡುತ್ತಿದ್ದೀರಿ, ಸರಿ ಆದರೆ ಏನು guidance value fix ಮಾಡಿದೆ ಅದರ ಬಗ್ಗೆ ವ್ಯಾಪಕವಾದಂಥ ಚರ್ಚೆಯಾಗಬೇಕು ನಿಮ್ಮ officials ಏನು ಹೇಳಿದ್ದಾರೆ

ಅದು ಏನೋ ಒಂದು developers ಅನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಿದ್ದೀರಿ ಆದರೆ ಈ ರಾಜ್ಯದಲ್ಲಿ common man ಅನ್ನು ದೃಷ್ಟಿಯಲ್ಲಿಟ್ಟುಕೊಂಡು ಸಾಮಾನ್ಯ ಜನರನ್ನು ದೃಷ್ಟಿಯಲ್ಲಿಟ್ಟುಕೊಂಡು ತಾವು ಏನು raise ಮಾಡಿದ್ದೀರಿ ಇದರಿಂದ ಬಹಳ ದುಬಾರಿಯಾಗುತ್ತದೆ National level ನಲ್ಲಿ ಬೇರೆ ರಾಜ್ಯಗಳಲ್ಲಿ register fee ಬರೀ 5% ಇದೆ

ಚೇರ್ಮನ್ – ಶ್ರೀ ಡಿ ಕೆ ಶಿವಕುಮಾರ್‌ರವರೇ ಈ ಪ್ರಶ್ನೆ ಮುಂದಕ್ಕೆ ಹೋಗಿದೆ ಮಾನ್ಯ ಮಂತ್ರಿಯವರು ಮುಂದೆ ಉತ್ತರವನ್ನು ಕೊಡುತ್ತೇವೆಂದು ಹೇಳಿದ್ದಾರೆ

ಶ್ರೀ ಡಿ ಕೆ ಶಿವಕುಮಾರ್ – ತಾವು announcement ಕೊಟ್ಟು ಇದನ್ನು ಕಾನೂನು ರೂಪದಲ್ಲಿ ತರುವುದಕ್ಕಿಂತ ಮುಂಚಿತವಾಗಿ, ಚರ್ಚೆ ಮಾಡಿ

ಶ್ರೀ ಜಗದೀಶ್ ಶೆಟ್ಟರ್ – ಈ ಅಧಿವೇಶನದಲ್ಲಿ ಚರ್ಚೆ ಮಾಡೋಣ

ಶ್ರೀ ಡಿ ಕೆ ಶಿವಕುಮಾರ್ – ಆಯಿತು

ಶ್ರೀ ಜೆ ಸಿ ಮಾಧುಸ್ವಾಮಿ – ಮಾನ್ಯ ಚೇರ್ಮನ್‌ರೇ, ಮಾನ್ಯ ಮಂತ್ರಿಯವರು ತಪ್ಪು ಉತ್ತರವನ್ನು ಕೊಟ್ಟಿದ್ದೇನೆಂದು ಅಸೆಂಬ್ಲಿಯಲ್ಲಿ ಹೇಳಿದರೆ, ಅಲ್ಲಿಗೆ ಜವಾಬ್ದಾರಿ ಮುಗಿಯಲಿಲ್ಲ ಈ ರೀತಿ ತಪ್ಪು ಉತ್ತರವನ್ನು ಕೊಡಿಸಿದವರ ಮೇಲೆ ಏನು action ತೆಗೆದುಕೊಳ್ಳುತ್ತೀರಿ? ಅದನ್ನು ನೀವು ಇಲ್ಲಿ ಹೇಳಬೇಕು

ಶ್ರೀ ಜಗದೀಶ್ ಶೆಟ್ಟರ್ – ನಾವು ಒಪ್ಪಿಕೊಂಡಿದ್ದೇವೆ ಇಲ್ಲಿ ಏನಾಗಿದೆಯೆಂದರೆ, ಮಾನ್ಯ ಸದಸ್ಯರು guidance value ಬಗ್ಗೆ

ಶ್ರೀ ಜೆ ಸಿ ಮಾಧುಸ್ವಾಮಿ – ದಯಮಾಡಿ ಕೇಳಿ, question hour ಅನ್ನು drag ಮಾಡುವುದಿಲ್ಲ ತಾವು ತಪ್ಪು ಉತ್ತರವನ್ನು ಕೊಟ್ಟಿರುವಂಥಾದ್ದು ನಿಜವೆಂದು ಒಪ್ಪಿಕೊಂಡು ಬಿಟ್ಟಿರಿ ಈ ತಪ್ಪು ಉತ್ತರವನ್ನು ನಿಮ್ಮ ಬಾಯಲ್ಲಿ ಹೇಳಿಸಿದವರ ಮೇಲೆ ಏನು action ತೆಗೆದುಕೊಳ್ಳುತ್ತೀರೆಂದು ಕೇಳುತ್ತಿದ್ದೇನೆ ಹೇಳಿ, can officials play like this ?

ಶ್ರೀ ಜಗದೀಶ್ ಶೆಟ್ಟರ್ – I will take action I will take explanation from the concerned

ಪಾವಗಡ ತಾಲ್ಲೂಕಿನಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವುದು

260 (1451) ಶ್ರೀ ಕೆ ಎಂ ತಿಮ್ಮರಾಯಪ್ಪ (ಪಾವಗಡ) – ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಾವಗಡ ತಾಲ್ಲೂಕು ಶಾಶ್ವತ ಬರಗಾಲ ಪ್ರದೇಶವೆಂದು ಸರ್ಕಾರಕ್ಕೆ ಗೊತ್ತಿದೆಯೇ,

ಆ) ನಂಜುಂಡಪ್ಪ ವರದಿಯಲ್ಲಿ ಪಾವಗಡ ತಾಲ್ಲೂಕು ಅತೀ ಹಿಂದುಳಿದ ತಾಲ್ಲೂಕು ಎಂದು ಗೊತ್ತಿದ್ದರೂ ಇಲ್ಲಿನ ಯುವ ಜನತೆಗೆ ಯಾವುದಾದರೂ ಕೈಗಾರಿಕೆ ಸ್ಥಾಪಿಸಲು ಮುಂದೆ ಬಂದರೆ ಒಳ್ಳೆಯದಲ್ಲವೇ,

ಇ) ಯಾವುದೇ ಕೈಗಾರಿಕೆ ಅಥವಾ ಉದ್ದಿಮೆ ಸ್ಥಾಪನೆ ಇಲ್ಲದೆ ಇರುವುದರಿಂದ ಇಲ್ಲಿನ ಯುವ ಜನತೆ ತೀವ್ರ ಸಂಕಷ್ಟಕ್ಕೆ ಒಳಗಾಗುತ್ತಿರುವುದೇ,

ಈ) ಹಾಗಿದ್ದಲ್ಲಿ, ಕೈಗಾರಿಕೆ ಸ್ಥಾಪಿಸುವುದರೊಂದಿಗೆ ಯುವ ಜನತೆ ಇನ್ನು ಮುಂದೆ ಸರಿಯಾದ ದಿಕ್ಕಿನಲ್ಲಿ ಸಾಗಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಹೌದು

ಆ) ಹೌದು

ಇ) ಹೌದು

ಈ) ಹೌದು ಕೈಗಾರಿಕಾ ವಿಕಾಸ ಯೋಜನೆಯಡಿಯಲ್ಲಿ ಪಾವಗಡ ತಾಲ್ಲೂಕಿನ ಗುಮ್ಮಘಟ್ಟ ಗ್ರಾಮದಲ್ಲಿ ಕರ್ನಾಟಕ ರಾಜ್ಯ ವಿದ್ಯುತ್‌ಮಗ್ಗ ನಿಗಮದ ವತಿಯಿಂದ ವಿದ್ಯುತ್‌ಮಗ್ಗ ಸಂಕೀರ್ಣವನ್ನು ಸ್ಥಾಪಿಸಲು ಯೋಜನೆಯನ್ನು ರೂಪಿಸಲಾಗಿದೆ

ಇದಕ್ಕಾಗಿ ಒಂದು ಎಕರೆ ಜಮೀನನ್ನು ಗುಮ್ಮಘಟ್ಟ ಗ್ರಾಮದಲ್ಲಿ ಖರೀದಿಸಲಾಗಿದೆ ಮೊದಲನೇ ಹಂತದಲ್ಲಿ 10 ಜನರಿಗೆ ಈಗಾಗಲೇ ವಿದ್ಯುತ್‌ಮಗ್ಗದಲ್ಲಿ ಆರಂಭಿಕ 6 ತಿಂಗಳ ತರಬೇತಿಯನ್ನು ನೀಡಲಾಗಿದೆ 10 ವಿದ್ಯುತ್‌ಮಗ್ಗಗಳನ್ನು ಸ್ಥಾಪಿಸಲು ಬೇಕಾಗಿರುವ ಸಾಮಾನ್ಯ ಕಾರ್ಯಾಗಾರ ಮತ್ತು ವಸತಿ ಕಾರ್ಯಾಗಾರಗಳನ್ನು ಒಟ್ಟು ರೂ 37 80 ಲಕ್ಷ ವೆಚ್ಚದಲ್ಲಿ ನಿರ್ಮಿಸಲು ಯೋಜಿಸಿದೆ ಕಟ್ಟಡ ನಿರ್ಮಾಣ ಕಾರ್ಯವನ್ನು ಸದ್ಯದಲ್ಲಿಯೇ ಪ್ರಾರಂಭಿಸಲಾಗುವುದು

ಎರಡನೇ ಹಂತದಲ್ಲಿ 15 ಜನರಿಗೆ 45 35 ಲಕ್ಷಗಳ ವೆಚ್ಚದಲ್ಲಿ ಮೇಲೆ ತಿಳಿಸಿರುವ ಸೌಲಭ್ಯಗಳನ್ನು ಕಲ್ಪಿಸಲು ಯೋಜಿಸಿದೆ

ವೈ ಎನ್ ಹೊಸಕೋಟೆಯಲ್ಲಿ 100 ವಿದ್ಯುತ್ ಮಗ್ಗಗಳ ಸ್ಥಾಪನೆಗೆ ರೂ 334 29 ಲಕ್ಷಗಳ ಯೋಜನೆಯನ್ನು ರೂಪಿಸಲಾಗಿದೆ

ಇದಲ್ಲದೆ, 2006–07 ನೇ ಸಾಲಿನಲ್ಲಿ ಸ್ಥಳೀಯ ಜನರಿಗೆ ಉದ್ಯಮಶೀಲತಾ ಅಭಿವೃದ್ಧಿಗಾಗಿ ಪಾವಗಡ ಮತ್ತು ವೈ ಎನ್ ಹೊಸಕೋಟೆಯಲ್ಲಿ ಉದ್ದಿಮೆ ಶೀಲತಾ ತಿಳುವಳಿಕೆ ಕಾರ್ಯಾಗಾರವನ್ನು ಈಗಾಗಲೇ ಏರ್ಪಡಿಸಲಾಗಿದೆ ಪಾವಗಡದಲ್ಲಿ ಉದ್ದಿಮೆಶೀಲತಾ ತರಬೇತಿಯನ್ನು ಟೆಕ್ಸಾಕ್ ಸಂಸ್ಥೆಯ ಮೂಲಕ ನಡೆಸಲಾಗಿದೆ

ಶ್ರೀ ಕೆ ಎಂ ತಿಮ್ಮರಾಯಪ್ಪ – ಮಾನ್ಯ ಚೇರ್ಮನ್‌ರವರೇ ನಾನು ಪಾವಗಡ ತಾಲ್ಲೂಕು ಶಾಶ್ವತ ಬರಗಾಲ ಪ್ರದೇಶವೆಂದು ಕೇಳಿರುವ ಪ್ರಶ್ನೆಗೆ ಹೌದೆಂದು ಉತ್ತರವನ್ನು ಕೊಟ್ಟಿದ್ದಾರೆ ಎರಡನೆಯ ಪ್ರಶ್ನೆ ನಂಜುಂಡಪ್ಪ ವರದಿಯಲ್ಲಿ ಪಾವಗಡ ತಾಲ್ಲೂಕು ಅತೀ ಹಿಂದುಳಿದ ತಾಲ್ಲೂಕು ಎಂದು ಹೇಳಿದ್ದು, ಅದನ್ನು ಸರ್ಕಾರ ಒಪ್ಪಿಕೊಂಡಿದೆ ಇಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ ಮುಂದೆ ಬಂದು ಇಲ್ಲಿ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸುವುದಕ್ಕೆ ಸರ್ಕಾರದಿಂದ ಅನುಕೂಲ ಮಾಡಿಯೆಂದು ಕೇಳಿದಾಗ, ಅವರು ಯಾವುದೋ ಒಂದು ಹಳ್ಳಿಯಲ್ಲಿ 10 ಜನರ ಒಂದು ತರಬೇತಿಯನ್ನು ಕೊಡುವಂತಹ ವಿದ್ಯುತ್ ಮಗ್ಗದ ಬಗ್ಗೆ ಮಾತ್ರ ಉತ್ತರದಲ್ಲಿ ಕೊಟ್ಟಿದ್ದರೆ ಎರಡನೇ ಹಂತದಲ್ಲಿ 15 ಜನರಿಗೆ ತರಬೇತಿಯನ್ನು ಕೊಡಿಸುತ್ತೇವೆಂದು

ಉತ್ತರವನ್ನು ಕೊಟ್ಟಿದ್ದಾರೆ ಇದರ ಜೊತೆಗೆ ವೈ ಎನ್ ಹೊಸಕೋಟೆ ಮತ್ತು ಪಾವಗಡದಲ್ಲಿ 100 ವಿದ್ಯುತ್ ಮಗ್ಗಗಳ ಸ್ಥಾಪನೆಗೆ 334 ಲಕ್ಷ ರೂಪಾಯಿಗಳನ್ನು ವಿನಿಯೋಗಿಸುತ್ತೇವೆಂದು ಉತ್ತರವನ್ನು ಕೊಟ್ಟಿದ್ದಾರೆ ನಾನು ಕೇಳುವಂತಹ ಪ್ರಶ್ನೆಯೆಂದರೆ ಸಾವಿರಾರು ಜನರು ನಿರುದ್ಯೋಗ ಸಮಸ್ಯೆಯಿಂದ ಬಳಲುತ್ತಿದ್ದಾರೆ ಈ ನಿರುದ್ಯೋಗ ಸಮಸ್ಯೆಯಿಂದ ಇವತ್ತು ನಗರದ ಅನೇಕ ಭಾಗಗಳಿಗೆ ವಲಸೆ ಹೋಗುವಂಥ ಪರಿಸ್ಥಿತಿ ಇದೆ ಅಲ್ಲಿನ ವಿದ್ಯಾವಂತರಿಗೆ ಇವತ್ತು ಕೆಲಸವಿಲ್ಲ ಅವರು ಕೆಲಸಕ್ಕಾಗಿ ಅಲೆದು ಅಲೆದು ಬಹಳ ಸುಸ್ತಾಗಿ ಅನೇಕ ಜನರು ಈಗ ಬೆಂಗಳೂರು ಮತ್ತು ಬೇರೆ ಬೇರೆ ಭಾಗಗಳಿಗೆ ಹೋಗುತ್ತಿರತಕ್ಕಂಥ ಒಂದು ಪರಿಸ್ಥಿತಿ ಇರುವುದರಿಂದ ಪಾವಗಡದಲ್ಲಿ ಯಾವುದಾದರೊಂದು ಕೈಗಾರಿಕೆಯನ್ನು ಸ್ಥಾಪನೆ ಮಾಡುವುದರ ಮುಖಾಂತರ ಅಲ್ಲಿನ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಲಿಕ್ಕೆ ಏನಾದರೂ ಅನವು ಮಾಡಿಕೊಡಬೇಕೆಂದು ನಾನು ಪ್ರಶ್ನೆಯನ್ನು ಕೇಳಿದ್ದೇನೆ ಅದಕ್ಕೆ ಸರ್ಕಾರದಿಂದ ಸರಿಯಾದ ಉತ್ತರವನ್ನು ಕೊಟ್ಟಿಲ್ಲ ದಯವಿಟ್ಟು , ಸರ್ಕಾರ ಈ ಬಗ್ಗೆ ಚಿಂತನೆ ಮಾಡಿ ನಂಜುಂಡಪ್ಪ ವರದಿಯಲ್ಲಿ ಏನೊಂದು ಅತಿ ಹಿಂದುಳಿದ ತಾಲ್ಲೂಕು ಎಂದು ನಮೂದು ಮಾಡಿದ್ದಾರೆ, ಅಂಥ ಒಂದು ತಾಲ್ಲೂಕಿಗೆ ಆ ಭಾಗದ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸುವುದಕ್ಕೆ ಯಾವುದಾದರೂ ಒಂದು ಕೈಗಾರಿಕೆಯನ್ನು ಅಲ್ಲಿ ಸ್ಥಾಪನೆ ಮಾಡುವ ಮೂಲಕ ಅಲ್ಲಿಯ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಬೇಕೆಂದು ಸರ್ಕಾರವನ್ನು ಮತ್ತೊಂದು ಸಲ ನಾನು ಮನವಿ ಮಾಡುತ್ತಿದ್ದೇನೆ

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು – ಸನ್ಮಾನ್ಯ ಅಧ್ಯಕ್ಷರೇ, ಪವಗಡ ತಾಲ್ಲೂಕಿನಲ್ಲಿ ಈಗಾಗಲೇ ಸುವರ್ಣ ಕಾಯಕ ಉದ್ಯೋಗ ಶಿಕ್ಷಣ ಯೋಜೆಯಡಿಯಲ್ಲಿ 400 ಜನರಿಗೆ ನಾವು ಸಂದರ್ಶನ ಮಾಡಿದ್ದೆವು ಅವರಿಗೆ interview ಕಳುಹಿಸಿದ್ದರೆ 10 ಜನ ಮಾತ್ರ ಬೆಂಗಳೂರಿಗೆ ಬಂದು ಕೆಲಸ ಮಾಡುತ್ತಾರೆ ಹಿಂದುಳಿದ ತಾಲ್ಲೂಕು ಆಗಿದ್ದು ಅಲ್ಲಿಯ ನಿರುದ್ಯೋಗಿ ಯುವಕರಿಗೆ ಕೆಲಸ ಕೊಡಿಸಬೇಕೆಂದು ತುಮಕೂರಿಗೆ

ಕರೆದು, ಬೆಂಗಳೂರಿನಲ್ಲಿ ಕರೆದು ಅವರಿಗೆ ಸಂದರ್ಶನ ಮಾಡಿದ್ದರೆ ಅವರು ಬೆಂಗಳೂರಿಗೆ ಬಂದು ಕೆಲಸ ಮಾಡಲಿಕ್ಕೆ ತಯಾರಿಲ್ಲ ಪಾವಗಡದಲ್ಲಿ ಯಾರಾದರೂ ಖಾಸಗಿಯವರು ಬಂದಾಗ ಮಾತ್ರ ಕಾರ್ಖಾನೆಗಳನ್ನು ಸ್ಥಾಪನೆ ಮಾಡಲಿಕ್ಕೆ ಸಾಧ್ಯವಾಗುತ್ತದೆ ಸರ್ಕಾರ ಯಾವ ಜಿಲ್ಲೆಯಲ್ಲಿ, ಯಾವ ತಾಲ್ಲೂಕಿನಲ್ಲಿ ಕೂಡ ಕಾರ್ಖಾನೆಗಳನ್ನು ಸ್ಥಾಪನೆ ಮಾಡುವಂಥದ್ದು ಇಲ್ಲ ಖಾಸಗಿಯವರು ಅಲ್ಲಿಗೆ ಬಂದು ಕಾರ್ಖಾನೆ ಆರಂಭಿಸುವುದಾದರೆ ಖಂಡಿತವಾಗಿ ಅವರಿಗೆ ಪ್ರೋತ್ಸಾಹವನ್ನು ಕೊಡುತ್ತೇವೆ

ಎರಡನೆಯದಾಗಿ, ಈ ವರ್ಷದ ಬಜೆಟ್‌ನಲ್ಲಿ ನಂಜುಂಡಪ್ಪ ವರದಿಯ ಆಧಾರದ ಮೇಲೆ 1571 ಕೋಟಿ ರೂಪಾಯಿಗಳಷ್ಟು ಹಣವನ್ನು ಮೀಸಲಿಟ್ಟಿದ್ದು, ಆ ತಾಲ್ಲೂಕಿನಲ್ಲಿ ಕೂಡ ಕೈಗಾರಿಕೆಗಳಿಗೆ ಯಾವ ರೀತಿ ಪ್ರೋತ್ಸಾಹವನ್ನು ಕೊಡಬೇಕೆಂದು ಹೇಳಿ ಆರ್ಥಿಕ ಸಚಿವರ ಜೊತೆ ಮಾತನಾಡಿ ಸರ್ಕಾರ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತದೆ

ಮಾಲಿನ್ಯ ನಿಯಂತ್ರಣ ಮಂಡಳಿಯ ನಿಯಮಗಳು

261(1799) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರದ್) :– ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳ ಅವಧಿಯಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಯಾವ ಯಾವ ಸಂಸ್ಥೆಗಳಿಗೆ ವಾಣಿಜ್ಯ ಸಂಕೀರ್ಣ, ಅಪಾರ್ಟ್‌ಮೆಂಟ್, ಮಲ್ಟಿಪ್ಲೆಕ್ಸ್ ಥಿಯೇಟರ್ ಹಾಗೂ ಮಾಲ್‌ಗಳು ಪಂಚತಾರಾ ಹೋಟೆಲ್‌ಗಳನ್ನು ಸ್ಥಾಪಿಸಲು ಅನುಮತಿ ಪತ್ರಗಳನ್ನು ನೀಡಿದ್ದಾರೆ,

ಆ) ಇವುಗಳ ಅಂದಾಜು ವೆಚ್ಚವೆಷ್ಟು, (ಪ್ರತಿಯೊಂದರ ಬಗ್ಗೆ ಪ್ರತ್ಯೇಕ ವಿವರಗಳನ್ನು ಒದಗಿಸುವುದು),

ಇ) ಈ ಪೈಕಿ ಎಷ್ಟು ಸಂಸ್ಥೆಗಳು ಮಂಡಳಿಯು ವಿಧಿಸಿರುವ ನಿಯಮಗಳನ್ನು ಉಲ್ಲಂಘನೆ ಮಾಡಿ ಅಥವಾ ಅನುಮತಿ ಪಡೆಯದೇ ನಿರ್ಮಾಣ ಕಾಮಗಾರಿಗಳನ್ನು ನಡೆಸುತ್ತಿದ್ದಾರೆ,

ಈ) ಈ ಪೈಕಿ ಎಷ್ಟು ಸಂಸ್ಥೆಗಳ ಮೇಲೆ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಲಾಗಿದೆ ಹಾಗೂ ಎಷ್ಟು ಪ್ರಕರಣಗಳು ನ್ಯಾಯಾಲಯದ ಮುಂದಿದೆ,

ಉ) ಮಂಡಳಿಯ ಅಧಿಕಾರಿಗಳು ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಿದ್ದರೂ ಸಹ ನಿರ್ಮಾಣ ಕಾಮಗಾರಿಗಳನ್ನು ಮುಂದುವರೆಸಿಕೊಂಡು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ಇಂತಹ ಸಂಸ್ಥೆಗಳ ಹೆಸರು ವಿವರ ಒದಗಿಸುವುದು),

ಊ) ಮಂಡಳಿಯ ಕೆಲವು ಅಧಿಕಾರಿಗಳು ಇದಕ್ಕೆ ಪರೋಕ್ಷವಾಗಿ ಸಹಕರಿಸುತ್ತಿರುವುದು ನಿಜವೇ,

ಋ) ಇಲ್ಲದೇ ಇದ್ದಲ್ಲಿ ಇಂತಹ ಸಂಸ್ಥೆಗಳ ಕಾಮಗಾರಿಗಳನ್ನು ಕೂಡಲೆ ಸ್ಥಗಿತಗೊಳಿಸಲು ಸರ್ಕಾರದ ಮುಂದಿರುವ ಕ್ರಮಗಳೇನು?

ಶ್ರೀ ಸಿ ಚನ್ನಿಗಪ್ಪ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು)

ಅ) ಕಳೆದ 3 ವರ್ಷಗಳಿಂದ (ಫೆಬ್ರವರಿ 2007ರವರೆಗೆ) ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಇ ಐ ಎ ಅಧಿಸೂಚನೆಗೆ ಒಳಪಡುವ ವಸತಿ/ ವಾಣಿಜ್ಯ ಸಂಕೀರ್ಣಗಳಿಗೆ/ಮಲ್ಟಿಪ್ಲೆಕ್ಸ್‌ಗಳಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1974 ಮತ್ತು ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1981ರ ಅಡಿಯಲ್ಲಿ ನೀಡಿರುವ ಸ್ಥಾಪನಾ ಸಮ್ಮತಿ ಪತ್ರದ ಪಟ್ಟಿಯನ್ನು ಅನುಬಂಧ – 1 ರಲ್ಲಿ ಲಗತ್ತಿಸಿದೆ

ಆ) ಪಟ್ಟಿಯನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ

ಇ) ಈ ಅವಧಿಯಲ್ಲಿ ಮಂಡಳಿಯಿಂದ ಸ್ಥಾಪನಾ ಸಮ್ಮತಿ ಪತ್ರವನ್ನು ಪಡೆಯದೆ ಇರುವ ಸಂಸ್ಥೆಗಳ ಪಟ್ಟಿಯನ್ನು ಅನುಬಂಧ–2 ರಲ್ಲಿ ಲಗತ್ತಿಸಿದೆ

ಈ) ನಿಯಮಗಳ ಉಲ್ಲಂಘನೆ ಮಾಡಿರುವ ಸಂಸ್ಥೆಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲಾಗಿರುತ್ತದೆ ಸದರಿ ಸಂಸ್ಥೆಗಳ ಪಟ್ಟಿಯನ್ನು ಅನುಬಂಧ–3 ರಲ್ಲಿ ಲಗತ್ತಿಸಿದೆ

ಉ) ಸದರಿ ಸಂಸ್ಥೆಗಳ ಪಟ್ಟಿಯನ್ನು ಅನುಬಂಧ–4 ರಲ್ಲಿ ಲಗತ್ತಿಸಿದೆ

ಊ) ಇಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ

ಋ) ಇಂತಹ ಪ್ರಕರಣಗಳನ್ನು ಕೂಡಲೇ ಸ್ಥಗಿತಗೊಳಿಸಲು ಸರ್ಕಾರಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸುವುದಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ತಿಳಿಸಿರುತ್ತದೆ ಪ್ರಸ್ತಾವನೆ ಸಲ್ಲಿಸಿದ ತಕ್ಷಣ ಪರಿಸರ (ಸಂರಕ್ಷಣಾ) ಕಾಯ್ದೆ, 1986ರ ಸೆಕ್ಷನ್ 5ರ ಪ್ರಕಾರ ಇಂತಹ ಕಟ್ಟಡ ಕಾಮಗಾರಿಗಳನ್ನು ಸ್ಥಗಿತಗೊಳಿಸಲು ಸರ್ಕಾರವು ನಿರ್ದೇಶನವನ್ನು ನೀಡುತ್ತದೆ

ANNEXURE -I

Sl.No	Name & location of the project	Investment (Rs.in Crores)
1	FDA Karnataka Estates Limited Sy No 6,7 9 & 19 (Municipal Nos 1/9 7/1 , 8/1, of Hanumanthapura and Sy No.2 of Kempapura, Magadi Main Road Bangalore	83 47
2	Century Realtors, Sy No 1A, Block - 1 Sy No 1A, Block-6 Jakkur Plantations, Yelahanka Hobli, Bangalore North Taluk.	31 93
3	Millennia Realtors Private Limited, No 3, Sy Nos 147/2 & 10 Old Madras Road, Benniganahalli, Bangalore	205
4	Manyata Promoters Private Limited, Outer Ring Road, Nagawara, Bangalore	750
5	Millennia Realtors Private Limited, Plot No.1 1/1,2,4 & 5, 23/4, 24/1, 24/2, 25/2 & 25/3, Sonnenahalli Village Bangalore East Taluk.	79 80
6	India Heritage Trust & ISKCON Charities Sy.No 39/1 39/2, 47/1, 47/2, Vasanthpura Village, and Sy.No 56, 57, 58, 59 & 60 Doddakallasandra Village Uthara Halli Hobli, Bangalore South Taluk	244 71
ಬಾಕಿ ಉಳಿದಿವೆ ಎಂದರೆ, ಅಲ್ಲಿ ಸಿಬ್ಬಂದಿಗಳ ಕೊರತೆಯಿದೆ ನನ್ನ ತಾಲ್ಲೂಕಿನಲ್ಲಿ 15 ದಿವಸಕ್ಕೊಮ್ಮೆ ಸಭೆ ಕರೆದರು ಆ ಫೈಲ್ 4-5 ರ ಮೇಲೆ ಟೇಬಲ್ ಮೇಲೆ ಬರುವುದಿಲ್ಲ ಏಕೆಂದರೆ, ಸರ್ವೇ ಮಾಡುವುದಕ್ಕೆ ಸರ್ವೇಯರ್ ಇಲ್ಲ ಆ ಸರ್ವೇಯರ್ಸ್‌ನನ್ನು ಇನ್ಯಾವುದೋ ಕಾರ್ಯಕ್ರಮಕ್ಕೆ ನಿಯೋಜಿಸಿರುತ್ತಾರೆ ಕೈ ಬೆಚ್ಚಿಗೆ ಮಾಡಿದವರದ್ದು ಮಾತ್ರ ಸರ್ವೇಯಾಗಿ ಆ ಫೈಲ್ ಟೇಬಲ್ ಮೇಲೆ ಬರುತ್ತದೆ ಕೈ ಬೆಚ್ಚಿಗೆ ಮಾಡುವುದಕ್ಕೆ ಶಕ್ತಿಯಿಲ್ಲದಿರತಕ್ಕಂಥ ಬಡವನ ಫೈಲ್ ಇನ್ನು ಹತ್ತು ವರ್ಷವಾದರೂ ಅದು ಟೇಬಲ್‌ಗೆ ಬರುವುದಿಲ್ಲ ಈ ಸ್ಥಿತಿ ಇದೆ ಶೀಘ್ರ ವಿಲೇವಾರಿ ಮಾಡಲಿಕ್ಕೆ ಕಂದಾಯ ಇಲಾಖೆ ತೆಗೆದುಕೊಂಡಿರತಕ್ಕಂಥ ಕ್ರಮಗಳೇನು? ಇವೆಲ್ಲಾವನ್ನು ನಿರ್ಧಿಷ್ಟ ಅವಧಿಯಲ್ಲಿ ವಿಲೇವಾರಿ ಮಾಡಿ ಆ ಬಡವನಿಗೆ ಹಕ್ಕು ಪತ್ರ ಕೊಡತಕ್ಕಂಥ ಕೆಲಸವಾಗಬೇಕಲ್ಲ, ಅದಕ್ಕೇನು ಸರ್ಕಾರ ಕ್ರಮ ತೆಗೆದುಕೊಂಡಿದೆ? ಮತ್ತೊಂದು ಪ್ರಶ್ನೆ ಏನೆಂದರೆ, ಚಿಕ್ಕಮಗಳೂರಿನ ವಿವಾದಿತ ಸಾಗುವಳಿ ಪ್ರದೇಶದಲ್ಲಿ ಕಂದಾಯ ಮತ್ತು ಅರಣ್ಯ ಭೂಮಿ ಗುರುತಿಸುವ ಕಾರ್ಯ ಆಗಿದೆಯೇ? ಆಗಿದ್ದರೆ ಯಾವಾಗ ಮಾಡಲಾಗಿದೆ ಎಂದು ಪ್ರಶ್ನೆ ಕೇಳಿದ್ದೆ ಅದಕ್ಕವರು ಉತ್ತರ ಕೊಟ್ಟಿದ್ದಾರೆ ಜಿಲ್ಲೆಯ ಹಲವಾರು ಸರ್ವೇ ನಂಬರ್‌ಗಳಲ್ಲಿ ಭಾಗಶಃ ಅರಣ್ಯ ಹಾಗೂ ಕಂದಾಯ ಜಮೀನುಗಳಿದ್ದು, ಅರಣ್ಯ ಹಾಗೂ ಕಂದಾಯ ಅಧಿಕಾರಗಳ ಜಂಟಿ ಸರ್ವೇಯಿಂದ ಹಾಗೂ ಸರ್ವೇ ಆಫ್ ಇಂಡಿಯಾದ ಸರ್ವೇಯಿಂದ ಗಡಿಗುರುತಿಸುವ ಕಾರ್ಯ ನಡೆಸಲಾಗುತ್ತಿದೆ ಚಿಕ್ಕಮಗಳೂರು ತಾಲ್ಲೂಕು ಸಾರಗೋಡು ಮತ್ತು ಮಸ್ಕಲಿ ಮೀಸಲು ಅರಣ್ಯ ಪ್ರದೇಶಗಳಲ್ಲಿ ಗಡಿ ಗುರುತಿಸುವ ಕಾರ್ಯ ಪ್ರಗತಿಯಲ್ಲಿದೆ 2003ನೇ ಸಾಲಿನಿಂದ ಸರ್ವೇ ಕಾರ್ಯ ನಡೆದಿದ್ದು ವಿವಾದಗಳ ಹಿನ್ನಲೆಯಲ್ಲಿ ಪುನರ್ ಸರ್ವೇ ಕಾರ್ಯ ನಡೆಸಲಾಗುತ್ತಿದೆ ಎಂದು ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ ಆದರೆ, ಇದಕ್ಕಿಂತ ಮುಂಚೆ ಕಂದಾಯ ಇಲಾಖೆಯಿಂದ ಸಾಗುವಳಿ ಮಾಡಿದಂತ ರೈತನಿಗೆ ಸಾಗುವಳಿ ಪತ್ರ ಕೊಡತಕ್ಕಂಥ ಕೆಲಸ ನಡೆದಿದೆ ಅರಣ್ಯದ ಮತ್ತು ಕಂದಾಯದ ಗಡಿಯನ್ನು ನಿಖರವಾಗಿ ಗುರುತಿಸುವುದಕ್ಕಿಂತ ಮುಂಚೆ ಒಂದೇ ಸರ್ವೇ ನಂಬರ್‌ನಲ್ಲಿ ಅರಣ್ಯ ಮತ್ತು ಕಂದಾಯ ಭೂಮಿ ಒಟ್ಟಾಗಿದ್ದುದರಿಂದ ಅವರಿಗೆ ಸಾಗುವಳಿ ಪತ್ರ ಕೊಟ್ಟಿದೆ

ಈಗ ಗಡಿ ಗುರುತಿಸಿ ಆ ಸಾಗುವಳಿ ಪತ್ರ ಕೊಟ್ಟಿರುವ ಜಾಗವನ್ನು ಈಗ ಅರಣ್ಯವೆಂದು ಹೇಳಿ ಘೋಷಣೆ ಮಾಡಿದರೆ ಅದರೊಳಗಡೆ ಜೀವ ತೇಯ್ದು ಸಾಗುವಳಿ ಮಾಡಿ ಕಾಫಿ ಗಿಡ, ಸಿಲ್‌ವರ್ ಮರ ಹಾಕಿರತಕ್ಕಂಥ ರೈತನ ಗತಿ ಏನು? ಅದಕ್ಕೆ ಪರಿಹಾರ ಏನು? ಅದಕ್ಕೆ ಏನು ಯೋಜನೆ ಮಾಡಿದೆ ಎಂದು ನಾನು ಇಲ್ಲಿ ಕೇಳುತ್ತೇನೆ

ಶ್ರೀ ಜಿ ಕೆ ಬೋಪಯ್ಯ – ರೈತರು Form No 50 and 53 ನಲ್ಲಿ ಅರ್ಜಿಗಳನ್ನು ಕೊಟ್ಟಿದ್ದಾರೆ ಆದರೆ ಅನೇಕ ಜನ ಬಡವರು ಸರ್ಕಾರಿ ಜಮೀನಿನಲ್ಲಿ ಕುಳಿತುಕೊಂಡಿದ್ದಾರೆ ಅವರು ಯಾವುದೋ ಕಾರಣಕ್ಕೆ ಹಿಂದೆ Form No 50 or 53 ನಲ್ಲಿ ಅರ್ಜಿ ಕೊಟ್ಟಿಲ್ಲ ಆದರೆ ಅಲ್ಲಿ ಕುಳಿತಿರುವವರು ಎಲ್ಲಾ ಸಣ್ಣ ಸಣ್ಣ ರೈತರು ಒಂದು ಎಕರೆ, ಎರಡು ಎಕರೆ ಇರುವವರು ಅಂಥ ಬಡ ರೈತರಿಗೆ ಇನ್ನೊಂದು ಅವಕಾಶವನ್ನು ಮಾಡಿ ಕೊಡಲಿಕ್ಕೆ ಸರ್ಕಾರ ಏನಾದರೂ ತೀರ್ಮಾನ ಮಾಡುತ್ತದೆಯೇ? ಇದನ್ನು ಮಾಡಲೇ ಬೇಕಾಗುತ್ತದೆ ಇವತ್ತು ಏನಾಗಿದೆ ಎಂದರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಸರ್ಕಾರಿ ಜಮೀನಿನಲ್ಲಿ ಅರ್ಧ ಎಕರೆ ಕಾಲು ಎಕರೆ ಹತ್ತು ಸೆಂಟ್ಸ್‌ನಲ್ಲಿ ಕುಳಿತಿದ್ದಾರೆ ಆಶ್ರಯ ಮನೆಗಳ ಪರಿಸ್ಥಿತಿ ಹೇಗಿದೆ ಎಂದರೆ, ಮನೆಗಳು ಇಲ್ಲ ಸರ್ಕಾರದ ಜಮೀನಿನಲ್ಲಿ ಕುಳಿತಿದ್ದಾರೆ ಆದರೆ ಆಶ್ರಯ ಸಮಿತಿಯಲ್ಲಿ ಮನೆಗಳನ್ನು ಹಂಚಬೇಕಾದರೆ ಅವರಿಗೆ ದಾಖಲೆ ಬೇಕು ಈ ಒಂದು ಕಾರಣದಿಂದ ಇವತ್ತು ಅವರಿಗೆ ಆಶ್ರಯ ಮನೆಗಳನ್ನು ಕೊಡದಿರುವ ಪರಿಸ್ಥಿತಿ ಇದೆ ಏಕೆಂದರೆ ನಾವು ದಾಖಲೆ ಕೇಳುತ್ತಿದ್ದೇವೆ ಹೀಗಾಗಿ ಸರ್ಕಾರದ ಏನು ಸೀಲಿಂಗ್ ಇದೆ, ಅದರೊಳಗೆ ಯಾರು ಸರ್ಕಾರದ ಜಮೀನನ್ನು ಅಕ್ರಮಿಸಿಕೊಂಡು ಕುಳಿತಿದ್ದಾರೆ, ಅವರಿಗೆ ಇನ್ನೊಂದು ಅವಕಾಶ ಕೊಟ್ಟರೆ ಮಾತ್ರ ನಿಜವಾಗಿ ಇದೊಂದು ಸಾಮಾಜಿಕ ಬದಲಾವಣೆ ತರಬಹುದು ಮತ್ತು ನಮ್ಮ ಆಶ್ರಯ ಯೋಜನೆ ಏನು ಇದೆ ಅದನ್ನು ಸಮರ್ಪಕವಾಗಿ ಜಾರಿಗೆ ತರಬಹುದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ ಇನ್ನು ಆರು ತಿಂಗಳುಗಳ ಕಾಲ ಅವಕಾಶವಾದರೂ ಈ ರೀತಿಯ ಬಡವರು ಯಾರು ಇದ್ದಾರೆ ಅವರಿಗೆ ಅಂದರೆ ಐದು ಎಕರೆ ಒಳಗೆ ಇರುವವರಿಗೆ ಮಾತ್ರ ಕೇಳುತ್ತಿದ್ದೇನೆ, ಸರ್ಕಾರಿ ಜಮೀನಿನಲ್ಲಿ

ಕುಳಿತವರಿಗೆ ಇನ್ನೊಂದು Form No 50 or 53 ಇರಬಹುದು, ಅದನ್ನು ಕೊಡಲಿಕ್ಕೆ ಒಂದು ಅವಕಾಶ ಮಾಡಿ ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ

ಶ್ರೀ ಎಚ್ ಎಂ ವಿಶ್ವನಾಥ್ – ಬೃಗರ್‌ಹುಕುಂ ಸಾಗುವಳಿಯಲ್ಲಿ ಮಲೆನಾಡು ಭಾಗದಲ್ಲಿ ಎಲ್ಲೆಲ್ಲಿ ಮಾಡಿದ್ದಾರೆ ಅದನ್ನು ಖುಷ್ಕಿ ಎಂದು ನಾವು ನಮೂದಿಸುತ್ತೇವೆ ಆದರೆ, ಖುಷ್ಕಿ ಜಮೀನು ಎಂದು ಹೇಳಿದರೆ ನಮ್ಮ ಕಲ್ಪನೆಯಲ್ಲಿ ಅದು ಬಯಲಾದ ಜಾಗ, ರಾಗಿ ಜೋಳ ಬೆಳೆಯುವಂಥ ಜಾಗವೆನ್ನುತ್ತೇವೆ ತಾವು ದಯಮಾಡಿ, ಮಲೆನಾಡಿನ ಭಾಗದ ಜನರಿಗೆ ಗೊತ್ತಿದೆ ಅದು ಖುಷ್ಕಿ ಎಂದರೆ ಅದು ಕಾಫಿ ಮಾಡತಕ್ಕಂಥ ಜಾಗವೆ ನಮ್ಮಲ್ಲಿ ರಾಗಿ ಜೋಳ ಏನೂ ಆಗುವುದಿಲ್ಲ ನಾವು ಕಾಫಿ ಬೆಳೆ ಬೆಳೆಯಬೇಕು ಅದು ಬಿಟ್ಟರೆ ಬೇರೆ ಏನೂ ಬೆಳೆಯುವುದಕ್ಕೆ ಸಾಧ್ಯವಿಲ್ಲ ನಮ್ಮ ಸಮಸ್ಯೆ ಏನಾಗಿದೆ ಎಂದರೆ, ಏಕೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಅರ್ಜಿಗಳು ಉಳಿದಿವೆ ಎಂದರೆ, ಚಿಕ್ಕಮಗಳೂರಿನಲ್ಲಿ ಸುಮಾರು 39 ಸಾವಿರ ಅರ್ಜಿಗಳು ಬಾಕಿ ಉಳಿದಿವೆ ನನ್ನಲ್ಲಿ ಕೂಡ ಸುಮಾರು 25 ಸಾವಿರ ಅರ್ಜಿಗಳು ಬಾಕಿ ಉಳಿದಿವೆ ಬಾಕಿ ಉಳಿಯಲು ಏನು ಕಾರಣ? ಅವೆಲ್ಲವೂ ಕೂಡ ಅರಣ್ಯ ಇಲಾಖೆಗೆ ಹೋಗುತ್ತದೆ ಅರಣ್ಯ ಇಲಾಖೆಗೆ ಹೋದ ತಕ್ಷಣ ಅವರು ಅಲ್ಲಿರುವ ಮರಗಳನ್ನು ನೋಡುತ್ತಾರೆ ಮರ ಎಂದರೆ ಬಹಳ ದೊಡ್ಡ ಮರಗಳಲ್ಲ ಸಣ್ಣ ಸಣ್ಣ ಮರಗಳಿರುತ್ತವೆ ಕಾಫಿ ಬೆಳೆಯುವುದಕೋಸ್ಕರ ಹಾಕಿಕೊಂಡಿರುವ ಮರಗಳಿರುತ್ತವೆ ಇಲ್ಲವೆಂದರೆ ಮೊದಲೇ ಅಲ್ಲಿ ಮರಗಳು ಇರುತ್ತವೆ ಆ ಮರಗಳಿಗೆ ಮಾಲ್ಕಿ ಕಟ್ಟಬೇಕೆಂದು ಹೇಳುತ್ತಾರೆ ಒಂದು ಎಕರೆಗೆ 20 ರಿಂದ 30 ಸಾವಿರ ರೂಪಾಯಿ ಮಾಲ್ಕಿ ಹಾಕಿ ಎಂದರೆ, 3–4 ಎಕರೆ ಇದ್ದರೆ ಸುಮಾರು 90 ಸಾವಿರದಿಂದ ಒಂದು ಲಕ್ಷ ರೂಪಾಯಿಗಳವರೆಗೆ ಮಾಲ್ಕಿ ಕಟ್ಟಿ ಎಂದು ಅವರಿಗೆ ಅರಣ್ಯ ಇಲಾಖೆಯವರು ನೋಟೀಸ್ ಕೊಡುತ್ತಿದ್ದಾರೆ ಬಡವನಾದವನು 25 ರಿಂದ 30 ಸಾವಿರ ರೂಪಾಯಿ ಎಲ್ಲಿಂದ ತರುತ್ತಾನೆ? ಆ ಸಮಸ್ಯೆ ಬಗೆಹರಿಸಲಿಕ್ಕೆ ಸರ್ಕಾರ ಏನು ಕ್ರಮ ಕೈಗೊಂಡಿದೆ? ನಾನು ಏನು ಹೇಳುವುದು ಎಂದರೆ, ಕೂಡಲೇ ಇದಕ್ಕೆ ಅವರಿಗೆ ಯಾವುದೇ ಮಾಲ್ಕಿ ಹಾಕದೇ ಅವರಿಗೆ ಅರಣ್ಯ ಇಲಾಖೆಯವರು ಆ ಮರಗಳನ್ನು ಮುಫಾತ್ತಾಗಿ ಬಿಟ್ಟು ಕೊಡಬೇಕಾದ

ಸ್ಥಿತಿ ಬರುತ್ತದೆ, ಅದರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು ಇನ್ನೊಂದು ಪ್ರಶ್ನೆ ಏನೆಂದರೆ, ನಮ್ಮ ಸ್ನೇಹಿತರುಗಳು ಪಶ್ಚಿಮ ಘಟ್ಟದಲ್ಲಿ ಬರತಕ್ಕಂಥ ಒತ್ತುವರಿ ಬಗ್ಗೆ ಈಗಾಗಲೇ ಮಾತನಾಡಿದ್ದಾರೆ ಇವತ್ತಿಗೂ ಕೂಡ ಇದೊಂದು ದೊಡ್ಡ ಸಮಸ್ಯೆಯಾಗಿದೆ ಮಾನ್ಯ ದೇವರಾಜ ಅರಸು ಕಾಲದಲ್ಲಿ ಒಂದು ಸಾರಿ ಇದನ್ನು ಕೈಗೆತ್ತಿಕೊಂಡು ಮತ್ತೆ ಅದನ್ನು ಕೈ ಬಿಟ್ಟರು ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗ ಇದನ್ನು ಕೈಗೆತ್ತಿಕೊಂಡು ಮತ್ತೆ ಕೈಬಿಟ್ಟರು ಇದರಿಂದ ಸರ್ಕಾರಕ್ಕೆ ದೊಡ್ಡ ನಷ್ಟವಾಗಿದೆ ಇವತ್ತಿನ ದಿವಸ ಸಾವಿರಾರು ಎಕರೆ ಜಮೀನು ಬೇರೆಯವರ ವಶದಲ್ಲಿದೆ .ಇದು ಸರ್ಕಾರಿ ಜಮೀನಾಗಿದ್ದರೂ ಸಹ ಇದರಿಂದ ಸರ್ಕಾರಕ್ಕೆ ಕೂಡ ಲಾಭವಿಲ್ಲ, ಮತ್ತೆ ಅವರೂ ಕೂಡ ಅದರ ಮೇಲೆ ಸಾಲ ಅಥವಾ ಇತರೇ ಸೌಲಭ್ಯಗಳನ್ನು ತೆಗೆದುಕೊಳ್ಳತಕ್ಕಂಥ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲ ಆದ್ದರಿಂದ ಇದನ್ನು ತಾವು ತೆಗೆದುಕೊಂಡು ಬಡವರಿಗೆ ಹಂಚುತ್ತೀರೋ ಅಥವಾ ಅವರಿಗೆ ವಾಪಸ್ಸು ಕೊಡುತ್ತಿರೋ ಎನ್ನತಕ್ಕಂಥದರ ಬಗ್ಗೆ ತಾವು ಏನಾದರೊಂದು ತೀರ್ಮಾನವನ್ನು ಈಗಲಾದರು ತೆಗೆದುಕೊಳ್ಳಿ ಇದರ ಬಗ್ಗೆ ಒಂದು ಗಟ್ಟಿಯಾದ ನಿಲುವು ತೆಗೆದುಕೊಳ್ಳದಿದ್ದರೆ ಇಡೀ ಪಶ್ಚಿಮ ಘಟ್ಟದಲ್ಲಿ ಪ್ಲಾಂಟೇಶನ್ ಬರತಕ್ಕಂಥ 13 ತಾಲ್ಲೂಕುಗಳಲ್ಲಿ ಅಥವಾ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬರತಕ್ಕಂಥ ಸುಮಾರು 30 ತಾಲ್ಲೂಕುಗಳಲ್ಲಿ ಈ ಸಮಸ್ಯೆ ಬಹಳ ಗಂಭೀರವಾಗುತ್ತದೆ ಆದ್ದರಿಂದ ದಯಮಾಡಿ ಈ ಸಂದರ್ಭದಲ್ಲಿಯಾದರೂ ಸರ್ಕಾರ ಒಂದು ಗಟ್ಟಿಯಾದ ನಿರ್ಧಾರ ತೆಗೆದುಕೊಂಡು ಒತ್ತುವರಿಗೆ ಏನಾದರೊಂದು ಪರಿಹಾರವನ್ನು ಕಂಡು ಹಿಡಿಯಬೇಕು ಈಗ ಮಾಡಿಕೊಂಡಿರುವವರಿಂದ ಹಣ ಕಟ್ಟಿಸಿಕೊಂಡು ಅವರಿಗೆ ಕೊಡಬೇಕು, ಇಲ್ಲದಿದ್ದರೆ ಅವರಿಂದ ಕಿತ್ತು ಬಡವರಿಗೆ ಕೊಡುತ್ತೀರೋ ಅಥವಾ ಸರ್ಕಾರ ತೆಗೆದುಕೊಳ್ಳುತ್ತದೆಯೋ, ಒಟ್ಟಿನಲ್ಲಿ ಇದರ ಬಗ್ಗೆ ಒಂದು ಗಟ್ಟಿಯಾದ ನಿಲುವನ್ನು ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ

ಶ್ರೀ ಕೆ ಪ್ರಭಾಕರ್ ಬಂಗೇರ – ಸನ್ಮಾನ್ಯ ಛೇರ್ಮನ್‌ರವರೇ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ನನ್ನ ಕ್ಷೇತ್ರದಲ್ಲಿ ಅರಣ್ಯ ಇಲಾಖೆಯವರು ಜಂಟಿ ಸರ್ವೇಗೆ ಒಪ್ಪುತ್ತಿಲ್ಲ ಜಂಟಿ ಸರ್ವೇ ಮಾಡಬೇಡಿ ಎಂದು DFO ನವರು ಸೂಚನೆಯನ್ನು

ಕೊಟ್ಟಿರುವುದರಿಂದ ನಮ್ಮ ಕಡತಗಳು ಹೆಚ್ಚು ಬಾಕಿ ಉಳಿದಿವೆ ಮಾನ್ಯ ಅರಣ್ಯ ಇಲಾಖೆಯ ಸಚಿವರು ಮತ್ತು ಮಾನ್ಯ ಕಂದಾಯ ಇಲಾಖೆಯ ಸಚಿವರು ಈಗ ಇಲ್ಲಿರುವುದರಿಂದ ಅವರ ಗಮನಕ್ಕೆ ತರುವುದೇನೆಂದರೆ, ಎರಡೂ ಇಲಾಖೆಗಳು ಒಟ್ಟಿಗೆ ಸೇರಿಕೊಂಡು ಜಂಟಿ ಸರ್ವೇ ಮಾಡುವುದಕ್ಕೆ ಅನುಮತಿ ಕೊಟ್ಟಾಗ ಮಾತ್ರ ಇದು ಇತ್ಯರ್ಥವಾಗುತ್ತದೆಂದು ಹೇಳುವುದಕ್ಕೆ ಬಯಸುತ್ತದೆ ಆದ್ದರಿಂದ, ಅದನ್ನು ಆದಷ್ಟು ಶೀಘ್ರವಾಗಿ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ

ಶ್ರೀ ಜಗದೀಶ್ ಶೆಟ್ಟರ್ – ಸನ್ಮಾನ್ಯ ಛೇರ್ಮನ್‌ರವರೇ ಈ ಒಂದು ವಿಷಯದ ಚರ್ಚೆಯ ಮೇಲೆ ಬಹಳಷ್ಟು ಜನ ಶಾಸಕರು ಚರ್ಚೆಯಲ್ಲಿ ಭಾಗವಹಿಸರತಕ್ಕಂಥದು ಬಹಳ ಸ್ವಾಗತಾರ್ಹವಾದ ವಿಚಾರ ಎಲ್ಲಾ ಜಿಲ್ಲೆಗಳಲ್ಲಿ ಇದರ ಬಗ್ಗೆ ಬಹಳಷ್ಟು ಸಮಸ್ಯೆಗಳಿವೆ ಅದರಲ್ಲಿ ಪ್ರಮುಖವಾಗಿ ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆ ಹಾಗೂ ಹಾಸನ ಜಿಲ್ಲೆ ಇರಬಹುದು ಮತ್ತೆ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಸಹ ಇದೆ ಮತ್ತೆ ಮಾನ್ಯ ಸಿ ಟಿ ರವಿಯವರು ತಮ್ಮ ಜಿಲ್ಲೆಯಲ್ಲಿ ಬಹಳಷ್ಟು ಕೇಸ್‌ಗಳು ಪೆಂಡಿಂಗ್ ಇವೆ ಎಂಬುದರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಬಹಳಷ್ಟು ಕೇಸ್‌ಗಳು ಪೆಂಡಿಂಗ್ ಇರುವುದು ನಿಜ ಚಿಕ್ಕಮಗಳೂರಿನಲ್ಲಿ ಫಾರಂ ನಂ 50 ರಲ್ಲಿ 2940 ಅರ್ಜಿಗಳು ಪೆಂಡಿಂಗ್ ಇವೆ ಮತ್ತೆ ಫಾರಂ ನಂ 53 ರಲ್ಲಿ 36,156 ಕೇಸ್‌ಗಳು ಪೆಂಡಿಂಗ್ ಇವೆ ಆ ಜಿಲ್ಲೆಯ ಪ್ರತಿಯೊಂದು ತಾಲ್ಲೂಕಿನ ವಿವರಗಳು ಇವೆ ಇದರ ಬಗ್ಗೆ ಪ್ರತಿಯೊಂದು ಹಂತದಲ್ಲಿ ಹೆಚ್ಚಿನ ಒತ್ತು ಕೊಟ್ಟು ಇವುಗಳನ್ನು ಡಿಸ್‌ಪೋಸ್ ಮಾಡಬೇಕೆಂಬುದರ ಬಗ್ಗೆ ಸರ್ಕಾರ ಹೆಚ್ಚಿನ ಒಂದು ಆಸಕ್ತಿಯನ್ನು ತೆಗೆದುಕೊಂಡಿದೆ ಮತ್ತೆ ಕಮಿಟಿಗಳನ್ನು ಕಾನ್ಸ್‌ಟಿಟ್ಯೂಟ್ ಮಾಡಿದೆ ಈಗ ಸರ್ವೆ ಕೆಲಸ ಮಾಡುವುದಕ್ಕೆ ಸಿಬ್ಬಂದಿಗಳು ಬೇಕಾಗಿದ್ದಾರೆ ಆದ್ದರಿಂದ ಶೀಘ್ರವಾಗಿ ಸರ್ವೆಯರ್ ಸಿಬ್ಬಂದಿಗಳನ್ನು ತುಂಬತಕ್ಕಂಥ ಕೆಲಸ ಆದಷ್ಟು ಬೇಗ ನಾವು ಮಾಡುತ್ತೇವೆ ಇದನ್ನು ಮಾಡಿದ ಬಳಿಕ ಪೆಂಡಿಂಗ್ ಇರತಕ್ಕಂಥ ಕೇಸ್‌ಗಳನ್ನು ಬೇಗ ವಿಲೇವಾರಿ ಮಾಡುವುದಕ್ಕೆ ಹೆಚ್ಚಿನ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ ಮತ್ತೆ ಅರಣ್ಯ ಭೂಮಿಗೆ ಸಂಬಂಧಪಟ್ಟಂತೆ ಇವತ್ತಿನ

ದಿವಸ ಕಂದಾಯ ಮತ್ತು ಅರಣ್ಯ ಇಲಾಖೆಯ ಜಂಟಿ ಸಭೆ ನಡೆಯುತ್ತಿದೆ ಈ ನಡುವೆ ಅಲ್ಲಿ ಏನಾಯಿತೆಂದರೆ, ಅರಣ್ಯ ಭೂಮಿಯಲ್ಲಿರತಕ್ಕಂಥ ಒತ್ತುವರಿಯನ್ನು ತೆರವುಗೊಳಿಸಿದಾಗ ಕೆಲವೊಬ್ಬ ವ್ಯಕ್ತಿಗಳಿಗೆ, ಬಡ ಜನರಿಗೆ ತಕ್ಷಣವೇ ಅವರಿಗೆ ಪರ್ಯಾಯ ವ್ಯವಸ್ಥೆ ಮಾಡಬೇಕಾಗಿತ್ತು ಇದರ ಬಗ್ಗೆ ಸುಪ್ರೀಂ ಕೋರ್ಟ್‌ನ ಡೈರೆಕ್ಷನ್ ಕೂಡ ಆಗಿತ್ತು ಆ ಒಂದು ಸಂದರ್ಭದಲ್ಲಿ ಒತ್ತುವರಿಯನ್ನು ತೆರವುಗೊಳಿಸಿದಾಗ ಅವರು ನಿರಾಶ್ರಿತರಾದಂಥ ಸಂದರ್ಭದಲ್ಲಿ ಅವರಿಗೆ ತಕ್ಷಣವೇ ಒಂದು ಪುನರ್ ವಸತಿ ಸೌಲಭ್ಯವನ್ನು ಜಿಲ್ಲಾಧಿಕಾರಿಗಳು ಮಾಡಬೇಕಾಗಿತ್ತು ಹೀಗಾಗಿ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿರತಕ್ಕಂಥವರನ್ನು ಅಲ್ಲಿಂದ ತೆರವುಗೊಳಿಸಿ ಅವರಿಗೆ ಸೈಟ್, ಲ್ಯಾಂಡ್ ಅಲಾಟ್ ಮಾಡತಕ್ಕಂಥ ಕೆಲಸ ಅಲ್ಲಿ ಪ್ರಾರಂಭವಾಯಿತು ಚಿಕ್ಕಮಗಳೂರು ಮತ್ತು ಇತರೇ ಕೆಲವ ಭಾಗದಲ್ಲಿ ಅರಣ್ಯ ಭೂಮಿ, ಕಂದಾಯ ಭೂಮಿ, ಗೋಮಾಳ ಭೂಮಿಯನ್ನು ಏನು ಒತ್ತುವರಿ ಮಾಡಿಕೊಂಡಿರುವ ಕಡೆ ಅಲ್ಲಿ ಲ್ಯಾಂಡ್ ಸೀಲಿಂಗ್‌ದು ಬಹಳ ಸಮಸ್ಯೆ ಬರುತ್ತದೆ ಅಲ್ಲಿ ಕಾಫಿ ಪ್ಲಾಂಟರ್‌ಗಳು ಕೂಡ ಒತ್ತುವರಿ ಮಾಡಿಕೊಂಡಿದ್ದಾರೆ ಅವರಿಗೆ ಸೀಲಿಂಗ್ ಲಿಮಿಟ್‌ನ ಪ್ರಶ್ನೆ ಬರುತ್ತದೆ ಈಗ ಬಗರ್‌ಹುಕುಂ ಕಮಿಟಿಯಲ್ಲಿ ಏನೊಂದು ಲಿಮಿಟ್ ಇದೆಯೋ ಆ ಒಂದು ಲಿಮಿಟ್‌ನಲ್ಲಿ ಇದನ್ನು ಅನ್ವಯ ಮಾಡುವುದಕ್ಕೆ ಆಗುವುದಿಲ್ಲ ಆದ್ದರಿಂದ, ಇದೊಂದು ಡಿಫರೆಂಟ್ ರೀತಿಯಾದ ಸಮಸ್ಯೆ ಆಗಿದೆ ಆದ್ದರಿಂದ, ಇದರ ಬಗ್ಗೆ ಪ್ರತ್ಯೇಕವಾದ ಸಭೆಯನ್ನು ಕರೆಯುತ್ತೇನೆ ಚಿಕ್ಕಮಗಳೂರು ಅಥವಾ ಶಿವಮೊಗ್ಗ ಜಿಲ್ಲೆಯಿರಬಹುದು ಅಥವಾ ಇನ್ನಿತರ ಬೇರೆ ಜಿಲ್ಲೆಗಳಲ್ಲಿ ಈ ರೀತಿಯಾದ ಸಮಸ್ಯೆಗಳಿದ್ದರೆ, ಇದಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕವಾದ ಸಭೆಯನ್ನು ಕರೆದು ಅದರ ಬಗ್ಗೆ ಸರಿಯಾದಂಥ ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ ಗೋಮಾಳ್ ಲ್ಯಾಂಡ್ ಬಗ್ಗೆ ಮಾನ್ಯ ಕುಮಾರ ಬಂಗಾರಪ್ಪನವರು ಪ್ರಸ್ತಾಪ ಮಾಡಿದ್ದಾರೆ ಗೋಮಾಳ ಲ್ಯಾಂಡ್‌ನ್ನು ಕೊಡಲೇಬಾರದೆಂದು ಹೈಕೋರ್ಟ್ 2005ನೇ ಇಸವಿಯಲ್ಲಿ ಒಂದು ತೀರ್ಪು ನೀಡಿತ್ತು - ನಾವು ಅದರ ಮೇಲೆ ಅಪೀಲ್ ಮಾಡಿದೆವು ಈ ಸದನದಲ್ಲಿ ಅದರ ಬಗ್ಗೆ ಚರ್ಚೆ ಕೂಡ ಆಗಿತ್ತು ಅಂದರೆ, ಈ ರೀತಿಯಾಗಿ ಗೋಮಾಳ ಲ್ಯಾಂಡ್‌ನ್ನು

ನೀವು ಪರಾಭಾರೆ ಮಾಡಿದರೆ, ಲಕ್ಷಾಂತರ ಜನ ರೈತರಿಗೆ ಇದರಿಂದ ಅನಾನುಕೂಲತೆ ಆಗುತ್ತದೆ, ಆದ್ದರಿಂದ ಇದರ ಬಗ್ಗೆ ಒಂದು ಕಾನೂನು ತಿದ್ದುಪಡಿಯನ್ನು ತರಬೇಕು ಮತ್ತೆ ಇದರ ಬಗ್ಗೆ ಅಪೀಲ್ ಮಾಡಬೇಕೆಂದು ಆ ಸಂದರ್ಭದಲ್ಲಿ ಮಾನ್ಯ ಸದಸ್ಯರುಗಳು ತಮ್ಮ ಭಾವನೆಯನ್ನು ವ್ಯಕ್ತಪಡಿಸಿದಾಗ ನಾವು ಅದರ ಮೇಲೆ ರಿಟ್ ಅಪೀಲ್ ಮಾಡಿದೆವು ಆ ರಿಟ್ ಅಪೀಲ್‌ನಲ್ಲಿ ಸರ್ಕಾರ ಯಶಸ್ವಿ ಆಯಿತು ಮತ್ತೆ ರಿಟ್ ಅಪೀಲ್ ಅಲೋ ಆಯಿತು ಆದರೆ, ಆ ಒಂದು ತೀರ್ಪಿನಲ್ಲಿ ನಮ್ಮ ಹೈ ಕೋರ್ಟ್‌ನ ನ್ಯಾಯಾಧೀಶರು ಏನೊಂದು ಅಬ್ಜರ್‌ವೇಶನ್ ಮಾಡಿದ್ದಾರೆಂದರೆ, ಇವತ್ತಿನ ಸಂದರ್ಭದಲ್ಲಿ ಜಾನುವಾರುಗಳು ಎಷ್ಟೆಷ್ಟು ಇವೆ ಎಂದು ಮತ್ತು ಎಷ್ಟು ರಿಕ್ವಾಯರ್‌ಮೆಂಟ್ ಇದೆ ಎಂಬುದನ್ನು ಮತ್ತೆ ಇವತ್ತಿನ ವ್ಯವಸ್ಥೆಗೆ ಅಷ್ಟೊಂದು ಭೂಮಿಯ ಅವಶ್ಯಕತೆ ಇದೆಯೇ ಅಥವಾ ಇಲ್ಲವೇ ಎಂದು ಕೇಳಿದ್ದಾರೆ ಏಕೆಂದರೆ, ನಮ್ಮ ಹಿಂದಿನ ಅಂಕಿ–ಅಂಶಗಳ ಪ್ರಕಾರ ನಮ್ಮ ರಾಜ್ಯದಲ್ಲಿ ಗೋಮಾಳ ಲ್ಯಾಂಡ್‌ನ ಅವಶ್ಯಕತೆ ಬಹಳಷ್ಟಿದೆ ಆದ್ದರಿಂದ ಪ್ರತಿಯೊಂದು ಜಿಲ್ಲೆಯಲ್ಲಿ ಆಯಾಯ ಜಿಲ್ಲಾಧಿಕಾರಿಗಳು ಇದರ ಬಗ್ಗೆ ಒಂದು ಸಮೀಕ್ಷೆ ಮಾಡಿ ಅಲ್ಲಿ ರಿಕ್ವಾಯರ್‌ಮೆಂಟ್ ಯಾವ ರೀತಿ ಇದೆ ಎಂಬುದರ ಬಗ್ಗೆ ವಿಚಾರ ಮಾಡಿಕೊಂಡು ಅಲ್ಲಿ ಯಾರು ಗೋಮಾಳ ಲ್ಯಾಂಡ್‌ನ್ನು ಅಕ್ರಮವಾಗಿ ಸಾಗುವಳಿ ಮಾಡುತ್ತಿದ್ದಾರೆಯೋ ಅಂಥದನ್ನು ಸಕ್ರಮಗೊಳಿಸುವುದಕ್ಕೆ ನಿರ್ಣಯ ಕೈಗೊಳ್ಳಬೇಕೆಂದು ಹೈಕೋರ್ಟ್ ನ್ಯಾಯಾಧೀಶರು ಡೈರೆಕ್ಷನ್ ಕೊಟ್ಟಿದ್ದಾರೆ ಅದರ ಪ್ರಕಾರ ನಾವು ಈಗಾಗಲೇ ಸುತ್ತೋಲೆ ಹೊರಡಿಸಿದ್ದು, ಪ್ರತಿಯೊಂದು ಜಿಲ್ಲೆಯಲ್ಲಿ ಎಷ್ಟೆಷ್ಟು ಗೋಮಾಳ ಲ್ಯಾಂಡ್ ಇದೆ ಎಂಬುದನ್ನು ಮತ್ತು ಅಲ್ಲಿ ಎಷ್ಟು ಅರ್ಜಿಗಳು ಬಂದಿವೆ ಎಂಬುದನ್ನು ಮತ್ತು ಅಲ್ಲಿರತಕ್ಕಂಥ ಗೋಮಾಳ ಲ್ಯಾಂಡ್‌ನ್ನು ಸಕ್ರಮಗೊಳಿಸುವುದಕ್ಕೆ ಸಾಧ್ಯವಿದೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಆಯಾಯ ಜಿಲ್ಲೆಯ ಜಿಲ್ಲಾಧಿಕಾರಿಗಳು ಸಮೀಕ್ಷೆ ಮಾಡಿ ನಿರ್ಣಯ ಕೈಗೊಳ್ಳಬೇಕೆಂಬ ಸುತ್ತೋಲೆಯನ್ನು ಸರ್ಕಾರ ಹೊರಡಿಸಿ ಡೈರೆಕ್ಷನ್ ಸಹ ಕೊಟ್ಟಿದೆ ಇದರ ಒಂದು ಕೆಲಸ ಈಗಾಗಲೇ ನಡೆಯುತ್ತಿದೆ ಮತ್ತೆ ಯಾವ ಜಿಲ್ಲೆಯಲ್ಲಿ ಗೋಮಾಳ ಲ್ಯಾಂಡ್ ಹೆಚ್ಚಿಗೆ ಇರುವ ಕಡೆ ಗೋಮಾಳ ಲ್ಯಾಂಡ್‌ನ್ನು ಸಕ್ರಮಗೊಳಿಸುವುದಕ್ಕೆ ಅವಕಾಶ ಇದೆ ಈ ಒಂದು ದಿಕ್ಕಿನಲ್ಲಿ ಪ್ರಯತ್ನ ಕೂಡ

ನಡೆಯುತ್ತಿದೆ ಮೊದಲು ಏನೊಂದು ಕಾನೂನು ತೊಡಕು ಇತ್ತೋ, ಆ ಕಾನೂನು ತೊಡಕು ಇವತ್ತು ಹೋಗಿದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ

ಶ್ರೀ ಎಸ್ ಕುಮಾರ್ ಬಂಗಾರಪ್ಪ – ಗೋವಿನ ಸಂಖ್ಯೆಗಳನ್ನು ಇತ್ಯರ್ಥ ಮಾಡಬೇಕೆಂದು ನಾವು ಹೊರಟಿದ್ದೇವೆ ಮೊದಲು ನಮ್ಮ ಮಲೆನಾಡು ಪ್ರದೇಶದಲ್ಲಿ ಸ್ಥಳೀಯ ತಳಿಗಳು ಗೋಮಾಳ ಪ್ರದೇಶಕ್ಕೆ ಹೋಗುತ್ತಿದ್ದವು ಮತ್ತೆ ನಮ್ಮಲ್ಲಿ ಸುಮಾರು 25–30 ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆ ಮತ್ತೆ ನಮ್ಮ ಸೊರಬ ತಾಲ್ಲೂಕಿನಲ್ಲಿ ಮೊದಲಿಗಿಂಥ ಈಗ ಸುಮಾರು 27% ನಷ್ಟು ಗೋವಿನ ಸಂಖ್ಯೆ ಜಾಸ್ತಿಯಾಗಿದೆ ಆದರೆ, ಗೋವುಗಳನ್ನು ಹೇಗೆ ಸಾಕುತ್ತಿದ್ದಾರೆಂದರೆ, ಇವತ್ತಿನ ದಿವಸ ಹೆಚ್ಚಾಗಿ ಕ್ರಾಸ್ ಬೀಡ್ ಮತ್ತು ಸಿಂದಿ ಹಸುಗಳನ್ನು ಮನೆಗಳಲ್ಲಿಯೇ ಇಟ್ಟುಕೊಂಡು ಹೈನುಗಾರಿಕೆ ಮಾಡುತ್ತಿದ್ದಾರೆ ಈಗ ಇವುಗಳನ್ನು ನಾವು ಲೆಕ್ಕ ತೆಗೆದುಕೊಂಡು, ಇಲ್ಲಿ ಸಾಗುವಳಿ ಮಾಡತಕ್ಕಂಥವರನ್ನು ನಾವು ಇದರ ಮೇಲೆ ನಿಮಗೆ ಸಾಗುವಳಿ ಮಾಡುವುದಕ್ಕೆ ಬರುವುದಿಲ್ಲವೆಂದು ಎಲ್ಲರನ್ನು ಹೊರಗಡೆ ಕಳುಹಿಸುವಂಥ ಕೆಲಸ ಆಗುತ್ತಿದೆ ಅಂದರೆ, ಇತ್ಯರ್ಥ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಲಾಗುತ್ತಿದೆ ಆದ್ದರಿಂದ ಗೋವುಗಳನ್ನು ಬೆಳೆಸತಕ್ಕಂಥದನ್ನು ನಾವು ಯಾವ ರೀತಿಯಾಗಿ ಮಾಡಬೇಕೆಂಬುದನ್ನು ಸ್ಪಷ್ಟವಾಗಿ ಕೊನೆ ಪಕ್ಷ ಕೋರ್ಟ್‌ಗಾದರೂ ಅಪ್ ಡೇಟ್ ಮಾಡಬೇಕಾಗುತ್ತದೆ ಇವತ್ತಿನ ದಿವಸ ಯಾವ ಕ್ರಾಸ್ ಬೀಡ್ ಹಸುಗಳೂ ಕೂಡ ಹೊರಗಡೆ ಹೋಗುವುದಿಲ್ಲ ಇವೆಲ್ಲವನ್ನು ಕೊಟ್ಟಿಗೆಯಲ್ಲಿಯೇ ಇರುತ್ತವೆ ಇವತ್ತಿನ ದಿವಸ ಬೆಂಗಳೂರಿನಲ್ಲಿಯೂ ಕೂಡ ಒಂದು ಕರು ಹುಟ್ಟಿದಾಗಿನಿಂದ ಸಾಯುವವರೆಗೂ ಅಂದರೆ ಅದರ ಜೀವನ ಪೂರ್ತಿ ಕೊಟ್ಟಿಗೆಯಲ್ಲಿಯೇ ಇರುತ್ತದೆ ಇವುಗಳು ಕೇವಲ ತಿನ್ನುವುದು ಮತ್ತೆ ಹಾಲು ಕೊಡುವಂಥದಾಗಿದೆಯಷ್ಟೇ ಇದೇ ರೀತಿಯಾದ ಕಲ್ಚರ್ ನಮ್ಮ ಹಳ್ಳಿಗಾಡಿನಲ್ಲಿಯೂ ಕೂಡ ಬಂದಿದೆ ಮೊದಲು ನಮ್ಮ ಮಲೆನಾಡಿನಲ್ಲಿ ಹಸುಗಳು ಹೊರಗಡೆ ಸುತ್ತಿಕೊಂಡು ಮೇವನ್ನು ತಿಂದು ಮನೆಗೆ ಬಂದು ಹಾಲು ಕೊಡುತ್ತಿದ್ದವು ಆದರೆ, ಇವತ್ತಿನ ದಿವಸ ಆ ರೀತಿಯ ಪರಿಸ್ಥಿತಿ ಇಲ್ಲ ಆದ್ದರಿಂದ ನೀವು ಮೊದಲು ಅಪೀಲ್ ಹೋಗಿ ಗೋಮಾಳದ ಬಗ್ಗೆ ಏನೊಂದು ಇತ್ಯರ್ಥ ಮಾಡಿಸಿರುವಂತೆ

ಇದರ ಬಗ್ಗೆ ಕೂಡ ಕೋರ್ಟ್‌ಗೆ ಹೋಗಿ ಮೇಲ್ಮನವಿ ಸಲ್ಲಿಸಿ ಅದಕ್ಕೆ ಕ್ಲಾರಿಫಿಕೇಶನ್ ತರತಕ್ಕಂಥ ಅಗತ್ಯತೆ ಬಹಳ ಇದೆ

ಶ್ರೀ ಜೆ ಸಿ ಮಾಧುಸ್ವಾಮಿ – ಮಾನ್ಯ ಛೇರ್ಮನ್‌ರವರೇ, ಇವತ್ತಿನ ದಿವಸ ಗೋಮಾಳ ಲ್ಯಾಂಡ್ ಅನ್ನು ಮಂಜೂರು ಮಾಡಿ ಅದಕ್ಕೆ ಅವರಿಂದ ಹಣ ಕಟ್ಟಿಸಿಕೊಂಡು ಪೆಂಡಿಂಗ್ ಇರತಕ್ಕಂಥದರ ಬಗ್ಗೆ ಏನು ಮಾಡಬೇಕೆಂಬುದರ ವಿಷಯವನ್ನು ನಾವು ಎರಡು–ಮೂರು ಸಲ ಕೇಳಿದ್ದೇವೆ ಹೈಕೋರ್ಟ್‌ನ ತೀರ್ಮಾನವಾಗುವುದಕ್ಕಿಂಥ ಮುಂಚೆಯೇ ಹಿಂದಿನ ಸಮಿತಿಗಳು ಗ್ರ್ಯಾಂಟ್ ಮಾಡಿಬಿಟ್ಟಿವೆ ಗೋಮಾಳ ಲ್ಯಾಂಡ್ ಕೊಡುವುದಕ್ಕೆ ಹಣ ಕಟ್ಟಿಸಿಕೊಂಡಿದ್ದೇವೆ ಆದರೆ, ಸಾಗುವಳಿ ಚೀಟಿ ಕೊಡುವುದಕ್ಕೆ ಆಗುತ್ತಿಲ್ಲ ಮಂಜೂರು ಮಾಡಿ 4–5–6 ವರ್ಷಗಳಾಗಿವೆ ಆಕಸ್ಮಾತ್ ಸಾಗುವಳಿ ಚೀಟಿ ಸಿಕ್ಕಿಲ್ಲದೇ ಇರುವವರು ಈ ಒಂದು ಕಾರಣದಿಂದ ಪೆಂಡಿಂಗ್ ಆಗಿದ್ದಾರೆ ಇದರ ಬಗ್ಗೆ ಕೋರ್ಟ್‌ನಿಂದ ಕ್ಲಾರಿಫಿಕೇಶನ್ ತೆಗೆದುಕೊಂಡು ನಮಗೆ ಹೇಳಬೇಕಾಗಿತ್ತು, ಆದರೆ ಹೇಳಿಲ್ಲ ಕ್ಲಾಸಿಫಿಕೇಶನ್ ಆಫ್ ಗೋಮಾಳಕ್ಕೆ ತಾವು ಅಮೆಂಡ್‌ಮೆಂಟ್‌ನ್ನು ತರಬೇಕಾಗುತ್ತದೆ ಗ್ರೇಸಿಂಗ್ ಲ್ಯಾಂಡ್, ಕ್ಯಾಟಲ್ ಎಷ್ಟಿತ್ತೆಂಬುದರ ಬಗ್ಗೆ ಕ್ಯಾಟಲ ಸೆನ್ಸ್‌ಸ್ ರಿಪೋರ್ಟ್ ಕೊಟ್ಟರೆ, ಇಡೀ ರಾಜ್ಯದಲ್ಲಿ ನೀವು ಗೋಮಾಳ ಭೂಮಿಯನ್ನು ರಿಲೀಸ್ ಮಾಡುವುದಕ್ಕೆ ಆಗುವುದಿಲ್ಲ ತಾವು ಹೈಕೋರ್ಟ್‌ಗೆ ಹೋಗಿ ಏನು ಕೇಳಬೇಕೆಂದರೆ, ಒಂದು ಹಳ್ಳಿಯನ್ನು ಅಥವಾ ಹೋಬಳಿಯನ್ನು ಘಟಕವೆಂದು ಮಾಡುತ್ತೀರಾ ಅಥವಾ ತಾಲ್ಲೂಕನ್ನು ಘಟಕವೆಂದು ಮಾಡಿ on par with the cattle population ಮೇಲೆ ಗೋಮಾಳವನ್ನು ಲೆಕ್ಕ ಮಾಡುತ್ತೀರಾ ಎಂಬುದರ ಬಗ್ಗೆ ಹೇಳಬೇಕಾಗುತ್ತದೆ ನಮ್ಮ ಊರಿನಲ್ಲಿ ಗೋಮಾಳ ಇದೆ ಆದರೆ, ದನಗಳಿಲ್ಲ ನಮ್ಮ ತಾಲ್ಲೂಕುಗಳಲ್ಲಿ ದನಗಳು ಜಾಸ್ತಿ ಇದ್ದರೆ ನಮ್ಮ ಊರಿಗೆ ಕೊಡುವುದಿಲ್ಲವೇ? ಇವರು ಅಲ್ಲಿಗೆ ಬಂದು ಮೇಯಿಸುವುದಕ್ಕೆ ಆಗುತ್ತದೆಯೇ? ರೆವಿನ್ಯು ವಿಲೇಜ್ ಅನ್ನು ಒಂದು ಘಟಕವೆಂದು ಮಾಡಿ ಆ ಊರಿನ ಕ್ಯಾಟಲ್ ಸಂಖ್ಯೆಯನ್ನು ತಾವು ಲೆಕ್ಕಕ್ಕೆ ತೆಗೆದುಕೊಂಡು ಗೋಮಾಳವನ್ನು ರಿಲೀಸ್ ಮಾಡುವುದಕ್ಕೆ ಒಂದು ಅವಕಾಶ ಮಾಡಬೇಕು

ಛೇರ್ಮನ್ – ಮಾನ್ಯ ಸಚಿವರೇ, ಇನ್ನೊಂದು ಸಮಸ್ಯೆ ಇದೆ ಸರ್ಕಾರಿ ಮುದ್ರಣಾಲಯದಿಂದ ಹಕ್ಕು ಪತ್ರಗಳನ್ನು ಕೊಡತಕ್ಕಂಥ ಫಾರಂ ಸರಬರಾಜು ಆಗುತ್ತಿಲ್ಲ ಇದನ್ನು ಸ್ಪೀಡ್ ಆಪ್ ಮಾಡುವುದಕ್ಕೆ ತಾವು ಏನಾದರೂ ಮಾಡಬೇಕು

ಶ್ರೀ ಎಸ್ ಕುಮಾರ್ ಬಂಗಾರಪ್ಪ – ಯಾವ ಫಾರಂ?

ಛೇರ್ಮನ್ – ಹಕ್ಕು ಪತ್ರ ಕೊಡತಕ್ಕಂಥ ಫಾರಂಗಳು ಇಲ್ಲ ಮತ್ತೆ ಮಾನ್ಯ ಸಿ ಟಿ ರವಿ ಕೇಳಿರುವಂಥ ವಿಷಯ ನಮ್ಮೆಲ್ಲ ಭಾಗದಲ್ಲಿ ಕೂಡ ಇದೆ ನಿಮ್ಮ ಲ್ಯಾಂಡ್ ಸೀಲಿಂಗ್ ಲಿಮಿಟ್ ಆದರೂ ಕೂಡ ಕೆಲವು ದೊಡ್ಡ ದೊಡ್ಡ ರೈತರು ಮಾಡಿದ್ದಾರೆ ಅಂದರೆ, ಎರಡೂವರೆ ಎಕರೆ ಮೇಲ್ಪಟ್ಟವರು ಮಾಡಿದ್ದಾರೆ ಇವರಿಗೆ ಲ್ಯಾಂಡ್ ವ್ಯಾಲ್ಯುವೇಶನ್ ಕಟ್ಟಿಸಿಕೊಂಡು ಏನಾದರೂ ಹಕ್ಕು ಪತ್ರ ಕೊಡುವುದಕ್ಕೆ ಆಗುತ್ತದೆಯೇ? ಈಗ ಅವರು ಸುಮ್ಮನೆ ಸಾಗುವಳಿ ಮಾಡುತ್ತಿದ್ದಾರೆ ಇದರಿಂದ ಸರ್ಕಾರಕ್ಕೂ ಏನು ಲಾಭವಿಲ್ಲ ಮತ್ತೆ ಅವರಿಗೂ ಸಹ ಇದರ ಹಕ್ಕು ಪತ್ರ ಸಿಕ್ಕಿಲ್ಲ ಎನ್ನತಕ್ಕಂಥದ್ದು ಬಹಳ ಸ್ಪಷ್ಟವಾಗಿದೆ ಆದ್ದರಿಂದ ಅದರ ಬಗ್ಗೆ ತಾವು ಏನು ಹೇಳುತ್ತೀರಾ?

ಶ್ರೀ ಎಸ್ ಕುಮಾರ್ ಬಂಗಾರಪ್ಪ – ಆ ತರಹ ಲ್ಯಾಂಡ್‌ವ್ಯಾಲ್ಯುವನ್ನು ಕಟ್ಟಿಸಿಕೊಂಡು ಈ ತರಹ ಮಾಡುವುದಕ್ಕೆ ಹೋದರೆ ಬಡವರಿಗೆ ಬಹಳ ಅನ್ಯಾಯ ವಾಗುತ್ತದೆ ಕೆಲವೊಂದು ಕಾಫಿ ಪ್ಲ್ಯಾಂಟರ್ಸ್‌ಗೆ ಈಗ ಕೆಲವೊಂದು problems ಗಳು ಇರಬಹುದು But generalize ಮಾಡಿಕೊಂಡು ಇಡೀ ಕರ್ನಾಟಕದಾದ್ಯಂತ ಯಾವುದೋ ಒಂದು land value ಮಾಡಿಕೊಂಡು ಅದರ ಮೇಲೆ mount ಮಾಡುವುದು ಇದೆಯಲ್ಲಾ, ನೇರವಾಗಿ ಯಾವ ಬಡವರಿಗೆ ಸಾಗುವಳಿ ಕೊಡಬೇಕೆಂದು ನಮ್ಮ ಉದ್ದೇಶ ಇದೆ, ಅವರಿಗೆ ನೇರವಾಗಿ ಅನ್ಯಾಯವಾಗುತ್ತದೆ ಯಾವುದೇ ಕಾರಣಕ್ಕೂ land value ಅನ್ನು ಈ ಬಗರ್ ಹುಕುಂ ವ್ಯಾಪ್ತಿಯಲ್ಲಿ ಬರುವಂಥವರಿಗೆ ಫಿಕ್ಸ್ ಮಾಡುವುದಕ್ಕೆ ಅವಕಾಶವನ್ನು ಕೊಡಬಾರದು

ಶ್ರೀ ಹೆಚ್ ಎಂ ವಿಶ್ವನಾಥ್ – 50 ಎಕರೆ 100 ಎಕರೆ ಈ ಕಾಡು ಮನೆ ಎಸ್ಟೇಟ್ ಇದೆ ಸಾವಿರ ಎಕರೆಯವರೆಗೆ ಜಮೀನನ್ನು ಒತ್ತುವರಿ ಮಾಡಿದ್ದಾರೆ ಚಿಕ್ಕಮಗಳೂರು ಜಿಲ್ಲೆ ಕಡೆಗೆ 700–800 ಎಕರೆಯವರೆಗೆ ಒತ್ತುವರಿ ಮಾಡಿದವರು ಇದ್ದಾರೆ ಅವರು ಇನ್ನು 100 ವರ್ಷವಾದರೂ enjoy ಮಾಡುತ್ತಾರೆ ಅಲ್ಲಿಯೂ

ಸಮಸ್ಯೆ ಇದೆ ಯಾವುದೋ ಗುಡ್ಡದ ತುದಿಯ ಫಾರಂನಲ್ಲಿ ಅವನದ್ದು ಇರುತ್ತದೆ ಹಿಂಭಾಗದ ಗುಡ್ಡದಲ್ಲಿ ಅವನು ಕಾಡಿಗೆ ಒತ್ತುವರಿ ಮಾಡಿರುತ್ತಾನೆ ಅಲ್ಲಿಗೆ ಹೋಗುವುದಕ್ಕಾಗುವುದಿಲ್ಲ ಈ ತರಹದ ಸಮಸ್ಯೆಗಳು ಇವೆ ನಾನು ಹೇಳುವುದು ಸರ್ಕಾರ ಶೀಘ್ರವಾಗಿ ಒಂದು ಸಮಿತಿಯನ್ನು ಮಾಡಿ, ಅಲ್ಲಿ ಪರಿಶೀಲನೆ ನಡೆಸಿ ಏನು ಮಾಡಿದರೆ ಅನುಕೂಲವಾಗುತ್ತದೆನ್ನುವ ಬಗ್ಗೆ ತೀರ್ಮಾನ ಮಾಡುವುದು ಒಳ್ಳೆಯದು ನೀವು ಹೀಗೆ ಉಳಿಸಿಕೊಂಡು ಹೋದರೆ, ಮಾಲೀಕನಿಗೆ ಅನುಕೂಲವಾಗುತ್ತದೆ

ಶ್ರೀ ಸಿ ಟಿ ರವಿ – ಮಾನ್ಯ ಕಂದಾಯ ಸಚಿವರೇ ನೀವು ಎಲ್ಲಾ ಜನಪ್ರತಿನಿಧಿಗಳನ್ನು ಸೇರಿಸಿಕೊಂಡು ಚರ್ಚೆ ಮಾಡುತ್ತೇನೆಂದು ಹೇಳಿದಿರಿ, ಅದು ಸ್ವಾಗತಾರ್ಹವಾದ ಬೆಳವಣಿಗೆ, ಅದಕ್ಕೂ ಮುಂಚೆ ಸರ್ಕಾರ ಒಂದು ನಿರ್ದಿಷ್ಟವಾದ ಪಾಲಿಸಿಯನ್ನು ಮಾಡುವುದಕ್ಕೆ ಮುಂಚೆ, ಅಧಿಕಾರಿಗಳು ಒತ್ತುವರಿ ಮಾಡಿರುವ ಜಮೀನಿಗೆ, ಆ ಬಗರ್ ಹುಕುಂ ಮಾಡಿ ಸಾಗುವಳಿ ಮಾಡಿರುವಂಥ ಜಮೀನಿಗೆ ಕೈ ಹಾಕಬಾರದು Individual ಆಗಿ ಕೈಹಾಕಿ law and order problem ಅನ್ನು ನಮ್ಮ ಜಿಲ್ಲೆಯೊಳಗಡೆ creat ಮಾಡಿದ್ದಾರೆ ಹಾಗಾಗಬಾರದು ಸರ್ಕಾರ ಪಾಲಿಸಿ ಮಾಡಲಿ, ಸರ್ಕಾರ ಹಂಚಬೇಕೆಂದರೆ ನಾವೇ ಅಲ್ಲಿ ನಿಂತು ಹಂಚುತ್ತೇವೆ, ಅಥವಾ ಅವರಿಗೆ confirmation ಕೊಡಬೇಕೆಂದರೆ, confirmation ಕೊಡುತ್ತೇವೆ, ನಮ್ಮನ್ನು ಎಡಬಿಡಂಗಿ ಸ್ಥಿತಿಯಲ್ಲಿ ಇಡಬಾರದು ಆ ಸೂಚನೆಯನ್ನು ಕೊಡತಕ್ಕಂಥ ಕೆಲಸವನ್ನು ಮಾಡಬೇಕು

ಶ್ರೀ ಹೆಚ್ ಎಂ ವಿಶ್ವನಾಥ್ – ಇದೊಂದು ಗಂಭೀರವಾದಂತ ವಿಚಾರ ಒಂದು ತೋಟದ ಮಾಲೀಕನ ಹತ್ತಿರ ನೀವು ಕಿತ್ತುಕೊಂಡು ನಾಲ್ಕಾರು ಜನರಿಗೆ ಕೊಟ್ಟರೆ, ಇನ್ನು ಪಕ್ಕದಲ್ಲಿರುವವರೆಲ್ಲಾ ಏನು ಮಾಡಿರುತ್ತಾರೆ? ಆದ್ದರಿಂದ ಒಂದು ಕಡೆ ಮುಟ್ಟುವುದಕ್ಕೆ ಹೋಗಬೇಡಿ ತೆಗೆದುಕೊಂಡರೆ ಎಲ್ಲಾ ಕಡೆ ತೆಗೆದುಕೊಳ್ಳಿ ಇಲ್ಲದಿದ್ದರೆ ಒಂದು ಪಾಲಿಸಿಯನ್ನು ಮಾಡಿ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನಲ್ಲಿ ನಡೆದಿದೆ ಇವತ್ತು ಒಂದು ಸಮಸ್ಯೆಯನ್ನು ಸೃಷ್ಟಿ ಮಾಡಿದರೆ ಅಲ್ಲಿ ಇನ್ನು ಏನು ಆಗುವುದಿಲ್ಲ

ಛೇರ್ಮನ್ – ಮತ್ತೆ ಈಗ ಭಾರಿ ಬಗರ್ ಹುಕುಂ ಆಗುತ್ತಿದೆ

ಶ್ರೀ ಜಗದೀಶ್ ಶೆಟ್ಟರ್ – ಮಾನ್ಯ ಛೇರ್ಮನ್‌ರೇ ಒಂದು ಗೋಮಾಳ ಲ್ಯಾಂಡ್ ಬಗ್ಗೆ High Court ನ ಒಂದು ತೀರ್ಪು ಏನಿದೆ

ಶ್ರೀ ಎಂ.ಪಿ. ಕುಮಾರಸ್ವಾಮಿ :– ಶ್ರೀ ರವಿಯವರ ಪ್ರಶ್ನೆಯಲ್ಲಿ ಅರಣ್ಯ ಒತ್ತುವರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಜಾಮದಾರ ವರದಿಯನ್ನು ಅನುಷ್ಠಾನಗೊಳಿಸಲಾಗಿದೆ ಎಂದು ಹೇಳಿದ್ದಾರೆ ಅದಕ್ಕೆ ಸಚಿವರು ಉತ್ತರವನ್ನು ಕೊಡಬೇಕಾದರೆ, ಚಿಕ್ಕಮಗಳೂರು ಜಿಲ್ಲೆಗೆ ಬಂದರೆ 5 ಕೋಟಿ ರೂಪಾಯಿಗಳು ತತ್ಕೋಳ ಮತ್ತು ಸಾರಗೋಡು ಮಾತ್ರ ಎಂದು ಹೇಳಿದ್ದಾರೆ ತತ್ಕೋಳ್‌ದವರಿಗೆ ಇನ್ನು ಹಣ ಮಂಜೂರು ಆಗಿಲ್ಲ ಜಾಮದಾರರವರು ಬಂದಾಗ ತತ್ಕೋಳ್‌ನ್ನು ಈ ಬಜೆಟ್‌ನಲ್ಲಿ ಸೇರಿಸಿಕೊಳ್ಳುತ್ತೇವೆನ್ನುವ ಮಾತನ್ನು ಹೇಳಿದ್ದರು ಅದರ ಜೊತೆಗೆ ಒಂದೊಂದು ಮನೆಗೆ 20 ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದರು ಆದರೆ ಅದು ಕೂಡ ಆಗುತ್ತಿಲ್ಲ ಮನೆ ಕೂಡ ಆಗುತ್ತಿಲ್ಲ ಮಳೆಗಾಲದಲ್ಲಿ ಎಲ್ಲಾ ಮನೆಗಳು ಬಿದ್ದು ಹೋಗಿವೆ ಈಗ ಮಳೆ ಪ್ರಾರಂಭವಾಗುತ್ತದೆ ಆದರ ಬಗ್ಗೆ ತ್ವರೀತವಾಗಿ ಮನೆ ಕಟ್ಟಲು ಪರಿಹಾರವನ್ನು ಕೊಡಬೇಕೆನ್ನುವಂಥ ಮಾತನ್ನು ಹೇಳುತ್ತೇನೆ ಸಾರಗೋಡು ಗ್ರಾಮದ 87 ಜನರಿಗೆ ಪರಿಹಾರವನ್ನು ಕೊಡಬೇಕೆಂದು ಮಾಡಿದ್ದರು ಈಗ ಬರುತ್ತಾ ಬರುತ್ತಾ 30 ಜನರಿಗೆ ಆಗಿದೆ ಎಂದು ಹೇಳುತ್ತಾರೆ ಅಧಿಕಾರಿಗಳ ಉದ್ದೇಶವೇನೆಂದರೆ, ಮಾನವೀಯತೆಯ ದೃಷ್ಟಿಯಿಂದ ಕೊಡುವುದು ಅಷ್ಟು ಜನರಿಗೆ ಕೊಡಬೇಕೆನ್ನುವ ನಿಯಮ ಏನು ಇಲ್ಲವೆಂದು ಹೇಳುತ್ತಾರೆ ದಯಮಾಡಿ 87 ಜನರಿಗೆ ಕೊಡಬೇಕು ಈಗಾಗಲೇ ಒಂದು resolution ಕೂಡ ಆಗಿದೆ ಅಧಿಕಾರಿಗಳು ಇದರ ಬಗ್ಗೆ ಸಂಕುಚಿತ ಭಾವನೆ ತೋರಿಸಬಾರದೆಂದು ನನ್ನ ಮನವಿ

ಶ್ರೀ ಜಗದೀಶ್ ಶೆಟ್ಟರ್ – ಮಾನ್ಯ ಚೇರ್ಮನ್‌ರೇ ಈ ಗೋಮಾಳ್ ಲ್ಯಾಂಡ್ ಬಗ್ಗೆ ನಮ್ಮ ಹೈಕೋರ್ಟ್‌ನ ನ್ಯಾಯಾಧೀಶರು ಏನು ತೀರ್ಪನ್ನು ಕೊಟ್ಟಿದ್ದಾರೆ ಬಹುಶ ನಾವೆಲ್ಲರೂ ಸುದೀರ್ಘವಾಗಿ ಅದನ್ನು ಅವಲೋಕನ ಮಾಡಿದರೆ, ಇವತ್ತಿನ

ವ್ಯವಸ್ಥೆಗೆ ತಕ್ಕಂಥ ರೀತಿಯಲ್ಲಿ ಅವರು ಅದಕ್ಕೆ ಸ್ಪಂದನ ಮಾಡಲಿಕ್ಕೆ ಹೈಕೋರ್ಟ್‌ನ ನ್ಯಾಯಾಧೀಶರು ಪ್ರಯತ್ನ ಮಾಡಿದ್ದಾರೆಂದು ಬಹಳಷ್ಟು ಅರ್ಥವಾಗುತ್ತದೆ ಇವತ್ತು 100 ಜಾನುವಾರುಗಳಿದ್ದರೆ, 30 ಎಕರೆ ಜಮೀನು ಮೀಸಲಾಗಿ ಇಡಬೇಕು ಎನ್ನುವಂಥದ್ದು ಒಂದು ಗೈಡ್‌ಲೈನ್ಸ್ ನಾವು ಹಾಕಿಕೊಂಡಿದ್ದೇವು ಆದರೆ ತಾವು ಏನು ಹೇಳಿದಿರಿ, ಇವತ್ತು ವ್ಯವಸ್ಥೆ ಬದಲಿಯಾಗಿದೆ ಇವತ್ತು ಒಂದೇ ಕೊಟ್ಟಿಗೆಯಲ್ಲಿ ಕೂಡಿ ಹಾಕುತ್ತೇವೆ, ನಾವೇ ಮೇವು ತೆಗೆದುಕೊಂಡು ಬರುತ್ತೇವೆ, ಇವತ್ತು ಅವರು ಆ ಲ್ಯಾಂಡ್‌ಗೆ ಹೋಗುವುದಿಲ್ಲ ಈಗ stall feeding ನಂಥ ವ್ಯವಸ್ಥೆ ಬಂದಿದೆ ಹೀಗಾಗಿ ಇದನು ಅವಲೋಕನ ಮಾಡಿ ಅವರು ತೀರ್ಪನ್ನು ಮಾಡಿದ್ದಾರೆ ಮಾನ್ಯ ನ್ಯಾಯಾಧೀಶರು ಇವೆಲ್ಲಾ ವಿಷಯಗಳನ್ನು ಅವರು ಅದರಲ್ಲಿ discussion ಮಾಡಿದ್ದಾರೆ ಆಯಾ ಜಿಲ್ಲೆಯ ಪರಿಸ್ಥಿತಿಗೆ ಅನುಗುಣವಾಗಿ ಆ ಜಿಲ್ಲಾಧಿಕಾರಿಗಳು ಒಂದು ಸಮಿಕ್ಷೆಯನ್ನು ಮಾಡಿ ಅದರ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳಬೇಕೆನ್ನುವ ಬಗ್ಗೆ ಅವರು specific ಆಗಿ ಹೇಳಿದ್ದಾರೆ ಹೀಗಾಗಿ ನಾವು ಅದರ ಒಂದು ತೀರ್ಪನ್ನು ಇಟ್ಟುಕೊಂಡು ಒಂದು ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ ಆ ರೀತಿಯಾಗಿ ಆ ಜಿಲ್ಲೆಯಲ್ಲಿ ಸಮಿಕ್ಷೆ ಮಾಡುವುದಕ್ಕೆ ನಾವು ಜಿಲ್ಲಾಧಿಕಾರಿಗಳಿಗೆ ಒಂದು ಸೂಚನೆಯನ್ನು ಕೊಟ್ಟಿದ್ದೇವೆ ಈಗ ಕೆಲವೊಂದು ಕೇಸ್‌ಗಳು ಪೆಂಡಿಂಗ್ ಇವೆ, ಆ ಗೋಮಾಳ್ ಲ್ಯಾಂಡ್ ಬಗ್ಗೆ ಮಾನ್ಯ ಮಾಧುಸ್ವಾಮಿಯವರು ಹೇಳಿದರು ಕೆಲವೊಂದು ಈಗಾಗಲೇ ನಾವು ನಿರ್ಣಯವನ್ನು ಕೊಟ್ಟಿದ್ದೇವೆ ಆದರೆ ಅವರಿಗೆ ಇನ್ನು ನಾವು ಹಕ್ಕು ಚೀಟಿ ಕೊಟ್ಟಿಲ್ಲವೆನ್ನುವ ಮಾತನ್ನು ಅವರು ಹೇಳಿದ್ದಾರೆ ಅಂತಹ specific ಆದ ಕೇಸ್‌ಗಳು ಇನ್ನು ನಾವು ಗಮನವನ್ನು ಹರಿಸಿ ಈ ತೀರ್ಪಿನ ಹಿನ್ನೆಲೆಯಲ್ಲಿ ಅದಕ್ಕೆ ಸರಿಯಾದಂಥ ರೀತಿಯಲ್ಲಿ ಒಂದು ಪರಿಹಾರವನ್ನು ಹುಡುಕಲಿಕ್ಕೆ ನಾವು ಆದಷ್ಟು ಬೇಗನೆ ನಿರ್ಣಯ ತೆಗೆದುಕೊಳ್ಳುತ್ತೇ ವೆನ್ನುವ ಮಾತನ್ನು ಹೇಳುತ್ತೇನೆ ಮಾನ್ಯ ಸಿ ಟಿ ರವಿಯವರು ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ ಅಲ್ಲಿರುವ ಸಮಸ್ಯೆ ಏನು ಇದೆ ಅದರ ಬಗ್ಗೆ ನಾನು ಆದಷ್ಟು ಬೇಗನೆ ಸಭೆಯನ್ನು ಕರೆಯುತ್ತೇನೆ ಹಿಂದೆ ಕೂಡ ಒಂದು ಸಭೆ ಕರೆದು ಅಲ್ಲಿ ತೊಂದರೆಯಾದಾಗ ಸ್ಪಂದನ ಮಾಡುವಂಥ ಕೆಲಸವನ್ನು ಸರ್ಕಾರ ಮಾಡಿದೆ

ಹೀಗಾಗಿ ಅಲ್ಲಿಯ ವಿಷಯದ ಬಗ್ಗೆ ನಮ್ಮ ಗಮನಕ್ಕೆ ಬಂದಿದೆ, ಆದಷ್ಟು ಶೀಘ್ರವಾಗಿ ಈ ಅಧಿವೇಶನ ಆಗುವುದರೊಳಗೆ ಒಂದು ಪರಿಹಾರವನ್ನು ಹುಡುಕುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ ಮಾನ್ಯ ಶಾಸಕರಾದ ವಿಶ್ವನಾಥ್‌ರವರು ಕೆಲವೊಂದು ಪಾಲಿಸಿ ಡಿಸಿಷನ್ ತೆಗೆದುಕೊಳ್ಳಬೇಕೆನ್ನುವ ಮಾತನ್ನು ಹೇಳಿದ್ದಾರೆ ಹೀಗಾಗಿ ಇದರ ಬಗ್ಗೆ ಸಮಗ್ರವಾಗಿ ಈ ಬಗರ್‌ಹುಕುಂ ಜಮೀನನ್ನು ಅಕ್ರಮವಾಗಿ ಯಾರು ಸಾಗುವಳಿ ಮಾಡುತ್ತಿದ್ದಾರೆ, ಆ ಭೂಮಿಯ ಬಗ್ಗೆ ಬೇರೆ ಬೇರೆ ಜಿಲ್ಲೆಯಲ್ಲಿ ಬೇರೆ ಬೇರೆ ರೀತಿಯಾದ ಒಂದು ವ್ಯವಸ್ಥೆ ಇರುವಾಗ ಇದರ ಬಗ್ಗೆ ಒಂದು ಸಮಗ್ರವಾದಂಥ ಅಧ್ಯಯನ ಮಾಡಿ ಒಂದು ಪಾಲಿಸಿ ಡಿಸಿಷನ್ ಈ ಸರ್ಕಾರ ತೆಗೆದುಕೊಳ್ಳುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ ಮಾನ್ಯ ಬೋಪಯ್ಯನವರು ಏನು ಹೇಳಿದರು, ಈ ಅವಧಿಯನ್ನು ವಿಸ್ತರಣೆ ಮಾಡಬೇಕೆನ್ನುವುದನ್ನು ಹೇಳಿದ್ದಾರೆ ಬಹುಶಃ ಹಿಂದಿನ ಸರ್ಕಾರಗಳು ಈ ಬಗ್ಗೆ ಸಾಕಷ್ಟು ಚಿಂತನೆಯನ್ನು ಮಾಡಿವೆ 1979 ಮತ್ತು 1999 ರವರೆಗೆ ಅಲ್ಲಿಂದ ಇಲ್ಲಿಯವರೆಗೆ ಏನು ಆಗಿಲ್ಲ ಅದನ್ನು ಈಗ ವಿಸ್ತರಣೆಯನ್ನು ಮಾಡಿದ್ದೇವೆ Form No 50 ಮತ್ತು 53 ರ ಪ್ರಕಾರ ಅರ್ಜಿಯನ್ನು ಕೊಡಬೇಕೆಂದು ಅವಧಿಯನ್ನು ವಿಸ್ತರಣೆ ಮಾಡಿದ್ದೇವೆ ಆಗ ಏನು ಅರ್ಜಿಗಳು ಬಂದಿವೆ, ಮಾನ್ಯ ಮಾಧುಸ್ವಾಮಿಯವರು ಏನು observation ಮಾಡಿದರು ಮೊದಲು Form No 50 ಕೊಟ್ಟಾಗ ಎಷ್ಟೊಂದು applications reject ಆಗಿದ್ದವು, ಅದರಲ್ಲಿ ಬಹಳಷ್ಟು ಅರ್ಜಿಗಳು ಮತ್ತೆ Form No 53 ರಲ್ಲಿ ಹಾಕಿದರು ಹೀಗಾಗಿ ಆ ಒಂದು ಸಂದರ್ಭ ಇದೆ ಮತ್ತೆ ಅವಧಿಯನ್ನು ವಿಸ್ತರಣೆ ಮಾಡುವಂಥದ್ದು, ಅರ್ಜಿಗಳನ್ನು ಮತ್ತೆ ಹೊಸದಾಗಿ ಸಲ್ಲಿಸುವಂಥದ್ದು ಈ ಸರ್ಕಾರಕ್ಕೆ ಅದರ ಬಗ್ಗೆ ಚಿಂತನೆ ಇಲ್ಲ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ

ಶ್ರೀ ಹೆಚ್ ಡಿ ಬಸವರಾಜು – ಮಾನ್ಯ ಅಧ್ಯಕ್ಷರವರೇ, ಬಹಳಷ್ಟು ವರ್ಷಗಳಿಂದ ಈ ಒಂದು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಮಾನ್ಯ ಕಂದಾಯ ಮಂತ್ರಿಗಳಿಂದ ಸಾಧ್ಯವಾಗುವುದು ಆದ್ದರಿಂದ ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳುತ್ತೇನೆ ಬಹಳಷ್ಟು ವರ್ಷಗಳಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಕಾಲೋನಿಗಳಲ್ಲಿ ವಾಸ ಮಾಡುತ್ತಿದ್ದಾರೆ ಅದು ಸರ್ಕಾರದ ಜಮೀನು, ಆ

ಜಮೀನುಗಳಲ್ಲಿ ಸರ್ಕಾರದಿಂದ ನಿವೇಶನಗಳನ್ನು ಮಾಡಿ ಕೊಟ್ಟಿದ್ದಾರೆ ಆದರೆ ಹಕ್ಕುಪತ್ರವನ್ನು ಇದುವರೆಗೆ ಕೊಟ್ಟಿಲ್ಲ ಹಾಗಾಗಿ ಇದರಿಂದ ಬಹಳಷ್ಟು ಸಮಸ್ಯೆಗಳು ಆಗಿ, ರಾಜ್ಯದಲ್ಲಿರುವ ಎಲ್ಲಾ ಜಿಲ್ಲೆಗಳಲ್ಲಿ ಈ ಸಮಸ್ಯೆ ಇದೆ ಅದಕ್ಕೆ ತಮ್ಮ ಮೂಲಕ ಮಾನ್ಯ ಕಂದಾಯ ಸಚಿವರನ್ನು ಕೇಳುತ್ತಿದ್ದೇನೆ ಬಹಳಷ್ಟು ವರ್ಷಗಳಿಂದ ಯಾರ್ಯಾರು ಸರ್ಕಾರಿ ಜಮೀನುಗಳಲ್ಲಿ ಅಥವಾ ಸರ್ಕಾರ ಕೊಟ್ಟಿರುವ ನಿವೇಶನಗಳಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಹಾಗೂ ಇತರೆ ಜನಾಂಗದವರು ವಾಸ ಮಾಡುತ್ತಿದ್ದಾರೆ, ಅವರಿಗೆ ಕೂಡಲೇ ಹಕ್ಕುಪತ್ರವನ್ನು ವಿತರಣೆ ಮಾಡಿಸಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ

ಶ್ರೀ ಜಗದೀಶ್ ಶೆಟ್ಟರ್ – ಮಾನ್ಯ ಬಸವರಾಜುರವರು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ಆ ವಿಷಯದ ಬಗ್ಗೆ ಸರ್ಕಾರದಿಂದ ಕ್ರಮವನ್ನು ಕೈಗೆತ್ತಿಕೊಳ್ಳುತ್ತೇವೆ

ಶ್ರೀ ಹೆಚ್ ಎಂ ವಿಶ್ವನಾಥ್ – ಸೆಕ್ಷನ್ 94 ಎ ಅಥವಾ ಸೆಕ್ಷನ್ 94 ಬಿ ದಲ್ಲಿ ಅವಕಾಶ ಕೊಡದಿದ್ದರೆ ಹೇಗೆ ಪಟ್ಟಾ ಕೊಡಲಿಕ್ಕೆ ಆಗುತ್ತದೆ?

ಶ್ರೀ ಜಗದೀಶ್ ಶೆಟ್ಟರ್ – ಮಾನ್ಯ ಶಾಸಕರು ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ ದಯವಿಟ್ಟು ಅದಕ್ಕೆ 6 ತಿಂಗಳಾದರೂ ಅವಕಾಶವನ್ನು ಕೊಡಿ ಜಾಮದಾರರವರು ಅಲ್ಲಿಗೆ ಹೋಗಿ ಒಂದು ಕಮಿಟಿಯನ್ನು ಮಾಡಿ ಮಾನ್ಯ ಮುಖ್ಯಮಂತ್ರಿಗಳು ಅವರನ್ನು ಕಳುಹಿಸಿದ್ದರು ಆ ಸಂದರ್ಭದಲ್ಲಿ ಅಲ್ಲಿ ಒಂದು ಅಧ್ಯಯನವನ್ನು ಮಾಡಿ ಜಾಮದಾರರವರು ಒಂದು ವರದಿಯನ್ನು ಕೊಟ್ಟಿದ್ದಾರೆ ಆ ವರದಿಯನ್ವಯ ಕೆಲವೊಂದು ಕ್ರಮಗಳನ್ನು ಸರ್ಕಾರ ಈಗಾಗಲೇ ಕೈಗೊಂಡಿದೆ ಮಾನ್ಯ ಕುಮಾರಸ್ವಾಮಿಯವರು ಏನು ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ ಕೆಲವು ಕಡೆ ಹಣ ಪೇಮೆಂಟ್ ಆಗಿಲ್ಲ ಇನ್ನು ಕೆಲವರಿಗೆ ಪರಿಹಾರ ಸಿಕ್ಕಿಲ್ಲ ಎನ್ನುವಂಥದ್ದು, ಅದರ ಬಗ್ಗೆ ಕೂಡ ನಾವು ಗಮನವನ್ನು ಹರಿಸುತ್ತೇವೆ ಜಾಮದಾರ್‌ರವರು ಏನು ವರದಿಯನ್ನು ಕೊಟ್ಟಿದ್ದಾರೆ ಅದನ್ನು ಅನುಷ್ಠಾನ ಮಾಡುವ ಬಗ್ಗೆ ಈಗಾಗಲೇ ಸರ್ಕಾರ ಕ್ರಮ ಕೈಗೊಳ್ಳುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ

(ಗೊಂದಲ)

ಶ್ರೀ ಹೆಚ್ ಡಿ ಬಸವರಾಜು .– ಹಕ್ಕುಪತ್ರದ ಬಗ್ಗೆ ಇಡೀ ರಾಜ್ಯದ ಬಗ್ಗೆ ಇರುವ ಸಮಸ್ಯೆ

ಛೇರ್ಮನ್ – ಅವರು ಹೇಳಿರುವುದರಿಂದ ಅವರ ಜೊತೆಯಲ್ಲಿ ನೀವು ವೈಯಕ್ತಿಕವಾಗಿ ಮಾತನಾಡಿ

ಶ್ರೀ ಹೆಚ್ ಡಿ ಬಸವರಾಜು – ಇಡೀ ರಾಜ್ಯದ ಸಮಸ್ಯೆ ಹಕ್ಕುಪತ್ರದ ಬಗ್ಗೆ ಇರುವುದರಿಂದ ಮಾನ್ಯ ಸಚಿವರನ್ನು ಉತ್ತರವನ್ನು ಹೇಳಲಿ

ಛೇರ್ಮನ್ – ಇದೊಂದು ಪ್ರಮುಖವಾದ ಪ್ರಶ್ನೆ ಎಂದು 35 ನಿಮಿಷ ಅವಕಾಶವನ್ನು ಕೊಟ್ಟಿರುತ್ತೇನೆ ಅವರ ಜೊತೆ ನೀವು ವೈಯಕ್ತಿಕವಾಗಿ ಮಾತನಾಡಿ ಮಾನ್ಯ ಬೋಪಯ್ಯನವರು ಮಾತನಾಡಿ

(ಗೊಂದಲ)

ಪ್ರಶ್ನೆ ಸಂಖ್ಯೆ 1942

ಛೇರ್ಮನ್ – ಇದಕ್ಕೆ ಕಾಲಾವಕಾಶವನ್ನು ಕೇಳಿದ್ದಾರೆ

ಶ್ರೀ ಬಸವರಾಜರಾಯರೆಡ್ಡಿ – ಕಾಲಾವಕಾಶವೆಂದರೆ,

ಶ್ರೀ ಹೆಚ್ ಸಿ ಬಸವರಾಜು – ರಡ್ಡಿಯವರೇ ಮಾನ್ಯ ಮಂತ್ರಿಯವರು ಉತ್ತರವನ್ನು ಹೇಳುತ್ತಿದ್ದಾರೆ

ಶ್ರೀ ಬಸವರಾಜರಾಯರೆಡ್ಡಿ – ಇದು ಬಹಳ ಪ್ರಮುಖವಾದಂತಹ ಪ್ರಶ್ನೆಯಾಗಿದೆ

ಛೇರ್ಮನ್ – ಮಾನ್ಯ ರೆಡ್ಡಿಯವರೇ ಏನು ಹೇಳುತ್ತಿದ್ದೀರಿ

ಶ್ರೀ ಹೆಚ್ ಎಂ ವಿಶ್ವನಾಥ್ – ಪ್ರಮುಖವಾಗಿರುವುದಕ್ಕೇ ಕಾಲಾವಕಾಶವನ್ನು ಕೇಳಿರುವುದು

ಶ್ರೀ ಜೆ ಸಿ ಮಾಧುಸ್ವಾಮಿ – ಅವರು ರೆಡ್ಡಿಯವರಿಗೆ ಉತ್ತರವನ್ನು ಹೇಳುತ್ತಿದ್ದಾರೋ ಅಥವಾ ಅವರಿಗೆ ಉತ್ತರವನ್ನು ಹೇಳುತ್ತಿದ್ದಾರೋ ಗೊತ್ತಿಲ್ಲ ಇಲ್ಲಿ ನಾವು ಕುಳಿತುಕೊಂಡು ಏನು ಮಾಡುವುದು?

ಒಬ್ಬ ಮಾನ್ಯ ಸದಸ್ಯರು – ಈ ಬಗ್ಗೆ ಸುದೀರ್ಘವಾದ ಉತ್ತರ ಬೇಕಲ್ಲ, ಅದಕ್ಕಾಗಿ ಕಾಲಾವಕಾಶವನ್ನು ಕೇಳಿದ್ದಾರೆ

ಛೇರ್ಮನ್ .– ಇಲ್ಲ ಹಾಗೇ ಹೇಳುವುದಕ್ಕಾಗುವುದಿಲ್ಲ ಬೆಳಿಗ್ಗೆಯಿಂದ ಚರ್ಚೆ ಪ್ರಾರಂಭವಾಗಿದೆ ನೀವು ಆ ರೀತಿಯ ಶಬ್ದಗಳನ್ನು ಉಪಯೋಗಿಸಬಾರದು

ಶ್ರೀ ಜಗದೀಶ್ ಶೆಟ್ಟರ್ – ಮಾನ್ಯ ಬಸವರಾಜರಾಯರೆಡ್ಡಿಯವರು ಏನು ರೈಸ್ ಮಾಡಿದ್ದಾರೆ ಈ form No 50, 53 ಪ್ರಕಾರ ಏನು ಪೆಂಡಿಂಗ್ ಇದೆ ಅದರ ಬಗ್ಗೆ specific ಆದ ಪ್ರಶ್ನೆಇದೆ ಇವತ್ತು ಆಶ್ರಯ ಯೋಜನೆಯ ಬಗ್ಗೆ ಮತ್ತು ಅತಿಕ್ರಮವಾಗಿ ನಿವೇಶನಗಳನ್ನು ಮಾಡಿದ್ದಾರೆ ಇದರ ಬಗ್ಗೆ ಸೆಕ್ಷನ್ 94 (ಸಿ) ಪ್ರಕಾರ ಯಾವ ಅರ್ಜಿಗಳು ಪೆಂಡಿಂಗ್ ಇದೆ ಅದನ್ನು ಸಕ್ರಮ ಮಾಡುವುದರ ಬಗ್ಗೆ ಸರ್ಕಾರದವರು ಅಲೋಚನೆಯನ್ನು ಮಾಡಿದೆ ಈಗ ಅಂತಹ ಅರ್ಜಿಗಳು ಇದ್ದಾಗ ಪೆಂಡಿಂಗ್ ಇದ್ದರೆ ಅವನ್ನು ಸಹ ಸಕ್ರಮ ಮಾಡುವ ಬಗ್ಗೆ ಸರ್ಕಾರದ ನೀತಿ ಇದೆ ಅದನ್ನು ನಾವು ಮಾಡುತ್ತೇವೆ ಸೆಕ್ಷನ್ 94(ಸಿ) ಬಗ್ಗೆ ಸರ್ಕಾರ ಅದರ ಬಗ್ಗೆ ಗಮನವನ್ನು ಹರಿಸುತ್ತದೆ

ಛೇರ್ಮನ್ – ಮಾನ್ಯ ಬಸವರಾಜರಾಯರೆಡ್ಡಿಯವರೇ ತಮ್ಮ ಪ್ರಶ್ನೆಗೆ ಅವರು ಕಾಲಾವಕಾಶವನ್ನು ಕೇಳಿದ್ದಾರೆ ನೀವು ನಿಮ್ಮ ಸೀಟಿಗೆ ಬರಬೇಕು ಸಾರ್ ಇಲ್ಲಾ ನೀವು ಸೀಟಿಗೆ ಬರಬೇಕು

ಶ್ರೀ ಬಸವರಾಜರಾಯರೆಡ್ಡಿ – ಮಾನ್ಯ ಛೇರ್ಮನ್‌ರವರೇ

ಛೇರ್ಮನ್ – ರೆಡ್ಡಿಯವರೆ, ನೀವು ಅಲ್ಲಿ ನಿಂತುಕೊಂಡು ಮಾತನಾಡುವುದಕ್ಕಾಗುವುದಿಲ್ಲ ತಾವು ತಮ್ಮ ಸೀಟಿಗೆ ಬನ್ನಿ ತಾವು ಅಲ್ಲಿ ನಿಂತುಕೊಂಡು ಮಾತನಾಡಿದರೆ ಅದು ರೇಕಾರ್ಡ್ ಆಗುವುದಿಲ್ಲ ಅದು ನಿಮ್ಮ ನೀಟಲ್ಲ ನೀವು ಅಲ್ಲಿ ಮಾತನಾಡಲೇಬಾರದು

ಶ್ರೀ ಬಸವರಾಜರಾಯರೆಡ್ಡಿ – ತಾವು ಒಂದು ನಿಮಿಷ ಕೇಳಿ

ಛೇರ್ಮನ್ .– ಅದು ನಿಮ್ಮ ಸೀಟಲ್ಲ ನೀವು ಅಲ್ಲಿ ನಿಂತುಕೊಂಡು ಮಾತನಾಡಬಾರದು

(ಗೊಂದಲ)

ಛೇರ್ಮನ್ – ಮಾನ್ಯ ರೆಡ್ಡಿಯವರೇ ತಾವು ಮಾತನಾಡುವುದು ರೇಕಾರ್ಡ್‌ಗೆ ಹೋಗುವುದಿಲ್ಲ ಏಕೆ ಹೀಗೆ ಮಾಡುತ್ತಿದ್ದೀರಿ? ನೀವು ಸೀಟಿಗೆ ಬನ್ನಿ ನೀವು ನಿಮ್ಮ ಸೀಟಿಗೆ ಬಂದು ಮಾತನಾಡಬೇಕು

(ಗೊಂದಲ)

ಶ್ರೀ ಸಿ ಟಿ ರವಿ .– ರಾಯರೆಡ್ಡಿಯವರನ್ನು ಯಾರಾದರು ಹಿಂದಕ್ಕೆ ಕಳುಹಿಸಿದರೋ ಅಥವಾ ಅವರೇ ಹಿಂದಕ್ಕೆ ಹೋದರೋ?

ಒಬ್ಬ ಮಾನ್ಯ ಸದಸ್ಯರು .– ಆ ಸೀಟು ಅವರದು?

ಛೇರ್ಮನ್ – No ನಿಮ್ಮ ಸೀಟು ಅದಲ್ಲ, ತಾವು ಮಾತನಾಡುವುದು ರೇಕಾರ್ಡ್‌ಗೆ ಹೋಗುವುದಿಲ್ಲ

(ಬಸವರಾಜರಾಯರೆಡ್ಡಿಯವರು ಬೇರೆ ಸೀಟಿನಿಂದ ಮಾತನಾಡುತ್ತಿದ್ದರು)

ಛೇರ್ಮನ್ – ಏಕೆ ? ಅದು ಸಾಧ್ಯವಿಲ್ಲ

(ಬಸವರಾಜರಾಯರೆಡ್ಡಿಯವರು ಬೇರೆ ಸೀಟಿನಿಂದ ಮಾತನಾಡುತ್ತಿದ್ದರು)

ಛೇರ್ಮನ್ – ನಿಮ್ಮ ಸೀಟಿಗೆ ಹೆಸರನ್ನು ಹಾಕಿದ್ದಾರೆ

(ಬಸವರಾಜರಾಯರೆಡ್ಡಿಯವರು ಬೇರೆ ಸೀಟಿನಿಂದ ಮಾತನಾಡುತ್ತಿದ್ದರು)

ಛೇರ್ಮನ್ .– ಹಾಗೆ ಆಗುವುದಿಲ್ಲ

(ಗೊಂದಲ)

ಛೇರ್ಮನ್ – ಅದು ಡಿ ಕೆ ಶಿವಕುಮಾರ್‌ರವರ ಸೀಟು

ಶ್ರೀ ಹೆಚ್ ಡಿ ಬಸವರಾಜು – ಸದಸ್ಯರು ಆ ನಿಯಮಗಳನ್ನು ಪಾಲನೆ ಮಾಡಬೇಕು

ಒಬ್ಬ ಮಾನ್ಯ ಸದಸ್ಯರು – ಅವರು ಹಿರಿಯ ಸದಸ್ಯರಾಗಿದ್ದಾರೆ

(ಗೊಂದಲ)

ಶ್ರೀ ಹೆಚ್ ಡಿ ಬಸವರಾಜು – ಸದನದ ಕೆಲವು ನಿಯಮಾವಳಿಗಳನ್ನು ಎಲ್ಲಾ ಸದಸ್ಯರು ಪಾಲನೆ ಮಾಡಬೇಕು

ಛೇರ್ಮನ್ – ಉಳಿದ ಸದಸ್ಯರುಗಳು ದಯವಿಟ್ಟು ಸುಮ್ಮನಿರಬೇಕು ರಾಯರೆಡ್ಡಿಯವರೇ ನಿಮ್ಮದು 146 ನೇ ಸೀಟು, ಅದು ನಿಮಗೆ ಅಲಾಟ್ ಆಗಿದೆ

(ಬಸವರಾಜರಾಯರೆಡ್ಡಿಯವರು ಬೇರೆ ಸೀಟಿನಿಂದ ಮಾತನಾಡುತ್ತಿದ್ದರು)

ಛೇರ್ಮನ್ .– ನೀವು ಅಲ್ಲಿ ನಿಂತುಕೊಂಡು ಏನು ಹೇಳಿದರೂ ಗೊತ್ತಾಗುವುದಿಲ್ಲ 146 ರಲ್ಲಿ ನಿಂತುಕೊಂಡು ಮಾತನಾಡಿ ಅಲ್ಲಿ ನೀವು ನಿಂತುಕೊಂಡು ಮಾತನಾಡಿದರೆ ನಿಮ್ಮದು ರೇಕಾರ್ಡ್ ಆಗುತ್ತದೆ ಆ ಬಗ್ಗೆ ನಾನು ಏನು ಬೇಕಾದರೂ ಹೇಳಬಹುದು

ಛೇರ್ಮನ್ – ನಿಮ್ಮ ಪ್ರಶ್ನೆಗೆ ಕಾಲಾವಕಾಶವನ್ನು ಕೇಳಿದ್ದಾರೆ

ಒಬ್ಬ ಮಾನ್ಯ ಸದಸ್ಯರು .– ವಿರೋಧಪಕ್ಷದವರಿಗೆ ಸೀಟಿಂಗ್ ಅಲಾಟ್ ಇದೆಯಲ್ಲಾ?

ಶ್ರೀ ಎಸ್ ಬಾಲರಾಜ್ – ಆಡಳಿತ ಪಕ್ಷದವರಿಗೆ ಸೀಟಿನ ಗಲಾಟೆ ಇರುತ್ತದೆ ವಿರೋಧಪಕ್ಷದವರಿಗೂ ಸೀಟಿನ ಗಲಾಟೆ ಇರುತ್ತದೆಂದು ಗೊತ್ತಿಲ್ಲ

ಛೇರ್ಮನ್ – ನೀವು ಹಿರಿಯ ಸದಸ್ಯರಾಗಿದ್ದೀರಿ

ಶ್ರೀ ಬಿ ಶಿವರಾಂ :– ಇದು ನನಗೆ ಅರ್ಥವಾಗುತ್ತಿಲ್ಲ ಇದು ಯಾವ ನಿಯಮಾವಳಿ

ಛೇರ್ಮನ್ – ಹಿರಿಯ ಸದಸ್ಯರು ಈ ರೀತಿಯಾಗಿ ಮಾತನಾಡಬಾರದು

(ಗೊಂದಲ)

ಒಬ್ಬ ಮಾನ್ಯ ಸದಸ್ಯರು – ಎಲ್ಲರೂ ಈ ರೀತಿಯಾಗಿ ನಡೆದುಕೊಳ್ಳುವುದರಿಂದ ಸರಿಹೋಗುವುದಿಲ್ಲ

ಛೇರ್ಮನ್ – ಮಾನ್ಯ ಬಸವರಾಜುರವರೇ ತಾವು ಕುಳಿತುಕೊಳ್ಳಿ

(ಈ ಹಂತದಲ್ಲಿ ಬಸವರಾಜರಾಯರೆಡ್ಡಿಯವರು ಸದನದ ಬಾವಿಗೆ ಬಂದು ಮಾತನಾಡುತ್ತಿದ್ದರು)

ಶ್ರೀ ಹೆಚ್ ಡಿ ಬಸವರಾಜು .– ಅವರು ವೆಲ್‌ನಲ್ಲಿ ನಿಂತುಕೊಂಡು ಮಾತನಾಡಬಹುದೇ? ಬಾವಿಯಲ್ಲಿ ನಿಂತುಕೊಂಡು ಮಾತನಾಡುವುದಕ್ಕೆ ಬರುವುದಿಲ್ಲ

ಕರ್ನಾಟಕ ರಾಜ್ಯಕ್ಕೆ ಇದುವರೆವಿಗೂ ಕೇಂದ್ರದಿಂದ ಮಂಜೂರಾಗಿರುವ ಎಸ್ ಇ ಜೆಡ್ ಯೋಜನೆ

265 (1455) ಶ್ರೀ ಶಿವಶಂಕರ್ ರೆಡ್ಡಿ ಎನ್ ಹೆಚ್ (ಗೌರಿಬಿದನೂರು) – ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯಕ್ಕೆ ಇದುವರೆವಿಗೂ ಕೇಂದ್ರದಿಂದ ಮಂಜೂರಾಗಿರುವ ಎಸ್ ಇ ಜೆಡ್ ಯೋಜನೆಗಳಾವುವು, ಹಾಗೂ ಇದರ ಉದ್ದೇಶವೇನು, (ಜಿಲ್ಲಾವಾರು ವಿವರ ಒದಗಿಸುವುದು)

ಆ) ಮಂಜೂರಾಗಿರುವ ಎಸ್ ಇ ಜೆಡ್ ಗಳ ಕಾರ್ಯಗಳು ಈಗ ಯಾವ ಹಂತದಲ್ಲಿದೆ,

ಇ) ಈ ಎಸ್ ಇ ಜೆಡ್ ಗಳಲ್ಲಿ ಹೂಡುವ ಬಂಡವಾಳ ವೆಚ್ಚ ಎಷ್ಟು ಹಾಗೂ ಇದರಲ್ಲಿ ಸ್ವದೇಶಿ ಬಂಡವಾಳ ಮತ್ತು ವಿದೇಶಿ ಬಂಡವಾಳ ಎಷ್ಟು,

ಈ) 2006–07 ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಹೂಡಿರುವ ಬಂಡವಾಳದ ಪ್ರಮಾಣವೇನು ಹಾಗೂ ಅವು ಯಾವ್ಯಾವು?

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು).

ಅ) ರಾಜ್ಯದಲ್ಲಿ ಈವರೆಗೆ ಭಾರತ ಸರ್ಕಾರದಿಂದ 29 ವಿಶೇಷ ಆರ್ಥಿಕ ವಲಯ ಯೋಜನೆಗಳಿಗೆ ನಿರ್ದಿಷ್ಟ ಅನುಮೋದನೆ ಹಾಗೂ 16 ವಿಶೇಷ ಆರ್ಥಿಕ ವಲಯ ಯೋಜನೆಗಳಿಗೆ ತಾತ್ವಿಕ ಅನುಮೋದನೆ ದೊರೆತಿರುತ್ತದೆ (ಅನುಬಂಧ ಲಗತ್ತಿಸಿದೆ) ಅನುಮೋದನೆಯಾಗಿರುವ ವಿಶೇಷ ಆರ್ಥಿಕ ವಲಯ ಯೋಜನೆಗಳ ಜಿಲ್ಲಾವಾರು ವಿವರಗಳು ಕೆಳಕಂಡಂತಿವೆ

ನಿರ್ದಿಷ್ಟ ಅನುಮೋದನೆ		ತಾತ್ವಿಕ ಅನುಮೋದನೆ	
ಜಿಲ್ಲೆ	ಸಂಖ್ಯೆ	ಜಿಲ್ಲೆ	ಸಂಖ್ಯೆ
ಬೆಂಗಳೂರು (ನಗರ)	19	ಬೆಂಗಳೂರು (ನಗರ)	2
ಬೆಂಗಳೂರು (ಗ್ರಾ)	2	ಬೆಂಗಳೂರು (ಗ್ರಾ)	4
ಮಂಗಳೂರು	2	ಮಂಗಳೂರು	2
ಹಾಸನ	3	ಉಡುಪಿ	2
ಶಿವಮೊಗ್ಗ	1	ಕೋಲಾರ	4
ಬೆಳಗಾಂ	1	ಬೆಳಗಾಂ	1
ಮೈಸೂರು	1	ಮೈಸೂರು	1
ಒಟ್ಟು	**29**	**ಒಟ್ಟು**	**16**

ವಿಶೇಷ ಆರ್ಥಿಕ ವಲಯವೆಂದರೆ ವಾಣಿಜ್ಯ ವ್ಯವಹಾರಕ್ಕೆ ಸಕಲ ರೀತಿಯ ಸೌಲಭ್ಯಗಳಿರುವ ಔದ್ಯೋಮಿಕ ಪ್ರದೇಶ ಇದು ದೇಶದೊಳಗೆ ಇರುವ ಪುಟ್ಟ ಹೊರ ದೇಶದಂತೆ ಇದೊಂದು ತೆರಿಗೆ ರಹಿತ ವಲಯ ಮೂಲತಃ ವಿದೇಶಿ ಬಂಡವಾಳ ಆಕರ್ಷಿಸಲು ಹಾಗೂ ರಫ್ತು ಉದ್ಯಮಗಳನ್ನು ಹೆಚ್ಚಿಸಲು ಈ ರೀತಿಯ ಆರ್ಥಿಕ ವಲಯಗಳನ್ನು ಸ್ಥಾಪಿಸಲಾಗುತ್ತಿದೆ

ವಿಶೇಷ ಆರ್ಥಿಕ ವಲಯ ಸ್ಥಾಪಿಸಲು ಬೇಕಾಗುವ ಕನಿಷ್ಟ ಪ್ರದೇಶ ವಿವರ ಕೆಳಕಂಡಂತಿರುತ್ತದೆ

ಕ್ರ. ಸಂ	ವಲಯ	ಹೆಕ್ಟೇರ್‌ನಲ್ಲಿ ಪ್ರದೇಶ
1	ಮಲ್ಟಿ ಪ್ರಾಡಕ್ಟ್ಸ್ ಎಸ್,ಇ ಜೆಡ್	1000
2	ಪ್ರಾಡಕ್ಟ್ಸ್ ಸೆಕ್ಟಾರ್ ಸ್ಪೆಸಿಫಿಕ್	100
3	ಐಟಿ/ಬಿಟಿ ಎಸ್ ಇ ಜೆಡ್	10
4	ಫ್ರೀ ಟ್ರೇಡ್ ವೇರ್ ಹೌಸಿಂಗ್ ಜೋನ್	40

ಆ) ಅನುಮೋದನೆಗೋಂಡಿರುವ ವಿಶೇಷ ಆರ್ಥಿಕ ವಲಯಗಳಲ್ಲಿ ಇಲ್ಲಿಯವರೆಗೆ 10 ಯೋಜನೆಗಳಿಗೆ ಭಾರತ ಸರ್ಕಾರವು ಅಧಿಸೂಚನೆಯನ್ನು ಹೊರಡಿಸಿದ್ದು, ಇದರಲ್ಲಿ 3 ಯೋಜನೆಗಳು ಕಾರ್ಯಾರಂಭ ಮಾಡಿದ್ದು ಉಳಿದ 7 ಯೋಜನೆಗಳು ಅನುಷ್ಠಾನ ಹಂತದಲ್ಲಿರುತ್ತದೆ ಉಳಿದ ಯೋಜನೆಗಳಿಗೆ ಜಮೀನು ಗುರುತಿಸುವ ಮತ್ತು ಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿದೆ

ಇ) 1 ನಿರ್ದಿಷ್ಟ ಅನುಮೋದನೆ ಪಡೆದ ಎಸ್ ಇ ಜೆಡ್ ಗಳಲ್ಲಿ ಹೂಡಬಹುದಾದ ಬಂಡವಾಳ

ಅ) ಒಟ್ಟು ಬಂಡವಾಳ ಹೂಡಿಕೆ – ರೂ. 14124 ಕೋಟಿಗಳು

ಆ) ಇದರಲ್ಲಿ ಸ್ವದೇಶಿ ಬಂಡವಾಳ – ರೂ 13330 ಕೋಟಿಗಳು

ಇ) ಇದರಲ್ಲಿ ವಿದೇಶಿ ಬಂಡವಾಳ – ರೂ 794 ಕೋಟಿಗಳು

2 ತಾತ್ವಿಕ ಅನುಮೋದನೆ ಪಡೆದ ಎಸ್ ಇ ಜೆಡ್ ಗಳಲ್ಲಿ ಹೂಡಬಹುದಾದ ಬಂಡವಾಳ

ಅ) ಒಟ್ಟು ಬಂಡವಾಳ ಹೂಡಿಕೆ – ರೂ 15648 ಕೋಟಿಗಳು

ಆ) ಇದರಲ್ಲಿ ಸ್ವದೇಶಿ ಬಂಡವಾಳ – ರೂ 12064 ಕೋಟಿಗಳು

ಇ) ಇದರಲ್ಲಿ ವಿದೇಶಿ ಬಂಡವಾಳ – ರೂ 3584 ಕೋಟಿಗಳು

ಈ) 2006–07 ನೇ ಸಾಲಿನಲ್ಲಿ ರಾಜ್ಯದಲ್ಲಿ ಬಂಡವಾಳ ಹೂಡಲು ಅನುಮೋದನೆ ಪಡೆದಿರುವ ಯೋಜನೆಗಳ ವಿವರಗಳು ಕೆಳಕಂಡಂತಿರುತ್ತವೆ

1) ರಾಜ್ಯ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ಅನುಮೋದನೆಗೊಂಡ ಯೋಜನೆಗಳ ವಿವರ

ಯೋಜನೆಗಳು	ಬಂಡವಾಳ ರೂ ಕೋಟಿಗಳಲ್ಲಿ	ಉದ್ಯೋಗ ಅವಕಾಶ
65	90255 84	772966

2) ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ಅನುಮೋದನೆಗೊಂಡ ಯೋಜನೆಗಳ ವಿವರ

ಯೋಜನೆಗಳು	ಬಂಡವಾಳ ರೂ ಕೋಟಿಗಳಲ್ಲಿ	ಉದ್ಯೋಗ ಅವಕಾಶ
836	10926 88	675405

ಅನುಮೋದನೆ ಪಡೆದಿರುವ ಯೋಜನೆಗಳಲ್ಲಿ ಮುಖ್ಯವಾಗಿ ಎಲೆಕ್ಟ್ರಾನಿಕ್ಸ್, ಸಾಫ್ಟ್‌ವೇರ್, ಇಂಜಿನಿಯರಿಂಗ್, ಆಟೋ ಮೊಬೈಲ್, ಫುಡ್ ಪ್ರೊಸೆಸಿಂಗ್, ಟೆಕ್ಸ್‌ಟೈಲ್ಸ್, ಪ್ಲಾಸ್ಟಿಕ್, ಡ್ರಗ್ಸ್ ಅಂಡ್ ಕೆಮಿಕಲ್ಸ್, ಸಿಮೆಂಟ್, ಶುಗರ್, ಹೋಟೆಲ್ಸ್, ಪೆಟ್ರೋ ಕೆಮಿಕಲ್ಸ್, ಐರನ್ ಅಂಡ್ ಸ್ಟೀಲ್ ಇತ್ಯಾದಿ ಯೋಜನೆಗಳಾಗಿರುತ್ತವೆ

Annexure to LAQ No. 1455
Abstract of SEZ Formal Approval Projects

Sl No	Name & Address of the Applicant Unit	Location Of the SEZ	SECTOR	Inv (Rs in Crores)	Area in Hectares	Employment
1	M/s Biocon Ltd , Hebbagodi 20th K M Hosur Road Bangalore	Bommasandra Industrial Area, Phase-V Bangalore	Bio Technology	500	36 00	2500
2	M/s Shyamaraj and Company (India) Pvt. Ltd , "Divya Shree Chambers, 'A' Wing 11, O'Shaugnessy Raod Bangalore-25	Khudalahalli Village, Krishnarajpuram Bangalore	IT & ITES	1566	30 00	19600
3	M/s Manyatha Promoters, Classic Court, 1st Floor, 9/1, Richmond Road Bangalore	Nagavara, Rachenahalli Villages, Bangalore North & East Talukas	IT & ITES	750	22 00	32000

4	M/s Hewelet Pakard India Software Operations Pvt Ltd , No 29, Cunninghamn Road, Bangalore-52	Whitefield Main Road Bangalore	IT	300	7 00	2500
5	M/s Wipro Ltd , Doddakannelli, Sarjapura Road, Bangalore-35	Doddakannelli, Sarjapura Road, Bangalore	IT & ITES	103	6 00	2800
6	M/s Wipro Ltd , Doddakannelli, Sarjapura Road, Bangalore-35	Electronic City, Bangalore	IT & ITES	160 05	5 00	3400
7	M/s Adarsh Prime Projects Pvt Ltd , No 10, Vittal Mallya Road, Bangalore-1	Devarabeesana Halli Bhoganahalli & Doddakenethahalli Bangalore East Taluk	IT & ITES	487	24 51	19000
8	M/s Infosys Technologies Ltd , # 44, Electronic city,	Pajeru and Kairangala villages of Bantavala	IT & ITES	600	125 00	25000

	Hosur Road, Bangalore-560100	Taluk, Dakshina Kannada District, near Mangalore, Karnataka				
9	M/s Information Technology Park Ltd , Whitefield Bangalore	Whitefield, Bangalore	IT & ITES	192 13	10 88	10500
10	M/s Tanglin Developments Ltd , No 1, Raheja Chambers Museum Road, Bangalore-01	Bangalore-Mysore Highway, Bangalore	IT & ITES	900	27 16	12500
11	M/s KIADB R P Building 14/3A, Nrupatunga Road Bangalore-1	Nidige Village of Shimoga Taluk, Shimoga District Karnataka	Automotive and Auto Components	38 61	169 60	40000
12	M/s KIADB R P Building 14/3A, Nrupatunga Road Bangalore-1	Mangalore	IT & ITES	49	203 00	25000

13	M/s Cessna Garden Developers Pvt Ltd , The Falcon House, No 1 Main Guard Cross Road, Bangalore-1	Marathahalli-Sarjapura Outer Ring Road, Bangalore	IT & ITES	506	19 22	25000
14	M/s Vikas Telecom Ltd , No 117, 3rd Main, 2nd Stage, Domlur, Bangalore-71	Devarabeesana Halli Village, Varther Hobli Bangalore East Taluk	IT & ITES	980	36 00	35000
15	M/s KIADB R P Building 14/3A, Nrupatunga Road Bangalore-1	Hassan	TEXTILES	33 02	232 45	35000
16	M/s Infosys Technologies Ltd , # 44, Electronic City, Hosur Road, Bangalore-560100	Hebbal, Mysore	IT & ITES	334 78	30 99	6000
17	M/s San Engineering and	Plot No 4,	IT & ITES	339	10 00	15000

	Locomotive Company Ltd, Plot No 4, Sadaramangala Ind Area, Whitefield, Bangalore	Sadaramangala Ind Area, Whitefield Bangalore				
18	M/s Golden Gate Developers Pvt Ltd, Golden House, 820, 80 Ft Road, 8th Block, Koramangala, Bangalore-95	Jaala Hobli, Bangalore (North)	IT & ITES	554	26 30	30000
19	M/s HCL Technoparks Ltd, A-10/11, Sector 3, Noida-201301- Uttara Pradesh	Jigani Industrial Area Bangalore	IT & ITES	508 14	11 05	9000
20	M/s Primal Projects Pvt Ltd, No-97/B, First Floor, 6th Block, Koramangala, Bangalore-95	Bellandur, Vartur Hobli, Bangalore	IT & ITES	345	12 65	30000
21	M/s Concord Investments	Akkalalena Halli and	IT & ITES	762	13 44	20000

	Divyashree Chambers, Wing A, 11, O'Shaugnessy Road Bangalore-25	Mallena Halli, Devanhalli Tq Bangalore (Rural) Dist				
22	M/s KIADB, R P Building 14/3A, Nrupatunga Road, Bangalore-1	Hassan	Food Processing	30 36	157 91	30000
23	M/s Ittina Properties Private Limited, No 1054, 7th Main, 3rd Block, Koramangala, Bangalore-34	Bagur Village, Hoskote Taluk	SEZ for Hardware & IT	534 58	15 73	19800
24	M/s Bagmane Developers Private Limited, No 7/2, Langford Garden, Bangalore - Bangalore-25	C V Raman Nagar, Bangalore	IT & ITES	889 66	12 14	33000
25	M/s Divyashree Infrastructure Divyashree Chambers, Wing A, 11, O'Shaugnessy	Bellandur, Amani Kane, Bangalore	IT & ITES	757	20 23	35000

	Road, Bangalore-25					
26	M/s Chaitanya Infrastructure Private Limited, No 17, Sankey Road, Bangalore-20	Whitefield Main Road, Bangalore	IT & ITES	1359	20 24	5000
27	M/s KIADB, R P Building 14/3A, Nrupatunga Road Bangalore-1	Hassan	Pharma	43 69	281 21	25000
28	M/s KBITS, NO 9, II Floor, UNI Building Thimmaiah Road, Vasanthnagar, Bangalore-52	Electronic City, 3rd Phase, Bangalore	Bio-Techonology	250	43 00	16000
29	M/s Renuka Sugars Limited BC105, Havelock Road, Contonment Belgaum - 590001	Burlatti, Athani Taluk, Belgaum District	integrated Sugar Complex with Distillery and Power Plant	252	100 00	335
	Total			**14124 02**	**1708 71**	**563935**

Abstract of In-Principle approval Projects

Sl No	Name & Address of the applicant Unit	Location Of the SEZ	SECTOR	Inv (Rs in Crores)	Area in Hectares	Employment
1	M/s Jubilant Organosys, 1-A, Sector, 16-A, Institutional Area, Noida, Uttar Pradesh, India	Koorgalli indl Area, Mysore, Karnataka	BIO-TECHNOLOGY	500	10 12	3000
2	M/s Millet Infrastructure Pvt Ltd No 137, Ground Floor, 15th Cross, Malleshwaram, Bangalore-3	Shanamangala, Bidadi Hobli, Ramnagaram Tq Bangalore Rural Dist	APPERELS AND TEXTILES	113	100 00	25000
3	M/s Gokuldas Exports Apparel and Textile Park Pvt Ltd No,70, Mission Road, Bangalore-27	Kaggalahalli, Kanakpura Tq, Bangalore Rural Dist, Karnataka	APPERELS AND TEXTILES	100	141 70	40000

4	M/s Shell India Pvt Ltd International Trade Tower, Nehru Place, New Delhi	Bangalore, Karnataka	IT & ITES	400	10 00	13 00
5	M/s B A Tech Park Pvt Ltd Thumbay, Bantwal, Dakshina Kannada District, Karnataka - 574170	Thumbe village, Bantwal Taluk, D K Dist, Karnataka	IT & ITES	47	10 00	3000
6	M/s Hi Skill Investment Consultancy Pvt Ltd , C/o Golden Palms Hotel & Spa, Golden Palms Avenue, Off Tumkur Road, Bangalore-562123	Chickaballapur Tq, Kolar District, Karnataka	IT & ITES	3590	100 00	15000
7	M/s Mangalore SEZ Ltd	Balkampady and adjoining area, Mangalore, Karnataka	MULTI PRODUCT	49 33	1320 00	25000

8	M/s Adarsh Prime Projects Pvt Ltd , No 10, Vittal Mallya Road, Bangalore-560001	Sarjapur Hobli, Anekal Taluk, Bangalore Urban District	IT & ITES	2357	468 62	50000
9	M/s Suzlon Infrastructure Ltd, 5th Floor, Godrej Millenium Building, 9, Koregaon Park Road, Pune-400001	Near Mangalore Port, Dakshina Kannada Dist Karnataka	HI TECh ENGINEERING PRODUCTS	1000	486 00	2500
10	M/s Suzlon Infrastructure Ltd, 5th Floor, Godrej Millenium Building, 9, Koregaon Park Road, Pune-400001	Padubidre, Udupi Dist	PORT BASED HI TECH ENGINEERING PRODUCTS	1000	202 00	2950
11	M/s Gandhi City for Advanced Research	Dodda mannu gudde, Ramanagara Taluk	SERVICE SECTOR WITH FOCUS ON	2683 2	404 7	35000

	and Development Ltd, No 507 and 508, 5th floor, Barton Center, M G Road, Bangalore-1		ADVANCED R & D			
12	M/s Hi Skill Investment Consultancy Pvt Ltd ,	Bangalore	AEROSPACE PARTS	159	100	10500
13	M/s Quest Machining and Manufacturing Pvt Ltd, Meriside heights, 5th floor, Nagavarapalya Village, K R Puram Hobli, Bangalore	Belgaum	AUTO, AEROSPACE, INDUSTRIAL ENGINEERING	35	121 4	5000
14	M/s Hinduja Investments Private limited, 7 and 12, Industrial Suburb, 2nd Stage, Tumkur Road, Yeshwantpur, Bangalore-22	Dharapura and Mayagondanahalli Ramanagaram Taluk	Textile and Apparel park	120	100	30000

15	Ms/ Shipco Infrastructure Private Limited, 14, K H Road, Richards Town, Bangalore	Mojesiddanahalli and Haliganahalli Bangarpet, Taluk, Kolar District	Free trade and Warehousing Zone (FTWZ)	706	120	8250
16	M/s Century Property Management Company Pvt Ltd	Chickaballapur Tq Kolar District, Karnataka	MULTI PRODUCT	2789	1000 00	20000
	Total			**15648 53**	**4694 54**	**276500**

ABSTRACT OF SEZ FORMAL APPROVAL PROJECTS

Sl No.	Name of the SEZ Developer	Location Of the SEZ	Sector	Inv (Rs in Crores)	Area in Hectares	Employment
1	ಮೆ ಬಯೋಕಾನ್ ಲಿಮಿಟೆಡ್,	ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ, 5ನೇ ಹಂತ, ಬೆಂಗಳೂರು	ಬಯೋ ಟೆಕ್ನಾಲಜಿ	500 00	36 00	2500
2	ಮೆ ಶಾಮರಾಜು ಅಂಡ್ ಕಂಪನಿ, (ಇಂಡಿಯಾ) ಪ್ರೈ ಲಿ, 5	ಕೂಡಲಹಳ್ಳಿ, ಕೆ ಆರ್ ಪುರ ಬೆಂಗಳೂರು	ಐಟಿ/ಐಟಿಇಎಸ್	1566	30 00	19600
3	ಮೆ ಮಾನ್ಯತಾ ಪ್ರಮೋಟರ್ಸ್,	ನಾಗಾವಾರ ರಾಚೇನಹಳ್ಳಿ ಬೆಂಗಳೂರು ಉತ್ತರ ತಾ	ಐಟಿ/ಐಟಿಇಎಸ್	750	22 00′	32000
4	ಮೆ ಹೆವ್‌ಲೆಟ್ ಪ್ಯಾಕಾರ್ಡ್ ಇಂಡಿಯ ಸಾಫ್ಟ್‌ವೇರ್ ಆಪರೇಷನ್ಸ್ ಪ್ರೈ ಲಿ	ವೈಟ್ ಫೀಲ್ಡ್ ಮುಖ್ಯ ರಸ್ತೆ, ಬೆಂಗಳೂರು	ಐಟಿ	300	7 00	2500
5	ಮೆ ವಿಪ್ರೋ ಲಿಮಿಟೆಡ್, ದೊಡ್ಡ ಕನ್ನೇಲಿ, ಸರ್ಜಾಪುರ ರಸ್ತೆ, ಬೆಂಗಳೂರು – 35	ದೊಡ್ಡ ಕನ್ನೇನಹಳ್ಳಿ ಸರ್ಜಾಪುರ ರಸ್ತೆ, ಬೆಂಗಳೂರು – 35	ಐಟಿ/ಐಟಿಇಎಸ್	103	6 00	2800

6	ಮೆ ವಿಪ್ರೋ ಲಿಮಿಟೆಡ್	ಎಲೆಕ್ಟ್ರಾನಿಕ್ ಸಿಟಿ ಬೆಂಗಳೂರು	ಐಟಿ/ಐಟಿಇಎಸ್	160 05	5 00	3400
7	ಮೆ ಆದರ್ಶ್ ಪ್ರೈಂ ಪ್ರಾಜೆಕ್ಟ್ಸ್ ಪ್ರೈ ಲಿಮಿಟೆಡ್	ದೇವರಬೀಸನ ಹಳ್ಳಿ, ಭೋಗನಹಳ್ಳಿ ಮತ್ತು ಬೆಂಗಳೂರು ಈಸ್ಟ್ ತಾ	ಐಟಿ/ಐಟಿಇಎಸ್	487	24 51	19000
8	ಮೆ ಇನ್‌ಫೋಸಿಸ್ ಟೆಕ್ನಾಲಜೀಸ್ ಲಿಮಿಟೆಡ್	ಪಜೇರು ಮತ್ತು ಕೈರಂಗಳ ಹಳ್ಳಿ, ಬಂಟ್ವಾಳ ತಾಲ್ಲೂಕು	ಐಟಿ/ಐಟಿಇಎಸ್	600	125 00	25000
9	ಮೆ ಇನ್‌ಫಾರ್ಮೇಷನ್ ಟೆಕ್ನಾಲಜಿ ಪಾರ್ಕ್ ಲಿಮಿಟೆಡ್,	ವೈಟ್‌ಫೀಲ್ಡ್, ಬೆಂಗಳೂರು,	ಐಟಿ/ಐಟಿಇಎಸ್	192 13	10 88	10500
10	ಮೆ ಟಾಂಗ್ಲಿನ್ ಡೆವಲಪ್‌ಮೆಂಟ್ ಲಿ,	ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ, ಬೆಂಗಳೂರು	ಐಟಿ/ಐಟಿಇಎಸ್	900	27 16	12500
11	ಮೆ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ	ಶಿವಮೊಗ್ಗ ತಾಲ್ಲೂಕು ಮತ್ತು ಜಿಲ್ಲೆ, ಕರ್ನಾಟಕ	ಆಟೋ ಕಾಂಪೋನೆಂಟ್ಸ್	38 61	169 60	40000
12	ಮೆ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ	ಮಂಗಳೂರು	ಐಟಿ/ಐಟಿಇಎಸ್	49	203 00	25000

13	ಮೆ ಸೆಸೆನಾ ಗಾರ್ಡನ್ ಡೆವಲಪರ್ಸ್ ಪ್ರೈ ಲಿಮಿಟೆಡ್,	ಮಾರತಹಳ್ಳಿ-ಸರ್ಜಾಪುರ ಔಟರ್ ರಿಂಗ್ ರೋಡ್ ಬೆಂಗಳೂರು	ಐಟಿ/ಐಟಿಇಎಸ್	506	19 22	25000
14	ಮೆ ವಿಕಾಸ್ ಟೆಲಿಕಾಂ ಲಿಮಿಟೆಡ್,	ದೇವರಬೀಸನ ಹಳ್ಳಿ ವರ್ತೂರು ಹೋಬಳಿ, ಬೆಂಗಳೂರು ಈಸ್ಟ್ ತಾ	ಐಟಿ/ಐಟಿಇಎಸ್	980	36 00	35000
15	ಮೆ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ	ಹಾಸನ	ಜವಳಿ	33 02	232 45	35000
16	ಮೆ ಇನ್‌ಫೋಸಿಸ್ ಟೆಕ್ನಾಲಜೀಸ್ ಲಿಮಿಟೆಡ್,	ಹೆಬ್ಬಾಳ, ಮೈಸೂರು	ಐಟಿ/ಐಟಿಇಎಸ್	334 78	30 99	6000
17	ಮೆ ಸಾನ್ ಇಂಜಿನಿಯರಿಂಗ್ ಅಂಡ್ ಲೋಕೋಮೋಟಿವ್ ಕಂ, ಲಿಮಿಟೆಡ್,	ಸಾದರ ಮಂಗಲ ಕೈಗಾರಿಕಾ ಪ್ರದೇಶ, ವೈಟ್‌ಫೀಲ್ಡ್ ಬೆಂಗಳೂರು	ಐಟಿ/ಐಟಿಇಎಸ್	339	10 00	15000
18	ಮೆ ಗೋಲ್ಡನ್ ಗೇಟ್ ಡೆವಲಪರ್ಸ್ ಪ್ರೈ ಲಿಮಿಟೆಡ್	ಜಾಲ ಹೋಬಳಿ, ಬೆಂಗಳೂರು ಉತ್ತರ	ಐಟಿ/ಐಟಿಇಎಸ್	554	26 30	30000
19	ಮೆ ಹೆಚ್‌ಸಿಎಲ್ ಟೆಕ್ನೋಪಾರ್ಕ್ಸ್ ಲಿಮಿಟೆಡ್,	ಜಿಗಣಿ ಕೈಗಾರಿಕಾ ಪ್ರದೇಶ, ಬೆಂಗಳೂರು	ಐಟಿ/ಐಟಿಇಎಸ್	508 14	11 05	9000

20	ಮೆ ಪ್ರೈಮಲ್ ಪ್ರಾಜೆಕ್ಟ್ಸ್ ಪ್ರೈ ಲಿ	ಬೆಳ್ಳಂದೂರು, ವರ್ತೂರು ಹೋಬಳಿ, ಬೆಂಗಳೂರು	ಐಟಿ/ಐಟಿಇಎಸ್	345	12 65	30000
21	ಮೆ ಕಾನ್‌ಕಾರ್ಡ್ ಇನ್‌ವೆಸ್ಟ್‌ಮೆಂಟ್ಸ್	ಅಕ್ಕಲೇನ ಹಳ್ಳಿ ಮತ್ತು ಮಲ್ಲೇನ ಹಳ್ಳಿ, ದೇವನ ಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಜಿ	ಐಟಿ/ಐಟಿಇಎಸ್	762	13 44	20000
22	ಮೆ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ,	ಹಾಸನ	ಫುಡ್ ಪ್ರೊಸೆಸಿಂಗ್	30 36	157 91	30000
23	ಮೆ ಇಟ್ಟಿನ ಪ್ರಾಪರ್ಟೀಸ್ ಪ್ರೈ ಲಿ	ಬಾಗೂರ್ ಹಳ್ಳಿ ಹೊಸಕೋಟೆ ತಾಲ್ಲೂಕು	ಎಸ್‌ಇಜೆಡ್ ಫಾರ್ ಹಾರ್ಡ್‌ವೇರ್ ಅಂಡ್ ಐಟಿ	534 58	15 73	19800
24	ಮೆ ಬಾಗಮನೆ ಡೆವಲಪರ್ಸ್ ಪ್ರೈ ಲಿ	ಸಿ ವಿ ರಾಮನ್ ನಗರ, ಬೆಂಗಳೂರು	ಐಟಿ/ಐಟಿಇಎಸ್	889 66	12 14	33000
25	ಮೆ ದಿವ್ಯಶ್ರೀ ಇನ್‌ಫ್ರಾಸ್ಟ್ರಕ್ಚರ್,	ಬೆಳ್ಳಂದೂರು, ಆಮನಿ ಕಾನೆ, ಬೆಂಗಳೂರು	ಐಟಿ/ಐಟಿಇಎಸ್	757	20 23	35000
26	ಮೆ ಚೈತನ್ಯ ಇನ್‌ಫ್ರಾಸ್ಟ್ರಕ್ಚರ್ ಪ್ರೈ ಲಿ	ವೈಟ್‌ಫೀಲ್ಡ್ ಮುಖ್ಯ ರಸ್ತೆ, ಬೆಂಗಳೂರು	ಐಟಿ/ಐಟಿಇಎಸ್	1359	20 24	5000

27	ಮೆ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ,	ಹಾಸನ	ಫಾರ್ಮ	43 69	281 21	25000
28	ಮೆ ಕೆಬಿಟ್ಸ್, ನಂ 9, 2ನೇ ಮಹಡಿ ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ ಬೆಂಗಳೂರು	ಎಲೆಕ್ಟ್ರಾನಿಕ್ ಸಿಟಿ, 3ನೇ ಹಂತ ಬೆಂಗಳೂರು	ಬಯೋ ಟೆಕ್ನಾಲಜಿ	250	43 00	16000
29	ಮೆ ರೇಣುಕ ಶುಗರ್ಸ್ ಲಿಮಿಟೆಡ್,	ಬರ್‌ಲಟ್ಟಿ ಅಧಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ	ಇಂಟಿಗ್ರೇಟೆಡ್ ಶುಗರ್ ಕಾಂಪ್ಲೆಕ್ಸ್ ವಿತ್ ಡಿಸ್ಟಿಲ್ಲರಿ ಅಂಡ್ ಪವರ್ ಪ್ಲಾಂಟ್	252	100 00	335
			ಒಟ್ಟು	**14124 02**	**1708 71**	**563935**

ABSTRACT OF SEZ IN-PRINCIPLE APPROVAL PROJECTS

Sl No.	Name of the SEZ Developer	Location Of the SEZ	Sector	Inv (Rs in Crores)	Area in Hectares	Employment
1	ಮೆ ಜ್ಯೂಮಿಲಿಯೆಂಟ್ ಆರ್‌ಗಾನೋಸಿಸ್,	ಕೋರ್ಗಳ್ಳಿ ಕೈಗಾರಿಕಾ ಪ್ರದೇಶ, ಮೈಸೂರು	ಬಯೋ ಟೆಕ್ನಾಲಜಿ	500 00	10 12	3000
2	ಮೆ ಮಿಲ್ಲೆಟ್ ಇನ್‌ಫ್ರಾಸ್ಟ್ರಕ್ಚರ್ ಪ್ರೈ ಲಿ	ಶಾನಮಂಗಲ ಬಿಡದಿ ಹೋಬಳಿ, ರಾಮನಗರಂ ತಾ, ಬೆಂಗಳೂರು ಗ್ರಾ.ಜಿಲ್ಲೆ	ಅಪೇರಲ್ಸ್ ಅಂಡ್ ಟೆಕ್ಸ್‌ಟೈಲ್ಸ್	113 00	100 00	25000
3	ಮೆ ಗೋಕುಲದಾಸ್ ಎಕ್ಸ್‌ಪೋರ್ಟ್ಸ್ ಅಪೇರಲ್ ಅಂಡ್ ಟೆಕ್ಸ್‌ಟೈಲ್ ಪಾರ್ಕ್ ಪ್ರೈ ಲಿಮಿಟೆಡ್	ಕಗ್ಗಲಹಳ್ಳಿ, ಕನಕಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ	ಅಪೇರಲ್ಸ್ ಅಂಡ್ ಟೆಕ್ಸ್‌ಟೈಲ್ಸ್	100 00	141 70	40000
4	ಮೆ ಶೆಲ್ ಇಂಡಿಯಾ ಪ್ರೈ ಲಿ	ಬೆಂಗಳೂರು, ಕರ್ನಾಟಕ	ಐಟಿ/ಐಟಿಇಎಸ್	400 00	10 00	1300
5	ಮೆ ಬಿ ಎ ಟೆಕ್ ಪಾರ್ಕ್ ಪ್ರೈ ಲಿ	ತುಂಬೆ ಹಳ್ಳಿ ಬಂಟ್ವಾಳ, ದಕ್ಷಿಣ ಕನ್ನಡ ಜಿಲ್ಲೆ	ಐಟಿ/ಐಟಿಇಎಸ್	47 00	10 00	3000

6	ಮೆ ಹೈ-ಸ್ಕಿಲ್ ಇನ್‌ವೆಸ್ಟ್‌ಮೆಂಟ್ ಕನ್‌ಸಲ್‌ಟೆನ್ಸಿ ಪ್ರೈ ಲಿ,	ಚಿಕ್ಕಬಳ್ಳಾಪುರ ತಾಲ್ಲೂಕು ಕೋಲಾರ ಜಿಲ್ಲೆ	ಐಟಿ/ಐಟಿಇಎಸ್	3590 00	100 00	15000
7	ಮೆ ಮಂಗಳೂರು ಎಸ್‌ಇಜೆಡ್ ಮುತ್ತಲಿನ ಪ್ರದೇಶ, ಲಿಮಿಟೆಡ್ ಮಂಗಳೂರು,	ಬೈಕಂಪಾಡಿ ಮತ್ತು ಸುತ್ತ	ಮಲ್ಟಿ ಪ್ರಾಡಕ್ಟ್ಸ್	49 33	1320 00	25000
8	ಮೆ ಆದರ್ಶ್ ಪ್ರೈ0 l, ಪ್ರಾಜೆಕ್ಟ್ಸ್ ಪ್ರೈ ಲಿ,	ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ	ಐಟಿ/ಐಟಿಇಎಸ್	2357 00	468 62	50000
9	ಮೆ ಸುಜಲಾನ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್	ಮಂಗಳೂರು ಪೋರ್ಟ್ ಹತ್ತಿರ ದಕ್ಷಿಣ ಕನ್ನಡ ಜಿಲ್ಲೆ ಇಂಜಿನಿಯರಿಂಗ್ ಪ್ರಾಡಕ್ಟ್ಸ್	ಪೋರ್ಟ್ ಬೇಸಡ್ ಹೈಟೆಕ್	1000 00	486 00	2500
10	ಮೆ ಸುಜಲಾನ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್	ಪಡುಬಿದ್ರಿ, ಉಡುಪಿ ಜಿಲ್ಲೆ	ಹೈಟೆಕ್ ಇಂಜಿನಿಯರಿಂಗ್ ಪ್ರಾಡಕ್ಟ್ಸ್	1000 00	202 00	2950
11	ಮೆ ಗಾಂಧಿ ಸಿಟಿ ಪಾರ್	ದೊಡ್ಡ ಮಣ್ಣು ಗುಡ್ಡೆ	ಸರ್ವೀಸ್ ಸೆಕ್ಟರ್	2683 2	404 70	35000

	ಅಡ್‌ವಾನ್ಸಡ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್ ಲಿಮಿಟೆಡ್,	ರಾಮನಗರ ತಾಲ್ಲೂಕು				
12	ಮೆ ಹೈ-ಸ್ಕಿಲ್ ಇನ್‌ವೆಸ್ಟ್‌ಮೆಂಟ್ ಕನ್‌ಸಲ್‌ಟೆನ್ಸಿ ಪ್ರೈ ಲಿಮಿಟೆಡ್	ಬೆಂಗಳೂರು	ಏರೋಸ್ಪೇಸ್ ಪಾರ್ಟ್ಸ್	159 00	100 00	10500
13	ಮೆ ಕ್ವೆಸ್ಟ್ ಮೆಷೀನಿಂಗ್ ಅಂಡ್, ಮ್ಯಾನುಫ್ಯಾಕ್ಚರಿಂಗ್ ಪ್ರೈ ಲಿ,	ಬೆಳಗಾಂ	ಏರೋಸ್ಪೇಸ್ ಇಂಜಿನಿಯರಿಂಗ್	35 00	121 4	5000
14	ಮೆ ಹಿಂದೂಜಾ ಇನ್‌ವೆಸ್ಟ್‌ಮೆಂಟ್ಸ್ ಪ್ರೈ ಲಿಮಿಟೆಡ್, ತಾಲ್ಲೂಕು,	ಧಾರಾಪುರ ಅಂಡ್ ಮಾಯ ಗೊಂಡನಹಳ್ಳಿ, ರಾಮನಗರ	ಟೆಕ್ಸ್‌ಟೈಲ್ ಪಾರ್ಕ್	120 00	100 00	30000
15	ಮೆ ಶಿಪ್‌ಕೋ ಇನ್‌ಫ್ರಾಸ್ಟ್ರಕ್ಚರ್ ಪ್ರೈ ಲಿ, 14, ಕ ಹೆಚ್ ರಸ್ತೆ, ರಿಚಾರ್ಡ್ ಟೌನ್, ಬೆಂಗಳೂರು	ಮೋಜೆ ಸಿದ್ಧನ ಹಳ್ಳಿ ಅಂಡ್ ಹಲಿಗನ ಹಳ್ಳಿ, ಬಂಗಾರಪೇಟೆ ತಾಲ್ಲೂಕು, ಕೋಲಾರ ಜಿಲ್ಲೆ	ಫ್ರೀ ಟ್ರೇಡ್ ಅಂಡ್ ವೇರ್ ಹೌಸಿಂಗ್ ಜೋನ್	706 00	120 00	8250
16	ಮೆ ಸೆಂಚುರಿ ಪ್ರಾಪರ್ಟಿ ಮ್ಯಾನೇಜ್ ಮೆಂಟ್ ಕಂಪನಿ ಪ್ರೈ ಲಿಮಿಟೆಡ್	ಚಿಕ್ಕಬಳ್ಳಾಪುರ ತಾಲ್ಲೂಕು, ಕೋಲಾರ ಜಿಲ್ಲೆ	ಮಲ್ಟಿ ಪ್ರಾಡಕ್ಟ್ಸ್	2789 00	1000 00	20000
			ಒಟ್ಟು	**15648 53**	**4694 54**	**276500**

ಶ್ರೀ ಎನ್ ಎಚ್ ಶಿವಶಂಕರರೆಡ್ಡಿ – ಮಾನ್ಯ ಛೇರ್ಮನ್‌ರವರೇ ಉತ್ತರವನ್ನು ಒದಗಿಸಿದ್ದಾರೆ ಈಗಾಗಲೇ ವಿಶೇಷ ಕೈಗಾರಿಕೆಗಳು ಎಷ್ಟು ಆಗಿದೆ ಎಂದು ಕೇಳಿರುವುದಕ್ಕೆ ಮಂಜೂರಾತಿ ಮಾಡಿದ್ದೇವೆಂದು ಉತ್ತರವನ್ನು ಒದಗಿಸಿದ್ದಾರೆ ಮತ್ತು ವಿಶೇಷವಾಗಿ ವಿದೇಶಿ ಬಂಡವಾಳವನ್ನು ಆಕರ್ಷಿಸಲು ಈ ಕೈಗಾರಿಕಾ ವಲಯವನ್ನು ಸ್ಥಾಪನೆ ಮಾಡಲಾಗುತ್ತದೆಂದು ಸಹ ಹೇಳಿದ್ದಾರೆ ಆದರೆ ಅವರು ಕೊಟ್ಟಿರುವಂತಹ ಮಾಹಿತಿಯ ಪ್ರಕಾರ ನಿರ್ಧಿಷ್ಟವಾಗಿ ಅನುಮೋದನೆಯಾಗಿರುವಂತಹ SEZ ಗಳಲ್ಲಿ ಮೊದಲನೆಯ ಹಂತದಲ್ಲಿ 14,124 ಕೋಟಿ ರೂಪಾಯಿಗಳು ಒಟ್ಟು ಬಂಡವಾಳ ಹೂಡಿಕೆ, ಇದರಲ್ಲಿ ಸ್ವದೇಶಿ ಬಂಡವಾಳ 13,330 ಕೋಟಿ ಎಂದು ಹೇಳಿದ್ದಾರೆ ವಿದೇಶಿ ಬಂಡವಾಳ ಕೇವಲ 794 ಕೋಟಿ ಎಂದು ಹೇಳಿದ್ದಾರೆ ಇದರ ಪ್ರಕಾರ ವಿದೇಶಿ ಬಂಡವಾಳ ಕೇವಲ 10% ಜಾಸ್ತಿಯಾಗುವುದಿಲ್ಲ ಇದು ಹೇಗೆ ಎನ್ನುವುದರ ಬಗ್ಗೆ ಸಚಿವರು ಉತ್ತರವನ್ನು ಕೊಡಬೇಕು ಮತ್ತು ಹಾಗೆಯೇ 2006–07ರಲ್ಲಿ ಬಂಡವಾಳ ಹೂಡಿಕೆ ಆಗಿದೆ ಎಂದು ಹೇಳಿದರೂ ಕೂಡ ಸುಮಾರು 90 ಸಾವಿರ ಕೋಟಿ ಬಂಡವಾಳ ಹೂಡಿಕೆಯಾಗಿದೆ ಎಂದು ಹೇಳಿದ್ದಾರೆ ಮತ್ತು 77 ಸಾವಿರ ಉದ್ಯೋಗಾವಕಾಶಗಳು ಆಗುತ್ತದೆ ಎನ್ನುವಂತಹ ಮಾತನ್ನು ಸಹ ಹೇಳಿದ್ದಾರೆ ಇದರಲ್ಲಿ ಯಾವ ತರಹ ಉದ್ಯೋಗಾವಕಾಶಗಳು ಕಲ್ಪನೆಯಾಗುತ್ತದೆ ಎನ್ನುವುದರ ಬಗ್ಗೆ ಸ್ವಲ್ಪ ಹೇಳಬೇಕಾಗುತ್ತದೆ

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು – ಮಾನ್ಯ ಛೇರ್ಮನ್‌ರವರೇ ಈ ವಿಶೇಷ ಆರ್ಥಿಕ ವಲಯ ಕೇಂದ್ರ ಸರ್ಕಾರ ರೂಪಿಸಿರುವ ನೀತಿ. ಇದರಲ್ಲಿ foreig direct investment ಹಾಗೂ ನಮ್ಮ ರಾಜ್ಯದಲ್ಲಿರುವಂತಹ ಕೈಗಾರಿಕೋದ್ಯಮಗಳ ಬಂಡವಾಳ ಹೂಡಿಕೆ ಎಷ್ಟು ಎಂದು detail project report ನ್ನು ಅವರು ಕೊಡುತ್ತಾರೆ ಅದರ ಆಧಾರದ ಮೇಲೆ ನಾವು ವಿದೇಶದಿಂದ ಎಷ್ಟು ಹಣ ಬರುತ್ತದೆ ಸ್ವಂತ ಬಂಡವಾಳವನ್ನು ಎಷ್ಟು ಹಾಕುತ್ತಾರೆ, ಇತರ ಹಣಕಾಸಿನ ಸಂಸ್ಥೆಗಳಿಂದ ಎಷ್ಟು ಹಣವನ್ನು ತೆಗೆದುಕೊಳ್ಳುತ್ತಾರೆಂಬ ಬಗ್ಗೆ ನಾವು ಒಂದು ನಿರ್ಧಾರಕ್ಕೆ ಬಂದು ಆಯಾಯ ಕಂಪನಿಗಳಿಗೆ ಅನುಮೋದನೆಯನ್ನು ಕೊಡುತ್ತೇವೆ 2006–07ನೇ ಸಾಲಿನಲ್ಲಿ ಎಷ್ಟು ಬಂಡವಾಳ ಹೂಡಿಕೆಯಾಗಿದೆ, ಎಷ್ಟು

ಕೈಗಾರಿಕೊದ್ಯಮಗಳಿಗೆ ತಾವು ಅನುಮತಿಯನ್ನು ಕೊಟ್ಟಿದ್ದಾರೆಂದು ಕೇಳಿದ್ದಾರೆ ಆ ಬಗ್ಗೆ ವಿವರವನ್ನು ಅವರಿಗೆ ಕೊಟ್ಟಿದ್ದೇನೆ ಇವತ್ತು ಉದ್ಯೋಗಾವಕಾಶ ಹೇಗೆ ಮಾಡಿಕೊಡುತ್ತೀರೆಂದು ಕೇಳಿದ್ದಾರೆ ಅವರಿಗೆ ಯಾವ ಯಾವ ಘಟಕಗಳಿಗೆ ಉದ್ಯೋಗಾವಕಾಶಗಳನ್ನು ಕೊಡುವುದಕ್ಕೆ ಆಗುತ್ತದೆ ಎಂಬುದನ್ನು ಅವರು ಕೊಡುವಂತಹ ಘಟಕಗಳ ಆಧಾರದ ಮೇಲೆ ನಾವು ಎಷ್ಟು ಜನರಿಗೆ ಉದ್ಯೋಗ ಸಿಗುತ್ತದೆಂದು, ನಾವು ನಿರೀಕ್ಷೆ ಮಾಡಿ ಅದರ ಆಧಾರದ ಮೇಲೆ ಈ ಉತ್ತರವನ್ನು ಕೊಡುತ್ತೇವೆ

ಶ್ರೀ ಆರ್ ವಿ ದೇಶಪಾಂಡೆ – 29 SEZ ಗೆ formal ಆಗಿ approval ನ್ನು ಕೊಟ್ಟಿದ್ದಾರೆ in principle approval 18 SEZ ಗೆ ಕೊಟ್ಟಿದ್ದೇವೆಂದು ಹೇಳಿದ್ದಾರೆ ರಾಜ್ಯದಲ್ಲಿ ಎಷ್ಟು SEZ ಗಳು ಪ್ರಾರಂಭವಾಗಿದೆ? ತಾವು ಕನಿಷ್ಟ ಒಂದು SEZ ಇರಬೇಕಾದರೆ ಎಷ್ಟು ಜಮೀನು minimum ಇರಬೇಕೆಂದು ಪ್ರಶ್ನೆಗೆ ಉತ್ತರವನ್ನು ಕೊಡುವಾಗ IT/BT SEZ ಗೆ ಕನಿಷ್ಟ 10 ಎಕರೆ ಇರಬೇಕೆಂದು ಹೇಳಿದ್ದೀರಿ ಆದರೆ ನಿಮ್ಮ ಅನೆಕ್ಷರ್ 2 ನಲ್ಲಿ ಕ್ಯೂ ನಂ ಈ ಪ್ರಶ್ನೆಗೆ ಉತ್ತರವನ್ನು ಕೊಡುವಾಗ ಐಟಂ ನಂಬರ್ 4 ಇದು Hewlet packard ಗೆ ಇವರು ಕೆಸಿಎ ಮಂಜೂರು ಮಾಡುವಾಗ ಕೇವಲ 7 ಹೆಕ್ಟೆರ್ ಎಂದು ಉತ್ತರವನ್ನು ಕೊಟ್ಟರು ವಿಪ್ರೋಗೆ 6 ಹೆಕ್ಟೆರ್ ಎಂದು ಉತ್ತರವನ್ನು ಕೊಟ್ಟಿದ್ದೀರಿ ವಿಪ್ರೋಗೆ 5 ಹೆಕ್ಟೆರ್ ಎಂದು ಉತ್ತರವನ್ನು ಕೊಟ್ಟಿದ್ದೀರಿ ಹಾಗಾಗಿ ನಿಮ್ಮ ಉತ್ತರ ಏನು minimum land ಗೆಂದು ಕೊಟ್ಟಿದ್ದೀರಿ ಅದು ಮತ್ತು extract ಹೊಂದುತ್ತಿಲ್ಲ ಹಾಗಾಗಿ ನಾನು ನಿಮ್ಮ ಕಡೆಯಿಂದ ಸ್ಪಷ್ಟೀಕರಣವನ್ನು ಕೇಳುತ್ತಿದ್ದೇನೆ

ಶ್ರೀ ಆರ್ ರೋಷನ್ ಬೇಗ್ – ಮಾನ್ಯ ಛೇರ್ಮನ್‌ರವರೇ ಈ SEZ ದಂಧೆಗಳು ಏನಿದೆ, ಅದರ ಬಗ್ಗೆ I would like to warn the Government ಇದು ಒಂದು so called Modern Maharajas ಎಂದು ಒಂದು ಹೊಸ society create ಆಗಿದೆ ಏನೆಂದರೆ, SEZ West Bengal ನಲ್ಲಿ ಏನಾಗಿದೆ ಎಂದರೆ, ನಂದಿ ಗ್ರಾಮದಲ್ಲಿ ಏನಾಗಿದೆ ಅದನ್ನು ನೋಡಿ ಈ ಲಿಸ್ಟ್‌ನ್ನು ನಾನು ನೋಡುತ್ತಿದ್ದೇನೆ ಯಾರೋ Century Properties Management

ಇವರುಗಳಿಗೆಲ್ಲಾ ಜಾಗವನ್ನು ಕೊಡುತ್ತಾರಲ್ಲಾ ಯಾರೋ Golden Spark, ಸಂಜಯ್ ಖಾನ್ ಬೆಂಗಳೂರಿನಲ್ಲಿ ಇವರಿಗೆ ಹೊಟೇಲ್‌ನ್ನು ನಡೆಸುವುದಕ್ಕಾಗಲಿಲ್ಲ ಇವರಿಗೆ ಒಂದು ನೂರು ಹೆಕ್ಟೇರ್ಸ್, ಇನ್ನೊಂದು ಕಂಪನಿಗೆ ಅಲ್ಲಿ, ಒಂದು ನೂರು ಹೆಕ್ಟೇರ್ಸ್ ಇಂತಹ ಜಾಗಗಳನ್ನು ಕೊಡುತ್ತಿರುವುದು ದೊಡ್ಡ ದಂಧೆ ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ I would like to warn the Government ಎಸ್ ಇ ಜೆಡ್ ಬಗ್ಗೆ ತಾವು ದಯವಿಟ್ಟು ನಮ್ಮನ್ನೆಲ್ಲಾ ಒಂದು ಮೀಟಿಂಗ್‌ಗೆ ಕರೆಯಿರಿ, ಇದರ ಬಗ್ಗೆ ಸ್ವಲ್ಪ ಚರ್ಚೆ ಮಾಡಿ, ಯಾವ ಜಾಗವನ್ನು ಅವರಿಗೆ ಕೊಡುತ್ತಿದ್ದೀರಿ? ರೈತರ ಜಾಗ, cultivable land ಎಸ್ ಇ ಜೆಡ್, ಚೈನಾದಲ್ಲಿ ನೋಡಿಕೊಂಡು ಒಂದು ಚೈನಾದಲ್ಲಿ ಎಸ್ ಇ ಜೆಡ್ ಎಂದು ಶುರು ಆಗಿ ಆರು ಕಡೆ ಚೈನಾದಲ್ಲಿ ಎಸ್ ಇ ಜೆಡ್ zones ಯಾವುದಿದೆ, ಅದು coastal belt ನಲ್ಲಿದೆ That is not cultivable land ಇವರು cultivable land ಬೆಂಗಳೂರಿನ ಸುತ್ತ ಮುತ್ತ ಎಲ್ಲಿದೆ ಅಲ್ಲೆಲ್ಲಾ ಹೋಗಿ, ಎಸ್ ಇ ಜೆಡ್ ನಾವು ಶುರು ಮಾಡುತ್ತೇವೆಂದರೆ, ಇದು ಏನು ಮಾನ್ಯ ಕಟ್ಟಾ ಸುಬ್ರಮಣ್ಯನಾಯ್ಡುರವರೇ? ತಾವು ದಯವಿಟ್ಟು ಇದರ ಬಗ್ಗೆ ನೋಡಿ, ಹಿಂದುಳಿದ ವರ್ಗಗಳ, ಪರಿಶಿಷ್ಟ ಜಾತಿ ಜನಾಂಗಕ್ಕೆ ಸೇರಿದ ರೈತರ ಜಾಗಗಳನ್ನೆಲ್ಲಾ ತೆಗೆದುಕೊಂಡು ದೊಡ್ಡ ದೊಡ್ಡ Modern Maharaja ಗೆ ಇಲ್ಲಿ ಬೆಂಗಳೂರಿನಲ್ಲಿ ಕರ್ನಾಟಕದಲ್ಲಿ ಅವಕಾಶ ಮಾಡಿಕೊಡುವಿರೇನು? -

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ .– ಇವರದು project reports ಏನು ಎಂದು ಬೇಕಾಗುತ್ತದೆ? ಇದನ್ನೆಲ್ಲಾ ಡೆವಲಪರ್ಸ್‌ಗೆ ಕೊಟ್ಟಿರುವುದು

ಶ್ರೀ ಜೆ ಸಿ ಮಾಧುಸ್ವಾಮಿ – ಯಾವ ಏರಿಯಾದಲ್ಲಿ create ಮಾಡಬೇಕೆಂದು first ಹೇಳಿ In and around Bangalore, Special Economic Zone ಆಗುತ್ತದೆಯೇ? ಇಂಡಸ್ಟ್ರೀಗೆ ಎಂದು ಬರಲೇಬೇಕು ಯಾವುದು under developed area ಇದೆ ಅಲ್ಲೇನಾದರೂ ನೀವು ಬೃಹತ್ ಆಗಿ ಯೋಜನೆಗಳನ್ನು ಹಾಕಿಕೊಳ್ಳಲಿಕ್ಕೆ ಹೊರಗಡೆ ಹೋಗಬೇಕು ಎಸ್ ಇ ಜೆಡ್‌ನಲ್ಲಿ ರೋಷನ್ ಬೇಗ್‌ರವರು ಹೇಳಿದ ಅನುಪಯುಕ್ತವಾದ ಜಮೀನು ಯಾವುದಾದರೂ ಇದ್ದರೆ ಅದನ್ನು industries purpose ಗೆ ನೀವು ತೆಗೆದುಕೊಳ್ಳಬೇಕು

ಎಸ್ ಇ ಜೆಡ್‌ಗೂ ರಿಯಲ್ ಎಸ್ಟೇಟ್‌ಗೂ ವ್ಯತ್ಯಾಸವೇನು ಎಂದು ತಾವು ಹೇಳಿಬಿಟ್ಟರೆ ಸಾಕು ನಮಗೆ

(ಗೊಂದಲ)

ಶ್ರೀ ಆರ್ ರೋಷನ್ ಬೇಗ್ – ನನಗೆ ಗೊತ್ತಿರುವ ಮಟ್ಟಿಗೆ Government of India ದಲ್ಲಿ Group of Ministers ಎನ್ನುವ ಒಂದು ಪ್ರಪೋಸಲ್ ಇನ್ನೂ ಪೆಂಡಿಂಗ್ ಇದೆ ಇಡೀ ದೇಶದಲ್ಲಿ ಇನ್ನೂ ಎಲ್ಲೆಲ್ಲಿ ಎಸ್ ಇ ಜೆಡ್‌ಗಳು ಶುರು ಮಾಡಬೇಕೆಂದು ಹೇಳಿ ಅದರಲ್ಲಿ ಕರ್ನಾಟಕದ್ದೆಂದು ಮಿನಿಮಮ್ ಇದೆ, ಅದರ ಬಗ್ಗೆ ಹೇಳಿ

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) – ಅಧ್ಯಕ್ಷರೇ, 7 ಹೆಕ್ಟೇರ್ಸ್‌ಗೆ ನೀವು ಕೊಟ್ಟಿದ್ದಿರಿ ಎಂದು ಹೇಳಿ ದೇಶಪಾಂಡೆ ಸಾಹೇಬರು ಕೇಳಿದರು 10-02-2006 ಕ್ಕಿಂತ ಮೊದಲು ಒಂದು ನೀತಿಯಿತ್ತು ಅದಾದ ಮೇಲೆ ನೀತಿಯನ್ನು ಕೇಂದ್ರಸರ್ಕಾರದವರು ಬದಲಾಯಿಸಿದರು ಆ ನೀತಿ ಪ್ರಕಾರ ಮೊದಲು 5 ಹೆಕ್ಟೇರ್‌ಗೆ ಮಿನಿಮಮ್ ಮಾಡಿದ್ದರು ಆಮೇಲೆ ಅದನ್ನು 10 ಹೆಕ್ಟೇರ್‌ಗೆ ಮಾಡಿದರು ಯಾವುದಕ್ಕೆಂದರೆ, ಐಟಿ/ಬಿಟಿ ಗೆ 10 ಹೆಕ್ಟೇರ್ಸ್‌ಗೆ Sector specific S E Z ಗೆ 250 ಎಕರೆ ಅಂದರೆ 100 ಹೆಕ್ಟೇರ್ಸ್, ಅದಾದ ಮೇಲೆ multi private S E Z ಗೆ 1000 ಎಕರೆಗಳು ಎಂದು ಹೇಳಿ ಅವರು ನೀತಿಯನ್ನು ರೂಪಿಸಿದ್ದಾರೆ ಇಲ್ಲಿಯವರೆಗೂ 3 ಎಸ್ ಇ ಜೆಡ್ ನಮ್ಮ ರಾಜ್ಯದಲ್ಲಿ ಪ್ರಾರಂಭವಾಗಿವೆ ಒಟ್ಟಾರೆ ನಮ್ಮ ರಾಜ್ಯದಲ್ಲಿ ಇಲ್ಲಿಯತನಕ ಅಪ್ರೂವ್ ಆಗಿರುವಂಥದ್ದು, formal approval 29, in principle approval 16 ಮತ್ತು ಒಟ್ಟಾರೆ ಇನ್ನೂ 36 ಪೆಂಡಿಂಗ್ ಇವೆ, ಕೇಂದ್ರ ಸರ್ಕಾರದಲ್ಲೂ ಇವೆ, ಇಲ್ಲಿಯೂ ಕೂಡ ಇವೆ ಅದರಲ್ಲಿ ರೋಷನ್ ಬೇಗರವರೇ, ತಾವು ಹೇಳಿದ್ದು ಸೆಂಚುರೀಸ್ properties ಕೂಡ ಸೇರಿವೆ ಇವತ್ತು ಕರ್ನಾಟಕ ರಾಜ್ಯದಲ್ಲಿ ಬೇರೆ ರಾಜ್ಯಗಳಿಗಿಂತಲೂ ಹೆಚ್ಚು ಎಸ್ ಇ ಜೆಡ್ ಗಳನ್ನು ನಾವು ತೆಗೆದುಕೊಂಡಿದ್ದೇವೆನ್ನುವುದು ಸರಿಯಲ್ಲ ಇವತ್ತು ಮಹಾರಾಷ್ಟ್ರದವರು ನಮಗಿಂತಲೂ ಜಾಸ್ತಿಯಿದ್ದಾರೆ, ಆಂಧ್ರಪ್ರದೇಶದವರು

ನಮಗಿಂತಲೂ ಜಾಸ್ತಿ ತೆಗೆದುಕೊಂಡಿದ್ದಾರೆ ಅದೇ ರೀತಿಯಲ್ಲಿ ಹರಿಯಾಣಾದವರು
ನಮಗಿಂತಲೂ ಜಾಸ್ತಿ ತೆಗೆದುಕೊಂಡಿದ್ದಾರೆ ಹಾಗಾಗಿ ನಾವೇನು ಎಲ್ಲಾ ರಾಜ್ಯಗಳಿಗೆ
ಹೋಲಿಕೆ ಮಾಡಿದರೆ ಅವರಿಗಿಂತಲೂ ಜಾಸ್ತಿಯಂತೂ ತೆಗೆದುಕೊಂಡಿಲ್ಲ, ನಾವು
8 ನೇ ಸ್ಥಾನದಲ್ಲಿದ್ದೇವೆ Approvals ತೆಗೆದುಕೊಂಡಿರುವುದು ನಾವು ಅಷ್ಟೊಂದು
ಏನೂ ಹೆಚ್ಚು ಎಸ್ ಇ ಜೆಡ್ ತೆಗೆದುಕೊಳ್ಳುವ ಪ್ರಯತ್ನ ಮಾಡಿಲ್ಲ, ಆದರೆ
ಇಲ್ಲೇನಾಗಿದೆಯೆಂದರೆ Central S E Z ನೀತಿಯೇ ತಪ್ಪಿದೆ ಹೇಳಬೇಕೆಂದರೆ
ಅಲ್ಲಿಯೇ lacuna ಇರುವುದು ಅಲ್ಲೇನು ಮಾಡಿದ್ದಾರೆ ಅಂದರೆ ಅವರು ರಿಯಲ್
ಎಸ್ಟೇಟ್ ಧಂದೆ ಮಾಡುವವರು ತೆಗೆದುಕೊಂಡಿದ್ದಾರೆಂದು ಹೇಳಿದ್ದೀರಿ yes ಆ
ಪಾಲಿಸಿಯಲ್ಲೇ ತಪ್ಪಿದೆ ಆ ರಿಯಲ್ ಎಸ್ಟೇಟ್ ಮಾಡಲಿಕ್ಕೆ ಅವಕಾಶ
ಮಾಡಿಕೊಟ್ಟಿರುವುದೇ ಅಲ್ಲಿ ಅಲ್ಲಿ ಬೇರೆಯವರಿಗೆ ಮಾಡಿಕೊಳ್ಳಲು ಅವಕಾಶ
ಮಾಡಿಕೊಟ್ಟಿದ್ದಾರೆ ಆ ನೀತಿಯಲ್ಲೇನಾದರೂ ಅವರು ತಿದ್ದುಪಡಿಯನ್ನು ಮಾಡಿದ್ದಾರೆ
ಇದನ್ನು ಕೇವಲ industrial purpose ಗೆ ಮಾತ್ರ utilize ಮಾಡಬೇಕು
ಇದನ್ನು ಬೇರೆಯದ್ದಕ್ಕೆ utilize ಮಾಡಬಾರದು ಎನ್ನುವ ನೀತಿಯನ್ನು ರೂಪಿಸಿದ್ದರೆ
ಈ ಸಮಸ್ಯೆ ಬರುತ್ತಿರಲಿಲ್ಲ ಆದ್ದರಿಂದ ಇವತ್ತು ರಿಯಲ್ ಎಸ್ಟೇಟ್ ಮಾಡುವವವರಿಗೆ
ಅನುಕೂಲವಾಗಿರುವುದು ನಿಜ ಎರಡನೆಯದು, ಇವತ್ತು foreign direct in-
vestment ಚೈನಾದಲ್ಲಿ ತುಂಬಾ liberal policy ಇದೆ ಯಾರಾದರೂ ಚೈನಾ
ದೇಶದವರು, ವಿದೇಶದಲ್ಲಿರುವವರು ನೇರವಾಗಿ ಬಂಡವಾಳ ಹೂಡಿಕೆ ಮಾಡಲಿಕ್ಕೆ
ಆ lower level ಜೊತೆ ಮಾತನಾಡಿ ಅಲ್ಲಿ ಅದನ್ನು ಪರಿಷ್ಕಾರ ಮಾಡಿಕೊಳ್ಳಲಿಕ್ಕೆ
ಸಲೀಸಾಗುತ್ತದೆ ಆದರೆ ನಮ್ಮ ರಾಜ್ಯದಲ್ಲಿ ಕೇಂದ್ರದ ದೆಹಲಿಗೆ ಬರಬೇಕು,
ದೆಹಲಿಯಿಂದ ರಾಜ್ಯಕ್ಕೆ ಬರಬೇಕು ವಿವಿಧ ಹಂತಗಳು ತಲುಪಬೇಕಾಗುತ್ತದೆ
ಅದೊಂದು ಸಮಸ್ಯೆಯಾಗಿರುವುದರಿಂದ ಆ ಕೇಂದ್ರದ ನೀತಿಯಲ್ಲೇ ಸ್ವಲ್ಪ ಲೋಪಗಳಿವೆ
Board of Approval ನಲ್ಲಿ ಇವತ್ತು ಎಲ್ಲಾ ಸ್ಥಗಿತ ಮಾಡಿದ್ದಾರೆ Group of
2) ಶಿರಸ್ತೇದಾರ್ ಹುದ್ದೆಗಳನ್ನು ಪ್ರದಸ ಹಾಗೂ ರಾಜಸ್ವ ನಿರೀಕ್ಷಕ ಹುದ್ದೆಗಳಿಂದ ಶೇ 95 ಹಾಗು ಶೇ 5 ರಷ್ಟನ್ನು ಶೀಘ್ರಲಿಪಿಗಾರರಿಂದ ಮುಂಬಡ್ತಿ ಮೂಲಕ ಭರ್ತಿ ಮಾಡಲಾಗುತ್ತದೆ

3) ದ್ವಿದ ಸ ವೃಂದಕ್ಕೆ ಶೇ 75 ರಷ್ಟು ನೇರ ನೇಮಕಾತಿ ಮೂಲ ಹಾಗೂ ಶೇ 25 ರಷ್ಟು ವಾಹನ ಚಾಲಕರು – ಡಿ ದರ್ಜೆ ನೌಕರರಿಂದ ಬಡ್ತಿ ಮೂಲಕ ಭರ್ತಿ ಮಾಡಲಾಗುವುದು

4) ಗ್ರೂಪ್–ಡಿ ಹುದ್ದೆಗಳಿಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ನೇಮಕಾತಿ ಪ್ರಾಧಿಕಾರಿಗಳಾಗಿರುತ್ತಾರೆ ಈ ಹುದ್ದೆಗಳನ್ನು ಅರ್ಹ ಅಭ್ಯರ್ಥಿಗಳ ಪಟ್ಟಿ ಪಡೆದು ನೇಮಕ ಮಾಡುತ್ತಾರೆ

1306 (1795) ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ).– ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2005–06ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ಸಾಮಾಜಿಕ ಅರಣ್ಯ ಅಭಿವೃದ್ಧಿಗೆ ಬಿಡುಗಡೆ ಮಾಡಿದ ಹಣವೆಷ್ಟು,

ಆ) ವಿವಿಧ ಯೋಜನೆಗೆ ಬಿಡುಗಡೆ ಮಾಡಲಾದ ಹಣವೆಷ್ಟು?

ಶ್ರೀ ಚೆನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) 2005–06ನೇ ಸಾಲಿನಲ್ಲಿ ಎಲ್ಲ ಯೋಜನೆಗಳನ್ನು ಸೇರಿಸಿ ಒಟ್ಟು ರೂ 50 974 (ಲಕ್ಷದಲ್ಲಿ) ಹಣ ಬಿಡುಗಡೆಯಾಗಿದೆ

ಆ) 2005–06ನೇ ಸಾಲಿನಲ್ಲಿ ವಿವಿಧ ಯೋಜನೆಗಳಿಗೆ ಬಿಡುಗಡೆ ಮಾಡಲಾದ ಹಣ ಕೆಳಗಿನಂತಿದೆ

ಕ್ರಸಂ	ಯೋಜನೆಯ ಹೆಸರು	ಬಿಡುಗಡೆ ಮಾಡಲಾದ ಹಣವೆಷ್ಟು (ಲಕ್ಷದಲ್ಲಿ)
1	ಎಸ್ ಜೆ ಆರ್ ವೈ 20% (ಜಿ ಪಂ)	21 068
2	ಎಸ್ ಜೆ ಆರ್ ವೈ 30% (ತಾ ಪಂ)	
	1 ಧಾರವಾಡ	3 000
	2 ಹುಬ್ಬಳ್ಳಿ	3 481
	3 ನವಲಗುಂದ	3 920
	4 ಕುಂದಗೋಳ	1 494
	5 ಕಲಘಟಗಿ	1 600
3	ಎಸ್ ಜೆ ಆರ್ ವೈ 50% (ಗ್ರಾ.ಪಂ)	0 305
4	ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ	3 860
5	ವನಸಂವರ್ಧನೆ ಯೋಜನೆ	
	1 ಧಾರವಾಡ	0 877
	2 ಹುಬ್ಬಳ್ಳಿ	0 508
	3 ಕಲಘಟಗಿ	0 696
	4 ಕುಂದಗೋಳ	0 605
6	ಜೆ ಬಿ ಐ ಸಿ	9 560
	ಒಟ್ಟು	**50 974**

1307 (1796) ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ) - ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ತಾಲ್ಲೂಕುಗಳ ಬರ ಪೀಡಿತ ಎಂದು ಘೋಷಿಸಲಾಗಿದೆ,

ಆ) ಧಾರವಾಡ ಜಿಲ್ಲೆಯ ಎಷ್ಟು ತಾಲ್ಲೂಕುಗಳು ಬರಪೀಡಿತಗೊಂಡಿದೆ,

ಇ) ಬರ ಪರಿಹಾರಕ್ಕೆ ಸರ್ಕಾರ ತೆಗೆದುಕೊಂಡು ಕ್ರಮಗಳೇನು,

ಈ) ಬರ ಪರಿಹಾರಕ್ಕಾಗಿ ಕೇಂದ್ರದಿಂದ ಬಿಡುಗಡೆಯಾಗಿರುವ ಆಹಾರಧಾನ್ಯಗಳೆಷ್ಟು ಹಾಗೂ ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಿರುವ ಹಣವೆಷ್ಟು?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು)

ಅ) 128 ತಾಲ್ಲುಕುಗಳನ್ನು ಬರಪೀಡಿತವೆಂದು ಘೋಷಿಸಲಾಗಿದೆ

ಆ) ಧಾರವಾಡ ಜಿಲ್ಲೆಯಲ್ಲಿ ನವಲಗುಂದ ಮತ್ತು ಕುಂದಗೋಳ ತಾಲ್ಲೂಕುಗಳ ಬರಪೀಡಿತವೆಂದು ಘೋಷಿಸಿದೆ

ಇ) ರಾಜ್ಯದ ಬರಪೀಡಿತ ತಾಲ್ಲೂಕುಗಳಲ್ಲಿ ಬರ ಪರಿಹಾರ ಕಾರ್ಯ ಕೈಕೊಳ್ಳಲು ರಾಜ್ಯ ಸರ್ಕಾರವು ಒಟ್ಟು ರೂ 277 00 ಕೋಟಿ ಹಣ ಬಿಡುಗಡೆ ಮಾಡಿದೆ ಹಾಗೂ 50,000 ಮೆ ಟನ್ ಆಹಾರಧಾನ್ಯ ಬಿಡುಗಡೆ ಮಾಡಿದೆ ಈ ಹಣವನ್ನು ಉದ್ಯೋಗ ಸೃಜಿಸುವಂತಹ ಕಾಮಗಾರಿಗಳಾದ ಸಣ್ಣ ನೀರಾವರಿ ಕೆರೆಗಳ ದುರಸ್ತಿ ಕಾಮಗಾರಿಗಳು, ಜಲ ಸಮೃದ್ಧಿ ಕಾಮಗಾರಿಗಳು, ಚೆಕ್ ಡ್ಯಾಮ್ಸ್, ಕಾಮಗಾರಿಗಳನ್ನು ಕೈಕೊಳ್ಳಲು ಹಾಗೂ ಕುಡಿಯುವ ನೀರು ಒದಗಿಸಲು ಹಾಗೂ ಮೇವು ಖರೀದಿಸಲು ಉಪಯೋಗಿಸಲಾಗುತ್ತಿದೆ ಅಂತರ ರಾಜ್ಯ ಮೇವು ಸಾಗಾಣಿಕೆಯನ್ನು ನಿರ್ಬಂಧಿಸಲಾಗಿದೆ

ಈ) ಬರ ಪರಿಹಾರಕ್ಕೆ ಕೇಂದ್ರ ಸರ್ಕಾರದಿಂದ 50 ಮೆ ಟನ್ ಆಹಾರಧಾನ್ಯ ಬಿಡುಗಡೆಯಾಗಿರುತ್ತದೆ ರಾಜ್ಯ ಸರ್ಕಾರವು ಬರ ಪರಿಹಾರಕ್ಕೆ ರೂ 277 00 ಕೋಟಿ ಹಣ ಬಿಡುಗಡೆ ಮಾಡಿದೆ

1308 (1443) ಶ್ರೀ ಅಂಜನಾಮೂರ್ತಿ (ನೆಲಮಂಗಲ) .– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 20 ತಿಂಗಳಿಂದ ಬರ ಪರಿಹಾರದಡಿ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಎಷ್ಟು ಹಣ ಬಿಡುಗಡೆಯಾಗಿದೆ,

ಆ) ಯಾವ ಯಾವ ಜಿಲ್ಲೆ ಹಾಗೂ ತಾಲ್ಲೂಕುಗಳಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ (ವಿವರ ನೀಡುವುದು) ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಕೇಂದ್ರ ಸರ್ಕಾರವು ಬರಪರಿಹಾರಕ್ಕೆಂದೇ ಪ್ರತ್ಯೇಕವಾದ ಅನುದಾನ ಬಿಡುಗಡೆ ಮಾಡುವುದಿಲ್ಲ 2005–06ನೇ ಸಾಲಿನಲ್ಲಿ ಹಾಗೂ 2006–07ನೇ ಸಾಲಿನಲ್ಲಿ ಪ್ರಕೃತಿ ವಿಕೋಪ ಪರಿಹಾರಕ್ಕೆ ಕೇಂದ್ರ ಸರ್ಕಾರವು ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಿದೆ

(ರೂ ಕೋಟಿಗಳಲ್ಲಿ)

	2005–06	**2006–07**
ಸಿಆರ್‌ಎಫ್ ಅಡಿಯಲ್ಲಿ	ರೂ 86 00	113 98
ಎನ್‌ಸಿಸಿಎಫ್ ಅಡಿಯಲ್ಲಿ	ರೂ 358 85	226 30
ಒಟ್ಟು	**ರೂ 444 85**	**340 28**

ತಾಲ್ಲೂಕುವಾರು ಹಣ ಬಿಡುಗಡೆ ಮಾಡುವುದಿಲ್ಲ ಬರ ಪರಿಹಾರಕ್ಕೆ ಜಿಲ್ಲಾವಾರು ಹಣ ಬಿಡುಗಡೆ ಮಾಡಿದೆ ವಿವರಗಳನ್ನು ಅನುಬಂಧದಲ್ಲಿ ನೀಡಿದೆ

ಬರ ಪರಿಹಾರಕ್ಕೆ 2005–06 ಮತ್ತು 2006–07 ರಲ್ಲಿ ಬಿಡುಗಡೆ ಮಾಡಿದ ಅನುದಾನ

(ರೂ ಲಕ್ಷಗಳಲ್ಲಿ)

ಕ್ರ.ಸಂ	**ಜಿಲ್ಲೆ**	**2005–06**	**2006–07**
1	ಬೆಂಗಳೂರು ನಗರ	85 71	625 00
2	ಬೆಂಗಳೂರು ಗ್ರಾಮಾಂತರ	49 57	1925 00
3	ಕೋಲಾರ	365 22	2250 00
4	ತುಮಕೂರು	168 00	2040 00
5	ಚಿತ್ರದುರ್ಗ	20 54	1475 00
6	ದಾವಣಗೆರೆ	20 00	1330 00

7	ಶಿವಮೊಗ್ಗ	34 45	425 00
8	ಮೈಸೂರು	20 00	1750 00
9	ಚಾಮರಾಜನಗರ	16 00	825 00
10	ಮಂಡ್ಯ	34 30	1450 00
11	ಚಿಕ್ಕಮಗಳೂರು	77 45	425 00
12	ಹಾಸನ	110 55	820 00
13	ಕೊಡಗು	13 80	10 00
14	ದಕ್ಷಿಣ ಕನ್ನಡ	25 00	10 00
15	ಉಡುಪಿ		10 00
16	ಗುಲ್ಬರ್ಗಾ	168 75	2140 00
17	ಬೀದರ್	15 00	1140 00
18	ರಾಯಚೂರು	20 00	1125 00
19	ಕೊಪ್ಪಳ	65 74	830 00
20	ಬಳ್ಳಾರಿ	20 00	1440 00
21	ಬೆಳಗಾಂ	183 00	1250 00
22.	ಬಿಜಾಪುರ	20 00	1025 00
23	ಬಾಗಲಕೋಟೆ	20 00	1225 00
24	ಧಾರವಾಡ	19 78	460 00
25	ಗದಗ್	11 39	1040 00
26.	ಹಾವೇರಿ	132 50	625 00
27.	ಉತ್ತರ ಕನ್ನಡ	94 00	30 00
	ಒಟ್ಟು	**1810 75**	**27700 00**

1310 (1445) ಶ್ರೀ ಅಂಜನಾಮೂರ್ತಿ (ನೆಲಮಂಗಲ) – ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2006–07ನೇ ಸಾಲಿನ ಆಯವ್ಯಯದಲ್ಲಿ ತಿಳಿಸಿರುವಂತೆ ಕೈಮಗ್ಗವನ್ನು ಅವಲಂಬಿಸಿರುವ ನೇಕಾರರು ಆಶ್ರಯ ಯೋಜನೆಯಡಿಯಲ್ಲಿ ಮನೆ ಕಟ್ಟಿಕೊಳ್ಳುವಾಗ ಶೆಡ್ ಸಹಿತ ಮನೆ ಕಟ್ಟಿಕೊಳ್ಳಲು ಎಷ್ಟು ಹಣ ನಿಗದಿ ಮಾಡಲಾಗಿದೆ,

ಆ) ಹಾಗಿದ್ದಲ್ಲಿ, ಇದುವರೆವಿಗೂ ಎಷ್ಟು ಫಲಾನುಭವಿಗಳಿಗೆ ಈ ಯೋಜನೆಯಡಿ ಹಣ ಬಿಡುಗಡೆ ಮಾಡಲಾಗಿದೆ,

ಇ) ಈ ಯೋಜನೆಯಡಿ ಯಾವ ಯಾವ ಜಿಲ್ಲಾ, ತಾಲ್ಲುಕುಗಳಲ್ಲಿ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಶ್ರೀ ಅಪ್ಪಾಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಜವಳಿ ಸಚಿವರು)

ಅ) 2006–07ನೇ ಸಾಲಿನ ಆಯವ್ಯಯದಲ್ಲಿ ಕೈಮಗ್ಗ ನೇಕಾರರು ಆಶ್ರಯ ಯೋಜನೆಯಡಿ ಮನೆ ಕಟ್ಟಿಕೊಳ್ಳುವಾಗ ಶೆಡ್ ಸಹಿತ ಮನೆ ಕಟ್ಟಿಕೊಳ್ಳಲು ರೂ 25,000/– ಗಳ ನಿರ್ಮಾಣ ವೆಚ್ಚದ ಜೊತೆಗೆ ಶೆಡ್ ನಿರ್ಮಾಣಕ್ಕೆ ರೂ 5,000/– ಗಳನ್ನು ಹೆಚ್ಚುವರಿಯಾಗಿ ಸೇರಿಸಿ ಒಟ್ಟು ರೂ 30,000/– ಗಳನ್ನು ನಿಗದಿಪಡಿಸಲಾಗಿದ್ದು, ಇದಕ್ಕಾಗಿ ಆಶ್ರಯ ಯೋಜನೆಗೆ ಹೆಚ್ಚುವರಿಯಾಗಿ ರೂ 5 00 ಕೋಟಿಗಳನ್ನು ಹಂಚಿಕೆ ಮಾಡಲಾಗಿದೆ

ಆ,ಇ) ಈವರೆಗೆ 1513 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದ್ದು, ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮದ ಮುಖಾಂತರ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ

2006–07ನೇ ಸಾಲಿನಲ್ಲಿ ಬಾಗಲಕೋಟೆ ಜಿಲ್ಲೆಯ ಹುನಗುಂದ, ಬಾದಾಮಿ, ಮುಧೋಳ ತಾಲ್ಲೂಕುಗಳು, ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕು, ಗದಗ್ ಜಿಲ್ಲೆಯ ರೋಣ, ನರಗುಂದ ತಾಲ್ಲೂಕು ಮತ್ತು ಧಾರವಾಡ ಜಿಲ್ಲೆಯ

ಹುಬ್ಬಳ್ಳಿ, ಕುಂದಗೋಳ, ಧಾರವಾಡ ತಾಲ್ಲೂಕುಗಳಲ್ಲಿ ಯೋಜನೆಯನ್ನು ಕೈಮಗ್ಗ ನೇಕಾರರಿಗೆ ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮದ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದೆ

1311 (1446) ಶ್ರೀ ಅಂಜನಾಮೂರ್ತಿ (ನೆಲಮಂಗಲ) – ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2006–07ನೇ ಸಾಲಿನ ಆಯವ್ಯಯದಲ್ಲಿ ಡಾ ನಂಜುಂಡಪ್ಪ ವರದಿಯಲ್ಲಿ ಸೂಚಿಸಿರುವ ಎಷ್ಟು ಕೈಗಾರಿಕಾ ಸಮುಚ್ಚಯಗಳನ್ನು ಸ್ಥಾಪನೆ ಮಾಡಲಾಗಿದೆ,

ಆ) ಮಾಡಿದ್ದಲ್ಲಿ ಇದಕ್ಕಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ,

ಇ) ಹಾಗಿದ್ದಲ್ಲಿ ಯಾವ ಜಿಲ್ಲೆಯಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಕೈಗಾರಿಕಾ ವಿಕಾಸ ಯೋಜನೆಯಡಿ ಮತ್ತು ಇತರೆ ಯೋಜನೆಯಡಿ ಒಟ್ಟು 22 ತಾಲ್ಲುಕುಗಳಲ್ಲಿ ಕೈಗಾರಿಕಾ ಸಮುಚ್ಚಯಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ ಇದರಲ್ಲಿ ಈಗಾಗಲೇ 3 ಕೈಗಾರಿಕಾ ಸಮುಚ್ಚಯಗಳ ಕಾಮಗಾರಿಗಳು ಪೂರ್ಣಗೊಂಡಿದೆ ಉಳಿದವುಗಳಿಗೆ ಪ್ರಸಕ್ತ ಸಾಲಿನಲ್ಲಿ ಹಣವನ್ನು ಬಿಡುಗಡೆ ಮಾಡಿದ್ದು, ನಿರ್ಮಾಣ ಕಾರ್ಯಗಳು ಪ್ರಾರಂಭವಾಗಲಿವೆ

ಆ) ವಿವರಗಳು ಅನುಬಂಧದಲ್ಲಿ ಒದಗಿಸಿದೆ

ಇ) ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ

ವಿಧಾನಸಭೆ ಪ್ರಶ್ನೆ ಸಂಖ್ಯೆ 1446 ಕ್ಕೆ ಅನುಬಂಧ

2006–07ನೇ ಸಾಲಿನ ಆಯವ್ಯಯದಲ್ಲಿ ಸೂಚಿಸಿದ್ದಂತೆ, ಕೈಗಾರಿಕಾ ಸಮುಚ್ಚಯಗಳ ಸ್ಥಾಪನೆ ಮಾಡಲು ಪರಿಗಣಿಸಲಾದ ವಿವರಗಳು

ರೂ ಲಕ್ಷಗಳಲ್ಲಿ

ಕ್ರ ಸಂ.	ಜಿಲ್ಲೆ	ತಾಲ್ಲೂಕು	ಸ್ಥಳ	ಯೋಜನಾ ವೆಚ್ಚ	ಬಿಡುಗಡೆ ಮಾಡಿರುವ ಮೊತ್ತ
1	ಬಿಜಾಪುರ	ಮುದ್ದೆಬಿಹಾಳ್	ಮುದ್ದೆಬಿಹಾಳ್	30 00	30 00
2	ಬೆಂಗಳೂರು(ಗ್ರಾ)	ಮಾಗಡಿ	ಮಾಗಡಿ	61 00	61 00
3		ಕನಕಪುರ	ಕನಕಪುರ	39 00	39 00
4	ಬೀದರ್	ಹುಮ್ನಾಬಾದ್	ಹುಮ್ನಾಬಾದ್	46 50	34 875
5		ಭಾಲ್ಕಿ	ಭಾಲ್ಕಿ	14 50	10 875
6	ಗುಲಬರ್ಗಾ	ಚಿತ್ತಾಪುರ	ಚಿತ್ತಾಪುರ	61 50	46 125
7		ಸೇಡಂ	ಸೇಡಂ	154 00	115 50
8		ಜೇವರ್ಗಿ	ಜೇವರ್ಗಿ	45 50	34 125
9		ಶಹಾಪೂರ	ಶಹಾಪೂರ	222 00	166 50
10		ಸುರಪುರ	ಸುರಪುರ	38 50	28 875
11	ಬಾಗಲಕೋಟೆ	ಹುನಗುಂದ	ಹುನಗುಂದ	110 00	82 50
12	ಉತ್ತರ ಕನ್ನಡ	ಭಟ್ಕಳ	ಭಟ್ಕಳ	25 00	18 75
13		ಜೋಯ್ಡಾ	ರಾಮನಗರ	145 00	108 75
14		ಯಲ್ಲಾಪುರ	ಯಲ್ಲಾಪುರ	88 00	88 00
15	ಕೋಲಾರ	ಗೌರಿಬಿದನೂರು	ಗೌರಿಬಿದನೂರು	6 75	5 00
16	ಬೆಳಗಾವಿ	ಗೋಕಾಕ್	ಗೋಕಾಕ್	13 00	12 00
17	ಚಿತ್ರದುರ್ಗ	ಹೊಸದುರ್ಗ	ಹೊಸದುರ್ಗ	45 00	—
18	ರಾಯಚೂರು	ಲಿಂಗಸುಗೂರು	ಲಿಂಗಸುಗೂರು	35 00	—
19		ಸಿಂಧನೂರು	ಸಿಂಧನೂರು	110 00	—

1	2	3	4	5	6
20	ಗುಲಬರ್ಗಾ	ಆಳಂದ	ಆಳಂದ	73 00	--
21		ಚಿಂಚೋಳಿ	ಚಿಂಚೋಳಿ	91 50	--
22	ತುಮಕೂರು	ಸಿರಾ	ಯಲಿಯೂರು	445 00	--

ಟಿಪ್ಪಣಿ

• ಕ್ರಮ ಸಂಖ್ಯೆ 1 ರಿಂದ 3 – 2005–06ನೇ ಸಾಲಿನ ಫೆಬ್ರವರಿ ಮಾರ್ಚ್ ನಲ್ಲಿ ಹಣ ಬಿಡುಗಡೆ ಮಾಡಿದ್ದು, ಕಾಮಗಾರಿಗಳು ಪೂರ್ಣಗೊಂಡಿರುತ್ತದೆ

• ಕ್ರಮ ಸಂಖ್ಯೆ 4 ರಿಂದ 10 ರವರೆಗೆ – 2006–07ನೇ ಸಾಲಿನಲ್ಲಿ ವಿವಿಧ ಯೋಜನೆಯಡಿ ಹಣ ಬಿಡುಗಡೆ ಮಾಡಲಾಗಿದ್ದು, ಕಾಮಗಾರಿಗೆ ಟೆಂಡರ್‌ಗಳನ್ನು ಕರೆಯಲಾಗಿದೆ

• ಕ್ರಮ ಸಂಖ್ಯೆ 11–ಹಣ ಬಿಡುಗಡೆ ಮಾಡಿದ್ದು, ಕಾಮಗಾರಿ ಪ್ರಗತಿಯಲ್ಲಿದೆ

• ಉತ್ತರ ಕನ್ನಡ ಜಿಲ್ಲೆಯ ಭಟ್ಕಳ, ರಾಮನಗರ, ಯಲ್ಲಾಪುರ ಮತ್ತು ಕೋಲಾರ ಜಿಲ್ಲೆಯ ಗೌರಿಬಿದನೂರು ಹಾಗೂ ಬೆಳಗಾವಿಯ ಗೋಕಾಕ್ ಗಳಿಗೆ ಕಾಮಗಾರಿಗಳನ್ನು ಕೈಗೊಳ್ಳಲು ಹಣ ಬಿಡುಗಡೆ ಮಾಡಿದೆ

• ಕ್ರಮ ಸಂಖ್ಯೆ 17 ರಿಂದ 22 ರವರೆಗೆ ಹಣ ಬಿಡುಗಡೆಯಾಗಿ ಪ್ರಸ್ತಾವನೆ ಪರಿಶೀಲನೆಯಲ್ಲಿದೆ

1312 (2052) ಶ್ರೀ ಆಂಜನೇಯ ಹೆಚ್ (ಭರಮಸಾಗರ) – ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದಿಂದ ಬೆಂಗಳೂರಿನಲ್ಲಿ ಕಳೆದ ಐದು ವರ್ಷಗಳಿಂದ ಎಷ್ಟು ಕೈಗಾರಿಕಾ ಎಸ್ಟೇಟ್‌ಗಳನ್ನು ಅಭಿವೃದ್ಧಿಪಡಿಸಲಾಗಿದೆ,

ಆ) ಎಷ್ಟು ಜನರಿಗೆ ನಿವೇಶನ ಅಥವಾ ಶೆಡ್‌ಗಳನ್ನು ವಿತರಿಸಲಾಗಿದೆ,

ಇ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಜನರಿಗೆ ಎಷ್ಟು ಹಂಚಿಕೆ ಮಾಡಲಾಗಿದೆ,

ಈ) ಯಾವ ಯಾವ ಶೆಡ್ಡುಗಳಿಗೆ ದರ ನಿಗದಿ ಪಡಿಸಲಾಗಿದೆ,

ಉ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೇನಾದರೂ ಕಡಿಮೆ ದರ ನಿಗದಿಪಡಿಸಲಾಗಿದೆಯೇ?

ಶ್ರೀ ಶಿವಾನಂದ ನಾಯ್ಕ (ಸಣ್ಣ ಕೈಗಾರಿಕಾ ಸಚಿವರು)

ಅ) ವೀರಸಂದ್ರ 2ನೇ ಹಂತ ಮತ್ತು ಬೊಮ್ಮಸಂದ್ರ 2ನೇ ಹಂತ ಕೈಗಾರಿಕಾ ವಸಾಹತುಗಳನ್ನು 2003–04ರಲ್ಲಿ ಸ್ಥಾಪಿಸಲಾಗಿದೆ

ಆ) 98 ನಿವೇಶನಗಳು ಹಾಗೂ 29 ಶೆಡ್ಡುಗಳನ್ನು ವಿತರಿಸಲಾಗಿದೆ

ಇ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಜನರಿಗೆ 2 ಮಳಿಗೆಗಳು ಹಾಗೂ 5 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ

ಈ) ಹಂಚಿಕೆಯಾಗಿರುವ ಎಲ್ಲಾ ಶೆಡ್ಡುಗಳಿಗೆ ದರ ನಿಗದಿ ಪಡಿಸಲಾಗಿದೆ

ಉ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ, ಮಳಿಗೆ/ ನಿವೇಶನದ ದರದ ಮೇಲೆ ಶೇಕಡ 40ರಷ್ಟು ಅನುದಾನದೊಂದಿಗೆ (ರೂ 2 00 ಲಕ್ಷಕ್ಕೆ ಮೀರದಂತೆ) ದರ ನಿಗದಿಪಡಿಸಲಾಗಿದೆ

1314 (1649) ಡಾ॥ ಅನ್ನದಾನಿ ಕೆ (ಮಳವಳ್ಳಿ) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಂದಾಯ ಇಲಾಖೆಯಲ್ಲಿ ಗ್ರಾಮಸಹಾಯಕರಾಗಿ 4ನೇ ದರ್ಜೆ ನೌಕರರು ಕೆಲಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಾದರೆ, ಅವರುಗಳನ್ನು ಖಾಯಂಗೊಳಿಸಲು ಇದುವರೆವಿಗೂ ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣಗಳೇನು,

ಇ) ಈ ನೌಕರರಲ್ಲಿ ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡದವರು ಹೆಚ್ಚಾಗಿ ಕೆಲಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಬಂದಿದ್ದರೆ, ತುಳಿತಕ್ಕೆ ಒಳಗಾಗಿರುವ ನೌಕರರನ್ನು 25–30 ವರ್ಷಗಳಿಂದ ಏಕೆ ಖಾಯಂಗೊಳಿಸಿರುವುದಿಲ್ಲ?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು)

ಅ) ಇಲ್ಲ ಗ್ರಾಮಸಹಾಯಕರು ಮಾಸಿಕ ರೂಪಾಯಿ 2000/– ರಂತೆ ಮಿತವೇತನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ

ಆ) ಸುಪ್ರೀಂಕೋರ್ಟ್ ನೀಡಿರುವ ತೀರ್ಪಿನಲ್ಲಿ ಗ್ರಾಮಸಹಾಯಕರನ್ನು ಸಕ್ರಮಗೊಳಿಸಲು ಅವಕಾಶವಿಲ್ಲವೆಂದು ತೀರ್ಪಿತ್ತಿದೆ ಗ್ರಾಮ ಸಹಾಯಕರು ಮಿತವೇತನದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದು ಅವರುಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚನೆ ಮಾಡದೇ ಇರುವುದರಿಂದ ಖಾಯಂಗೊಳಿಸಲು ಬರುವುದಿಲ್ಲ

ಇ) ಹೌದು

ಈ) (ಆ) ದಲ್ಲಿ ಉತ್ತರಿಸುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

1315 (1876) ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) – ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯಲ್ಲಿ ಅದರಲ್ಲೂ ಮುಖ್ಯವಾಗಿ ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಸಾಮಾಜಿಕ ಅರಣ್ಯ ಯೋಜನೆ (ಸೋಶಿಯಲ್ ಫಾರೆಸ್ಟ್ರಿ) ಅಡಿಯಲ್ಲಿ ಕಳೆದ ಎರಡು ವರ್ಷಗಳ ಅವಧಿಯಲ್ಲಿ ನಿರ್ಮಿಸಿದ ಹೊಸತೋಪುಗಳು ಯಾವುವು,

ಆ) ಸದರಿ ಯೋಜನೆಗಾಗಿ ಮೀಸಲಿಟ್ಟ ಹಣದ ಹಾಗೂ ಖರ್ಚು ಮಾಡಿದ ಹಣದ ಮೊತ್ತ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು),

ಇ) ಸರ್ಕಾರ ಕೈಗೊಂಡ ಕ್ರಮವೇನು,

ಈ) ಬಿಜಾಪುರ ಜಿಲ್ಲಾ ವ್ಯಾಪ್ತಿಯಲ್ಲಿ ಅರಣ್ಯ ಅಭಿವೃದ್ಧಿಗಾಗಿ ಸರ್ಕಾರದ ನೂತನ ಯೋಜನೆಗಳೇನು?

ಶ್ರೀ ಸಿ ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ವಿವರವನ್ನು ಅನುಬಂಧ–1 ರಲ್ಲಿ ನೀಡಲಾಗಿದೆ

ಆ) ವಿವರಗಳನ್ನು ಅನುಬಂಧ–2 ರಲ್ಲಿ ಲಗತ್ತಿಸಿದೆ

ಇ) ನೆಡುತೋಪುಗಳನ್ನು ರಕ್ಷಣೆ ಮಾಡುವುದು

ಈ) 2006–07ನೇ ಸಾಲಿಗೆ ಬಿಜಾಪುರ ಜಿಲ್ಲಾ ವ್ಯಾಪ್ತಿಯಲ್ಲಿ ಅರಣ್ಯ ಅಭಿವೃದ್ಧಿ ಬಗ್ಗೆ ಯಾವುದೇ ನೂತನ ಯೋಜನೆಗಳಿರುವುದಿಲ್ಲ ಆದರೆ ಮುಂದುವರೆದ ಯೋಜನೆಗಳು ಈ ಕೆಳಕಂಡಂತಿವೆ

1 ಕ್ಷೀಣಿತ ಅರಣ್ಯ ಅಭಿವೃದ್ಧಿ ಯೋಜನೆ (ರಾಜ್ಯ)
2 ನಗರ ಪ್ರದೇಶ ಹೆಸರೀಕರಣ ಯೋಜನೆ (ರಾಜ್ಯ)
3 ಸಾರ್ವಜನಿಕರ ವಿತರಣೆಗೆ ಸಸಿ ಬೆಳೆಸುವ ಯೋಜನೆ (ರಾಜ್ಯ)
4 ರಾಷ್ಟ್ರೀಯ ಅರಣ್ಯೀಕರಣ ಯೋಜನೆ (ಕೇಂದ್ರ ಪುರಸ್ಕೃತ)
5 ಸ್ವರ್ಣಜಯಂತಿಕುಂಜ್ (ಕೇಂದ್ರ ಪುರಸ್ಕೃತ)
6 ಕರ್ನಾಟಕ ಸ್ವಸ್ಥಿರ ಅರಣ್ಯ ನಿರ್ವಹಣೆ ಮತ್ತು ಜೀವಿ ವೈವಿಧ್ಯಮಯ ಸಂರಕ್ಷಣೆ ಯೋಜನೆ

ಅನುಬಂಧ – 1

ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಸಾಮಾಜಿಕ ಅರಣ್ಯ ಯೋಜನೆ (ಸೋಶಿಯಲ್ ಫಾರೆಸ್ಟ್ರಿ) ಅಡಿಯಲ್ಲಿ ಕಳೆದ ಎರಡು ವರ್ಷಗಳ ಅವಧಿಯಲ್ಲಿ ನಿರ್ಮಿಸಿದ ಹೊಸ ನೆಡುತೋಪುಗಳ ವಿವರ

ಕ್ರಸಂ	ವರ್ಷ	ನೆಡುತೋಪಿನ ಹೆಸರು	ವಿಸ್ತೀರ್ಣ
1	2004–05	ಕೋಳೂರ–ಯರಗಲ ರಸ್ತೆ	5 ಕಿ ಮೀ
2	–"–	ಯರಗಲ–ಮದರಿ ರಸ್ತೆ	5 ಕಿ ಮೀ
3	–"–	ಯರಗಲ–ಹುಲಕುಂಟೆ ರಸ್ತೆ	6 ಕಿ ಮೀ

4	–"–	ಹಂದ್ರಾಳ–ಮುದ್ದೇಬಿಹಾಳ ಹಂಗಡಗಿಕೆನಾಲ (31–32)	22 ಕಿ ಮೀ
5	–"–	ಮುದ್ದೇಬಿಹಾಳ–ತಂಗಡಗಿ ಕ್ರಾಸ್, ಆಲೂರ ಕ್ರಾಸ್ (42–52)	20 ಕಿ ಮೀ
6	–"–	ಇಂಗಳಗೇರಿ–ಹಂದ್ರಾಳ–ವಡಹಳ್ಳಿ ರಸ್ತೆ	5 ಕಿ ಮೀ
7	–"–	ಮುದ್ದೇಬಿಹಾಳ ಕ್ರಾಸ್–ಇಂಚಗೇರಿ ರಸ್ತೆ	5 ಕಿ ಮೀ
8	–"–	ಮಡಿಕೇಶ್ವರ ನಡಹಳ್ಳಿ ಮಿರಾಜ್ ರಸ್ತೆ	5 ಕಿ ಮೀ
9	–"–	ಕುಚಿಬಾಳೆ–ಮುದ್ದೇಬಿಹಾಳ ರಸ್ತೆ	5 ಕಿ ಮೀ
10	–"–	ನಾಲೀವಾದ–ಅರೇಶಂಕರ ನಾರಾಯಣಪುರ ಕ್ರಾಸ್ ರಸ್ತೆ	5 ಕಿ ಮೀ
11	2005–06	ಘನಮರೇಶ್ವರ–ಕುಂಟೋಜಿ ರಸ್ತೆ	3 75 ಕಿ ಮೀ
12	–"–	ನಾಗರಬೆಟ್ಟ–ಚಂಬನಬಾವಿ ರಸ್ತೆ	6 25 ಕಿ ಮೀ
13	–"–	ಡವಳಗಿ–ಮುದ್ದೇಬಿಹಾಳ ಕ್ರಾಸ್ ರಸ್ತೆ	5 ಕಿ ಮೀ
14	–"–	ಬಳಗಾಸೂರ – ಕೊಣ್ಣೂರ ರಸ್ತೆ	5 ಕಿ ಮೀ

ಅನುಬಂಧ – 2

(ಆರ್ಥಿಕ ರೂ ಲಕ್ಷಗಳಲ್ಲಿ)
(ಭೌತಿಕ ಹೆಕ್ಟೇರ್‌ಗಳಲ್ಲಿ)

ತಾಲ್ಲೂಕು	2004–2005				2005–2006			
	ಭೌತಿಕ		ಆರ್ಥಿಕ		ಭೌತಿಕ		ಆರ್ಥಿಕ	
	ಗುರಿ	ಸಾಧನೆ	ಗುರಿ	ಸಾಧನೆ	ಗುರಿ	ಸಾಧನೆ	ಗುರಿ	ಸಾಧನೆ
ಇಂಡಿ	10	9	7 227	6 208	30	2	7 00	7 604

ಸಿಂದಗಿ	15	11	4 062	5 079	35	25	3 25	6 656
ವಿಜಾಪುರ	10	8	5 499	5 104	30	15	7 775	7 25
ಬ ಬಾಗೇವಾಡಿ	20	8	4 002	3 777	35	28	6 795	5 00
ಮುದ್ದೇಬಿಹಾಳ್	78	83	18 561	10 208	35	20	12 00	9 258

1317 (1878) ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ್) – ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲಾ ವ್ಯಾಪ್ತಿಯಲ್ಲಿನ ಅಂತರ್ಜಲ ಮಟ್ಟದ ಸುಧಾರಣೆಗಾಗಿ ಸರ್ಕಾರದ ಯೋಜನೆಗಳೇನು (ತಾಲ್ಲೂಕುವಾರು ವಿವರ ನೀಡುವುದು),

ಆ) ಈ ಜಿಲ್ಲಾ ವ್ಯಾಪ್ತಿಯ ಬೋರ್‌ವೆಲ್‌ಗಳಲ್ಲಿ ಹಾಗೂ ತೆರೆದ ಬಾವಿಗಳಲ್ಲಿ ಅಂತರ್ಜಲ ಮಟ್ಟದ ಕುಸಿತದಿಂದಾಗಿ ನೀರು ಲಭ್ಯವಾಗದ ನೀರಾವರಿ ಹಾಗೂ ಕುಡಿಯುವ ನೀರಿಗಾಗಿ ಜನರು ತೀವ್ರ ಸಂಕಷ್ಟವನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು,

ಈ) ನೀರಿನೆ ಲಭ್ಯತೆಯ ಕೊರತೆಯಿಂದಾಗಿ ಬೆಳೆ ನಾಶವನ್ನು ಅನುಭವಿಸಿದ ರೈತರುಗಳಿಗೆ ಸರ್ಕಾರ ಪರಿಹಾರ ನೀಡಿದೆಯೇ'

ಉ) ನೀಡಿದ್ದಲ್ಲಿ ಅದರ ವಿವರಗಳೇನು?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)

ಅ) ಅಂತರ್ಜಲ ಮರು ಪೂರೈಕೆಗೆ ವಿವಿಧ ರೀತಿಯ ರಚನೆಗಳನ್ನು ಅನುಷ್ಠಾನಗೊಳಿಸುವ ಇಲಾಖೆಗಳಾದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕೃಷಿ, ಅರಣ್ಯ, ಜಲಾನಯನ ಅಭಿವೃದ್ಧಿ ಮತ್ತು ಇನ್ನಿತರೆ ಸರ್ಕಾರ ಇಲಾಖೆಗಳು ವಾರ್ಷಿಕ ಕಾರ್ಯಕ್ರಮ ಹಮ್ಮಿಕೊಂಡಿರುತ್ತವೆ ರಚನೆಗಳನ್ನು ನಿರ್ಮಿಸಲು ವೈಜ್ಞಾನಿಕ ರೀತಿಯಲ್ಲಿ ಇಲಾಖಾವತಿಯಿಂದ ತಾಂತ್ರಿಕ ಸಲಹೆಗಳನ್ನು ಕೋರಿಕೆ ಮೇರೆಗೆ ನೀಡಲಾಗುತ್ತಿದೆ

ಆ) ಬಂದಿದೆ

ಇ) ಬಿಜಾಪುರ ಜಿಲ್ಲೆಯ 18 ಗ್ರಾಮಗಳಲ್ಲಿ ಹಾಗೂ ಒಂದು ಪಟ್ಟಣ ಪ್ರದೇಶದಲ್ಲಿ ಕುಡಿಯುವ ನೀರಿಗಾಗಿ ಸಂಕಷ್ಟ ಎದುರಿಸುತ್ತಿರುವುದರಿಂದ ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗಿದೆ

ಈ) ಇಲ್ಲ

ಉ) ಉದ್ಭವಿಸುವುದಿಲ್ಲ

1319 (2030) ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ) – ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವಾಸಿಸುವ ಕಾಲೋನಿಗಳಲ್ಲಿ ಮದ್ಯದ ಅಂಗಡಿ ತೆರೆಯಲು ಯಾವ ಮಾನದಂಡಗಳ ಮೇಲೆ ಅನುಮತಿ ನೀಡಲಾಗುವುದು,

ಆ) ಅಬಕಾರಿ ಕಾಯ್ದೆಗೆ ವಿರುದ್ಧವಾಗಿ ಬೆಂಗಳೂರಿನ ಫ್ರೇಜರ್ ಟೌನ್‌ನಲ್ಲಿ ಮದ್ಯದ ಅಂಗಡಿ ತೆರೆಯಲು ಸನ್ನದು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಬಂದಿದ್ದರೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)

ಅ) ಕರ್ನಾಟಕ ಅಬಕಾರಿ ಸನ್ನದುಗಳು (ಸಾಮಾನ್ಯ ಷರತ್ತುಗಳು) ನಿಯಮಗಳು 1967ರ ನಿಯಮ 5(1) ರನ್ವಯ ಉದ್ದೇಶಿತ ಸನ್ನದಿನ ಸ್ಥಳದಿಂದ 100 ಮೀಟರ್ ಅಂತರದಲ್ಲಿ ಪ್ರಧಾನವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ವಾಸಿಸುವ ಕಾಲೋನಿಗಳಲ್ಲಿ ಮದ್ಯ ಮಾರಾಟ ಮಾಡಲು ಸನ್ನದು ಮಂಜೂರಾತಿಗೆ ಅವಕಾಶವಿರುವುದಿಲ್ಲ ಆದರೆ, ಇದೇ ನಿಯಮದ ಉಪ ನಿಯಮ (2)ರ ಷರತ್ತುವಿನ ಪ್ರಕಾರ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಸ್‌ರವರು ಅಬಕಾರಿ ಆಯುಕ್ತರ

ಪೂರ್ವಾನುಮತಿ ಪಡೆದು ಸಿಟಿ ಮುನಿಸಿಪಾಲಿಟಿ ಅಥವಾ ಸಿಟಿ ಕಾರ್ಪೋರೇಷನ್ ವ್ಯಾಪ್ತಿಯಲ್ಲಿ 50 ಮೀಟರ್ ಮೇಲೆ 100 ಮೀಟರ್ ಒಳಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಪ್ರಮುಖವಾಗಿ (predominently) ವಾಸಿಸುತ್ತಿರುವ ಸ್ಥಳಗಳಲ್ಲಿ ಮದ್ಯದ ಅಂಗಡಿಯನ್ನು ಮಂಜೂರು ಮಾಡಬಹುದಾಗಿರುತ್ತದೆ

ಆ) ಅಬಕಾರಿ ಕಾಯ್ದೆಗೆ ವಿರುದ್ಧವಾಗಿ ಫ್ರೇಜರ್ ಟೌನ್‌ನಲ್ಲಿ ಮದ್ಯದ ಅಂಗಡಿ ತೆರೆಯಲು ಸನ್ನದು ನೀಡಿರುವ ಯಾವುದೇ ಪ್ರಕರಣಗಳು ಇರುವುದಿಲ್ಲ

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ

1321 (1318) ಶ್ರೀ ದೇಶಪಾಂಡೆ ಆರ್ ವಿ (ಹಲಿಯಾಳ್) – ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿರುವ ಇಂಡಿಯನ್ ಪ್ಲೈವುಡ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ ಲಿಮಿಟೆಡ್ ಹಾಗೂ ದಾಂಡೇಲಿ ಸ್ಟೀಲ್ ಆಂಡ್ ಫೆರೋ ಅಲಾಯ್ಸ್ ಕಂಪನಿಗಳು ರೋಗಗ್ರಸ್ತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಬಂದಿದ್ದಲ್ಲಿ, ರೋಗಗ್ರಸ್ತವಾಗಲು ಕಾರಣಗಳೇನು,

ಇ) ಈ ವಿಷಯವು ಬಿ ಐ ಎಫ್ ಆರ್ ಮುಂದಿದೆಯೇ,

ಈ) ಬಿ ಐ ಎಫ್ ಆರ್ ಮುಂದೆ ಇದ್ದರೆ, ಈ ಎರಡು ಕೈಗಾರಿಕೆಗಳ ಬಗ್ಗೆ ಏನು ಆದೇಶ ಮಾಡಿರುತ್ತಾರೆ,

ಉ) ಆ ಆದೇಶದ ಮೇಲೆ ರಾಜ್ಯ ಹಾಗೂ ಕೇಂದ್ರ ಸರ್ಕಾರ ಮತ್ತು ಹಣಕಾಸಿನ ಸಂಸ್ಥೆಗಳು ತೆಗೆದುಕೊಂಡ ಕ್ರಮಗಳೇನು,

ಊ) ಇಲ್ಲಿನ ನೌಕರರ ಭವಿಷ್ಯದ ಹಿತದೃಷ್ಟಿಯಿಂದ ಸದರಿ ಕೈಗಾರಿಕೆಗಳನ್ನು ಪುನಃಶ್ಚೇತನಗೊಳಿಸುವ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಬಂದಿದೆ

ಆ) ದಾಂಡೇಲಿ ಸ್ಟೀಲ್ ಅಂಡ್ ಫೆರೋ ಅಲಾಯ್ಸ್ ಲಿಮಿಟೆಡ್ ಸಂಸ್ಥೆಯು ವಿದ್ಯುತ್ತಿನ ಮೇಲೆ ಭಾರಿ ಪ್ರಮಾಣದಲ್ಲಿ ಅವಲಂಬಿಸಿದೆ ಕರ್ನಾಟಕದಲ್ಲಿ ಕೆಲವು ವರ್ಷಗಳಿಂದ ವಿದ್ಯುತ್ ದರದಲ್ಲಿ ಹೆಚ್ಚಳವಾಗಿದೆ ಇದು ಕಂಪನಿಯ ಕಾರ್ಯಕ್ಷಮತೆಯ ಫಲಿತಾಂಶದ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರಿರುತ್ತದೆ

ಭಾರತ ಸರ್ಕಾರವು ಅಂಗೀಕರಿಸಿರುವ ಅರಣ್ಯ ಸಂರಕ್ಷಣೆ ಕಾಯ್ದೆ- ಹಾಗೂ ಗೋಡ್ವಾಮನ್ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನಿಂದಾಗಿ ಪ್ಲೈವುಡ್ ಕೈಗಾರಿಕೆಗಳಿಗೆ ಅಗತ್ಯವಾದ ಮರದ ಸರಬರಾಜನ್ನು ಪಡೆಯುವಲ್ಲಿ ತೊಂದರೆಯುಂಟಾಗಿದೆ ಇನ್ನಿತರ ಸಂಗತಿಗಳೊಂದಿಗೆ, ಈ ಕಾರಣವೂ ಸಹಾ ಕಂಪನಿಯ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರಿದೆ

ಇ) ಹೌದು

ಈ) 1) [ದಾಂಡೇಲಿ ಸ್ಟೀಲ್ ಅಂಡ್ ಫೆರೋ ಅಲಾಯ್ಸ್ ಕಂಪನಿ ಲಿ ಬಿ ಐ ಎಫ್ ಆರ್] ಆದೇಶದ ಪ್ರಕಾರ

[1] ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಕಂಪನಿಗೆ ಓ ಟಿ ಎಸ್ ಪಾವತಿ ಮಾಡಿ "ಬಾಕಿ ರಹಿತ ಪ್ರಮಾಣ ಪತ್ರ" ವನ್ನು ನೀಡುವಂತೆ ತಿಳಿಸಿದೆ

[2] ಕರ್ನಾಟಕ ರಾಜ್ಯ ವಾಣಿಜ್ಯ ತೆರಿಗೆ ಇಲಾಖೆಯ ಬಾಕಿ ಇರುವ ಹಣದ ಇತ್ಯರ್ಥವನ್ನು ನ್ಯಾಯಾಲಯದ ಆದೇಶದ ಪ್ರಕಾರ ಪಾವತಿ ಮಾಡುವುದು

[ಅ] ಕಂಪನಿಯು ಮುಂದಿನ ಪಾವತಿಯ ಬಗ್ಗೆ ಇತ್ಯರ್ಥಿಸುವುದು

[ಆ] ರಾಜ್ಯ ಸರ್ಕಾರವು ಬಿ ಐ ಎಫ್ ಆರ್ ನ ಮಂಜೂರಾತಿ 2005ರ ಪ್ರಕಾರ ಅನುಷ್ಠಾನಗೊಳಿಸುವುದು

[ಇ] ಇ ಎಸ್ ಐ ಮತ್ತು ಪಿ ಎಫ್ ಸಂಸ್ಥೆಗಳು ಇನ್ನುಳಿದ ಬಾಕಿಯನ್ನು ಬಿ ಐ ಎಫ್ ಆರ್ ನ ಮಂಜೂರಾತಿ 2005ರ ಪ್ರಕಾರ ಅನುಷ್ಠಾನಗೊಳಿಸುವುದು

[ಈ] ಬಿ ಐ ಎಫ್ ಆರ್ ನ ಮಂಜೂರಾತಿ 2005ರ ಆದೇಶವನ್ನು ಪುನಃ ಪರಿಶೀಲಿಸುವುದು

[2] ಇಂಡಿಯನ್ ಪ್ಲೈವುಡ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ ಲಿ

1) ಕಂಪನಿಯಿಂದ ಪಾವತಿಯಾಗಬೇಕಾದ ಆದಾಯ ತೆರಿಗೆಯ ಮೊತ್ತವನ್ನು ಲೆಕ್ಕಾಚಾರ ಮಾಡುವಲ್ಲಿ ಆಗಿರುವ ನ್ಯೂನ್ಯತೆಗಳ ಬಗ್ಗೆ ಆದಾಯ ತೆರಿಗೆ ನಿರ್ದೇಶನಾಲಯ (ಮರುಪಾವತಿ) ಇವರಿಗೆ ಕಂಪನಿಯು ಪತ್ರ ಬರೆಯಲಿದ್ದು, ಆದಾಯ ತೆರಿಗೆ ಇಲಾಖೆಯು ಕಂಪನಿಯ ಸದರಿ ಅರ್ಜಿಯನ್ನು ಎರಡು ತಿಂಗಳೊಳಗಾಗಿ ಅಂದರೆ 6 9 2006 ರೊಳಗಾಗಿ ಇತ್ಯರ್ಥಪಡಿಸುವುದು

11) ಕಂಪನಿಯ ಪಾವತಿಸಿದ ಶಾಸನಬದ್ಧ ಬಾಕಿಗಳ ಮೇಲೆ ವಿಧಿಸಲಾದ ದಂಡ ಬಡ್ಡಿ ಮತ್ತು ಹಾನಿಯನ್ನು ಮನ್ನಾ ಮಾಡುವ ವಿಷಯದ ಬಗ್ಗೆ ಪಿ ಎಫ್ ಮತ್ತು ಇ ಎಸ್ ಐ ಸಂಸ್ಥೆಗಳು ಪರಿಗಣಿಸಲಿವೆ

ಉ) 1] ದಾಂಡೇಲಿ ಸ್ಟೀಲ್ ಅಂಡ್ ಫೆರೋ ಅಲಾಯ್ಸ್ ಕಂಪನಿ ಲಿ

ಕೆ ಎಸ್ ಎಫ್ ಸಿ ಯು ಬಿ ಐ ಎಫ್ ಆರ್ ಆದೇಶದ ವಿರುದ್ಧ ಎ ಎ ಐ ಎಫ್ ಆರ್ ಗೆ ಮೇಲ್ಮನವಿ ಸಲ್ಲಿಸಿದೆ

ಬಿ ಐ ಎಫ್ ಆರ್ ಆದೇಶದ ಪ್ರಕಾರ ಕೇಂದ್ರ ಸರ್ಕಾರವು ತೆಗೆದುಕೊಂಡ ಕ್ರಮದ ಬಗ್ಗೆ ಮಾಹಿತಿ ಬರಬೇಕಾಗಿದೆ ರಾಜ್ಯ ಸರ್ಕಾರವು ಕೈಗಾರಿಕಾ ನೀತಿಯನ್ವಯ ಅಗತ್ಯ ಕ್ರಮ ಕೈಗೊಳ್ಳುತ್ತಿದೆ

2] ಇಂಡಿಯನ್ ಪ್ಲೈವುಡ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ ಲಿ

ಬಿ ಐ ಎಫ್ ಆರ್ ಆದೇಶದ ಪ್ರಕಾರ ಕೇಂದ್ರ ಸರ್ಕಾರವು ತೆಗೆದುಕೊಂಡ ಕ್ರಮದ ಬಗ್ಗೆ ಮಾಹಿತಿ ಬರಬೇಕಾಗಿದೆ ರಾಜ್ಯ ಸರ್ಕಾರವು ಕೈಗಾರಿಕಾ ನೀತಿಯನ್ವಯ ಅಗತ್ಯ ಕ್ರಮ ಕೈಗೊಳ್ಳುತ್ತಿದೆ

ಊ) ಸರ್ಕಾರವು ಕೈಗಾರಿಕಾ ನೀತಿಯನ್ವಯ ರಿಯಾಯತಿ ಮತ್ತು ಪರಿಹಾರವನ್ನು ಕೈಗಾರಿಕಾ ಪುನಃಶ್ಚೇತನಕ್ಕಾಗಿ ನೀಡುವುದು

1322 (1640) ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ) .– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ತಾಲ್ಲೂಕಿನ ಗಡಿ ಅಂಚಿನ ಭಾಗದಲ್ಲಿರುವ ಗಿರಿಜನರ ಹಾಡಿ ಹಾಗೂ ಲಂಬಾಣಿ ತಾಂಡಗಳಿಗೆ ಸೇರಿದ ಜಮೀನುಗಳ ಪಹಣಿಯಲ್ಲಿ ಅರಣ್ಯ ಇಲಾಖೆ ಎಂದು ನಮೂದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಈ ಭಾಗದ ಎಲ್ಲಾ ಗ್ರಾಮಗಳು ದಾಖಲೆ ಗ್ರಾಮಗಳಾಗಿರುವುದರಿಂದ ಅದನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಯೋಜನೆ ಸರ್ಕಾರಕ್ಕಿದೆಯೇ,

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಚಾಮರಾಜನಗರದಲ್ಲಿ ಗಿರಿಜನ ಹಾಡಿ ಹಾಗೂ ಲಂಬಾಣಿ ತಾಂಡಗಳಿಗೆ ಸೇರಿದ ಜಮೀನುಗಳ ಪಹಣಿಯಲ್ಲಿ ಅರಣ್ಯ ಇಲಾಖೆ ಎಂದು ನಮೂದಾಗಿರುವುದಿಲ್ಲ

ಆ) ಇದೆ ಆದರೆ, ಈಗ ಕೇಂದ್ರ ಸರ್ಕಾರದ ಚುನಾವಣಾ ಆಯೋಗವು ಲೋಕಸಭೆ ಹಾಗೂ ರಾಜ್ಯ ವಿಧಾನಸಭಾ ಕ್ಷೇತ್ರಗಳ ಪುನರ್ ವಿಂಗಡಣಾ ಕಾರ್ಯವು ಪೂರ್ಣಗೊಳ್ಳುವವರೆಗೆ ಆಡಳಿತಾತ್ಮಕ ಘಟಕಗಳಾದ ಜಿಲ್ಲೆ, ತಾಲ್ಲೂಕು, ಹೋಬಳಿ, ಗ್ರಾಮ ಇತ್ಯಾದಿಗಳ ಸ್ಥಾನ/ಜಿಲ್ಲೆಗಳಲ್ಲಿ ಯಾವುದೇ ಬದಲಾವಣೆ ಮಾಡಬಾರದೆಂದು ನಿರ್ಬಂಧ ವಿಧಿಸಿದೆ

ಈ ನಿರ್ಬಂಧವನ್ನು ಕೇಂದ್ರ ಸರ್ಕಾರವು ಹಿಂದಕ್ಕೆ ಪಡೆದ ನಂತರ ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು

ಇ) (ಆ) ನಲ್ಲಿನ ಉತ್ತರದಿಂದ ಉದ್ಭವಿಸುವುದಿಲ್ಲ

1323 (1641) ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ) '– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಬೀಳು ಬಿದ್ದಿರುವ ಸರ್ಕಾರಿ ಜಮೀನುಗಳನ್ನು ರೆಸ್ಟೋರ್ ಮಾಡಲು ಸರ್ಕಾರ ಆಗಿಂದಾಗೆ (ಕಾಲ–ಕಾಲಕ್ಕೆ) ಆದೇಶವನ್ನು ಹೊರಡಿಸಲಾಗಿದ್ದರೂ ಸಹ

ಈ ಬೀಳು ಜಮೀನುಗಳು ರೆಸ್ಟೋರ್ ಆಗದೇ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು,

ಇ) ಚಾಮರಾಜನಗರ ಜಿಲ್ಲೆಯಲ್ಲಿ ಎಷ್ಟು ಹೆಕ್ಟೇರ್ ಜಮೀನು ಬೀಳು ಬಿದ್ದಿದೆ,

ಈ) ಸಂತೇಮರಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಹೆಕ್ಟೇರ್ ಜಮೀನು ಬೀಳು ಬಿದ್ದಿದೆ,

ಉ) ಬೀಳು ಭೂಮಿಯನ್ನು ರೆಸ್ಟೋರ್ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಇಲ್ಲ

ಆ) ಕರ್ನಾಟಕ ಭೂ ಕಂದಾಯ ನಿಯಮಾವಳಿ 1966ರ ನಿಯಮ 119ರಡಿ ನಿಗದಿತ ಅವಧಿಯೊಳಗಾಗಿ ಬಂದಿರುವ ಅರ್ಜಿಗಳನ್ನು ಪರಿಗಣಿಸಿ ಬೀಳು ಭೂಮಿಯನ್ನು ರೆಸ್ಟೋರ್ ಮಾಡಲಾಗುತ್ತಿದೆ

ಇ) 552–17 ಹೆಕ್ಟೇರ್

ಈ) 69–80 ಹೆಕ್ಟೇರ್

ಉ) ನಿಗಧಿತ ಅವಧಿಯಲ್ಲಿ ಬೀಳು ರೆಸ್ಟೋರ್ ಮಾಡಲು ಅರ್ಜಿ ಸಲ್ಲಿಸಿದ್ದಲ್ಲಿ ಅದನ್ನು ನಿಯಮಾನುಸಾರ ರೆಸ್ಟೋರ್ ಮಾಡಿಕೊಡಲಾಗುವುದು

1324 (1642) ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ) – ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವೀರಪ್ಪನ್ ಕಾರ್ಯಚರಣೆಯಲ್ಲಿ ಪಾಲ್ಗೊಂಡಿದ್ದ ಅರಣ್ಯ ಇಲಾಖೆಯ ಸಿಬ್ಬಂದಿಗಳು ಯಾರು ಯಾರು (ವಿವರ ನೀಡುವುದು),

ಆ) ಪೊಲೀಸ್ ಸಿಬ್ಬಂದಿಗೆ ನೀಡಿದ ರಿವಾರ್ಡ್‌ನಂತೆಯೇ ಈ ಅರಣ್ಯ ಇಲಾಖೆಯ ಸಿಬ್ಬಂದಿ ವರ್ಗದವರಿಗೆ ನೀಡಲಾಗಿದೆಯೇ,

ಇ) ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಚನ್ನಿಗಪ್ಪ (ಅರಣ್ಯ ಸಚಿವರು)

ಅ) ವಿವರಗಳನ್ನು ಅನುಬಂಧ – 1 ರಲ್ಲಿ ಲಗತ್ತಿಸಿದೆ

ಆ) ಪೊಲೀಸ್ ಸಿಬ್ಬಂದಿಗೆ ನೀಡಿದ ರಿವಾರ್ಡ್‌ನಂತೆಯೇ ಅರಣ್ಯ ಇಲಾಖೆಯ ಸಿಬ್ಬಂದಿ ವರ್ಗದವರಿಗೆ ನೀಡಿರುವುದಿಲ್ಲ ಆದರೆ ವಿಶೇಷ ಟಾಸ್ಕ್ ಫೋರ್ಸ್ ಅಡಿಯಲ್ಲಿ ಕಾರ್ಯ ನಿರ್ವಹಿಸಿದ ಅಧಿಕಾರಿ/ಸಿಬ್ಬಂದಿಗಳ ಪೈಕಿ ಅನುಬಂಧ-2ರಲ್ಲಿ ಹೇಳಿದ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಮಾತ್ರ ಪೊಲೀಸ್ ಇಲಾಖೆಯಿಂದ ಪ್ರೋತ್ಸಾಹ ಧನ ನೀಡಲಾಗಿದೆ

ಇ) ಟಾಸ್ಕ್ ಫೋರ್ಸ್ ಅಡಿಯಲ್ಲಿ ಕಾರ್ಯ ನಿರ್ವಹಿಸಿದ 25 ಅರಣ್ಯ ಇಲಾಖಾ ಅಧಿಕಾರಿ/ಸಿಬ್ಬಂದಿಗಳ ಪೈಕಿ ಕೇವಲ 13 ಮಂದಿ ಅಧಿಕಾರಿ/ಸಿಬ್ಬಂದಿಗಳಿಗೆ ಪ್ರೋತ್ಸಾಹ ಧನವನ್ನು ಪೊಲೀಸ್ ಇಲಾಖೆಯು ನೀಡಿರುತ್ತದೆ ಇನ್ನುಳಿದವರಿಗೆ ರಿವಾರ್ಡ್ ನೀಡಲು ಕ್ರಮ ಕೈಗೊಳ್ಳಲಾಗಿರುತ್ತದೆ

ವಿಧಾನಸಭೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ 1642 ಕ್ಕೆ ಅನುಬಂಧ–1 ವೀರಪ್ಪನ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದ ಅರಣ್ಯ ಇಲಾಖೆಯ ಸಿಬ್ಬಂದಿಗಳ ವಿವರ

ಭಾರತೀಯ ಅರಣ್ಯ ಸೇವೆ ಅಧಿಕಾರಿಗಳು

1 ಶ್ರೀ ಬಿ ಕೆ ಸಿಂಗ್

2 ಶ್ರೀ ಬಿ ಕೆ ದೀಕ್ಷಿತ್

3 ಶ್ರೀ ವಿಜಯಕುಮಾರ್ ಗೋಗಿ

4 ಶ್ರೀ ಆರ್ ಉದಯಕುಮಾರ್

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ

1 ಶ್ರೀ ರಾಜಣ್ಣ

ವಲಯ ಅರಣ್ಯ ಅಧಿಕಾರಿ

1 ಶ್ರೀ ಹೆಚ್ ವಿ ಶ್ರೀನಿವಾಸಮೂರ್ತಿ

2 ಶ್ರೀ ಎ ಟಿ ವೆಂಕಟೇಗೌಡ

3 ಶ್ರೀ ಲಿಂಗರಾಜು ಬಿ

4 ಶ್ರೀ ಟಿ ಎಂ ಜಿಲಾನಿಪಾಷ

ವನಪಾಲಕ

1 ಶ್ರೀ ಈರಯ್ಯ

2 ಶ್ರೀ ಎನ್ ಚಿನ್ನಸ್ವಾಮಿ

3 ಶ್ರೀ ಅಬ್ದುಲ್ ವಹಾಬ್

4 ಶ್ರೀ ಮೊಹಮದ್ ಮುಜಾಮಿಲ್

5 ಶ್ರೀ ಸಿ ವೇಲಾಯುಧನ್

ಅರಣ್ಯ ರಕ್ಷಕರು

1 ಶ್ರೀ ಸಂತೋಷ್ ಕುಮಾರ್

2 ಶ್ರೀ ಜೆ ಅಂದಾನಿ

3 ಶ್ರೀ ಆರ್ ರಾಮಯ್ಯ

ಅರಣ್ಯ ವೀಕ್ಷಕರು

1 ಶ್ರೀ ಮಾಣಿಕ್ಯಂ

2 ಶ್ರೀ ಪಂದಪ್ಪ

3 ಶ್ರೀ ಈರಣ್ಣ

4 ಶ್ರೀ ತಾಂಡವ

5 ಶ್ರೀ ಮಧುನಾಯಕ್

ಸಂಖ್ಯಾತಿರಿಕ್ತ ನೌಕರರು

1 ಶ್ರೀ ಮುನಿಸ್ವಾಮಿ

2 ಶ್ರೀ ಪಳನಿ

3 ಶ್ರೀ ವೀರಪ್ಪ

ವಿಧಾನಸಭೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ 1642 ಕ್ಕೆ ಅನುಬಂಧ – 2

ವಿಶೇಷ ಟಾಸ್ಕ್ ಫೋರ್ಸ್ ಅಡಿಯಲ್ಲಿ ಕಾರ್ಯ ನಿರ್ವಹಿಸಿದ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಪೊಲೀಸ್ ಇಲಾಖೆಯಿಂದ ಪಾವತಿಸಲಾದ ಬಹುಮಾನದ (Cash reward) ವಿವರ

ಅರಣ್ಯ ಸಂರಕ್ಷಣಾಧಿಕಾರಿ

1 ಶ್ರೀ ಹರಿ ಕುಮಾರ್ ಝಾ

ಉಪ ಅರಣ್ಯ ಸಂರಕ್ಷಣಾಧಿಕಾರಿ

1 ಶ್ರೀ ವಿಜಯಕುಮಾರ್ ಗೋಗಿ

2 ಶ್ರೀ ಬ್ರಿಜೇಷ್‌ಕುಮಾರ್

3 ಶ್ರೀ ಕೆ_ಎಂ ದೇವೇಗೌಡ (ನಿವೃತ್ತ)

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ

1 ಶ್ರೀ ರಾಜಣ್ಣ

ವಲಯ ಅರಣ್ಯ ಅಧಿಕಾರಿ

1 ಶ್ರೀ ಬಸವರಾಜು

2 ಶ್ರೀ ಬಸವರಾಜು

3 ಶ್ರೀ ಮಹದೇವಯ್ಯ ಹೆಚ್ ಸಿ

ವನಪಾಲಕ

1 ಶ್ರೀ ಸಿದ್ಧಯ್ಯ

2 ಶ್ರೀ ಮರಿಶೆಟ್ಟಿ

3 ಶ್ರೀ ಸಿದ್ಧಪ್ಪ

ಅರಣ್ಯ ರಕ್ಷಕ

1 ಶ್ರೀ ಸಿದ್ಧಯ್ಯ ಪಿ

ಅರಣ್ಯ ವೀಕ್ಷಕ

1 ಶ್ರೀ ಮೊಹಮದ್

1325 (1643) ಶ್ರೀ ಆರ್ ಧ್ರುವನಾರಾಯಣ್ (ಸಂತೇಮರಳ್ಳಿ) – ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಆನೆಗಳ ಹಾವಳಿಯಿಂದ ರೈತರ ಬೆಳೆಗಳಿಗೆ ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳಲ್ಲಿ ಆನೆಗಳ ಹಾವಳಿಯಿಂದ ರೈತರು ಬೆಳೆದ ಬೆಳೆಗೆ ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಕಳೆದ ಅಧಿವೇಶನದಲ್ಲಿ ಮಾನ್ಯ ಮಂತ್ರಿಗಳು ಈ ಬಗ್ಗೆ ಸದನದಲ್ಲಿ ಪರಿಹಾರ ನೀಡುವ ಭರವಸೆ ನೀಡಿದ್ದು, ರೈತರಿಗೆ ಪರಿಹಾರದ ಹಣ ನೀಡಲಾಗಿದೆಯೇ (ವಿವರ ನೀಡುವುದು),

ಈ) ಹಾಗಿದ್ದಲ್ಲಿ, ಎಕರೆವಾರು ನೀಡಲಾಗಿರುವ ಪರಿಹಾರವೆಷ್ಟು,

ಉ) ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಸಿ ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಹೌದು

ಆ) ಹೌದು

ಇ) 2006–07ನೇ ಸಾಲಿನಲ್ಲಿ ವನ್ಯಪ್ರಾಣಿಗಳಿಂದಾಗುವ ಹಾನಿಗೆ ಪರಿಹಾರ ನೀಡಲು ರೂ 148 51 ಲಕ್ಷ ಬಿಡುಗಡೆಯಾಗಿದ್ದು, ಅದನ್ನು ಆದ್ಯತೆ ಮೇರೆಗೆ ರಾಜ್ಯದ ಎಲ್ಲಾ ಘಟನಾಧಿಕಾರಿಗಳಿಗೆ ಹಂಚಿಕೆ ಮಾಡಲಾಗಿದ್ದು, ಈ ಹಣ ಪೂರ್ತಿ ನೀಡಲಾಗಿದೆ ಈ ಪೈಕಿ ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳಿಗೆ ಸಂಬಂಧಿಸಿದಂತೆ ಪರಿಹಾರ ಧನ ನೀಡಿರುವ ಮೊತ್ತ ರೂ 32,61,275–00

ಈ) ಸರ್ಕಾರಿ ಆದೇಶ ಸಂ ಅಪಜೀ 52 ಎಫ್‌ಡಬ್ಲ್ಯೂಎಲ್ 96, ದಿನಾಂಕ 12–12–2002 ರಲ್ಲಿನ ಆದೇಶದಲ್ಲಿ ತಿಳಿಸಿರುವ ಈ ಕೆಳಕಂಡ ಮಾನದಂಡದಂತೆ ಪರಿಹಾರವನ್ನು ಪಾವತಿಸಲಾಗಿದೆ

1	ಭತ್ತ	ರೂ 250/–	ಪ್ರತಿ ಕ್ವಿಂಗೆ
2	ರಾಗಿ	ರೂ 150/–	ಪ್ರತಿ ಕ್ವಿಂಗೆ
3	ಜೋಳ	ರೂ 200/–	ಪ್ರತಿ ಕ್ವಿಂಗೆ
4	ಕಬ್ಬು	ರೂ 400/–	ಪ್ರತಿ ಟನ್‌ಗೆ
5	ಹತ್ತಿ	ರೂ 400/–	ಪ್ರತಿ ಕ್ವಿಂಗೆ
6	ಬಾಳೆ	ರೂ 20/–	ಪ್ರತಿ ಗಿಡಕ್ಕೆ
7	ತೆಂಗು 10 ವರ್ಷ ಮೇಲ್ಪಟ್ಟು	ರೂ 250/–	ಪ್ರತಿ ಮರಕ್ಕೆ

ಪರಿಹಾರವನ್ನು ಕೃಷಿ ಭೂಮಿಯಲ್ಲಿ ಆಗಿರುವ ಬೆಳೆನಷ್ಟ ಅಂದಾಜು ಮಾಡಿ ನೀಡುವುದಾಗಿದ್ದು, ಹೊಲದ ಎಕರೆ ವಿಸ್ತೀರ್ಣವನ್ನು ಪರಿಗಣಿಸಿ ಅಲ್ಲ ಪರಿಹಾರವನ್ನು ಕೃಷಿ ಭೂಮಿಯಲ್ಲಿ ಆಗಿರುವ ಬೆಳೆನಷ್ಟ ಅಂದಾಜು ಮಾಡಿ ನೀಡುವುದಾಗಿದ್ದು, ಹೊಲದ ಎಕರೆ ವಿಸ್ತೀರ್ಣವನ್ನು ಪರಿಗಣಿಸಿ ಅಲ್ಲ

ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳಲ್ಲಿ ಪರಿಹಾರ ಧನ ನೀಡಿದ ವಿವರಗಳು ಈ ಕೆಳಗಿನಂತಿವೆ

ವಿಭಾಗ	ಪ್ರಕರಣ ಸಂಖ್ಯೆ	ಪಾವತಿಸಿದ ಮೊತ್ತ (ರೂ)
ಹುಣಸೂರು ವನ್ಯಜೀವಿ ವಿಭಾಗ	296	2,34,193 00
ಬಂಡೀಪುರ ಹುಲಿಯೋಜನೆ ವಿಭಾಗ	1125	9,20,550 00
ಮೈಸೂರು ಪ್ರಾದೇಶಿಕ ವಿಭಾಗ	381	5,13,805 00
ಹುಣಸೂರು ಪ್ರಾದೇಶಿಕ ವಿಭಾಗ	166	2,30,675 00
ಕೊಳ್ಳೇಗಾಲ ವಿಭಾಗ	1442	12,31,752 00
ಚಾಮರಾಜನಗರ ವಿಭಾಗ	53	97,000 00
ಕಾವೇರಿ ವನ್ಯಜೀವಿ ವಿಭಾಗ ಕನಕಪುರ	33	33,300 00

ಉ) ಕಾಡಾನೆಗಳಿಂದ ಹಾನಿಗೊಳಗಾದ ಬೆಳೆಗಳಿಗೆ, ಪ್ರಾಣಹಾನಿ, ಶಾಶ್ವತ ಅಂಗವಿಕಲತೆ ಸಂಭವಿಸಿದಾಗ ಪರಿಹಾರ ನೀಡುವ ಬಗ್ಗೆ ಸರ್ಕಾರದ ಆದೇಶ ದಿನಾಂಕ 12–12–2002 ರಲ್ಲಿ ಪರಿಹಾರ ಮೊತ್ತವನ್ನು ನಿಗದಿಪಡಿಸಲಾಗಿತ್ತು ಈ ಮೊತ್ತವನ್ನು ಪರಿಷ್ಕರಿಸಿ ಹೆಚ್ಚಿನ ಪರಿಹಾರವನ್ನು ನೀಡಲು ದಿನಾಂಕ 17–01–2007 ರಂದು ಆದೇಶಿಸಲಾಗಿದೆ ಜೀವಹಾನಿಗೆ ಮೊದಲು ಒಂದು ಲಕ್ಷ ರೂ ಪರಿಹಾರ ನೀಡುತ್ತಿದ್ದು, ಈಗ ರೂ 1 50 ಲಕ್ಷಗಳಿಗೆ ಹೆಚ್ಚಿಸಲಾಗಿದೆ ಬೆಳೆಹಾನಿ ಪರಿಹಾರ ಮತ್ತು ಶಾಶ್ವತ ಅಂಗವಿಕಲತೆ ಪ್ರಕರಣಗಳಿಗೆ ಶೇಕಡ 30ರ ಮೇಲೆ ಹೆಚ್ಚಳ ನೀಡಲಾಗಿದೆ ಇದರಿಂದ ತೊಂದರೆಗೊಳಗಾದ ರೈತರ ಮತ್ತು ಇತರರಿಗೆ ಸೂಕ್ತ ಪರಿಹಾರ ಒದಗಿಸಿದಂತಾಗುತ್ತದೆ

1326 (1644) ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ) – ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ವಿವಿಧ ಇಲಾಖೆಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಮೀಸಲಾದ ಹಾಗೂ ಗುರುತಿಸಲಾದ ಕನಿಷ್ಠ 3800 ಹಿಂಬಾಕಿ ಹುದ್ದೆಗಳಿರುವುದು ನಿಜವಲ್ಲವೇ,

ಆ) ಬ್ಯಾಕ್‌ಲಾಗ್ ಭರ್ತಿಯ ನೇತೃತ್ವ ವಹಿಸಲು ಸಚಿವ ಸಂಪುಟದ ಉಪಸಮಿತಿಯು ಅಸ್ಥಿತ್ವದಲ್ಲಿದೆಯೇ,

ಇ) ಆ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳು ಯಾರು ಯಾರು,

ಈ) ಹಿಂಬಾಕಿ ಹುದ್ದೆಗಳನ್ನು ತುಂಬಲು ಉಪಸಮಿತಿಯು ಕಾಲ-ಕಾಲಕ್ಕೆ ತನ್ನ ಸಭೆಗಳನ್ನು ನಡೆಸಿ, ಪ್ರಗತಿ ಪರಿಶೀಲನೆ ಮಾಡುತ್ತಿಲ್ಲವೇ,

ಉ) ಕಳೆದ ಎರಡು ವರ್ಷಗಳ ಅವಧಿಯಲ್ಲಿ ಈ 3800 ಹುದ್ದೆಗಳ ಪೈಕಿ ಕೇವಲ 300 ಹುದ್ದೆಗಳನ್ನು ಮಾತ್ರ ತುಂಬಿರುವುದನ್ನು ಸಂಪುಟ ಉಪಸಮಿತಿ ಗಮನಿಸಿದೆಯೇ,

ಊ) ಹಿಂಬಾಕಿ ಹುದ್ದೆಗಳ ಭರ್ತಿಗಾಗಿ ಸರ್ಕಾರವು ಯಾವ ಚುರುಕಿನ ಕಾರ್ಯಕ್ರಮಗಳನ್ನು ಆರಂಭಿಸುತ್ತದೆ?

ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ಸರ್ಕಾರದ ವಿವಿಧ ಇಲಾಖೆಗಳಲ್ಲಿ ಒಟ್ಟು 13138 ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸಲಾಗಿದೆ

ಆ) ಹೌದು

ಇ) ಸಮಿತಿ ಈ ಕೆಳಕಂಡ ಸದಸ್ಯರುಗಳನ್ನು ಒಳಗೊಂಡಿರುತ್ತದೆ

1) ಶ್ರೀ ಬಿ ಎಸ್ ಯಡಿಯೂರಪ್ಪ, ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರ – **ಅಧ್ಯಕ್ಷರು**

2) ಶ್ರೀ ಎಂ ಪಿ ಪ್ರಕಾಶ್, ಮಾನ್ಯ ಗೃಹ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು – **ಸದಸ್ಯರು**

3) ಶ್ರೀ ಬಸವರಾಜ ಎಸ್ ಹೊರಟ್ಟಿ, ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು – **ಸದಸ್ಯರು**

4) ಶ್ರೀ ಡಿ ಹೆಚ್ ಶಂಕರಮೂರ್ತಿ, ಮಾನ್ಯ ಉನ್ನತ ಶಿಕ್ಷಣ ಸಚಿವರು – **ಸದಸ್ಯರು**

5) ಶ್ರೀ ಆಲ್ಕೋಡ್ ಹನುಮಂತಪ್ಪ, ಮಾನ್ಯ ಯುವಜನ ಸೇವೆ ಮತ್ತು ಕ್ರೀಡಾ ಸಚಿವರು – **ಸದಸ್ಯರು**

6) ಶ್ರೀ ಗೋವಿಂದ ಎಂ ಕಾರಜೋಳ, ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರು – **ಸದಸ್ಯರು**

7) ಶ್ರೀ ಬಾಲಚಂದ್ರ ಲ ಜಾರಕಿಹೊಳಿ, ಮಾನ್ಯ ಸಮಾಜ ಕಲ್ಯಾಣ ಸಚಿವರು – **ಸದಸ್ಯರು**

ಈ) ಹಿಂಬಾಕಿ ಹುದ್ದೆಗಳನ್ನು ತುಂಬಲು ಸಚಿವ ಸಂಪುಟದ ಉಪ ಸಮಿತಿಯು ಅಗತ್ಯ ಕಂಡು ಬಂದಾಗಲೆಲ್ಲ ಸಭೇ ಸೇರಿ ಪ್ರಗತಿ ಪರಿಶೀಲನೆ ನಡೆಸುತ್ತಿದೆ

ಉ) ಇಲಾಖೆಗಳಲ್ಲಿ ಒಟ್ಟು ಗುರುತಿಸಲಾಗಿರುವ 13138 ಹುದ್ದೆಗಳಲ್ಲಿ ಕಳೆದ ಎರಡು ವರ್ಷಗಳಲ್ಲಿ 1302 ಹುದ್ದೆಗಳನ್ನು ವಿವಿಧ ಇಲಾಖೆಗಳಲ್ಲಿ ಭರ್ತಿ ಮಾಡಲಾಗಿದೆ

ಊ) ಸಚಿವ ಸಂಪುಟ ಉಪಸಮಿತಿ ದಿನಾಂಕ 18–12–2006 ರಂದು ಸಭೆ ನಡೆಸಿ ಬಾಕಿ ಇರುವ ಎಲ್ಲಾ ಹಿಂಬಾಕಿ ಹುದ್ದೆಗಳನ್ನು ಭರ್ತಿ ಮಾಡಲು ಸೂಚನೆ ನೀಡಿದೆ ಹಿಂಬಾಲಿಕೆ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ

1328 (1797) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರದ್) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಾಡಿಗೆ ನಿಯಂತ್ರಣ ಮಂಡಳಿಯನ್ನು ಸ್ಥಾಪಿಸಿರುವ ಉದ್ದೇಶಗಳೇನು ಹಾಗೂ ಇದರ ಕೆಲಸವೇನು,

ಆ) ಇದರಿಂದ ಬಾಡಿಗೆದಾರರಿಗೆ ಯಾವ ಅನುಕೂಲಗಳು ದೊರೆಯುತ್ತಿವೆ,

ಇ) ಈ ಕಛೇರಿಗಳು ಎಲ್ಲೆಲ್ಲಿ ಕಾರ್ಯನಿರ್ವಹಿಸುತ್ತಿವೆ,

ಈ) ಬೆಂಗಳೂರಿನಲ್ಲಿ ಎಷ್ಟು ಕಛೇರಿಗಳು ಕಾರ್ಯನಿರ್ವಹಿಸುತ್ತಿವೆ,

ಉ) ಇವುಗಳ ಕಾರ್ಯವ್ಯಾಪ್ತಿಗೆ ಬರುವ ಪ್ರದೇಶಗಳು ಯಾವುದು (ಕಛೇರಿಗಳ ವಿಳಾಸ ಮತ್ತು ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ಸಿಬ್ಬಂದಿ ವಿವರಗಳನ್ನು ಒದಗಿಸುವುದು),

ಊ) ಕಳೆದ ಮೂರು ವರ್ಷಗಳಿಂದ ಬೆಂಗಳೂರು ನಗರದಲ್ಲಿ ಕಾರ್ಯನಿರ್ವಹಿಸುತ್ತಿರುವ ಬಾಡಿಗೆ ನಿಯಂತ್ರಣ ಮಂಡಳಿಗಳ ಮೂಲಕ ಇತ್ಯರ್ಥಪಡಿಸಲಾದ ಪ್ರಕರಣಗಳ ಸಂಖ್ಯೆ ಎಷ್ಟು,

ಋ) ಈ ಪೈಕಿ ಎಷ್ಟು ಪ್ರಕರಣಗಳು ನ್ಯಾಯಾಲಯದ ಮುಂದಿವೆ (ಪೂರ್ಣ ವಿವರಗಳನ್ನು ಒದಗಿಸುವುದು),

ಋಊ) ಬಾಡಿಗೆ ನಿಯಂತ್ರಣ ಮಂಡಳಿಯ ಮುಂದೆ ಬರುವ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸಲು ಯಾವ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಬಾಡಿಗೆ ನಿಯಂತ್ರಣ ಕಛೇರಿಗಳು ಕರ್ನಾಟಕ ಬಾಡಿಗೆ ನಿಯಮ 2001 ರಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ ಈ ವ್ಯಾಪ್ತಿಗೆ ನಗರ ಹಾಗೂ ಪಟ್ಟಣ ಪ್ರದೇಶಗಳು ಒಳಪಟ್ಟಿದ್ದು, ಮನೆ ಮಾಲೀಕರು ಮತ್ತು ಬಾಡಿಗೆದಾರರ ಮಧ್ಯೆ ಬರಬಹುದಾದ ವ್ಯಾಜ್ಯಗಳನ್ನು ಇತ್ಯರ್ಥಪಡಿಸುವುದು, ಬಾಡಿಗೆ ರೇವಣಿ ಮಾಡಿಕೊಳ್ಳುವುದು, ಬಾಡಿಗೆದಾರರಿಗೆ ಮೂಲಭೂತ ಸೌಕರ್ಯಗಳನ್ನು ಮಾಲೀಕರು ಅಡ್ಡಪಡಿಸಿದಲ್ಲಿ ಇತ್ಯರ್ಥಪಡಿಸುವುದು ಬಾಡಿಗೆ ದರ ನಿಗದಿ ಪಡಿಸಲು ಅರ್ಜಿ ನೀಡಿದ್ದಲ್ಲಿ ರಾಜಸ್ವ ನಿರೀಕ್ಷಕರಿಂದ ಮತ್ತು ಮೌಲ್ಯಮಾಪಕರಿಂದ ವರದಿ ತರಿಸಿ, ಬಾಡಿಗೆ ದರ ನಿಗದಿಪಡಿಸುವುದು, ರೇವಣಿ ಇಟ್ಟ ಬಾಡಿಗೆ ಹಣವನ್ನು ಮನೆ ಮಾಲೀಕರಿಗೆ ನೀಡುವುದು

ಆ) 1) ಮನೆ ಮಾಲೀಕರು ಬಾಡಿಗೆಯನ್ನು ಪಡೆಯಲು ನಿರಾಕರಿಸಿದಲ್ಲಿ ಬಾಡಿಗೆ ಹಣವನ್ನು ಬಾಡಿಗೆದಾರರು ಬಾಡಿಗೆ ನಿಯಂತ್ರಣಾಧಿಕಾರಿಗಳ ಕಛೇರಿಯಲ್ಲಿ ರೇವಣಿ ಇಡಬಹುದಾಗಿದೆ

2) ನಿರ್ದಿಷ್ಟಪಡಿಸಿದ ಬಾಡಿಗೆಯನ್ನು ನಿಯಮದಂತೆ ನಿಗದಿಪಡಿಸುವುದು

3) ಮನೆ ಮಾಲೀಕರು ವಿದ್ಯುತ್ ನೀರು ಒಳಚರಂಡಿ, ಇತರೆ ಮೂಲಭೂತ ಸೌಕರ್ಯಗಳನ್ನು ತಡೆಹಿಡಿದಿದ್ದಲ್ಲಿ ಅವುಗಳನ್ನು ಇತ್ಯರ್ಥಪಡಿಸಿ, ಸಂಪರ್ಕಕಲ್ಪಿಸಲಾಗುವುದು

4) ಬಾಡಿಗೆ ಕಟ್ಟಡಕ್ಕೆ ಅವಶ್ಯಕವಾದ ದುರಸ್ತಿಯನ್ನು ಮನೆ ಮಾಲೀಕರು ನಿರ್ವಹಿಸದಿದ್ದ ಸಂದರ್ಭದಲ್ಲಿ ಬಾಡಿಗೆದಾರರು ನೀಡುವ ಮನವಿಯನ್ನು ಪರಿಶೀಲಿಸಿ, ಆದೇಶ ನೀಡಲಾಗುವುದು

5) ಮನೆ ಮಾಲೀಕರು ಬಾಡಿಗೆ ಹಣಕ್ಕೆ ರಶೀದಿ ನೀಡದಿದ್ದಲ್ಲಿ ಅಧಿನಿಯಮದಂತೆ ರಶೀದಿ ನೀಡಲು ಆದೇಶಿಸಲಾಗುವುದು

ಇ) ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಹಾಗೂ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಉಪವಿಭಾಗಾಧಿಕಾರಿಗಳ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿವೆ

ಈ) ನಾಲ್ಕು ಕಛೇರಿಗಳು ಕಾರ್ಯನಿರ್ವಹಿಸುತ್ತಿವೆ

ಉ) ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಎಲ್ಲಾ ವಾರ್ಡ್‌ಗಳು

ಪೂರ್ವ ವಲಯಕ್ಕೆ ಮಹದೇವಪುರ ಸಿಟಿ ಮುನ್ಸಿಪಲ್ ಏರಿಯಾ ಹಾಗೂ ಕೆ ಆರ್ ಮುನ್ಸಿಪಲ್ ಏರಿಯಾ ಒಳಪಡುತ್ತದೆ

ದಕ್ಷಿಣ ವಲಯಕ್ಕೆ ಬೊಮ್ಮನಹಳ್ಳಿ ಸಿಟಿ ಮುನ್ಸಿಪಲ್ ಏರಿಯಾ ಮತ್ತು ರಾಜರಾಜೇಶ್ವರಿ ಸಿಟಿ ಮುನ್ಸಿಪಲ್ ಏರಿಯಾ ಒಳಪಡುತ್ತದೆ

ಉತ್ತರ ವಲಯಕ್ಕೆ ಬ್ಯಾಟರಾಯನಪುರ ಸಿಟಿ ಮುನ್ಸಿಪಲ್ ಏರಿಯಾ ಮತ್ತು ಯಲಹಂಕ ಸಿಟಿ ಮುನ್ಸಿಪಲ್ ಏರಿಯಾ ಒಳಪಡುತ್ತದೆ

ಪಶ್ಚಿಮ ವಲಯಕ್ಕೆ ಟಿ ದಾಸರಹಳ್ಳಿ ನಗರ ಪ್ರದೇಶಗಳು ಒಳಪಡುತ್ತದೆ

a) ಬಾಡಿಗೆ ಮತ್ತು ವಸತಿ ನಿಯಂತ್ರಣಾಧಿಕಾರಿಗಳು – 4

b) ವ್ಯವಸ್ಥಾಪಕರು – 4

c) ಪ್ರಥಮ ದರ್ಜೆ ಸಹಾಯಕರು – 4

d) ಪ್ರಥಮ ದರ್ಜೆ ರಾಜಸ್ವ ನಿರೀಕ್ಷಿಕರು – 20

e) ದ್ವಿತೀಯ ದರ್ಜೆ ಸಹಾಯಕರು – 8

f) ಬೆರಳಚ್ಚುಗಾರರು – 4

g) 'ಡಿ' ದರ್ಜೆ ನೌಕರರು – 20

h) ವಾಹನ ಚಾಲಕರು – 4

ಊ) a) ಬಾಡಿಗೆ ನಿಯಂತ್ರಣಾಧಿಕಾರಿಗಳ ಕಛೇರಿ ಪೂರ್ವ ವಲಯ – 79

b) ಬಾಡಿಗೆ ನಿಯಂತ್ರಣಾಧಿಕಾರಿಗಳ ಕಛೇರಿ ದಕ್ಷಿಣ ವಲಯ – 92

c) ಬಾಡಿಗೆ ನಿಯಂತ್ರಣಾಧಿಕಾರಿಗಳ ಕಛೇರಿ ಉತ್ತರ ವಲಯ – 69

d) ಬಾಡಿಗೆ ನಿಯಂತ್ರಣಾಧಿಕಾರಿಗಳ ಕಛೇರಿ ಪಶ್ಚಿಮ ವಲಯ – 44

ಋ) a) ಬಾಡಿಗೆ ನಿಯಂತ್ರಣಾಧಿಕಾರಿಗಳ ಕಛೇರಿ ಪೂರ್ವ ವಲಯ – 29

b) ಬಾಡಿಗೆ ನಿಯಂತ್ರಣಾಧಿಕಾರಿಗಳ ಕಛೇರಿ ದಕ್ಷಿಣ ವಲಯ – 24

c) ಬಾಡಿಗೆ ನಿಯಂತ್ರಣಾಧಿಕಾರಿಗಳ ಕಛೇರಿ ಉತ್ತರ ವಲಯ –

d) ಬಾಡಿಗೆ ನಿಯಂತ್ರಣಾಧಿಕಾರಿಗಳ ಕಛೇರಿ ಪಶ್ಚಿಮ ವಲಯ –

ಋ) ಬಾಡಿಗೆ ನಿಯಂತ್ರಣ ಮಂಡಳಿಗಳ ಮುಂದೆ ಬರುವ ಮೂಲಭೂತ ಸೌಕರ್ಯಗಳಾದ ನೀರು, ವಿದ್ಯುತ್, ಒಳಚರಂಡಿ ಸಂಪರ್ಕಗಳ ಬಗ್ಗೆ ಬಂದ ದೂರು ಅರ್ಜಿಗಳನ್ನು ಸ್ವೀಕರಿಸಿ, ಬಂದಂತಹ ಮನವಿಗಳನ್ನು ರಾಜಸ್ವ ನಿರೀಕ್ಷಕರ ಸಹಯೋಗದೊಂದಿಗೆ ಸ್ಥಳ ತನಿಖೆ ನಡೆಸಿ, ವಿಚಾರಣೆ ನಡೆಸಿ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸಲಾಗುತ್ತಿದೆ

1331 (2039) ಶ್ರೀ ಹಾಲಪ್ಪ ಹೆಚ್ (ಹೊಸನಗರ) .– ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾಮಾಜಿಕ ಅರಣ್ಯ ನೆಡುತೋಪುಗಳಲ್ಲಿ ಏಕಜಾತಿಯ ಸಸ್ಯಗಳನ್ನು ಬೆಳೆಸುವುದು ಮಲೆನಾಡು ಪ್ರದೇಶದಲ್ಲಿ ಸೂಕ್ತವೇ,

ಆ) ಸ್ಥಳೀಯ ಮಿಶ್ರಜಾತಿಯ (ಎಲ್ಲಾ ಜಾತಿಯ) ಸಸ್ಯಗಳನ್ನು ಬೆಳೆಸದಿರಲು ಕಾರಣಗಳೇನು,

ಇ) ಮಿಶ್ರ ಜಾತಿಯ ಮರಗಳನ್ನು ಬೆಳೆಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಸಿ ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಸೂಕ್ತವಾಗಿರುವುದಿಲ್ಲ

ಆ) ಸ್ಥಳೀಯ ಪರಿಸರಕ್ಕೆ ಹಾಗೂ ಜನರ ಅವಶ್ಯಕತೆ ಪೂರೈಸುವ ವಿವಿಧ ಜಾತಿಯ ಗಿಡ ಮರಗಳನ್ನು ಬೆಳೆಸಲಾಗುತ್ತಿದೆ

ಇ) ಯೋಜನಾವಾರು ಅನುದಾನದಂತೆ ಮತ್ತೆ ಯೋಜನ ಮಾರ್ಗಸೂಚಿ ಪ್ರಕಾರ ಆಯಾ ಪ್ರದೇಶಗಳು ಹಾಗೂ ಪರಿಸರಕ್ಕೆ ಹೊಂದುವಂತಹ ಮರ ಗಿಡಗಳನ್ನು ಬೆಳೆಸಲಾಗುತ್ತಿದೆ

1332 (2040) ಶ್ರೀ ಹಾಲಪ್ಪ ಹೆಚ್ (ಹೊಸನಗರ) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯ ಹೊಸನಗರ ಮತ್ತು ಶಿವಮೊಗ್ಗ ತಾಲ್ಲೂಕುಗಳಲ್ಲಿ ದರಖಾಸ್ತು ಭೂಮಿಯನ್ನು ಮಂಜೂರು ಮಾಡುವಂತೆ ಕೋರಿ ಬಂದಿರುವ ಅರ್ಜಿಗಳೆಷ್ಟು (ತಾಲ್ಲೂಕುವಾರು ವಿವರ ನೀಡುವುದು),

ಆ) ಈ ಅರ್ಜಿಗಳನ್ನು ವಿಲೇವಾರಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು,

ಇ) ಕಳೆದ ನಾಲ್ಕು ವರ್ಷಗಳಿಂದ ಇಲ್ಲಿಯವರೆಗೆ ಮಂಜೂರಾದ ಜಮೀನಿನ ವಿಸ್ತೀರ್ಣ, ವ್ಯಕ್ತಿಗಳ ಮತ್ತು ಸಂಸ್ಥೆಗಳು ಯಾವುವು (ಪೂರ್ಣ ವಿವರ ನೀಡುವುದು)?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು)

ಅ) ಹೊಸನಗರ ತಾಲ್ಲೂಕಿನಲ್ಲಿ ದರಖಾಸ್ತು ಮಂಜೂರಾತಿ ಕೋರಿ ಮಿಲಿಟರಿ ಸೇವೆಯಲ್ಲಿರುವ 10 ಜನರ ಅರ್ಜಿಗಳು ಸ್ವೀಕೃತವಾಗಿದ್ದು, ಶಿವಮೊಗ್ಗ ತಾಲ್ಲೂಕಿನಲ್ಲಿ ಯಾವುದೇ ಅರ್ಜಿಗಳು ಸ್ವೀಕೃತವಾಗಿರುವುದಿಲ್ಲ

ಆ) ಹೊಸನಗರ ತಾಲ್ಲೂಕಿನಲ್ಲಿ ಸ್ವೀಕೃತವಾಗಿರುವ ಅರ್ಜಿಗಳ ಸಂಬಂಧ ವಿಲೇವಾರಿ ಕುರಿತಂತೆ ಭೂ ಲಭ್ಯತಾ ಪಟ್ಟಿಯಲ್ಲಿ ಜಮೀನು ಲಭ್ಯವಿಲ್ಲದೇ ಇರುವುದರಿಂದ ಸದರಿ ಅರ್ಜಿಗಳನ್ನು ವಜಾ ಮಾಡಿ ಅರ್ಜಿದಾರರಿಗೆ ಹಿಂಬರಹ ನೀಡಲಾಗಿದೆ

ಇ) ಸರ್ಕಾರೇತರ ವ್ಯಕ್ತಿ ಮತ್ತು ಸಂಸ್ಥೆಗಳಿಗೆ ಭೂ ಮಂಜೂರಾತಿ ಕಾಯ್ದೆಯಡಿ ಕಳೆದ ನಾಲ್ಕು ವರ್ಷಗಳಿಂದ ಯಾವುದೇ ಮಂಜೂರಾತಿ ನೀಡಿಲ್ಲ

1333 (1652) ಶ್ರೀ ಹೊನ್ನಾಳಿ ಜಬ್ಬಾರ ಖಾನ್ – ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ 2005–06 ಮತ್ತು 2006–07ನೇ ಸಾಲಿನಲ್ಲಿ ನೀಡಿದ ಅನುದಾನವೆಷ್ಟು,

ಆ) ಪ್ರತಿ ಕ್ಷೇತ್ರವಾರು ಬಿಡುಗಡೆ ಮಾಡಿದ ಅನುದಾನವೆಷ್ಟು ಹಾಗೂ ಕ್ಷೇತ್ರವಾರು ಕೈಗೊಂಡ ಕೆಲಸಗಳ ಪ್ರಗತಿ ಏನು (ಸಂಪೂರ್ಣ ವಿವರ ನೀಡುವುದು)?

ಶ್ರೀ ರಾಮಚಂದ್ರ ಗೌಡ (ಮಾನ್ಯ ಯೋಜನಾ ಸಚಿವರು)

ಅ) 2005–06ನೇ ಸಾಲಿನಲ್ಲಿ ರೂ 630 00 ಲಕ್ಷ ಮತ್ತು 2006–07ನೇ ಸಾಲಿನಲ್ಲಿ ರೂ 700 00 ಲಕ್ಷ

ಆ) ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ

ಅನುಬಂಧ – 1

ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ, ಚಿತ್ರದುರ್ಗ

ಕ್ರ.ಸಂ.	ಕ್ಷೇತ್ರದ ಹೆಸರು	ನಬಾರ್ಡ್ ಯೋಜನೆ								ಸಾಮಾನ್ಯ ಯೋಜನೆ							
		2005–06				2006–07				2005–06				2006–07			
		60% ರ ಕಾಮಗಾರಿಗಳು		40% ರ ಕಾಮಗಾರಿಗಳು		60% ರ ಕಾಮಗಾರಿಗಳು		40% ರ ಕಾಮಗಾರಿಗಳು		60% ರ ಕಾಮಗಾರಿಗಳು		40% ರ ಕಾಮಗಾರಿಗಳು		60% ರ ಕಾಮಗಾರಿಗಳು		40% ರ ಕಾಮಗಾರಿಗಳು	
		ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ
1	2	3	4	5	6	7	8	9	10	11	12	13	14	15	16	17	18
1	ದೇವನಹಳ್ಳಿ									4	1 27						
2	ಹೊಸಕೋಟೆ																
3	ನೆಲಮಂಗಲ																
4	ದೊಡ್ಡಬಳ್ಳಾಪುರ																
5	ರಾಮನಗರ																
6	ಕನಕಪುರ			1	12 93					2	2 25	1	1 60				
7	ಸಾತನೂರು			1	10 11												
8	ಚನ್ನಪಟ್ಟಣ																

9	ಮಾಗಡಿ							5	2 94	1	0 50				
	ಒಟ್ಟು			**2**	**23 04**			**11**	**6 46**	**2**	**2 1**				
10	ತುಮಕೂರು					2	3 97	4	1 54	1	1 60	1	0 25		
11	ಬೆಳ್ಳಾವಿ							1	0 30	1	0 35	2	1 25	1	0 20
12	ಗುಬ್ಬಿ			1	9 22	1	14 32	4	0 9			1	0 15		
13	ತಿಪಟೂರು	3	3 65	1	1 25	1	4 23	1	0 3			1	0 19		
14	ತುರುವೇಕೆರೆ	1	0 55					2	0 33	1	0 35	1	0 24		
15	ಪಾವಗಡ					1	0 03	4	1 25	4	1 15				
16	ಶಿರಾ							1	0 25	2	1 25				
17	ಕುಣಿಗಲ್	3	2 98	1	1 21	1	0 18	2	1 5	1	0 30				
18	ಕಳ್ಳಂಬೆಳ್ಳ			2	3 16			5	10 45	3	2 50				
19	ಮಧುಗಿರಿ										-	2	0 47		
20	ಹುಲಿಯೂರುದುರ್ಗ			1	10 77			1	0 4	1	0 04				
21	ಚಿಕ್ಕನಾಯಕನಹಳ್ಳಿ			1	21 63	2	3 36	1	0 6	1	0 50	3	0 75		
22	ಒಟ್ಟು	**7**	**7 18**	**7**	**47 24**	**8**	**26 59**	**26**	**17 82**	**15**	**8 24**	**11**	**3 30**	**1**	**0 20**
23	ಕೋಲಾರ											1	1 00		2 00
24	ಶಿಡ್ಲಘಟ್ಟ														

25	ಮಾಲೂರು														
26	ಚಿಕ್ಕಬಳ್ಳಾಪುರ	2	3 3	1	0 83			2	0 75	3	0 90				6 65
27	ಬಾಗೇಪಲ್ಲಿ	2	3 18	2	5 44	3	3 4								
28	ಚಿಂತಾಮಣಿ					1	19 56								
29	ಬೇತಮಂಗಲ			2	21 32										
30	ವೇಮಗಲ್														
31	ಮುಳಬಾಗಿಲು							2	0 55	1	0 25				3 80
32	ಶ್ರೀನಿವಾಸಪುರ	1	4 77	1	0 83										
	ಒಟ್ಟು	**5**	**11 25**	**6**	**28 42**	**4**	**22 96**	**4**	**1 30**	**4**	**1 15**	**1**	**1 00**		**12 45**
33	ಅರಸೀಕೆರೆ					1	0 09	6	0 9	1	0 50				
34	ಗಂಡಸಿ							5	0 35	2	0 65				
	ಒಟ್ಟು							**11**	**1 25**	**3**	**1 15**				
35	ಚಿತ್ರದುರ್ಗ							3	1 38	4	3 61				
36	ಭರಮಸಾಗರ							2	0 5	1	0 25				
37	ಚಳ್ಳಕೆರೆ							1	0 4	3	1 30			1	0 25
38	ಹೊಳಲ್ಕೆರೆ			3	19 47	2	3 69			2	1 30				
39	ಹೊಸದುರ್ಗ			3	12 37			6	2 55	2	0 90			1	0 46

40	ಹಿರಿಯೂರು			1	0 78									1	0 60
41	ಮೊಳಕಾಲ್ಮೂರು							1	0 3					1	0 98
	ಒಟ್ಟು	0	0	7	32 62	2	3 69	13	5 13	12	7 36			4	2 29
42	ಜಗಳೂರು			1	6 76			1	0 22			1	1 99	1	1 00
	ಒಟ್ಟು	0	0 00					1	0 22			1	1 99	1	1 00
43	ಹುಬ್ಬಳ್ಳಿ ನಗರ			1	7 34							1	0 40	1	0 40
44	ಹುಬ್ಬಳ್ಳಿ (ಗ್ರಾ)			1	6 1			1	0 75	1	0 35				
45	ಕಲಘಟಗಿ									1	0 35				
46	ಕುಂದಗೋಳ					1	6 19	1	3	1	0 47				
	ಒಟ್ಟು	0	0	2	13 44	1	6 19	2	3 75	3	1 67	1	0 40	1	0 40
47	ಗದಗ್			1	4 21			1	3	2	3 10				
48	ರೋಣ್			1	16 12			2	0 75	2	0 34				
49	ಶಿರಹಟ್ಟಿ							1	0 75					1	0 60
50	ಮುಂಡರಗಿ									1	0 92				
51	ನರಗುಂದ							3	0 75	2	0 70				
	ಒಟ್ಟು	0	0 00	2	20 33			7	5 25	7	5 06			1	0 60
52	ಹಾವೇರಿ			2	9 87			1	0 95	2	1 35				

53	ರಾಣೇಬೆನ್ನೂರು									1	0 60	1	0 25		
54	ಬ್ಯಾಡಗಿ					2	8 41								
	ಒಟ್ಟು	**0**	**0**	**2**	**9 37**	**2**	**8 41**	**1**	**0 95**	**3**	**1 95**	**1**	**0 25**		
55	ಚಿಕ್ಕೋಡಿ							2	1 85						
56	ರಾಮದುರ್ಗ							2	0 75	1	0 35				
57	ನಿಪ್ಪಾಣಿ									1	0 75	1	2 00		
58	ಸದಲಗಾ														
59	ಹುಕ್ಕೇರಿ							2	1 6			1	1 50		
60	ಗೋಕಾಕ್											1	1 10	1	0 50
61	ಅರಬಾವಿ							1	0 85			1	0 85		
62	ಕಾಗವಾಡ			1	0 15									1	0 50
63	ಅಥಣಿ														
	ಒಟ್ಟು			**1**	**0 15**			**7**	**5 05**	**2**	**1 10**	**4**	**5 45**	**2**	**1 00**
64	ಬಿಜಾಪುರ			1	2 2	1	29 95	6	1 36						
65	ಬಸವನಬಾಗೇವಾಡಿ			1	4 66										
66	ಹೂವಿನಹಿಪ್ಪರಗಿ														
67	ಇಂಡಿ														

68	ಬಳ್ಳುಳ್ಳಿ									3	0 27						
69	ಸಿಂದಗಿ			1	3 94					2	0 5	2	1 50				
70	ತಿಕೋಟಿ									5	1 75	1	1 50				
71	ಮುದ್ದೇಬಿಹಾಳ್									5	1 55	1	2 00				
	ಒಟ್ಟು	0	0	3	10 8			1	29 95	21	5 43	4	5 00				
72	ಬಾಗಲಕೋಟೆ											3	2 75				
73	ಗುಳೇದಗುಡ್ಡ									3	3	2	0 61				
74	ಬೀಳಗಿ			1	17 35									3	0 75	1	0 25
75	ಹುನಗುಂದ			1	7 7												
76	ಬಾದಾಮಿ			1	19 5												
	ಒಟ್ಟು			3	44 55					3	3	5	3 36	3	0 75	1	0 25
	ಜಿಲ್ಲೆಗಳ ಒಟ್ಟು	12	18 43	35	230 46	0	0 00	18	97 79	107	55 61	60	38 14	22	13 14	11	18 19

1334 (1653) ಶ್ರೀ ಹೊನ್ನಾಳಿ ಜಬ್ಬಾರ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಬರಪೀಡಿತ ತಾಲ್ಲೂಕುಗಳಾವುವು (ಜಿಲ್ಲಾವಾರು ವಿವರ ನೀಡುವುದು),

ಆ) ಬರ ಪೀಡಿತ ತಾಲ್ಲೂಕುಗಳಲ್ಲಿ ಜಾನುವಾರುಗಳಿಗೆ ಮೇವು, ಹೊಟ್ಟು ಇಲ್ಲದಂತಾಗಿ ಜಾನುವಾರುಗಳನ್ನು ರೈತರು ಮಾರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಬಂದಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು,

ಈ) ರಾಜ್ಯದಲ್ಲಿ ಜಾನುವಾರಗಳ ಹಿತದೃಷ್ಟಿಯಿಂದ ಪ್ರತಿ ಜಿಲ್ಲೆಯಲ್ಲಿಯೂ ಮೇವು ಬ್ಯಾಂಕ್ ಸ್ಥಾಪನೆ ಮಾಡುವ ವಿಚಾರ ಸರ್ಕಾರದ ಮುಂದಿದೆಯೇ,

ಉ) ಹಾಗಿದ್ದಲ್ಲಿ, ತಗಲುವ ಅಂದಾಜು ವೆಚ್ಚ ಎಷ್ಟು ಹಾಗೂ ಯಾವ ವರ್ಷದಿಂದ ಜಾರಿಗೆ ತರಲಾಗುವುದು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ವಿವರಗಳನ್ನು ಅನುಬಂಧದಲ್ಲಿ ನೀಡಿದೆ

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ಈ) ಅವಶ್ಯಕತೆ ಇರುವ ಕಡೆ ಮೇವು ಬ್ಯಾಂಕ್ ತೆರೆಯಲಾಗುತ್ತಿದೆ

ಉ) ಮೇವು ಬ್ಯಾಂಕ್‌ನಲ್ಲಿ ಖರೀದಿಸಿದ ಮೇವನ್ನು ಸಂಗ್ರಹಣೆ ಮಾಡಲಾಗುತ್ತಿದೆ ಇದರಲ್ಲಿ ಮೇವು ಸಾಗಾಣಿಕೆ ಹಾಗೂ ಖರೀದಿ ವೆಚ್ಚ ಸೇರಿರುತ್ತದೆ ಮೇವು ಸಂಗ್ರಹಣೆ ಪ್ರಮಾಣದ ಮೇಲೆ ಮೇವು ಬ್ಯಾಂಕಿನ ವೆಚ್ಚ ನಿರ್ಧಾರವಾಗುತ್ತದೆ

ಬರಪೀಡಿತವೆಂದು ಘೋಷಿಸಿರುವ ತಾಲ್ಲೂಕುಗಳ ಹೆಸರು
ಅನುಬಂಧ – 1

ಕ್ರ.ಸಂ	ಜಿಲ್ಲೆ	ತಾಲ್ಲೂಕು
1	ಬೆಂಗಳೂರು ನಗರ	1) ಆನೇಕಲ್
		2) ಬೆಂಗಳೂರು (ಉತ್ತರ)
		3) ಬೆಂಗಳೂರು (ದಕ್ಷಿಣ)
2	ಬೆಂಗಳೂರು (ಗ್ರಾ)	4) ದೇವನಹಳ್ಳಿ
		5) ದೊಡ್ಡಬಳ್ಳಾಪುರ
		6) ಕನಕಪುರ
		7) ಮಾಗಡಿ
		8) ರಾಮನಗರ
		9) ಚನ್ನಪಟ್ಟಣ
		10) ಹೊಸಕೋಟೆ
		11) ನೆಲಮಂಗಲ
3	ಕೋಲಾರ	12) ಬಂಗಾರಪೇಟೆ
		13) ಚಿಕ್ಕಬಳ್ಳಾಪುರ
		14) ಚಿಂತಾಮಣಿ
		15) ಗೌರಿಬಿದನೂರು
		16) ಕೋಲಾರ
		17) ಮಾಲೂರು
		18) ಮುಳಬಾಗಿಲು
		19) ಶಿಡ್ಲಘಟ್ಟ
		20) ಶ್ರೀನಿವಾಸಪುರ
		21) ಬಾಗೇಪಲ್ಲಿ

		22) ಗುಡಿಬಂಡೆ
4	ತುಮಕೂರು	23) ಚಿಕ್ಕನಾಯಕನಹಳ್ಳಿ
		24) ಕೊರಟಿಗೆರೆ
		25) ಕುಣಿಗಲ್
		26) ಮಧುಗಿರಿ
		27) ಶಿರಾ
		28) ತಿಪಟೂರು
		29) ತುರುವೇಕೆರೆ
		30) ಪಾವಗಡ
		31) ತುಮಕೂರು
		32) ಗುಬ್ಬಿ
5	ಚಿತ್ರದುರ್ಗ	33) ಚಳ್ಳಕೆರೆ
		34) ಹಿರಿಯೂರು
		35) ಹೊಸದುರ್ಗ
		36) ಮೊಳಕಾಲ್ಮೂರು
		37) ಹೊಳಲ್ಕೆರೆ
		38) ಚಿತ್ರದುರ್ಗ
6	ದಾವಣಗೆರೆ	39) ಜಗಳೂರು
		40) ಚನ್ನಗಿರಿ
		41) ದಾವಣಗೆರೆ
		42) ಹರಪನಹಳ್ಳಿ
		43) ಹೊನ್ನಾಳಿ
		44) ಹರಿಹರ
7	ಚಾಮರಾಜನಗರ	45) ಚಾಮರಾಜನಗರ
		46) ಗುಂಡ್ಲುಪೇಟೆ

		47) ಕೊಳ್ಳೇಗಾಲ
		48) ಯಳ್ಳಂದೂರು
8	ಮೈಸೂರು	49) ಹೆಚ್ ಡಿ ಕೋಟೆ
		50) ಕೃಷ್ಣರಾಜನಗರ
		51) ಮೈಸೂರು
		52) ಟಿ ನರಸೀಪುರ
		53) ನಂಜನಗೂಡು
		54) ಹುಣಸೂರು
		55) ಪಿರಿಯಾಪಟ್ಟಣ
9	ಮಂಡ್ಯ	56) ಕೃಷ್ಣರಾಜಪೇಟೆ
		57) ಮದ್ದೂರು
		58) ಮಳವಳ್ಳಿ
		59) ಮಂಡ್ಯ
		60) ನಾಗಮಂಗಲ
		61) ಪಾಂಡವಪುರ
		62) ಶ್ರೀರಂಗಪಟ್ಟಣ
10	ಬಳ್ಳಾರಿ	63) ಬಳ್ಳಾರಿ
		64) ಹಡಗಲಿ
		65) ಹೊಸಪೇಟೆ
		66) ಹೆಚ್ ಬಿ ಹಳ್ಳಿ
		67) ಕೂಡ್ಲಗಿ
		68) ಸಂಡೂರು
		69) ಸಿರಗುಪ್ಪ
11	ಕೊಪ್ಪಳ	70) ಗಂಗಾವತಿ

		71) ಕೊಪ್ಪಳ
		72) ಕುಷ್ಟಗಿ
		73) ಯಲಬುರ್ಗ
12	ರಾಯಚೂರು	74) ದೇವದುರ್ಗ
		75) ಲಿಂಗಸಗೂರು
		76) ಮಾನ್ವಿ
		77) ಸಿಂಧನೂರು
		78) ರಾಯಚೂರು
13	ಗುಲ್ಬರ್ಗಾ	79) ಅಫಜಲಪುರ
		80) ಶೋರಾಪುರ
		81) ಆಳಂದ
		82) ಚಿಂಚೋಳಿ
		83) ಚಿತಾಪುರ
		84) ಗುಲ್ಬರ್ಗ
		85) ಜೇವರ್ಗಿ
		86) ಸೇಡಂ
		87) ಶಹಾಪುರ
		88) ಯಾದಗಿರಿ
14	ಬೀದರ್	89) ಬಸವಕಲ್ಯಾಣ
		90) ಔರಾದ್
		91) ಬೀದರ್
		92) ಹುಮ್ನಾಬಾದ್
		93) ಭಾಲ್ಕಿ
15	ಬೆಳಗಾಂ	94) ರಾಮದುರ್ಗ
		95) ರಾಯಭಾಗ್
		96) ಸವದತ್ತಿ

		97) ಬೈಲಹೊಂಗಲ
		98) ಹುಕ್ಕೇರಿ
		99) ಅಥಣಿ
16	ಬಾಗಲಕೋಟೆ	100) ಬಾದಾಮಿ
		101) ಬಾಗಲಕೋಟೆ
		102) ಮುಧೋಳ
		103) ಹುನಗುಂದ
		104) ಜಮಖಂಡಿ
		105) ಬೀಳಗಿ
17	ಬಿಜಾಪುರ	106) ಬಾಗೇವಾಡಿ
		107) ಬಿಜಾಪುರ
		108) ಇಂಡಿ
		109) ಮುದ್ದೇಬಿಹಾಳ
		110) ಸಿಂಧಗಿ
18	ಗದಗ್	111) ಮುಂಡರಗಿ
		112) ನರಗುಂದ
		113) ರೋಣ
		114) ಗದಗ್
		115) ಶಿರಹಟ್ಟಿ
19	ಹಾಸನ	116) ಅರಸೀಕೆರೆ
		117) ಚನ್ನರಾಯಪಟ್ಟಣ
		118) ಬೇಲೂರು
		119) ಹೊಳೆನರಸೀಪುರ
20	ಚಿಕ್ಕಮಗಳೂರು	120) ಚಿಕ್ಕಮಗಳೂರು

		121) ಕಡೂರು
21	ಶಿವಮೊಗ್ಗ	122) ಭದ್ರಾವತಿ
		123) ಶಿಕಾರಿಪುರ
22	ಹಾವೇರಿ	124) ರಾಣೇಬೆನ್ನೂರು
		125) ಹಿರೇಕೆರೂರು
		126) ಸವಣೂರು
23	ಧಾರವಾಡ	127) ನವಲಗುಂದ
		128) ಕುಂದಗೋಳ

1335 (1380) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಂದಾಯ ಜಮೀನುಗಳ ನೋಂದಣಿಯನ್ನು ನಿಷೇಧಿಸಿದ್ದರಿಂದ ಸರ್ಕಾರಕ್ಕೆ ರಾಜಸ್ವ ನಷ್ಟ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಕಾರಣಗಳೇನು,

ಇ) ಸದರಿ ಆಧ್ಯಾದೇಶವನ್ನು ಸರ್ಕಾರವು ರದ್ದುಪಡಿಸುವುದೇ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಕಂದಾಯ ನಿವೇಶನಗಳ ನೋಂದಣಿಯನ್ನು ನಿಷೇಧಿಸಿರುವುದಿಲ್ಲ ಆದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

1337 (1789) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ) – ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೆಮ್ಮದಿ ಕಾರ್ಯಕ್ರಮದಡಿ ಉಡುಪಿ ತಾಲ್ಲೂಕಿನಲ್ಲಿ ಎಷ್ಟು ಟೆಲಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ (ವಿವರ ನೀಡುವುದು),

ಆ) ಈ ಕೇಂದ್ರಗಳಲ್ಲಿ ಯಾವ ಯಾವ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ?

ಶ್ರೀ ಕುಮಾರಸ್ವಾಮಿ ಹೆಚ್ ಡಿ (ಮಾನ್ಯ ಮುಖ್ಯಮಂತ್ರಿಗಳು)

ಅ) ನೆಮ್ಮದಿ ಕಾರ್ಯಕ್ರಮದಡಿ ಉಡುಪಿ ತಾಲ್ಲೂಕಿನಲ್ಲಿ ಒಟ್ಟು 4 (ನಾಲ್ಕು) ಟೆಲಿ ಕೇಂದ್ರಗಳನ್ನು ಈ ಕೆಳಕಂಡ ಹೋಬಳಿಗಳಲ್ಲಿ ಪ್ರಾರಂಭಿಸಲಾಗಿದೆ

1 ಬ್ರಹ್ಮಾವರ

2 ಕಾಪು

3 ಕೋಟ

4 ಉಡುಪಿ

ಆ) ಈ ಕೇಂದ್ರಗಳಲ್ಲಿ ಸದ್ಯಕ್ಕೆ ಪಹಣಿ ಪತ್ರಗಳನ್ನು (Copies of RTC) ಪಡೆಯುವ ಸೌಲಭ್ಯ ಒದಗಿಸಲಾಗುತ್ತಿದೆ

1338 (1790) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2006– 07 ನೇ ಸಾಲಿನಲ್ಲಿ ಉಡುಪಿ ತಾಲ್ಲೂಕಿನಲ್ಲಿ ಅತಿವೃಷ್ಟಿ, ಪ್ರವಾಹದಿಂದಾಗಿ ಉಂಟಾದ ಪೂರ್ಣ ನಷ್ಟ ಎಷ್ಟು (ವಿವರಗಳನ್ನು ವಿಧಾನಸಭಾ ಕ್ಷೇತ್ರವಾರು ಒದಗಿಸುವುದು),

ಆ) ಈವರೆಗೂ ನೀಡಲಾದ ಪರಿಹಾರ ಮೊತ್ತವೆಷ್ಟು (ವಿವರವನ್ನು ವಿಧಾನಸಭಾ ಕ್ಷೇತ್ರವಾರು ನೀಡುವುದು),

ಇ) ಉಡುಪಿ ತಾಲ್ಲೂಕಿನಲ್ಲಿ ನಿರಂತರ ಪ್ರವಾಹದಿಂದ ಪೀಡಿತವಾಗುತ್ತಿರುವ ಗ್ರಾಮಗಳಲ್ಲಿ ಶಾಶ್ವತ ಪರಿಹಾರ ಕಾರ್ಯಕ್ರಮ ರೂಪಿಸಲಾಗುವುದೇ,

ಈ) ಹಾಗಿದ್ದಲ್ಲಿ, ಕೈಗೊಂಡಿರುವ ಕಾಮಗಾರಿಗಳು ಯಾವುವು ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) 2006 – 07 ನೇ ಸಾಲಿನಲ್ಲಿ ಉಡುಪಿ ತಾಲ್ಲೂಕಿನಲ್ಲಿ ಅತೀವೃಷ್ಟ/ಪ್ರವಾಹ ಸಂಭವಿಸಿರುವುದಿಲ್ಲ ಆದರೆ ತಾಲ್ಲೂಕಿನಲ್ಲಿ ಮಳೆಗಾಳಿ ಪ್ರಕೃತಿ ವಿಕೋಪದಿಂದ ಹಾನಿಯಾದ ನಷ್ಟದ ಪ್ರಮಾಣ ಕೆಳಕಂಡಂತಿದೆ

1) ಜಿಲ್ಲಾ ಪಂಚಾಯತ್ ರಸ್ತೆಗಳು ಸಂಖ್ಯೆ	101	ರೂ 273 00 ಲಕ್ಷ
2) ಲೋಕೋಪಯೋಗಿ ರಸ್ತೆಗಳು ಸಂಖ್ಯೆ	16	ರೂ 150 00 ಲಕ್ಷ
3) ಬಂದರು ಮತ್ತು ಮೀನುಗಾರಿಕೆ ರಸ್ತೆಗಳು ಸಂಖ್ಯೆ	30	ರೂ 160 50 ಲಕ್ಷ
4) ಸಮುದ್ರ ಕರೆತದಿಂದ ನಷ್ಟ	961 ಮೀ	ರೂ 84 80 ಲಕ್ಷ
5) ಸಾರ್ವಜನಿಕ ಆಸ್ತಿಪಾಸ್ತಿ	201 ಸಂಖ್ಯೆ	ರೂ 158 40 ಲಕ್ಷ
6) ಜೀವ ಹಾನಿ ಸಂಖ್ಯೆ	11	ರೂ 8 50 ಲಕ್ಷ
ಒಟ್ಟು		**ರೂ 835 20 ಲಕ್ಷ**

ಆ) ಪ್ರಕೃತಿ ವಿಕೋಪಗಳಾದ ಮಳೆಗಾಳಿಯಿಂದ ಆಗಿರುವ ಹಾನಿಗೆ ಪರಿಹಾರ ನೀಡಲಾದ ವಿವರಗಳು ಕೆಳಕಂಡಂತಿವೆ

ಬ್ರಹ್ಮಾವರ –

1) ಜೀವಹಾನಿ	1 ಸಂಖ್ಯೆ	ರೂ 50,000
2) ಪಕ್ಕಾಮನೆ ಪೂರ್ತಿ ಹಾನಿಗೆ ಪರಿಹಾರ	8 ಸಂಖ್ಯೆ	ರೂ 56,000
3) ಪಕ್ಕಾಮನೆ ಭಾಗಶಃ ಹಾನಿಗೆ ಪರಿಹಾರ	90 ಸಂಖ್ಯೆ	ರೂ 1,12,890
ಒಟ್ಟು		**2, 18, 890**

ಉಡುಪಿ

1) ಜೀವಹಾನಿ	9 ಸಂಖ್ಯೆ	ರೂ 7,50,000
2) ಪಕ್ಕಾಮನೆಪೂರ್ತಿ ಹಾನಿಗೆ ಪರಿಹಾರ	4 ಸಂಖ್ಯೆ	ರೂ 36,000
3) ಪಕ್ಕಾಮನೆ ಭಾಗಶಃ ಹಾನಿಗೆ ಪರಿಹಾರ	43 ಸಂಖ್ಯೆ	ರೂ 58,200
4) ಬೆಂಕಿಯಿಂದ ಮನೆ ಪೂರ್ತಿ ಹಾನಿಗೆ ಪರಿಹಾರ	1 ಸಂಖ್ಯೆ	ರೂ 10,000
5) ಬೆಂಕಿಯಿಂದ ಭಾಗಶಃ ಹಾನಿಗೆ ಪರಿಹಾರ	4 ಸಂಖ್ಯೆ	ರೂ 6,800
	ಒಟ್ಟು	**ರೂ 8,61,000**

ಕಾಪು

1) ಜೀವಹಾನಿ	1 ಸಂಖ್ಯೆ	ರೂ 50,000
2) ತೋಟಗಾರಿಕೆ ಬೆಳೆಹಾನಿ	2 ಸಂಖ್ಯೆ	ರೂ 213
3) ಪಕ್ಕಾಮನೆ ಭಾಗಶಃ ಹಾನಿ	54 ಸಂಖ್ಯೆ	ರೂ 62,100
	ಒಟ್ಟು	**1, 12, 313**

ಇ) ತಾಲ್ಲೂಕಿನಲ್ಲಿ ಪ್ರವಾಹ ಉಂಟಾಗುವ ಪ್ರದೇಶಗಳನ್ನು ಗುರುತಿಸಲಾಗಿದ್ದು ಈ ಸ್ಥಳಗಳಲ್ಲಿ ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ

ಈ) ಉಡುಪಿ ತಾಲ್ಲೂಕಿನಲ್ಲಿ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ

1) 30 ರಸ್ತೆ ಕಾಮಗಾರಿಗಳು	ರೂ 86 00 ಲಕ್ಷ
2) 24 ಕಡೆಗೋಡೆ ಕಾಮಗಾರಿಗಳು	ರೂ 87 80 ಲಕ್ಷ
3) 1 ಕುಡಿಯುವ ನೀರಿನ ಕಾಮಗಾರಿಗಳು	ರೂ 5 00 ಲಕ್ಷ
4) 2 ಇತರೆ ಕಾಮಗಾರಿಗಳು	ರೂ 4 00 ಲಕ್ಷ
ಒಟ್ಟು	**ರೂ 182 80 ಲಕ್ಷ**

ಕಾಮಗಾರಿಗಳು ಪ್ರಗತಿ ಹಂತದಲ್ಲಿರುತ್ತವೆ

1340 (1792) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ) – ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕಿನಲ್ಲಿ ಸುವರ್ಣ ಯೋಜನೆಯಡಿ ಎಷ್ಟು ನಿರುದ್ಯೋಗಿ ಯುವಕ ಯುವತಿಯರಿಗೆ ಸರ್ಕಾರ ಉದ್ಯೋಗ ಒದಗಿಸಲಾಗಿದೆ (ವಿಧಾನಸಭಾ ಕ್ಷೇತ್ರವಾರು ಅಭ್ಯರ್ಥಿಗಳ ವಿವರ ನೀಡುವುದು)?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಉಡುಪಿ ತಾಲ್ಲೂಕಿನಲ್ಲಿ ಸುವರ್ಣ ಕಾಯಕ ಶಿಕ್ಷಣ ಯೋಜನೆಯಡಿಯಲ್ಲಿ 189 ಅಭ್ಯರ್ಥಿಗಳು ತರಬೇತಿ ಪಡೆಯುತ್ತಿದ್ದಾರೆ

ವಿಧಾನಸಭಾ ಕ್ಷೇತ್ರವಾರು ಅಭ್ಯರ್ಥಿಗಳ ವಿವರ

1) ಉಡುಪಿ – 96

2) ಬ್ರಹ್ಮಾವರ – 60

3) ಕಾಪು – 33

ಒಟ್ಟು 189

1341 (2044) ಶ್ರೀ ಕೃಷ್ಣ ಪಾಲೇಮಾರ್ ಜೆ (ಸುರತ್ಕಲ್) – ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2005–06 ಹಾಗೂ 2006–07 ನೇ ಸಾಲಿನಲ್ಲಿ ರಾಜ್ಯದ ಎಷ್ಟು ಜನ ಬಡ ನೇಕಾರರ ಕುಟುಂಬಗಳಿಗೆ ಸರ್ಕಾರ ಮನೆಗಳನ್ನು ಒದಗಿಸಿಕೊಟ್ಟಿದೆ,

ಆ) ಯಾವ ಯೋಜನೆಗಳಲ್ಲಿ ಸರ್ಕಾರ ಈ ಹಂಚಿಕೆಯನ್ನು ಮಾಡಲಾಗಿದೆ

ಇ) 10 ಸಾವಿರ ಮನೆಗಳನ್ನು ಬಡ ನೇಕಾರರಿಗೆ ಹಂಚಿಕೆ ಮಾಡುವ ಸರ್ಕಾರದ ಯೋಜನೆಯು ಈಗ ಯಾವ ಹಂತದಲ್ಲಿದೆ,

ಈ) ಹಾಗಿದ್ದಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಎಷ್ಟು ಜನ ಬಡ ನೇಕಾರರಿಗೆ ಸೌಲಭ್ಯವನ್ನು ನೀಡಲಾಗಿದೆ?

ಶ್ರೀ ಅಪ್ಪಾಸಾಹೇಬ್(ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಜವಳಿ ಸಚಿವರು)

ಅ) 2005–06 ನೇ ಸಾಲಿನಲ್ಲಿ 1498 ಮತ್ತು 2006–07 ನೇ ಸಾಲಿನಲ್ಲಿ 365 ಹೀಗೆ ಒಟ್ಟು 1863 ವಸತಿ ರಹಿತ ನೇಕಾರರಿಗೆ ವಸತಿ ಕಾರ್ಯಗಾರಗಳನ್ನು ಒದಗಿಸಲಾಗಿದೆ

ವರ್ಷ	ಕೈಮಗ್ಗ ನೇಕಾರರಿಗೆ	ವಿದ್ಯುತ್ ಮಗ್ಗ ನೇಕಾರರಿಗೆ	ಒಟ್ಟು
2005–06	**1387**	**111**	**1498**
2006–07	**100**	**265**	**365**

ಆ) ಕೇಂದ್ರ ಪುರಸ್ಕೃತ ಕೈಮಗ್ಗ ನೇಕಾರರಿಗೆ ವಸತಿ ಕಾರ್ಯಾಗಾರ ಯೋಜನೆ ಜಿಲ್ಲಾ ವಲಯದ ಕೈಮಗ್ಗ ಉದ್ದಿಮೆಗಳಿಗೆ ಸಹಾಯ ಯೋಜನೆ ಮತ್ತು ರಾಜ್ಯ ವಲಯದ ವಿದ್ಯುತ್ ಮಗ್ಗ ನೇಕಾರರಿಗೆ ವಸತಿ ಕಾರ್ಯಾಗಾರ ಯೋಜನೆಗಳಡಿ ಸದರಿ ವಸತಿ ಕಾರ್ಯಾಗಾರಗಳನ್ನು ಒದಗಿಸಲಾಗಿದೆ

ಇ) ಕೈಮಗ್ಗ ನೇಕಾರರು ಆಶ್ರಯ ಯೋಜನೆಯಡಿ ಮನೆ ಕಟ್ಟಿಕೊಳ್ಳುವಾಗ ಶೆಡ್‌ಸಹಿತ ಮನೆ ಕಟ್ಟಿಕೊಳ್ಳಲು ರೂ 25,000/– ಗಳ ನಿರ್ಮಾಣ ವೆಚ್ಚದ ಜೊತೆಗೆ ಶೆಡ್ ನಿರ್ಮಾಣಕ್ಕೆ ರೂ 5,000/– ಗಳನ್ನು ಹೆಚ್ಚುವರಿಯಾಗಿ ಸೇರಿಸಿ ಒಟ್ಟು ರೂ 30,000/– ಗಳನ್ನು ನಿಗದಿಪಡಿಸಲಾಗಿದ್ದು, ಸದರಿ ಯೋಜನೆಯಡಿ ಈವರೆಗೆ 1513 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದ್ದು ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮದ ಮುಖಾಂತರ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ

ಈ) 2006–07 ನೇ ಸಾಲಿನ ಆಯವ್ಯಯದಲ್ಲಿ ನೇಕಾರರ ಆಶ್ರಯ ಕಾರ್ಯಕ್ರಮವನ್ನು ಪ್ರಾಯೋಗಿಕವಾಗಿ ಬಿಜಾಪುರ, ಬಾಗಲಕೋಟೆ, ಗದಗ್ ಮತ್ತು ಧಾರವಾಡ ಜಿಲ್ಲೆಗಳ ಕೈಮಗ್ಗ ನೇಕಾರರಿಗೆ ಅನುಷ್ಠಾನಗೊಳಿಸಲಾಗುತ್ತಿದೆ

1342 (2045) ಶ್ರೀ ಕೃಷ್ಣ ಪಾಲೇಮಾರ್ ಜೆ (ಸುರತ್ಕಲ್) – ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳಲ್ಲಿ ವಿವಿಧ ದರ್ಜೆಯ ಒಟ್ಟು ಎಷ್ಟು ಉದ್ಯೋಗಗಳನ್ನು ನೀಡಲಾಗಿದೆ,

ಆ) ಸರೋಜಿನಿ ಮಹಿಷಿ ವರದಿಯ ಪ್ರಕಾರ ಅದರಲ್ಲಿ ಕನ್ನಡಿಗರ ಪ್ರಮಾಣ ಎಷ್ಟು,

ಇ) ಕೈಗಾರಿಕಾ ಸಂಸ್ಥೆಗಳು ಉದ್ಯೋಗಗಳನ್ನು ನೀಡುವಾಗ ಅನುಸರಿಸಬೇಕಾದ ನೀತಿ – ನಿಯಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲು ಸರ್ಕಾರ ಸ್ಪಷ್ಟ ನಿರ್ದೇಶನವನ್ನು ನೀಡಿಲ್ಲವೆ,

ಈ) ಉದ್ಯೋಗ ನೀಡಕೆಯಲ್ಲಿ ಕನ್ನಡಿಗರಿಗೆ ಅನ್ಯಾಯ ಉಂಟು ಮಾಡಿದ ಕೈಗಾರಿಕೆಗಳ ಮಾಲೀಕರ ಮೇಲೆ ಸರ್ಕಾರ ಕ್ರಮ ಕೈಗೊಂಡಿದೆಯೇ,

ಉ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಘಟಕಗಳಲ್ಲಿ ಕನ್ನಡಿಗ ನೌಕರರ ಸಂಖ್ಯೆ ಎಷ್ಟು,

ಊ) ಕನ್ನಡಿಗರಿಗೆ ಸಿಗಬೇಕಾದ ಉದ್ಯೋಗ ಅವಕಾಶಗಳನ್ನು ನ್ಯಾಯಸಮ್ಮತವಾಗಿ ದೊರಕಿಸಿಕೊಡುವಲ್ಲಿ ಸರ್ಕಾರದ ಪರಿಣಾಮಕಾರಿ ಕ್ರಮಗಳೇನು?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಡಾ॥ ಸರೋಜಿನಿ ಮಹಿಷಿ ವರದಿಯನ್ವಯ 50 ಕ್ಕಿಂತ ಹೆಚ್ಚು ಕಾರ್ಮಿಕರುಳ್ಳ ಕಾರ್ಯನಿರತ ಬೃಹತ್, ಮಧ್ಯಮ ಮತ್ತು ಸಣ್ಣ ಕೈಗಾರಿಕಾ ಘಟಕಗಳ ಸಂಖ್ಯೆ 892 ಆಗಿದ್ದು, ಅವುಗಳಲ್ಲಿ ಎ,ಬಿ,ಸಿ,ಡಿ ದರ್ಜೆಯ ಒಟ್ಟು ಕಾರ್ಮಿಕರ ಸಂಖ್ಯೆ 2,60,682 ಇರುತ್ತದೆ

ಆ) ಡಾ॥ ಸರೋಜಿನಿ ಮಹಿಷಿ ವರದಿ ಪ್ರಕಾರ ಕನ್ನಡಿಗರ ಸಂಖ್ಯೆ 2,51,445 ಇದ್ದು ಶೇಕಡ 96 ರ ಪ್ರಮಾಣದಲ್ಲಿರುತ್ತಾರೆ

ಇ) ಸ್ಪಷ್ಟ ನಿರ್ದೇಶನ ನೀಡಿದೆ

ಈ) ಡಾ॥ ಸರೋಜಿನಿ ಮಹಿಷಿ ವರದಿಯನ್ವಯ ನಿಗದಿತ ಪ್ರಮಾಣದಲ್ಲಿ ಕನ್ನಡಿಗರಿಗೆ/ ಸ್ಥಳೀಯರಿಗೆ ಉದ್ಯೋಗ ನೀಡದ ಒಟ್ಟು 127 ಮಧ್ಯಮ ಬೃಹತ್ ಘಟಕಗಳಿಗೆ ಮೇ, ಜೂನ್ 2005 ರಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರಗಳ ಮೂಲಕ ನೋಟೀಸ್‌ನ್ನು ಜಾರಿಗೊಳಿಸಲಾಗಿದೆ ಅವುಗಳ ಪೈಕಿ 64 ಘಟಕಗಳು ಕನ್ನಡಿಗರಿಗೆ / ಸ್ಥಳೀಯರಿಗೆ ನಿಗದಿತ ಪ್ರಮಾಣದ ಉದ್ಯೋಗ ನೀಡುವುದರ ಮೂಲಕ ನ್ಯೂನತೆಯನ್ನು ಸರಿಪಡಿಸಿಕೊಂಡಿರುತ್ತಾರೆ ಮುಂದಿನ ನೇಮಕಾತಿಯಲ್ಲಿ ನ್ಯೂನತೆಯನ್ನು ಸರಿಪಡಿಸಿಕೊಂಡು ನಿಗದಿತ ಪ್ರಮಾಣದಲ್ಲಿ ಕನ್ನಡಿಗರಿಗೆ/ಸ್ಥಳೀಯರಿಗೆ ಉದ್ಯೋಗ ನೀಡುವುದಾಗಿ 53 ಘಟಕಗಳು ಉತ್ತರವನ್ನು ನೀಡಿವೆ 6 ಕೈಗಾರಿಕಾ ಘಟಕಗಳು ಮುಚ್ಚಲ್ಪಟ್ಟಿದ್ದು ಉಳಿದ 4 ಘಟಕಗಳಿಂದ ಪ್ರತಿಕ್ರಿಯೆಯನ್ನು ನಿರೀಕ್ಷಿಸಲಾಗಿದೆ

ಉ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಡಾ॥ ಸರೋಜಿನಿ ಮಹಿಷಿ ವರದಿಯಂತೆ 29 ಘಟಕಗಳಲ್ಲಿರುವ ಒಟ್ಟು ಕಾರ್ಮಿಕರ ಸಂಖ್ಯೆ 7255 ಆಗಿದ್ದು ಕನ್ನಡಿಗರ ಸಂಖ್ಯೆ 6803 ಆಗಿರುತ್ತದೆ

ಊ) ಹೊಸದಾಗಿ ಪ್ರಾರಂಭವಾಗುವ ಮತ್ತು ಹಾಲಿ ಇರುವ ಕೈಗಾರಿಕಾ ಘಟಕಗಳು ಕೈಗೊಳ್ಳುವ ವಿಸ್ತರಣೆ ಯೋಜನೆ ಸಮಯದಲ್ಲಿ ಇಲಾಖೆಯಿಂದ ನೀಡುವ ಪರವಾನಿಗಿ ಪ್ರೋತ್ಸಾಹ, ರಿಯಾಯಿತಿ ಹಾಗೂ ಮೂಲಭೂತ ಸೌಕರ್ಯಗಳ ಮಂಜೂರಾತಿ ಆದೇಶದಲ್ಲಿ ಡಾ॥ ಸರೋಜಿನಿ ಮಹಿಷಿ ವರದಿಯನ್ವಯ ಸ್ಥಳೀಯರಿಗೆ/ ಕನ್ನಡಿಗರಿಗೆ ಉದ್ಯೋಗ ನೀಡುವ ಷರತ್ತನ್ನು ವಿಧಿಸಲಾಗುತ್ತಿದೆ ಈ ರೀತಿ ವಿಧಿಸಿರುವ ಷರತ್ತಿನನ್ವಯ ಅನುಷ್ಠಾನವಾಗುತ್ತಿರುವ ಬಗ್ಗೆ ಪರಿಶೀಲನೆಯನ್ನು ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಏಕಗವಾಕ್ಷಿ ಸಭೆಯಲ್ಲಿ ಪರಿಶೀಲಿಸಿ ಸೂಕ್ತ ಕ್ರಮ ಜರುಗಿಸಲಾಗುತ್ತಿದೆ ಜಿಲ್ಲಾ ಮಟ್ಟದ ವರದಿಯ ಮೇಲೆ ರಾಜ್ಯ ಮಟ್ಟದಲ್ಲಿ ಪರಾಮರ್ಶೆ ನಡೆಸಿ, ನಿಗದಿತ ಪ್ರಮಾಣದಲ್ಲಿ ಕನ್ನಡಿಗರಿಗೆ ಉದ್ಯೋಗ ನೀಡದ ಕೈಗಾರಿಕಾ ಘಟಕಗಳಿಗೆ ನೋಟೀಸ್ ನೀಡುವ ಮತ್ತು ಕ್ರಮ ಜರುಗಿಸುವ ಬಗ್ಗೆ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಕ್ತ ಮಾರ್ಗದರ್ಶನ, ಸೂಚನೆಗಳನ್ನು ನೀಡಲಾಗುತ್ತಿದೆ

1343 (1651) ಶ್ರೀ ಕೃಷ್ಣಪ್ಪ ಎಂ ಟಿ (ತುರುವೇಕೆರೆ) – ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಸರ್ಕಾರಿ ನೌಕರರ 5 ನೇ ವೇತನ ಆಯೋಗವು ಮಾಡಿರುವ ಶಿಫಾರಸ್ಸುಗಳಾವುವು,

ಆ) ಈ ಎಲ್ಲಾ ಶಿಫಾರಸ್ಸುಗಳನ್ನು ಯಥಾವತ್ತಾಗಿ ಸರ್ಕಾರ ಒಪ್ಪಿಕೊಂಡಿದೆಯೇ,

ಇ) ಹಾಗಿದ್ದಲ್ಲಿ, ಯಾವಾಗ ಸಂಪೂರ್ಣವಾಗಿ ಅನುಷ್ಠಾನ ಗೊಳಿಸಲಾಗುವುದು?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)

ಅ) 5 ನೇ ರಾಜ್ಯ ವೇತನ ಆಯೋಗವು ಸಲ್ಲಿಸಿರುವ ತನ್ನ ಅಂತಿಮ ವರದಿಯ ಮೊದಲನೆಯ ಸಂಪುಟದಲ್ಲಿ ಮಾಡಿರುವ ಶಿಫಾರಸ್ಸುಗಳ ಸಾರಾಂಶದ ಪ್ರತಿಯನ್ನು ಲಗತ್ತಿಸಿದೆ

ಆ) ಸರ್ಕಾರವು ವೇತನ ಆಯೋಗದ ಎಲ್ಲಾ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಉದ್ದೇಶಿಸಿದೆ

ಇ) ಆಯೋಗವು ಶಿಫಾರಸ್ಸು ಮಾಡಿರುವಂತೆ, ದಿನಾಂಕ 1–07–2005 ರಿಂದ ಕಾಲ್ಪನಿಕವಾಗಿ ಅನ್ವಯವಾಗುವಂತೆ ವೇತನವನ್ನು ನಿಗದಿಪಡಿಸಿ, ಪರಿಷ್ಕರಿಸಿದ ವೇತನ ಮತ್ತು ಪಿಂಚಣಿಯನ್ನು ದಿನಾಂಕ 1–04–2007 ರಿಂದ ವಿತರಿಸಲಾಗುವುದು ಹಾಗೂ ದಿನಾಂಕ 1–04–2006 ರಿಂದ 31–3–2007 ರ ವರೆಗಿನ ಬಾಕಿ ವೇತನವನ್ನು 2008–09 ನೇ ಸಾಲಿನಲ್ಲಿ ವಿತರಿಸಲಾಗುವುದು

ವೇತನ ಆಯೋಗದ ಶಿಫಾರಸ್ಸುಗಳ ಸಾರಾಂಶ

1351 (1805) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) – ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ ಮತ್ತು ಆ) ರಾಜ್ಯ ಸರ್ಕಾರಕ್ಕೆ ಕಳೆದ ಮೂರು ವರ್ಷಗಳಿಂದ ವಿವಿಧ ಮೂಲಗಳಿಂದ ಬಂದಿರುವ ಆದಾಯ ಮತ್ತು ತೆರಿಗೆಯ ಮೊತ್ತವೆಷ್ಟು, ಇದೇ ಅವಧಿಯಲ್ಲಿ ಸರ್ಕಾರವು ಎಷ್ಟು ಮೊತ್ತದ ಆದಾಯ ಮತ್ತು ತೆರಿಗೆ ಸಂಗ್ರಹದ ಗುರಿಯನ್ನು ಹೊಂದಿತ್ತು ಹಾಗೂ ಯಾವ ಯಾವ ವರ್ಷಗಳಲ್ಲಿ ಗುರಿ ಸಾಧನೆಯಾಗಿದೆ,

ಇ) ಮೇಲ್ಕಂಡ ಅವಧಿಯಲ್ಲಿ ಸರ್ಕಾರವು ವಿವಿಧ ಇಲಾಖೆಗಳಿಗೆ ಮಾಡಿರುವ ವೆಚ್ಚದ ವಿವರಗಳೇನು,

ಈ) ಇದೇ ಅವಧಿಯಲ್ಲಿ ರಾಜ್ಯದ ಆರ್ಥಿಕ ಪರಿಸ್ಥಿತಿ ಲಾಭದಲ್ಲಿತ್ತೆ ಅಥವಾ ನಷ್ಟದಲ್ಲಿತ್ತೆ,

ಉ) ಈ ಅವಧಿಯಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ವಿವಿಧ ಯೋಜನೆಗಳಿಗಾಗಿ ಬಂದಿರುವ ಹಣದ ಮೊತ್ತವೆಷ್ಟು (ಪೂರ್ಣ ವಿವರಗಳನ್ನು ಒದಗಿಸುವುದು)

ಊ) ಈ ಅವಧಿಯಲ್ಲಿ ರಾಜ್ಯ ಸರ್ಕಾರವು ಓವರಡ್ರಾಫ್ಟ್ ಅಥವಾ ಇತರೆ ಸಂಸ್ಥೆಗಳಿಂದ ಸಾಲವನ್ನೇನಾದರೂ ಪಡೆದುಕೊಂಡಿದೆಯೇ (ವಿವರಗಳನ್ನು ಒದಗಿಸುವುದು)

ಋ) ಪಡೆದುಕೊಂಡಿದ್ದಲ್ಲಿ ಯಾವ ಕಾರಣಗಳಿಗೆ ಸೌಲಭ್ಯವನ್ನು ಪಡೆದುಕೊಳ್ಳಲಾಗಿದೆ,

ಋೂ) ಇದನ್ನು ಮರುಪಾವತಿ ಮಾಡಲಾಗಿದೆಯೇ? (ಪೂರ್ಣ ವಿವರಗಳನ್ನು ಒದಗಿಸುವುದು)

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)

ಅ ಮತ್ತು ಆ)

(ಕೋಟಿ ರೂ ಗಳಲ್ಲಿ)

	2003–04		2004–2005		2005–2006	
	ಗುರಿ	ಸಾಧನೆ	ಗುರಿ	ಸಾಧನೆ	ಗುರಿ	ಸಾಧನೆ
ರಾಜ್ಯ ತೆರಿಗೆ	13225 91	15814 94	18718 37	19950 76	22440 56	22844 97
ಕೇಂದ್ರ ಸರ್ಕಾರದ ಅನುದಾನಗಳು	2498 70	1986 57	2305 59	2146 56	2687 61	3632 37
ತೆರಿಗೇಯೆತರ	1713 32	2958 38	4486 35	4472 34	4090 30	3874 71

ರಾಜಸ್ವ

ಇ) ಮೇಲ್ಕಂಡ ಅವಧಿಯಲ್ಲಿ ಸರ್ಕಾರವು ವಿವಿಧ ಇಲಾಖೆಗಳಿಗೆ ಮಾಡಿರುವ ವೆಚ್ಚದ ವಿವರ ಈ ಕೆಳಕಂಡಂತಿದೆ

	2003–04	2004–05	2005–06
ಯೋಜನೆ	7380 13	10193 85	11131 02
ಯೋಜನೇತರ	17945 18	20023 11	23842 27
ಒಟ್ಟು	**25325 31**	**30216 96**	**34973 29**

ಈ) ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಮತ್ತು ನಷ್ಟದ ದೃಷ್ಟಿಯಿಂದ ನೋಡಲಾಗುವುದಿಲ್ಲ ಬದಲಾಗಿ ವಿತ್ತೀಯ ಸುಚ್ಯಾಂಕಗಳಾದ ರಾಜಸ್ವ ಕೊರತೆ/ ಹೆಚ್ಚಳ ಮತ್ತು ವಿತ್ತೀಯ ಕೊರತೆಯ ಮುಖಾಂತರ ಸೂಚಿಸಲಾಗುತ್ತದೆ

	2003–04	2004–05	2005–06
ರಾಜಸ್ವ ಕೊರತೆ (–)/ಹೆಚ್ಚಳ (+)	–524 82	1637 81	2311 15
ವಿತ್ತೀಯ ಕೊರತೆ	4501 14	3600 45	3687 00

ಉ) ಈ ಅವಧಿಯಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ವಿವಿಧ ಯೋಜನೆಗಳಿಗಾಗಿ ಬಂದಿರುವ ಹಣ ಈ ಕೆಳಕಂಡಂತಿದೆ 05–06ನೇ ಕಾಲಂನ ಸಾಲದ ಅಂಶದ ಅಡಿಯಲ್ಲಿರುವ ಋಣಾತ್ಮಕ ಚಿನ್ಹೆಯು, 12ನೇ ಆರ್ಥಿಕ ಆಯೋಗದ ಶಿಫಾರಸ್ಸಿನನ್ವಯ, ಕ್ರೋಢಿಕೃತ ಸಾಲದ ವರ್ಗಾವಣೆಯಿಂದಾಗಿ ಬಾಕಿಯಾದ ಸಾಲವನ್ನು ಪ್ರತಿನಿಧಿಸುತ್ತದೆ

	2003–04		2004–05		2005–06	
	ಅನುದಾನ	ಸಾಲ	ಅನುದಾನ	ಸಾಲ	ಅನುದಾನ	ಸಾಲ
ಯೋಜನೇತರ ಅನುದಾನ	529 85	1 98	317 49	0 55	1735 75	(–) 406 87
ಕಾರ್ಯಕ್ರಮ ಗಳಿಗೆ ಅನುದಾನ	795 58	1442 90	1036 03	1531 45	915 28	1066 12
ಕೇಂದ್ರ ಯೋಜನಾ	41 95	--	46 01	--	36 92	--

ಕಾರ್ಯಕ್ರಮಗಳಿಗೆ ಅನುದಾನ						
ಕೇಂದ್ರ ಪುರಸ್ಕೃತ ಯೋಜನಾ ಕಾರ್ಯಕ್ರಮಗಳಿಗೆ ಅನುದಾನ	619 19	12 12	747 03	23 75	944 43	9 41
ಒಟ್ಟು	**1986 57**	**1451 00**	**2146 56**	**1555 75**	**3632 37**	**668 662**

ಊ) 2003–04ನೇ ಸಾಲಿನಲ್ಲಿ ರಾಜ್ಯ ಸರ್ಕಾರ 33 ದಿನಗಳ ಕಾಲ ಓವರ್ ಡ್ರಾಫ್ಟ್ ಸೌಲಭ್ಯವನ್ನು ಪಡೆದಿತ್ತು ಆ ವರ್ಷದಲ್ಲಿ ಓವರ್ ಡ್ರಾಫ್ಟ್ ಪಡೆದ ಒಟ್ಟು ಮೊತ್ತ 757 72 ಕೋಟಿ ರೂಗಳು 2004–05 ಮತ್ತು 2005–06 ರಲ್ಲಿ ರಾಜ್ಯ ಸರ್ಕಾರವು ಓವರ್ ಡ್ರಾಫ್ಟ್ ಸೌಲಭ್ಯವನ್ನು ಪಡೆದಿರುವುದಿಲ್ಲ ಈ 3 ವರ್ಷಗಳಲ್ಲಿ ಇತರೆ ಸಂಸ್ಥೆಗಳಿಂದ ಹಾಗೂ ಭಾರತ ಸರ್ಕಾರದಿಂದ ಪಡೆದ ಸಾಲವನ್ನು ಈ ಕೆಳಗೆ ತೋರಿಸಲಾಗಿದೆ

ಸಂಸ್ಥೆಗಳು	2003–04 ವಾಸ್ತವಿಕ	2004–05 ವಾಸ್ತವಿಕ	2005–06 ವಾಸ್ತವಿಕ
ಭಾರತ ಸರ್ಕಾರದಿಂದ ಸಾಲ	1957 00	1555 75	668 65
ಬಹಿರಂಗ ಮಾರುಕಟ್ಟೆ ಸಾಲ	2778 90	2298 68	414 72
ಎಲ್ಐಸಿ, ಜಿಐಸಿ, ನಬಾರ್ಡ್ ಮತ್ತು ಎನ್‌ಸಿಡಿಸಿಯಿಂದ ಸಾಲ	870 49	268 73	252 87
ಸಣ್ಣ ಉಳಿತಾಯ ಸಂಗ್ರಹಣ ಸಾಲ	2733 05	4386 26	4327 25

ಋ) ರಾಜ್ಯವು ಅಗ್ರಿಮ ಧನದ ಮುಂಗಡವನ್ನು ಪಡೆದ ನಂತರವೂ ಋಣಾತ್ಮಕ ಶಿಲ್ಕಿನಲ್ಲಿದ್ದರೆ, ಭಾರತೀಯ ರಿಸರ್ವ್ ಬ್ಯಾಂಕು ಓವರ್‌ಡ್ರಾಫ್ಟ್ ಸೌಲಭ್ಯವನ್ನು ಒದಗಿಸುತ್ತದೆ ಇಂತಹ ಸಂದರ್ಭದಲ್ಲಿ 33 ದಿನಗಳವರೆಗೆ ಓವರ್‌ಡ್ರಾಫ್ಟ್ ಸೌಲಭ್ಯವನ್ನು ಭಾರತೀಯ ರಿಸರ್ವ್ ಬ್ಯಾಂಕು 2003–04 ರಲ್ಲಿ ಒದಗಿಸಿರುತ್ತದೆ

ಖೂ) ಸಂಸ್ಥೆಗಳಿಂದ ಮತ್ತು ಕೇಂದ್ರ ಸರ್ಕಾರದಿಂದ ಪಡೆದುಕೊಂಡ ಸಾಲಗಳನ್ನು ಆಯಾ ಸಾಲಗಳ ಷರತ್ತು ಮತ್ತು ನಿಬಂಧನೆಗೊಳಪಟ್ಟು ಬಡ್ಡಿಯ ಸಮೇತ ಮರುಪಾವತಿ ಮಾಡಲಾಗುತ್ತಿದೆ ಈ ಮೂರು ವರ್ಷಗಳಲ್ಲಿ ಸಾಲದ ಮರುಪಾವತಿ ಈ ಕೆಳಕಂಡಂತಿದೆ

	2003–04	2004–05	2005–06
1 ಕೇಂದ್ರ ಸರ್ಕಾರದಿಂದ ಪಡೆದ ಸಾಲ	3161 01	3407 59	417 70
2 ಎಲ್‌ಐಸಿ	26 83	34 78	34 73
3 ಜಿಐಸಿ	2 47	11 22	6 16
4 ಎನ್ ಸಿ ಡಿ ಸಿ	37 23	42 13	45 06
5 ನಬಾರ್ಡ್	537 83	351 13	2 45
6 ಸಣ್ಣ ಉಳಿತಾಯ	0 00	0 00	55 69
7 ಮಾರುಕಟ್ಟೆ ಸಾಲಗಳು	176 05	182 55	249 28

1352 (1374) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡ) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2006–07ನೇ ಸಾಲಿನಲ್ಲಿ ಬೆಳಗಾಂವ ಜಿಲ್ಲೆಯಲ್ಲಿ ಬರಗಾಲಪೀಡಿತ ಪ್ರದೇಶಗಳೆಂದು ಘೋಷಿಸಿದ ತಾಲ್ಲೂಕುಗಳಾವುವು, (ಪಟ್ಟಿ ನೀಡುವುದು),

ಆ) ಬರಪೀಡಿತ ತಾಲ್ಲೂಕುಗಳಲ್ಲಿ ಉದ್ಯೋಗ ಸೃಜನಾ ಕಾಮಗಾರಿಗಳನ್ನು ತೆಗೆದುಕೊಳ್ಳಲು ಬೆಳಗಾಂವ ಜಿಲ್ಲೆಗೆ ಬಿಡುಗಡೆಯಾದ ಅನುದಾನ ಎಷ್ಟು,

ಇ) ಈ ಯೋಜನೆಯಡಿ ತಾಲ್ಲೂಕುವಾರು ಹಂಚಿಕೆಯಾದ ಅನುದಾನ ಎಷ್ಟು (ಹಂಚಿಕೆ ವಿವರ ನೀಡುವುದು),

ಈ) ತಾಲ್ಲೂಕುವಾರು ತೆಗೆದುಕೊಂಡ ಕಾಮಗಾರಿಗಳಿಗಾದ ಖರ್ಚು ಮತ್ತು ಸಾಧಿಸಿದ ಪ್ರಗತಿ ಏನು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಬೆಳಗಾಂ ಜಿಲ್ಲೆಯಲ್ಲಿ ಕೆಳಕಂಡ ತಾಲ್ಲೂಕುಗಳನ್ನು ಬರಪೀಡಿತವೆಂದು ಘೋಷಿಸಲಾಗಿದೆ

1 ರಾಮದುರ್ಗ

2 ರಾಯಭಾಗ್

3 ಸವದತ್ತಿ

4 ಬೈಲಹೊಂಗಲ

5 ಹುಕ್ಕೇರಿ

6 ಅಥಣಿ

ಆ) ಬೆಳಗಾಂ ಜಿಲ್ಲೆಗೆ ಬರಪೀಡಿತ ತಾಲ್ಲೂಕುಗಳಲ್ಲಿ ಉದ್ಯೋಗ ಸೃಜನೆ ಕಾಮಗಾರಿಗಳನ್ನು ತೆಗೆದುಕೊಳ್ಳಲು ರೂ 1200 00 ಲಕ್ಷ ಹಣ ಬಿಡುಗಡೆ ಮಾಡಲಾಗಿದೆ

ಇ) ಸರ್ಕಾರವು ಪ್ರತಿ ತಾಲ್ಲೂಕಿಗೆ 2 ಕೋಟಿಯಂತೆ ಅನುದಾನ ಬಿಡುಗಡೆ ಮಾಡಿದೆ

ಈ) ಬರಪೀಡಿತವೆಂದು ಘೋಷಿತ ತಾಲ್ಲೂಕುಗಳಲ್ಲಿ ಕೈಗೆತ್ತಿಕೊಳ್ಳಲಾದ ಕಾಮಗಾರಿಗಳ ಸಂಖ್ಯೆ, ಪೂರ್ತಿಗೊಂಡ ಕಾಮಗಾರಿಗಳ ಸಂಖ್ಯೆ ಹಾಗೂ ವೆಚ್ಚದ ವಿವರಗಳು ಈ ಕೆಳಗಿನಂತಿರುತ್ತವೆ

ತಾಲ್ಲೂಕಿನ ಹೆಸರು	ಮಂಜೂರಾತಿ ನೀಡಲಾದ ಕಾಮಗಾರಿಗಳ ಸಂಖ್ಯೆ	ಪೂರ್ತಿಗೊಂಡ ಕಾಮಗಾರಿಗಳ ಸಂಖ್ಯೆ	ಈವರೆಗೆ ಮಾಡಲಾದ ವೆಚ್ಚ (ರೂ ಲಕ್ಷಗಳಲ್ಲಿ
1 ಹುಕ್ಕೇರಿ	79	49	76 00
2 ಬೈಲಹೊಂಗಲ	115	32	72 83
3 ಸವದತ್ತಿ	88	40	91 74
4 ರಾಮದುರ್ಗ	92	29	75 90

5 ರಾಯಭಾಗ	57	26	92 38
6 ಅಥಣಿ	72	38	97 00
ಒಟ್ಟು	**503**	**214**	**505 85**

1353 (1375) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡ) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂನ ಜಿಲ್ಲೆಗೆ 2006–07ನೇ ಸಾಲಿನಲ್ಲಿ ಅತಿವೃಷ್ಟಿ ಕಾಮಗಾರಿಗಳನ್ನು ತೆಗೆದುಕೊಳ್ಳಲು ಬಿಡುಗಡೆಯಾದ ಅನುದಾನ ಮತ್ತು ಆಹಾರಧಾನ್ಯ ಎಷ್ಟು,

ಆ) ಈ ಯೋಜನೆಯಡಿ ಬೆಳಗಾಂವ ಜಿಲ್ಲೆಯಲ್ಲಿ ಬಿಡುಗಡೆಯಾದ ಅನುದಾನ ಮತ್ತು ಆಹಾರಧಾನ್ಯದ ಪ್ರಮಾಣವೆಷ್ಟು (ತಾಲ್ಲೂಕುವಾರು ವಿವರ ನೀಡುವುದು),

ಇ) ಅತಿವೃಷ್ಟಿಯಲ್ಲಿ ತೆಗೆದುಕೊಂಡ ಕಾಮಗಾರಿಗಳು ಯಾವುವು ಹಾಗೂ ಅವುಗಳ ಪ್ರಗತಿ ಏನು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) 2006–07ನೇ ಸಾಲಿನಲ್ಲಿ ಅತಿವೃಷ್ಟಿ ಕಾಮಗಾರಿಗಳನ್ನು ಕೈಗೊಳ್ಳಲು ರೂ 6793 00 ಲಕ್ಷ ಹಣ ಹಾಗೂ 3500 ಮೆಟನ್ ಆಹಾರಧಾನ್ಯ ಬಿಡುಗಡೆ ಮಾಡಲಾಗಿದೆ

ಆ) 'ಅ' ನಲ್ಲಿರುವಂತೆ, ತಾಲ್ಲೂಕುವಾರು ಅನುದಾನ ಹಾಗೂ ಆಹಾರಧಾನ್ಯ ಬಿಡುಗಡೆ ಮಾಡುವುದಿಲ್ಲ ಜಿಲ್ಲಾವಾರು ಬಿಡುಗಡೆ ಮಾಡಲಾಗುತ್ತದೆ

ಇ) 2006–07ನೇ ಸಾಲಿನಲ್ಲಿ ಅತೀವೃಷ್ಟಿಯಲ್ಲಿ ಒಟ್ಟು 789 ಕಾಮಗಾರಿಗಳಿಗೆ ಮಂಜೂರಾತಿಯನ್ನು ನೀಡಲಾಗಿದ್ದು, ಅವುಗಳ ಪೈಕಿ 310 ಕಾಮಗಾರಿಗಳು ಈಗಾಗಲೇ ಪೂರ್ತಿಗೊಂಡಿದ್ದು, ಉಳಿದ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ

1354 (2046) ಶ್ರೀ ಮೋಹನ್ ಕೃಷ್ಣಶೆಟ್ಟಿ (ಕುಮಟಾ) – ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಮಟಾ ತಾಲ್ಲೂಕಿನ ಮೂರೂರು–ಕಲ್ಲಬ್ಬೆ ಗ್ರಾಮಗಳಲ್ಲಿ ವಿಲೇಜ್ ಫಾರೆಸ್ಟ್ ಪಂಚಾಯತ್ ಎನ್ನುವುದನ್ನು ದುರುಪಯೋಗ ಪಡಿಸಿಕೊಂಡು ಅರಣ್ಯ ಲೂಟಿ, ಕಲ್ಲುಕೋರೆ ಲೂಟಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಅರಣ್ಯ ಲೂಟಿ ಅಕ್ರಮ ಗಣಿಗಾರಿಕೆಯಿಂದ ಕೋಟ್ಯಾಂತರ ರೂಪಾಯಿ ನಷ್ಟ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಹಾಗಿದ್ದಲ್ಲಿ, ಸರ್ಕಾರ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಸಿ ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಕುಮಟಾ ತಾಲ್ಲೂಕಿನಲ್ಲಿ ಮೂರೂರು–ಕಲ್ಲಬ್ಬೆ ಗ್ರಾಮಗಳಲ್ಲಿ ವಿಲ್ಲೇಜ್ ಫಾರೆಸ್ಟ್ ಪಂಚಾಯತ್ ಎನ್ನುವುದನ್ನು ದುರುಪಯೋಗಪಡಿಸಿಕೊಂಡು ಅರಣ್ಯ ಲೂಟಿ ಮಾಡಿದ ಪ್ರಕರಣಗಳು ಈವರೆಗೆ ವರದಿಯಾಗಿರುವುದಿಲ್ಲ ಆದರೆ ಚಿಕ್ಕಪುಟ್ಟ ಅನಧಿಕೃತ ಮರಗಳ್ಳತನ ಪ್ರಕರಣ ನಡೆದ ಬಗ್ಗೆ ಗುನ್ನೆ ಪ್ರಕರಣ ದಾಖಲಿಸಲಾಗಿದ್ದು ವಿವರ ಕೆಳಕಂಡಂತಿದೆ –

ವರ್ಷ	ದಾಖಲಾದ ಪ್ರಕರಣಗಳು	ಜಪ್ತಿ ಮಾಡಿದ	ಅರಣ್ಯ ಉತ್ಪನ್ನದ ಪ್ರಕರಣ	
		ನಾಟಾ	ಜಲಾವು	ಎಳೆ
		ಘ ಮೀ	ಘ ಮೀ	ನಂ
2004–05	8	2 877	4 000	5
2005–06	2	0 840	––	––
2006–07	4	3 629	––	––

ಸದರಿ ಜಮೀನು ಕಂದಾಯ ಇಲಾಖೆಯ ಜಮೀನಾಗಿರುವುದರಿಂದ ಅಕ್ರಮ ಗಣಿಗಾರಿಕೆ ತಡೆಗಟ್ಟುವುದು ಅರಣ್ಯ ಇಲಾಖೆಗೆ ಸಂಬಂಧಿಸಿರುವುದಿಲ್ಲ

ಆ) ಸದರಿ ಈ ಮೇಲಿನ ಸ್ಥಳಗಳಲ್ಲಿ ಕೋಟ್ಯಾಂತರ ರೂಪಾಯಿ ನಷ್ಟ ಉಂಟಾಗುತ್ತಿರುವ ಅರಣ್ಯ ಲೂಟಿ ಅಂದರೆ ಮರಗಳ್ಳತನ ಪ್ರಕರಣಗಳು ನಡೆದಿರುವುದಿಲ್ಲ ಆದರೆ, ಈ

ಮೇಲೆ ನಮೂದಿಸಲಾದಂತೆ ಚಿಕ್ಕಪುಟ್ಟ ಗುನ್ಹೆ ನಡೆದಿದ್ದು ಈ ಕುರಿತು ಪ್ರಕರಣ ದಾಖಲಿಸಲಾಗಿದ್ದು ಕಾನೂನಿನಂತೆ ಕ್ರಮ ಜರುಗಿಸಲಾಗಿದೆ

ಇ) ಯಾವುದೇ ಅರಣ್ಯ ಅಕ್ರಮ ಪ್ರಕರಣಗಳು ಕಂಡು ಬಂದಲ್ಲಿ ಅವುಗಳನ್ನು ನಿಯಂತ್ರಿಸುವ ಕುರಿತು ಅರಣ್ಯ ಸಿಬ್ಬಂದಿಗಳು ಗಸ್ತು ತಿರುಗುವುದು, ರಾತ್ರಿ ಪಹರೆ, ರಕ್ಷಣಾ ಶಿಬಿರಗಳ ನಿರ್ಮಾಣ ಮುಂತಾದ ಅರಣ್ಯ ರಕ್ಷಣಾ ಕ್ರಮಗಳ ಮೂಲಕ ಇಂತಹ ಪ್ರಕರಣ ಪತ್ತೆ ಹಚ್ಚಿ ಕಾನೂನು ಕ್ರಮ ಜರುಗಿಸಲಾಗುತ್ತಿದೆ

1355 (2047) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟಾ) – ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ವ್ಯಾಪಕ ಅರಣ್ಯ ಲೂಟಿಯನ್ನು ತಡೆಗಟ್ಟಲು ಸರ್ಕಾರ ಏನು ಕ್ರಮ ಕೈಗೊಂಡಿದೆ,

ಆ) ಉಪ ವಿಭಾಗೀಯ ಮಟ್ಟದಲ್ಲಿ ಕ್ಷಿಪ್ರ ಕಾರ್ಯಾಚರಣೆ ಪಡೆ ರಚನೆ ಮಾಡುವ ಬಗ್ಗೆ ಸರ್ಕಾರ ಯೋಚಿಸಿದೆಯೇ,

ಇ) ಯೋಚಿಸಿದ್ದರೆ, ಯಾವ ಕ್ರಮ ಕೈಗೊಳ್ಳಲಾಗುವುದು, ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಸಿ ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಉತ್ತರ ಕನ್ನಡ ಜಿಲ್ಲೆಯು ಅರಣ್ಯ ಸಂಪದ್ಭರಿತ ಜಿಲ್ಲೆಯಾಗಿರುವುದರಿಂದ ಅರಣ್ಯ ಸಂಪತ್ತು ಲೂಟಿಯಾಗದಂತೆ ಇಲಾಖೆಯು ಎಲ್ಲಾ ತರಹದ ಮುಂಜಾಗ್ರತಾ ಕ್ರಮವನ್ನು ತೆಗೆದುಕೊಂಡಿದೆ ಮುಖ್ಯವಾಗಿ ಜಿಲ್ಲೆಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳನ್ನು ಒಳಗೊಂಡ ಅರಣ್ಯ ಸಂಚಾರಿ ದಳವನ್ನು ಸ್ಥಾಪಿಸಲಾಗಿದೆ, ಅಷ್ಟೇ ಅಲ್ಲದೇ ಪ್ರತಿ ವಿಭಾಗದಲ್ಲಿ ಅರಣ್ಯ ಜಾಗೃತ ದಳವನ್ನು ನಿರ್ಮಿಸಿ, ಪಾಳಿಯ ಪ್ರಕಾರ ರಾತ್ರಿಯಲ್ಲಿ ಗಸ್ತು ಮಾಡಲಾಗುತ್ತಿದೆ ಅರಣ್ಯ ಸಿಬ್ಬಂದಿಗಳಿಗೆ ಅರಣ್ಯ ಸಂಪತ್ತು ಕಳ್ಳ ಸಾಗಾಣಿಕೆ ಕುರಿತು ಕೂಡಲೇ ಕೇಂದ್ರ ಸ್ಥಾನಕ್ಕೆ ಮಾಹಿತಿ ಪೂರೈಸಲು

ನಿಸ್ತಂತು ಉಪಕರಣಗಳನ್ನು ನೀಡಲಾಗಿದೆ ದಟ್ಟವಾದ ಅರಣ್ಯ ಇರುವ ಪ್ರದೇಶಕ್ಕೆ ಹೋಗುವ ರಸ್ತೆಗಳಲ್ಲಿ ತನಿಖಾ ರಾಣೆಗಳನ್ನು ನಿರ್ಮಿಸಲಾಗಿದೆ ಮತ್ತು ರಾತ್ರಿಯಲ್ಲಿ ಓಡಾಡುವ ವಾಹನ ತಪಾಸಣೆ ಮಾಡಲಾಗುತ್ತಿದೆ

ಆ) ಇಂತಹ ಪ್ರಸ್ತಾವ ಇರುವುದಿಲ್ಲ

ಇ) ಉದ್ಭವಿಸುವುದಿಲ್ಲ

1356 (1883) ಶ್ರೀ ಮುನಿಯಪ್ಪ ಎಸ್ ಎಂ (ಚಿಕ್ಕಬಳ್ಳಾಪುರ) – ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಹಣಕಾಸು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತರು ಬ್ಯಾಂಕಿನಲ್ಲಿ ಸಾಲ ಪಡೆಯಲು ಬೇರೆ ಬ್ಯಾಂಕುಗಳಿಂದ ಬೇ ಬಾಕಿ ಪ್ರಮಾಣ ಪತ್ರ (ಎನ್ ಒ ಸಿ) ಪಡೆಯಲು ಕಷ್ಟ ಪಡುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಬೇ ಬಾಕಿ ಪತ್ರ ಪಡೆಯುವ ಪದ್ಧತಿ ಇಡೀ ರಾಜ್ಯಕ್ಕೆ ಅನ್ವಯಿಸುತ್ತದೆಯೇ, ಅಥವಾ ಸೀಮಿತ ತಾಲ್ಲೂಕುಗಳಿಗೆ ಅನ್ವಯವಾಗುತ್ತದೆಯೇ,

ಇ) ಬ್ಯಾಂಕುಗಳಲ್ಲಿ ಬೇ ಬಾಕಿ ಪ್ರಮಾಣ ಪತ್ರ ನೀಡಲು ಹಣ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಹಾಗಿದ್ದಲ್ಲಿ, ರೈತರಿಗೆ ಹಾಗೂ ಸಾರ್ವಜನಿಕರಿಗೆ ಉಚಿತವಾಗಿ ಬ್ಯಾಂಕುಗಳಲ್ಲಿ ಬೇ ಬಾಕಿ ಪ್ರಮಾಣ ಪತ್ರ ನೀಡುವಂತೆ ಮಾಡಲು ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಮತ್ತು ಹಣಕಾಸು ಸಚಿವರು)

ಅ) ಬಂದಿಲ್ಲ

ಆ) ಇಡೀ ರಾಜ್ಯಕ್ಕೆ ಅನ್ವಯವಾಗುತ್ತದೆ

ಇ) ಬಂದಿದೆ

ಈ) ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಸಾರ್ವಜನಿಕ ವಲಯದ ಬ್ಯಾಂಕುಗಳು ರೈತರಿಗೆ ಹಾಗೂ ಸಾರ್ವಜನಿಕರಿಗೆ ಎನ್ ಒ ಸಿ (ಬೇ ಬಾಕಿ ಪ್ರಮಾಣ ಪತ್ರ) ನೀಡಲು ಆಯಾ ಬ್ಯಾಂಕಿನ ನಿಯಮಾವಳಿಯ ಪ್ರಕಾರ ನಿಗದಿತ ಸೇವಾ ಶುಲ್ಕವನ್ನು ವಸೂಲು ಮಾಡುತ್ತಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

1357 (2054) ಶ್ರೀ ನಾಗರಾಜು ಎಂ ಟಿ ಬಿ (ಹೊಸಕೋಟೆ) .– ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ ವ್ಯಾಪ್ತಿಯ ಮಂಡೂರು ಮತ್ತು ದೊಡ್ಡಬನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ 0 20 1–00 ಎಕರೆ ಹೊಂದಿರುವ ಫಲವತ್ತಾದ ದ್ರಾಕ್ಷಿ, ಮಾವು, ತೆಂಗು, ಬಾಳೆ, ಸಪೋಟ, ರೇಷ್ಮೆ ಇನ್ನಿತರ ವಾಣಿಜ್ಯ ಬೆಳೆಗಳನ್ನು ಬೆಳೆಯುವ ಜಮೀನುಗಳನ್ನು ಮಾಹಿತಿ ಜೈವಿಕ ತಂತ್ರಜ್ಞಾನ ಹಾಗೂ ವುಡ್ ಕ್ರಾಫ್ಟ್ ಇಂಡಿಯಾ ಪ್ರೈ ಲಿ ಸಂಸ್ಥೆಗಾಗಿ ಸ್ವಾಧೀನಪಡಿಸಿಕೊಳ್ಳಲು ಆದೇಶಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಬಂದಿದ್ದಲ್ಲಿ 0 20,1 00 ಎಕರೆ ಫಲವತ್ತಾದ ದ್ರಾಕ್ಷಿ, ಮಾವು, ತೆಂಗು, ಬಾಳೆ, ಸಪೋಟ, ರೇಷ್ಮೆ ಇನ್ನಿತರೆ ವಾಣಿಜ್ಯ ಬೆಳೆಯುವ ಫಲವತ್ತಾದ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲು ಮುಂದಾಗಿರುವುದರಿಂದ ರೈತರನ್ನು ಸಂಕಷ್ಟಕ್ಕೆ ಈಡು ಮಾಡಿದಂತಾಗುವುದಿಲ್ಲವೆ,

ಇ) ಮಾಹಿತಿ ತಂತ್ರಜ್ಞಾನ ವುಡ್ ಕ್ರಾಫ್ಟ್ ಇಂಡಿಯಾ ಪ್ರೈ ಲಿ ಕೈಗಾರಿಕಾ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವ ಜಮೀನಿನ ಅಕ್ಕ ಪಕ್ಕದಲ್ಲಿ ಭಾರತ ಸರ್ಕಾರದ ರಕ್ಷಣಾ (ಡಿಫೆನ್ಸ್) ಇಲಾಖೆಯ ರಕ್ಷಿತ ಪ್ರದೇಶಕ್ಕೆ ಹಾಗೂ ಕರ್ನಾಟಕ ಅರಣ್ಯ ಇಲಾಖೆಗೆ ಸೇರಿದ ಸುಮಾರು 2,000 ಎಕರೆ ಅರಣ್ಯ ಪ್ರದೇಶಕ್ಕೆ ಧಕ್ಕೆಯಾಗುವುದಿಲ್ಲವೆ,

ಈ) ರಕ್ಷಣಾ ಇಲಾಖೆ ರಕ್ಷಿತ ಪ್ರದೇಶಕ್ಕೆ ಮತ್ತು ಅರಣ್ಯ ಪ್ರದೇಶಕ್ಕೆ ಧಕ್ಕೆಯಾಗುವುದರಿಂದ ಈ ಭೂ ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಲು ಏನಾದರೂ ತೊಂದರೆ ಇದೆಯೇ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿಯು ದಿನಾಂಕ 28 8 06 ರಂದು ನಡೆದ 24ನೇ ಸಭೆಯಲ್ಲಿ ಒಪ್ಪಿಗೆ ಭೂಸ್ವಾಧೀನ (consent Acqusition Basis) ಮೇರೆಗೆ 49 ಎಕರೆ 15 ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿ ಮೆ ವುಡ್ ಕ್ರಾಫ್ಟ್ ಇಂಡಿಯಾ ಲಿ ರವರಿಗೆ ಹಂಚಿಕೆ ಮಾಡಲು ಅನುಮೋದನೆ ನೀಡಲಾಗಿರುತ್ತದೆ

ಸರ್ಕಾರ ಅಧಿಸೂಚನೆ ಸಂಖ್ಯೆ CI 43 SPQ 2007 ದಿನಾಂಕ 7 2 07 ರಲ್ಲಿ ಬಿದರಹಳ್ಳಿ ಹೋಬಳಿಯ 3 ಗ್ರಾಮಗಳಲ್ಲಿನ ಒಟ್ಟು 49 15 ಎಕರೆ ಭೂಮಿಯನ್ನು ಸ್ವಾಧೀನಕ್ಕಾಗಿ ಕೆಐಎಡಿಬಿ ಅಧಿನಿಯಮ 1966 ಕಲಂ– 3(1), 1(3) ಮತ್ತು 28(1) ರ ಅಡಿಯಲ್ಲಿ ಅಧಿಸೂಚನೆಯನ್ನು ಹೊರಡಿಸಲಾಗಿದೆ ಇದರಲ್ಲಿ ಮಂಡೂರು ಗ್ರಾಮಕ್ಕೆ ಸೇರಿದ 22 22 ಎಕರೆ ಜಮೀನು ಸೇರಿರುತ್ತದೆ ದೊಡ್ಡಬನಹಳ್ಳಿ ಗ್ರಾಮದ ಜಮೀನುಗಳು ಸ್ವಾಧೀನಪಡಿಸಿಕೊಳ್ಳಲು ಹೊರಡಿಸಿರುವ ಅಧಿಸೂಚನೆಯಲ್ಲಿ ಒಳಗೊಂಡಿರುವುದಿಲ್ಲ

ಆ) ಕಲಂ – 28(2) ರನ್ವಯ ರೈತರಿಗೆ/ಭೂಮಾಲೀಕರಿಗೆ ನೋಟೀಸ್ ನೀಡಿದ್ದು ಅವರ ಆಕ್ಷೇಪಣೆಗಳನ್ನು ಪರಿಗಣಿಸಿ, ಭೂಸ್ವಾಧೀನ ಪ್ರಕ್ರಿಯೆಯನ್ನು ಮುಂದುವರೆಸಲಾಗುವುದು

ಇ) ಇದುವರೆವಿಗೂ ಈ ಯೋಜನೆಗೆ ಮೇಲಿನಂತೆ ಜಮೀನನ್ನು ಭೂಸ್ವಾಧೀನಪಡಿಸಿ ಕೊಳ್ಳುವ ವಿಚಾರದಲ್ಲಿ ಈ ಎರಡು ಇಲಾಖೆಗಳು ಆಕ್ಷೇಪಣೆಯನ್ನು ಎತ್ತಿರುವುದಿಲ್ಲ

ಈ) ರಕ್ಷಣಾ ಇಲಾಖೆ ಮತ್ತು ಅರಣ್ಯ ಇಲಾಖೆಯು ನಿಖರವಾದ ಆಕ್ಷೇಪಣೆಗಳನ್ನು ಸಲ್ಲಿಸಿದಲ್ಲಿ ಅವುಗಳನ್ನು ಪರಿಗಣಿಸಿ ಭೂಸ್ವಾಧೀನಪಡಿಸುವ/ಕೈಬಿಡುವ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗುವುದು

1359 (2055) ಶ್ರೀ ನರಸಿಂಹಸ್ವಾಮಿ ಜೆ (ದೊಡ್ಡಬಳ್ಳಾಪುರ) – ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಣ್ಣ ಕೈಗಾರಿಕೆಗಳಿಗೆ ಮಂಜೂರು ಮಾಡಿದ ಸಹಾಯ ಧನವನ್ನು 1999 ರಿಂದ ಬಿಡುಗಡೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಎಷ್ಟು ಸಣ್ಣ ಕೈಗಾರಿಕೆಗಳಿಗೆ 1999 ರಿಂದ ಸಹಾಯಧನ ಬಿಡುಗಡೆ ಮಾಡಲಾಗಿದೆಯೇ,

ಇ) ಇನ್ನೂ ಸಹಾಯಧನ ಹಣವನ್ನು ಬಿಡುಗಡೆ ಮಾಡದಿದ್ದಲ್ಲಿ ಬಿಡುಗಡೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು,

ಈ) ಇದು ಈಗ ಯಾವ ಹಂತದಲ್ಲಿದೆ ಮತ್ತು ಯಾವಾಗ ಸರ್ಕಾರ ಹಣವನ್ನು ಬಿಡುಗಡೆ ಮಾಡುತ್ತದೆ?

ಶ್ರೀ ಶಿವಾನಂದ ಎಸ್ ನಾಯ್ಕ್ (ಸಣ್ಣ ಕೈಗಾರಿಕಾ ಸಚಿವರು)

ಅ) ಬಂದಿದೆ

ಆ) 1999ನೇ ಸಾಲಿನಿಂದ ಮಾರ್ಚ್ 2003 ರವರೆಗೆ ಸ್ವಂತ ಬಂಡವಾಳ ಹೂಡಿ ಪ್ರಾರಂಭ ಮಾಡಿದ 185 ಜವಳಿ ಘಟಕಗಳಿಗೆ ಮತ್ತು 6 ಕೋಳಿ ಸಾಕಾಣಿಕೆ (ಲೇಯರ್ಸ್) ಘಟಕಗಳಿಗೆ ಸಂಪೂರ್ಣವಾಗಿ ಸಹಾಯಧನವನ್ನು ಬಿಡುಗಡೆ ಮಾಡಲಾಗಿದೆ ಹಣಕಾಸು ಸಂಸ್ಥೆಗಳಿಂದ ನೆರವು ಪಡೆದು ಪ್ರಾರಂಭಿಸಿರುವ 113 ಘಟಕಗಳಿಗೆ ಶೇಕಡ 75 ರಷ್ಟು ಸಹಾಯಧನವನ್ನು 2003–04 ರವರೆಗೆ ಬಿಡುಗಡೆ ಮಾಡಲಾಗಿದೆ

ಇ) ಇನ್ನೂ ಹಣಕಾಸು ಸಂಸ್ಥೆಯಿಂದ ಸಾಲ ಪಡೆದು ಪ್ರಾರಂಭಗೊಂಡ 113 ಘಟಕಗಳಿಗೆ ಮಂಜೂರಾದ ಮೊಬಲಗಿನಲ್ಲಿ ಶೇಕಡ 25 ರಷ್ಟು, 1999ನೇ ಸಾಲಿನಿಂದ ಸ್ವಂತ ಬಂಡವಾಳ ಹೂಡಿ ಪ್ರಾರಂಭಿಸಿರುವ 39 ಘಟಕಗಳಿಗೆ, 14 ಇಟ್ಟಿಗೆ ಘಟಕಗಳಿಗೆ, 80 ಕೋಳಿ ಸಾಕಾಣಿಕೆ ಬ್ರಾಯ್ಲರ್ ಘಟಕಗಳಿಗೆ ಹೀಗೆ ಒಟ್ಟು 133 ಘಟಕಗಳಿಗೆ ಶೇಕಡ 100 ರಷ್ಟು ಸಹಾಯಧನವನ್ನು ಸರ್ಕಾರವು ಬಿಡುಗಡೆ ಮಾಡಲು ಬಾಕಿ ಇರುತ್ತದೆ

ಬಾಕಿಯಿರುವ ಸಹಾಯಧನವನ್ನು 2006–07ನೇ ಮತ್ತು ಮುಂದಿನ ಸಾಲುಗಳಲ್ಲಿ ಅನುದಾನ ಲಭ್ಯತೆಯ ಮೇರೆಗೆ ಬಿಡುಗಡೆ ಮಾಡಲಾಗುವುದು

ಈ) ಬಾಕಿಯಿರುವ ಸಹಾಯಧನವನ್ನು ಬಿಡುಗಡೆ ಮಾಡುವ ದೃಷ್ಟಿಯಿಂದ 2007–08 ಸಾಲಿನ ಆಯವ್ಯಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಸಹಾಯ ಧನಕ್ಕೆಂದು ರೂ 75 00 ಕೋಟಿ ಒದಗಿಸಲಾಗಿದೆ

1360 (1453) ಶ್ರೀ ನಿರಾಣಿ ಮುರಗೇಶ ರುದ್ರಪ್ಪ (ಬೀಳಗಿ) – ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗಲಕೋಟೆ ಜಿಲ್ಲೆ ಬೀಳಗಿ ಮತಕ್ಷೇತ್ರ ವ್ಯಾಪ್ತಿಯಲ್ಲಿರುವ ಕೆರೆಗಳು ಯಾವುವು,

ಆ) ಆ ಕೆರೆಗಳ ಪೈಕಿ ನೀರು ತುಂಬುವ ಯೋಜನೆಯ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಸಂಖ್ಯೆ ಎಷ್ಟು ಹಾಗೂ ಅವು ಯಾವ್ಯಾವವು,

ಇ)ಹೊಸ ಕೆರೆಗಳ ನಿರ್ಮಾಣ ಸರ್ಕಾರದ ಮುಂದೆ ಇದೆಯೇ,

ಈ) ಹಾಗಿದ್ದಲ್ಲಿ, ಕೆರೆ ನಿಮಾಣಕ್ಕಾಗಿ ರೈತರಿಂದ ವಶಪಡಿಸಿಕೊಳ್ಳಬಹುದಾದ ಜಮೀನಿಗೆ ಪರಿಹಾರ ನೀಡುವ ಚಿಂತನೆ ಸರ್ಕಾರದ ಮುಂದಿದೆಯೇ,

ಉ) ಬೀಳಗಿ ಮತಕ್ಷೇತ್ರ ವ್ಯಾಪ್ತಿಯ ಜಮಖಂಡಿ ತಾಲ್ಲೂಕಿನ ಸಾವಳಗಿ ಭಾಗವು ಮಳೆ ಆಶ್ರಿತ ಪ್ರದೇಶವಾಗಿರುವುದರಿಂದ ಈ ಭಾಗದ ಕೆರೆಗಳ ಅಭಿವೃದ್ಧಿ ಹಾಗೂ ಹೊಸ ಕೆರೆಗಳ ನಿರ್ಮಾಣಕ್ಕೆ ಸರ್ಕಾರ ಯೋಚನೆ ಮಾಡುವುದೇ?

ಶ್ರೀ ಬಿ ಎಸ್ ಯಡಿಯೂರಪ್ಪ (ಮಾನ್ಯ ಉಪಮುಖ್ಯಮಂತ್ರಿಗಳು)

ಅ) ಬಾಗಲಕೋಟೆ ಜಿಲ್ಲೆ ಬೀಳಗಿ ಮತಕ್ಷೇತ್ರ ವ್ಯಾಪ್ತಿಯಲ್ಲಿರುವ ಕೆರೆಗಳು ಈ ಕೆಳಗಿನಂತಿವೆ

1 ತೊದಲಬಾಗಿ ಕೆರೆ

2 ಕನ್ನೊಳ್ಳಿ ಕೆರೆ

3 ಗದ್ಯಾಳ ಕೆರೆ (ಹಳೆ)

4 ಕುರಗೋಡ ಕೆರೆ

5 ಖಾಜಿಬೀಳಗಿ ಕೆರೆ

6 ಗದ್ಯಾಳ ಕೆರೆ (ಹೊಸ)

7 ನಟಕಲ್ ಕೆರೆ

8 ಜಾನಮಟ್ಟಿ ಕೆರೆ

9 ಅರಕೇರಿ ಸೈಟ್ – 1 ಕೆರೆ ಹಾಗೂ

10 ಅರಕೇರಿ ಸೈಟ್ – 2 ಕೆರೆ

ಆ) ಈ ಪೈಕಿ ತೊದಲಬಾಗಿ ಕೆರೆ, ಕನ್ನೊಳ್ಳಿ ಕೆರೆ, ಗದ್ಯಾಳ ಕೆರೆ (ಹಳೆ), ಕುರಗೋಡ ಕೆರೆ, ಖಾಜಿಬೀಳಗಿ ಕೆರೆ, ಗದ್ಯಾಳ ಕೆರೆ (ಹೊಸ) ಹಾಗೂ ನಟಕಲ್ ಕೆರೆ, ಗದ್ಯಾಳ ಕೆರೆ (ಹೊಸ) ಹಾಗೂ ನಟಕಲ್ ಕೆರೆ ನೀರು ತುಂಬುವ ಯೋಜನೆಯಲ್ಲಿ ಬರುತ್ತವೆ

ಇ) ಇದೆ

ಈ) ಕೆರೆ ನಿರ್ಮಾಣಕ್ಕಾಗಿ ರೈತರಿಂದ ವಶಪಡಿಸಿಕೊಳ್ಳಬಹುದಾದ ಜಮೀನಿಗೆ ನಿಯಮಾನುಸಾರ ಪರಿಹಾರ ನೀಡಲಾಗುವುದು

ಉ) ಕೆರೆಗಳ ಅಭಿವೃದ್ಧಿಯನ್ನು ಅನುದಾನದ ಲಭ್ಯತೆಗೆ ಅನುಸಾರವಾಗಿ ಕೈಗೊಳ್ಳಲಾಗುವುದು ಹೊಸ ಕೆರೆಗಳ ನಿರ್ಮಾಣಕ್ಕಾಗಿ ಸಮೀಕ್ಷೆ ಕೈಗೊಂಡು ತಾಂತ್ರಿಕ ಶಕ್ಯತೆ ಹಾಗೂ ಆರ್ಥಿಕ ಸಮಕ್ಷತೆಯನ್ನು ಆಧರಿಸಿ ಕ್ರಮ ಕೈಗೊಳ್ಳಲಾಗುವುದು

1361 (1884) ಶ್ರೀಮತಿ ಪರಿಮಳ ಕೆ ಎಸ್ (ಹನೂರು) – ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹನೂರು ವಿಧಾನ ಸಭಾ ಕ್ಷೇತ್ರದ ಕಾಡಂಚಿನಲ್ಲಿರುವ ಗೋಪಿನಾಥಂ, ನೆಲ್ಲಿಕತ್ರಿ, ಜಾಬುಟೆಪಟ್ಟಿ, ಮಾರಿಕೊಟ್ಟಾಯಂ ಮುಂತಾದ ಹಳ್ಳಿಗಳಿಗೆ ರಸ್ತೆ, ಕುಡಿಯುವ ನೀರಿನ ಕೊಳವೆ ಬಾವಿ, ಶಾಲಾ ಕಟ್ಟಡ ಇನ್ನೂ ಮುಂತಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಅರಣ್ಯ ಇಲಾಖೆ ಜಾಗ ನೀಡದೇ ತೊಂದರೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಈ ಕಾಡಂಚಿನ ಹಳ್ಳಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಅರಣ್ಯ ಇಲಾಖೆಯಿಂದ ಜಾಗ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಸಿ ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಸದರಿ ಪ್ರದೇಶಗಳು ಕಾವೇರಿ ವನ್ಯಜೀವಿ ವಿಭಾಗ, ಕನಕಪುರ ಇದರ ವ್ಯಾಪ್ತಿಗೆ ಒಳಪಟ್ಟಿದ್ದು, ವನ್ಯಜೀವಿ ಕಾಯಿದೆ 1972ರ ಪ್ರಕಾರ ಅರಣ್ಯೇತರ ಚಟುವಟಿಕೆಗಳನ್ನು ಕೈಗೊಳ್ಳಬೇಕಾದರೆ ಇಂಡಿಯನ್ ಬೋರ್ಡ್ ಆಫ್ ವೈಲ್ಡ್ ಲೈಫ್ ಮತ್ತು ಅರಣ್ಯ (ಸಂರಕ್ಷಣಾ) ಕಾಯ್ದೆ 1980ರ ಪ್ರಕಾರ ಕೇಂದ್ರ ಸರ್ಕಾರದ ಪೂರ್ವಾನುಮತಿ ಅತ್ಯವಶ್ಯವಾಗಿರುತ್ತದೆ

ಆ) ಸಂಬಂಧಪಟ್ಟವರಿಂದ ಬೇಡಿಕೆಯು ನಿಯಮಾನುಸಾರ ಬಂದಲ್ಲಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಅನುಮತಿ ಪಡೆದು ನಂತರ ಪರಿಗಣಿಸಬೇಕಾಗುತ್ತದೆ

1362 (1879) ಶ್ರೀ ಪಾಟೀಲ್ ಬಿ ಆರ್ (ಆಳಂದ) – ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಸಂಖ್ಯೆ ಎಷ್ಟು,

ಆ) ಆ ಕೆರೆಗಳ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸಲಾಗುತ್ತಿದೆಯೇ,

ಇ) ಕಳೆದ ಮೂರು ವರ್ಷಗಳಿಂದ ಈ ಕೆರೆಗಳ ನಿರ್ವಹಣೆಗೆ ನಿಗದಿಪಡಿಸಿದ್ದ ಅನುದಾನ ಮತ್ತು ವೆಚ್ಚ ಮಾಡಿದ ಮೊಬಲಗು ಎಷ್ಟು (ವರ್ಷವಾರು ವಿವರ ನೀಡುವುದು)

ಈ) ಇವುಗಳು ಸಮರ್ಪಕವಾಗಿ ನಿರ್ವಹಣೆ ಆಗದಿರುವುದರಿಂದ ಸಣ್ಣ ನೀರಾವರಿ ಇಲಾಖೆಗೆ ವರ್ಗಾಯಿಸುವ ಚಿಂತನೆ ಸರ್ಕಾರಕ್ಕಿದೆಯೇ?

ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಸಚಿವರು)

ಅ) ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಒಟ್ಟು 33,374 ಕೆರೆಗಳಿವೆ

ಆ) ಆಯವ್ಯಯದಲ್ಲಿ ಕೆರೆಗಳ ನಿರ್ವಹಣೆಗೆ ಒದಗಿಸಲಾಗುತ್ತಿರುವ ಅನುದಾನ ಬಹಳ ಕಡಿಮೆ ಇರುವ ಪ್ರಯುಕ್ತ ಎಲ್ಲ ಕೆರೆಗಳ ನಿರ್ವಹಣೆ ಸಾಧ್ಯವಿರುವುದಿಲ್ಲ ಆದ್ದರಿಂದ ಲಭ್ಯವಿರುವ ಅನುದಾನದಲ್ಲಿ ಆದ್ಯತೆ ಮೇರೆಗೆ ಕೆರೆಗಳ ನಿರ್ವಹಣೆಯನ್ನು ಮಾಡಲಾಗುತ್ತಿದೆ

ಇ) ನಿರ್ವಹಣೆಗೆ ನಿಗದಿಪಡಿಸಿದ ಅನುದಾನ ಮತ್ತು ವೆಚ್ಚ ಈ ಕೆಳಕಂಡಂತಿದೆ

ರೂ ಲಕ್ಷಗಳಲ್ಲಿ

ಕ್ರಸಂ	ವರ್ಷ	ಅನುದಾನ ಹಂಚಿಕೆ	ವೆಚ್ಚ
1	2004–05	1028 82	850 52
2	2005–06	1080 27	854 03
3	2006–07 (ಫೆಬ್ರವರಿ 2007ರ ಅಂತ್ಯಕ್ಕೆ)	1734 30	424 20

ಈ) ಕೆರೆಗಳ ಸಮರ್ಪಕ ನಿರ್ವಹಣೆಗೆ ಹೆಚ್ಚಿನ ಅನುದಾನವನ್ನು ಒದಗಿಸುವ ಬಗ್ಗೆ ಮತ್ತು ಕೆರೆಗಳ ಪುನರ್‌ಜೀವನಕ್ಕಾಗಿ ಸೂಕ್ತ ಕಾರ್ಯಕ್ರಮವನ್ನು ರೂಪಿಸುವ ಬಗ್ಗೆ ಸರ್ಕಾರವು ಪರಿಶೀಲಿಸುವುದು

1363 (1880) ಶ್ರೀ ಪಾಟೀಲ ಬಿ ಆರ್ (ಆಳಂದ) – ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನಲ್ಲಿ ಅತೀ ಹೆಚ್ಚಿಗೆ ಕೆರೆಗಳನ್ನು ಕಟ್ಟಲು ಸ್ಥಳಾವಕಾಶ ಇರುವುದನ್ನು ಸರ್ಕಾರ ಗಮನಿಸಿದೆಯೇ,

ಆ) ಬಚಾವತ ಬಿ–ಸ್ಕೀಮಿನಲ್ಲಿ ಆಂಧ್ರ ಸರ್ಕಾರ ಕಾಮಗಾರಿಗಳನ್ನು ಪ್ರಾರಂಭ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಹಾಗಿದ್ದಲ್ಲಿ ಆಂಧ್ರ ಪ್ರದೇಶ ಸರ್ಕಾರ ಕಾಮಗಾರಿಗಳನ್ನು ಕೈಗೊಳ್ಳುವಾಗ ಕರ್ನಾಟಕ ಸರಕಾರ ಆಕ್ಷೇಪಣಾ ಅರ್ಜಿ ಹಾಕಲಿಲ್ಲವೇ,

ಈ) ಆಂಧ್ರದವರು ಕಾಮಗಾರಿಗಳನ್ನು ಪ್ರಾರಂಭ ಮಾಡಿದ್ದರೆ ಯಾಕೆ ಕಾಮಗಾರಿಗಳನ್ನು ಕೈಗೊಳ್ಳಬಾರದು?

ಶ್ರೀ ಬಿ ಎಸ್ ಯಡಿಯೂರಪ್ಪ (ಮಾನ್ಯ ಉಪ ಮುಖ್ಯಮಂತ್ರಿಗಳು) :

ಅ) ಬಂದಿದೆ

ಆ) ಬಂದಿದೆ

ಇ) ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣಕ್ಕೆ ಆಂಧ್ರ ಪ್ರದೇಶ ಸರ್ಕಾರವು ಕೃಷ್ಣಾ ಕಣಿವೆಯಲ್ಲಿನ ಹೆಚ್ಚುವರಿ ನೀರನ್ನು ಉಪಯೋಗಿಸಲು ನಿರ್ಮಿಸುತ್ತಿರುವ ಶಾಶ್ವತ ಯೋಜನೆಗಳನ್ನು ನಿರ್ಮಿಸದಂತೆ/ಮುಂದುವರಿಸದಂತೆ ನಿರ್ದೇಶನ ನೀಡಲು ಪ್ರಾರ್ಥಿಸಿ ದಿನಾಂಕ 19 05 2005 ರಂದು ಐ ಎ 1/2005 ಅರ್ಜಿಯನ್ನು ಪ್ರಸಕ್ತ ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣಕ್ಕೆ ಸಲ್ಲಿಸಲಾಗಿತ್ತು ದಿನಾಂಕ 9 6 2006 ರಂದು ನ್ಯಾಯಾಧಿಕರಣವು ಸದರಿ ಅರ್ಜಿಯ ಬಗ್ಗೆ ಆದೇಶವನ್ನು ನೀಡಿರುತ್ತದೆ ಈ ಆದೇಶದಂತೆ,

(i) ಆಂಧ್ರ ರಾಜ್ಯವು ಯಾವುದೇ ಹೊಸ ಯೋಜನೆಗಳನ್ನು ಬೇರೆ ರಾಜ್ಯಗಳು ಮತ್ತು ನ್ಯಾಯಾಧಿಕರಣದ ಗಮನಕ್ಕೆ ತರದೆ ಪ್ರಾರಂಭಿಸಲು ಬರುವುದಿಲ್ಲ,

(ii) ಪೂರ್ವಬಳಕೆ ಮತ್ತು ವಚನಬದ್ಧತೆ (Prior utilization/committed) ಆಧಾರದ ಮೇಲೆ ವಿವಾದಿತ ಯೋಜನೆಗಳ ಅಡಿಯಲ್ಲಿ ಹೆಚ್ಚುವರಿ ನೀರಿನ ಬಳಕೆ ಮೇಲೆ ಆಂಧ್ರ ಪ್ರದೇಶವು ತನ್ನ ಹಕ್ಕನ್ನು ಸಾಧಿಸಲು ಸಾಧ್ಯವಿಲ್ಲ

(iii) ಆಂಧ್ರಪ್ರದೇಶವು ಬಳಸಲು ಉದ್ದೇಶಿಸಿರುವ ಹೆಚ್ಚುವರಿ ನೀರು ಸಹ ಕಣಿವೆ ರಾಜ್ಯಗಳ ಪಾಲನ್ನು ನಿರ್ಧರಿಸಲು ಪರಿಗಣಿಸಲಾಗುವುದು

(iv) ಅರ್ಜಿದಾರರು ಹೆಚ್ಚುವರಿ ನೀರಿನ ಅಡಿಯಲ್ಲಿ ಯೋಜನೆಗಳನ್ನು ನಿರ್ಮಿಸಲು ಅರ್ಜಿ ಸಲ್ಲಿಸಿದಲ್ಲಿ ನ್ಯಾಯಾಧಿಕರಣವು ಅಂತಹ ಮನವಿಯನ್ನು ಪರಿಗಣಿಸುವುದು

ಈ) ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣದ (ಬಚಾವತ್ ವರದಿ) ಅಂತಿಮ ಆದೇಶದಲ್ಲಿ ಹೆಚ್ಚುವರಿ ನೀರು ಬಳಸಲು ಆಂಧ್ರ ಪ್ರದೇಶಕ್ಕೆ ಸ್ವಾತಂತ್ರ್ಯವನ್ನು ನೀಡಿತ್ತು ಆದರೆ, ಅಂತಹ ಬಳಕೆಯಿಂದ ಆಂಧ್ರ ಪ್ರದೇಶಕ್ಕೆ ಯಾವುದೇ ಹಕ್ಕು ಇರುವುದಿಲ್ಲ ಎಂದೂ ಸಹ ನ್ಯಾಯಾಧಿಕರಣವು ತಿಳಿಸಿರುತ್ತದೆ

ಹೆಚ್ಚುವರಿ ನೀರನ್ನು ಬಳಸಿ ಕರ್ನಾಟಕ ರಾಜ್ಯವು ಯೋಜನೆಗಳನ್ನು ತೆಗೆದುಕೊಳ್ಳಲು ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣದ (ಬಚಾವತ್ ವರದಿ) ಆದೇಶದಲ್ಲಿ ಅವಕಾಶವಿರುವುದಿಲ್ಲ ಕರ್ನಾಟಕದ ಐ ಎ 1/2005ರ ಅರ್ಜಿಯ

ದಿನಾಂಕ 09 06 2006ರ ತೀರ್ಪಿನಲ್ಲಿ ಈಗಿನ ನ್ಯಾಯಾಧಿಕರಣವು ಆಂಧ್ರಪ್ರದೇಶವು ಬಳಸಲು ಉದ್ದೇಶಿಸಿರುವ ಹೆಚ್ಚುವರಿ ನೀರು ಸಹ ಕಣಿವೆ ರಾಜ್ಯಗಳ ಪಾಲನ್ನು ನಿರ್ಧರಿಸಲು ಪರಿಗಣಿಸಲಾಗುವುದೆಂದು ತಿಳಿಸಿದೆ ನ್ಯಾಯಾಧಿಕರಣದ ಮುಂದೆ ನಡವಳಿಗಳು ದೀರ್ಘಕಾಲ ನಡೆದಲ್ಲಿ ಅರ್ಜಿದಾರರು ಯೋಜನೆಗಳನ್ನು ನಿರ್ಮಿಸಲು ಅರ್ಜಿ ಸಲ್ಲಿಸಿದಲ್ಲಿ ನ್ಯಾಯಾಧಿಕರಣವು ಅಂತಹ ಮನವಿಯನ್ನು ಪರಿಗಣಿಸಲಾಗುವುದೆಂದು ಸಹ ತಿಳಿಸಿದೆ ಈ ಹಿನ್ನೆಲೆಯಲ್ಲಿ ಸ್ಕೀಂ ಬಿ ಅಡಿಯಲ್ಲಿ ಹೆಚ್ಚುವರಿ ನೀರನ್ನು ಉಪಯೋಗಿಸಲು ಯೋಜನೆಗಳನ್ನು ರಾಜ್ಯವು ಕೈಗೆತ್ತಿಕೊಳ್ಳುವ ಬಗ್ಗೆ ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣದ ಅನುಮತಿ ಕೋರಿ ಅರ್ಜಿ ಸಲ್ಲಿಸಲು ರಾಜ್ಯದ ನ್ಯಾಯವಾದಿಗಳೊಡನೆ ಚರ್ಚಿಸಿ, ಮುಂದಿನ ಕ್ರಮದ ಬಗ್ಗೆ ಪರಿಶೀಲಿಸಲಾಗುವುದು

1365 (1452) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಣಕೀಕೃತ ಪಹಣಿ ಪತ್ರಿಕೆಯ ಪ್ರತಿಯನ್ನು ಪಡೆಯಲು ಸರ್ಕಾರವು ನಿಗದಿಪಡಿಸಿರುವ ರೂ 15 00 ಶುಲ್ಕವನ್ನು ಕಡಿಮೆಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ,

ಆ) ಹಾಗಿದ್ದಲ್ಲಿ, ಈ ಸಂಬಂಧ ಸರ್ಕಾರ ಕೈಗೊಳ್ಳುವ ಕ್ರಮಗಳೇನು,

ಇ) ಪ್ರಸ್ತುತ ಪಹಣಿ ಪತ್ರಿಕೆಯನ್ನು ಪಡೆಯಲು ಗ್ರಾಮಾಂತರದ ಜನರು ತಾಲ್ಲೂಕು ಕೇಂದ್ರಕ್ಕೆ ಬರುವುದನ್ನು ಬದಲಾವಣೆಗೊಳಿಸಿ ಹೋಬಳಿ ಮತ್ತು ಪಂಚಾಯತ್ ಮಟ್ಟದಲ್ಲೇ ವಿತರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಅಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ

ಆ) ಉದ್ಭವಿಸುವುದಿಲ್ಲ

ಇ) "ನೆಮ್ಮದಿ" ಯೋಜನೆಯಡಿ ಪ್ರಾರಂಭಿಸಲಾಗಿರುವ ಹೋಬಳಿ ಮಟ್ಟದ ಟೆಲಿಸೆಂಟರ್‌ಗಳಲ್ಲಿ ಪಹಣಿಗಳನ್ನು ವಿತರಿಸಲಾಗುತ್ತಿದೆ ಇಂದಿನವರೆಗೆ, 710 ನೆಮ್ಮದಿ ಟೆಲಿಸೆಂಟರ್‌ಗಳನ್ನು ಹೋಬಳಿ ಮಟ್ಟದಲ್ಲಿ ಕಾರ್ಯಾಚರಣೆಗೊಳಿಸಲಾಗಿದೆ

1367 (2042) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಾಲ್ಲೂಕು ಕೇಂದ್ರದಲ್ಲಿ ನೀಡಲಾಗುತ್ತಿರುವ ಪಹಣಿಯನ್ನು ಹೋಬಳಿ ಹಾಗೂ ಗ್ರಾಮ ಪಂಚಾಯತ್ ಮಟ್ಟದಲ್ಲಿ ವಿಸ್ತರಿಸುವ ಬಗ್ಗೆ ಸರ್ಕಾರದ ವತಿಯಿಂದ ಕೈಗೊಳ್ಳುತ್ತಿರುವ ಕ್ರಮಗಳೇನು,

ಆ) ಪ್ರಸ್ತುತ ಪ್ರತಿ ಪಹಣಿ ಪತ್ರಿಕೆಗೆ ವಸೂಲು ಮಾಡುತ್ತಿರುವ ರೂ 15ರ ದರವನ್ನು ಕಡಿಮೆಗೊಳಿಸುವ ಬಗ್ಗೆ ಸರ್ಕಾರದ ಕ್ರಮಗಳೇನು,

ಇ) ಭೂಮಿ ಯೋಜನೆಯನ್ನು ಆನ್‌ಲೈನ್‌ಗೊಳಿಸಲಾಗಿದೆಯೇ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) "ನೆಮ್ಮದಿ" ಯೋಜನೆಯಡಿ ಪ್ರಾರಂಭಿಸಲಾಗಿರುವ ಹೋಬಳಿ ಮಟ್ಟದ ಟೆಲಿಸೆಂಟರ್‌ಗಳಲ್ಲಿ ಪಹಣಿಗಳನ್ನು ವಿತರಿಸಲಾಗುತ್ತಿದೆ ಇಂದಿನವರೆಗೆ, 710 ನೆಮ್ಮದಿ ಟೆಲಿಸೆಂಟರ್‌ಗಳನ್ನು ಹೋಬಳಿ ಮಟ್ಟದಲ್ಲಿ ಕಾರ್ಯಾಚರಣೆಗೊಳಿಸಲಾಗಿದೆ

ಆ) ಅಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ

ಇ) ಹೌದು

1368 (2043) ಶ್ರೀ ಪ್ರಭಾಕರ ಬಂಗೇರಕೆ (ಬೆಳ್ತಂಗಡಿ) – ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಲ್ಲಿ ಎಷ್ಟು ಕಿಂಡಿ ಆಣೆಕಟ್ಟುಗಳನ್ನು ಯಾವ ಯಾವ ಕಡೆಗಳಲ್ಲಿ ನಿರ್ಮಿಸಲು ಸರ್ಕಾರ ಕ್ರಮ ಕೈಗೊಂಡಿದೆ

ಆ) ಅವುಗಳಿಗೆ ನಿಗದಿಪಡಿಸಲಾದ ಅನುದಾನದ ಮೊತ್ತ ಹಾಗೂ ಕ್ರಿಯಾ ಯೋಜನೆಯ ವಿವರಗಳನ್ನು ನೀಡುವುದು

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) .

ಅ) 2006–07ನೇ ಸಾಲಿಗಾಗಿ ಬೆಳ್ತಂಗಡಿ ತಾಲ್ಲೂಕಿನಲ್ಲಿ 3 ಕಿಂಡಿ ಆಣೆಕಟ್ಟುಗಳನ್ನು ನಿರ್ಮಿಸಲು ಕ್ರಮ ಕೈಗೊಂಡಿದೆ

ಕ್ರಸಂ	ಕಾಮಗಾರಿ ಹೆಸರು	ಅಂದಾಜು ಮೊತ್ತ ರೂ ಲಕ್ಷಗಳಲ್ಲಿ	ಅಚ್ಚುಕಟ್ಟು ಹೆಕ್ಟೇರುಗಳಲ್ಲಿ	ಅನುದಾನ ರೂ ಲಕ್ಷಗಳಲ್ಲಿ
1	ದಕ್ಷಿಣ ಕನ್ನಡ ಜಿಲ್ಲೆ, ಬೆಳ್ತಂಗಡಿ ತಾಲ್ಲೂಕು ಮುಂಡಾಜೆ ಗ್ರಾಮದ ಸತ್ಯನಪಲ್ಕೆ ಹತ್ತಿರ ಮೃತ್ಯುಂಜಯ ನದಿಗೆ ಅಡ್ಡಲಗಿ ಕಿಂಡಿ ಆಣೆಕಟ್ಟು	50 00	56 65	25 00
2	ದಕ್ಷಿಣ ಕನ್ನಡ ಜಿಲ್ಲೆ, ಬೆಳ್ತಂಗಡಿ ತಾಲ್ಲೂಕು ಬಳಂಜ ಗ್ರಾಮದ ಸುದೆಗುಂಡಿ ಎಂಬಲ್ಲಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ	50 00	45 34	25 00
3	ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕು ಓಡದಕರಿಯ ಎಂಬಲ್ಲಿ ನೇತ್ರಾವತಿ ನದಿಗೆ ಅಡ್ಡಲಾಗಿ ಕಿಂಡಿ ಆಣೆಕಟ್ಟು	70 00	65 50	40 00

1369 (1376) ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಸದಲಗ) – ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸದಲಗಾ ಮತಕ್ಷೇತ್ರ ವ್ಯಾಪ್ತಿಯ ಬಾರವಾಡ ಗ್ರಾಮದ ಏತ ನೀರಾವರಿ ಯೋಜನೆಗೆ ಸರ್ಕಾರ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಯನ್ನು ನೀಡಿದ್ದು ಯಾವಾಗ,

ಆ) ಹಾಗಿದ್ದಲ್ಲಿ ಕಾಮಗಾರಿಯ ಪ್ರಗತಿ ಈಗ ಯಾವ ಹಂತದಲಿದೆ,

ಇ) ಕಾಮಗಾರಿಯನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು?

ಶ್ರೀ ಬಿ ಎಸ್ ಯಡಿಯೂರಪ್ಪ (ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು)

ಅ) ಈ ಏತ ನೀರಾವರಿ ಯೋಜನೆಯನ್ನು ಸಣ್ಣ ನೀರಾವರಿ ಇಲಾಖೆಯು ಕೈಗೊಂಡಿರುವುದಿಲ್ಲ

ಆ) ಪ್ರಶ್ನೆ ಉದ್ಭವಿಸುವುದಿಲ್ಲ

ಇ) ಪ್ರಶ್ನೆ ಉದ್ಭವಿಸುವುದಿಲ್ಲ

1370 (2031) ಶ್ರೀ ರಮೇಶ್ ಕುಮಾರ್ ಕೆ ಆರ್ (ಶ್ರೀನಿವಾಸಪುರ) – ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರಾಯಿ ಮಾರಾಟ ನಿಷೇಧವನ್ನು ಯಾವ ತಾರೀಖಿನಿಂದ ಜಾರಿಗೆ ತರಲಾಗುವುದು ಹಿಂದಿನ ಆರ್ಥಿಕ ವರ್ಷದಲ್ಲಿ ಸಾರಾಯಿ ಮಾರಾಟದಿಂದ ಸರ್ಕಾರಕ್ಕೆ ಬಂದ ವರಮಾನ ಎಷ್ಟು,

ಆ) ಇದರ ಜೊತೆಗೆ ರಾಜ್ಯದಲ್ಲಿ ಇತರೆ ಎಲ್ಲಾ ಮೂಲಗಳಿಂದ ಉತ್ಪಾದನೆಯಾಗುವ ಮದ್ಯಪಾನ ನಿಷೇಧಿಸಲು ಸರ್ಕಾರ ಆಲೋಚಿಸಿದೆಯೇ?

ಶ್ರೀ ಬಿ ಎಸ್ ಯಡಿಯೂರಪ್ಪ (ಮಾನ್ಯ ಉಪಮುಖ್ಯಮಂತ್ರಿಗಳು)

ಅ) ಸಾರಾಯಿ ಮಾರಾಟದ ನಿಷೇಧವನ್ನು ದಿನಾಂಕ 01-07-2007 ರಿಂದ ಜಾರಿಗೆ ತರಲಾಗುವುದು

ಹಿಂದಿನ ಆರ್ಥಿಕ ವರ್ಷ, ಅಂದರೆ 2005-06 ನೇ ಸಾಲಿನಲ್ಲಿ ಸಾರಾಯಿ ಮಾರಾಟದಿಂದ ಸರ್ಕಾರಕ್ಕೆ ರೂ 1565 43 ಕೋಟಿಗಳಷ್ಟು ವರಮಾನ ಬಂದಿದೆ

ಆ) ಇಲ್ಲ

1371 (2032) ಶ್ರೀ ರಮೇಶ್ ಕುಮಾರ್ ಕೆ ಆರ್ (ಶ್ರೀನಿವಾಸಪುರ) - ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಅರ್ಜಿದಾರ ರೈತರಿಗೆ ಅವರ ಹಕ್ಕುಗಳನ್ನು ಊರ್ಜಿತಗೊಳಿಸುವ ಅಧಿಕಾರೇತರ ಸಮಿತಿಗಳನ್ನು ರಾಜ್ಯದ ಎಷ್ಟು ತಾಲ್ಲೂಕುಗಳಲ್ಲಿ ರಚಿಸಲಾಗಿದೆ,

ಆ) ಈ ಕಾರ್ಯಾಚರಣೆಯನ್ನು ರಾಜ್ಯದಾದ್ಯಂತ ಎಷ್ಟು ವರ್ಷಗಳಲಿ ಪೂರೈಸಬೇಕೆಂದು ಸರ್ಕಾರ ಯೋಚಿಸಿದೆ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಈಗಾಗಲೇ 119 ತಾಲ್ಲೂಕುಗಳಿಗೆ ಬಗರ್‌ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಗಳಿಗೆ ಅಧಿಕಾರೇತರ ಸದಸ್ಯರನ್ನು ನೇಮಿಸಿ ಆದೇಶ ಹೊರಡಿಸಲಾಗಿದೆ

ಆ) ಈ ಕಾರ್ಯಚರಣೆ ಪೂರೈಸಲು ದಿನಾಂಕ 26-04-2008 ರವರೆಗೆ ಅವಧಿಯನ್ನು ವಿಸ್ತರಿಸಲಾಗಿದೆ

1372 (2033) ಶ್ರೀ ರಮೇಶ್ ಕುಮಾರ್ ಕೆ ಆರ್ (ಶ್ರೀನಿವಾಸಪುರ) - ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶ್ರೀನಿವಾಸಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಅರಣ್ಯ ಭೂಮಿ ಅತಿಕ್ರಮಣ ಆಗಿರುವ ಪ್ರಕರಣಗಳು ಎಷ್ಟು,

ಆ) ಇವುಗಳ ಪೈಕಿ ಸಾರ್ವಜನಿಕರ ದೂರುಗಳ ಆಧಾರದ ಮೇಲೆ ನೋಂದಾಯಿಸಲಾದ ಪ್ರಕರಣಗಳು ಎಷ್ಟು, ಮತ್ತು ಅರಣ್ಯ ಅಧಿಕಾರಿಗಳ ಫಿರ್ಯಾಧಿನ ಮೇಲೆ ನೋಂದಾಯಿಸಲಾಗಿರುವ ಪ್ರಕರಣಗಳು ಎಷ್ಟು,

ಇ) ಕಂದಾಯ ಇಲಾಖೆಯ ದಾಖಲೆಗಳನ್ನು ಪ್ರಶ್ನಿಸಿರುವ ಮತ್ತು ಅರಣ್ಯ ಇಲಾಖೆಯ ನಡುವೆ ಇರುವ ಪ್ರಕರಣಗಳು ಎಷ್ಟು,

ಈ) ಯಾವುದೇ ದಾಖಲೆಗಳು ಇಲ್ಲದೇ ನೇರವಾಗಿ ದೌರ್ಜನ್ಯದಿಂದ ಅರಣ್ಯ ಪ್ರದೇಶ ಅತಿಕ್ರಮಿಸಿರುವ ಪ್ರಕರಣಗಳು ಎಷ್ಟು?

ಶ್ರೀ ಸಿ ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) .

ಅ) 92 ಪ್ರಕರಣಗಳು

ಆ) 1) ಸಾರ್ವಜನಿಕ ದೂರುಗಳ ಆಧಾರದ ಮೇಲೆ ನೋದಾಯಿಸಲಾದ ಪ್ರಕರಣಗಳು
- ಲಿಖಿತ ಮೂಲಕ 1 ಪ್ರಕರಣ
- ಮೌಖಿಕ ಮೂಲಕ 5 ಪ್ರಕರಣಗಳು
- **ಒಟ್ಟು 6 ಪ್ರಕರಣಗಳು**

2) ಅರಣ್ಯ ಅಧಿಕಾರಿಗಳ ಫಿರ್ಯಾದಿನ ಮೇಲೆ ನೋಂದಾಯಿಸಲಾಗಿರುವ ಪ್ರಕರಣಗಳು — **86 ಪ್ರಕರಣಗಳು**

ಇ) 205 ಪ್ರಕರಣಗಳು

ಈ) 13 ಪ್ರಕರಣಗಳು

1373 (1941) ಶ್ರೀ ರವಿ ಸಿ ಟಿ (ಚಿಕ್ಕಮಗಳೂರು) – ಮಾನ್ಯ ಯೋಜನೆ, ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳೀಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅನುಮತಿ ಪಡೆದಿರುವ ಲಾಟರಿ ಉದ್ಯಮಿಗಳ ಸಂಖ್ಯೆ ಎಷ್ಟು,

ಆ) ಯಾವ ಯಾವ ರಾಜ್ಯಗಳಿಗೆ ಲಾಟರಿ ಮಾರಾಟಕ್ಕೆ ನಮ್ಮ ರಾಜ್ಯದಲ್ಲಿ ಅವಕಾಶ ನೀಡಲಾಗಿದೆ,

ಇ) ಇವುಗಳಲ್ಲಿ ಆನ್‌ಲೈನ್ ಮತ್ತು ಒಂದು ಅಂಕಿ ಲಾಟರಿಗಳೆಷ್ಟು, (ವಿವರ ನೀಡುವುದು)

ಈ) ಲಾಟರಿ ಉದ್ಯಮದಿಂದ ಸರ್ಕಾರಕ್ಕೆ ಬರುತ್ತಿರುವ ವಾರ್ಷಿಕ ವರಮಾನವೆಷ್ಟು,

ಉ) ಕರ್ನಾಟಕ ರಾಜ್ಯ ಲಾಟರಿ ಉದ್ಯಮವನ್ನು ನಿಷೇಧಿಸುವ ಉದ್ದೇಶ ಸರ್ಕಾರಕ್ಕಿದೆಯೇ,

ಊ) ಲಾಟರಿ ಉದ್ಯಮದಿಂದ ಸಾಮಾಜಿಕ ಮತ್ತು ಆರ್ಥಿಕ ದುಷ್ಪರಿಣಾಮವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಋ) ಲಾಟರಿ ನಿಷೇಧದಿಂದ ಸರ್ಕಾರದ ಬೊಕ್ಕಸಕ್ಕೆ ಆಗುವ ನಷ್ಟ ಎಷ್ಟು?

ಶ್ರೀ ರಾಮಚಂದ್ರಗೌಡ (ಯೋಜನೆ, ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

ಅ) ಲಾಟರಿ (ರೆಗ್ಯುಲೇಷನ್) ಆಕ್ಟ್ 1998 ರನ್ವಯ ಕೇವಲ ರಾಜ್ಯ ಸರ್ಕಾರಗಳು ಮಾತ್ರ ಲಾಟರಿಯನ್ನು ನಡೆಸಬಹುದಾಗಿದ್ದು, ಉದ್ಯಮಿ ಲಾಟರಿ ನಡೆಸಲು ಅನುಮತಿಗೆ ಅವಕಾಶವಿರುವುದಿಲ್ಲ ಆದ್ದರಿಂದ ಯಾವುದೇ ಉದ್ಯಮಿಗೆ ರಾಜ್ಯದಲ್ಲಿ ಲಾಟರಿ ನಡೆಸಲು ಅನುಮತಿ ನೀಡಿರುವುದಿಲ್ಲ

ಆ) ಲಾಟರಿ (ರೆಗ್ಯುಲೇಷನ್) ಆಕ್ಟ್ 1998 ರನ್ವಯ ಹೊರ ರಾಜ್ಯಗಳು ತಮ್ಮ ರಾಜ್ಯದ ಲಾಟರಿ ಟಿಕೆಟುಗಳನ್ನು ಇತರೆ ರಾಜ್ಯಗಳಲ್ಲಿ ಮಾರಾಟ ಮಾಡಲು ಪ್ರತ್ಯೇಕ ಅನುಮತಿ ಅಗತ್ಯವಿರುವುದಿಲ್ಲ ಪ್ರಸ್ತುತ ಕರ್ನಾಟಕದಲ್ಲಿ ಸಿಕ್ಕಿಂ, ನಾಗಾಲ್ಯಾಂಡ್, ಅರುಣಾಚಲ ಪ್ರದೇಶ ರಾಜ್ಯಗಳ ಹಾಗೂ ರಾಯಲ್ ಗೌರ್ನಮೆಂಟ್ ಆಫ್ ಭೂತಾನ್ ಸರ್ಕಾರದ ಲಾಟರಿ ಟಿಕೇಟುಗಳು ಮಾರುಕಟ್ಟೆ ಏಜೆಂಟರುಗಳ ಮುಖಾಂತರ ಮಾರಾಟವಾಗುತ್ತಿವೆ

ಇ) ಪ್ರತಿದಿನ ವಿವಿಧ ರಾಜ್ಯ ಸಕಾರಗಳು 41 ರಿಂದ 43 ಆನ್‌ಲೈನ್ ಲಾಟರಿ ಡ್ರಾಗಳ ಟಿಕೆಟ್‌ಗಳನ್ನು ಮಾರಾಟ ಮಾಡುತ್ತಿದ್ದಾರೆ ಲಾಟರಿ ಡ್ರಾಗಳ ಟಿಕೆಟ್‌ಗಳನ್ನು ಮಾರಾಟ ಮಾಡುತ್ತಿದ್ದಾರೆ ಲಾಟರಿ (ರೆಗ್ಯುಲೇಷನ್) ಆಕ್ಟ್ 1998 ರನ್ವಯ ಒಂದಂಕಿ

ಲಾಟರಿಯನ್ನು ನಿಷೇಧಿಸಲಾಗಿದೆ ಆದ್ದರಿಂದ ಯಾವುದೇ ಒಂದಂಕಿ ಲಾಟರಿ ರಾಜ್ಯದಲ್ಲಿ ನಡೆಯುತ್ತಿಲ್ಲ

ಈ) ಕರ್ನಾಟಕ ರಾಜ್ಯ ಲಾಟರಿ ಟಿಕೆಟ್ ಮಾರಾಟದಿಂದ 2006–07 ನೇ ಸಾಲಿನಲ್ಲಿ ಇಲ್ಲಿಯವರೆಗೆ ಸರ್ಕಾರದ ಪಾಲಾಗಿ ರೂ 34 30 ಕೋಟಿ ನಿವ್ವಳ ಆದಾಯ ಬಂದಿರುತ್ತದೆ ಇದೇ ಸಾಲಿನಲ್ಲಿ ರಾಜ್ಯ ಸರ್ಕಾರವು ಡಿಸೆಂಬರ್ 2007 ಅಂತ್ಯದಲ್ಲಿದ್ದಂತೆ ರೂ 85 62 ಕೋಟಿ ಆದಾಯವನ್ನು ಲಾಟರಿ ಮೇಲಿನ ಕರದ ರೂಪದಲ್ಲಿ ಸ್ವೀಕರಿಸಿರುತ್ತದೆ

ಉ) ದಿನಾಂಕ 1–04–2007 ರಿಂದ ಜಾರಿಗೆ ಬರುವಂತೆ ಕರ್ನಾಟಕ ರಾಜ್ಯವನ್ನು ಲಾಟರಿ ಮುಕ್ತ ವಲಯವನ್ನಾಗಿ ಘೋಷಿಸಲಾಗುವುದು

ಊ) ಹೌದು

ಋ) ರಾಜ್ಯ ಸರ್ಕಾರಕ್ಕೆ ವಾರ್ಷಿಕವಾಗಿ ಸುಮಾರು ರೂ 250 00 ಕೋಟಿಗಳ ವರಮಾನ ಖೋತಾ ಆಗುತ್ತದೆ

1374 (1355) ಶ್ರೀ ರೋಷನ್ ಬೇಗ್ ಆರ್ (ಜಯಮಹಲ್) –ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕನಕಪುರ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ 396 ಅನಧಿಕೃತ ಗಣಿಗಾರಿಕೆ ಕಂಪನಿಗಳ ಪೈಕಿ ಕೇವಲ 23 ಕಂಪನಿಗಳ ವಿರುದ್ಧ ಮಾತ್ರ ಅರಣ್ಯ ಇಲಾಖೆ ದೂರು ದಾಖಲಿಸಿ ಇನ್ನುಳಿದ 373 ಕಂಪನಿಗಳ ವಿರುದ್ಧ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ದೂರು ದಾಖಲಾಗಿಸಿರುವುದಾಗಿ ಹೇಳಿರುವುದು ನಿಜವಲ್ಲವೆ, (ಸಂಸ್ಥೆ ಮತ್ತು ಮಾಲೀಕರುಗಳ ವಿವರಗಳನ್ನೊದಗಿಸುವುದು),

ಆ) ಇವುಗಳ ಮೇಲೆ ಯಾವ ಯಾವ ಕಾನೂನು ಕ್ರಮ ಕೈಗೊಳ್ಳಲಾಗಿದೆ,

ಇ) ಈ ಪ್ರದೇಶದಲ್ಲಿ ಕಾಡಾನೆಗಳು ಗ್ರಾಮಗಳಿಗೆ ನುಗ್ಗಿ ಬೆಳೆ ನಾಶ ಮತ್ತು ಪ್ರಾಣಹಾನಿ ಉಂಟುಮಾಡುತ್ತಿರುವುದನ್ನು ತಡೆಯಲು ಸುಮಾರು ರೂ 200 ಕೋಟಿಗಳನ್ನು ಮೀಸಲಿಟ್ಟಿರುವುದಾಗಿ ಘೋಷಿಸಿರುವುದು ನಿಜವಲ್ಲವೇ,

ಈ) ಹಾಗಿದ್ದಲ್ಲಿ, ಈ ಹಣವನ್ನು ಯಾವ ಯಾವ ಪ್ರಕರಣಗಳಲ್ಲಿ ಎಷ್ಟೆಷ್ಟು ಹಣವನ್ನು ನೀಡಲಾಗಿದೆ?

ಶ್ರೀ ಸಿ ಚೆನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ನಿಜವಾಗಿರುವುದಿಲ್ಲ

ಆದರೆ ಕನಕಪುರ ಅರಣ್ಯ ಪ್ರದೇಶದಲ್ಲಿ ಅನಧಿಕೃತ ಕಲ್ಲು ಗಣಿಗಾರಿಕೆ ನಡೆಯುತ್ತಿರುವ 99 ಪ್ರಕರಣಗಳು ಪತ್ತೆ ಹಚ್ಚಲಾಗಿದೆ ಈ 99 ಪ್ರಕರಣಗಳ ಪೈಕಿ 76 ಪ್ರಕರಣಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಅರಣ್ಯ ಕಾಯ್ದೆ 1963 ರನ್ವಯ ಅರಣ್ಯ ಅಪರಾಧ ಮೊಕದ್ದಮೆ ದಾಖಲುಮಾಡಲಾಗಿದೆ

ಮೇಲ್ಕಂಡ 76 ಪ್ರಕರಣಗಳ ಸಂಸ್ಥೆ ಮತ್ತು ಮಾಲೀಕರ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ

ಆ) ಮೇಲ್ಕಂಡ ಎಲ್ಲಾ ಅನಧಿಕೃತ ಕಲ್ಲು ಗಣಿಗಾರಿಕೆಯ ಪ್ರಕರಣಗಳಿಗೆ ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 24, 73 ಹಾಗೂ 64(ಎ) ಯಂತೆ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ

ಇ) ಈ ವೃತ್ತದ ಕನಕಪುರ ಅರಣ್ಯ ಪ್ರದೇಶಕ್ಕೆ ಮಾತ್ರ ಕಾಡಾನೆ ಹಾವಳಿ ಮತ್ತು ಇತರ ಬೆಳೆಹಾನಿ ತಡೆಗಟ್ಟಲು 200 ಕೋಟಿ ರೂ ಗಳು ಮೀಸಲಿಟ್ಟಿರುವ ವಿಷಯ ನಿಜವಲ್ಲ

ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ

ಅನುಬಂಧ

ಕನಕಪುರ ತಾಲ್ಲೂಕಿನಲ್ಲಿ ಅನಧಿಕೃತ ಗಣಿಗಾರಿಕೆ ನಡೆಸುತ್ತಿರುವ ಸಂಸ್ಥೆ ಮತ್ತು ಮಾಲೀಕರ ವಿವರ

ಕ್ರ. ಸಂ	ಸಂಸ್ಥೆ/ಮಾಲೀಕರ ಹೆಸರು	ಗಣಿಗಾರಿಕೆಯ ಸ್ಥಳ	
		ಹೋಬಳಿ	ಗ್ರಾಮ
1	ಸಿ ಆರ್ ಸ್ವಾಮಿ	ಕೋಡಿಹಳ್ಳಿ	ಸಾಲಬನ್ನಿ
2	ನಿರಂಜನಮೂರ್ತಿ ಎಸ್ ಎಂ	ಕಸಬ	ಶಿವನಹಳ್ಳಿ
3	ಚೆನ್ನಾರೆಡ್ಡಿ ಬಿ ಎಂ	ಕಸಬ	ಶಿವನಹಳ್ಳಿ
4	ಸ್ಕಂದ	ಕಸಬ	ಶಿವನಹಳ್ಳಿ
5	ಸೋನಿ ಗ್ರಾನೈಟ್ಸ್	ಕಸಬ	ಕೊನೂರು
6	ಶಿಲ್ಪಿ ಗ್ರಾನೈಟ್ಸ್	ಕಸಬ	ಕೆಬ್ಬೆಹಳ್ಳಿ
7	ಮೈಸೂರು ಮಿನರಲ್ಸ್ ಲಿ	ಕಸಬ	ಕೆಬ್ಬೆಹಳ್ಳಿ
8	ಮೈಸೂರು ಮಿನರಲ್ಸ್ ಲಿ	ಕಸಬ	ನಿಡಗಲ್
9	ಜಯಶ್ರೀ ದಿಂಡೂರು	ಉಯ್ಯಂಬಳ್ಳಿ	ಮರಳೇಬೇಕುಪ್ಪೆ
10	ಶಬರಿ ಗ್ರಾನೈಟ್ಸ್	ಉಯ್ಯಂಬಳ್ಳಿ	ಕೂತಗಳೆ
11	ಕೃಷ್ಣಮೂರ್ತಿ ಬಿ ಎನ್	ಉಯ್ಯಂಬಳ್ಳಿ	ಕೂತಗಳೆ
12	ಲೋಕೇಶ	ಉಯ್ಯಂಬಳ್ಳಿ	ಕೂತಗಳೆ
13	ಇಕ್ಬಾಲ್ ಹುಸೇನ್	ಕೋಡಿಹಳ್ಳಿ	ತಿಪ್ಪೂರು
14	ಮೆ॥ ಹೆನ್‌ರಾಕ್ಸ್ ಇಂಡಿಯಾ ಪ್ರೈ ಲಿ	ಕೋಡಿಹಳ್ಳಿ	ತಿಪ್ಪೂರು
15	ಚಂದ್ರಕಲಾ ಟಿ ಎನ್	ಕೋಡಿಹಳ್ಳಿ	ಬಿಜ್ಜಹಳ್ಳಿ

16	ಜುಲ್ಫಿಕರ್ ಅಲಿ ಎಂ	ಕೋಡಿಹಳ್ಳಿ	ಬೊಮ್ಮಸಂದ್ರ
17	ಡಿ ಕೆ ಸುರೇಶ್	ಉಯ್ಯಂಬಳ್ಳಿ	ಕೋಟೆಕೊಪ್ಪ
18	ಸಿ ವಿಎಸ್ ಗ್ರಾನೈಟ್ಸ್	ಉಯ್ಯಂಬಳ್ಳಿ	ಚಿಕ್ಕೊಪ್ಪ
19	ಸಿ ವಿಎಸ್ ಗ್ರಾನೈಟ್ಸ್	ಉಯ್ಯಂಬಳ್ಳಿ	ಚಿಕ್ಕೊಪ್ಪ
20	ಮೆ॥ ಲಕ್ಷ್ಮಿ ವೆಂಕಟೇಶ್ವರ ಗ್ರಾನೈಟ್ಸ್	ಕಸಬ	ಶಿವನಹಳ್ಳಿ
21	ಲೇಪಾಕ್ಷ ಎಸ್	ಉಯ್ಯಂಬಳ್ಳಿ	ಮರಳೇಬೇಕುಪ್ಪೆ
22	ಮೆ॥ ಹೆನ್‌ರಾಕ್ಸ್ ಪ್ರೈ ಲಿ	ಉಯ್ಯಂಬಳ್ಳಿ	ಮರಳೇಬೇಕುಪ್ಪೆ
23	ಮೆ॥ ಇಂಡಿಯನ್ ರಾಕ್ಸ್ ಪ್ರೈ ಲಿ	ಉಯ್ಯಂಬಳ್ಳಿ	ಮರಳೇಬೇಕುಪ್ಪೆ
24	ಅನಧಿಕೃತ	ಕೋಡಿಹಳ್ಳಿ	ಬಿಜ್ಜಹಳ್ಳಿ
25	ಅನಧಿಕೃತ	ಕೋಡಿಹಳ್ಳಿ	ಬೊಮ್ಮಸಂದ್ರ
26	ಅನಧಿಕೃತ	ಉಯ್ಯಂಬಳ್ಳಿ	ದೊಡ್ಡಕೊಪ್ಪ
27	ಅನಧಿಕೃತ	ಕೋಡಿಹಳ್ಳಿ	ಹೊಸದುರ್ಗ
28	ಗಾಯತ್ರಿ ವಿಕ್ರಮ್	ಕೋಡಿಹಳ್ಳಿ	ಹೊಸದುರ್ಗ
29	ರೋನಾ ಕಟರ್ಸ್	ಕೋಡಿಹಳ್ಳಿ	ಹೊಸದುರ್ಗ
30	ಮೂನ್‌ರಾಕ್ ಏಜೆನ್ಸಿ ಪ್ರೈ ಲಿ	ಕಸಬ	ಶಿವನಹಳ್ಳಿ
31	ಯು ಎಸ್ ಎ ಯಾನ್ ಎಕ್ಸಿಮ್ಸ್	ಕಸಬ	ಶಿವನಹಳ್ಳಿ
32	ಗಿರೀಶ್ ಪಿ	ಉಯ್ಯಂಬಳ್ಳಿ	ಪುರದೊಡ್ಡಿ
33	ಪಾವಟೆ ಆರ್ ಪಿ	ಉಯ್ಯಂಬಳ್ಳಿ	ಪುರದೊಡ್ಡಿ
34	ನಿಂಗಪ್ಪ ನಿರಾವಣೆ ಬಾಲಪ್ಪ	ಉಯ್ಯಂಬಳ್ಳಿ	ಪುರದೊಡ್ಡಿ
35	ದೊರೆಸ್ವಾಮಿ ರಾಜು	ಉಯ್ಯಂಬಳ್ಳಿ	ಪುರದೊಡ್ಡಿ

36	ಶ್ರೀಧರ ರೆಡ್ಡಿ ವಿ	ಉಯ್ಯಂಬಳ್ಳಿ	ಪುರದೊಡ್ಡಿ
37	ಸಿದ್ಧರಾಜು	ಉಯ್ಯಂಬಳ್ಳಿ	ಕೂತಗಳೆ
38	ರವಿ ಎಸ್	ಉಯ್ಯಂಬಳ್ಳಿ	ಕೂತಗಳೆ
39	ತ್ರಿಶೂಲ್ ಗ್ರಾನೈಟ್ಸ್	ಉಯ್ಯಂಬಳ್ಳಿ	ಕೂತಗಳೆ
40	ಅನಧಿಕೃತ	ಉಯ್ಯಂಬಳ್ಳಿ	ಕೂತಗಳೆ
41	ಅನಧಿಕೃತ	ಉಯ್ಯಂಬಳ್ಳಿ	ಕೂತಗಳೆ
42	ಸಿ ವಿ ಎಸ್ ಗ್ರಾನೈಟ್ಸ್	ಉಯ್ಯಂಬಳ್ಳಿ	ಚಿಕ್ಕೊಪ್ಪ
43	ಅನಧಿಕೃತ	ಉಯ್ಯಂಬಳ್ಳಿ	ಚಿಕ್ಕೊಪ್ಪ
44	ಅನಧಿಕೃತ	ಸಾತನೂರು	ಅಚಲು
45	ಮೆ॥ ಮಂಜುನಾದ ಓವರ್‌ಸೀಸ್ ಪ್ರೈಲಿ	ಕೋಡಿಹಳ್ಳಿ	ಸಾಲಬನ್ನಿ
46	ಕರ್ನಾಟಕ ರೇರ್ ಅರ್ತ್	ಕೋಡಿಹಳ್ಳಿ	ತಟ್ಟೇಕೆರೆ
47	ಮೆ॥ ಮಂಜುನಾದ ಓವರ್‌ಸೀಸ್ ಪ್ರೈಲಿ	ಕಸಬ	ನಿಡಗಲ್
48	ನವೀನ್	ಕಸಬ	ಶಿವನಹಳ್ಳಿ
49	ಆನ್‌ಸ್ಟೆನ್	ಕಸಬ	ಶಿವನಹಳ್ಳಿ
50	ಎಂ ಎಂ ಐ ಕಂಪನಿ	ಕಸಬ	ಶಿವನಹಳ್ಳಿ
51	ಸಿಂಧೂರ್ ಗ್ರಾನೈಟ್ ಎಕ್ಸ್‌ಪೋರ್ಟ್	ಕಸಬ	ಶಿವನಹಳ್ಳಿ
52	ಆನ್‌ಸ್ಟೆನ್	ಕಸಬ	ಶಿವನಹಳ್ಳಿ
53	ತಿಮ್ಮೇಗೌಡ ಎಂ	ಕಸಬ	ಶಿವನಹಳ್ಳಿ
54	ಮೂನ್‌ರಾಕ್ ಏಜೆಸ್ ಲಿ	ಕಸಬ	ಶಿವನಹಳ್ಳಿ
55	ಹಿಲ್‌ಟಾಪ್ ಗ್ರಾನೈಟ್ ಪ್ರೈ ಲಿ	ಕಸಬ	ಶಿವನಹಳ್ಳಿ

56	ಶಿವಮಾಧು	ಕಸಬ	ಶಿವನಹಳ್ಳಿ
57	ಟಚ್‌ಸ್ಟೋನ್ ಇಂಡಿಯಾ	ಕಸಬ	ಕನಕಪುರ
58	ಮಂಜುನಾಥ ಓವರ್‌ಸೀಸ್	ಕಸಬ	ಕೂನೂರು
59	ಸುದರ್ಶನ್ ಎಕ್ಸ್‌ಪೋರ್ಟರ್ಸ್	ಕಸಬ	ಕೂನೂರು
60	ಶೀಫಾ ಎಕ್ಸ್‌ಪೋರ್ಟ್	ಕಸಬ	ಕೂನೂರು
61	ರಾಮ್ ಗ್ರಾನೈಟ್ಸ್	ಕಸಬ	ಕೂನೂರು
62	ಸುದರ್ಶನ್	ಕಸಬ	ಕನಕಪುರ
63	ಪಲ್ಲವ್ ಗ್ರಾನೈಟ್ಸ್	ಕಸಬ	ನಿಡಗಲ್
64	ಗೋಪಿನಾಥ್ ಬಿ	ಕೋಡಿಹಳ್ಳಿ	ಸಾಲಬನ್ನಿ
65	ಬಸವರಾಜು ಬಿ ಎಸ್	ಕೋಡಿಹಳ್ಳಿ	ಹೊಸದುರ್ಗ
66	ಮೆ॥ ಮೈಸೂರು ಮಿನರಲ್ಸ್ ಪ್ರೈ ಲಿ.	ಉಯ್ಯಂಬಳ್ಳಿ	ಪುರದೊಡ್ಡಿ
67	ಶ್ರೀನಿವಾಸ್ ಅಂಡ್ ಕಂಪನಿ	ಕೋಡಿಹಳ್ಳಿ	ಕೋಳಗುಂಡನಹಳ್ಳಿ
68	ಕೆಂಚಾಬೋವಿ	ಉಯ್ಯಂಬಳ್ಳಿ	ಚಿಕ್ಕೊಪ್ಪ
69	ಅಲೋನ್ ರಸ್ಕಿನ್	ಕಸಬ	ಕನಕಪುರ
70	ಪ್ರೇಮ ಲೀಲ	ಕಸಬ	ನಿಡಗಲ್
71	ಸತ್ಯಮೂರ್ತಿ ಹೆಚ್ ಕೆ	ಕಸಬ	ನಿಡಗಲ್
72	ಮುದ್ದೂರೇಶ್ವರ ಮೈನಿಂಗ್	ಕಸಬ	ಕೆಬ್ಬೆಹಳ್ಳಿ
73	ಅನಧಿಕೃತ		ಗಟ್ಟಿಗುಂದ
74	ಸಿಂಗಯ್ಯ	ಕಸಬ	ಕೆಬ್ಬೆಹಳ್ಳಿ
75	ನಾರಾಯಣ	ಉಯ್ಯಂಬಳ್ಳಿ	ಚಿಕ್ಕೊಪ್ಪ
76	ರತ್ನಮ್ಮ	ಕಸಬ	ನಾರಾಯಣಪುರ

1375 (1372) ಶ್ರೀ ರೋಷನ್ ಬೇಗ್ ಆರ್ (ಜಯಮಹಲ್)
ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2007 ನೇ ಸಾಲಿನ ಆರ್ಥಿಕ ವರ್ಷದಲ್ಲಿ ರಾಜ್ಯದಲ್ಲಿ ಸಾರಾಯಿ ಹಾಗೂ ಎಲ್ಲಾ ರೀತಿಯ ಲಾಟರಿಗಳನ್ನು ನಿಷೇಧಿಸಲಾಗುವುದು ಎಂದು ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿರುವುದು ನಿಜವಲ್ಲವೇ,

ಆ) ಹಾಗಿದ್ದಲ್ಲಿ ಎಂದಿನಿಂದ ಇದನ್ನು ಜಾರಿಗೊಳಿಸಲಾಗುವುದು?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)

ಅ) 2007 – 08 ನೇ ಸಾಲಿನ ಆಯವ್ಯಯ ಮಂಡನೆಯ ಸಮಯದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳು ಕರ್ನಾಟಕ ರಾಜ್ಯದಲ್ಲಿ ಸಾರಾಯಿ ಮಾರಾಟ ಮಾಡುವುದನ್ನು ಮತ್ತು ಎಲ್ಲಾ ರೀತಿಯ ಲಾಟರಿಗಳನ್ನು ನಿಷೇಧಿಸುವುದಾಗಿ ತಿಳಿಸಿರುತ್ತಾರೆ

ಆ) ಕರ್ನಾಟಕದಾದ್ಯಂತ ಸಾರಾಯಿ ಮಾರಾಟದ ನಿಷೇಧವನ್ನು ದಿನಾಂಕ 01–07–07 ರಿಂದ ಜಾರಿಗೊಳಿಸಲಾಗುವುದು ಹಾಗೂ ರಾಜ್ಯದಲ್ಲಿ ಎಲ್ಲಾ ರೀತಿಯ ಲಾಟರಿಗಳನ್ನು 2007–08 ರ ಆರ್ಥಿಕ ವರ್ಷದಿಂದ ರದ್ದುಗೊಳಿಸಲಾಗುವುದು

1376 (1373) ಶ್ರೀ ರೋಷನ್ ಬೇಗ್ ಆರ್ (ಜಯಮಹಲ್) – ಮಾನ್ಯ ಯೋಜನೆ, ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಲಾಟರಿ ಏಜೆಂಟರುಗಳು ಸರ್ಕಾರದ ನೀತಿಯನ್ನು ಹಾಗೂ ನಿಗದಿತ ಸಮಯವನ್ನು ಕಡೆಗಣಿಸುವುದರಿಂದ ಲಾಟರಿ ಟಿಕೇಟ್ ಮಾರಾಟ ಧಂದೆಯನ್ನು ನಿಷೇಧಿಸಲಾಗುವುದೆಂದು ಮಾನ್ಯ ವಿಜ್ಞಾನ ತಂತ್ರಜ್ಞಾನ ಹಾಗೂ ಲಾಟರಿ ಸಚಿವರು ಪತ್ರಿಕೆಗಳಲ್ಲಿ ಹೇಳಿಕೆ ನೀಡಿರುವುದು ನಿಜವಲ್ಲವೇ,

ಆ) ಲಾಟರಿ ಟಿಕೇಟ್ ಮಾರಾಟವನ್ನು ನಿಗದಿತ ಸಮಯದಲ್ಲಿ ಮಾರಾಟ ಮಾಡುವುದು ಹಾಗೂ ಒಂದು ದಿನಕ್ಕೆ ಮೂರು ಡ್ರಾ ಮಾಡುವುದನ್ನು ಸಂಜೆ 5 ರಿಂದ 6 ಗಂಟೆಯವರೆಗೆ ನಿಗದಿಪಡಿಸಲಾಗುವುದೆಂದು ಹೇಳಿರುವುದು ಸಹ ನಿಜವೇ,

ಇ) ಈ ಬಗ್ಗೆ ಕೇಂದ್ರ ಮಂತ್ರಿಗಳೊಂದಿಗೆ ಸಮಾಲೋಚಸಿ ಲಾಟರಿಯನ್ನು ನಿಷೇಧಿಸಲು ಕ್ರಮಕೈಗೊಳ್ಳಲಾಗುವುದೆಂದು ಹೇಳಿರುವುದು ನಿಜವೇ,

ಈ) ಹೊರ ರಾಜ್ಯದ ಲಾಟರಿ ಟಿಕೇಟ್‌ಗಳ ಮಾರಾಟವನ್ನು ರಾಜ್ಯದಲ್ಲಿ ನಿಷೇಧಿಸುವುದಾಗಿ ಘೋಷಿಸಿರುವುದು ನಿಜವೇ,

ಉ) ಹಾಗಿದ್ದಲ್ಲಿ ಎಂದಿನಿಂದ ನಿಷೇಧಿಸಲಾಗುವುದು?

ಶ್ರೀ ರಾಮಚಂದ್ರಗೌಡ (ಯೋಜನೆ, ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

ಅ) ಹೌದು, ಕರ್ನಾಟಕ ರಾಜ್ಯವನ್ನು ದಿನಾಂಕ 1–04–2007 ರಿಂದ ಜಾರಿಗೆ ಬರುವಂತೆ ಲಾಟರಿ ಮುಕ್ತ ವಲಯವನ್ನಾಗಿ ಘೋಷಿಸಲಾಗುವುದು

ಆ, ಇ,ಈ) ಮೇಲೆ (ಅ) ಉಪ ಪ್ರಶ್ನೆಗೆ ನೀಡಿರುವ ಉತ್ತರದಿಂದಾಗಿ ಈ ಹಂತದಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಉ) ದಿನಾಂಕ 1–04–2007 ರಿಂದ ಜಾರಿಗೆ ಬರುವಂತೆ ಲಾಟರಿ ಧಂದೆಯನ್ನು ನಿಷೇಧಿಸಲಾಗುವುದು

1377 (1658) ಶ್ರೀಮತಿ ಶಕುಂತಲಾ ಟಿ ಶೆಟ್ಟಿ (ಪುತ್ತೂರು) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕು ಭೂಮಾಪನ ಇಲಾಖೆಯಲ್ಲಿ ಪ್ಲಾಟಿಂಗ್ (ಪಕ್ಕ ಪೋಡಿ) ಮಾಡುವ ಎಷ್ಟು ಕಡಗಳು ಬಾಕಿ ಇವೆ,

ಆ) ಈ ಜಿಲ್ಲೆಗೆ ಎಷ್ಟು ಮೋಜಿಣಿದಾರರ ಹುದ್ದೆ ಮಂಜೂರಾತಿಯಾಗಿದೆ ಹಾಗೂ ಅವರಲ್ಲಿ ಎಷ್ಟು ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ,

ಇ) ಖಾಲಿ ಇರುವ ಹುದ್ದೆಗಳಲ್ಲಿ ಯಾವಾಗ ಭರ್ತಿ ಮಾಡಿಕೊಳ್ಳಲಾಗುವುದು,

ಈ) ಪ್ಲಾಟಿಂಗ್ ನಿಧಾನವಾದ ಕಾರಣ ರೈತರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಉ) ಹಾಲಿ ಎಷ್ಟು ಜನ ಮೋಜಿಣಿದಾರರು ಪುತ್ತೂರಿನಿಂದ ನಿಯೋಜನೆಯಾಗಿರುತ್ತಾರೆ,

ಊ) ಇವರ ನಿಯೋಜನೆ ರದ್ದುಪಡಿಸಿ ಪುತ್ತೂರುನಲ್ಲಿಯೇ ಮುಂದುವರಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) 13,811 ಕಡತಗಳು ಬಾಕಿ ಇರುತ್ತದೆ

ಆ) ಮಂಜೂರಾದ ಹುದ್ದೆಗಳ ಸಂಖ್ಯೆ = 62

ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ = 62

ಇ) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ

ಈ) ಹೌದು

ಉ) 12 ನೇ ಹಣಕಾಸು ಆಯೋಗದಡಿ ನಗರಮಾಪನ ಕಾರ್ಯಕ್ಕಾಗಿ ಪುತ್ತೂರು ತಾಲ್ಲೂಕಿನಿಂದ ಇಬ್ಬರು ದ್ವಿತೀಯ ದರ್ಜೆ ಭೂಮಾಪಕರನ್ನು ಉಡುಪಿ ನಗರಮಾಪನ ಕಾರ್ಯಕ್ಕಾಗಿ ನಿಯೋಜಿಸಲಾಗಿರುತ್ತದೆ

ಊ) ಉಡುಪಿ ನಗರದ ವಿಸ್ತೃತ ನಗರಮಾಪನ ಕಾರ್ಯ ಮುಗಿದ ಕೂಡಲೇ ನಿಯೋಜನೆಯನ್ನು ರದ್ದುಪಡಿಸಿ ಪುತ್ತೂರಿನಲ್ಲಿಯೇ ಮುಂದುವರಿಸಲಾಗುವುದು

1378 (2056) ಶ್ರೀ ಬಿ ಕೆ ಸಂಗಮೇಶ್ವರ (ಭದಾವತಿ) – ಮಾನ್ಯ ಬೃಹತ್, ಮಧ್ಯಮ, ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭದ್ರಾವತಿ ತಾಲ್ಲೂಕಿನ ವ್ಯಾಪ್ತಿಗೆ ಬರುವ ಮೈಸೂರು ಪೇಪರ್‌ಮಿಲ್ಸ್ ಕಾರ್ಖಾನೆಯನ್ನು ಖಾಸಗೀಕರಣಕ್ಕೆ ಅಲ್ಲಿನ ಜನರ ವಿರೋಧವಿರುವುದು ನಿಜವಲ್ಲವೇ,

ಆ) ಇನ್ನೂ ಮುಂದೆಯೂ ಸಹ ಸರ್ಕಾರವೇ ಈ ಎಂಪಿಎಂ ಕಾರ್ಖಾನೆಯನ್ನು ನಡೆಸಿಕೊಂಡು ಹೋಗಲು ಸಾಧ್ಯವಿಲ್ಲವೇ,

ಇ) ಈ ಎಂಪಿಎಂ ಕಾರ್ಖಾನೆಯು ಖಾಸಗೀಕರಣ ಮಾಡುವ ವಿಚಾರ ಸರ್ಕಾರದ ಮುಂದಿದೆಯೇ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಬೃಹತ್, ಮಧ್ಯಮ, ಸಣ್ಣ ಕೈಗಾರಿಕಾ ಸಚಿವರು)

ಅ) ಮೈಸೂರು ಪೇಪರ್ ಮಿಲ್‌ನ ಖಾಸಗೀಕರಣಕ್ಕೆ ಅಲ್ಲಿನ ಜನರ ವಿರೋಧದ ಯಾವುದೇ ಘಟನೆಯು ವರದಿಯಾಗಿಲ್ಲ

ಆ, ಇ) ಷೇರು ಬಂಡವಾಳದ ಶೇ 51 ರಷ್ಟು ಭಾಗವನ್ನು ಓರ್ವ ಆಯಕಟ್ಟಿನ ಪಾಲುದಾರರಿಗೆ ನೀಡಿ, ಅವರನ್ನು ಒಳಗೊಂಡ ಎಂಪಿಎಂ ಅನ್ನು ಪುನರ್ ರಚನೆ ಮಾಡಿ, ಪುನಶ್ಚೇತನಗೊಳಿಸಲು ಸರ್ಕಾರವು ತೀರ್ಮಾನ ತೆಗೆದುಕೊಂಡಿದೆ ಪುನರ್‌ರಚನೆ/ ಪುನಶ್ಚೇತನ ಯೋಜನೆಯನ್ನು ಜಾರಿಗೊಳಿಸುವ ಕಾರ್ಯನೀತಿಯನ್ನು ರೂಪಿಸಲಾಗುತ್ತಿದೆ

1379 (1447) Sri Shankarlingegowda H.S. (Chamaraja) :- Hon'ble Minister for Forest, Ecology and Environment please give the answer for this question?

a) How many temporary employees are working in Forest Department under different Categories and Groups (Furnish the district wise details),

b) Since how many years these persons are working,

c) What is the stand taken by Government regarding regularization of these employees?

Sri CHENNIGAPPA (Hon'ble Minister for Forest, Ecology and Environment)·

a) The Number of dailywage workers engaged from 01-07-84 to 29-01-90 in the Forest Department is as follows -

'C' Group	268
'D' Group	4772
Total	5040

Districtwise details of Daily wage is given on Annexure

b) These daily wage workers are working in the Department since 15 to 20 years.

c) In Civil Appeal No 3595-3612/1999 and 1861-2063/2001 and connected other Civil Appeals, regarding regularisation of daily wage employees working after 1-07-1984 the Constitution Bench of the Hon'ble Supreme Court has issued orders on 10-04-2006 However, as a one time measure, an opportunity was given to the state Government to regularize the services of certain irregularly appointed persons who fulfilled the following conditions -

1. **Such Daily wage workers appointments should have been made against duly sanstioned vacant posts.**

2 **At the time of appointment they should posses required qualification for that post**

3 **Such Daily wage workers should have served more than 10 years continuously in the same post**

4. **They should not have been continued more than 10 years with the intervention of orders of Courts of Tribunals.**

ವಿಧಾನ ಸಭೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ 1447 ರ ಅನುಬಂಧ – 1

ಕ್ರ. ಸಂ	ಜಿಲ್ಲೆಯ ಹೆಸರು	'ಸಿ' ದರ್ಜೆ	'ಡಿ' ದರ್ಜೆ	ಒಟ್ಟು
1	ಬೆಂಗಳೂರು ನಗರ	29	303	332
2	ಬೆಂಗಳೂರು ಗ್ರಾಮಾಂತರ	23	86	109
3	ಕೋಲಾರ	0	172	172
4	ಉತ್ತರ ಕನ್ನಡ	20	504	524
5	ಧಾರವಾಡ	15	94	109
6	ಗದಗ್	5	92	97
7	ಹಾವೇರಿ	2	90	92
8	ಕೊಡಗು	7	114	121
9	ದಕ್ಷಿಣ ಕನ್ನಡ	8	57	65
10	ಉಡುಪಿ	2	108	110
11	ಶಿವಮೊಗ್ಗ	33	353	386
12	ಚಿಕ್ಕಮಗಳೂರು	5	278	283
13	ಬೆಳಗಾಂ	26	370	396
14	ಬಾಗಲಕೋಟೆ	3	44	47
15	ಬಿಜಾಪುರ	3	92	95

16	ಹಾಸನ	6	261	267
17	ತುಮಕೂರು	2	364	366
18	ಚಿತ್ರದುರ್ಗ	6	197	203
19	ಬಳ್ಳಾರಿ	6	7	13
20	ದಾವಣಗೆರೆ	2	25	27
21	ಕೊಪ್ಪಳ	2	43	45
22	ಮೈಸೂರು	17	310	327
23	ಮಂಡ್ಯ	2	163	165
24	ಚಾಮರಾಜನಗರ	28	180	208
25	ಗುಲ್ಬರ್ಗಾ	5	271	276
26	ಬೀದರ್	6	148	154
27	ರಾಯಚೂರು	5	46	51
	ಒಟ್ಟು	**268**	**4772**	**5040**

1380 (1448) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ) – ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಾದಾದ್ಯಂತ ಇರುವ ಸಣ್ಣ ಕೈಗಾರಿಕೆಗಳು ಯಾವುವು,

ಆ) ಸದರಿ ಕೈಗಾರಿಕೆಗಳ ಪೈಕಿ ಮಹಿಳಾ ಉದ್ಯಮಿಗಳು ನಡೆಸುತ್ತಿರುವ ಕೈಗಾರಿಕೆಗಳು ಯಾವುವು, (ವಿವರ ನೀಡುವುದು),

ಇ) ಮಹಿಳಾ ಉದ್ಯಮಿಗಳ ಪ್ರೋತ್ಸಾಹಕ್ಕೆ ಸರ್ಕಾರ ರೂಪಿಸಿರುವ ಯೋಜನೆ ಮತ್ತು ನೀಡುತ್ತಿರುವ ಸಹಾಯವೇನು?

ಶ್ರೀ ಶಿವಾನಂದ ಎಸ್ ನಾಯ್ಕ್ (ಸಣ್ಣ ಕೈಗಾರಿಕಾ ಸಚಿವರು)

ಅ) ವಿವರಗಳು ಅನುಬಂಧ –1 ರಲ್ಲಿದೆ

ಆ) ವಿವರಗಳು ಅನುಬಂಧ –2 ರಲ್ಲಿದೆ

ಇ) 1) ಉದ್ಯಮಶೀಲತಾ ತರಬೇತಿಯನ್ನು ಸಿಡಾಕ್ ಮತ್ತು ಟೆಕ್ಸಾಕ್ ಸಂಸ್ಥೆಯಿಂದ ನೀಡಲಾಗುವುದು

2) ಹೊಸ ಕೈಗಾರಿಕಾ ನೀತಿ 2006–11 ರಲ್ಲಿ ಮಹಿಳಾ ಉದ್ದಿಮೆದಾರರು ಕೈಗಾರಿಕೆಗಳ ಮೇಲೆ ಹೂಡುವ ಬಂಡವಾಳದ ಮೇಲೆ ಶೇ 5 ರಷ್ಟು ರೂ 5 00 ಲಕ್ಷಗಳಿಗೆ ಮೀರದಂತೆ ಹೆಚ್ಚುವರಿಯಾಗಿ ಸಹಾಯಧನ ಸೌಲಭ್ಯ ಕಲ್ಪಿಸಲಾಗಿದೆ

3) ಮಹಿಳಾ ಉದ್ದಿಮೆದಾರರಿಂದ ಉತ್ಪಾದಿಸಿದ ವಸ್ತುಗಳಿಗೆ ಮಾರುಕಟ್ಟೆ ಕಲ್ಪಿಸಲು ಯಶೋದರ್ಶನ ವಸ್ತು ಪ್ರದರ್ಶನಗಳನ್ನು ಏರ್ಪಡಿಸಲಾಗುತ್ತಿದೆ

ವಿಧಾನಸಭೆ ಪ್ರಶ್ನೆ ಸಂಖ್ಯೆ 1448 ಕ್ಕೆ ಅನುಬಂಧ –1

ರಾಜ್ಯದಾದ್ಯಂತ ಇರುವ ಸಣ್ಣ ಕೈಗಾರಿಕೆಗಳು.

1) ಆಹಾರ ಮತ್ತು ತಂಪು ಪಾನೀಯ ಘಟಕಗಳು

2) ಜವಳಿ ಮತ್ತು ಸಿದ್ಧ ಉಡುಪು ಘಟಕಗಳು

3) ಮರ ಮತ್ತು ಮರ ಆಧಾರಿತ ಕೈಗಾರಿಕೆಗಳು

4) ಮುದ್ರಣ ಮತ್ತು ಲೇಖನ ಸಾಮಗ್ರಿ

5) ಚರ್ಮ ಮತ್ತು ಚರ್ಮ ಆಧಾರಿತ ಕೈಗಾರಿಕೆಗಳು

6) ರಬ್ಬರ್ ಮತ್ತು ಪ್ಲಾಸ್ಟಿಕ್ ಆಧಾರಿತ ಕೈಗಾರಿಕೆಗಳು

7) ರಾಸಾಯನಿಕ ಆಧಾರಿತ ಕೈಗಾರಿಕೆಗಳು

8) ಖನಿಜ ಆಧಾರಿತ ಕೈಗಾರಿಕೆಗಳು

9) ಬೇಸಿಕ್ ಮೆಟಲ್ ಆಧಾರಿತ ಕೈಗಾರಿಕೆಗಳು]

10) ಜನರಲ್ ಇಂಜಿನಿಯರಿಂಗ್ ಮತ್ತು ಮೆಕ್ಯಾನಿಕಲ್ ವಸ್ತುಗಳು

11) ಎಲಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ಕೈಗಾರಿಕೆಗಳು

12) ಆಟೋಮೊಬೈಲ್ಸ್

13) ಟ್ರಾನ್ಸ್‌ಪೋರ್ಟ್ ಅಂಡ್ ಎಕ್ಯುಪ್‌ಮೆಂಟ್ಸ್

14) ಫೆರಸ್ ಅಂಡ್ ನಾನ್ ಫೆರಸ್

15) ದುರಸ್ತಿ ಮತ್ತು ಸೇವಾ ಘಟಕಗಳು

16) ಇತರೆ ಸೇವಾ ಘಟಕಗಳು

17) ಇತರೆ ಉತ್ಪನ್ನಗಳು

ಅನುಬಂಧ – 2

ಮಹಿಳಾ ಉದ್ಯಮಿಗಳು ನಡೆಸುತ್ತಿರುವ ಕೈಗಾರಿಕೆಗಳು

1) ಆಹಾರ ಪದಾರ್ಥಗಳು

2) ಸಿದ್ಧ ಉಡುಪು

3) ಬಿದಿರಿನ ವಸ್ತುಗಳ ತಯಾರಿಕೆ

4) ಚರ್ಮ ಆಧಾರಿತ ಕೈಗಾರಿಕೆಗಳು

5) ರೇಷ್ಮೆಹುರಿ, ನೆಯ್ಗೆ, ಎಂಬ್ರಾಯಿಡರಿ ಮತ್ತು ಕರಕುಶಲ ವಸ್ತುಗಳು

6) ಪೌಲ್ಟ್ರಿ

7) ಸೇವಾ ಮತ್ತು ದುರಸ್ತಿ

8) ಲೇಖನ ಸಾಮಗ್ರಿ

9) ಅಗರಬತ್ತಿ ತಯಾರಿಕೆ

10) ಫ್ಲೋರಿಕಲ್ಚರ್ ಮತ್ತಿತರೆ

1381(1312) ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ):–ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

a) The number of proposals received by the Government for setting up of new industries in Gulbarga District (Company wise details be furnished)

b) Out of them the number of proposals cleared by the Govt , (Company wise details be furnished) ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಎ) ಜನವರಿ 2004 ರಿಂದ ಇಲ್ಲಿಯವರೆಗೆ ಒಟ್ಟು 13 ಪ್ರಸ್ತಾವನೆಗಳು ಅನುಮೋದನೆಗಾಗಿ ಸರ್ಕಾರ್ಕಕೆ ಸಲ್ಲಿಸಿರುತ್ತಾರೆ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ

ಬಿ) 10 ಯೋಜನೆಗಳಿಗೆ ರಾಜ್ಯ ಉನ್ನತ ಮಟ್ಟದ ಅನುಮೋದನಾ ಸಮಿತಿ/ ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಯು ಅನುಮೋದನೆ ನೀಡಿದ್ದು, 3 ಯೋಜನೆಗಳಿಗೆ ಅನುಮೋದನೆಯು ಬಾಕಿ ಇರುತ್ತದೆ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ

ANNEXURE TO LA QUESTION NO - 1312

Details of proposals approved in Gulbarga District since January 2004

Sl No	Name of the unit and address	Location	Product	Date of approval	Investment in crores	Employment in Nos	Remarks
1	M/s Vasavadatta Cement Lakshmimarayana Nagar, Sedam-585 222	Sedam, Gulbarga	Electric Power Generation Coal/ Lignite based Thermal Power Plant-9MW	18 3.2004	33 75	15	Approved by SLSWCC
2	M/s The Printers(Mysore) Pvt Limited, Plot Nos 7-12, Kumbale godu Industrial Area,, 2nd Phase, Bangalore	Kagnoor Industrial Area, 2nd Stage, Gulbarga	Newspaper Printing and Publishing	16 11 2004	8 28	35	Approved by SLSWCC
3	M/s Grasim Industries Limited, Industry house, Race Course Road, Bangalore	Adityanagar Malkhed Village, Sedam Taluk, Gulbarga	Additional 20MW Thermal Power Plant,	20.3.2006	48.50	857	Approved by SLSWCC
4	M/s Monaspdevi Bakers Private Limited, "Patwari Sadan", 16-2-705/ 1/7, Professors Colony New Malkpet, Hyderabad	Nandur Kasaking Industrial Area, Gulbarga	Glucose Biscuits - 19200 MTS/Annum	30 10.2006	9.27	279	Approved by SLSWCC
5	M/s. Vasavadatta Cements	Sedum Village, Sedam Taluk, Gulbarga.	Expansion project for Cement Plant - from 24.5 lakh MTPA to 451 lakh TPA with Captive Power generation from 25-20 MW to 47 20 MW	30 12.2004	432 50	150	Approved by SHLCC
6	M/s Icina Cements Private Limited	Mogla/Mergod Villages Chittapur Taluk Gulbarga.	10000 TPD Cement Plant	24 3 2006/ 23 2 2007	1832 60	200	Earlier project of 1500 TPD of Cement Plant was approved by SHLCC on 24 3 2006 and the approval to enhance the capacity to 10000 TPD was given in SHLCC meeting held on 23 2.07

7	M/s. Shree Renuka Sugars Limited	Havalga Village, Afzalpur Taluk, Gulbarga	5000 TCD White Crystal Sugar with 15 MW Co-gen Plant.	24.3 2005	81.33	335	Approved by SHLCC
8	M/s. ACC Limited	Wadi Village, Gulbarga	Expansion project for Cement Plant from 1 6 MMTPA to 2 67 MMTPA	28.8.2006	425.87	50	Approved by SHLCC
9	M/s. Vasavadatta Cements	Sedum Village Sedum Taluk, Gulbarga	Expansion project cement 4 1 MTPA to 9 MTPA and 30 MW Captive Power Generation.	28 8 2006	625.00	150	Approved by SHLCC
10	M/s Coregreen Sugars and Fuels Private Limited.	Turnkur Village, Shahpur Taluk, Gulbarga Dist.	5000 TCD Sugar Mil with 24 MW Captive Power Plant and 15000 KL Distillery	23 2 2007	250 00	445	Approved by SHLCC held on 23.2.2007
					3748.15	2510	
	Proposals to be approved.						
11	M/s Chincholi Sugars Mills Limited	Chincholi Villages and Daultapur Villages, Chincholi Taluk, Gulbarga.	2500 TCD expandable to 3500 TCD Sugar Plant with 26 MW Co-gen plant /	3.3 2005	97.85	242	Deferred in SHLCC Meeting held on 3 3.2006 because of non allocation of cane area
12	M/s. Dalmia Cement (Bharath Limited)	Udigi and Sedam, Sedam Taluk, Gulbarga Dist	4 Million Tonne Cement Plant with 45 MW Thermal Power Plant.	Yet to be approved	1027 30	404	The proponent has not appeared before the Screening Committee and hence the approval is pending
13	M/s Asian Dhall Industries Limited	Nandur-Kesaraiagi Indi Area, Gulbarga Dist	Dhall Processing	Yet to be approved	15 00	450	Placed before SLSWCC to be held on 23 3 2007
	Total:				1140.15	1096	

1382(1314) ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) –ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

a) The financials allocation made for minor irrigation for the year 2006-07 under various heads of account (details be furnished),

b) Out of the said allocation, the works taken up by the minor irrigation department through out the State?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)

ಅ) 2006–07 ನೇ ಸಾಲಿನ ಆಯವ್ಯಯದಲ್ಲಿ ಸಣ್ಣ ನೀರಾವರಿ ಇಲಾಖೆಗೆ ನಿಗದಿಪಡಿಸಿದ ಅನುದಾನದ ವಿವರ ಕೆಳಕಂಡಂತಿದೆ,

(ರೂ ಲಕ್ಷಗಳಲ್ಲಿ)

ಕ್ರಸಂ	ಲೆಕ್ಕಶೀರ್ಷಿಕೆ	ಮೊತ್ತ	1 ನೇ ಪೂರಕ ಅನುದಾನ	ಒಟ್ಟು ಮೊತ್ತ
1	4702(ಯೋಜನೆ) ಮತ್ತು 4711(ಯೋಜನೆ)	56781 84	2846 00	59627 84
2	2702(ಯೋಜನೇತರ)	4065 47	800 00	4865 47
3	2701, 2711, 3054 (ಯೋಜನೇತರ)	585 93	0 00	585 93
	ಒಟ್ಟು	**61433 24**	**3646 00**	**65079 24**

ಬಿ) ಈ ಅನುದಾನದಲ್ಲಿ 1882 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ

1383(1315) ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) –ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆ ಸೇಡಂ ಸಹಾಯಕ ಆಯುಕ್ತರ ಕಛೇರಿಯಲ್ಲಿ ರಾಷ್ಟ್ರೀಯ ಸಾಮಾಜಿಕ ನೆರವು ಯೋಜನೆ ಅಡಿಯಲ್ಲಿ ಸಹಾಯ ಧನ ಕೋರಿ ಬಂದಿರುವ ಅರ್ಜಿಗಳೆಷ್ಟು,

ಆ) ಅವುಗಳಲ್ಲಿ ಸೇಡಂ ತಾಲ್ಲೂಕಿನಿಂದ ಬಂದಿರುವ ಅರ್ಜಿಗಳೆಷ್ಟು, ಆ ಪೈಕಿ ಇತ್ಯರ್ಥ ಮಾಡದೇ ಬಾಕಿ ಇರುವ ಪ್ರಕರಣಗಳೆಷ್ಟು, (ವರ್ಷವಾರು ವಿವರ ನೀಡುವುದು),

ಇ) 2006–07 ನೇ ವರ್ಷದಲ್ಲಿ ಗುಲ್ಬರ್ಗಾ ಜಿಲ್ಲೆಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು ಹಾಗೂ ಸೇಡಂ ಉಪ ವಿಭಾಗಕ್ಕೆ ನೀಡಿರುವ ಮೊತ್ತವೆಷ್ಟು,(ವಿವರ ನೀಡುವುದು)

ಈ) ಬಾಕಿ ಉಳಿದಿರುವ ಪ್ರಕರಣಗಳು ಇತ್ಯರ್ಥಗೊಳಿಸಲು ಬೇಕಾಗಿರುವ ಹಣವೆಷ್ಟು ಹಾಗೂ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಗುಲ್ಬರ್ಗಾ ಜಿಲ್ಲೆ, ಸೇಡಂ ಸಹಾಯಕ ಆಯುಕ್ತರ ಕಛೇರಿಯಲ್ಲಿ ರಾಷ್ಟ್ರೀಯ ಸಾಮಾಜಿಕ ನೆರವು ಯೋಜನೆ ಅಡಿಯಲ್ಲಿ ಸಹಾಯ ಧನ ಕೋರಿ ಬಂದಿರುವ ಅರ್ಜಿಗಳು 707 ಇರುತ್ತವೆ

ಆ) ಸೇಡಂ ತಾಲ್ಲೂಕಿನಿಂದ ಬಂದಿರುವ ಅರ್ಜಿಗಳ ಸಂಖ್ಯೆ 327 ಇರುತ್ತವೆ ಇತ್ಯರ್ಥ ಮಾಡದೇ ಬಾಕಿ ಇರುವ ಪ್ರಕರಣಗಳು 180 ಇರುತ್ತವೆ

ವರ್ಷವಾರು ವಿವರಗಳು ಈ ಕೆಳಕಂಡಂತಿದೆ

2001–02	02–03	03–04	04–05	05–06	06–07
12	39	106	–	12	–

ಇ) ಈ ಯೋಜನೆಯ ಅಡಿ ಗುಲ್ಬರ್ಗಾ ಜಿಲ್ಲೆಗೆ ಸರ್ಕಾರದಿಂದ ಬಿಡುಗಡೆ ಮಾಡಿರುವ ಅನುದಾನ ರೂ 33 90 ಲಕ್ಷ ಇರುತ್ತದೆ ಹಾಗೂ ಅದರಲ್ಲಿ ಸೇಡಂ ಉಪ ವಿಭಾಗಕ್ಕೆ ಜಿಲ್ಲಾಧಿಕಾರಿಗಳು ಬಿಡುಗಡೆ ಮಾಡಿರುವ ಮೊತ್ತ ರೂ 3 50 ಲಕ್ಷ ಇರುತ್ತದೆ

ಈ) ಬಾಕಿ ಉಳಿದಿರುವ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ರೂ 67 20 ಲಕ್ಷ ಹಣದ ಅವಶ್ಯಕತೆ ಇರುತ್ತದೆ ಅನುದಾನದ ಲಭ್ಯತೆ ಹಾಗೂ ಬೇಡಿಕೆಯನ್ನು ಆಧರಿಸಿ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಗೊಳಿಸಲು ಕ್ರಮ ಕೈಗೊಳ್ಳಲಾಗುವುದು

1384 (1316) ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) – ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೇಡಂ ತಾಲ್ಲೂಕಿನ ಅರಣ್ಯದ ವಿಸ್ತೀರ್ಣವೆಷ್ಟು, (ವಿವರಗಳನ್ನು ನೀಡುವುದು),

ಆ) ಸೇಡಂ ತಾಲ್ಲೂಕಿನಲ್ಲಿರುವ ಅರಣ್ಯವನ್ನು ಸಂರಕ್ಷಿಸಲು ತೆಗೆದುಕೊಂಡ ಕ್ರಮಗಳೇನು,

ಇ) ಸೇಡಂ ತಾಲ್ಲೂಕಿನಲ್ಲಿರುವ ಅರಣ್ಯವನ್ನು ಸಂರಕ್ಷಿಸಲು 2000 ವರ್ಷದಿಂದ ಇಲ್ಲಿನವರೆಗೆ ಹಂಚಿಕೆ ಮಾಡಿದ ಹಾಗೂ ಖರ್ಚು ಮಾಡಿದ ಹಣ ಎಷ್ಟು?

ಸಿ ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಸೇಡಂ ತಾಲ್ಲೂಕಿನಲ್ಲಿ ಅರಣ್ಯದ ವಿಸ್ತೀರ್ಣ 3543 33 ಹೆಕ್ಟೇರ್

ಆ) ಮಣ್ಣು ಮತ್ತು ನೀರಿನ ಸಂರಕ್ಷಣೆ ಮಾಡಿ ಸ್ಥಳೀಯ ಗಿಡ ಮರಗಳ ನೆಡುತೋಪುಗಳನ್ನು ಬೆಳಸಲಾಗಿದೆ ಗ್ರಾಮ ಅರಣ್ಯ ಸಮಿತಿಗಳ ಸಹಾಯದಿಂದ ಇಲಾಖಾ ಸಿಬ್ಬಂದಿಗಳು ಅರಣ್ಯ ರಕ್ಷಣೆ ಮಾಡುತ್ತಿದ್ದಾರೆ

ಇ) ವರ್ಷ	ಅನುದಾನ	ವೆಚ್ಚ	ಷರಾ
2000–01	ಇಲ್ಲ	ಇಲ್ಲ	–
2001–02	ಇಲ್ಲ	ಇಲ್ಲ	–
2002–03	ಇಲ್ಲ	ಇಲ್ಲ	–

2003–04	ಇಲ್ಲ	ಇಲ್ಲ	–
2004–05	ಇಲ್ಲ	ಇಲ್ಲ	–
2005–06	**2 830**	**2 550**	ಮುಂಗಡ ಕಾಮಗಾರಿ ಮತ್ತು ಎಸ್ ಎಂ ಪಿ ಕಾಮಗಾರಿ
2006–07	**2 635**	**2 500**	20 ಹೆ ಮಳೆಗಾಲ ನೆಡುತೋಪು ಮತ್ತು 16 ಹೆ ನೆಡುತೋಪು ನಿರ್ಮಾಣ

1385 (2019) ಶ್ರೀ ಶಿವಾನಂದ ಎಸ್ ಪಾಟೀಲ್ (ಬಸವನ ಬಾಗೇವಾಡಿ) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರ ರಚನೆಯಾಗಿರುವುದು ಯಾವ ವರ್ಷ,

ಆ) ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರದಡಿ ಅಭಿವೃದ್ಧಿ ಹೊಂದಿರುವ, ಅಭಿವೃದ್ಧಿ ಹೊಂದುತ್ತಿರುವ ಮತ್ತು ಅಭಿವೃದ್ಧಿ ಹೊಂದಬೇಕಾಗಿರುವ ಸ್ಥಳಗಳು ಯಾವುವು,

ಇ) ಬಸವನ ಬಾಗೇವಾಡಿಗೆ ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರದಿಂದ ಅಭಿವೃದ್ಧಿ ಪಡಿಸುವ ಉದ್ದೇಶಕ್ಕಾಗಿ ಒದಗಿಸಿರುವ ಅನುದಾನ ಎಷ್ಟು,

ಈ) ಇಲ್ಲಿ ಯಾವ ಅಭಿವೃದ್ಧಿ ಕೆಲಸವನ್ನು ಕೈಗೊಳ್ಳಲಾಗಿದೆ ಮತ್ತು ಕೈಗೊಳ್ಳಲು ಯಾವ ಯೋಜನೆ ರೂಪಿಸಲಾಗಿದೆ

ಉ) ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರದಿಂದ ಇಂಗಳೇಶ್ವರವನ್ನು ಅಭಿವೃದ್ಧಿಪಡಿಸಲು ರೂಪಿಸಿರುವ ಯೋಜನೆಗಳೇನು,

ಊ) ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರದಿಂದ ಇಂಗಳೇಶ್ವರಕ್ಕೆ ಒದಗಿಸಲಾಗಿದೆ ಅನುದಾನ ಎಷ್ಟು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) 1997 ರಲ್ಲಿ

ಆ) ಕೂಡಲಸಂಗಮ ಕ್ಷೇತ್ರವನ್ನು ಈಗಾಗಲೇ ಅಭಿವೃದ್ಧಿಪಡಿಸಲಾಗಿದೆ ಚಿಕ್ಕಸಂಗಮ ಮತ್ತು ಬಸವನ ಬಾಗೇವಾಡಿ ಕ್ಷೇತ್ರಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ ತಂಗಡಗಿಯ ಶರಣೆ ನೀಲಾಂಬಿಕೆ, ಶ್ರೀ ಮಡಿವಾಳ ಮಾಚೀದೇವರು ಮತ್ತು ಶ್ರೀ ಹಡಪದ ಅಪ್ಪಣ್ಣನವರ ಐಕ್ಯಸ್ಥಳಗಳು ಹಾಗೂ ಎಂ ಕೆ ಹುಬ್ಬಳ್ಳಿಯ ಶರಣೆ ಗಂಗಾಂಬಿಕೆಯವರ ಕ್ಷೇತ್ರಗಳನ್ನು ಅಭಿವೃದ್ಧಿಪಡಿಸಬೇಕಾಗಿದೆ

ಇ) ರೂ 86 88 ಲಕ್ಷ

ಈ) ಬಸವನ ಬಾಗೇವಾಡಿಯಲ್ಲಿ ಬಸವ ಸ್ಮಾರಕ ಕಟ್ಟಡವು ಮುಕ್ತಾಯ ಹಂತದಲ್ಲಿದ್ದು ಸುತ್ತಲೂ ಉದ್ಯಾನವನ ನಿರ್ಮಿಸಲಾಗಿದೆ ಬಸವ ಸ್ಮಾರಕ ಕೇಂದ್ರದಿಂದ ಮುಖ್ಯರಸ್ತೆಯವರೆಗೆ ದ್ವಿಮುಖ ಸಂಪರ್ಕ ರಸ್ತೆಯನ್ನು ನಿರ್ಮಿಸಿ ಎರಡು ಬದಿ ಗಿಡಗಳನ್ನು ಬೆಳೆಸಲಾಗಿದೆ ಶ್ರೀ ಬಸವೇಶ್ವರ ದೇವಸ್ಥಾನದ ಸುತ್ತಲೂ ಉದ್ಯಾನವನ, 103 ಮಾರಾಟ ಮಳಿಗೆಗಳು ಹಾಗೂ 2 ಹೋಟೇಲ್ ಕಟ್ಟಡಗಳನ್ನು ನಿರ್ಮಿಸಲಾಗಿದೆ ದೇವಸ್ಥಾನದ ಆವರಣದಲ್ಲಿ ಕಲ್ಲಿನ ನೆಲಹಾಸು, ಕಲ್ಯಾಣ ಮಂಟಪ ನವೀಕರಣ ಮತ್ತು ಇತರೆ ಕೆಲಸಗಳು ಮುಕ್ತಾಯ ಹಂತದಲ್ಲಿದೆ

ಉ) 2007– 08 ನೇ ಸಾಲಿನಲ್ಲಿ ಇಂಗಳೇಶ್ವರ ಅಭಿವೃದ್ಧಿ ಪಡಿಸುವ ಯೋಜನೆಯನ್ನು ಕೈಗೊಳ್ಳಲು ತೀರ್ಮಾನಿಸಲಾಗಿದೆ

ಊ) 2007–08 ನೇ ಸಾಲಿನ ಆಯವ್ಯಯದಲ್ಲಿ ರೂ 2 00 ಕೋಟಿ ಅನುದಾನ ಒದಗಿಸಲಾಗಿದೆ

1386 (2020) ಶ್ರೀ ಶಿವಾನಂದ ಎಸ್ ಪಾಟೀಲ್ (ಬಸವನಬಾಗೇವಾಡಿ) – ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೆ ಹೆಚ್ ಡಿ ಸಿ ಯಿಂದ ಶಾಲಾ ಮಕ್ಕಳ ಸಮವಸ್ತ್ರ ವಿತರಣೆಗೆಂದು ಶಿಕ್ಷಣ ಇಲಾಖೆಗೆ ಬಟ್ಟೆಯನ್ನು ಪೂರೈಸಲಾಗಿದೆಯೇ,

ಆ) ಈವರೆಗೆ ಪೂರೈಕೆ ಮಾಡಲಾದ ಸಮವಸ್ತ್ರದ ಬಟ್ಟೆಯ ಮೊತ್ತವೆಷ್ಟು?

ಇ) ಕೆ ಹೆಚ್ ಡಿ ಸಿ ಗೆ ಈವರೆಗೆ ಪೂರೈಸಿದ ಸಮವಸ್ತ್ರದ ಬಟ್ಟೆಯಿಂದ ಬರಬೇಕಾದ ಬಾಕಿ ಮೊತ್ತ ಎಷ್ಟು, ಹಾಗೂ ಎಷ್ಟು ವರ್ಷದಿಂದ ಬಾಕಿ ಉಳಿದಿದೆ,

ಈ) ಹಣ ವಸೂಲಾತಿಗಾಗಿ ಸರ್ಕಾರವು ಯಾವ ಕ್ರಮ ಕೈಗೊಳ್ಳಲಾಗಿದೆ ಹಾಗೂ ಬಾಕಿ ಉಳಿದಿರುವುದಕ್ಕೆ ಕಾರಣಗಳೇನು?

ಶ್ರೀ ಅಪ್ಪಾಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಜವಳಿ ಸಚಿವರು)

ಅ) ವಿದ್ಯಾವಿಕಾಸ ಯೋಜನೆಯಡಿ ಶಿಕ್ಷಣ ಇಲಾಖೆಯ ಬೇಡಿಕೆಯಂತೆ ಶಾಲಾ ಮಕ್ಕಳಿಗೆ ಸಮವಸ್ತ್ರಗಳನ್ನು ಕೆ ಹೆಚ್ ಡಿ ಸಿ ವತಿಯಿಂದ ಪ್ರತಿವರ್ಷ ಸರಬರಾಜು ಮಾಡಲಾಗುತ್ತಿದೆ

ಆ) 2006–07 ನೇ ಸಾಲಿನವರೆಗೆ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ರೂ 413 87 ಕೋಟಿ ಮೌಲ್ಯದ 615 44 ಲಕ್ಷ ಸೆಟ್ ಸಮವಸ್ತ್ರ ಬಟ್ಟೆಗಳನ್ನು ಸರಬರಾಜು ಮಾಡಿದೆ

2007–08 ನೇ ಸಾಲಿಗೆ ಇಲ್ಲಿಯವರೆಗೂ ಸರಬರಾಜು ಮಾಡಿರುವ ಸಮವಸ್ತ್ರ ಬಟ್ಟೆಗಳ ಮೊತ್ತ ರೂ 26 44 ಕೋಟಿ

ಇ) 2006–07 ನೇ ಸಾಲಿಗೆ ಸರಬರಾಜು ಮಾಡಿದ ಸಮವಸ್ತ್ರಗಳಿಗೆ ರೂ 212 35 ಲಕ್ಷ ಬಾಕಿ ಬರಬೇಕಾಗಿದೆ ಇದೇ ರೀತಿ, 2007–08 ನೇ ಸಾಲಿಗೆ ಸರಬರಾಜು ಮಾಡಿರುವ ಸಮವಸ್ತ್ರಗಳಿಗೆ ರೂ 2331 76 ಲಕ್ಷ ಹಣ ಬಾಕಿ ಬರಬೇಕಾಗಿದೆ

ಈ) 2006–07 ನೇ ಸಾಲಿನಲ್ಲಿ ತಾಲ್ಲೂಕು ಪಂಚಾಯತ್‌ಗಳಿಂದ ಬಾಕಿ ಹಣ ಬರಬೇಕಾಗಿದ್ದು, ಅನುದಾನದ ಕೊರತೆಯಿಂದ ಹಣ ಬಿಡುಗಡೆಯಾಗಿರುವುದಿಲ್ಲ ಈ ಬಾಕಿ ಹಣವನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ

1387 (2021) ಶ್ರೀ ಶಿವಾನಂದ ಎಸ್ ಪಾಟೀಲ್ (ಬಸವನಬಾಗೇವಾಡಿ) – ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪೂರ ತಾಲ್ಲೂಕಿನ ಮಮದಾಪುರ ಕೆರೆಯನ್ನು ಯಾವಾಗ ನಿರ್ಮಿಸಲಾಗಿದೆ,

ಆ) ಅದರ ಒಟ್ಟು ವಿಸ್ತೀರ್ಣ ಎಷ್ಟು ಹಾಗೂ ಅದರ ನೀರು ಸಂಗ್ರಹಣಾ ಸಾಮರ್ಥ್ಯ ಎಷ್ಟು,

ಇ) ಅದರಲ್ಲಿ ಹೂಳು ತುಂಬಿ ಗಿಡಗಂಟೆಗಳು ಬೆಳೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಹಾಗಿದ್ದಲ್ಲಿ, ಹೂಳು ಮತ್ತು ಗಿಡಗಂಟೆಗಳನ್ನು ತೆಗೆಯಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ,

ಉ) ಯಾವ ಕಾಲಮಿತಿಯೊಳಗಾಗಿ ಹೂಳು ಮತ್ತು ಗಿಡಗಳನ್ನು ತೆಗೆಯಲಾಗುವುದು?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು)

ಅ) ಬಿಜಾಪೂರ ತಾಲ್ಲೂಕಿನ ಮಮದಾಪುರ ದೊಡ್ಡ ಕೆರೆಯನ್ನು 1952 ರಲ್ಲಿ ಹಾಗೂ ಸಣ್ಣ ಕೆರೆಯನ್ನು 1970 ರಲ್ಲಿ ನಿರ್ಮಿಸಲಾಗಿದೆ

ಆ) ಮಮದಾಪೂರ ದೊಡ್ಡ ಕೆರೆಯ ವಿಸ್ತೀರ್ಣ 190 00 ಹೇಕ್ಟೆರ್‌ಗಳು ನೀರು ಸಂಗ್ರಹಣಾ ಸಾಮರ್ಥ್ಯ 90 41 ಎಂ ಸಿ ಎಫ್ ಟಿ ಹಾಗೂ ಸಣ್ಣ ಕೆರೆಯ ವಿಸ್ತೀರ್ಣ 11 25 ಹೇಕ್ಟೇರ್ ಹಾಗೂ ನೀರು ಸಂಗ್ರಹಣಾ ಸಾಮರ್ಥ್ಯ 59 80 ಎಂ ಸಿ ಎಫ್ ಟಿ ಇರುವುದು

ಇ) ಬಂದಿದೆ

ಈ) ಮಮದಾಪೂರ ದೊಡ್ಡ ಕೆರೆಯಲ್ಲಿನ ಹೂಳನ್ನು 2003 ರಲ್ಲಿ ರೈತಕಾಯಕ ಕೆರೆ ಯೋಜನೆಯಡಿ ತೆಗೆಯಲಾಗಿದ್ದು, ಇದಕ್ಕಾಗಿ ರೂ 15 37 ಲಕ್ಷ ವೆಚ್ಚ ಮಾಡಲಾಗಿದೆ ಇನ್ನುಳಿದಂತೆ ಅನುದಾನದ ಲಭ್ಯತೆಗೆ ಅನುಸಾರವಾಗಿ ಹೂಳನ್ನು ತೆಗೆಸಲು ಕ್ರಮ ಜರುಗಿಸಲಾಗುವುದು

ಉ) ಅನುದಾನದ ಲಭ್ಯತೆಗೆ ಅನುಸಾರವಾಗಿ ಹಂತ ಹಂತವಾಗಿ ಹೂಳನ್ನು ತೆಗೆಯಲು ಕ್ರಮ ಕೈಗೊಳ್ಳಲಾಗುವುದು

1388 (2022) ಶಿವಾನಂದ ಎಸ್ ಪಾಟೀಲ್ (ಬಸವನಬಾಗೇವಾಡಿ) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಭೂಮಿ ಕೇಂದ್ರಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು)

ಆ) ರಾಜ್ಯದಲ್ಲಿ ಹೊಸದಾಗಿ 'ಭೂಮಿ' ಕೇಂದ್ರಗಳನ್ನು ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ,

ಇ) ಹಾಗಿದ್ದಲ್ಲಿ, ಹೊಸದಾಗಿ ಎಷ್ಟು 'ಭೂಮಿ' ಕೇಂದ್ರಗಳನ್ನು ತೆರೆಯಲಾಗುವುದು,

ಈ) ಬಸವನಬಾಗೇವಾಡಿ ತಾಲ್ಲೂಕು, ಕೊಲ್ಲಾರ– ಹೋಬಳಿ ಪ್ರದೇಶದಲ್ಲಿ 'ಭೂಮಿ' ಕೇಂದ್ರ ತೆಗೆಯಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ,

ಉ) ಯಾವ ಗೊತ್ತುಪಡಿಸಿದ ಕಾಲ ಮಿತಿಯಲ್ಲಿ 'ಭೂಮಿ' ಕೇಂದ್ರಗಳನ್ನು ತೆರೆಯಲಾಗುವುದು,

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ರಾಜ್ಯದ 177 ತಾಲ್ಲೂಕು ಕಛೇರಿಗಳಲ್ಲಿ ಹಾಗೂ 26 ವಿಶೇಷ ತಹಸೀಲ್ದಾರ್ ಕಛೇರಿಗಳನ್ನು ಭೂಮಿ ಕೇಂದ್ರಗಳಿವೆ ಜಿಲ್ಲಾವಾರು ವಿವರಗಳನ್ನು ಅನುಬಂಧ–ಎ ನಲ್ಲಿ ನೀಡಲಾಗಿದೆ

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ಈ) ಭೂಮಿ ಕೇಂದ್ರಗಳನ್ನು ಸರ್ಕಾರದಿಂದ ಅಧಿಸೂಚಿತವಾಗಿರುವ ತಾಲ್ಲೂಕುಗಳಲ್ಲಿ ಅಥವಾ ಸರ್ಕಾರವು ವಿಶೇಷ ತಹಸೀಲ್ದಾರ್‌ರು ನೇಮಕ ಮಾಡಿರುವ ಸ್ಥಳಗಳಲ್ಲಿ ಭೂಮಿ ಕೇಂದ್ರಗಳನ್ನು ತೆರೆಯಲಾಗುವುದು ಕೋಲಾರ ಹೋಬಳಿಯನ್ನು ತಾಲ್ಲೂಕು ಎಂದು ಅಧಿಸೂಚನೆಯಾದಲ್ಲಿ ಅಥವಾ ವಿಶೇಷ ತಹಸೀಲ್ದಾರ್ ನೇಮಕವಾದಲ್ಲಿ, ಭೂಮಿ ಕೇಂದ್ರವನ್ನು ಸ್ಥಾಪಿಸಲಾಗುವುದು ಆದಾಗ್ಯೂ ನೆಮ್ಮದಿ ಯೋಜನೆಯಡಿ ಕೊಲ್ಲಾರ್ ಹೋಬಳಿ ಕೇಂದ್ರಸ್ಥಾನದಲ್ಲಿ ಸ್ಥಾಪಿಸಲಾಗಿರುವ ಟೆಲಿಸೆಂಟರ್‌ನಿಂದ ಪಹಣಿಗಳನ್ನು ವಿತರಿಸಲಾಗುತ್ತಿದೆ

ಉ) ಉದ್ಭವಿಸುವುದಿಲ್ಲ

ಅನುಬಂಧ – ಎ

ಕ್ರ. ಸಂ	ಜಿಲ್ಲೆ	ತಾಲ್ಲೂಕು ಭೂಮಿ ಕೇಂದ್ರ	ವಿಶೇಷ ತಹಸೀಲ್ದಾರ್ ಕಛೇರಿಗಳನ್ನು ಭೂಮಿ ಕೇಂದ್ರ
1	ಬೆಂಗಳೂರು	5	–
2	ಬೆಂಗಳೂರು (ಗ್ರಾ)	8	–
3	ಬೆಳಗಾಂ	10	2
4	ಬಳ್ಳಾರಿ	7	1
5	ಬೀದರ್	5	1
6	ಬಿಜಾಪೂರ	5	4
7	ಬಾಗಲಕೋಟೆ	6	2
8	ಚಿಕ್ಕಮಗಳೂರು	–	–
9	ಚಿತ್ರದುರ್ಗ	6	–
10	ಚಾಮರಾಜನಗರ	4	1
11	ದಕ್ಷಿಣ ಕನ್ನಡ	5	2
12	ಧಾರವಾಡ	5	–
13	ದಾವಣಗೆರೆ	6	–
14	ಗುಲ್ಬರ್ಗಾ	10	6
15	ಗದಗ್	5	2
16	ಹಾಸನ	8	–

17	ಹಾವೇರಿ	7	–
18	ಕೊಡಗು	8	–
19	ಕೋಲಾರ	11	1
20	ಕೊಪ್ಪಳ	4	1
21	ಮಂಡ್ಯ	7	–
22	ಮೈಸೂರು	7	–
23	ರಾಯಚೂರು	5	1
24	ಶಿವಮೊಗ್ಗ	–	–
25	ತುಮಕೂರು	10	–
26	ಉತ್ತರ ಕನ್ನಡ	11	–
27	ಉಡುಪಿ	3	2
	ಒಟ್ಟು	**177**	**26**

1389 (2023) ಶ್ರೀ ಶಿವಾನಂದ ಎಸ್ ಪಾಟೀಲ್ (ಬಸವನಬಾಗೇವಾಡಿ) – ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವನಬಾಗೇವಾಡಿ ವಿದಾನಸಭಾ ಮತಕ್ಷೇತ್ರದಲ್ಲಿ ಇರುವ ಒಟ್ಟು ಕೆರೆಗಳ ಸಂಖ್ಯೆ ಎಷ್ಟು,

ಆ) ಅವುಗಳ ವಿಸ್ತೀರ್ಣ ಎಷ್ಟು, (ಪ್ರತ್ಯೇಕ ಮಾಹಿತಿ ನೀಡುವುದು)

ಇ) ಅವುಗಳ ನೀರು ಸಂಗ್ರಹಣಾ ಸಾಮರ್ಥ್ಯ ಎಷ್ಟು, (ಪ್ರತ್ಯೇಕ ಮಾಹಿತಿ ನೀಡುವುದು)

ಈ) ಇವುಗಳಲ್ಲಿ ಹೂಳು ತುಂಬಿರುವ ಕೆರೆಗಳು ಎಷ್ಟು, (ಪಟ್ಟಿ ನೀಡುವುದು)

ಉ) ಈ ಕೆರೆಗಳ ಹೂಳು ತೆಗೆಯಲು ಯಾವ ಕ್ರಮ ಕೈಗೊಳ್ಳಲಾಗಿದೆ,

ಊ) ಯಾವ ಕಾಲಮಿತಿಯೊಳಗೆ ಹೂಳು ತೆಗೆಯಲಾಗುವುದು?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)

ಅ) ಸಣ್ಣ ನೀರಾವರಿ ವ್ಯಾಪ್ತಿಯಲ್ಲಿ ಒಟ್ಟು 20 ಕೆರೆಗಳಿವೆ

ಆ, ಇ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಈ) ಈ ಕೆರೆಗಳಲ್ಲಿ ಸುಳಖೋಡ ಕೆರೆ, ಆಸಂಗಿ ಕೆರೆ, ಅರಳೀಚಂಡಿ ಕೆರೆ ಮತ್ತು ಮನಗೂಳಿ ಕೆರೆಗಳಲ್ಲಿ ಹೂಳು ತುಂಬಿರುತ್ತದೆ

ಉ) ಅನುದಾನದ ಲಭ್ಯತೆಗೆ ಅನುಸಾರವಾಗಿ ಈ ಕೆರೆಗಳ ಹೂಳು ತೆಗೆಯಲು ಕ್ರಮ ಕೈಗೊಳ್ಳಲಾಗುವುದು

ಊ) ಅನುದಾನದ ಲಭ್ಯತೆಗೆ ಅನುಸಾರವಾಗಿ ಹೂಳು ತೆಗೆಯಲು ಕ್ರಮ ಕೈಗೊಳ್ಳಬೇಕಾಗಿರುವುದರಿಂದ ಈ ಹಂತದಲ್ಲಿ ಕಾಲಮಿತಿ ನಿಗದಿಪಡಿಸುವುದು ಸಾಧ್ಯವಾಗುವುದಿಲ್ಲ

ಶ್ರೀ ಶಿವಾನಂದ ಎಸ್ ಪಾಟೀಲ್ (ಬಸವನಬಾಗೇವಾಡಿ) ವಿಧಾನ ಸಭೆ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2023 ಕ್ಕೆ ಅನುಬಂಧ

ಕ್ರ. ಸಂ	ಕೆರೆಯ ಹೆಸರು	ವಿಸ್ತೀರ್ಣ (ಹೇಕ್ಟರ್‌ಗಳಲ್ಲಿ)	ನೀರು ಸಂಗ್ರಹಣಾ ಸಾಮರ್ಥ್ಯ ಎಂ ಸಿ ಎಫ್ ಟಿ ಗಳಲ್ಲಿ
1	ಕಿರಶ್ಯಾಳ ಕೆರೆ	70 48	57 14
2	ಸುಳಖೋಡ ಕೆರೆ	57 71	47 37
3	ರೋಣಿಹಾಳ ಕೆರೆ	48 60	47 81
4	ಕುಪಕಡ್ಡಿ ಕೆರೆ	73 71	65 00
5	ಮುಕಾರ್ತಿಹಾಳ ಕೆರೆ	57 02	51 35
6	ಆಸಂಗಿ ಕೆರೆ	64 00	49 88

7	ಅರಳೀಚಂಡಿ ಕೆರೆ	15 24	16 30
8	ಮಸೂತಿ ಕೆರೆ	13 10	9 00
9	ನಾಗವಾಡ ಕೆರೆ	24 90	15 20
10	ಮಣ್ಣೂರು ಕೆರೆ	26 10	14 67
11	ಕೂಡಗಿ ಕೆರೆ	28 90	25 05
12	ಗರಸಂಗಿ ಕೆರೆ	43 74	30 00
13	ಆಕಳವಾಡಿ ಕೆರೆ	14 98	8 84
14	ಮನಗೂಳಿ ಕೆರೆ	12 69	8 38
15	ಮಲಘಾಣ ಕೆರೆ	27 13	20 78
16	ತಳೇವಾಡ ಕೆರೆ	4 13	6 00
17	ಮುತ್ತಗಿ ಕೆರೆ	7 67	5 47
18	ಮಲಘಾಣ ಕೆರೆ (ಹೊಸ)	4 56	6 00
19	ಉಕ್ಕಲಿ ಕೆರೆ	3 57	2 57
20	ಬೆಳ್ಳುಬ್ಬಿ ಜಿನುಗು ಕೆರೆ	3 97	5 00

1390 (2050) ಶ್ರೀ ಶಿವರಾಮು ಬಿ (ಗಂಡಸಿ) – ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿ ಇಲ್ಲಿಯವರೆಗೆ ಕೈಗಾರಿಕಾ ಬೆಳವಣಿಗೆಗಾಗಿ ಕೈಗೆತ್ತಿಕೊಂಡಿರುವ ಕೈಗಾರಿಕಾ ಪ್ರದೇಶ, ಕೈಗಾರಿಕಾ ಬೆಳವಣಿಗೆ ಕೇಂದ್ರ/ವಿಶೇಷ ಆರ್ಥಿಕ ವಲಯಗಳು ಯಾವುವು,

ಆ) ಯಾವ ಸಾಲಿನಲ್ಲಿ ಮಂಜೂರಾತಿಯಾಗಿರುತ್ತದೆ

ಇ) ಸ್ವಾಧೀನ ಪಡೆದುಕೊಂಡಿರುವ ಪ್ರದೇಶವೆಷ್ಟು,

ಈ) ಖರ್ಚಾಗಿರುವ ಹಣವೆಷ್ಟು,

ಉ) ಒದಗಿಸಿರುವ ಸೌಲಭ್ಯಗಳೇನು,

ಊ) ಮಂಜೂರಾತಿಯಾಗಿ ಅನುಷ್ಠಾನಗೊಳ್ಳದೆ ಇರುವ ಯೋಜನೆಗಳು ಯಾವುವು,

ಋ) ಅನುಷ್ಠಾನಗೊಳ್ಳದಿರಲು ಕಾರಣಗಳೇನು?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಹಾಸನ ಜಿಲ್ಲೆಯಲ್ಲಿ ಮಂಡಳಿಯು ಈ ಕೆಳಕಂಡ ಕೈಗಾರಿಕಾ ಪ್ರದೇಶ, ಬೆಳವಣಿಗೆ ಕೇಂದ್ರ ಮತ್ತು ವಿಶೇಷ ಆರ್ಥಿಕ ವಲಯಗಳನ್ನು ಅಭಿವೃದ್ಧಿಪಡಿಸಿದೆ

1) ಬಿ ಕಾಟಿಹಳ್ಳಿ ಕೈಗಾರಿಕಾ ಪ್ರದೇಶ, ಹಾಸನ

2) ತಿಮ್ಮನಹಳ್ಳಿ ಕೈಗಾರಿಕಾ ಪ್ರದೇಶ, ಹಾಸನ

3) ಹಾಸನ ಬೆಳವಣಿಗೆ ಕೇಂದ್ರ ಹಾಸನ

4) ಜವಳಿ ಉತ್ಪನ್ನಗಳ ವಿಶೇಷ ಆರ್ಥಿಕ ವಲಯ, ಹಾಸನ

5) ಆಹಾರ ಸಂಸ್ಕರಣ ಉತ್ಪನ್ನಗಳ ವಿಶೇಷ ಆರ್ಥಿಕ ವಲಯ, ಹಾಸನ

6) ಫಾರ್ಮಾಸೂಟಿಕಲ್ಸ್ ಉತ್ಪನ್ನಗಳ ವಿಶೇಷ ಆರ್ಥಿಕ ವಲಯ, ಹಾಸನ

7) ಹೊಳೆನರಸೀಪುರ ಕೈಗಾರಿಕಾ ಪ್ರದೇಶ, ಹೊಳೇನರಸಿಪುರ

ಆ) ಮಂಜೂರಾಗಿರುವ ದಿನಾಂಕಗಳು ಈ ಕೆಳಕಂಡಂತಿವೆ		
ಕ್ರ. ಸಂ	ಕೈಗಾರಿಕಾ ಪ್ರದೇಶ	ಮಂಜೂರಾಗಿರುವ ದಿನಾಂಕ
1	ಬಿ ಕಾಟೇನಹಳ್ಳಿ ಕೈಗಾರಿಕಾ ಪ್ರದೇಶ	12–05–84
2	ತಿಮ್ಮನಹಳ್ಳಿ ಕೈಗಾರಿಕಾ ಪ್ರದೇಶ	23–08–91

3	ಹಾಸನ ಬೆಳವಣಿಗೆ ಕೇಂದ್ರ	25–01–92
4	ಜವಳಿ ಉತ್ಪನ್ನಗಳ ವಿಶೇಷ ಆರ್ಥಿಕ ವಲಯ	21–08–06
5	ಆಹಾರ ಸಂಸ್ಕರಣ ಉತ್ಪನ್ನಗಳ ವಿಶೇಷ ಆರ್ಥಿಕ ವಲಯ	27–10–06
6	ಫಾರ್ಮಸೂಟಿಕಲ್ಸ್ ಉತ್ಪನ್ನಗಳ ವಿಶೇಷ ಆರ್ಥಿಕ ವಲಯ	26–10–06
7	ಹೊಳೇ ನರಸೀಪುರ ಕೈಗಾರಿಕಾ ಪ್ರದೇಶ	30–07–94

ಇ) ಸ್ವಾಧಿನ ಪಡೆದುಕೊಂಡಿರುವ ಪ್ರದೇಶ

ಕ್ರ ಸ	ಕೈಗಾರಿಕಾ ಪ್ರದೇಶ	ವಿಸ್ತೀರ್ಣ ಎಕರೆಗಳಲ್ಲಿ
1	ಬಿ ಕಾಟೇನಹಳ್ಳಿ ಕೈಗಾರಿಕಾ ಪ್ರದೇಶ	91–70
2	ತಿಮ್ಮನಹಳ್ಳಿ ಕೈಗಾರಿಕಾ ಪ್ರದೇಶ	75–07
3	ಹಾಸನ ಬೆಳವಣಿಗೆ ಕೇಂದ್ರ	397–00
4	ಜವಳಿ ಉತ್ಪನ್ನಗಳ ವಿಶೇಷ ಆರ್ಥಿಕ ವಲಯ	618–97
5	ಆಹಾರ ಸಂಸ್ಕರಣ ಉತ್ಪನ್ನಗಳ ವಿಶೇಷ ಆರ್ಥಿಕ ವಲಯ	394–78
6	ಫಾರ್ಮಸೂಟಿಕಲ್ಸ್ ಉತ್ಪನ್ನಗಳ ವಿಶೇಷ ಆರ್ಥಿಕ ವಲಯ	703–03
7	ಹೊಳೇ ನರಸೀಪುರ ಕೈಗಾರಿಕಾ ಪ್ರದೇಶ	28–95
	ಒಟ್ಟು	**2,309–05**

ಈ)	ಖರ್ಚಾಗಿರುವ ಹಣ	
ಕ್ರ ಸ	ಕೈಗಾರಿಕಾ ಪ್ರದೇಶ	ಖರ್ಚಾಗಿರುವ ಹಣ (ರೂ ಲಕ್ಷ)
1	ಬಿ ಕಾಟೇನಹಳ್ಳಿ ಕೈಗಾರಿಕಾ ಪ್ರದೇಶ	295–74
2	ತಿಮ್ಮನಹಳ್ಳಿ ಕೈಗಾರಿಕಾ ಪ್ರದೇಶ	73–02
3	ಹಾಸನ ಬೆಳವಣಿಗೆ ಕೇಂದ್ರ	1413–40
4	ಜವಳಿ ಉತ್ಪನ್ನಗಳ ವಿಶೇಷ ಆರ್ಥಿಕ ವಲಯ	2049–66
5	ಆಹಾರ ಸಂಸ್ಕರಣ ಉತ್ಪನ್ನಗಳ ವಿಶೇಷ ಆರ್ಥಿಕ ವಲಯ ಹಾಗೂ ಫಾರ್ಮಸೂಟಿಕಲ್ಸ್ ಉತ್ಪನ್ನಗಳ ವಿಶೇಷ ಆರ್ಥಿಕ ವಲಯ	3783–30
6	ಹೊಳೇ ನರಸೀಪುರ ಕೈಗಾರಿಕಾ ಪ್ರದೇಶ	76–66
7	ಹಾಸನ ಬೆಳವಣಿಗೆ ಕೇಂದ್ರ ಮತ್ತು ವಿಶೇಷ ಆರ್ಥಿಕ ವಲಯಗಳಿಗೆ ನೀರು ಸರಬರಾಜು ಯೋಜನೆ	1873–00
	ಒಟ್ಟು	**9564–78**

ಉ) ಮೂಲಭೂತ ಸೌಲಭ್ಯಗಳಾದ ರಸ್ತೆ, ಚರಂಡಿ, ಬೀದಿದೀಪ, ನೀರು ಸರಬರಾಜು, ವಿದ್ಯುತ್ ಸರಬರಾಜು ಮತ್ತು ಕಾಂಪೌಂಡ್ ವಾಲ್ (ಜವಳಿ ವಿಶೇಷ ಆರ್ಥಿಕ ವಲಯಕ್ಕಾಗಿ) ಈ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗಿದೆ

ಊ) ಮಂಜೂರಾತಿಯಾಗಿ ಅನುಷ್ಠಾನಗೊಳ್ಳದೆ ಇರುವ ಯೋಜನೆಗಳು ಯಾವುದು ಇರುವುದಿಲ್ಲ ಮಂಜೂರಾಗಿರುವ ಯೋಜನೆಗಳೆಲ್ಲವೂ ಅನುಷ್ಠಾನದ ವಿವಿಧ ಹಂತದಲ್ಲಿವೆ

ಖು) ಮಂಜೂರಾಗಿರುವ ಯೋಜನೆಗಳೆಲ್ಲವೂ ಅನುಷ್ಠಾನದ ವಿವಿಧ ಹಂತದಲ್ಲಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

1391 (2051) ಶ್ರೀ ಶಿವರಾಮು ಬಿ (ಗಂಡಸಿ) – ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ವಿಶೇಷ ಕೈಗಾರಿಕಾ ವಲಯಗಳೆಂದು 2000–01 ರಿಂದ ಕೇಂದ್ರದಿಂದ ಮಂಜೂರಾತಿ ಪಡೆದಿರುವ ಜಿಲ್ಲೆಗಳು ಯಾವುವು,

ಆ) ಯಾವ ಸಾಲಿನಲ್ಲಿ ಮಂಜೂರಾತಿ ಪಡೆದಿರುತ್ತವೆ ಹಾಗೂ ಮಂಜೂರಾತಿ ಯಾಗಿರುವ ಹಣವೆಷ್ಟು,

ಇ) ಈಗ ಪ್ರಗತಿ ಯಾವ ಹಂತದಲ್ಲಿರುತ್ತದೆ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ವಿಶೇಷ ಕೈಗಾರಿಕಾ ವಲಯವೆಂದು ಯಾವುದೇ ಯೋಜನೆಗಳು ಇಲಾಖೆಯಲ್ಲಿ ಇರುವುದಿಲ್ಲ ಆದರೆ ವಿಶೇಷ ಆರ್ಥಿಕ ವಲಯ ಯೋಜನೆಯು ಇರುತ್ತದೆ

ರಾಜ್ಯದಲ್ಲಿ ಈವರೆಗೆ ಭಾರತ ಸರ್ಕಾರದಿಂದ 29 ವಿಶೇಷ ಆರ್ಥಿಕ ವಲಯ ಯೋಜನೆಗಳಿಗೆ ನಿರ್ದಿಷ್ಟ ಅನುಮೋದನೆ ಹಾಗೂ 16 ವಿಶೇಷ ಆರ್ಥಿಕ ವಲಯ ಯೋಜನೆಗಳಿಗೆ ತಾತ್ವಿಕ ಅನುಮೋದನೆ ದೊರೆತಿರುತ್ತದೆ

ಅನುಮೋದನೆಯಾಗಿರುವ ವಿಶೇಷ ಆರ್ಥಿಕ ವಲಯ ಯೋಜನೆಗಳ ಜಿಲ್ಲಾವಾರು ವಿವರಗಳು ಕೆಳಕಂಡಂತಿವೆ

ನಿರ್ದಿಷ್ಟ ಅನುಮೋದನೆ		ತಾತ್ವಿಕ ಅನುಮೋದನೆ	
ಜಿಲ್ಲೆ	ಸಂಖ್ಯೆ	ಜಿಲ್ಲೆ	ಸಂಖ್ಯೆ
ಬೆಂಗಳೂರು (ನಗರ)	19	ಬೆಂಗಳೂರು (ನಗರ)	2
ಬೆಂಗಳೂರು (ಗ್ರಾ)	2	ಬೆಂಗಳೂರು (ಗ್ರಾ)	4
ಮಂಗಳೂರು	2	ಮಂಗಳೂರು	2
ಹಾಸನ	3	ಉಡುಪಿ	2
ಶಿವಮೊಗ್ಗ	1	ಕೋಲಾರ	4

ಬೆಳಗಾಂ	1	ಬೆಳಗಾಂ	1
ಮೈಸೂರು	1	ಮೈಸೂರು	1
ಒಟ್ಟು	**29**	**ಒಟ್ಟು**	**16**

ಆ) ವಿಶೇಷ ಆರ್ಥಿಕ ವಲಯ 2005– ಕಾಯಿದೆಯು ದಿನಾಂಕ 10 2 2006 ರಿಂದ ಜಾರಿಗೊಳಿಸಿದ್ದು, ತದನಂತರ ಭಾರತ ಸರ್ಕಾರವು ವಿಶೇಷ ಆರ್ಥಿಕ ವಲಯ ಯೋಜನೆಗಳಿಗೆ ಅನುಮೋದನೆಯನ್ನು ನೀಡಿರುತ್ತದೆ

ವಿಶೇಷ ಆರ್ಥಿಕ ವಲಯ ಯೋಜನೆಗಳಿಗೆ ಕೇಂದ್ರವು ಯಾವುದೇ ತರಹದ ಹಣವನ್ನು ಮಂಜೂರು ಮಾಡುವುದಿಲ್ಲ

ಇ) ಅನುಮೋದನೆಗೊಂಡಿರುವ ವಿಶೇಷ ಆರ್ಥಿಕ ವಲಯಗಳಲ್ಲಿ ಇಲ್ಲಿಯವರೆಗೆ 10 ಯೋಜನೆಗಳಿಗೆ ಭಾರತ ಸರ್ಕಾರವು ಅಧಿಸೂಚನೆಯನ್ನು ಹೊರಡಿಸಿದ್ದು, ಇದರಲ್ಲಿ 3 ಯೋಜನೆಗಳು ಕಾರ್ಯಾರಂಭ ಮಾಡಿದ್ದು ಉಳಿದ 7 ಯೋಜನೆಗಳು ಅನುಷ್ಠಾನ ಹಂತದಲ್ಲಿರುತ್ತದೆ ಉಳಿದ ಯೋಜನೆಗಳಿಗೆ ಜಮೀನು ಗುರುತಿಸುವ ಮತ್ತು ಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿದೆ

1392 (2015) ಶ್ರೀ ಶಿವಶಂಕರ್ ರೆಡ್ಡಿ ಎನ್ ಹೆಚ್ (ಗೌರಿಬಿದನೂರು) – ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖಾ ವ್ಯಾಪ್ತಿಗೆ ಬರುವ ಕೆರೆಗಳ ಸಂಖ್ಯೆ ಎಷ್ಟು,

ಆ) ಈ ಕೆರೆಗಳಲ್ಲಿ ಹೂಳುಗಳು ಅಧಿಕ ಪ್ರಮಾಣದಲ್ಲಿ ತುಂಬಿಕೊಂಡಿರುವುದರಿಂದ ನೀರನ್ನು ಅಧಿಕ ಪ್ರಮಾಣದಲ್ಲಿ ಸಂಗ್ರಹಿಸಲು ಆಗದೆ ಅಂತರ್ ಜಲಮಟ್ಟ ಕುಸಿದಿರುವುದರಿಂದ ರೈತರಿಗೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಈ ಕೆರೆಗಳ ಹೂಳನ್ನು ತೆಗೆದು ಅಧಿಕ ಪ್ರಮಾಣದಲ್ಲಿ ನೀರಿನ ಸಂಗ್ರಹವನ್ನು ಮಾಡಿಕೊಂಡು, ರೈತರ ಜಮೀನುಗಳಿಗೆ ನೀರಾವರಿಯ ಸೌಕರ್ಯವನ್ನು ಒದಗಿಸಿಕೊಡಲು ಸರ್ಕಾರವು ಕೈಗೊಳ್ಳುವ ಕ್ರಮವೇನು?

ಶ್ರೀ ಬಿ ಎಸ್ ಯಡಿಯೂರಪ್ಪ (ಮಾನ್ಯ ಉಪ ಮುಖ್ಯಮಂತ್ರಿಗಳು)

ಅ) ಒಟ್ಟು 87 ಕೆರೆಗಳು

ಆ) ಬಂದಿದೆ

ಇ) ಹಿಂದಿನ ವರ್ಷಗಳಲ್ಲಿ ಒಟ್ಟು 25 ಕೆರೆಗಳಲ್ಲಿ ಭಾಗಶಃ ಹೂಳನ್ನು ತೆಗೆಯಲಾಗಿದೆ ಇದಕ್ಕಾಗಿ ರೂ 56 59 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ

ಇದಲ್ಲದೇ 2006–07ನೇ ಸಾಲಿನ 2006–07ನೇ ಸಾಲಿನ ಲೆಕ್ಕಶೀರ್ಷಿಕೆ 4702 ಅಡಿಯಲ್ಲಿ ಕೋಲಾರ ಜಿಲ್ಲೆ ಗೌರಿಬಿದನೂರು ತಾಲ್ಲೂಕಿನಲ್ಲಿ 9 ಕೆರೆಗಳಲ್ಲಿ ರೂ 190 00 ಲಕ್ಷಗಳ ಅಂದಾಜು ಮೊತ್ತ ಹಾಗೂ ರೂ 155 00 ಲಕ್ಷಗಳ ಅನುದಾನದೊಂದಿಗೆ ಭಾಗಶಃ ಹೂಳು ತೆಗೆಯುವ ಕಾರ್ಯಕ್ರಮವೂ ಸೇರಿದಂತೆ ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಯೋಜನೆ ರೂಪಿಸಿ ಕ್ರಮ ಕೈಗೊಳ್ಳಲಾಗುತ್ತಿದೆ

1394 (2017) ಶ್ರೀ ಶಿವಶಂಕರ್‌ರೆಡ್ಡಿ ಎನ್ ಹೆಚ್ (ಗೌರಿಬಿದನೂರು) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆ, ಗೌರಿಬಿದನೂರು ತಾಲ್ಲೂಕಿನಾದ್ಯಂತ ರೈತರು ಒತ್ತುವರಿ ಮಾಡಿರುವ ಸರ್ಕಾರಿ ಭೂಮಿಯ ವಿಸ್ತೀರ್ಣ ಎಷ್ಟು,

ಆ) ಈ ಭೂಮಿಯನ್ನು ಸರ್ಕಾರವು ಸ್ವಾಧೀನಪಡಿಸಿಕೊಂಡಿದೆಯೇ,

ಇ) ಹಾಗಿದ್ದಲ್ಲಿ, ಹಲವಾರು ವರ್ಷಗಳಿಂದ ಬಡ ರೈತರು ಒತ್ತುವರಿ ಭೂಮಿಯಲ್ಲಿ ಬೆಳೆಯನ್ನು ಬೆಳೆದು, ಜೀವನವನ್ನು ನಡೆಸುತ್ತಿರುವುದರಿಂದ ಈ ಭೂಮಿಗಳನ್ನು ಮತ್ತೆ ಇವರ ಸ್ವಾಧೀನತೆಗೆ ವಹಿಸಿಕೊಡುವಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮಗಳೇನು,

ಈ) 30–35 ವರ್ಷಗಳಿಂದಲೂ ಒತ್ತುವರಿ ಮಾಡಿಕೊಂಡಿರುವ ರೈತರಿಗೆ ಇದೂವರೆವಿಗೂ ಸ್ವಾಧೀನತೆ ಪತ್ರವನ್ನು ನೀಡದೇ ಇರುವುದಕ್ಕೆ ಕಾರಣಗಳೇನು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) 23186–10 ಎಕರೆ

ಆ) ಇಲ್ಲ

ಇ) ರೈತರಿಗೆ ಸ್ವಾಧೀನಪಡಿಸಿಕೊಡುವ ಬಗ್ಗೆ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ

ನಮೂನೆ – 50 ರಲ್ಲಿ	**ಸಂಖ್ಯೆ**	**ವಿಸ್ತೀರ್ಣ**
ಒಟ್ಟು ಅರ್ಜಿಗಳು	11675	21062–39
ಸಕ್ರಮಗೊಳಿಸಿದ ಅರ್ಜಿಗಳು	3559	5831–03
ತಿರಸ್ಕೃತ ಅರ್ಜಿಗಳು	8125	15231–36
ಬಾಕಿ ಇರುವ ಅರ್ಜಿಗಳು	–	–
ನಮೂನೆ – 53 ರಲ್ಲಿ	**ಸಂಖ್ಯೆ**	**ವಿಸ್ತೀರ್ಣ**
ಒಟ್ಟು ಅರ್ಜಿಗಳು	9570	23186–10
ಸಕ್ರಮಗೊಳಿಸಿದ ಅರ್ಜಿಗಳು	1132	1678–03
ತಿರಸ್ಕೃತ ಅರ್ಜಿಗಳು	2931	7179–22
ಬಾಕಿ ಇರುವ ಅರ್ಜಿಗಳು	5507	14328–25

ಈ) ಗೌರಿಬಿದನೂರು ತಾಲ್ಲೂಕಿಗೆ ಬಗರ್ ಹುಕುಂ ಸಮಿತಿ ಇನ್ನೂ ರಚನೆಯಾಗಿಲ್ಲವಾದ್ದರಿಂದ ಸಮಿತಿ ರಚನೆಯಾದ ತಕ್ಷಣ ಅಗತ್ಯ ಕ್ರಮ ಕೈಗೊಳ್ಳಲಾಗುವುದು

1395 (2018) ಶ್ರೀ ಶಿವಶಂಕರ್ ರೆಡ್ಡಿ ಎನ್ ಹೆಚ್ (ಗೌರಿಬಿದನೂರು).– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಉಪ ನೋಂದಣಾಧಿಕಾರಿಗಳ ಕಛೇರಿಗಳಲ್ಲಿ ಜಮೀನು, ನಿವೇಶನಗಳನ್ನು 2006–07ನೇ ಸಾಲಿನಲ್ಲಿ ನೋಂದಾಯಿಸಿದ ಸಂಖ್ಯೆಗಳೆಷ್ಟು,

ಆ) ಇದರಿಂದ ಸರ್ಕಾರಕ್ಕೆ ಬಂದಂತಹ ಆದಾಯ ಎಷ್ಟು,

ಇ) ಈ ಆದಾಯಗಳನ್ನು ಯಾವ ಯಾವ ಯೋಜನೆಗಳ ಕಾರ್ಯಗತಕ್ಕೆ ಪ್ರತಿ ತಾಲ್ಲೂಕುವಾರು ಹಂಚಿಕೆ ಮಾಡಲ್ಪಟ್ಟಿದೆ (ವಿವರ ಒದಗಿಸುವುದು),

ಈ) ನೋಂದಣಿ ಕಾಯಿದೆಗಳ ಕ್ರೋಡೀಕರಣಕ್ಕೆ ಸರ್ಕಾರವು ಕೈಗೊಂಡಿರುವ ಕ್ರಮವೇನು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) 12,56,145 ಫೆಬ್ರವರಿ ಅಂತ್ಯಕ್ಕೆ

ಆ) ರೂ 3046 84 ಕೋಟಿಗಳು ಫೆಬ್ರವರಿ 2007ರ ಅಂತ್ಯಕ್ಕೆ

ಇ) ರಾಜಸ್ವವು ಸಂಚಿತ ನಿಧಿಗೆ ಜಮಾ ಆಗಲಿದೆ ಇದರಿಂದಾಗಿ ತಾಲ್ಲೂಕಾವಾರು ಹಂಚಿಕೆ ಮಾಡುವ ಪ್ರಶ್ನೆ ಈ ಇಲಾಖೆಯ ಅಧಿಕಾರ ವ್ಯಾಪ್ತಿಗೆ ಬರುವುದಿಲ್ಲ ಇದರಿಂದಾಗಿ ತಾಲ್ಲೂಕಾವಾರು ಹಂಚಿಕೆ ಮಾಡುವ ಪ್ರಶ್ನೆ ಈ ಇಲಾಖೆಯ ಅಧಿಕಾರ ವ್ಯಾಪ್ತಿ ಅಡಿ ಬರುವುದಿಲ್ಲ

ಈ) ನೋಂದಣಿ ಕಾಯ್ದೆಯು ಕೇಂದ್ರ ಸರ್ಕಾರದ ಕಾಯ್ದೆ ಆಗಿರುವುದರಿಂದ, ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಕ್ರೋಢೀಕರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ

1396 (1454) ಶ್ರೀ ಸಿದ್ದು ಸವದಿ (ಜಮಖಂಡಿ) – ಮಾನ್ಯ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ, ಮುಧೋಳ್ ಬೀಳಗಿ, ಅಥಣಿ, ರಾಯಬಾಗ್ ಮತ್ತು ಬಿಜಾಪುರ ತಾಲ್ಲೂಕಿನಲ್ಲಿರುವ ಒಟ್ಟು ಕಬ್ಬು ಬೆಳೆಯುವ ಪ್ರದೇಶ ಎಷ್ಟು,

ಆ) ಈ ಎಲ್ಲಾ ತಾಲ್ಲೂಕುಗಳಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳಿವೆ (ವಿವರ ನೀಡುವುದು),

ಇ) ಜಮಖಂಡಿ ತಾಲ್ಲೂಕಿನಲ್ಲಿಯೇ 5000 ಟನ್ ಸಾಮರ್ಥ್ಯದ 4 ಕಾರ್ಖಾನೆಗಳ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗೂ ಎಷ್ಟು ಹೊಸ ಕಾರ್ಖಾನೆಗಳಿಗೆ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆ,

ಈ) ರೈತರು ಬೆಳೆದ ಕಬ್ಬನ್ನು ಸ್ವೀಕರಿಸಲು ಹೆಚ್ಚಿನ ಕಾರ್ಖಾನೆಗಳಿಲ್ಲದಿರುವುದರಿಂದ ನಷ್ಟಕ್ಕೊಳಗಾಗಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದನ್ನು ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು)

ಅ) ಜಮಖಂಡಿ, ಮುಧೋಳ್, ಬೀಳಗಿ, ಅಥಣಿ, ರಾಯಭಾಗ್ ಮತ್ತು ಬಿಜಾಪುರ ತಾಲ್ಲೂಕಿನ ಕಬ್ಬು ಬೆಳೆಯುವ ಪ್ರದೇಶ ಈ ಕೆಳಕಂಡಂತೆ ಇದೆ

ತಾಲ್ಲೂಕು	**ಕಬ್ಬು ಬೆಳೆ ಪ್ರದೇಶ (ಹೆಕ್ಟೇರ್‌ಗಳಲ್ಲಿ)**
ಜಮಖಂಡಿ	30 488
ಮುಧೋಳ್	29 733
ಬೀಳಗಿ	05 366
ಅಥಣಿ	34 690
ರಾಯಬಾಗ್	31 275
ಬಿಜಾಪುರ	05 042
ಒಟ್ಟು	136 594

ಆ) ಈ ಎಲ್ಲಾ ತಾಲ್ಲೂಕುಗಳಲ್ಲಿ ಸಕ್ಕರೆ ಕಾರ್ಖಾನೆಗಳ ವಿವರ ಈ ಕೆಳಕಂಡಂತಿದೆ

ತಾಲ್ಲೂಕು	**ಕಾರ್ಖಾನೆಯ ಹೆಸರು**
ಜಮಖಂಡಿ	ಜಮಖಂಡಿ ಶುಗರ್ಸ್, ಪ್ರಭುಲಿಂಗೇಶ್ವರ ಶುಗರ್ಸ್
ಮುಧೋಳ್	ಗೋದಾವರಿ ಶುಗರ್ಸ್ ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ನಿರಾಣಿ ಶುಗರ್ಸ್

ಬೀಳಗಿ	ಜೆಮ್ ಶುಗರ್ಸ್ (ಲಿ)
	ಬೀಳಗಿ ಶುಗರ್ಸ್
ಅಥಣಿ	ಉಗಾರ್ ಶುಗರ್ಸ್
	ಕೃಷ್ಣಾ ಸಸಕಾ
	ಅಥಣಿ ಫಾರ್ಮರ್ಸ್ ಶುಗರ್ಸ್
	ರೇಣುಕಾ ಶುಗರ್ಸ್
ರಾಯಬಾಗ್	ರಾಯಬಾಗ್ ಸಸಕಾ
ಬಿಜಾಪುರ	ನಂದಿ ಸಸಕಾ

ಇ) ಬಂದಿಲ್ಲ,

ಜಮಖಂಡಿ ತಾಲ್ಲೂಕಿನಲ್ಲಿ ಹೊಸ ಸಕ್ಕರೆ ಕಾರ್ಖಾನೆಗಳ ಸ್ಥಾಪನೆಗೆ ಸರ್ಕಾರಕ್ಕೆ ಪ್ರಸ್ತಾವನೆ ಬಂದಿಲ್ಲ

ಈ) ಸಕ್ಕರೆ ಕಾರ್ಖಾನೆಗಳು ಕಬ್ಬು ಸುರಿಸದ ಕಾರಣ ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳು ಜಮಖಂಡಿ ತಾಲ್ಲೂಕಿನಲ್ಲಿ ಇರುವುದಿಲ್ಲ 2006–07ನೇ ಸಾಲಿನಲ್ಲಿ ಹೆಚ್ಚುವರಿ ಕಬ್ಬಿನ ಉತ್ಪಾದನೆ ಇರುವುದರಿಂದ ಎಲ್ಲಾ ಕಾರ್ಖಾನೆಗಳೂ ದಿನಾಂಕ 31 05 07 ರವರೆವಿಗೆ ಕಬ್ಬು ಸುರಿಸುವ ಕಾರ್ಯವನ್ನು ಮುಂದುವರಿಸುವಂತೆ, ಸುತ್ತೋಲೆ ಮೂಲಕ ತಿಳಿಸಲಾಗಿದೆ

1397 (2034) ಶ್ರೀ ಸಿದ್ದ ಸಾವದಿ (ಜಮಖಂಡಿ) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರ್ವಜನಿಕ ಉಪಯೋಗಕ್ಕಾಗಿ ಅಂದರೆ ಸ್ಮಶಾನ ಆಶ್ರಯ ಮನೆ, ಶಾಲಾ ಕಟ್ಟಡ ಸೇರಿದಂತೆ ಸರ್ಕಾರದ ಇತರೆ ಕಟ್ಟಡಗಳನ್ನು ಕಟ್ಟಲಿಕ್ಕೆ ಖಾಸಗಿ ಜನರ ಜಮೀನು ಖರೀದಿಸಲು ಇರುವ ನಿಯಮಾವಳಿಗಳೇನು ಮತ್ತು ಯಾವ ಬೆಲೆಗೆ ಖರೀದಿಸಬಹುದು

ಆ) ಭೂಮಿಯ ಬೆಲೆ ಗಗನಕ್ಕೇರಿರುವಾಗ ಕಡಿಮೆ ಬೆಲೆಗೆ ಜಮೀನು ಮಾರಾಟ ಮಾಡಲು ಯಾರೂ ಮುಂದೆ ಬರುತ್ತಿಲ್ಲದಿರುವುದರಿಂದ ಈಗಿರುವ ಬೆಲೆಯನ್ನು ಹೆಚ್ಚಿಸಲಾಗುವುದೇ,

ಇ) ಇಲ್ಲವಾದಲ್ಲಿ ಪರ್ಯಾಯ ವ್ಯವಸ್ಥೆಗಳೇನು,

ಈ) ಜಮಖಂಡಿ ತಾಲ್ಲೂಕಿನಲ್ಲಿ ಎಷ್ಟು ಗ್ರಾಮಗಳಲ್ಲಿ ಸ್ಮಶಾನ, ಆಶ್ರಯ ಸಲುವಾಗಿ ಜಮೀನಿನ ಕೊರತೆ ಇದೆ ಹಾಗೂ ಅದನ್ನು ಸರ್ಕಾರ ಯಾವಾಗ ಪೂರೈಸಲಾಗುವುದು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಸಾರ್ವಜನಿಕ ಉಪಯೋಗಕ್ಕಾಗಿ ಅಂದರೆ ಸ್ಮಶಾನ, ಆಶ್ರಯ ಮನೆ, ಶಾಲಾ ಕಟ್ಟಡ ಸೇರಿದಂತೆ ಇತರೆ ಸರ್ಕಾರದ ಕಟ್ಟಡಗಳನ್ನು ಕಟ್ಟುವುದಕ್ಕೆ ಖಾಸಗಿ ಜನರ ಜಮೀನನ್ನು ಖರೀದಿಸಲು ಸರ್ಕಾರದಿಂದ ಆಗಿಂದ್ದಾಗ್ಗೆ ಹೊರಡಿಸಲಾದ ಆದೇಶ/ ಸುತ್ತೋಲೆಗಳ ಪ್ರಕಾರ ಗ್ರಾಮಪಂಚಾಯ್ತಿ ಸಭೆಯಲ್ಲಿ ನಡೆಸುವ ರರಾವು ಪ್ರಕಾರ ಹಾಗೂ ವಿಭಾಗಾಧಿಕಾರಿಗಳವರ ಅಧ್ಯಕ್ಷತೆಯಲ್ಲಿ ನಡೆಸಿದ ರರಾವು ಹಾಗೂ ಸಂಬಂಧಿಸಿದ ತಾಲ್ಲೂಕಿನ ಉಪ ನೊಂದಣಾಧಿಕಾರಿಗಳಿಂದ ಜಮೀನುಗಳನ್ನು ಖರೀದಿ ಮಾಡುವ ಬಗ್ಗೆ ನಿಗದಿಸುವ ಧರದ ಪ್ರಕಾರ ರುದ್ರಭೂಮಿಗಳಿಗೆ ಸರ್ಕಾರಿ ಆದೇಶ ಸಂಖ್ಯೆ ವಾಇ 74 ಹೆಚ್ ಎ ಎಸ್ 2000, ದಿನಾಂಕ 15 9 2000 ಹಾಗೂ ಆದೇಶ ಸಂಖ್ಯೆ ವಾಇ 84 ಹೆಚ್ ಎ ಎಸ್ 96,ಎಕರೆಗೆ ರೂ 50,000/– ಗಳನ್ನು ಹೋಬಳಿ ಕೇಂದ್ರ ಸ್ಥಾನಗಳಲ್ಲಿ ರೂ 80,000/– ಗಳನ್ನು ಟಿ ಎಂ ಸಿ/ ಪಟ್ಟಣ ಪಂಚಾಯ್ತಿ ಪ್ರದೇಶಗಳಲ್ಲಿ 1,00,000/–ಗಳನ್ನು 50,000 ಜನಸಂಖ್ಯೆವುಳ್ಳ ನಗರ ಪ್ರದೇಶಗಳಲ್ಲಿ 1,50,000/– ಒಂದು ಲಕ್ಷ ಜನಸಂಖ್ಯೆಯುಳ್ಳ ನಗರ ಪ್ರದೇಶಗಳಲ್ಲಿ /ನಗರ ಪಾಲಿಕೆಗಳಲ್ಲಿ ರೂ 2,00,000/– ಹಾಗೂ ಮೇಲೆ ನಿಗಧಿಪಡಿಸಿದ ಬೆಲೆಗಳಿಗಿಂತ ಶೇ 20ರಷ್ಟು ಹೆಚ್ಚುವರಿಯಾಗಿ ನಿಗದಿಪಡಿಸಿದ ದರಗಳ ಅನ್ವಯ ಇವುಗಳಲ್ಲಿ ಯಾವುದು ಹೆಚ್ಚೋ ಆ ದರದಲ್ಲಿ ಜಮೀನನ್ನು ಖರೀದಿಸಲಾಗುವುದು

ಆ) ಮೇಲೆ ತಿಳಿಸಿದ ಉತ್ತರದ ರೀತಿ ಸರ್ಕಾರ ನಿಗದಿಪಡಿಸಿದ ದರದಲ್ಲಿ ಜಮೀನನ್ನು ಖರೀದಿಸಬೇಕಾಗುತ್ತದೆ ಸದರಿ ದರವನ್ನು 1996/2000ರಲ್ಲಿ ನಿಗದಿಪಡಿಸಿದ್ದು,

ಈಗ 10 ವರ್ಷಕ್ಕೂ ಮೇಲ್ಪಟ್ಟು ಹಿಂದಿನ ಧರವಾಗಿರುವುದರಿಂದ ಪ್ರಸ್ತುತ ಜಮೀನಿನ ದರದಲ್ಲಿ ಬೆಲೆ ನಿರ್ಧರಿಸುವ ಕುರಿತು ಹೆಚ್ಚಿನ ದರ ನಿಗದಿಪಡಿಸಲು ಪ್ರಸ್ತಾವನೆ ಪರಿಶೀಲನೆಯಲ್ಲಿದೆ

ಇ) ಜಮೀನು ಖರೀದಿಯ ಬಗ್ಗೆ ರೈತರಿಗೆ ಮನವೊಲಿಸಬೇಕಾಗುತ್ತದೆ ಹಾಗೂ ಶವಸಂಸ್ಕಾರ ಮಾಡುವ ಕುರಿತು ಇದು ಧಾರ್ಮಿಕ/ಪುಣ್ಯದ ಕಾರ್ಯವೆಂದು ರೈತರಲ್ಲಿ ಮನದಟ್ಟು ಮಾಡಬೇಕಾಗುತ್ತದೆ

ಈ) ಜಮಖಂಡಿ ತಾಲ್ಲೂಕಿನ 15 ಗ್ರಾಮಗಳಲ್ಲಿ ಸ್ಮಶಾನ/ಆಶ್ರಯ ಸಲುವಾಗಿ ಜಮೀನಿನ ಕೊರತೆ ಇದೆ ಈ ಬಗ್ಗೆ ತಹಶೀಲ್ದಾರ್, ಉಪ ವಿಭಾಗಾಧಿಕಾರಿರವರುಗಳಿಗೆ ಸ್ಥಳ ಪರಿಶೀಲನೆ ಮಾಡಿ ವರದಿ ಸಲ್ಲಿಸುವಂತೆ ಸೂಚಿಸಲಾಗಿದೆ ಜಮಖಂಡಿಯ ತಹಶೀಲ್ದಾರ್ ಮತ್ತು ಉಪ ವಿಭಾಗಾಧಿಕಾರಿಗಳು ಸರ್ಕಾರ ನಿಗಧಿಪಡಿಸಿರುವ ದರದಲ್ಲಿ ಜಮೀನನ್ನು ಖರೀದಿಗೆ ಪಡೆಯಲು ರೈತರನ್ನು ಮನವೊಲಿಸಲಾಗುತ್ತಿದೆ

1398 (2035) ಶ್ರೀ ಸಿದ್ದು ಸಾವದಿ (ಜಮಖಂಡಿ) – ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಇರುವ ಒಟ್ಟು ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಕಾರ್ಖಾನೆಗಳ) ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು)

ಆ) 2007–08ರಲ್ಲಿ ರಾಜ್ಯದಲ್ಲಿ ಹೊಸದಾಗಿ ಪ್ರಾರಂಭಿಸಲು ಉದ್ದೇಶಿಸಿರುವ ಕೈಗಾರಿಕೆಗಳ ಸಂಖ್ಯೆ ಎಷ್ಟು, ಎಲ್ಲೆಲ್ಲಿ ಪ್ರಾರಂಭಿಸಲಾಗುವುದು (ವಿವರ ನೀಡುವುದು),

ಇ) ಜಮಖಂಡಿ ತಾಲ್ಲೂಕಿನ ರಬಕವಿ ಬನಹಟ್ಟಿಯಲ್ಲಿ ಪಾರ್ಕ್ ಸ್ಥಾಪನೆಯ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ, ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು,

ಈ) ಕೈಗಾರಿಕೆ ಸ್ಥಾಪನೆಯಲ್ಲಿ ಉತ್ತರ ಕರ್ನಾಟಕಕ್ಕೆ ಅನ್ಯಾಯವಾಗಿದ್ದು ಅದನ್ನು ಹೇಗೆ ಮತ್ತು ಯಾವಾಗ ಸರಿಪಡಿಸಲಾಗುವುದು?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) 1485 ಘಟಕಗಳು (ಜಿಲ್ಲಾವಾರು ಮಾಹಿತಿಯನ್ನು ಲಗತ್ತಿಸಿದೆ)

ಆ) 2007–08ನೇ ಸಾಲಿನಲ್ಲಿ 13000 ಸಣ್ಣ ಕೈಗಾರಿಕೆಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸ್ಥಾಪಿಸುವ ಗುರಿ ಹೊಂದಲಾಗಿದೆ ಅಲ್ಲದೆ ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ಸ್ಥಾಪನೆಗಾಗಿ ಬಂದ ಎಲ್ಲಾ ಪಸ್ತಾವನೆಗಳನ್ನು ಅನುಮೋದಿಸಲಾಗುವುದು

ಇ) ಜಮಖಂಡಿ ತಾಲ್ಲೂಕಿನ ರಬಕವಿ ಬನಹಟ್ಟಿಯಲ್ಲಿ ಪಾರ್ಕ್ ಸ್ಥಾಪನೆಯ ಪ್ರಸ್ತಾವನೆ ಸರ್ಕಾರದ ಮುಂದಿದೆ ರಬಕವಿಯಲ್ಲಿ ಪವರ್‌ಲೂಮ್ ಪಾರ್ಕ್ ಸ್ಥಾಪನೆಯ ಸಲುವಾಗಿ ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು ವತಿಯಿಂದ 2 ಎಕರೆ ಜಮೀನು ಖರೀದಿಸಲಾಗಿದೆ ಈ ಪವರ್‌ಲೂಮ್ ಪಾರ್ಕ್ ಸ್ಥಾಪನೆಗೆ ಈವರೆಗೆ ಸರ್ಕಾರದಿಂದ ಒಟ್ಟು ರೂ 22 00 ಲಕ್ಷಗಳನ್ನು ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು ಇವರಿಗೆ ಬಿಡುಗಡೆ ಮಾಡಲಾಗಿದೆ ಮೂಲಭೂತ ಸೌಕರ್ಯ ಕಾಮಗಾರಿ ಕೆಲಸವನ್ನು ಕೆ ಎಸ್ ಎಸ್ ಐ ಡಿ ಸಿಗೆ ವಹಿಸಲಾಗಿದ್ದು, ಸದರಿ ಕಾಮಗಾರಿ ಶೀಘ್ರವಾಗಿ ಪ್ರಾರಂಭಿಸಲಾಗುವುದು ಸರ್ಕಾರದಿಂದ ಉಳಿದ ಹಣ ಬಿಡುಗಡೆಯಾದ 9 ತಿಂಗಳ ಅವಧಿಯೊಳಗೆ ಈ ಪಾರ್ಕ್ ಉತ್ಪಾದನೆ ಪ್ರಾರಂಭಿಸಲಿದೆ

ಬನಹಟ್ಟಿಯಲ್ಲಿ ಮಿನಿ ಪವರ್‌ಲೂಮ್ ಪಾರ್ಕ್ ಸ್ಥಾಪನೆಗಾಗಿ 50 ಜನ ಸದಸ್ಯರನ್ನೊಳಗೊಂಡ ಕಂಪನಿ ಪ್ರಾರಂಭಿಸಲು ಕ್ರಮ ಜರುಗಿಸಲಾಗಿದೆ ಈ ಕಂಪನಿ ವತಿಯಿಂದ 13 ಎಕರೆ ಜಮೀನು ಗುರುತಿಸಲಾಗಿದೆ ಕೆ ಐ ಎ ಡಿ ಬಿ ಮುಖಾಂತರ ಜಮೀನು ಸ್ವಾಧೀನಪಡಿಸಿಕೊಳ್ಳುವ ಪ್ರಸ್ತಾವನೆ ತಯಾರಿಸಲಾಗಿದೆ ಸದರಿ ಜವಳಿ ಪಾರ್ಕ್ ಸ್ಥಾಪನೆಗೆ ಎಲ್ಲಾ ಅಗತ್ಯ ಕ್ರಮ ಕೈಗೊಳ್ಳಲಾಗುವುದು

ಈ) 2006–11ನೇ ಕೈಗಾರಿಕಾ ನೀತಿಯಲ್ಲಿ ಹಿಂದುಳಿದ ಹಾಗೂ ಅತೀ ಹಿಂದುಳಿದ ತಾಲ್ಲೂಕುಗಳಲ್ಲಿ ಸ್ಥಾಪಿಸಲ್ಪಡುವ ಸಣ್ಣ ಕೈಗಾರಿಕೆಗಳು ಹಾಗೂ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳಿಗೆ ರಿಯಾಯಿತಿ ಹಾಗೂ ಉತ್ತೇಜನಗಳನ್ನು ನೀಡಲಾಗುತ್ತಿದ್ದು, ಇವುಗಳಿಂದ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಕೈಗಾರಿಕೆಗಳು ಸ್ಥಾಪನೆಯಾಗುವ ಸಾಧ್ಯತೆಗಳಿರುತ್ತವೆ

ಕೈಗಾರಿಕೆಗಳನ್ನು ಆಕರ್ಷಿಸುವ ದೃಷ್ಟಿಯಿಂದ ಬೆಳಗಾಂ, ಹುಬ್ಬಳ್ಳಿ, ಬಳ್ಳಾರಿ ಜಿಲ್ಲೆಗಳಲ್ಲಿ ವಿಮಾನ ನಿಲ್ದಾಣಗಳನ್ನು ಉನ್ನತೀಕರಣಗೊಳಿಸಲಾಗುತ್ತಿದೆ

ಉತ್ತರ ಕರ್ನಾಟಕಕ್ಕೆ ಹೆಚ್ಚು ಕೈಗಾರಿಕೆಗಳನ್ನು ಆಕರ್ಷಿಸುವ ದೃಷ್ಟಿಯಿಂದ ಬಾಗಲಕೋಟೆ, ಬೆಳಗಾಂ, ಧಾರವಾಡ, ದಾವಣಗೆರೆ, ಗುಲ್ಬರ್ಗಾ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳುತ್ತಿದ್ದು, ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ

ಬೆಳಗಾವಿ ಜಿಲ್ಲೆಯಲ್ಲಿ 2 ವಿಶೇಷ ಆರ್ಥಿಕ ವಲಯ ಯೋಜನೆಗಳಿಗೆ ಭಾರತ ಸರ್ಕಾರದಿಂದ ಅನುಮೋದನೆ ದೊರೆತಿದ್ದು ಇದರಿಂದ ಜಿಲ್ಲೆಯ ಆರ್ಥಿಕ ಬೆಳವಣಿಗೆ ಅಭಿವೃದ್ಧಿಯಾಗುವುದರೊಂದಿಗೆ ಹೆಚ್ಚು ಉದ್ಯೋಗಾವಕಾಶ ದೊರೆಯುತ್ತದೆ

ಈ ಹಿನ್ನೆಲೆಯಲ್ಲಿ ಈಗಾಗಲೇ ಬೆಳಗಾವಿಯಲ್ಲಿ ದಿನಾಂಕ 8-3-2007 ರಂದು ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಏರ್ಪಡಿಸಿದ್ದು, ಇದರಲ್ಲಿ 110 ಉದ್ದಿಮೆದಾರರು ತಮ್ಮ ಘಟಕಗಳನ್ನು ಬೆಳಗಾವಿ ಜಿಲ್ಲೆಯಲ್ಲಿ ಸ್ಥಾಪನೆ ಮಾಡುವಲ್ಲಿ ಆಸಕ್ತಿ ತೋರಿಸಿದ್ದು, ಇವುಗಳಿಂದ ಒಟ್ಟು ರೂ 900 ಕೋಟಿ ಬಂಡವಾಳ ಹೂಡಿಕೆಯಾಗುವ ಸಾಧ್ಯತೆ ಇದ್ದು ಮತ್ತು 12500 ಜನರಿಗೆ ಉದ್ಯೋಗಾವಕಾಶ ಸಿಗುವ ನಿರೀಕ್ಷೆ ಇದೆ

ದಿನಾಂಕ 8-4-2007 ರಂದು ರಾಯಚೂರಿನಲ್ಲಿ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಏರ್ಪಡಿಸಿ, ಇಲ್ಲಿಯೂ ಸಹ ಉದ್ದಿಮೆದಾರರು ಕೈಗಾರಿಕೆಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸಲಾಗುವುದು

ದಿನಾಂಕ 14-12-2006 ರಂದು ಸಿಐಐ ಸಹಯೋಗದೊಂದಿಗೆ ಹೈದರಾಬಾದಿನಲ್ಲಿ ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಗಳಿಗೆ ಬಂಡವಾಳ ಆಕರ್ಷಿಸಲು ಪ್ರದರ್ಶನ ಏರ್ಪಡಿಸಲಾಗಿತ್ತು

Annexure to L.C. QN: 2035

As on : 28.02.2007

DETAILS OF MEDIUM AND LARGE SCALE INDUSTRIES IN KARNATAKA

Sl.No	District	No of Units	Total Units Investment (Rs in Crores)	Employment (in Nos)
1	Bangalore (Urban)	750	10411 84	283379
2	Bangalore (Rural)	156	1433 89	12275
3	Bagalkot	15	409 19	5607
4	Bidar	32	326 37	4402
5	Bellary	52	4427 24	12248
6	Belgaum	52	2126.29	22017
7	Bijapur	14	232 45	3841
8	Chamarajnagar	6	68 26	1164
9	Chickmagalur	5	1128.37	2147
10	Chitradurga	25	263 57	3013
11	Dakshina Kannada	29	7716 77	10713
12	Davanagere	12	1407 48	5225
13	Dharwad	50	610 41	10140
14	Gadag	9	67 82	3243
15	Gulbarga	22	859 68	10631
16	Hassan	12	105 77	3063

17	Haveri	9	233 76	6567
18	Kodagu	3	16 68	414
19	Kolar	28	8235 51	18985
20	Karwar	15	442 35	4231
21	Koppal	16	590 88	3467
22	Mandya	15	552 85	4072
23	Mysore	79	1592 3	17484
24	Raichur	20	2210 6	7859
25	Shimoga	14	592 51	8347
26	Tumkur	36	450 54	6700
27	Udupi	9	101 49	1639
	Total	**1485**	**46614 87**	**472873**

1399 (2036) ಶ್ರೀ ಸಿದ್ದು ಸಾವದಿ (ಜಮಖಂಡಿ) – ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿಯಲ್ಲಿ ಅರಣ್ಯ ಇಲಾಖೆಗೆ ಸೇರಿದ ಪ್ರವಾಸಿ ಮಂದಿರ ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಬಂದಿದ್ದಲ್ಲಿ, ಇದನ್ನು ಯಾವಾಗ ಸುಸ್ಥಿತಿಗೆ ತರಲಾಗುವುದು,

ಇ) ಈ ಪ್ರವಾಸಿ ಮಂದಿರವನ್ನು ದುರಸ್ಥಿ ಮಾಡಿ ಪ್ರಾರಂಭಿಸಲು ಬೇಕಾಗುವ ಹಣವೆಷ್ಟು,

ಈ) ಯಾವಾಗ ಈ ಹಣವನ್ನು ಬಿಡುಗಡೆಗೊಳಿಸಲಾಗುವುದು?

ಶ್ರೀ ಸಿ ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಬಂದಿದೆ

ಆ, ಇ ಈ) ಈ ಪ್ರವಾಸಿ ಮಂದಿರ ಸುಸ್ಥಿತಿಗೆ ತರಲು ಅಂದಾಜು ರೂ 15 00 ಲಕ್ಷ (ನವೀಕರಣ ಹಾಗೂ ರಸ್ತೆ ಕಾಮಗಾರಿ ಸೇರಿ) ಬೇಕಾಗುವುದು ಬಿಜಾಪುರ ವಿಭಾಗದಿಂದ ಪ್ರಸ್ತಾವನೆಯನ್ನು ಪಡೆದು ನಂತರ ಹಣ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು

1400 (1801) ಶ್ರೀ ವಿ ಸೋಮಣ್ಣ ಮತ್ತು ಶ್ರೀ ರಾಮಲಿಂಗಾರೆಡ್ಡಿ (ಜಯನಗರ) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವ ಯಾವ ಬ್ಯಾಂಕ್‌ಗಳಲ್ಲಿ ಸ್ಟ್ಯಾಂಪ್ ಪೇಪರ್ (ಛಾಪಾ ಕಾಗದ)ಗಳನ್ನು ಮಾರಾಟ ಮಾಡಲಾಗುತ್ತಿದೆ,

ಆ) ಪ್ರತಿಯೊಂದು ಬ್ಯಾಂಕುಗಳ ಮುಂದೆ ನೂರಾರು ಜನರು ಗಂಟೆಗಟ್ಟಲೆ ಕಾಯಬೇಕಾದ ಪರಿಸ್ಥಿತಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಹಾಗಿದ್ದಲ್ಲಿ, ನಾಗರೀಕರಿಗೆ ವಿಳಂಬವಿಲ್ಲದೆ ಛಾಪಾ ಕಾಗದ ದೊರಕುವಂತೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು,

ಈ) ಬ್ಯಾಂಕುಗಳಲ್ಲಿ ಮಾರಾಟವಾಗುವ ಛಾಪಾ ಕಾಗದಗಳಲ್ಲಿ ನಕಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಉ) ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು,

ಊ) ಮಹಾರಾಷ್ಟ್ರ, ಗುಜರಾತ್ ಮತ್ತು ದೆಹಲಿ ರಾಜ್ಯಗಳಲ್ಲಿ ಇ–ಸ್ಟ್ಯಾಂಪಿಂಗ್ ಪದ್ಧತಿ ಜಾರಿಗೆ ತಂದಿರುವ ರೀತಿಯಲ್ಲಿ ಇಲ್ಲೂ ಜಾರಿಗೆ ತರಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ದಿನಾಂಕ 1/4/2003 ರಿಂದ ಸ್ಟಾಂಪ್ ಪೇಪರ್‌ಗಳ ಬಳಕೆ ಇರುವುದಿಲ್ಲ ಆದರೆ, ಸಾರ್ವಜನಿಕ ಹಿತದೃಷ್ಟಿಯಿಂದ ಐಚ್ಛಿಕವಾಗಿ ನೋಂದಾಯಿಸಲ್ಪಡುವ ದಸ್ತಾವೇಜುಗಳ ಬಳಕೆಗಾಗಿ Pre Certified Document Sheet ಗಳನ್ನು ಸ್ಟೇಟ್

ಬ್ಯಾಂಕ್ ಆಫ್ ಮೈಸೂರು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್ ಹಾಗೂ ಕಾರ್ಪೋರೇಷನ್ ಬ್ಯಾಂಕುಗಳು ಮುದ್ರಿಸಿ ವಿತರಿಸುತ್ತಿವೆ

ಆ) ಹೌದು

ಇ) ಎ) ಮೇಲೆ ಹೆಸರಿಸಿರುವ ಎಲ್ಲಾ ರಾಷ್ಟ್ರೀಕೃತ ಬ್ಯಾಂಕುಗಳ ಶಾಖೆಗಳಲ್ಲಿ ಪ್ರಮಾಣೀಕರಿಸಿದ ದಸ್ತಾವೇಜು ಹಾಳೆಗಳನ್ನು ವಿತರಿಸುವ ವ್ಯವಸ್ಥೆ ಮಾಡುವಂತೆ ಬ್ಯಾಂಕುಗಳಿಗೆ ಸೂಚನೆ ನೀಡಲಾಗಿದೆ

ಬಿ) ಇ-ಸ್ಟ್ಯಾಂಪಿಂಗ್ ಮೂಲಕ ಮುದ್ರಾಂಕ ತುಂಬುವ ವಿನೂತನ ಕ್ರಮ ಸರ್ಕಾರದ ಪರಿಶೀಲನೆಯಲ್ಲಿದೆ

ಈ) ಇಲ್ಲ

ಉ) ಉದ್ಭವಿಸುವುದಿಲ್ಲ

ಊ) ನೆರೆಯ ರಾಜ್ಯಗಳಲ್ಲಿರುವಂತೆ ಇ-ಸ್ಟ್ಯಾಂಪಿಂಗ್ ಪದ್ಧತಿಯನ್ನು ಕರ್ನಾಟಕದಲ್ಲಿಯೂ ಸಹ ಜಾರಿಗೆ ತರಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ

1401 (1802) ಶ್ರೀ ಸೋಮಣ್ಣ ವಿ (ಬನ್ನಿಪೇಟೆ) – ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುವರ್ಣ ಕಾಯಕ ಉದ್ಯೋಗ ತರಬೇತಿ ಯೋಜನೆಯಡಿಯಲ್ಲಿ ಪ್ರತಿ ಅಭ್ಯರ್ಥಿಗೆ ತರಬೇತಿ ಅವಧಿಯಲ್ಲಿ ಸರ್ಕಾರ ಹಾಗೂ ಸಂಬಂಧಪಟ್ಟ ಕಾರ್ಖಾನೆಗಳು ನೀಡುವ ಸ್ಟೈಫಂಡ್ ಹಣವೆಷ್ಟು,

ಆ) ಈ ಯೋಜನೆಯಲ್ಲಿ ಕಾರ್ಖಾನೆಗಳು ಸ್ಟೈಫಂಡ್ ನೀಡಬೇಕಾಗಿರುವುದರಿಂದ ಅಭ್ಯರ್ಥಿಗಳನ್ನು ತೆಗೆದುಕೊಳ್ಳಲು ಹೆಚ್ಚು ಆಸಕ್ತಿ ತೋರಿಸುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಈ ಯೋಜನೆಯಡಿಯಲ್ಲಿ ಪ್ರತಿ ಅಭ್ಯರ್ಥಿಗೆ ಸರ್ಕಾರದಿಂದಲೇ ತಿಂಗಳಿಗೆ ಕನಿಷ್ಠ 5000 ರೂ ಸ್ಟೈಫಂಡ್ ನೀಡಿ ಈ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳ್ಳಲು ಸರ್ಕಾರ ಕ್ರಮಕೈಗೊಳ್ಳುತ್ತದೆಯೇ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ತರಬೇತಿಗೆ ಆಯ್ಕೆ ಮಾಡಿದ ಅಭ್ಯರ್ಥಿಗಳಿಗೆ ಸರ್ಕಾರದ ವತಿಯಿಂದ ಮಾಹೆಯಾನ ರೂ 750/– ಹಾಗೂ ತರಬೇತಿ ನೀಡುವ ಕೈಗಾರಿಕಾ ಸಂಸ್ಥೆಗಳಿಂದ ರೂ 750/– ಒಟ್ಟು ರೂ 1500/– ಗಳ ಶಿಷ್ಯ ವೇತನವನ್ನು ನೀಡಲಾಗುವುದು

ಆ) ಇಲ್ಲ

ಇ) ಸರ್ಕಾರದಿಂದ ನೀಡುವ ಶಿಷ್ಯವೇತನ ರೂ 750/– ರ ಮೊತ್ತವನ್ನು ಪರಿಷ್ಕರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ

1402 (1803) ಶ್ರೀ ಸೋಮಣ್ಣ ಬಿ (ಬನ್ನಿಪೇಟೆ) – ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುವರ್ಣ ಕಾಯಕ ತರಬೇತಿ ಯೋಜನೆಯನ್ನು ಯಾವಾಗ ಜಾರಿಗೆ ತರಲಾಯಿತು,

ಆ) ಈ ಯೋಜನೆಯಲ್ಲಿ ನಿರುದ್ಯೋಗಿಗಳಿಗೆ ನೀಡುವ ಸ್ಟೈಫಂಡ್ ಹಣವೆಷ್ಟು ಹಾಗೂ ಕಾರ್ಖಾನೆಯವರು ನೀಡುವ ಸ್ಟೈಫಂಡ್ ಹಣವೆಷ್ಟು ಹಾಗೂ ಈ ತರಬೇತಿಯ ಅವಧಿ ಎಷ್ಟು,

ಇ) ಈ ಕಾರ್ಯಕ್ರಮಕ್ಕಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ರಾಜ್ಯದ ಎಲ್ಲೆಲ್ಲಿ ಸಂದರ್ಶನಗಳನ್ನು ಏರ್ಪಡಿಸಲಾಗಿತ್ತು,

ಈ) ಇಲ್ಲಿಯವರೆಗೆ ತರಬೇತಿಗಾಗಿ ಆಯ್ಕೆಯಾಗಿ ವಿವಿಧ ಕಾರ್ಖಾನೆ/ಸಂಸ್ಥೆಗಳಲ್ಲಿ ತರಬೇತಿ ಪಡೆಯುತ್ತಿರುವ ಸಂಖ್ಯೆ ಎಷ್ಟು,

ಉ) ಎಲ್ಲಾ ಕಾರ್ಖಾನೆಗಳು/ಮಾಹಿತಿ ತಂತ್ರಜ್ಞಾನ ಸಂಸ್ಥೆಗಳು ಕಡ್ಡಾಯವಾಗಿ ಸರ್ಕಾರದ ಈ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರತಿ ಮೂರು ತಿಂಗಳು

ತರಬೇತಿಗೆ ಇಂತಿಷ್ಟು ಸಂಖ್ಯೆಯಲ್ಲಿ ನಿರುದ್ಯೋಗಿಗಳನ್ನು ತೆಗೆದುಕೊಳ್ಳಬೇಕೆಂದು ಆದೇಶವನ್ನು ಸರ್ಕಾರ ಹೊರಡಿಸಿದೆಯೇ,

ಊ) ಇಲ್ಲದಿದ್ದಲ್ಲಿ, ಎಲ್ಲ ಕೈಗಾರಿಕೆಗಳಿಗೆ ಈ ತರಬೇತಿಗೆ ಅಭ್ಯರ್ಥಿಗಳನ್ನು ನಿಯೋಜಿಸಲು ಸರ್ಕಾರ ಕೈಗೊಂಡಿರುವ ವಿಧಾನಗಳೇನು?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಈ ಯೋಜನೆಯನ್ನು ದಿನಾಂಕ 22–08–2006 ರಿಂದ ಜಾರಿಗೊಳಿಸಲಾಗಿದೆ

ಆ) ತರಬೇತಿಯಲ್ಲಿರುವ ಅಭ್ಯರ್ಥಿಗಳಿಗೆ ಸರ್ಕಾರದ ವತಿಯಿಂದ ಮಾಹೆಯಾನ ರೂ 750/– ಹಾಗೂ ತರಬೇತಿ ನೀಡುವ ಕೈಗಾರಿಕಾ ಸಂಸ್ಥೆಗಳಿಂದ ರೂ 750/– ಗಳು ಸೇರಿದಂತೆ, ಒಟ್ಟು ರೂ 1500/– ಗಳ ಶಿಷ್ಯ ವೇತನವನ್ನು ನೀಡಲಾಗುವುದು ತರಬೇತಿ ಕಾಲಾವಧಿಯು ಚಟುವಟಿಕೆಗೆ ಅನುಸಾರವಾಗಿ ವರ್ಗೀಕರಿಸಿ 3 ರಿಂದ 12 ತಿಂಗಳ ಕಾಲಾವಧಿಯದಾಗಿರುತ್ತದೆ

ಇ) ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರಗಳ ಮೂಲಕ ಅಭ್ಯರ್ಥಿಗಳ ಆಯ್ಕೆಗಾಗಿ ಸಂದರ್ಶನವನ್ನು ಏರ್ಪಡಿಸಲಾಗುತ್ತಿದೆ ವಿಶೇಷವಾಗಿ ಮಾಹಿತಿ ತಂತ್ರಜ್ಞಾನ ಮತ್ತು ಜವಳಿ ಉದ್ದಿಮೆಗಳಿಗೆ ಹಾಗೂ ಇತರೆ ಕೈಗಾರಿಕೆಗಳಿಗೆ ಅನುಕೂಲವಾಗುವಂತೆ ಬೆಂಗಳೂರು, ಬೆಳಗಾವಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಸಂದರ್ಶನಗಳನ್ನು ಏರ್ಪಡಿಸಲಾಗಿತ್ತು

ಈ) ಇಲ್ಲಿಯವರೆಗೆ ತರಬೇತಿಗಾಗಿ ಆಯ್ಕೆಯಾಗಿ ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳು 28,381

ಉ) ಈ ಬಗ್ಗೆ ಯಾವುದೇ ಆದೇಶವನ್ನು ಹೊರಡಿಸಿರುವುದಿಲ್ಲ

ಊ) ರಾಜ್ಯ ಮಟ್ಟದ ಕೈಗಾರಿಕಾ ಸಂಘಗಳಾದ ಸಿ ಐ ಐ, ಬಿ ಸಿ ಐ ಸಿ ಕಾಸಿಯಾ ಮತ್ತು ಎಫ್ ಕೆ ಸಿ ಸಿ ಐ ಗಳೊಂದಿಗೆ ಮಾಡಿಕೊಂಡ ಒಡಂಬಡಿಕೆಯಂತೆ (ಎಂ ಓ ಯು) ಆಯ್ದ ಅಭ್ಯರ್ಥಿಗಳನ್ನು ವಿವಿಧ ಕೈಗಾರಿಕೆಗಳಲ್ಲಿ ತರಬೇತಿಗೆ ನಿಯೋಜಿಸಲು ಕ್ರಮ ಕೈಗೊಳ್ಳಲಾಗಿದೆ

1403 (2024) ಶ್ರೀ ಶ್ರೀರಾಮರೆಡ್ಡಿ ಜಿ ವಿ (ಬಾಗೇಪಲ್ಲಿ) – ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2006–07ನೇ ಸಾಲಿನಲ್ಲಿ ಕಳೆದ ತಿಂಗಳ ಅಂತ್ಯದವರೆಗೆ ರಾಜ್ಯದಲ್ಲಿ ಉತ್ಪಾದಿಸಲಾಗಿರುವ ರೇಷ್ಮೆ ಗೂಡಿನ ಪ್ರಮಾಣವೆಷ್ಟು ಹಾಗೂ ರೇಷ್ಮೆ ನೂಲಿನ ಪ್ರಮಾಣವೆಷ್ಟು,

ಆ) ಹಾಗಿದ್ದಲ್ಲಿ, ಹೊರ ದೇಶಗಳಿಂದ ಆಮದು ಮಾಡಿಕೊಳ್ಳಲಾದ ರೇಷ್ಮೆ ನೂಲಿನ ಪ್ರಮಾಣವೆಷ್ಟು?

ಶ್ರೀ ಎಸ್ ಶಿವಣ್ಣ (ರೇಷ್ಮೆ ಸಚಿವರು)

ಅ) ರಾಜ್ಯದಲ್ಲಿ ಫೆಬ್ರವರಿ 2007ರ ಅಂತ್ಯಕ್ಕೆ 59,871 ಮೆ ಟನ್ ರೇಷ್ಮೆ ಗೂಡು ಹಾಗೂ 7639 ಮೆ ಟನ್ ಕಚ್ಚಾ ರೇಷ್ಮೆ ಉತ್ಪಾದಿಸಲಾಗಿದೆ

ಆ) ಹೊರ ದೇಶಗಳಿಂದ ಭಾರತಕ್ಕೆ 2006–07ರ ಏಪ್ರಿಲ್‌ನಿಂದ ಅಕ್ಟೋಬರ್ ಅಂತ್ಯಕ್ಕೆ 3,114 ಮೆ ಟನ್ ರೇಷ್ಮೆ ಆಮದು ಆಗಿದೆ

1404 (2025) ಶ್ರೀ ಶ್ರೀರಾಮರೆಡ್ಡಿ ಜಿ ವಿ (ಬಾಗೇಪಲ್ಲಿ) – ಮಾನ್ಯ ಯೋಜನೆ, ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಲಾಟರಿ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ,

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ರಾಮಚಂದ್ರ ಗೌಡ (ಯೋಜನೆ, ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

ಅ) ಹೌದು, ದಿನಾಂಕ 14 2007 ರಿಂದ ಲಾಟರಿ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಲಾಗುವುದು

ಆ) ಈ ಸಂಬಂಧ ಅಧಿಸೂಚನೆಯನ್ನು ಸೂಕ್ತ ಸಮಯದಲ್ಲಿ ಹೊರಡಿಸಲಾಗುವುದು

1405 (2026) ಶ್ರೀ ಶ್ರೀರಾಮರೆಡ್ಡಿ ಜಿ ವಿ (ಬಾಗೇಪಲ್ಲಿ) – ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2006–07ನೇ ಸಾಲಿನಲ್ಲಿ ಅಬಕಾರಿ ಇಲಾಖೆಯಿಂದ ನಿಗದಿಪಡಿಸಿದ ಆದಾಯದ ಗುರಿ ಎಷ್ಟು,

ಆ) ಪ್ರಸ್ತುತ ವರ್ಷ ಇಲ್ಲಿಯವರೆಗೆ ಸಂಗ್ರಹಿಸಲಾದ ಆದಾಯವೆಷ್ಟು?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)

ಅ) 4100 18 ಕೋಟಿ ರೂ ಗಳು

ಆ)

	ಆದಾಯ ರೂ (ಕೋಟಿ ರೂ ಗಳಲ್ಲಿ)
ಸಾರಾಯಿ ಅಂಗಡಿ ಬಾಡಿಗೆ	1734 43
ಸಾರಾಯಿ ಸುಂಕ	34 40
ಭಾರತೀಯ ಮದ್ಯಗಳ ಮೇಲಿನ ಸುಂಕ	604 70
ಭಾರತೀಯ ಮದ್ಯಗಳ ಮೇಲಿನ ಹೆಚ್ಚುವರಿ ಸುಂಕ	965 15
ಬೀರ್ ಸುಂಕ	49 79
ಬೀರ್ ಮೇಲಿನ ಹೆಚ್ಚುವರಿ ಸುಂಕ	273 14
ರಹದಾರಿ ಶುಲ್ಕ, ಲೈಸನ್ಸ್ ಶುಲ್ಕ, ಹಾಗೂ ಇತರೆ ಬಾಬ್ತುಗಳು	412 94
ಒಟ್ಟು	**4074 55**

1406 (2027) ಶ್ರೀ ಶ್ರೀರಾಮರೆಡ್ಡಿ ಜಿ ವಿ (ಬಾಗೇಪಲ್ಲಿ) – ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗೇಪಲ್ಲಿ ತಾಲ್ಲೂಕಿನಲ್ಲಿ ಕೈಗಾರಿಕಾ ವಿಕಾಸ ಯೋಜನೆಯು ಮಂದಗತಿಯಲ್ಲಿ ಸಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಬಂದಿದ್ದಲ್ಲಿ ಈ ಯೋಜನೆಯನ್ನು ತ್ವರಿತವಾಗಿ ಜಾರಿಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಹೌದು

ಆ) ಯೋಜನೆಯ ತ್ವರಿತ ಅನುಷ್ಠಾನಕ್ಕೆ ಕ್ರಮ ಕೈಗೊಂಡಿದ್ದು, ವಿವರಗಳು,

ಅ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಕೈಗಾರಿಕಾ ಬಂಡವಾಳ ಹೂಡಿಕೆಗೆ ಪೂರಕವಾಗುವಂತೆ, ಹೊಸ ಕೈಗಾರಿಕಾ ಪ್ರದೇಶವನ್ನು ಸ್ಥಾಪಿಸಲು 200 ಎಕರೆ ಪ್ರದೇಶವನ್ನು ಗುರುತಿಸಿದ್ದು, ನವೆಂಬರ್ 2006 ರಿಂದ ಭೂ ಸ್ವಾಧೀನ ಪ್ರಕ್ರಿಯೆ ಪ್ರಾರಂಭವಾಗಿದೆ

ಆ ತಾಲ್ಲೂಕಿನಲ್ಲಿರುವ ಕೈಮಗ್ಗ ಚಟುವಟಿಕೆಗಳನ್ನು ಕ್ಲಸ್ಟರ್ ಮಾದರಿಯಡಿಯಲ್ಲಿ ಅಭಿವೃದ್ಧಿಗೊಳಿಸಲು 36 ಹಳ್ಳಿಗಳನ್ನು ಗುರುತಿಸಿದ್ದು, ಕ್ರಿಯಾ ಯೋಜನೆಯನ್ನು ತಯಾರಿಸಲಾಗಿದೆ

ಇ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಮುಂದೆ ಬರುವ ಹೊಸ ಉದ್ದಿಮೆದಾರರಿಗೆ ಅನುಕೂಲವಾಗುವಂತೆ ಬಿಸಿನೆಸ್ ಇನ್‌ಕ್ಯೂಬೇಟರ್ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ

ಈ ತಾಲ್ಲೂಕಿನಲ್ಲಿ ಉದ್ದಿಮೆಶೀಲತೆಯನ್ನು ಅಭಿವೃದ್ಧಿ ಪಡಿಸಲು 80 ಜನರಿಗೆ ಟೆಕ್ಸಾಕ್ ಸಂಸ್ಥೆಯಿಂದ ಉದ್ದಿಮೆಶೀಲತಾ ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ

1407 (1934) ಡಾ ಸುಧಾಕರ್ ಎಂ ಸಿ (ಚಿಂತಾಮಣಿ) – ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ತಾಲ್ಲೂಕಿನಲ್ಲಿ ಅಂತರ್ಜಲ ಮಟ್ಟವು ಸುಮಾರು 1000 ಅಡಿಗಳಿಗೆ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಬಂದಿದ್ದಲ್ಲಿ, ದೀರ್ಘ ಕಾಲದ ಮತ್ತು ಶಾಶ್ವತವಾದ ಪರಿಹಾರವನ್ನು ಕಂಡುಕೊಳ್ಳಲು ಸರ್ಕಾರ ಯಾವ ಯಾವ ಯೋಜನೆಗಳನ್ನು ಹಮ್ಮಿಕೊಂಡಿದೆ,

ಇ) ಅಂತರ್ಜಲ ಮಟ್ಟವನ್ನು ವೃದ್ಧಿಸಲು ಮಳೆಗಾಲದಲ್ಲಿ ಹರಿಯುವ ನದಿಗಳಿಗೆ ಹೆಚ್ಚು ಹೆಚ್ಚು ಚೆಕ್ ಡ್ಯಾಂಗಳನ್ನು ನಿರ್ಮಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ (ವಿವರ ಒದಗಿಸುವುದು)?

ಶ್ರೀ ಬಿ ಎಸ್ ಯಡಿಯೂರಪ್ಪ (ಮಾನ್ಯ ಉಪಮುಖ್ಯಮಂತ್ರಿಗಳು)

ಅ) ಬಂದಿದೆ

ಆ) ಅಂತರ್ಜಲ ವೃದ್ಧಿಸಲು ಸರ್ಕಾರವು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಅಂತರ್ಜಲ ಅತೀ ಬಳಕೆಯಾಗುವ ಜಲಾನಯನ ಪ್ರದೇಶಗಳಲ್ಲಿ ಅಂತರ್ಜಲ ಕೃತಕ ಮರು ಪೂರಕ ರಚನೆಗಳನ್ನು ನಿರ್ಮಿಸಲು ಅನುಷ್ಠಾನಗೊಳಿಸುವ ಇಲಾಖೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕೃಷಿ, ಅರಣ್ಯ, ಜಲಾನಯನ ಅಭಿವೃದ್ಧಿ ಮತ್ತು ಇನ್ನಿತರ ಇಲಾಖೆಗಳಿಗೆ ವೈಜ್ಞಾನಿಕವಾಗಿ ಕೋರಿಕೆ ಮೇರೆಗೆ ತಾಂತ್ರಿಕ ಸಲಹೆ ನೀಡುತ್ತದೆ ಇದಲ್ಲದೆ ಪ್ರಾಯೋಗಾತ್ಮಕವಾಗಿ ಅಂತರ್ಜಲ ಕೃತಕ ಮರು ಪೂರೈಕೆ ರಚನೆಗಳ ಕಾರ್ಯಕ್ರಮವನ್ನು ಸಹ ಹಮ್ಮಿಕೊಂಡಿರುತ್ತದೆ

ಇ) ನದಿಗಳಿಗೆ ಚೆಕ್ ಡ್ಯಾಂಗಳನ್ನು ನಿರ್ಮಿಸುವ ಕಾರ್ಯಕ್ರಮ ಹಾಕಿಕೊಂಡಿರುವುದಿಲ್ಲ

1409 (2048) ಶ್ರೀ ಸುನೀಲ್ ಕುಮಾರ್ ವಿ (ಕಾರ್ಕಳ) – ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿದ್ಯಾ ವಿಕಾಸ ಯೋಜನೆಯಡಿಯಲ್ಲಿ ಕೆ ಹೆಚ್ ಡಿ ಸಿ ಸಂಸ್ಥೆಯು ಬಟ್ಟೆಗಳನ್ನು ಸರಬರಾಜು ಮಾಡುತ್ತಿರುವುದು ನಿಜವೇ,

ಆ) ಹಾಗಿದ್ದಲ್ಲಿ ಯಾವಾಗಿನಿಂದ ಮಾಡುತ್ತಿದೆ,

ಇ) ಎಷ್ಟು ಮೊತ್ತದ ಬಟ್ಟೆಗಳನ್ನು ವಿತರಿಸಲಾಗಿದೆ, ಈ ಬಾಬ್ತು ಎಷ್ಟು ಹಣ ಬಾಕಿ ಸರ್ಕಾರದಿಂದ ಬರಬೇಕಾಗಿದೆ, ಬಾಕಿ ಇರಲು ಕಾರಣಗಳೇನು,

ಈ) ಇದು ಯಾವ ಅವಧಿಯ ಹಣವಾಗಿದೆ ಹಾಗೂ ಇದರ ಪಾವತಿಗೆ ಯಾವ ಕ್ರಮ ಕೈಗೊಂಡಿದೆ,

ಉ) ಯಾವಾಗ ಈ ಬಾಕಿ ಹಣವನ್ನು ಪಡೆಯಲಾಗುವುದು,

ಊ) ಈ ಬಾಕಿ ಹಣ ಪಾವತಿಯಾಗದ ಕಾರಣ ಮುಂದಿನ ವರ್ಷದ ಸಮವಸ್ತ್ರ ವಿತರಣೆಗೆ ತೊಂದರೆಯಾಗುವುದಿಲ್ಲವೇ,

ಋ) ಮುಂದಿನ ವರ್ಷಕ್ಕಾದರೂ ಸಕಾಲಕ್ಕೆ ಸರಿಯಾಗಿ ಸಮವಸ್ತ್ರ ವಿತರಿಸಲು ಯಾವ ಕ್ರಮ ಕೈಗೊಳ್ಳುವುದು,

ಎ) ಈ ನಿಟ್ಟಿನಲ್ಲಿ ಈ ಬಟ್ಟೆ ನೇಯ್ಗೆ ಮಾಡುವ ನೇಕಾರರಿಗೆ ವಿಮಾ ಸೌಲಭ್ಯ ಹಾಗೂ ಇವರಿಗಾಗಿ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗುತ್ತದೆ?

ಶ್ರೀ ಅಪ್ಪಾಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ

ಅ) ವಿದ್ಯಾ ವಿಕಾಸ ಯೋಜನೆಯಡಿ ಶಿಕ್ಷಣ ಇಲಾಖೆಯ ಬೇಡಿಕೆಯಂತೆ ಶಾಲಾ ಮಕ್ಕಳಿಗೆ ಸಮವಸ್ತ್ರಗಳನ್ನು ಕೆ ಹೆಚ್ ಡಿ ಸಿ ವತಿಯಿಂದ ಪ್ರತಿ ವರ್ಷ ಸರಬರಾಜು ಮಾಡಲಾಗುತ್ತಿದೆ

ಆ) 1986–87ನೇ ಸಾಲಿನಿಂದ ನಿಗಮವು ವಿದ್ಯಾ ವಿಕಾಸ ಯೋಜನೆಯಡಿ ಸಮವಸ್ತ್ರಗಳನ್ನು ಶಿಕ್ಷಣ ಇಲಾಖೆಗೆ ಸರಬರಾಜು ಮಾಡುತ್ತಿದೆ

ಇ) 2006–07ನೇ ಸಾಲಿನವರೆಗೆ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ರೂ 413 87 ಕೋಟಿ ಮೌಲ್ಯದ 615 44 ಲಕ್ಷ ಸೆಟ್ ಸಮವಸ್ತ್ರ ಬಟ್ಟೆಗಳನ್ನು ಸರಬರಾಜು ಮಾಡಿದ್ದು, 2005–06ನೇ ಸಾಲಿನವರೆಗೆ ಸರಬರಾಜು ಮಾಡಿರುವ ಒಟ್ಟು ಮೌಲ್ಯವನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯು ನಿಗಮಕ್ಕೆ ಪಾವತಿಸಿರುತ್ತದೆ 2006–07ನೇ ಸಾಲಿನಲ್ಲಿ ಸರಬರಾಜು ಮಾಡಿರುವ ಸಮವಸ್ತ್ರಗಳಿಗೆ ರೂ 212 35 ಲಕ್ಷ ಬಾಕಿ ಪಾವತಿಸಬೇಕಾಗಿರುತ್ತದೆ 2006–07ನೇ ಸಾಲಿನಲ್ಲಿ ತಾಲ್ಲೂಕು ಪಂಚಾಯತ್‌ಗಳಿಂದ ರೂ 212 35 ಲಕ್ಷ ಬಾಕಿ ಹಣ ಬರಬೇಕಾಗಿದ್ದು, ಅನುದಾನದ ಕೊರತೆಯಿಂದ ಹಣ ಬಿಡುಗಡೆಯಾಗಿರುವುದಿಲ್ಲ ಈ ಬಾಕಿ ಹಣವನ್ನು ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರಿಂದ ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ

2007–08ನೇ ಸಾಲಿಗೆ ಇಲ್ಲಿಯವರೆಗೂ ಸರಬರಾಜು ಮಾಡಿರುವ ಸಮವಸ್ತ್ರ ಬಟ್ಟೆಗಳ ಮೊತ್ತ ರೂ 2617 44 ಲಕ್ಷಗಳಲ್ಲಿ ರೂ 2331 76 ಲಕ್ಷ ಹಣವನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯು ಇನ್ನೂ ಪಾವತಿಸಬೇಕಾಗಿದೆ

ಈ) 2006–07 ಮತ್ತು 2007–08ನೇ ಸಾಲಿನ ವಿದ್ಯಾ ವಿಕಾಸ ಯೋಜನೆಗೆ ಸಂಬಂಧಿಸಿದ್ದು, ಈ ಹಣವನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ

ಉ) 2007–08ನೇ ಸಾಲಿನಲ್ಲಿ ಬಾಕಿ ಹಣವನ್ನು ಪಡೆಯಲಾಗುವುದು

ಊ) ಹೌದು, ತೊಂದರೆಯಾಗುತ್ತದೆ

ಋ) ಈಗಾಗಲೇ 2007–08ನೇ ಸಾಲಿಗೆ ಗುಲ್ಬರ್ಗ ಮತ್ತು ಮೈಸೂರು ಕಂದಾಯ ವಿಭಾಗಗಳ ಸರ್ಕಾರಿ ಶಾಲೆಗಳಿಗೆ ಸಮವಸ್ತ್ರ ಸರಬರಾಜು ಕಾರ್ಯವನ್ನು ನಿಗಮವು ಪೂರ್ಣಗೊಳಿಸಿದ್ದು ಉಳಿದ ಬೆಂಗಳೂರು ಮತ್ತು ಬೆಳಗಾಂ ವಿಭಾಗಗಳಿಗೆ ನಿಗದಿತ ದಿನಾಂಕದೊಳಗೆ ಸಮವಸ್ತ್ರಗಳನ್ನು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗಿದೆ

ಎ) ನೇಕಾರರ ಕಲ್ಯಾಣ ಯೋಜನೆಯಡಿ ನಿಗಮದಡಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ನೇಕಾರರಿಗೆ ವಿಮಾ ಯೋಜನೆಯನ್ನು ಅಳವಡಿಸಲಾಗಿದೆ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಲು 2007–08ನೇ ಸಾಲಿನಲ್ಲಿ ಅನುದಾನವಿದ್ದು, ಮನ್ನಾ ಮಾಡಲು ಕ್ರಮ ವಹಿಸಲಾಗುವುದು

1410 (2049) ಶ್ರೀ ಸುನೀಲ್ ಕುಮಾರ್ ವಿ (ಕಾರ್ಕಳ) – ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಅರಣ್ಯ ಪ್ರದೇಶ ವಿಸ್ತೀರ್ಣವೆಷ್ಟು,

ಆ) ಇದರಲ್ಲಿ ಅತಿದಟ್ಟ ಅಡವಿ, ಸಾದಾರಣ ದಟ್ಟ ಅಡವಿ ಹಾಗೂ ಬಯಲು ಅಡವಿಗಳು ಯಾವುವು (ಜಿಲ್ಲಾವಾರು ಪೂರ್ಣವಾದ ಮಾಹಿತಿ ನೀಡುವುದು),

ಇ) ಈ ವಿಧದ ಅರಣ್ಯ ವಿಂಗಡಣೆಯನ್ನು ಯಾವ ಮಾನದಂಡದಲ್ಲಿ ಮಾಡಲಾಗುತ್ತದೆ,

ಈ) ಹಾಲಿ ಇರುವ ಅರಣ್ಯ ಪ್ರದೇಶದ ವ್ಯಾಪ್ತಿಯ ವಿಸ್ತೀರ್ಣವೆಷ್ಟು,

ಉ) ಇದು ಕಳೆದ 5 ವರ್ಷಗಳಿಗೆ ಹೋಲಿಸಿದ್ದಲ್ಲಿ ಕಡಿಮೆಯಾಗಿ ಅರಣ್ಯ ನಾಶವಾಗಿ ಅರಣ್ಯ ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಊ) ಎಲ್ಲೆಲ್ಲಿ ಅರಣ್ಯ ನಾಶವಾಗಿದೆ ಹಾಗೂ ಅರಣ್ಯ ನಾಶಕ್ಕೆ ಕಾರಣಗಳೇನು?

ಋ) ಎಷ್ಟು ಪ್ರಮಾಣದ ಅರಣ್ಯ ನಾಶವಾಗಿದೆ,

ಋಋ) ಈ ಪೈಕಿ ದಟ್ಟ ಅರಣ್ಯ ಪ್ರದೇಶ ನಷ್ಟವಾಗುತ್ತಿರುವುದನ್ನು, ಅರಣ್ಯ ಪ್ರದೇಶಗಳ್ಯಾವುವು ಎಂಬುದನ್ನು ಸರ್ಕಾರ ಸಮೀಕ್ಷೆ ಮಾಡಿ ಪತ್ತೆ ಹಚ್ಚಿದೆಯೇ,

ಎ) ಇಲ್ಲದಿದ್ದಲ್ಲಿ ಕಾರಣಗಳೇನು,

ಏ) ಯಾವಾಗ ಈ ಕಾರ್ಯ ಮಾಡಲಾಗುವುದು?

ಶ್ರೀ ಸಿ ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಫಾರೆಸ್ಟ್ ಸರ್ವೆ ಆಫ್ ಇಂಡಿಯಾ ರವರು ಪ್ರಕಟಿಸಿರುವ ಸ್ಟೇಟ್ ಆಫ್ ಫಾರೆಸ್ಟ್ ರಿಪೋರ್ಟ್ 2003ರ ಪ್ರಕಾರ, ರಾಜ್ಯದಲ್ಲಿ ಒಟ್ಟು ಅರಣ್ಯ ಹೊದಿಕೆ 36449 ಚದರ ಕಿಲೋ ಮೀಟರ್‌ಗಳಾಗಿರುತ್ತದೆ

ಆ) ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ

ಇ) ಅರಣ್ಯವನ್ನು ಹೊದಿಕೆಯ ಆಧಾರದ ಮೇಲೆ ವಿಂಗಡಿಸಲಾಗಿದೆ

ಈ) 36,449 ಚ ಕಿ ಮೀ

ಉ) ಹೌದು

ಊ) ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ

ಅರಣ್ಯ ಪ್ರದೇಶವು ಕಡಿಮೆಯಾಗಿರುವುದಕ್ಕೆ ಮುಖ್ಯ ಕಾರಣ ಅರ್ಧ ವಿವರಣೆಯಲ್ಲಿ ಆಗಿರುವ ಬದಲಾವಣೆ (International changes) ಹಾಗೂ

ಅಂಶಿಕವಾಗಿ ಅರಣ್ಯ ಪ್ರದೇಶಗಳ ನಿಜವಾದ ನಾಶದಿಂದ ಆಗಿರುತ್ತದೆ, ನಿಜವಾದ ಅರಣ್ಯ ನಾಶಕ್ಕೆ ಅರಣ್ಯ ಅತಿಕ್ರಮಣ, ಸ್ಥಳದಿಂದ ಸ್ಥಳಕ್ಕೆ ಬದಲಾಯಿಸಲಾಗುವ ಕೃಷಿ ಪದ್ಧತಿ, ಮರಗಳನ್ನು ಕಡಿಯುವಿಕೆ ಇತ್ಯಾದಿಗಳೇ ಕಾರಣ

೩ರು) ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ

೩ರೂ) ಹೌದು

ಎ) ಉದ್ಭವಿಸುವುದಿಲ್ಲ

ಏ) ಉದ್ಭವಿಸುವುದಿಲ್ಲ

ಅನುಬಂಧ -1

(ಮೂಲ ಸ್ಟೇಟ್ ಆಫ್ ಫಾರೆಸ್ಟ್ ರಿಪೋರ್ಟ್ -2003)

ಜಿಲ್ಲೆ	ಅರಣ್ಯ ಹೊದಿಕೆ			ಒಟ್ಟು	ವ್ಯತ್ಯಾಸ
	ಹೆಚ್ಚ ದಟ್ಟ	ಮಧ್ಯಮ ದಟ್ಟ	ತೆರೆದ ಅರಣ್ಯ	ಅರಣ್ಯ	
ಬಾಗಲಕೋಟೆ	0	32	182	214	-170
ಬೆಂಗಳೂರು (ಗ್ರಾ)	0	166	692	856	22
ಬೆಂಗಳೂರು (ನಗರ)	0	45	123	168	6
ಬೆಳಗಾಂ	19	703	390	1112	-52
ಬಳ್ಳಾರಿ	0	138	757	895	34
ಬೀದರ್	0	20	42	62	-94
ಬಿಜಾಪುರ	0	1	37	38	-140
ಚಾಮರಾಜನಗರ	12	1085	1523	2620	52
ಚಿಕ್ಕಮಗಳೂರು	4	2853	640	3497	-57

ಚಿತ್ರದುರ್ಗ	0	49	396	445	11
ದಕ್ಷಿಣ ಕನ್ನಡ	71	1024	1302	2397	–48
ದಾವಣಗೆರೆ	0	342	417	759	–13
ಧಾರವಾಡ	0	235	182	417	13
ಗದಗ್	0	23	150	173	3
ಗುಲ್ಬರ್ಗಾ	0	91	239	330	–143
ಹಾಸನ	29	826	447	1302	–23
ಹಾವೇರಿ	0	182	282	464	14
ಕೊಡಗು	158	2464	425	3047	39
ಕೋಲಾರ	0	82	500	582	7
ಕೊಪ್ಪಳ	0	11	35	46	1
ಮಂಡ್ಯ	0	146	375	521	5
ಮೈಸೂರು	0	642	503	1145	–4
ರಾಯಚೂರು	0	20	87	107	–5
ಶಿವಮೊಗ್ಗ	23	3052	1401	4476	3
ತುಮಕೂರು	0	111	595	706	8
ಉಡುಪಿ	11	1432	783	2226	–46
ಉತ್ತರ ಕನ್ನಡ	104	6255	1483	7842	35

1411 (1434) ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ) – ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದ ರೇಷ್ಮೆ ಕಾಯ್ದೆಗೆ ತಿದ್ದುಪಡಿ ತಂದಿರುವ ಹಿನ್ನಲೆಯಲ್ಲಿ ರಾಜ್ಯ ರೇಷ್ಮೆ ಬೆಳೆಗಾರರು ಹಾಗೂ ರೇಷ್ಮೆ ನೇಕಾರರ ಹಿತ ರಕ್ಷಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು,

ಆ) ಕ್ರಮ ಕೈಗೊಂಡಿದ್ದರೆ ರೇಷ್ಮೆ ವಲಯದಲ್ಲಿ ಆತಂಕ ಏಕೆ ನಿವಾರಣೆಯಾಗಿಲ್ಲ,

ಇ) ರೇಷ್ಮೆ ಇಲಾಖೆ ಮೂರು ವರ್ಷಗಳಿಂದ ಜಿಲ್ಲಾವಾರು ಹಮ್ಮಿಕೊಂಡಿರುವ ಯೋಜನೆಗಳಾವುವು,

ಈ) ಈ ಯೋಜನೆಗಳಿಗಾಗಿ ಪ್ರತಿ ಜಿಲ್ಲೆಗೆ ನೀಡಲಾದ ವಿವಿಧ ರೂಪದ ಹಣಕಾಸಿನ ನೆರವೆಷ್ಟು (ವಿವರ ನೀಡುವುದು)

ಉ) ಬಯಲು ಸೀಮೆ ಪ್ರದೇಶದಲ್ಲಿ ರೇಷ್ಮೆ ಬೆಳೆಗಾರರಿಗೆ ಉತ್ತೇಜನ ನೀಡಲು ಬಯಲು ಸೀಮೆ ಅಭಿವೃದ್ಧಿ ಹಾಗೂ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ಪ್ರತ್ಯೇಕ ಅನುದಾನವನ್ನೇನಾದರೂ ಕೊಡಲಾಗಿದೆಯೇ, (ತಾಲ್ಲೂಕಾವಾರು ವಿವರ ನೀಡುವುದು),

ಊ) ಮುಕ್ತ ಮಾರುಕಟ್ಟೆ ಸಮಸ್ಯೆಗಳನ್ನು ಎದುರಿಸಲು ರೇಷ್ಮೆ ಬೆಳೆಗಾರರಿಗಾಗಿ ಪ್ರತ್ಯೇಕ ಯೋಜನೆಗಳನ್ನು ಸರ್ಕಾರ ರೂಪಿಸಿದೆಯೇ?

ಶ್ರೀ ಎಸ್ ಶಿವಣ್ಣ (ರೇಷ್ಮೆ ಸಚಿವರು)

ಅ) ಕೇಂದ್ರ ರೇಷ್ಮೆ ಮಂಡಳಿಯ (ತಿದ್ದುಪಡಿ) ಬಿಲ್, 2005 ನಲ್ಲಿ ಇದ್ದಂತಹ ಕೆಲವು ಆಕ್ಷೇಪಾರ್ಹ ಹಾಗೂ ಅನಗತ್ಯ ಅಂಶಗಳನ್ನು ಕೈಬಿಡಬೇಕೆಂದು, ಕರ್ನಾಟಕ ರಾಜ್ಯದ ಅಭಿಪ್ರಾಯಗಳನ್ನು ಸರ್ಕಾರದ ಪತ್ರ ಸಂಖ್ಯೆ CI/88/SLK/2005 ದಿನಾಂಕ 5-12-2005 ರಲ್ಲಿ ಕೇಂದ್ರ ಜವಳಿ ಮಂತ್ರಾಲಯಕ್ಕೆ ನೀಡಲಾಗಿದೆ ನಂತರ ದಿನಾಂಕ 21-08-2006 ರಲ್ಲಿ ಮಾನ್ಯ ಕರ್ನಾಟಕ ರೇಷ್ಮೆ ಸಚಿವರು, ಮಾನ್ಯ ಕೇಂದ್ರದ ಜವಳಿ ಸಚಿವರನ್ನು ಭೇಟಿ ಮಾಡಿ ರಾಜ್ಯದ ಅಭಿಪ್ರಾಯಗಳನ್ನು ಪುನರುಚ್ಚರಿಸಿರುದಲ್ಲದೆ ಕರ್ನಾಟಕ ರಾಜ್ಯದ ಎಲ್ಲಾ ರಾಜ್ಯ ಸಭೆ ಮತ್ತು ಲೋಕ ಸಭೆ ಸದಸ್ಯರುಗಳ ಸಭೆ ಏರ್ಪಡಿಸಿ ಕೇಂದ್ರ ರೇಷ್ಮೆ ಮಂಡಳಿಯ ಕಾಯ್ದೆ

ತಿದ್ದುಪಡಿಯಿಂದ ರಾಜ್ಯದ ರೇಷ್ಮೆ ಉದ್ಯಮಕ್ಕೆ ಆಗಬಹುದಾದ ತೊಂದರೆಗಳನ್ನು ವಿವರಿಸಲಾಗಿತ್ತು ದಿನಾಂಕ 22-08-2006 ರಂದು ಈ ತಿದ್ದುಪಡಿ ವಿಧೇಯಕವು ಚರ್ಚೆಗೆ ಬಂದಾಗ ನಿಯಮಗಳನ್ನು ರೂಪಿಸುವಾಗ ಕರ್ನಾಟಕ ರಾಜ್ಯದ ಅಭಿಪ್ರಾಯಗಳನ್ನು ಪರಿಗಣಿಸಲಾಗುವುದೆಂಬ ಭರವಸೆಯೊಂದಿಗೆ ಲೋಕಸಭೆಯಲ್ಲಿ ಅನುಮೋದಿತವಾಯಿತು ನಂತರ ದಿನಾಂಕ 11-12-2006 ರಂದು ಮಾನ್ಯ ಕರ್ನಾಟಕ ರೇಷ್ಮೆ ಸಚಿವರು ಮತ್ತೊಮ್ಮೆ ಕೇಂದ್ರ ಜವಳಿ ಸಚಿವರನ್ನು ಭೇಟಿ ಮಾಡಿ ಕರಡು ನಿಯಮಾವಳಿಗಳಲ್ಲಿ ರಾಜ್ಯದ ರೇಷ್ಮೆ ಕೃಷಿಕರು ಹಾಗೂ ರೀಲರುಗಳ ಹಿತಾಸಕ್ತಿಗೆ ಮಾರಕವುಂಟಾಗಬಹುದಾದ ನಿಯಮಗಳನ್ನು ಕೈಬಿಡಬೇಕೆಂದು ಒತ್ತಾಯಿಸಿ ರಾಜ್ಯದ ಅಭಿಪ್ರಾಯಗಳನ್ನು ಸಲ್ಲಿಸಲಾಯಿತು ಅಂದು ಸಹ ಕರ್ನಾಟಕ ರಾಜ್ಯದ ಸಂಸತ್ ಸದಸ್ಯರು ಸಭೆ ಏರ್ಪಡಿಸಿ ಕರ್ನಾಟಕ ರಾಜ್ಯದ ರೇಷ್ಮೆ ಉದ್ಯಮದ ಅಭಿವೃದ್ಧಿಯ ಹಿನ್ನೆಲೆಯಲ್ಲಿ ಕೇಂದ್ರ ರೇಷ್ಮೆ ಮಂಡಳಿಯ ಕರಡು ನಿಯಮಾವಳಿಗಳಲ್ಲಿ ತರಬಹುದಾದ ತಿದ್ದುಪಡಿಗಳ ಬಗ್ಗೆ ತಿಳುವಳಿಕೆ ನೀಡಲಾಯಿತು ಸರ್ಕಾರದ ಪತ್ರದ ಸಂಖ್ಯೆ CI/ 158/SLK/2006 ದಿನಾಂಕ 5-01-2007 ರಲ್ಲಿ ರಾಜ್ಯ ಸರ್ಕಾರದ ಅಭಿಪ್ರಾಯಗಳನ್ನು ಜವಳಿ ಮಂತ್ರಾಲಯಕ್ಕೆ ತಿಳಿಸಲಾಗಿದೆ

ದಿನಾಂಕ 11-01-2007 ರಂದು ಬೆಂಗಳೂರಿನಲ್ಲಿ ಕೇಂದ್ರ ರೇಷ್ಮೆ ಮಂಡಳಿಯವರು ಏರ್ಪಡಿಸಿದ್ದ ಚರ್ಚಾಸಭೆಯಲ್ಲಿ ರೇಷ್ಮೆ ಕೃಷಿಕರು, ರೇಷ್ಮೆ ನೂಲು ಬಿಚ್ಚುವವರ ಪ್ರತಿನಿಧಿಗಳು, ಕರ್ನಾಟಕ ರಾಜ್ಯ ಪ್ರಾಂತ ರೈತ ಸಂಘ ಹಾಗೂ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಮಾಜಿ ರೇಷ್ಮೆ ಸಚಿವರುಗಳು/ ಶಾಸಕರು, ಲೋಕಸಭೆಯ ಸದಸ್ಯರುಗಳು ಹಾಜರಿದ್ದು ರಾಜ್ಯದ ಈಗಿರುವ ಕಾಯ್ದೆ/ನಿಯಮಗಳ ಅನುಸಾರ ಇಲಾಖೆಯ ಕಾರ್ಯನಿರ್ವಹಿಸುತ್ತಿದ್ದು ಕೇಂದ್ರ ರೇಷ್ಮೆ ಮಂಡಳಿ (ತಿದ್ದುಪಡಿ) ಕಾಯ್ದೆ 2006 ನ್ನು ಬದಲಾಯಿಸಲು ಅಥವಾ ಕರ್ನಾಟಕ ರಾಜ್ಯವನ್ನು ಹೊರತುಪಡಿಸಿ ಇನ್ನಿತರ ರಾಜ್ಯಗಳಿಗೆ ಮಾತ್ರ ಅನ್ವಯಿಸುವಂತೆ ಕೇಂದ್ರ ರೇಷ್ಮೆ ಮಂಡಳಿ ಕಾಯ್ದೆಗೆ ತಿದ್ದುಪಡಿ ತರುವಂತೆ ಅಭಿಪ್ರಾಯ ಪಟ್ಟಿರುತ್ತಾರೆ ಈ ಸಭೆಯಲ್ಲಿ ಕೇಂದ್ರ ಸರ್ಕಾರದ ಮಾನ್ಯ ಜವಳಿ ರಾಜ್ಯ ಸಚಿವರು ಮತ್ತು ಕೇಂದ್ರ ರೇಷ್ಮೆ ಮಂಡಳಿಯ ಮಾನ್ಯ ಅಧ್ಯಕ್ಷರು ಹಾಜರಿದ್ದು ಕರ್ನಾಟಕದ ರೇಷ್ಮೆ ಉದ್ಯಮದಲ್ಲಿ

ತೊಡಗಿರುವವರ ಮನವಿಗಳನ್ನು ಪರಿಗಣಿಸಿ ಕೇಂದ್ರ ರೇಷ್ಮೆ ಮಂಡಳಿ ಕಾಯ್ದೆಗೆ ಸೂಕ್ತ ತಿದ್ದುಪಡಿಗಳನ್ನು ತರುವುದಾಗಿ ಆಶ್ವಾಸನೆ ನೀಡಿರುತ್ತಾರೆ

ಕೇಂದ್ರದ ಮಾನ್ಯ ಜವಳಿ ರಾಜ್ಯ ಸಚಿವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ ಮೇಲ್ಕಂಡ ಚರ್ಚಾ ಸಭೆಯಲ್ಲಿ ಮಾನ್ಯ ಕರ್ನಾಟಕ ರೇಷ್ಮೆ ಸಚಿವರು ಮನವಿಯನ್ನು ಮಾನ್ಯ ಕೇಂದ್ರದ ಜವಳಿ ರಾಜ್ಯ ಸಚಿವರಿಗೆ ನೀಡುವುದರ ಮೂಲಕ ಕೇಂದ್ರ ರೇಷ್ಮೆ ಮಂಡಳಿಯ ಕಾಯ್ದೆ ಮತ್ತು ಕರಡು ನಿಯಮಗಳ ಬಗ್ಗೆ ಅಭಿಪ್ರಾಯ ನೀಡಲಾಗಿದೆ

ರಾಜ್ಯದ ರೇಷ್ಮೆ ಸಚಿವರು ದಿನಾಂಕ 21–02–2007 ರಲ್ಲಿ ಕೇಂದ್ರದ ಮಾನ್ಯ ಜವಳಿ ಸಚಿವರಿಗೆ ಪತ್ರ ಬರೆದು ಕರ್ನಾಟಕ ರಾಜ್ಯದಲ್ಲಿ ಹಾಲಿ ಇರುವ ರಾಜ್ಯದ ಕಾಯಿದೆ/ ನಿಯಮಗಳು ಮುಂದುವರೆಯಲು ಅವಕಾಶ ಮಾಡುವಂತೆ ಕೋರಲಾಗಿದೆ

ಆ) ಕೇಂದ್ರ ಸರ್ಕಾರವು ಕೇಂದ್ರ ರೇಷ್ಮೆ ಮಂಡಳಿ, ತಿದ್ದುಪಡಿ (ಕಾಯಿದೆ) 2006 ನ್ನು ಈಗಾಗಲೇ ಭಾರತದ ರಾಜ್ಯ ಪತ್ರದಲ್ಲಿ ಪ್ರಕಟಿಸಿದ್ದು, ಮಾನ್ಯ ಕೇಂದ್ರದ ಜವಳಿ ಸಚಿವರು ಲೋಕಸಭೆಯಲ್ಲಿ ಈ ಕಾಯ್ದೆ ತಿದ್ದುಪಡಿ ಅನುಮೋದನೆಯಾಗುವ ಸಂದರ್ಭದಲ್ಲಿ ನೀಡಿದ್ದ ಭರವಸೆಯಾದ ನಿಯಮಗಳನ್ನು ರೂಪಿಸುವಾಗ ಕರ್ನಾಟಕ ರಾಜ್ಯದ ಸದಸ್ಯರ ಅಹವಾಲುಗಳನ್ನು ಮುಕ್ತ ಮನಸ್ಸಿನಿಂದ ಪರಿಗಣಿಸಲಾಗುವುದೆಂಬ ಹೇಳಿಕೆ ನೀಡಿದ್ದರೂ ಕರಡು ನಿಯಮಗಳಲ್ಲಿ ಕರ್ನಾಟಕ ರಾಜ್ಯದ ಕೋರಿಕೆಗಳನ್ನು ಪರಿಗಣಿಸದಿರುವುದು

ಇ) ರೇಷ್ಮೆ ಕೃಷಿ ಅಭಿವೃದ್ಧಿಗಾಗಿ ಈ ಕೆಳಕಂಡ ಯೋಜನೆಗಳನ್ನು ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆ

1) ರೇಷ್ಮೆ ವರದಾನ ಯೋಜನೆ

2) ಕೆಟಲಿಟಿಕ್ ಅಭಿವೃದ್ಧಿ ಕಾರ್ಯಕ್ರಮಗಳು

3) ವಿಶೇಷ ಘಟಕ ಯೋಜನೆ

4) ಗಿರಿಜನ ಉಪ ಯೋಜನೆ

5) ಜಿಲ್ಲೆ/ ತಾಲ್ಲೂಕು ಪಂಚಾಯತ್ ಯೋಜನೆ

6) ಬೆಲೆ ಸ್ಥಿರೀಕರಣ ನಿಧಿ ಪ್ರಾಧಿಕಾರ (2004–05 ನೇ ಸಾಲಿಗೆ ಮಾತ್ರ)

ಈ) 2004–05, 2005–06 ಮತ್ತು 2006–07 ನೇ ಸಾಲುಗಳಲ್ಲಿ ಜಿಲ್ಲಾವಾರು, ಯೋಜನೆವಾರು ನೀಡಲಾದ ಸಹಾಯಧನ/ಪ್ರೋತ್ಸಾಹಧನ ವಿವರಗಳನ್ನು ಕ್ರಮವಾಗಿ ಅನುಬಂಧ 1,2,ಮತ್ತು 3 ರಲ್ಲಿ ನೀಡಿದೆ

ಉ) ರೇಷ್ಮೆ ಇಲಾಖೆಗೆ ಸೀಮಿತವಾದಂತೆ ಪ್ರತ್ಯೇಕ ಅನುದಾನ ನೀಡಿರುವುದಿಲ್ಲ

ಊ) ರೇಷ್ಮೆ ಬೆಳೆಗಾರರು ಉತ್ಪಾದಿಸುವ ರೇಷ್ಮೆ ಗೂಡು ಮಾರಾಟದಲ್ಲಿ ಮುಕ್ತ ಮಾರಾಟ ವ್ಯವಸ್ಥೆಗೆ ಜಾರಿಗೆ ತಂದಿರುವುದಿಲ್ಲ ರೇಷ್ಮೆ ಬೆಳೆಗಾರರಿಗೆ ಪ್ರೋತ್ಸಾಹಕ ದರ ದೊರೆಯುವಂತೆ ಮಾಡಲು ಚೀನಾ ಮೂಲದಿಂದ ಆಮದಾಗುವ 2ಎ ಮತ್ತು ಕಡಿಮೆ ಶ್ರೇಣಿಯ ರೇಷ್ಮೆಗೆ ಸುರಿ ವಿರೋಧಿ ಶುಲ್ಕ ಸೇರಿದಂತೆ 27–97 ಅಮೇರಿಕನ್ ಡಾಲರುಗಳು ದರ ನಿಗದಿಪಡಿಸಲಾಗಿದೆ

ಅನುಬಂಧ – 1

2004–05ನೇ ಸಾಲಿನಲ್ಲಿ ಜಿಲ್ಲಾವಾರು ಯೋಜನಾವಾರು ನೀಡಲಾದ ಹಣಕಾಸಿನ ನೆರವಿನ ವಿವರ (ರೂ ಲಕ್ಷಗಳಲ್ಲಿ)

ಕ್ರ. ಸಂ	ಜಿಲ್ಲೆಗಳು	ರೇಷ್ಮೆ ವರದಾನ ಯೋಜನೆ	ಕೆಟಲಿಟಿಕ್ ಅಭಿವೃದ್ಧಿ ಯೋಜನೆ	ವಿಶೇಷ ಘಟಕ ಯೋಜನೆ	ಗಿರಿಜನ ಉಪ ಯೋಜನೆ	(ಜಿ) (ತಾ) ಪಂಚಾಯತ್ ಯೋಜನೆ	ಬೆ ಸ್ಥಿ ನಿ ಪ್ರಾ ಯೋಜನೆ	ಒಟ್ಟು
1	ಬೆಂಗಳೂರು (ಗ್ರಾ)	–	263 270	2720	1 382	17 420	–	284 192
2	ಬೆಂಗಳೂರು (ನ)	–	133 530	1 865	–	8 000	23 576	166 971
3	ಬಾಗಲಕೋಟೆ	–	4 020	0 955	–	9 480	–	14 455
4	ಬೆಳಗಾವಿ	–	18 220	1 660	0 703	5 920	4 372	30 877
5	ಬಳ್ಳಾರಿ	–	12 410	–	–	5 090	–	17 500
6	ಬೀದರ್	–	17 680	–	–	4 760	1 000	23 440
7	ಬಿಜಾಪುರ	–	6 700	–	–	4 140	15 200	26 040
8	ಚಾಮರಾಜನಗರ	–	9 600	5 905	1 029	12 900	–	29 434
9	ಚಿಕ್ಕಮಗಳೂರು	–	4 530	0 363	–	7 840	–	12 233

10	ಚಿತ್ರದುರ್ಗ	–	15 800	4 641	3 190	14 510	–	37 141
11	ದಕ್ಷಿಣ ಕನ್ನಡ	–	0 300	0 284	0 683	4 550	–	5 822
12	ದಾವಣಗೆರೆ	–	7 660	1 947	0 660	6 080	–	16 347
13	ಧಾರವಾಡ	–	2 160	0 940	–	2 420	–	5 520
14	ಗದಗ	–	4 200	1 000	–	5 160	5 760	16 120
15	ಗುಲ್ಬರ್ಗಾ	–	16 920	4 923	0 410	3 160	0 750	26 163
16	ಹಾಸನ	–	18 970	1 434	–	18 740	0 912	40 056
17	ಹಾವೇರಿ	–	11 930	0 940	–	2 970	–	15 840
18	ಕೊಡಗು	–	0 500	0 220	–	3 070	–	3 790
19	ಕೋಲಾರ	–	654 840	9 600	8 750	26 340	–	698 930
20	ಕೊಪ್ಪಳ	–	5 710	2 093	–	4 010	–	11 813
21	ಮಂಡ್ಯ	–	44 810	3 990	–	21 790	6 988	77 578
22	ಮೈಸೂರು	–	19 200	10 003	0 718	19 190	–	49 111

23	ರಾಯಚೂರು	–	15 220	1 733	1 320	4 800	–	23 073
24	ಶಿವಮೊಗ್ಗ	–	5 130	1 456	–	2 780	0 915	10 281
25	ತುಮಕೂರು	–	61 440	1 210	0 620	12 730	–	76 000
26	ಉಡುಪಿ	–	0 500	–	0 583	3 120	–	4 208
27	ಉತ್ತರ ಕನ್ನಡ	–	5 110	0 410	–	7 860	6 120	20 000
28	ಮೈಸೂರು ಬಿತ್ತನೆ ವಲಯ	–	30 680	–	–	–	342 780	373 460
	ಒಟ್ಟು	–	**1491 440**	**59 292**	**20 060**	**237 83**	**408 373**	**2116 995**

ಅನುಬಂಧ – 2

2005–06ನೇ ಸಾಲಿನಲ್ಲಿ ಜಿಲ್ಲಾವಾರು ಯೋಜನಾವಾರು ನೀಡಲಾದ ಹಣಕಾಸಿನ ನೆರವಿನ ವಿವರ (ರೂ ಲಕ್ಷಗಳಲ್ಲಿ)

ಕ್ರ ಸಂ	ಜಿಲ್ಲೆಗಳು	ರೇಷ್ಮೆ ವರದಾನ ಯೋಜನೆ	ಕೆಟಲಿಟಿಕ್ ಅಭಿವೃದ್ಧಿ ಯೋಜನೆ	ವಿಶೇಷ ಘಟಕ ಯೋಜನೆ	ಗಿರಿಜನ ಉಪ ಯೋಜನೆ	(ಜಿ) (ತಾ) ಪಂಚಾಯತ್ ಯೋಜನೆ	ಒಟ್ಟು	
1	ಬೆಂಗಳೂರು (ಗ್ರಾ)	–	116 580	3 843	0 800	30 770	151 993	
2	ಬೆಂಗಳೂರು (ನ)	–	182 540	2 500	–	15 000	200 040	
3	ಬಾಗಲಕೋಟೆ	–	19 890	3 435	–	13 340	36 665	
4	ಬೆಳಗಾವಿ	–	43 560	2 060	0 710	36 300	82 630	
5	ಬಳ್ಳಾರಿ	–	26 710	–	–	20 210	46 920	
6	ಬೀದರ್	–	20 560	0 598	–	14 080	35 238	
7	ಬಿಜಾಪುರ	–	11 360	1 245	–	7 610	20 215	
8	ಚಾಮರಾಜನಗರ	–	5 810	6 250	1 643	16 150	29 153	
9	ಚಿಕ್ಕಮಗಳೂರು	–	4 220	0 795	–	15 390	20 405	

10	ಚಿತ್ರದುರ್ಗ	–	22 040	2 995	2 426	16 740	44 201	
11	ದಕ್ಷಿಣ ಕನ್ನಡ	–	1 540	0 589	0 606	7 120	9 855	
12	ದಾವಣಗೆರೆ	–	9 760	1 605	0 925	7 350	19 640	
13	ಧಾರವಾಡ	–	2 270	0 630	–	2 750	5 650	
14	ಗದಗ	–	11 610	0 750	–	6 570	18 930	
15	ಗುಲ್ಬರ್ಗಾ	–	21 310	3 980	–	6 940	32 230	
16	ಹಾಸನ	–	21 480	2 769	–	54 450	78 699	
17	ಹಾವೇರಿ	–	27 970	0 940	–	2 900	31 810	
18	ಕೊಡಗು	–	0 530	0 540	0 100	11 170	12 340	
19	ಕೋಲಾರ	–	499 750	13 472	6 735	53 590	573 547	
20	ಕೊಪ್ಪಳ	–	12 840	0 545	–	5 300	18 685	
21	ಮಂಡ್ಯ	–	57 500	6 963	–	45 270	109 133	
22	ಮೈಸೂರು	–	24 010	11 454	0 792	24 180	60 436	

23	ರಾಯಚೂರು	–	28 750	6 447	1 269	3 410	39 876	
24	ಶಿವಮೊಗ್ಗ	–	7 730	1 355	–	12 570	21 655	
25	ತುಮಕೂರು	–	95 200	3 275	0 650	49 740	148 865	
26	ಉಡುಪಿ	–	0 420	0 144	0 818	10 810	12 192	
27	ಉತ್ತರ ಕನ್ನಡ	–	8 020	0 436	–	54 330	62 386	
28	ಮೈಸೂರು ಬಿತ್ತನೆ ವಲಯ	–	36 840	–	–	–	36 840	
	ಒಟ್ಟು	–	**1320 800**	**79 615**	**17 474**	**544 040**	**1961 429**	

ಅನುಬಂಧ – 3

2006–07ನೇ ಸಾಲಿನಲ್ಲಿ ಜಿಲ್ಲಾವಾರು ಯೋಜನಾವಾರು ನೀಡಲಾದ ಹಣಕಾಸಿನ ನೆರವಿನ ವಿವರ (ರೂ ಲಕ್ಷಗಳಲ್ಲಿ)

ಕ್ರ. ಸಂ	ಜಿಲ್ಲೆಗಳು	ರೇಷ್ಮೆ ವರದಾನ ಯೋಜನೆ	ಕೆಟಲಿಟಿಕ್ ಅಭಿವೃದ್ಧಿ ಯೋಜನೆ	ವಿಶೇಷ ಘಟಕ ಯೋಜನೆ	ಗಿರಿಜನ ಉಪ ಯೋಜನೆ	(ಜಿ) (ತಾ) ಪಂಚಾಯತ್ ಯೋಜನೆ	ಒಟ್ಟು	
1	ಬೆಂಗಳೂರು (ಗ್ರಾ)	30 336	334 415	5 000	1 175	27 400	398 326	
2	ಬೆಂಗಳೂರು (ನ)	4 914	201 550	2 004	–	16 280	224 748	
3	ಬಾಗಲಕೋಟೆ	4 738	30 440	2 720	–	12 054	49 952	
4	ಬೆಳಗಾವಿ	9 850	46 870	1 860	0 935	41 297	100 812	
5	ಬಳ್ಳಾರಿ	5 000	21 600	–	–	21 980	48 580	
6	ಬೀದರ್	2 400	37 660	0 445	–	12 60	52 765	
7	ಬಿಜಾಪುರ	2 000	18 170	0 500	–	7 560	28 230	
8	ಚಾಮರಾಜನಗರ	1 000	16 670	6 530	0 950	14 950	40 100	

9	ಚಿಕ್ಕಮಗಳೂರು	1 438	11 550	0 649	–	17 806	31 443	
10	ಚಿತ್ರದುರ್ಗ	8 800	34 770	3 027	2 495	18 660	67 752	
11	ದಕ್ಷಿಣ ಕನ್ನಡ	0 750	2 110	0 436	0 730	6 040	10 066	
12	ದಾವಣಗೆರೆ	2 300	10 900	0 934	0 377	7 575	22 086	
13	ಧಾರವಾಡ	0 950	7 730	0 250	–	8 170	17 100	
14	ಗದಗ	1 300	10 100	0 740	–	4 725	16 865	
15	ಗುಲ್ಬರ್ಗಾ	4 800	33 730	0 750	–	5 950	45 230	
16	ಹಾಸನ	4 288	41 470	0 050	–	50 600	96 408	
17	ಹಾವೇರಿ	5 976	30 110	0 690	–	3 374	40 150	
18	ಕೊಡಗು	0 350	6 200	0 130	0 050	9 280	16 010	
19	ಕೋಲಾರ	144 472	640 920	13 100	5 919	56 791	861 202	
20	ಕೊಪ್ಪಳ	3 914	21 000	1 060	–	3 790	29 764	
21	ಮಂಡ್ಯ	8 326	103 960	6 113	–	50 520	168 919	

22	ಮೈಸೂರು	6 000	46 750	10 120	0 571	24 970	88 411	
23	ರಾಯಚೂರು	2 364	38 930	7 520	0 880	4 010	53 704	
24	ಶಿವಮೊಗ್ಗ	2 400	10 720	0 600	–	12 588	26 308	
25	ತುಮಕೂರು	28 880	49 400	2 517	0 518	57 250	138 565	
26	ಉಡುಪಿ	0 175	2 050	0 150	1 138	10 190	13 703	
27	ಉತ್ತರ ಕನ್ನಡ	1 500	14 420	0 048	–	45 010	60 978	
28	ಮೈಸೂರು ಬಿತ್ತನೆ ವಲಯ	10 760	28 860	–	–	–	39 620	
	ಒಟ್ಟು	**299 981**	**1853 055**	**67 943**	**15 738**	**551 08**	**2787 797**	

1414 (1437) ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ) – ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮೌಲ್ಯವರ್ಧಿತ ತೆರಿಗೆ ಪದ್ಧತಿ(ವ್ಯಾಟ್) ಪರಿಣಾಮಕಾರಿಯಾಗಿ ಜಾರಿಯಾಗುತ್ತಿದೆಯೇ,

ಆ) ಕೆಲವು ನಿರ್ದಿಷ್ಟ ಸರಕುಗಳನ್ನು ದಿಢೀರನೆ ಶೇ 4 ತೆರಿಗೆ ಹಂತದ ವ್ಯಾಪ್ತಿಯಿಂದ ಶೇ 8 ರ ತೆರಿಗೆ ದರದ ವ್ಯಾಪ್ತಿಗೆ ಸೇರಿಸಲು ಕಾರಣವೇನು,

